ವಿಶ್ವಕನ್ನಡ ಸಮ್ಮೇಳನ-೨೦೧೧

ಬೆಳಗಾವಿ

# ಪರಂಪರೆ ಮತ್ತು ಕುವೆಂಪು

**ಸುಜನಾ**

ವಿಶ್ವಕನ್ನಡ
ಸಮ್ಮೇಳನ
ಸಾಹಿತ್ಯಮಾಲೆ

# ಪರಂಪರೆ ಮತ್ತು ಕುವೆಂಪು

**ಸುಜನಾ**

ಕರ್ನಾಟಕ ಸರ್ಕಾರ

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು – ೫೬೦ ೦೦೨

**PARAMPARE MATTU KUVEMPU** : A collection of critical essays by **Sri Sujana,** Published by **Manu Baligar**, Director, Department of Kannada and Culture, Kannada Bhavana, J.C.Road, Bengaluru - 560 002.

ಈ ಆವೃತ್ತಿಯ ಹಕ್ಕು : ಕರ್ನಾಟಕ ಸರ್ಕಾರ

ಮುದ್ರಿತ ವರ್ಷ : ೨೦೧೧
ಪ್ರತಿಗಳು : ೧೦೦೦
ಪುಟಗಳು : xxiv + ೨೮೯
ಬೆಲೆ : ರೂ. ೭೦/–

ರಕ್ಷಾಪುಟ ವಿನ್ಯಾಸ : **ಕೆ. ಚಂದ್ರನಾಥ ಆಚಾರ್ಯ**

ಮುದ್ರಕರು :
**ಮೆ॥ ಮಯೂರ ಪ್ರಿಂಟ್ ಆ್ಯಡ್ಸ್**
ನಂ. ೮೯, ಸುಬೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦ ೦೨೦ ದೂ : ೨೩೩೪೨೭೨೪



**ಬಿ.ಎಸ್. ಯಡಿಯೂರಪ್ಪ**
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು ೫೬೦ ೦೦೧

ಸಿಎಂ/ಪಿಎಸ್/೨೬/೧೧

## ಶುಭ ಸಂದೇಶ

ವಿಶ್ವ ಕನ್ನಡ ಸಮ್ಮೇಳನದ ಸಂಭ್ರಮಾಚರಣೆಯ ಸಂದರ್ಭದಲ್ಲಿ ಕನ್ನಡ ನಾಡು ಏಕೀಕರಣಗೊಂಡು ೫೫ನೇ ವರ್ಷಕ್ಕೆ ಹೆಜ್ಜೆಯನ್ನಿಟ್ಟಿದೆ. ಈ ಸಂದರ್ಭವನ್ನು ರಚನಾತ್ಮಕವಾಗಿ ದಾಖಲಿಸಿ ಸ್ಮರಣೀಯಗೊಳಿಸಬೇಕೆಂಬುದು ಸರ್ಕಾರದ ಮಹದಾಶಯ. ಅದಕ್ಕಾಗಿ ಬೆಳಗಾವಿಯಲ್ಲಿ **"ವಿಶ್ವ ಕನ್ನಡ ಸಮ್ಮೇಳನ"** ವನ್ನು ಇದೇ ಮಾರ್ಚ್ ತಿಂಗಳಿನಲ್ಲಿ ಆಯೋಜಿಸಲಾಗಿದೆ. ಇದನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸುವುದು ಕರ್ನಾಟಕ ಸರ್ಕಾರದ ಆಶಯವಾಗಿದೆ. ಇದರ ಅಂಗವಾಗಿ ನಾಡಿನ ವಿವಿಧ ಕ್ಷೇತ್ರಗಳಲ್ಲಾಗಿರುವ ಪ್ರಗತಿಯ ಆತ್ಮಾವಲೋಕನದ ಜೊತೆಗೆ ಕನ್ನಡ ಸಾಹಿತ್ಯದ ಸೃಜನಶೀಲ ಮತ್ತು ಸೃಜನೇತರ ಪ್ರಕಾರಗಳ ೧೦೦ ಕೃತಿಗಳನ್ನು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಪ್ರಕಟಿಸಲಾಗುತ್ತಿದೆ. ಕನ್ನಡದ ಖ್ಯಾತ ಲೇಖಕರ ಮಹತ್ವದ ಕೃತಿಗಳನ್ನು ಪ್ರಕಟಿಸಿ, ಸುಲಭ ಬೆಲೆಯಲ್ಲಿ ಸಾಹಿತ್ಯಾಸಕ್ತರಿಗೆ ಒದಗಿಸುವ ಹಂಬಲ ನಮ್ಮದು.

ಈ ಸಾಹಿತ್ಯ ಮಾಲಿಕೆಯಲ್ಲಿನ ಕೃತಿರತ್ನಗಳನ್ನು ಕನ್ನಡಿಗರು ಸಹೃದಯತೆಯಿಂದ ಸ್ವಾಗತಿಸುವ ಮೂಲಕ ಇವುಗಳ ಪ್ರಯೋಜನವನ್ನು ಪಡೆದುಕೊಂಡರೆ ಸರ್ಕಾರದ ಈ ಯೋಜನೆ ಸಾರ್ಥಕವಾಗುತ್ತದೆ ಎಂದು ಭಾವಿಸುತ್ತೇನೆ.

ದಿನಾಂಕ ೨೪.೦೧.೨೦೧೧

**(ಬಿ.ಎಸ್. ಯಡಿಯೂರಪ್ಪ)**

ಕರ್ನಾಟಕ ಸರ್ಕಾರ

**ಗೋವಿಂದ ಎಂ. ಕಾರಜೋಳ**
ಕನ್ನಡ ಮತ್ತು ಸಂಸ್ಕೃತಿ,
ಸಣ್ಣ ನೀರಾವರಿ ಹಾಗೂ ಜವಳಿ ಸಚಿವರು

ವಿಧಾನಸೌಧ
ಬೆಂಗಳೂರು – ೦೧

## ಚೆನ್ನುಡಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ವಿಶ್ವ ಕನ್ನಡ ಸಮ್ಮೇಳನದ ಅಂಗವಾಗಿ ಸುಮಾರು ೧೦೦ ಕನ್ನಡದ ಮೇರುಕೃತಿಗಳನ್ನು ಮರುಮುದ್ರಿಸಲು ಉದ್ದೇಶಿಸಿರುತ್ತದೆ.

ಈ ಯೋಜನೆಯಡಿ ಕನ್ನಡ ಸಾಹಿತ್ಯದ ಬೇರೆ ಬೇರೆ ಕಾಲಘಟ್ಟಗಳಲ್ಲಿ ರಚನೆಗೊಂಡ ಕಥೆ, ಕಾದಂಬರಿ, ವಿಚಾರ ಸಾಹಿತ್ಯ, ಪ್ರಬಂಧ, ವಿಮರ್ಶೆ, ನಾಟಕ, ಕವನ ಸಂಕಲನ– ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳ ಕೆಲವು ಪ್ರಾತಿನಿಧಿಕ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಈ ಪ್ರಾತಿನಿಧಿಕ ಕೃತಿಗಳನ್ನು ಸರ್ಕಾರದಿಂದ ರಚಿತವಾದ ಆಯ್ಕೆ ಸಮಿತಿಯು ಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಕೃತಿಗಳನ್ನು ಮುದ್ರಣಕ್ಕೆ ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಎಲ್ಲಾ ವಿದ್ವಾಂಸರಿಗೂ ನನ್ನ ಧನ್ಯವಾದಗಳು. ಈ ಮಹತ್ವದ ಕೃತಿಗಳನ್ನು ಸಹೃದಯ ಕನ್ನಡಿಗರಿಗೆ ಸುಲಭ ಬೆಲೆಯಲ್ಲಿ ತಲುಪಿಸಬೇಕೆಂಬುದು ನಮ್ಮ ಹೆಗ್ಗುರಿಯಾಗಿರುತ್ತದೆ. ಕನ್ನಡ ಸಾಹಿತ್ಯದ ಮೈಲಿಗಲ್ಲುಗಳಾಗಿರುವ ಈ ಪುಸ್ತಕಗಳು ಭಾವಿ ಪೀಳಿಗೆಯವರಿಗೆ ದಾರಿದೀಪಗಳಾಗಿವೆ. ಈ ಕೃತಿಗಳ ಪ್ರಯೋಜನವನ್ನು ಕನ್ನಡ ಜನತೆ ಹಾಗೂ ವಿದ್ಯಾರ್ಥಿಗಳು ಪಡೆದರೆ ನಮ್ಮ ಶ್ರಮ ಸಾರ್ಥಕವೆಂದು ಭಾವಿಸುತ್ತೇನೆ.

ದಿನಾಂಕ ೧೮.೦೧.೨೦೧೧ **(ಗೋವಿಂದ ಎಂ. ಕಾರಜೋಳ)**



## ಅಧ್ಯಕ್ಷರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳನ್ನು ಪುನರ್‌ಮುದ್ರಣ ಮಾಡಲು ಒಂದು ಯೋಜನೆಯನ್ನು ಕೈಗೊಂಡಿತು. ಕೃತಿಗಳ ಆಯ್ಕೆಗಾಗಿ ಸರ್ಕಾರವು ಒಂದು ಸಮಿತಿಯನ್ನು ರಚಿಸಿತು. ಈ ಮಹತ್ವದ ಯೋಜನೆಯ ಸಮಿತಿಯ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವ ಸುಯೋಗ ನನ್ನದಾಯಿತು.

ಈ ಯೋಜನೆಯ ಮಹತ್ವವನ್ನು ನಾನು ವಿವರಿಸುವ ಅಗತ್ಯವಿಲ್ಲ. ಕನ್ನಡದ ಶ್ರೇಷ್ಠ ಕೃತಿಗಳನ್ನು ಸುಲಭ ಬೆಲೆಗೆ ಕನ್ನಡಿಗರ ಕೈಗಳಲ್ಲಿರಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಹಲವು ಯೋಜನೆಗಳನ್ನು ಕೈಗೊಂಡಿರುವುದಕ್ಕಾಗಿ ಸರ್ಕಾರವನ್ನೂ ಇಲಾಖೆಯನ್ನೂ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಕನ್ನಡ ಸಂಸ್ಕೃತಿಗೆ ಈ ಯೋಜನೆಗಳು ಮಹತ್ವದ ಕೊಡುಗೆಯನ್ನು ನೀಡುತ್ತವೆ.

ಕನ್ನಡದ ಮೇರುಕೃತಿಗಳನ್ನು ಆರಿಸುವುದು ಸುಲಭದ ಕೆಲಸವಲ್ಲ. ಇಂತಹ ಆಯ್ಕೆಯಲ್ಲಿ ಬೇರೆ ಬೇರೆ ಅಭಿಪ್ರಾಯಗಳಿಗೆ ಸಾಧಾರವಾಗಿಯೇ ಅವಕಾಶವಿರುತ್ತದೆ. ಕನ್ನಡ ನಾಡಿನ ಶ್ರೇಷ್ಠ ಸಾಹಿತಿಗಳು ಈ ಸಮಿತಿಯ ಸದಸ್ಯರಾಗಿದ್ದದ್ದು ಸುದೈವದ ಸಂಗತಿ. ಕೃತಿಗಳನ್ನು ಚರ್ಚಿಸಿ ಮಹತ್ವದ ನಿರ್ಧಾರಕ್ಕೆ ಬಂದ ಸಮಿತಿಯು ಕಷ್ಟಸಾಧ್ಯವಾದ ಕಾರ್ಯವನ್ನು ಸಾಧಿಸಿದೆ. ಇದಕ್ಕಾಗಿ ನಾನು ಸಮಿತಿಯ ಎಲ್ಲ ಸದಸ್ಯರಿಗೂ ಕೃತಜ್ಞನಾಗಿದ್ದೇನೆ.

ಈ ಕಾರ್ಯದ ನಿರ್ವಹಣೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರು ನೆರವಾಗಿದ್ದಾರೆ. ಅವರ ಮತ್ತು ಅವರ ಸಿಬ್ಬಂದಿಯವರ ಅಮೂಲ್ಯ ಸಹಕಾರಕ್ಕೆ ನಾನು ಕೃತಜ್ಞ.

ಕನ್ನಡ ನಾಡಿನ ಮನೆಮನೆಗಳಲ್ಲಿ ಸಾಹಿತ್ಯದ ಮಂಗಳ ದೀಪದ ಬೆಳಕನ್ನು ಹರಡುವ ಈ ಯೋಜನೆಯ ಪೂರ್ಣಪ್ರಯೋಜನವನ್ನು ಕನ್ನಡಿಗರು ಪಡೆದುಕೊಳ್ಳಲಿ ಎಂದು ಹಾರೈಸುತ್ತೇನೆ.

ಸಿರಿಗನ್ನಡಂ ಗೆಲ್ಗೆ !

**ಎಲ್.ಎಸ್. ಶೇಷಗಿರಿ ರಾವ್**
ಅಧ್ಯಕ್ಷ
ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

ದಿನಾಂಕ ೧೬.೧೨.೨೦೧೦

## ಹೊನ್ನುಡಿ

ನಾಡಿನ ಭಾಷೆ, ಸಂಸ್ಕೃತಿ ಮತ್ತು ಜನಜೀವನದ ಪರಿಮಾಣವನ್ನು ಅಳೆಯುವುದರಲ್ಲಿ ಅಲ್ಲಿನ ಸಾಹಿತ್ಯದ ಕೃತಿಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ. ಸುಮಾರು ಎರಡು ಸಾವಿರದ ಐದನೂರು ವರ್ಷಗಳಿಗೂ ದೀರ್ಘವಾದ ಐತಿಹಾಸಿಕ ಪರಂಪರೆ ಚೆಲುವ ಕನ್ನಡ ನಾಡಿನದು. ಹಾಗೆಯೇ ಅದರ ಸಾಹಿತ್ಯ ಕೂಡ ಪಂಪ, ಕುಮಾರವ್ಯಾಸ, ಶರಣರು, ದಾಸರು ಮೊದಲಾದವರಿಂದ ಸಮೃದ್ಧವಾಗಿ ಬೆಳೆದಿದೆ. ಅದರ ಸಮೃದ್ಧತೆಗೆ ಏಳು ಜ್ಞಾನಪೀಠಗಳ ಗರಿಮೆಯೇ ಸಾಕ್ಷಿ.

ಕರ್ನಾಟಕವು ಏಕೀಕರಣಗೊಂಡು ೫೫ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದೆ. ಈ ಸಂದರ್ಭದಲ್ಲಿ ಬೆಳಗಾವಿಯಲ್ಲಿ ವಿಶ್ವ ಕನ್ನಡ ಸಮ್ಮೇಳನವನ್ನು ಆಚರಿಸುತ್ತಿರುವುದು ಒಂದು ಐತಿಹಾಸಿಕವೂ ಹಾಗೂ ಮಹತ್ವಪೂರ್ಣವೂ ಆದ ವಿಶಿಷ್ಟ ಘಟನೆ.

ವಿಶ್ವ ಕನ್ನಡ ಸಮ್ಮೇಳನದ ಸಂಭ್ರಮಾಚರಣೆಯ ಅಂಗವಾಗಿ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಕನ್ನಡ ನಾಡಿನ ವಿವಿಧ ಕ್ಷೇತ್ರಗಳಲ್ಲಾಗಿರುವ ಪ್ರಗತಿಯ ಆತ್ಮಾವಲೋಕನದ ಜೊತೆಗೆ ಕನ್ನಡ ಸಾಹಿತ್ಯದ ಸೃಜನಶೀಲ ಹಾಗೂ ಸೃಜನೇತರ ಪ್ರಕಾರದ ೧೦೧ ಕೃತಿಗಳನ್ನು, ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಪ್ರಕಟಿಸಲಾಗುತ್ತಿದೆ.

ಈ ವಿಶಿಷ್ಟ ಕೃತಿಗಳನ್ನು ಆಯ್ಕೆ ಮಾಡಿದ ಆಯ್ಕೆ ಸಮಿತಿ ಅಧ್ಯಕ್ಷರಿಗೆ ಹಾಗೂ ಸದಸ್ಯರಿಗೆ ನನ್ನ ವಂದನೆಗಳು. ಈ ಸಾಹಿತ್ಯ ಮಾಲಿಕೆಯನ್ನು ಸಾಹಿತ್ಯಾಭಿಮಾನಿಗಳು ಸ್ವಾಗತಿಸುವ ಮೂಲಕ ಈ ಕೃತಿಗಳ ಸದುಪಯೋಗ ಪಡೆದುಕೊಳ್ಳುತ್ತಾರೆಂದು ಭಾವಿಸಿದ್ದೇನೆ.

**(ಐ.ಎಂ. ವಿಠ್ಠಲಮೂರ್ತಿ)**
ವಿಶೇಷಾಧಿಕಾರಿಗಳು
ವಿಶ್ವ ಕನ್ನಡ ಸಮ್ಮೇಳನ



## ಎರಡು ನುಡಿ

ಕರ್ನಾಟಕ ಸರ್ಕಾರವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ 'ವಿಶ್ವ ಕನ್ನಡ ಸಮ್ಮೇಳನ'ದ ಅಂಗವಾಗಿ ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿರುವ ಸಾಹಿತಿಗಳ ಮಹತ್ವದ ಕೃತಿಗಳನ್ನು ಓದುಗರಿಗೆ ಒದಗಿಸಬೇಕೆಂಬ ಸದಾಶಯ ಹೊಂದಿರುತ್ತದೆ. ಈ ಯೋಜನೆಯಡಿ ಸುಮಾರು ೧೦೦ ಕೃತಿಗಳನ್ನು ಪ್ರಕಟಿಸಲು ಉದ್ದೇಶಿಸಿದೆ.

ಈ ಕೃತಿಗಳನ್ನು ಆಯ್ಕೆಮಾಡಲು ಖ್ಯಾತ ವಿದ್ವಾಂಸರಾದ ಪ್ರೊ. ಎಲ್.ಎಸ್. ಶೇಷಗಿರಿರಾವ್‌ರವರ ಅಧ್ಯಕ್ಷತೆಯಲ್ಲಿ ನಾಡಿನ ಹೆಸರಾಂತ ಸಾಹಿತಿ / ವಿದ್ವಾಂಸರುಗಳನ್ನೊಳಗೊಂಡ ಆಯ್ಕೆ ಸಮಿತಿಯನ್ನು ರಚಿಸಿದೆ. ಈ ಆಯ್ಕೆ ಸಮಿತಿಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಗೆ ಕನ್ನಡ ಸಾಹಿತ್ಯದ ವಿವಿಧ ಕಾಲಘಟ್ಟಗಳಲ್ಲಿ ಬಂದ ಪ್ರಾತಿನಿಧಿಕ ಕೃತಿಗಳನ್ನು ಆಯ್ಕೆ ಮಾಡಿರುತ್ತದೆ. ಆಯ್ಕೆ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರಿಗೆ ಸರ್ಕಾರದ ಪರವಾಗಿ ವಂದನೆಗಳು ಸಲ್ಲುತ್ತವೆ. ಈ ಪುಸ್ತಕಗಳನ್ನು ಹೊರತರಲು ಅನುಮತಿ ನೀಡಿ ಸಹಕರಿಸಿದ ಎಲ್ಲಾ ಲೇಖಕರು ಹಾಗೂ ಹಕ್ಕುದಾರರುಗಳಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಕನ್ನಡದ ಮೇರುಕೃತಿ ಸಾಹಿತ್ಯ ಮಾಲಿಕೆಯನ್ನು ಓದುಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ದಿನಾಂಕ ೧೭.೦೧.೨೦೧೧

**(ರಮೇಶ್ ಬಿ.ಝುಳಕಿ)**
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

## ಪ್ರಕಾಶಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ 'ವಿಶ್ವ ಕನ್ನಡ ಸಮ್ಮೇಳನ'ದ ಅಂಗವಾಗಿ ಸುಮಾರು ನೂರು ಪುಸ್ತಕಗಳನ್ನು ಪ್ರಕಟಿಸಲು ಉದ್ದೇಶಿಸಿರುತ್ತದೆ. ಈ ಯೋಜನೆಯಡಿ ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಈ ಮೂರೂ ಕಾಲಘಟ್ಟಗಳಲ್ಲಿ ರಚನೆಗೊಂಡ, ಕನ್ನಡದಲ್ಲಿ ಮಹತ್ವದ ಕೃತಿಗಳೆಂದು ಪರಿಗಣಿತವಾಗಿರುವ ಪುಸ್ತಕಗಳನ್ನು ಸರ್ಕಾರವು ನೇಮಿಸಿರುವ ಆಯ್ಕೆ ಸಮಿತಿಯು ಮರುಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಸಾಹಿತ್ಯ ಮಾಲೆಯಲ್ಲಿ ಈಗಾಗಲೇ ಇಲಾಖೆಯು ಸಮಗ್ರ ಸಾಹಿತ್ಯ ಪ್ರಕಟಣೆಯಡಿ ಪ್ರಕಟಿಸಿರುವ ಲೇಖಕರ ಕೃತಿಗಳನ್ನು ಪರಿಗಣಿಸಿರುವುದಿಲ್ಲ.

ಕನ್ನಡದ ಮೇರುಕೃತಿಗಳ ಮರುಮುದ್ರಣಕ್ಕೆ ಪುಸ್ತಕಗಳನ್ನು ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಅಧ್ಯಕ್ಷರಾದ ಪ್ರೊ. ಎಲ್.ಎಸ್. ಶೇಷಗಿರಿ ರಾವ್‌ರವರಿಗೆ ಹಾಗೂ ಸಮಿತಿಯು ಸದಸ್ಯರುಗಳಾದ ಡಾ. ಚಂದ್ರಶೇಖರ ಕಂಬಾರ, ಡಾ. ಹಂಪ ನಾಗರಾಜಯ್ಯ, ಡಾ. ಎಂ.ಎಂ.ಕಲಬುರ್ಗಿ, ಡಾ. ದೊಡ್ಡರಂಗೇಗೌಡ, ಡಾ. ಎಚ್.ಜೆ. ಲಕ್ಕಪ್ಪಗೌಡ, ಡಾ. ಅರವಿಂದ ಮಾಲಗತ್ತಿ, ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಡಾ. ಪಿ.ಎಸ್. ಶಂಕರ್, ಶ್ರೀಮತಿ ಸಾರಾ ಅಬೂಬಕ್ಕರ್, ಡಾ. ಪ್ರಧಾನ್ ಗುರುದತ್ತ ಇವರುಗಳಿಗೆ ನನ್ನ ಕೃತಜ್ಞತೆಗಳು. ಈ ಯೋಜನೆಯಡಿ ಮರುಮುದ್ರಣಕ್ಕೆ ಆಯ್ಕೆಯಾಗಿರುವ ಪುಸ್ತಕಗಳ ಮುದ್ರಣಕ್ಕೆ ಅನುಮತಿ ನೀಡಿದ ಎಲ್ಲ ಲೇಖಕರಿಗೂ, ಹಕ್ಕುದಾರರಿಗೂ ಮತ್ತು ಕರಡಚ್ಚು ತಿದ್ದಿದವರಿಗೂ ನನ್ನ ವಂದನೆಗಳು.

ಸದರಿ ಪ್ರಕಟಣಾ ಯೋಜನೆಯ ಪುಸ್ತಕಗಳನ್ನು ಹೊರತರಲು ಸಹಕರಿಸಿದ ಶ್ರೀ ಎಚ್. ಶಂಕರಪ್ಪ, ಜಂಟಿ ನಿರ್ದೇಶಕರು, (ಸು.ಕ.), ಶ್ರೀಮತಿ ವೈ.ಎಸ್.ವಿಜಯಲಕ್ಷ್ಮಿ, ಸಹಾಯಕ ನಿರ್ದೇಶಕರು ಹಾಗೂ ಪ್ರಕಟಣಾ ಶಾಖೆಯ ಸಿಬ್ಬಂದಿಗೆ ನನ್ನ ನೆನಕೆಗಳು. ವಿಶ್ವ ಕನ್ನಡ ಸಮ್ಮೇಳನದ ಲಾಂಛನವನ್ನು ಸಿದ್ಧಪಡಿಸಿಕೊಟ್ಟ ಹಿರಿಯಕಲಾವಿದರಾದ ಶ್ರೀ ಸಿ. ಚಂದ್ರಶೇಖರ ಅವರಿಗೂ ನನ್ನ ನೆನಕೆಗಳು ಹಾಗೂ ಈ ಪುಸ್ತಕಗಳನ್ನು ಸುಂದರವಾಗಿ ಮುದ್ರಿಸಿಕೊಟ್ಟಿರುವ ಮಯೂರ ಪ್ರಿಂಟ್ ಆ್ಯಡ್ಸ್‌ನ ಮಾಲೀಕರಾದ



ಶ್ರೀ ಬಿ.ಎಲ್. ಶ್ರೀನಿವಾಸ್ ಮತ್ತು ಸಿಬ್ಬಂದಿ ವರ್ಗದವರಿಗೂ ನನ್ನ ನೆನಕೆಗಳು.

ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಓದುಗರಿಗೆ ಹಲವಾರು ವರ್ಷಗಳಿಂದ ದೊರಕದೇ ಇದ್ದ ಎಷ್ಟೋ ಪುಸ್ತಕಗಳು ಲಭ್ಯವಾಗುತ್ತಿರುವುದು ಹೆಮ್ಮೆಯ ಸಂಗತಿ. ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಸಾಹಿತ್ಯಾಭಿಮಾನಿಗಳಿಗೆ ಅಕ್ಷರದಾಸೋಹ ನಡೆಸುವ ಆಶಯ ನಮ್ಮದು. ಈ ಕೃತಿಗಳನ್ನು ಕನ್ನಡಿಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಮನು ಬಳಿಗಾರ್

ದಿನಾಂಕ ೧೧.೦೧.೨೦೧೧

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

## ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ


**ಅಧ್ಯಕ್ಷರು**
ಪ್ರೊ. ಎಲ್.ಎಸ್. ಶೇಷಗಿರಿ ರಾವ್

**ಸದಸ್ಯರು**
ಡಾ॥ ಚಂದ್ರಶೇಖರ ಕಂಬಾರ
ಡಾ॥ ಎಂ.ಎಂ. ಕಲಬುರ್ಗಿ
ಡಾ॥ ದೊಡ್ಡರಂಗೇಗೌಡ
ಡಾ॥ ಅರವಿಂದ ಮಾಲಗತ್ತಿ
ಡಾ॥ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ
ಡಾ॥ ಪ್ರಧಾನ್ ಗುರುದತ್ತ
ಡಾ॥ ಹಂಪ ನಾಗರಾಜಯ್ಯ
ಡಾ॥ ಎಚ್.ಜೆ. ಲಕ್ಕಪ್ಪಗೌಡ
ಶ್ರೀಮತಿ ಸಾರಾ ಅಬೂಬಕ್ಕರ್
ಡಾ॥ ಪಿ.ಎಸ್. ಶಂಕರ್
**ಸದಸ್ಯ ಕಾರ್ಯದರ್ಶಿ**
ಶ್ರೀ ಮನು ಬಳಿಗಾರ್, ಕ.ಆ.ಸೇ.
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ




## ಮೊದಲ ಮಾತು

ಶ್ರೀ ಕುವೆಂಪು ಅವರನ್ನು ಜಗದ ಕವಿಯೆಂದು ಯುಗದ ಕವಿಯೆಂದು ವರಕವಿ ಶ್ರೀ ಬೇಂದ್ರೆಯವರು ಕರೆದದ್ದರಲ್ಲಿ ಪ್ರವಾದಿಯ ಕಾಣ್ಕೆಯೂ, ಯಥಾರ್ಥವಾದಿಯ ವಾಸ್ತವ ಪ್ರಜ್ಞೆಯೂ, ನಿರಸೂಯಾಶೀಲ ಸಮಕಾಲೀನ ಕವಿಶ್ರೇಷ್ಠನ ತ್ರಿಕಾಲಿಕ ಸಾರ್ವದೇಶಿಕ ಮಹಾಬೋಧವೂ ಅಭಿವ್ಯಕ್ತಗೊಂಡಿವೆಯೆಂದು ಸ್ಪಷ್ಟಪಡಿಸಬಹುದಾಗಿದೆ. ಜಗತ್ತಿನ ಸಾಹಿತ್ಯ ಚರಿತ್ರೆಯವನ್ನು ಶೋಧಿಸಿದಾಗ ಒಂದೊ ಎರಡೊ ಸಾಹಿತ್ಯ ಪ್ರಕಾರಗಳಲ್ಲಿ ತಮ್ಮ ಪ್ರತಿಭೆಯನ್ನು ಮೆರೆದು, ಶಿಖರಾಗ್ರಸ್ಥಾನಕ್ಕೇರಿದ ಮಹಾಸಾಹಿತಿಗಳು ಅಪಾರ ಸಂಖ್ಯೆಯಲ್ಲಿ ದೊರೆಯಬಹುದು ; ಆದರೆ ಎಲ್ಲ ಪ್ರಕಾರಗಳಲ್ಲಿಯೂ ಏಕ ಪ್ರಕಾರವಾದ ವಿದ್ಯುತ್ ಪ್ರತಿಭೆಯನ್ನು ಬೆಳಗಿ, ಯಶಸ್ಸಿನ ಶಿಖರವನ್ನು ಮೆಟ್ಟಿದ ಸರ್ವಮಹಾಸಾಹಿತಿಗಳು ವಿರಳ ; ಇಲ್ಲವೆಂದರೂ ಸಲ್ಲುತ್ತದೆ. ಅಂಥವರಲ್ಲಿ ಕುವೆಂಪು ಒಂಟಿಯಾಗಿಯೇ ನಿಲ್ಲುತ್ತಾರೆ. ಶೇಕ್ಸ್‌ಪಿಯರ್, ಮಿಲ್ಟನ್, ವರ್ಡ್ಸ್‌ವರ್ತ್, ಶೆಲ್ಲಿ, ಹಾರ್ಡಿ, ವರ್ಜಿಲ್, ಡಾಂಟೆ, ಗಯಟೆ, ಟಾಲ್‌ಸ್ಟಾಯ್ ಮೊದಲಾದವರು ಮಹಾ ನಾಟಕಕಾರರಾಗಿಯೋ, ಮಹಾಕಾವ್ಯಕಾರರಾಗಿಯೋ, ಮಹಾಕಾದಂಬರಿಕಾರರಾಗಿಯೊ, ಒಂದೊಂದು ಅಥವಾ ಎರಡೆರಡು ಪ್ರಕಾರಗಳಲ್ಲಿ ಅಗ್ರಗಣ್ಯ ಸ್ಥಾನವನ್ನು ಪಡೆದ ಧ್ರುವ ತಾರೆಗಳಾಗಿದ್ದಾರೆ. ಇಪ್ಪತ್ತನೆಯ ಶತಮಾನದ ಪಾಶ್ಚಾತ್ಯ ಪೌರ್ವಾತ್ಯ ಸಾಹಿತ್ಯ ಪರಂಪರೆಗಳ ಪರಸ್ಪರ ಸಂಪರ್ಕ ಸಂಘರ್ಷಗಳ ಸಂಧಿಸಮಯದಲ್ಲಿ, ಶ್ರೀರಾಮಕೃಷ್ಣಾರವಿಂದ ವಿವೇಕಾನಂದರ ಅಧ್ಯಾತ್ಮ ಶ್ರೀಮಂತತೆಗೆ ವಾರಸುದಾರರಾಗಿ, ಐನ್‌ಸ್ಟೀನ್ ಗಾಂಧೀಜಿಯರಂಥ ಮಹಾಪುರುಷರ ಸಮಕಾಲೀನರಾಗಿ, ವೈಚಾರಿಕ ದೃಷ್ಟಿ ವೈಜ್ಞಾನಿಕ ಮನೋಧರ್ಮಗಳ ಜತೆಗೆ ಅಧ್ಯಾತ್ಮಸಾಧನೆಯಿಂದ ಸಂಲಬ್ಧವಾದ ದರ್ಶನ ಪ್ರಜ್ಞೆಯನ್ನು ಪಡೆದಿರುವ ಕುವೆಂಪು ಸರ್ವಮಹಾಸಾಹಿತಿಯ ಗೌರವಸ್ಥಾನವನ್ನು ಪಡೆದದ್ದು ಅಚ್ಚರಿಯೇನಲ್ಲ.

ಸಂಜನಾರವರ 'ಪರಂಪರೆ ಮತ್ತು ಕುವೆಂಪು' ಎಂಬ ಮೌಲ್ಯಾತ್ಮಕವೂ ಸೃಜನಾತ್ಮಕವೂ ಆದ ದಾರ್ಶನಿಕ ವಿಮರ್ಶೆಯ ಪ್ರಬಂಧಗಳ ಸಂಗ್ರಹವನ್ನು ಓದಿದ ನಂತರ ಪೂರ್ವೋಕ್ತ ಅಭಿಪ್ರಾಯ ಮೂಡದಿರಲು ಸಾಧ್ಯವಿಲ್ಲ. ಕುವೆಂಪು ಅವರ ಪ್ರತಿಭಾಗ್ನಿ ಸಂಸ್ನಾತವಾಗಿ ಹೊರಬಂದ ಪರಂಪರೆಯ ತ್ರಿವಿಕ್ರಮ ಸಾಹಸದ ದಾರ್ಶನಿಕ ವಿವರಣೆಗೆ ಈ ಒಂಬತ್ತು ಪ್ರಬಂಧಗಳೂ ಮೀಸಲಾಗಿವೆ. ಪ್ರಾರಂಭದ ಅಧ್ಯಾಯದಲ್ಲಿ

ಸಂಪ್ರದಾಯ ಮತ್ತು ಪರಂಪರೆಗಳ ನಡುವಣ ವ್ಯತ್ಯಾಸವನ್ನು ವಿವರಿಸಿ, ಪರಂಪರೆಯ ಪ್ರಗತಿಶೀಲ ಸ್ವರೂಪವನ್ನು ಸ್ಪಷ್ಟಪಡಿಸಿ, ಅದು ಹೇಗೆ ಕುವೆಂಪು ಸಾಹಿತ್ಯದಲ್ಲಿ ಅಭಿವ್ಯಕ್ತಗೊಂಡಿದೆಯೆಂಬುದನ್ನು ಅವರ ಮಹಾಕಾವ್ಯ ನಾಟಕ ಖಂಡಕಾವ್ಯ ಕಾದಂಬರಿಗಳಿಂದ ಉದ್ಧರಿಸಿದ ಸಮೃದ್ಧವಾದ ಉದಾಹರಣೆಗಳ ಮೂಲಕ ವಿಶದಪಡಿಸುತ್ತಾರೆ.

ಕುವೆಂಪು ಅವರ ಋಷಿ ಜೀವನವನ್ನಾಗಲಿ, ಅವರ ಭೂವ್ಯೋಮಯಾತ್ರೀ ಸಾಹಿತ್ಯದ ಗಹನತೆಯನ್ನಾಗಲಿ ಅರ್ಥಮಾಡಿಕೊಳ್ಳಬೇಕಾದರೆ ಪೂರ್ವಭಾವಿಯಾಗಿ ಸರ್ವೋದಯ ಸಮನ್ವಯ ಮನುಜಮತ ವಿಶ್ವಪಥ ಮತ್ತು ಪೂರ್ಣದೃಷ್ಟಿಗಳೆಂಬ ಪಂಚಮಂತ್ರಗಳನ್ನು, ಅವರೇ ರೂಪಿಸಿರುವ ಕಾವ್ಯಸೂತ್ರಗಳನ್ನು ಆಳವಾಗಿ ಅಧ್ಯಯನ ಮಾಡಬೇಕಾಗುತ್ತದೆ, ಶಿಶುಗೀತೆ ಭಾವಗೀತೆಗಳನ್ನು ರಚಿಸಿದ ಲೇಖನಿಯೇ ಶ್ರೀರಾಮಾಯಣದರ್ಶನಂಥ ಮಹಾಕಾವ್ಯವನ್ನು ಕಡೆದಿದೆ ; ಶೂದ್ರತಪಸ್ವಿ, ಜಲಗಾರ ನಾಟಕಗಳನ್ನು ಸೃಷ್ಟಿಸಿದ ಪ್ರತಿಭೆಯೇ ಬೆರಳ್‌ಗೆ ಕೊರಳ್ ನಾಟಕವನ್ನು ಸೃಷ್ಟಿಸಿದೆ ; ಸಣ್ಣ ಕಥೆ ಚಿತ್ರಗಳನ್ನು ಬಿಡಿಸಿದ ಕುಂಚವೇ ಮಹಾಕಾದಂಬರಿಗಳನ್ನು ಕುಂಚಿಸಿದೆ; ಕರಿಸಿದ್ದ, ಗಿಡ್ಡಿ, ಕಿಟ್ಟಯ್ಯ, ಐತ, ಪೀಂಚಲುಗಳನ್ನು ಚಿತ್ರಿಸಿದ ಕೈಯೇ ಶ್ರೀರಾಮ ಲಕ್ಷ್ಮಣ, ರಾವಣ, ಸೀತೆ, ಮಂಡೋದರಿ, ಶ್ರೀರಾಮಕೃಷ್ಣ ಪರಮಹಂಸ, ವಿವೇಕಾನಂದರಂಥ ಅವತಾರಿಗಳನ್ನೂ ಮಹಾಮಹಿಮರನ್ನೂ ಕಂಡರಿಸಿದೆ ; ಶ್ರೀರಾಮನಲ್ಲೆಂತೋ ಇಬ್ಬನಿಯಲ್ಲಿಯೂ ಅವತಾರದ ಮಹಿಮೆಯನ್ನು ಗುರುತಿಸಿದ ಕವಿಗಳ ಅಸಾಮಾನ್ಯತೆಯನ್ನು ಪೂಜಿಸುವಂತೆಯೇ ಸಾಮಾನ್ಯತೆಯನ್ನು ಗೌರವಿಸುತ್ತಾರೆ ; ಅವರ ವಿಚಾರಮತಿ ವೈಜ್ಞಾನಿಕ ಮನೋಧರ್ಮಗಳು ಅವರ ದೈವಶ್ರದ್ಧೆ ಮತ್ತು ಅಧ್ಯಾತ್ಮ ವಿಜ್ಞಾನಗಳಿಗೆ ವಿರೋಧವಾಗಿಲ್ಲ ; ಇಂದ್ರಿಯಗಮ್ಯವಾದ ವಾಸ್ತವ ಪ್ರಜ್ಞೆಯಂತೆ ಅತೀಂದ್ರಿಯ ಸಾಧ್ಯವಾದ ಅತಿಮಾನಸ ಪ್ರಜ್ಞೆಯೂ ಕುವೆಂಪು ಸಾಹಿತ್ಯದಲ್ಲಿ ಸಾಂದ್ರವಾಗಿದೆ ; ಪ್ರತಿಕೃತಿ ವಿಧಾನಕ್ಕೆಂತೆ ಪ್ರತಿಮಾವಿಧಾನಕ್ಕೂ ಅಂತೆಯೇ ಅಗ್ರಸ್ಥಾನವಿದೆ. ಪೂರ್ವಾಗ್ರಹ ಅಥವಾ ಪೂರ್ವಗ್ರಹ ಪೀಡಿತವಾದ ತೇಲು ನೋಟಕ್ಕೆ ಅಥವಾ ಖಂಡ ದೃಷ್ಟಿಗೆ ಪರಸ್ಪರ ವಿರೋಧಾತ್ಮಕವಾಗಿ ತೋರುವ ಸಂಗತಿಗಳು ಏಕಾಖಂಡದೃಷ್ಟಿಯ ಸಮನ್ವಯ ಪ್ರಜ್ಞೆಗೆ ಪರಸ್ಪರ ಪೂರಕವಾಗಿ, ಅತ್ಯಂತ ವೈಜ್ಞಾನಿಕವಾಗಿ ತೋರದಿರವು. ವೈವಿಧ್ಯ ಪೂರ್ಣವಾದ ಕುವೆಂಪು ಸಾಹಿತ್ಯ ಭಿನ್ನವಿಭಿನ್ನ ರುಚಿಯ ಸಹೃದಯರಿಗೆ ಹಲವು ತೆರನಾಗಿ ಕಾಣಿಸುವ ಸಾಧ್ಯತೆಯುಂಟು. ಕೆಲವರು ಕುವೆಂಪು ನಾಟಕಗಳಲ್ಲಿ ಅವರ ಪ್ರತಿಭೆಯನ್ನು ಗುರುತಿಸಿದರೆ, ಮತ್ತೆ ಕೆಲವರು ಅವರ ಭಾವಗೀತೆಗಳಲ್ಲಿ, ಇನ್ನು ಕೆಲವರು ಅವರ ಮಹಾಕಾದಂಬರಿಗಳಲ್ಲಿ, ಬೇರೆ ಕೆಲವರು ಅವರ ಮಹಾಕಾವ್ಯದಲ್ಲಿ, ಅವರ ವಿಶಿಷ್ಟ ಶಕ್ತಿಸಂಪನ್ನತೆಯನ್ನು ಮನಗಾಣುತ್ತಾರೆ. ವಿಚಾರವಾದಿಗಳು ತಂತಮ್ಮ ನಿಲವುಗಳ ಸಮರ್ಥನೆಗೆ ಅವರ ವೈಚಾರಿಕ ಪ್ರಬಂಧಗಳನ್ನು



ಮಾತ್ರ ಬಳಸಿಕೊಂಡು, ಅವರ ಅಧ್ಯಾತ್ಮ ಪರವಾದ ಸಾಹಿತ್ಯವನ್ನು ಮರೆಯುತ್ತಾರೆ, ಅಂತೆಯೇ ಅಧ್ಯಾತ್ಮಾನುರಕ್ತರು ಅವರ ಆಸ್ತಿಕ ಸಾಹಿತ್ಯವನ್ನು ಮೆಚ್ಚುವರಾದರೂ, ಅವರ ಕ್ರಾಂತಿ ಸಾಹಿತ್ಯವನ್ನು ಉಪೇಕ್ಷಿಸುತ್ತಾರೆ. ಅವರ ಭಾಗವತ ದೃಷ್ಟಿ ಅವರ ಕ್ರಾಂತ ದರ್ಶಿತ್ವ ಮತ್ತು ಕ್ರಾಂತಿ ಮನೋಧರ್ಮಗಳಿಗೆ ವ್ಯತಿರಿಕ್ತವಲ್ಲವೆಂಬುದು ಅವರಂಥ ದಾರ್ಶನಿಕರಿಗೆ ಮಾತ್ರ ವೇದ್ಯವಾಗುತ್ತದೆ. ಪಂಥ ಪಕ್ಷಗಳ ಅಂಧ ಶ್ರದ್ಧೆಯುಳ್ಳ, ಸತ್ಯನಿಷ್ಠೆಯಿಲ್ಲದ, ಮುಕ್ತ ಮನಸ್ಸಿರದ, ಛಿದ್ರವಿಚ್ಛಿದ್ರ ಮನೋಧರ್ಮದ ರಂಧ್ರಾನ್ವೇಷಣಕಾರರಿಗೆ ಕುವೆಂಪು ಸಾಹಿತ್ಯದಲ್ಲಿ ದ್ವಂದ್ವತ್ವವೂ, ವಿರೋಧಾಭಾಸಗಳೂ ಕಾಣುವುದುಂಟು.

ಯಾವ ಪಂಥ ಪಕ್ಷಗಳಿಗೂ ಸೇರದ ಸುಜನಾ ಅವರು ನಿಷ್ಕಪಟ ನಿರ್ಭೀತ ಸತ್ಯ ನಿಷ್ಠ ಸೂಕ್ಷ್ಮಮತಿಯ ಶ್ರೇಷ್ಠ ವಿಮರ್ಶಕರು. ಅವರು ಮೂರ್ತಿಭಂಜಕರೂ ಅಲ್ಲ, ಅಂಧಾರಾಧಕರೂ ಅಲ್ಲ ; ಸತ್ಯೋಪಾಸಕರು. ಪಾಶ್ಚಾತ್ಯ ಭಾರತೀಯ ಕಾವ್ಯ, ಕಾವ್ಯ ಮೀಮಾಂಸಾ ರಾಶಿಯಲ್ಲಿ ಈಜಾಡಿಯೂ, ಯಾವೊಂದು ಪಂಥಕ್ಕೂ ದಾಸರಾಗದೆ, ಎಲ್ಲದರ ಸಾರವನ್ನು ಹೀರಿಕೊಂಡು, ಸ್ವೋಪಜ್ಞತೆಯನ್ನು ರೂಢಿಸಿಕೊಂಡ ವಿಶಿಷ್ಟ ಸಾಧಕರಲ್ಲಿ ಒಬ್ಬರು. ಅದರಿಂದಲೇ ಅವರು ಸ್ಪಷ್ಟಪಡಿಸುತ್ತಾರೆ : 'ಇವರ ಕೃತಿಗಳನ್ನೆಲ್ಲ ತಲೆಯ ಮೇಲಿಟ್ಟುಕೊಂಡು, ಅಲ್ಲಿರುವುದೆಲ್ಲ ಮೌಲಿಕವಾದದ್ದೆಂದು ಆರಾಧನಾ ಭಾವ ತಳೆಯುವುದಾಗಲಿ, ಅವುಗಳೇ ನಿರರ್ಥ ನೀರಸ ಅವಿಚಾರಿತವೆಂದು ಮೋಜುಗಾರ ಮೋಜಿಣಿದಾರಿಕೆ ಮಾಡಹೋಗುವುದಾಗಲಿ' ಯಾವ ಕಾರಣಕ್ಕೂ ಸಲ್ಲದೆಂದು, ಕುವೆಂಪು ಸಾಹಿತ್ಯದ ನ್ಯೂನತೆಗಳನ್ನು ತಾವು ಕಂಡಿರುವುದಾಗಿ ನಿರ್ದಾಕ್ಷಿಣ್ಯವಾಗಿ ನುಡಿದಿದ್ದಾರೆ. (ಪು. ೬೦) "ಕುವೆಂಪು ಅವರ ಚಿತ್ರಾಂಗದಾ ಕಾವ್ಯದ ಮುಕ್ತಾಯದಲ್ಲೂ ಋಷಿವ್ಯಾಸ ಕಲ್ಪನೆಯ ಪರಂಪರೆ ದೃಢವಾಗಿ ಮಿಡಿದಿದ್ದರೆ ಈ ಕಾವ್ಯ ಮತ್ತೂ ಶ್ರೇಷ್ಠಕಾವ್ಯವಾಗಿ, ಭಾರತ ಪರಂಪರೆಯಲ್ಲಿ ಮುಂದುವರಿದ ವಿಶಿಷ್ಟಕೃತಿಯಾಗಿ ಮೈದಾಳುತ್ತಿತ್ತೆಂದು ತೋರುತ್ತದೆ' (ಪು. ೧೬) ಎಂಬ ಅವರ ಸದಭಿಪ್ರಾಯ ಗಮನಾರ್ಹವಾದುದಾಗಿದೆ. ಅಂದ ಮೇಲೆ ಅವರಂಥವರ ವಿಮರ್ಶೆ ಸೃಜನಾತ್ಮಕವಾಗಿದ್ದು ನೆಲೆಬೆಲೆಗಳಿಂದ ಕೂಡಿರುತ್ತದೆಂಬುದರಲ್ಲಿ ಸಂದೇಹವಿಲ್ಲ.

ಮೂಲರಾಮಾಯಣ ಮಹಾಭಾರತಗಳ ಪರಂಪರೆಯನ್ನು ಕುವೆಂಪು ಹೇಗೆ ವ್ಯಾಪಕವಾಗಿ ಹಾಗೂ ಸಮರ್ಪಕವಾಗಿ ಮುಂದುವರಿಸಿದ್ದಾರೆನ್ನುವುದನ್ನು ಚಿತ್ರಾಂಗದಾ ಖಂಡಕಾವ್ಯ, ಶ್ಮಶಾನ ಕುರುಕ್ಷೇತ್ರ, ಬೆರಳ್‌ಗೆ ಕೊರಳ್, ಶೂದ್ರತಪಸ್ವಿ ನಾಟಕಗಳನ್ನು ಮತ್ತು ಶ್ರೀರಾಮಾಯಣ ದರ್ಶನಂ ಮಹಾಕಾವ್ಯವನ್ನು ನಿದರ್ಶನವಾಗಿಟ್ಟುಕೊಂಡು ವಿಮರ್ಶಕರು ಅಧಿಕಾರಯುತವಾಗಿ ಸಂದೇಹಕ್ಕವಕಾಶವಿಲ್ಲದಂತೆ ಪ್ರತಿಪಾದಿಸಿದ್ದಾರೆ. ವ್ಯಾಸರ್ಷಿಯ ಲೋಕೋತ್ತರ ದರ್ಶನ ಪ್ರಖರವಾಗಿ ಮೂಡಿಬಂದಿರುವ ಯುದ್ಧಾನಂತರದ ಘಟನೆಗಳ ಮೂಲಸ್ವರೂಪ ಮುಕ್ಕಾಗದಂತೆ, ಸಿಂಧುವನ್ನು

ಬಿಂದುವಿನಲ್ಲಿ, ಆಕಾಶವನ್ನು ಕನ್ನಡಿಯಲ್ಲಿ ತೋರಿಸುವ ಮಾಳ್ಕೆಯಿಂದ ಶ್ಮಶಾನ ಕುರುಕ್ಷೇತ್ರ ನಾಟಕವನ್ನು ರಚಿಸಲಾಗಿದೆಯೆಂದು ವಿಶದ ಪಡಿಸುವಲ್ಲಿ, ಬೆರಳ್‌ಗೆ ಕೊರಳ್ ಮಹಾಭಾರತದ ಮಹಾದರ್ಶನ ವ್ಯಾಖ್ಯಾನವೂ ಹೊಸ ಸೃಷ್ಟಿಯೂ, ಅಂತೆಯೇ ದಿವ್ಯ ಪರಂಪರೆಯ ಶ್ರೇಷ್ಠ ಸಂತಾನವೂ ಆಗಿ ಕನ್ನಡ ಸಾಹಿತ್ಯದ ಒಂದು ಶ್ರೇಷ್ಠಸಿದ್ಧಿಯೆಂದು ನುಡಿಯುವಲ್ಲಿ, ಶೂದ್ರ ತಪಸ್ವಿಯನ್ನು ಕುರಿತ ಟೀಕೆಗಳಿಗೆ ಯುಕ್ತರೀತಿಯ ಉತ್ತರವನ್ನು ಕೊಡುತ್ತ, ಆ ನಾಟಕ ವಾಲ್ಮೀಕಿಯ ಮಹಾದರ್ಶನವನ್ನು ಪುನರುಜ್ಜೀವಿಸುವಲ್ಲಿ, ಮೂಲಕವಿಗೆ ಹಾಗೂ ಶ್ರೀರಾಮನಿಗೆ ಅಂಟಿಕೊಂಡಿದ್ದ ಕಳಂಕವನ್ನು ತೊಡೆಯುವಲ್ಲಿ ಯಶಸ್ವಿಯಾಗಿದೆಯೆಂದು ಘೋಷಿಸುವಲ್ಲಿ, ಪ್ರಾಚೀನ ಅರ್ವಾಚೀನ ಯುಗ ಪ್ರಜ್ಞೆಗಳೆರಡರ ಸಮನ್ವಯವನ್ನು ಸಾಧಿಸುವ ಮೂಲಕ ಜಗತ್ತಿಗೆ ನೂತನ ದರ್ಶನವನ್ನೂ ನವೀನ ಸೃಷ್ಟಿಯನ್ನೂ ಒದಗಿಸಿ, ವಾಲ್ಮೀಕಿ ವ್ಯಾಸರ ಪರಂಪರೆಯನ್ನು ಸಂವರ್ಧಿಸುವ ಅಲಭ್ಯ ಭಾಗ್ಯ ಶ್ರೀ ಕುವೆಂಪು ಅವರದಾಯಿತು ಎಂದು ವಿವರಿಸುವಲ್ಲಿ ಸುಜನಾ ಅವರ ವೈನತೇಯ ದೃಷ್ಟಿಯೂ ನಚಿಕೇತ ಪ್ರಜ್ಞೆಯೂ ಬಹು ಶ್ರುತತ್ವವೂ ಹೃದಯವಂತಿಕೆಯೂ ಹೊರ ಹೊಮ್ಮುತ್ತವೆ.

ಕುವೆಂಪು ತಮ್ಮ ಶ್ರೇಷ್ಠ ನಾಟಕಗಳಲ್ಲಿ, ಮಹಾ ಕಾದಂಬರಿಗಳಲ್ಲಿ, ಪ್ರಥಮ ದರ್ಜೆಯ ಭಾವ ಗೀತೆಗಳಲ್ಲಿ, ಮತ್ತು ಮಹಾಕಾವ್ಯದಲ್ಲಿ ಸಾಮಯಿಕ ಅರ್ಥಗಳ ಅಭಿವ್ಯಕ್ತಿಗಲ್ಲದೆ ಅದಕ್ಕಿಂತ ಮಿಗಿಲಾಗಿ ವಿಶ್ವಕಲ್ಯಾಣ ಕಾರಕವಾದ ಲೋಕೋತ್ತರ ಸತ್ಯಗಳ ಹಾಗೂ ಚಿರಕಾಲಿಕ ಮೌಲ್ಯಗಳ ಸಂವರ್ಧನೆಗೆ ಹೆಚ್ಚು ಒತ್ತುಕೊಡುತ್ತಾರೆಂಬ ಸತ್ಯ ಇಲ್ಲಿಯ ಎಲ್ಲ ಪ್ರಬಂಧಗಳಲ್ಲಿಯೂ ಪ್ರತಿಬಿಂಬಗೊಂಡಿದೆ. ಶ್ರೀರಾಮಾಯಣದರ್ಶನದಲ್ಲಿಯ ಪಾತ್ರ ರಚನೆ, ಸನ್ನಿವೇಶ ನಿರ್ಮಾಣ, ಪ್ರಕೃತಿವರ್ಣನೆ ಮತ್ತು ದಾರ್ಶನಿಕ ಮೌಲ್ಯಗಳ ಅಭಿವ್ಯಕ್ತಿಯಲ್ಲಿ ಬೆಳಕೇ ಘನೀಭೂತವಾದಂತೆ, ವಿಶ್ವಚೇತನವೆ ವ್ಯಕ್ತಿತ್ವಗೊಂಡಂತೆ ಕುವೆಂಪು ಅವರ ಸ್ವೋಪಜ್ಞತೆ ಹೇಗೆ ಸಾಂದ್ರವಾಗಿ ಮಹಾಕಾವ್ಯದಲ್ಲಿ ಸರ್ವವ್ಯಾಪಿಯಾಗಿದೆಯೆಂಬುದನ್ನು ಸಮರ್ಥವಾಗಿ ವಿವರಿಸಿ, ಅದರ ಗಹನ ಸೌಂದರ್ಯ ಗ್ರಹಣಕ್ಕೆ ಬೇಕಾದ ಕೀಲಿಕೈಗಳನ್ನು ವಿಮರ್ಶಕರು ಒದಗಿಸಿದ್ದಾರೆ. 'ಶ್ರೀರಾಮಾಯಣ ಕೃತಿಗೆ ಅಪಚಾರ ಮಾಡದಂತಹ ಶಕ್ತ ಕನ್ನಡ ಕೃತಿ ಈ ತನಕವೂ ಬಂದಿರಲಿಲ್ಲವೆನ್ನುತ್ತಿದ್ದಾಗ ಉತ್ತರವಾಗಿ ಶ್ರೀರಾಮಾಯಣ ದರ್ಶನ ಮೂಡಿ ಬಂದಿದೆ.... ದರ್ಶನ ಕಾವ್ಯ ಸಿದ್ಧಿಗಳ ದೃಷ್ಟಿಯಿಂದಲ್ಲದೆ ಛಂದಸ್ಸಿನ ದೃಷ್ಟಿಯಿಂದ ಕೂಡ ಈ ಕಾವ್ಯ ಇಡೀ ಕನ್ನಡದ ಛಂದಸ್ಸನ್ನೆಲ್ಲ ಮೈಗೂಡಿಸಿಕೊಂಡು ಬೆಳೆದಂತಿದೆ... ಸಂಸ್ಕೃತ ವೃತ್ತಗಳ ಗಾಯತ್ರಿ ಮತ್ತು ಮಂತ್ರಗಳ ಛಂದೋವಿನ್ಯಾಸಗಳನ್ನು ಗರ್ಭೀಕರಿಸಿಕೊಂಡು ಮಹಾಛಂದಸ್ಸು ಸುಂದರ ಸಂಪನ್ನವಾಗಿರುವುದನ್ನೂ ಕಾಣಬಹುದು. ಆಡುಮಾತಿನ ವಿಲಾಸದಿಂದ, ಗಂಭೀರ ಸಾಗರ ಘೋಷವಾಗಿ, ಮಂದಮಾರುತವಾಗಿ, ಚಂಡ ಮದ್ದಲೆಯಾಗಿ, ಮೃದಂಗ ವೀಣಾ ವೇಣುವಾಗಿ



ಮಂತ್ರವತ್ತಾಗುವ ತನಕ ಬೆಳೆದಿದೆ. ಕುವೆಂಪು ಶ್ರೀರಾಮಯಣ ದರ್ಶನದಿಂದ ಮಹಾಕವಿಯಾದರು ಎಂಬಂತೆಯೆ, ಅವರ ಕೃತಿ ಸಮಷ್ಟಿಯಿಂದಾಗಿ ಮತ್ತೂ ಮಹಾಕವಿಯಾಗಿದ್ದಾರೆ.. ತಮ್ಮ ಯುಗದ ಬಗ್ಗೆ ಚೆನ್ನಾಗಿ ಪ್ರತಿಕ್ರಿಯೆ ತೋರಿಸುವಂತೆಯೆ ನಿತ್ಯವರ್ತಮಾನದ ಬಗ್ಗೆಯೂ ಗಾಢವಾಗಿ ಪ್ರತಿಸ್ಪಂದಿಸಿದ್ದಾರೆ' (ಪು ೧೦೦–೧೦೧) ಎಂಬ ಸುಜನಾ ಅವರ ಒರೆನುಡಿಯಲ್ಲಿ ಯಥಾರ್ಥತೆ ಇದೆ. ಇಪ್ಪತ್ತನೆಯ ಶತಮಾನದಲ್ಲಿ ಮಹಾಕಾವ್ಯ ಹುಟ್ಟಲಾರದೆಂದು ಗಳಪುವ ಅಸೂಯಾಶೀಲರಾದ ಪ್ರತಿಭಾಕುಬ್ಜರಿಗೆ ಈ ಮಹಾಕಾವ್ಯ ಸವಾಲಾಗಿದೆಯೆಂಬುದರಲ್ಲಿ ಸಂದೇಹವಿಲ್ಲ.

ಒಂದು ನಾಡಿನ ಸಂಸ್ಕೃತಿ ಕೆನೆಗಟ್ಟಿದಾಗ, ಅಲ್ಲಿಯ ಜೀವನ ಸಾಹಸದ ತುತ್ತ ತುದಿಯನ್ನೈದಿದಾಗ ಮಾತ್ರ ಒಂದು ಮಹಾಕಾವ್ಯ ಹುಟ್ಟಬಹುದೇ ಹೊರತು, ಸಂಕ್ಷೋಭೆಯ ವಾತಾವರಣದಲ್ಲಿ, ಛಿದ್ರ ವಿಚ್ಛಿದ್ರ ಮನಸ್ಸಿನ ದಾರುಣ ಸ್ಥಿತಿಯಲ್ಲಿ ಮೂಡಲಾರದೆಂಬುದು ಪಾಶ್ಚಾತ್ಯಾನುಕರಣ ಶೀಲರಾದ, ಸಂಪ್ರದಾಯ ಶರಣರಾದ ವಿಮರ್ಶಕವರೇಣ್ಯರ ಚಾಳಿ ನುಡಿ. ಧರ್ಮ ಅಧೋಗತಿಯಲ್ಲಿದ್ದಾಗಲೇ ಅವತಾರ ಪುರುಷರು ಜನ್ಮಧಾರಣೆ ಮಾಡುವುದಾದರೆ, ಸಮಾಜ ಸಂಕ್ಷೋಭೆಯ ದವಡೆಯಲ್ಲಿದ್ದಾಗಲೇ ಮಹಾಕಾವ್ಯವೇಕೆ ಅವತರಿಸಬಾರದು? ಅದೂ ಇರಲಿ, ಭಾರತೀಯರ ಜೀವನದಲ್ಲಿ ಇಪ್ಪತ್ತನೆಯ ಶತಮಾನ ಮಹಾಪರ್ವಕಾಲವೆಂಬ, ತ್ರೇತಾದ್ವಾಪರ ಯುಗಗಳ ವೀರಜೀವನವೂ ಸ್ವಾತಂತ್ರ್ಯಾಂದೋಲನದ ಮೇರು ಸಾಹಸದ ಮುಂದೆ ಕಾಂತಿಹೀನವಾಗುತ್ತದೆಂಬ, ಶ್ರೀರಾಮಕೃಷ್ಣ , ಸ್ವಾಮಿ ವಿವೇಕಾನಂದ, ಯೋಗಿ ಅರವಿಂದ, ಮಹಾತ್ಮಗಾಂಧಿಯರ ಚಿರನೂತನ ವಿಶಿಷ್ಟಾವತಾರ ಸಂಸ್ಕೃತಿಪರಾಕಾಷ್ಠೆಯ ಜೀವಂತ ನಿದರ್ಶನವೆಂಬ ಸಂಗತಿಗಳ ಅರಿವಿಲ್ಲದವರು, ಇಂಥ ರೋಮಾಂಚಕಾರಕ ಲೋಕವಿಸ್ಮಯಕಾರಿಯಾದ ಘಟನೆಗಳ ನಡುವೆ ಬದುಕಿದ್ದೂ ಸತ್ತಂತಿರುವವರು ಮಹಾಕಾವ್ಯದ ಹುಟ್ಟಿನ ಬಗ್ಗೆ ಶಂಕೆ ವ್ಯಕ್ತಪಡಿಸುವುದು ಸಹಜ. ಶ್ರೀರಾಮಕೃಷ್ಣರ ಸರ್ವಸಮನ್ವಯದರ್ಶನ, ಶ್ರೀ ಅರವಿಂದರ ಯೋಗ ಸಮನ್ವಯದ ಪೂರ್ಣ ದೃಷ್ಟಿ. ಮಹಾತ್ಮಗಾಂಧೀಜಿಯವರ ಅಹಿಂಸಾತ್ಮಕ ಸರ್ವೋದಯ ಸಂದೇಶ, ಜತೆಗೆ ವಿಜ್ಞಾನ ಯುಗದ ವೈಚಾರಿಕ ವೈಜ್ಞಾನಿಕ ಮನೋಧರ್ಮಗಳನ್ನು ಮೈಗೂಡಿಸಿಕೊಂಡೇ ಈ ಮಹಾ ಕಾವ್ಯ ಮೂಡಿದೆಯೆಂಬುದು ಅದನ್ನೋದಿದ ಸಹೃದಯರಿಗೆ ಮನದಟ್ಟಾಗದಿರದು. ಸನಾತನ – ನೂತನಗಳು, ಪರಂಪರೆ – ಪ್ರಗತಿಗಳು. ವಾಸ್ತವಾದರ್ಶಗಳು, ಮರ್ತ್ಯಾಮರ್ತ್ಯಗಳು, ವಿಜ್ಞಾನ – ಸುಜ್ಞಾನಗಳು, ವಿಚಾರ ಶ್ರದ್ಧೆಗಳು ಇಲ್ಲಿ ಪರಸ್ಪರಾಲಿಂಗನ ಕ್ರಿಯೆಯಲ್ಲಿ ಮಧುರ ಸಮ್ಮಿಲನದಲ್ಲಿ ಪರಿಣಾಮಗೊಂಡಿವೆಯೆಂಬುದನ್ನು ಸೂಕ್ಷ್ಮಮತಿಗಳು ಗ್ರಹಿಸಬಹುದಾಗಿದೆ. ಈ ಎಲ್ಲ ವಿಚಾರಗಳು ಇಲ್ಲಿಯ ಪ್ರಬಂಧಗಳಲ್ಲಿ ತರ್ಕಬದ್ಧವಾಗಿ ವಿವೇಕಪೂರ್ಣವಾಗಿ ನಿರುದ್ವಿಗ್ನವಾಗಿ ಉತ್ಪ್ರೇಕ್ಷೆ ಆಭಾಸಗಳಿಗೆಡೆಯಿಲ್ಲದಂತೆ ಪ್ರತಿಪಾದನೆಗೊಂಡಿವೆ.

ಕುವೆಂಪು ಅವರು ನಾಡಿನ ಗೌರವಕ್ಕೆ ಪಾತ್ರರಾದ ಮಹಾಕವಿ ಮಹಾಕಾದಂಬರಿಕಾರರಾಗಿಯೂ, ವಿವಾದಾಸ್ಪದ ವ್ಯಕ್ತಿಯಾಗಿದ್ದಾರೆಂಬ ನಿಜಸ್ಥಿತಿಯನ್ನು ಮರೆಮಾಜದೆ ಅದಕ್ಕೆ ಸುಸಂಬದ್ಧವಾದ ಕಾರಣಗಳನ್ನು ಸಹ ಸುಜನಾ ವಿವರಿಸುತ್ತಾರೆ : 'ಕಾವ್ಯ ಚಿಂತ ಲೇಖನಗಳು ಹೇಗಿದ್ದರೂ ಮಿತಸಹೃದಯ ವರ್ಗವನ್ನು ಮುಟ್ಟುತ್ತವೆ. ಆದರೆ ವೈಚಾರಿಕ ಬರಹಗಳು ಕುವೆಂಪು ಅವರನ್ನು ವ್ಯಾಪಕ ವಾಚಕ ವೃಂದಕ್ಕೆ ಪರಿಚಯಿಸಿರುವುದಲ್ಲದೆ ಇತ್ತೀಚಿನ ದಿನಗಳಲ್ಲಿ ಚರ್ಚೆಯ ವ್ಯಕ್ತಿಯನ್ನಾಗಿಯೂ ಮಾಡಿವೆ... ನಮ್ಮಲ್ಲಿ ಯಾರೇ ಚಾರ್ವಾಕ ತತ್ತ್ವವನ್ನೇ ಹೇಳಲಿ, ಅನಧ್ಯಾತ್ಮವಾದವನ್ನೆ ಹೇಳಲಿ ಅದಕ್ಕೆ ನಾವು ಯಾರೂ ಕೋಪಿಸಿಕೊಳ್ಳಲಾರೆವು. ಆದರೆ ಯಾರಾದರೂ, ಅವರು ಎಷ್ಟೇ ಅಧ್ಯಾತ್ಮಿಯಾಗಿರಲಿ, ಮತಮೌಢ್ಯವನ್ನು ಜಾತಿ ಪದ್ಧತಿ ವರ್ಣ ವ್ಯವಸ್ಥೆಗಳನ್ನು ಖಂಡಿಸಿದರಂತೂ ಅವರ ಮೇಲೆ ಮಿಸೈಲ್‌ಗಳ ದಾಳಿಯೆ ನಡೆದೀತು. ಈಗಲೂ, ಹಿಂದೆ ಮಾತ್ರವೇ ಅಲ್ಲ, ಇದು ನಡೆದಿದೆ. ಆದ್ದರಿಂದ ಕುವೆಂಪು ಏನೂ ಅಪವಾದವಲ್ಲ.' (ಪು. ೮೦–೮೧) ಸುಜನಾ ಅವರ ಈ ನುಡಿಮುತ್ತು ಎಂದೂ ಹುಸಿಯಾಗದು.

ಸುಜನಾ ನಮ್ಮ ಉತ್ತಮೋತ್ತಮ ಪ್ರಾಧ್ಯಾಪಕರಲ್ಲೊಬ್ಬರು ; ಪಾಶ್ಚಾತ್ಯ ಭಾರತೀಯ ಕಾವ್ಯ ರಾಶಿ ಕಾವ್ಯಮೀಮಾಂಸೆಗಳನ್ನೂ ತೌಲನಿಕವಾಗಿ ತಲಸ್ಪರ್ಶಿಯಾಗಿ, ಮುಕ್ತ ಮನಸ್ಸಿನಿಂದ, ತಾರತಮ್ಯ ವಿವೇಕದಿಂದ ಅಧ್ಯಯನ ಮಾಡಿ ಬಹುಶ್ರುತರಾಗಿರುವ ಘನ ವಿದ್ವಾಂಸರು ; ಗಹನವೂ ಗಾಢವೂ ವ್ಯಾಪಕವೂ ಆದ ಅಧ್ಯಯನದಿಂದ ಸಂಲಬ್ಧವಾದ ಪಾಂಡಿತ್ಯದಿಂದಾಗಿ, ಸನಾತನ ನೂತನ ಪ್ರಜ್ಞೆಗಳ ಸಂಲಗ್ನದಿಂದ ಪ್ರಖರಗೊಂಡ ಪ್ರತಿಭೆಯಿಂದಾಗಿ, ಶ್ರೀರಾಮಕೃಷ್ಣ, ವಿವೇಕಾನಂದ, ಅರವಿಂದ ಸಾಹಿತ್ಯದ ಶ್ರದ್ಧಾಪೂರ್ಣವ್ಯಾಸಂಗದಿಂದಾಗಿ ಸಂಪ್ರಾಪ್ತವಾದ ಸುಸಂಸ್ಕೃತ ಚೇತನರು. ಅವರಂಥ ಸ್ವಸ್ಥಮನಸ್ಸಿನ, ನಿರ್ವಿಕಾರ ಮನೋಭಾವದ, ವ್ಯಾಪಕ ವ್ಯಾಸಂಗದ, ಸೂಕ್ಷ್ಮಮತಿಯ, ಸತ್ಯನಿಷ್ಠೆಯ, ವಿಚಾರ ಶೀಲತೆಯ, ಸಾಕ್ಷೀ ಪ್ರಜ್ಞೆಯ ವಿಮರ್ಶಕರು ಕನ್ನಡದಲ್ಲಿ ವಿರಳ.

ಎಂಥ ಶ್ರೇಷ್ಠದರ್ಜೆಯ ಪಾಶ್ಚಾತ್ಯ ವಿಮರ್ಶಕನೂ ಮೆಚ್ಚಬಹುದಾದ ಅಥವಾ ಕರುಬ ಬಹುದಾದ ಸಹೃದಯ ವಿಮರ್ಶಕವರೇಣ್ಯರೆಂದು ಅವರನ್ನು ಕುರಿತು ಪುತಿನ ಅವರು ಆಗಾಗ್ಗೆ ಹೆಮ್ಮೆಯಿಂದ ಹೇಳುವುದುಂಟು. ತಮ್ಮ ಸಾಹಿತ್ಯವನ್ನು ಮೂಲಚೂಲವಾಗಿ ಅಭ್ಯಸಿಸಿ, ಪದರ ಪದರವಾಗಿ ಹಿಂಜಿ, ಹೆಕ್ಕಿ, ಸೋಸಿ, ಅದರ ಸ್ವರೂಪವನ್ನೂ ಒಳ ಹೊರಮಗ್ಗುಲುಗಳನ್ನೂ ಅದರ ಅಂತರಂಗವನ್ನೂ ಕರಾರುವಾಕ್ಕಾಗಿ ಅರ್ಥಮಾಡಿಕೊಂಡು ವ್ಯಾಖ್ಯಾನ ಮಾಡಬಲ್ಲ ಸಮರ್ಥರಲ್ಲಿ ಅವರು ಅಗ್ರಗಣ್ಯರೆಂಬುದನ್ನು ಕುವೆಂಪು ಸಹ ಬಲ್ಲರು.

ಇಂಥ ವಿಮರ್ಶಕವರೇಣ್ಯರ ಪ್ರಬುದ್ಧ ಪ್ರಬಂಧಗಳನ್ನು ಶ್ರೀಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಮತ್ತು ವಿದ್ಯಾಪರಿಷತ್ತುಗಳ ವತಿಯಿಂದ ಪ್ರಕಟಿಸಲು ಹೆಮ್ಮೆಯಾಗುತ್ತದೆ. ಇದನ್ನು ಪ್ರಕಟಿಸಲು ಮುಕ್ತ ಮನಸ್ಸಿನಿಂದ ಅನುಮತಿ ನೀಡಿದ ಶ್ರೀ ಸುಜನಾ ಅವರನ್ನು ಹೃತ್ಪೂರ್ವಕವಾಗಿ ವಂದಿಸುತ್ತೇನೆ. ಇದನ್ನು ಬಹು ಬೇಗನೆ ಅಂದವಾಗಿ ಮುದ್ರಿಸಿಕೊಟ್ಟ ಶ್ರೀ ಮೀರಾ ಪ್ರಿಂಟರ್ಸ್ ಮಾಲೀಕರಾದ ಶ್ರೀ. ಕೆ. ಪಿ. ಪುಟಸ್ವಾಮಿ ಅವರಿಗೂ ಧನ್ಯವಾದ ಸಲ್ಲಿಸುತ್ತೇನೆ.



ಮೈಸೂರು – ೧೨ — **ದೇ. ಜವರೇಗೌಡ**
೨೯–೧೨–೧೯೮೪ — ಪ್ರಧಾನ ಸಂಪಾದಕ

## ಅರಿಕೆ

ಶ್ರೀ ಕುವೆಂಪು ಅವರ ಕೃತಿಗಳನ್ನು ಕುರಿತು, ಅದರಲ್ಲೂ ಶ್ರೀ ರಾಮಾಯಣ ದರ್ಶನಂ ಕುರಿತು ಈತನಕ ಬಂದ ನನ್ನ ಲೇಖನಗಳನ್ನಿಲ್ಲಿ ಒಂದೆಡೆ ಕೂಡಿಸಿರುವೆ. ಶ್ರೀರಾಮಾಯದರ್ಶನಂ ಕೃತಿ ಕುರಿತ ನನ್ನ ಮೊದಲ ಲೇಖನವೂ (೧೯೫೪ ಜನವರಿ) ಸೇರಿದಂತೆ ಇದರಲ್ಲಿ ಒಟ್ಟು ಒಂಬತ್ತು ಲೇಖನಗಳಿವೆ. ೨೫ ವರ್ಷದ (೧೯೫೪–೭೯) ಅವಧಿಯುಲ್ಲಿ ಬಂದಿರುವ ಈ ಬರಹಗಳಲ್ಲಿ ಒಂದೆ ಹದವಿಲ್ಲದಿರಬಹುದು. ಕೆಲವೊಂದು ಭಾವ ಭಾವನೆಗಳು ಮರುಕಳಿಸಿಯೂ ಇವೆ. ಲೇಖನಗಳೂ ತುಂಬ ಲಂಬಿಸಿ ಬಳಲಿಸಿರಬಹುದು. ಈ ಎಲ್ಲ ಮಿತಿಗಳಿದ್ದು ಏನಾದರೂ ಒಟ್ಟಾರೆ ಈ ಬರೆಹಗಳಿಂದ ಶ್ರೀ ಕುವೆಂಪು ಕೃತಿ ಸಮೀಕ್ಷಣೆ ದೊರೆತಿದೆಯೆ ನಾನು ಹೇಳಬರದು. ದೊರೆತಿದ್ದರೆ ಧನ್ಯ. ಇಲ್ಲವಾದರೆ ಹೊಸ ಶ್ರದ್ಧೆಯಿಂದ ಕವಿಕೃತಿಗಳನ್ನು ಮತ್ತೆ ಮನನ ಮಾಡುವೆ ; ಅದರಿಂದೇನೂ ಹೆಚ್ಚು ಆಳವಾದ ಅರ್ಥಶೋಧನ ಆಗದಿರಬಹುದು. ನನ್ನಿಂದಾಗದಿದ್ದರೆ ಆಗಬೇಕಾದ ಹಾದಿಯಾದರೂ ಹದವಾದೀತು. ಯಾವೊಬ್ಬ ದೊಡ್ಡ ಕೃತಿಕಾರನ ಎಲ್ಲಾ ಕೃತಿಗಳನ್ನೂ ಯಾರೊಬ್ಬ ವಿಮರ್ಶಕನೆ ಪೂರೈಸಿದೆನೆಂದು ಹೆಮ್ಮೆ ಪಟ್ಟುಕೊಳ್ಳಬೇಕಾಗಿಲ್ಲ. ಅದು ಸಾಧ್ಯವೂ ಅಲ್ಲ. ಕೃತಿಗಳನ್ನೆ ಓದದೆ ವಿಮರ್ಶೆ ಮಾಡುವ ಹವ್ಯಾಸ ಹೆಚ್ಚುತ್ತಿರುವ ಹೊತ್ತಿನಲ್ಲಿ ಸಿದ್ಧ ಕವಾಟದಲ್ಲಿ ಎಂಥ ದೊಡ್ಡ ಲೇಖಕನನ್ನು ಕೂಡಿಟ್ಟು ಬೀಗಮುದ್ರಿಸುವುದು ಸುಲಭವೆನಿಸುತ್ತಿದೆ. ಶ್ರೀ ಕುವೆಂಪು ಶ್ರೀ ಪುತಿನ ಅವರಂಥ ಸ್ವೋಪಜ್ಞ ಕವಿಗಳಿಗೆ ಇದರಿಂದ ಹೆಚ್ಚು ಅಪಚಾರವಾಗಿದೆ. ಮಿಗಿಲಾಗಿ ಕನ್ನಡ ಸೃಜನಕ್ರಿಯ ನಿಜಕ್ಕೂ ಪಡೆದುಕೊಳ್ಳಬಹುದಾಗಿದ್ದು ಹೊಸ ಉಡ್ಯಾಣ ಇದರಿಂದಾಗಿ ತಪ್ಪಿದಂತಾಯಿತು. ಇದರ ದುರಂತದ ಅರಿವು ಇಂದಲ್ಲ ನಾಳೆ ಕನ್ನಡ ಬರಹಕ್ಕೆ ಬಂದೀತು. ನಾವೀಗ ಹೆಚ್ಚು ಪೂಜಿಸುತ್ತಿರುವುದು ಬೌದ್ಧೀಕರಿಸಿದ ರಾಗದ್ವೇಷ. ಮಿತವಾದ ಉದ್ರೇಕಗಳನ್ನು ಪ್ರಜಾಪ್ರಭುತ್ವ ಎಲ್ಲರಲ್ಲೂ ಸಮಾನತೆಯ ಅರಿವನ್ನು ಹೊಸದಾಗಿ ಮೂಡಿಸಲು ಸಹಾಯಕವಾದಂತೆ ಚುನಾವಣೆಗಳು ಬಹುತೇಕರಲ್ಲಿ ಆಳ್ವ ವ್ಯಸನಗಳನ್ನು ಹೆಚ್ಚು ಕೆರಳಿಸಿದವು. ಅವು ಬೆಳೆಯುತ್ತ ಹೇಗಾದರೂ ಆಳಬೇಕೆಂಬ, ಅದಕ್ಕಾಗಿ ಪಂಥಕಟ್ಟಬೇಕೆಂಬ, ತಂತ್ರ ಹೂಡಬೇಕೆಂಬ ಹಾದಿಗಳೂ ಕಂಡುಕೊಂಡವು. ಸಾಹಿತ್ಯ ಲೋಕದಲ್ಲಾದರೂ ಅದು ಬೇರೊಂದು ಹದದಲ್ಲಿ ಮೊಳಗುತ್ತಿದೆ. ಇದನ್ನು ಮೊದಲು ಬರಹಗಾರರು ದಾಟಿಕೊಳ್ಳದಿದ್ದರೆ ಉಳಿದ ಲೋಕವಾದರೂ ಏನುಮಾಡೀತು ?



ಈ ನನ್ನ ಬರೆಹಗಳು ಮುಂದೆ ಶ್ರೀ ಕುವೆಂಪು ಕೃತಿ ಕುರಿತು ಮಾಡಬೇಕಾದ ಆಳ ವ್ಯವಸಾಯದ ಮೊದಲುಕ್ಕೆಯ ಹರಿಬವೆಂಬ ಅರಿವುಂಟು ನನಗೆ. ಈ ಶತಮಾನದ ಸಂಧ್ಯೆಹೊತ್ತಿಗೆ ಅವರ ಪ್ರಧಾನ ಕೃತಿಗಳ ಮಹದನುಭವ ಪ್ರಾರಂಭವಾದೀತೆಂಬುದು ನನ್ನ ತಿಳಿವಳಿಕೆ. ಆ ಹಾದಿಯಲ್ಲಿ ನಾನಾದರೂ ನಡೆಯಬೇಕಾದ ದೂರವುಂಟು. ಈ ಬರಹಗಳಿಗೆ ಬರಬಹುದಾದ ಪ್ರತಿಕ್ರಿಯೆ ಆ ಕಾರ್ಯವನ್ನು ಪುಟಗೊಳಿಸಬಹುದು.

ಹೇಗಾದರಿರಲಿ, ಈ ಎಲ್ಲ ಲೇಖನಗಳನ್ನು ಪ್ರಕಟಿಸಲು ಮನಸ್ಸುಮಾಡಿ ನಾಲ್ಕೈದು ವರ್ಷದಿಂದ ನೆನಪುಮಾಡುತ್ತಿದ್ದ ಮಾನ್ಯ ಗುರುಗಳಾದ ಪ್ರೊ॥ ದೇಜಗೌ ಅವರಿಗೂ, ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್‌ನವರಿಗೂ, ತುಂಬ ಬೇಗನೆ ಆದಷ್ಟೂ ತಪ್ಪಿಲ್ಲದಂತೆ ಚೆನ್ನಾಗಿ ಮುದ್ರಿಸಿರುವ ಶ್ರೀ ಮೀರಾ ಪ್ರಿಂಟರ್ಸ್ ಮಾಲೀಕರಿಗೂ, ಅಲ್ಲಿನ ಕಾರ್ಮಿಕ ಬಂಧುಗಳಿಗೂ ಋಣಿಯಾಗಿರುವೆ. ವಂದನೆಗಳು.

೨೯–೨–೮೪ **ಸುಜನಾ**

'ಶುಚಿಸ್ಮಿತಾ'

ಮೈಸೂರು–೧೨

Blank



## ಪರಿವಿಡಿ


| | |
|---|---|
| ಶುಭ ಸಂದೇಶ | iii |
| ಚೆನ್ನುಡಿ | iv |
| ಅಧ್ಯಕ್ಷರ ಮಾತು | v |
| ಹೊನ್ನುಡಿ | vi |
| ಎರಡು ನುಡಿ | vii |
| ಪ್ರಕಾಶಕರ ಮಾತು | viii |
| ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ | x |
| ಮೊದಲ ಮಾತು | xi |
| ಅರಿಕೆ | xviii |
| ೧. ಪರಂಪರೆ ಮತ್ತು ಕುವೆಂಪು | ೧ |
| ೨. ಕುವೆಂಪು ಕೃತಿಪ್ರವೇಶ | ೬೫ |
| ೩. ಶ್ರೀ ರಾಮಾಯಣದರ್ಶನದ ಮಂಥರೆ | ೧೧೭ |
| ೪. ಇಪ್ಪತ್ತನೆಯ ಶತಮಾನದಲ್ಲಿ ಶ್ರೀ ರಾಮಾಯಣದರ್ಶನಂ | ೧೪೫ |
| ೫. ಶ್ರೀ ಕುವೆಂಪು ಕೃತಿಗಳ ತಾತ್ತ್ವಿಕ ಹಿನ್ನೆಲೆ | ೧೬೬ |
| ೬. ಕವಿಕಂಡ ಕಾಣ್ಕೆ | ೨೨೩ |
| ೭. ಶ್ರೀ ರಾಮಾಯಣದರ್ಶನದಲ್ಲಿ ಸಮಕಾಲೀನ ಪ್ರಜ್ಞೆ | ೨೪೬ |
| ೮. ಆಧುನಿಕ ಮಹಾಕಾವ್ಯ | ೨೭೬ |
| ೯. ಸೀತಾ ಮಂಡೋದರಿಯರು | ೨೮೩ |

Blank



# ಪರಂಪರೆ ಮತ್ತು ಕುವೆಂಪು

Blank

# ಪರಂಪರೆ ಮತ್ತು ಕುವೆಂಪು

ಸಂಪ್ರದಾಯ – ಪಂರಪರೆ ಎಂಬ ಪದಗಳನ್ನು ಸಾಮಾನ್ಯವಾಗಿ ಪರ್ಯಾಯಾರ್ಥಕಗಳಾಗಿ ಬಳಸುವ ವಾಡಿಕೆ ಇದೆ. ಆ ಪದಗಳಿಗೆ ವಿಭಿನ್ನಾರ್ಥಕ ಶಕ್ತಿ ಇದೆಯೊ ಇಲ್ಲವೊ ಹೇಗಾದರೂ ಇರಲಿ, ಅಗತ್ಯ ಕಾರಣದಿಂದಲಾದರೂ ನಾವಿಲ್ಲಿ ಅವುಗಳನ್ನು ಎರಡು ಬೇರೆಯ – ವಿಶಿಷ್ಟ ಅರ್ಥವುಳ್ಳ ಮಾತುಗಳೆಂದೆ ಬಗೆಯುವುದು ಲೇಸು. ಇಲ್ಲವಾದರೆ 'Concept' ನ ಗೊಂದಲವುಂಟಾಗುತ್ತದೆ.* ತನಗೆ ಹಿಂದಿನವರಿಂದ ಕೊಡಲ್ಪಟ್ಟಿದ್ದೆಲ್ಲವೂ, ದತ್ತವಾದದ್ದೆಲ್ಲವೂ ಸಂಪ್ರದಾಯವಾಗುತ್ತದೆ. ತಾನು ಪಡೆದದ್ದನ್ನು ಹಾಗೆಯೆ ಕಾಪಿಟ್ಟುಕೊಂಡು ಹೋಗುವ ಬುದ್ಧಿ ಸಂಪ್ರದಾಯವನ್ನು ಚಿರಂಜೀವಿಯಾಗಿಸಲು ಯತ್ನಿಸುತ್ತಲೆ ಇರುತ್ತದೆ. ಆದರೆ, ಪರಂಪರೆಯಾದರೊ ಬರಿಯ ದತ್ತವಾದದ್ದೆ ಅಲ್ಲ. ತಾನು ಪಡೆಯಲಿ ಬಿಡಲಿ, ವ್ಯಕ್ತಿಯನ್ನು ತನ್ನ ಪ್ರವಾಹದಲ್ಲಿ ತೇಲಿಸಿಕೊಂಡು ಬಂದಿರುವ ಅವ್ಯಾಹತಶಕ್ತಿ ಅವ್ಯಾಹತಶಕ್ತಿ ಸ್ರೋತ ಪರಂಪರೆ. ಅಂದ ಮಾತ್ರದಿಂದಲೆ ಪರಂಪರೆ ಸುಲಭವೆಂದೇನೂ ಅಲ್ಲ. ವ್ಯಕ್ತಿ ವ್ಯಕ್ತಿಯೊಳಗೂ ಹರಿಯುತ್ತಿರುವ ಚಿರಂತನ ಜೀವ ಸತ್ತ್ವ ಸ್ರೋತವಾಗಿದ್ದರೂ ಅದನ್ನು ಸಾಧಿಸಿದಲ್ಲದೆ ಯಾವ ಕವಿಗೂ ಅದು ದಕ್ಕದು. ತನ್ನನ್ನು ತಾನು ಅದರಲ್ಲಿ ಸಂಲೀನಗೊಳಿಸಿಕೊಳ್ಳದ ಯಾವ ಕವಿಯೂ ತನ್ನಲ್ಲಿ ಪರಂಪರೆಯ ಜೀವವಾಹಿನಿಯನ್ನು ಮೈಗೂಡಿಸಿಕೊಳ್ಳಲಾರ. ಸಂಪ್ರದಾಯ ಕೇವಲ ಅಂಥ ಭಾರವಾದಾಗ ನಮ್ಮನ್ನು ಅಳಿಸೀತು ; ಅಲ್ಲದಾಗ ಉಳಿಸಲೂ ಬಹುದು; ಆದರೆ ಏನೊಂದೂ ಹೊಸತನ್ನು ಅದು ನಮಗೆ ಹೊಳೆಸಲಾರದು ಬೆಳೆಸಲಾರದು. ಪರಂಪರೆ ನಮ್ಮನ್ನೇನಾದರೂ ತನ್ನ

---

* ಇಂಗ್ಲೀಷ್‌ನಲ್ಲಿ Tradition, Convention ಎಂಬ ಎರಡು ಪದಗಳಿದ್ದರೂ, ನಮ್ಮಲ್ಲಿಯಂತೆಯೇ ಒಮ್ಮೊಮ್ಮೆ ಅವರೂ ಅವುಗಳನ್ನು ಅನಿಶ್ಚಿತಾರ್ಥವುಳ್ಳ ಮಾತಾಗಿ ಬಳಸುವುದುಂಟು. ಆದರೂ ಆ ಎರಡಕ್ಕೂ ಬೇರೆಯೆ ಅರ್ಥವ್ಯಾಪ್ತಿಯುಂಟು Convention ಎಂಬುದಕ್ಕೆ ಒಡಂಬಡಿಕೆ, ನಡಾವಳಿ ಎಂದೂ Tradition ಎಂದರೆ ಹಿಂದಿನಿಂದ ರವಾನಿಸಲ್ಪಟ್ಟದ್ದು ಎಂದೂ ಅರ್ಥವುಂಟು. ನಮ್ಮ ಸಂಪ್ರದಾಯ ಪದಕ್ಕೆ ಸಂವಾದಿಯಾದ ಪದ ಅದು.

ತೆಕ್ಕೆಗೆತ್ತಿಕೊಂಡಲ್ಲಿ ಅದರಿಂದ ನಾವು ಅಳಿಯುವುದಿಲ್ಲ. ನಮ್ಮ ಅಂತಸ್ಸತ್ತ್ವ ಅರಳಿ ಹಣ್ಣಿನ ತುಂಬಿಕೊಳ್ಳುತ್ತವೆ. ಮಠಗಳು ಸಂಪ್ರದಾಯದ ರಕ್ಷಕವಾಗುತ್ತವೆ. ಒಮ್ಮೆ ಬಲಿಷ್ಠವಾದ ಮಠ–ಸಂಪ್ರದಾಯಗಳಿಂದ ಮತ್ತೆ ಸ್ವತಂತ್ರ ವಿಕಾಸವಾಗುತ್ತದೆಂದು ನಿರೀಕ್ಷಿಸುವುದು ಕಷ್ಟ. ಆದ್ದರಿಂದಲೆ ಸ್ವತಂತ್ರ ಪ್ರತಿಭೆ ಸಂಪ್ರದಾಯಬದ್ಧವಾಗಲಾರದೆ ಅದರಾಚೆ ಸಿಡಿದು ಬೆಳೆಯುತ್ತದೆ; ಪ್ರತಿಭಟನೆ ತೋರಿ ಅಸ್ತಿತ್ವ ಸಾಧಿಸಿಕೊಳ್ಳುತ್ತದೆ. ಸಂಪ್ರದಾಯ – ಪ್ರತಿಭಟನ, ಪ್ರಾಚೀನ – ನವೋನ್ಮೇಷ, ಇವುಗಳ ಸಂಘರ್ಷ ಪರಿಣಾಮವಾದ ಸಾಮರಸ್ಯವೆ ಪರಂಪರೆ, ಪ್ರಾಚೀನವನ್ನು ಅರ್ವಾಚೀನದಲ್ಲಿ ಒಂದು ಪ್ರತ್ಯೇಕ 'ಮಡಿ'ನಾಡಾಗಿ ಇಡದೆ ಇರಬಿಡದೆ, ಬಳಸುವ ಅರಗಿಸಿಕೊಂಡು ಬೆಳೆಯುವ ಪ್ರತಿಭೆಯ ಪ್ರಯತ್ನದ ಫಲವೆ ಪರಂಪರೆ.

ದಾರಿಯಲ್ಲಿ ಹೋಗುವಾಗ ಹಳ್ಳಿಯ ಹುಡುಗರು, 'ಈಗ ಟೇಮ್ ಎಷ್ಟ್ ಸಾಮಿ?' ಎಂದು ಕೇಳುವುದುಂಟು. '೯ ಘಂಟೆಯಪ್ಪ' ಎಂದದ್ದನ್ನು ಕೇಳಿಕೊಂಡು ಆ ಹುಡುಗರು ಒಂದೆರಡು ಮೈಲಿ ಹೋದ ಮೇಲೂ, 'ಲೋ, ಆಗಲೆ ೯ ಘಂಟೇ ಅಂತೆ' ನಡೀಲಾ,' ಎಂದುಕೊಂಡೆ ಸಾಗುತ್ತಿರುತ್ತಾರೆ. ಆ ಹುಡುಗರ ಭಾಗಕ್ಕೆ, ದೂರ ಸಾಗಿದ್ದರೂ ಕಾಲ ಸಂವಾದಿಯಾಗಿ ಸಾಗಿರುವುದೆ ಇಲ್ಲ. ಅದು ಹೆಚ್ಚು ಕಡಿಮೆ ಹಾಗೆಯೆ ಉಳಿದಿರುತ್ತದೆ. ಅದೇ ಬೇರೇನಾದರೂ ಕಾಲದ ಎಚ್ಚರವಿರುವಾತ ಹೊತ್ತನ್ನು ಕೇಳಿದ್ದರೆ ರೀತಿಯೆ ಬೇರಿರುತ್ತಿತ್ತು. ದೂರದ ಕೂಡೆ ಕಾಲವೂ ಸಾಗಿರುತ್ತಿತ್ತು, ಆತನ ಮನಸ್ಸು ಕಾಲ ಪ್ರವಾಹದ ಕೂಡೆಯೆ ಹರಿದು ಹೊತ್ತನ್ನೂ ಕಂಡುಕೊಳ್ಳುತ್ತಿತ್ತು. ಬಹಳ ಹೊತ್ತಾದ ಮೇಲೂ ಅವನಿಗೆ ಗಡಿಯಾದರ ನೆರವಿಲ್ಲದೆಯೆ ತಕ್ಕಮಟ್ಟಿನ ಸರಿ ವೇಳೆ ತಿಳಿಯುವುದು ಸಾಧ್ಯವಿರುತ್ತಿತ್ತು.

ಸಾವಿರ ವರ್ಷದ ಹಿಂದೆ ಸಾವಿರಾರು ಮೈಲಿ ದೂರದಲ್ಲಿದ್ದ ತನ್ನ ಮತದ ಪ್ರವರ್ತಕ ಬಿಟ್ಟಿದ್ದ ಗಡ್ಡದಂತಹ ಗಡ್ಡವನ್ನೆ ಈಗಲೂ ಬಿಡುವುದರಲ್ಲೆ ಸಂತೃಪ್ತವಾಗುತ್ತದೆ ಸಂಪ್ರದಾಯ. ತಾನು ಆದಷ್ಟೂ ಹಳತಿಗೆ ಹತ್ತಿರವಾಗಿರುವುದರಲ್ಲೆ, ಅದನ್ನು ಹೆಚ್ಚು ಹೋಲುವುದರಲ್ಲೆ ಸಂತೋಷಪಡುತ್ತದೆ ಅದು. ತನ್ನ ಕೈಗೆ ಹಿಂದಿನಿಂದ ಬಂದುದು ಅತಿ ಪವಿತ್ರ ಹಾಗೂ ಸಂಗೋಪನಯೋಗ್ಯ; ಅದನ್ನೂ ತಾನು ಪಡೆದಂತಯ ಮುಂದಕ್ಕೆ ಸಾಗಬಿಡಬೇಕು; ಆದ್ದರಿಂದಲೇ ಅದು ತನ್ನ ಪ್ರವಾದಿಯದೆಂದು ಪ್ರತೀತಿಯಿರುವ ಒಂದು ಹಲ್ಲನ್ನೊ ಕೂದಲನ್ನೊ ಸಂರಕ್ಷಿಸಿ ವೀರಾವೇಶದಿಂದ ಪೂಜಿಸುತ್ತದೆ. ತನ್ನ ಉದ್ಧಾರಕನ ಗುರುವಿನ ಶವವನ್ನು, ಶವಪ್ರತೀಕವನ್ನು ಪ್ರದರ್ಶಿಸಿ – ಆ ಸತ್ತ ಕರುವಿನ ಚಕ್ಕಳದ ಕವಡು ಗಾತ್ರವನ್ನು ತೋರಿ – ನಮ್ಮ ಎದೆಕೆಚ್ಚಲಲ್ಲಿ ಕರುಣೆಯ ಭಕ್ತಿಯ ಭಾವದ ಸೊರವು ಬಿಡಿಸಿ



ತನ್ನ ಮತದ ಹಂಡೆ ತುಂಬಿಕೊಳ್ಳುತ್ತದೆ. ಆದರೆ ಪರಪರೆ ಜೀವಂತವಾಹಿನಿಯಂತೆ ಬೆಳೆಯುತ್ತ ಹೋಗುತ್ತದೆ. ತಾನು ಹಿಂದಿನ ಅದೇ ನೀರಾಗಿದ್ದರೂ ಮುಂದುವರಿದಂತೆಲ್ಲ ಹೊಸ ಹೊಸ ನೀರುಗಳನ್ನೆಲ್ಲ ಮೈಗೂಡಿಸಿಕೊಳ್ಳುತ್ತ, ಕಾಲುವೆಗಳಿಗೂ ನೀರೂಡುತ್ತ ಮಡುಗಳಲ್ಲಿ ತುಸು ನಿಂತು ಮೆಲ್ಲನೆ ಹರಿದು, ಪ್ರಪಾತಗಳಲ್ಲಿ ಭೋರ್ಗರೆದು ಕೆಡೆದು ನುಗ್ಗಿ ಮೇಕೆದಾಟುಗಳಲ್ಲಿ ಕಿಕ್ಕಿರಿದಾಗಿ ರಭಸಗೊಂಡು ಮುನ್ನುಗ್ಗಿ ಸಾಗರದತ್ತ ಹರಿದೋಡುವ ಜೀವನದಿಯಂತೆ ಇರುತ್ತದೆ ಪರಂಪರೆ. ಅದು ನಿತ್ಯವರ್ತಮಾನವಾಗಿರುವಂತೆಯೆ ಪುರಾತನವೂ ಅಹುದು. ಅದೃಶ್ಯ ಭವಿಷ್ಯವೂ ಅಹುದು. ಅದಕ್ಕೆ ಏರಿಳಿತಗಳುಂಟು, ಹಿಗ್ಗು ಕುಗ್ಗುಗಳುಂಟು – ಆದರೆ ಸಾವಿಲ್ಲ. ಅದಕ್ಕೊದಗುವ ಪಾತ್ರಗಾತ್ರಗಳೆಲ್ಲಾ ಆಯಾ ದೇಶ ಆಯಾ ಕಾಲ ಕೊಟ್ಟಂತಹದಾಗಿರುತ್ತದೆ.

ಪರಂಪರೆ–ಸಂಪ್ರದಾಯ ಎರಡೂ ಒಂದರ್ಥದಲ್ಲಿ ವಿರುದ್ಧಾರ್ಥಪದಗಳು: ಮತ್ತೊಂದು ಅರ್ಥದಲ್ಲಿ ಕೊಂಚ ಸಮಾನಾರ್ಥ ಗಂಧಿಗಳು. ತನ್ನ ಪೂರ್ವದ ಎತ್ತರವನ್ನು ಕಳೆದುಕೊಳ್ಳಲಿಷ್ಟಪಡದ ಸಂಪ್ರದಾಯ ಕಾಲುವೆಯಾಗುತ್ತದೆ. ಕಾಲದೇಶವಶಿಯಾದ 'ನದಿ – ಪರಂಪರೆ' ಇಳಿದಂತೆ ತೋರಿದರೂ ಬೆಳೆಯುತ್ತ ಸಾಗರವಾಗುತ್ತದೆ. ಸಂಪ್ರದಾಯಸ್ಥ ಪರಂಪರೆಯಲ್ಲಿರುವುದು ಸುಲಭ ಸಾಧ್ಯವಲ್ಲ. ಪರಂಪರೆಯಲ್ಲಿದ್ದವರು ಸಂಪ್ರದಾಯ ತಿಳಿದಿದ್ದರೂ ಸಂಪ್ರದಾಯಸ್ಥರಾಗಿರುವುದು ಸಾಧ್ಯವೂ ಅಲ್ಲ. ಆಲೋಚನೆಯಲ್ಲಿ ವಿಚಾರವಂತರೆನಿಸಿಕೊಂಡವರೂ, ವಿಜ್ಞಾನ ಪ್ರಾಧ್ಯಾಪಕರೆನಿಸಿಕೊಂಡವರೂ ಆಚಾರದಲ್ಲಿ, ಸಂವೇದನೆಯಲ್ಲಿ ಸಂಪ್ರದಾಯಸ್ಥರಾಗಿರಬಹುದು. ಅವರೂ ಪ್ರಾಚೀನವನ್ನು ಸದ್ಯಕಾಲೀನ ದೇಶಕ್ಕೆ ಉಂಡೆ ಉಂಡೆಯಾಗೆ ತಂದು ನಾಟಿ ಹಾಕಬೇಕೆಂದು ಬಯಸುವುದನ್ನೂ ನೋಡುತ್ತೇವೆ. ಆಲೋಚನೆಯಲ್ಲಿ ಸಮಾಜವಾದವನ್ನು ಉಗ್ರವಾಗಿ ಪ್ರತಿಪಾದಿಸುವವರೂ ಆಚಾರದಲ್ಲಿ ಪ್ರಾಚೀನ ಅಗತ್ಯಗಳಾಗಿದ್ದಿರಬಹುದಾದ ವರ್ಣಾಶ್ರಮವ್ಯವಸ್ಥೆಗಳನ್ನೆ ಇಂದೂ ಅಗತ್ಯಗಳಾಗಿ ಭಾವಿಸುತ್ತ, ಅವುಗಳನ್ನೆ ಚಿರನೂತನಗೊಳಿಸಲೆಳೆಸುವುದನ್ನು ಕಾಣುತ್ತೇವೆ. ಅಂತಹವರು ಮನೆಯಲ್ಲಿ ಒಂದು ಹೊರಗೆ ಒಂದು, ತಮ್ಮೊಳಗೆ ಒಂದು ಈಚೆ ಮತ್ತೊಂದು ಬಾಳನ್ನು ತಿಳಿದೂ ತಿಳಿದೂ ಬಾಳುತ್ತಿರುತ್ತಾರೆ. ಕಾರಣ ಅವರು ಸಂಪ್ರದಾಯ ಮತ್ತು 'ವರ್ತಮಾನ–ಆದಾಯ'ಗಳನ್ನೂ ಮೇಳೈಸಲಾಗದೆ ಪಲಾಯನ ಮಾಡಿ ಮಾಡಿರುತ್ತಾರೆ. ಮೊದಲು ಸಂಪ್ರದಾಯದ ಎದುರು ನಿಂತು ಪ್ರತಿಭಟಿಸುವುದಕ್ಕೆ ಅಂಜಿ ಸೋತಿರುತ್ತಾರೆ. ತಮ್ಮ ಒಳ ಸೋಲನ್ನು ಗೆಲುವಾಗಿ ಮೆರೆಯಲು,

ಹೊರಗೆ ವಿಚಾರವಾಗಿಗಳಾಗಿರುತ್ತಾರೆ. ಸಂಪ್ರದಾಯ ನಿಧಿಯನ್ನು ವರ್ತಮಾನಕ್ಕೆ ಒಗ್ಗಿಸಿ ಕೊಳ್ಳಲು ಪ್ರಾರಂಭದ ಪ್ರತಿಭಟನೆ ಒಮ್ಮೊಮ್ಮೆ ಅಗತ್ಯ, ಸೊರವು ಬಿಡಿಸಲು ಕರು ತಾಯಿ ಕೆಚ್ಚಲನ್ನು ಗುದ್ದುವಂತೆ. ಆದರೆ ಬಾಯಿಗೆ ಕುಕ್ಕೆ ಕಟ್ಟಿಸಿಕೊಂಡ ಗೌಳಿಗನ ಕರುವಂತೆ ಈ ದ್ವೈಧೀಭಾವದ ಸಂಪ್ರದಾಯಸ್ಥ ಜನ ಇರುತ್ತಾರೆ. ಪರಂಪರೆ ಕಂಡುಕೊಳ್ಳುವ– ಬಾಳುವ ವ್ಯಕ್ತಿ ಪ್ರಾರಂಭದ ಪ್ರತಿಭಟನೆ ಕೋರಿ ಸಂಪ್ರದಾಯವನ್ನು ಅದ್ಯತನಕ್ಕೆ ಒಗ್ಗಿಸಿ ಬಗ್ಗಿಸಿ ಬಳಸಿಕೊಳ್ಳುವುದರಿಂದ ಸನಾತನದ ನೈರಂತರ್ಯವನ್ನು ಪಡೆಯುತ್ತಾನೆ, ನಮ್ಮ ಶರೀರದಲ್ಲಿ ನಮ್ಮ ತಲೆಮೊರೆಯ ವೈಶಿಷ್ಟ್ಯಗಳು ಹರಿದಿದ್ದರೂ, ನಮ್ಮ ಈಗಿನ ವ್ಯಕ್ತಿ ವೈಶಿಷ್ಟ್ಯಗಳು ಅವನ್ನು ಬಳಸಿಕೊಂಡು ಮೀರಿ ಬಾಳುವಂತೆ. ಆದರೆ ಇಲ್ಲಿ ಒಂದಶ ಸ್ಪಷ್ಟಪಡಿಸಬೇಕು. ಸಂಪ್ರದಾಯ ಮತ್ತು ಪ್ರತಿಭಟನಗಳ ಪರಿಮಾಣವೆ ಪರಂಪರೆ ಎಂದಾಗ ಸಂಪ್ರದಾಯ ಎಂಬುದೊಂದು ಪೂರ್ವ ಅಗತ್ಯವಾಗಿ ಇರಬೇಕು ಎಂಬುದನ್ನೂ ಒಪ್ಪಿಕೊಳ್ಳುತ್ತೇವೆ. ಸಂಪ್ರದಾಯ ವಾಹಕರೂ ಇರಬೇಕು. ಆಡಳಿತ ವ್ಯವಸ್ಥೆ ಮತ್ತು ಸರಕಾರ ಎಷ್ಟೆ ಬದಲಾಯಿಸಿದರೂ ಸೇನಾವ್ಯವಸ್ಥೆ ತನ್ನ ಶಿಸ್ತನ್ನೂ ಅಧಿಕಾರೈಕನಿಷ್ಠೆಯನ್ನೂ ಮಾತ್ರ ರಕ್ಷಿಸಿಕೊಂಡ ಹೋಗುವ ಸಂಪ್ರದಾಯ ಅನುಸರಿಸುವಂತೆ, ಪರಂಪರೆಯನ್ನು ನೀಡಲಾದರೂ ಕೂಡ ಸಂಪ್ರದಾಯ ಎಂಬುದೊಂದು ಕೊಂಚ ಇರಬೇಕಾಗುತ್ತದೆ. ಒಂದೊಂದು ಹೊಸ ಅನುಭವವು ಉತ್ಕಟವೂ ಸಾಂದ್ರವೂ ಆದಾಗ ಆಚರಣೆಗಳಾಗಿ, ವಿಧಿಗಳಾಗಿ – ಕಲ್ಪಗಳಾಗಿ ಹರಳುಗೊಳ್ಳುತ್ತದೆ. ಅವೆ ಮುಂದಕ್ಕೆ ಸಂಪ್ರದಾಯವಾಗಿ ಉಳಿದುಬರುತ್ತದೆ. ಅವು ಉಸಿರು ಕಟ್ಟಿಸುವಂತಾದಾಗ ಮತ್ತೆ ಪ್ರತಿಭಟನೆ, ತಿರಸ್ಕಾರವಲ್ಲ ಕುಹಕವ್ಯಂಗ್ಯವಲ್ಲ, ಅವನ್ನು ಹದಗೊಳಿಸಿ ಬಗ್ಗಿಸಿಕೊಳ್ಳುತ್ತದೆ ; ಕರಗಿಸಿ ಕೊಂಡು ಜೀವಧಾತುವಿನ ಜೊತೆ ಮೇಳೈಸಿಕೊಳ್ಳುತ್ತದೆ. ಹುಳಿಯ ಹಣ್ಣಿದ್ದರೆ ಕಸಿಕಟ್ಟಿಕೊಂಡು ಹೊಸತಳಿ ಮಾಡಿಕೊಳ್ಳಬಹುದು, ಕಸಿಯಿಂದ ಕಸಿ ಬರಲಾರದು. ಅಷ್ಟೆ ಅಲ್ಲ ; ಕಸಿಯೂ ಮುಂದುವರಿದು ಕಡೆಗೆ ಹುಳಿಯೆ ಆಗಿಬಿಡುವಂತೆ ಸಂಪ್ರದಾಯ – ಪ್ರತಿಭಟನೆಗಳ ಪರಿಣಾಮವಾದ ಪರಂಪರೆಯೂ ಮುಂದೆ ಸಂಪ್ರದಾಯವಾಗಿ ಮಡುಗೊಳ್ಳುತ್ತದೆ. ಮತ್ತೆ ಅದೇ ಕೊಳೆತಾಗ, ಹೊಸ ಕಾಲದ ಅಗತ್ಯ ತೀರಾ ಬೇರೆ ಆಗಿದ್ದರೆ ಅದು ಕೆಡುತ್ತದೆ. ಹೊಸ ಕಾಲದ ಅಗತ್ಯಕ್ಕೆ ಸೃಜನಾತ್ಮಕ ಶಕ್ತಿ ಇದ್ದರೆ ಸಂಪ್ರದಾಯಕ್ಕೆ ಕಸಿಕಟ್ಟಿಕೊಂಡು ಮತ್ತೆ ಹೊಸ ತಳಿ ಬೆಳೆದುಕೊಳ್ಳುತ್ತದೆ. ಆದ್ದರಿಂದ ಸಂಪ್ರದಾಯ ಪರಂಪರೆ ಅಲ್ಲ ; ಅದರ ತಿರಸ್ಕಾರವೂ ಸಂಪೂರ್ಣ ಪರಂಪರೆಯಲ್ಲ ; ಸಂಪ್ರದಾಯವನ್ನು ಸೃಜನಾತ್ಮಕವಾಗಿ ಕಾಲದೇಶದ ಆವರಣಕ್ಕೆ



ಮರುವುಟ್ಟುಗೊಳಿಸಿಕೊಳ್ಳುವ ಸಾಮರ್ಥ್ಯದ ಫಲವೆ ಪರಂಪರೆ. ಈ ಅರ್ಥದಲ್ಲಿ ಶ್ರೀ ಕವಿ ಕುವೆಂಪು ಅವರನ್ನು ಭಾರತೀಯ ಪರಂಪರೆಯ ಕವಿಯಾಗಿ ವಿವೇಚಿಸುವುದೇ ಈ ಲೇಖನದ ಉದ್ದೇಶ.

ಯಾವ ನಿಷ್ಠುರ ಸಂಪ್ರದಾಯವೂ ಇಲ್ಲದ ಮಲೆನಾಡ ಮೇಲುಮಟ್ಟದ ಜಾನಪದರ ಮನೆಯಲ್ಲಿ ಹುಟ್ಟಿದುದೇ ಶ್ರೀ ಕುವೆಂಪು ಅವರಿಗೆ ಭಾರತೀಯ ನಿಜ ಪರಂಪರೆಯನ್ನರಗಿಸಿಕೊಳ್ಳುವುದಕ್ಕೆ, ಅದರಲ್ಲಿ ತಮ್ಮನ್ನು ಕರಗಿಸಿಕೊಳ್ಳುವುದಕ್ಕೆ ನೆರವಾಯಿತು, ವರವಾಯಿತು. ಅದಲ್ಲದೆ, ಮತೀಯ ಶಿಷ್ಟಾಚಾರಗಳ ಬಲಿಷ್ಠ ಸಂಪ್ರದಾಯಸ್ಥರ ಮನೆತನದಲ್ಲಿ ಕವಿ ಹುಟ್ಟಿ ಬಂದಿದ್ದರೆ, ಆಗ ಆ ದುರ್ಗಮ ಕೋಟೆಯ ಅತಿರಕ್ಷೆಯಿಂದ ತಮ್ಮನ್ನು ತಾವು ಬಿಡಿಸಿಕೊಂಡು ಅನಿಕೇತನವಾಗಿಸಿಕೊಳ್ಳುವುದರಲ್ಲೇ ಅಪಾರ ಶಕ್ತಿ ಕಳೆದುಕೊಳ್ಳಬೇಕಿತ್ತು. ಕಾಡಿನ ಭೂತಗಳಿಗೂ ನಮಸ್ಕಾರ, ಘಟ್ಟದ ಮಗ್ಗುಲು ಮಂಜುನಾಥ ಸುಬ್ರಹ್ಮಣ್ಯರಿಗೂ ನಮಸ್ಕಾರ, ಕಡಲಂಚಿನ ಉಡುಪಿ ಕೃಷ್ಣನಿಗೆಂತೊ ಕಾಶಿ ವಿಶ್ವೇಶ್ವರ ತಿರುಪತಿ ವೆಂಕಟರಮಣರಿಗೂ ಶರಣು, ಜೈನ ಬಸದಿಗೆಂತೊ ಕ್ರಿಸ್ತ ಚರ್ಚಿಗೂ ಮುಸಲಮಸೀದಿಗೂ ಸತ್ಕಾರ – ಹೀಗೆಂದು ಬಾಳಿದ ಜಾನಪದಕ್ಕೆ ಯಾವ ನಿಷ್ಠುರ ಸಂಪ್ರದಾಯ ಬಂಧನವೂ ಇರದು. ಅಂದ ಮಾತ್ರದಿಂದಲೆ ಶಿಷ್ಟಸಂಪ್ರದಾಯ ವಿರದ ಅದಕ್ಕೆ ನಿಷ್ಠೆಯೆ ಇರದು, ವಿಶಿಷ್ಟತೆಯೂ ಬಾರದು ಎಂದೇನೂ ಭಾವಿಸಬೇಕಿಲ್ಲ. ಅದು ಎಲ್ಲಕ್ಕೂ ಎಲ್ಲ ಸತ್ತ್ವಕ್ಕೂ ತನ್ನನ್ನು ತೆರೆದುಕೊಳ್ಳಬಲ್ಲದು, ತನ್ನನ್ನು ಛಲದಿಂದ ಕಾಪಿಟ್ಟುಕೊಂಡೂ ಕೂಡ. ಇದು ಕಾರಣದಿಂದಲೆ, ಅಂಥ ಹಿನ್ನೆಲೆಯಲ್ಲಿ ಹುಟ್ಟಿ ಬಂದ ಶ್ರೀ ಕುವೆಂಪು ಅವರಿಗೆ ಪಾಶ್ಚಾತ್ಯ ಪೌರ್ವಾತ್ಯ ಪರಂಪರೆಗಳ ಅನುಭವವಾಗುವುದು ಸುಲಭವಾಯಿತು. ಭಾರತೀಯ ಸಮಸ್ತ ಪರಂಪರೆಯ ಮಹಾ ಪಾತ್ರನಾದ ಭಗವಾನ್ ಶ್ರೀ ರಾಮಕೃಷ್ಣರ ಸರ್ವಂಕಷ ಪ್ರಭಾವಲಯಕ್ಕೆ ಬರುವುದು ಸಾಧ್ಯವಾಯಿತು. ಒಟ್ಟಿನಲ್ಲಿ ಈ ಕವಿ ಹೆಚ್ಚು ತತ್ತ್ವ–ಅನಿಕೇತನನಾಗಿರುವುದು ಸಾಧ್ಯವಾಯಿತು. ಇದಕ್ಕೆ ಆಧಾರವೇನು ಎಂಬುದನ್ನಿಲ್ಲಿ ಇನ್ನು ವಿವೇಕಿಸಬಹುದು.

ತನ್ನ ನಾಡಿನ ದರ್ಶನ ಜೀವನ ಪರಂಪರೆಯನ್ನು ಕಂಡುಂಡಿಲ್ಲದ ಹಾಗೂ ತನ್ನ ನುಡಿಯ ನಿರಂತರ ಪರಂಪರೆಯನ್ನರಿತಿಲ್ಲದ ಯಾರೂ ಹಿರಿಯ ಕವಿಯಾಗಲಾರ. ಕವಿಯಲ್ಲಿ ತನ್ನ ನಾಡಿನ ಈ ಎಲ್ಲ ಪರಂಪರೆಯೂ ಮೈಗೂಡಿಕೊಂಡಿವೆಯೆಂದಾದರೂ ಹೇಗೆ ಹೇಳುವುದು ? ನಾಡಿನ ಜನ ಜೀವನದ, ಸಮಗ್ರ ಜೀವನದರ್ಶನದ ಪ್ರತಿಮೆಗಳಾದ ಆ ಸಮಸ್ತ ಜನತಾಂತರ್ ದೃಷ್ಟಿ–

ಸೃಷ್ಟಿ ಆದ ಆ ನಾಡಿನ ಮಹಾಕಾವ್ಯ – ಪುರಾಣ ಕಥಾ ವಸ್ತುಗಳನ್ನು ಬಳಸಿಕೊಳ್ಳುವಾಗ ಮುಂದೆ ಬಂದ ಕವಿ ಯಾವ ಸಾರ್ಥಕ್ಯ ಪಡೆಯುತ್ತಾನೆ ಎಂಬುದಷ್ಟನ್ನೆ ನೋಡಿದರೂ ತಿಳಿಯುತ್ತದೆ, ಆ ಕವಿ ತನ್ನ ಪರಂಪರೆಯನ್ನರಿತಿರುವನೇ, ಹಾಗೂ ಎಷ್ಟರಮಟ್ಟಿಗೆ ಅದರಲ್ಲಿ ಬೆಳೆದಿದ್ದಾನೆ ಎಂಬುದೆಲ್ಲಾ. ಇಪ್ಪತ್ತನೆಯ ಶತಮಾನಕ್ಕೆ ಪೂರ್ವದ ಭಾರತೀಯ ಸಾಹಿತ್ಯದಲ್ಲಿ, ಅದರಲ್ಲೂ ಕನ್ನಡ ಸಾಹಿತ್ಯದಲ್ಲಿ ಪ್ರಾಚೀನ ರಾಮಾಯಣ ಮಹಾಭಾರತಗಳ ಭಾಗವತ ಪುರಾಣಾದಿಗಳ ಕಥಾವಸ್ತುವನ್ನಲ್ಲದೆ ಮತ್ತಾವ ಮಹತ್ತರ ವಸ್ತುವನ್ನಾಗಲಿ – ತೀರ್ಥಂಕರ ಶಿವಶರಣರ ಚರಿತ್ರೆಗಳನ್ನುಳಿದಂತೆ – ಆರಿಸಿಕೊಂಡು ಹುಟ್ಟಿಕೊಂಡ ಸತ್ವವತ್ತಾದ ಮಹಾಕಾವ್ಯ ಬೆರಳ ಮೇಲೆಣಿಸುವಷ್ಟು ಬಂದಿವೆಯೆಂದು ಹೇಳಬರುವುದಿಲ್ಲ. 'ತಿಣಿಕಿದನು ಫಣಿರಾಯ ರಾಮಾಯಣದ ಕಥೆಗಳ ಭಾರದಲಿ, ತಿಂತಿಣಿಯ ರಘುವರ ಚರಿತೆಯಲಿ ಕಾಲಿಡಲು ತೆರಪಿಲ್ಲ' ಎಂದು ಭಾರತ ಮಹಾಕವಿ ಕುಮಾರವ್ಯಾಸ ಹೇಳಿದ ಮಾತನ್ನು ಕನ್ನಡದಲ್ಲಿ ಬಂದ ಭಾರತದ ಬಗೆಗೂ ಉಳಿದ ಪುರಾಣಗಳ ಬಗೆಗೂ ಇತ್ತೀಚಿನ ಕಾಲದವರು ಹೇಳಬಹುದು. ಹಳೆಯ ಕಥಾವಸ್ತುವನ್ನು ಆಶ್ರಯಿಸಿ ಕಾವ್ಯ ರಚಿಸುವುದು ಬಲೇ ಸುಲಭ ಎಂದು ಭ್ರಮಿಸಬಹುದು. ಹೊಸ, ಸಮಕಾಲೀನವಾದ ಕಾಲ್ಪನಿಕ ವಸ್ತುವನ್ನು ಆಧರಿಸಿ ಕೃತಿ ರಚಿಸುವುದೇ ಕಷ್ಟಸಾಧನೆ ಶ್ರೇಷ್ಠ ಸಾಧನೆಯೆಂದೂ ಭ್ರಮಿಸಬಹುದು. ಆದರಿದು ಭ್ರಮೆಯಷ್ಟೆ. ಹೋಗಲಿ, ಅಷ್ಟೆಲ್ಲ ಕವಿಗಳು ಭಾರತೀಯ ಸಾಹಿತ್ಯದಲ್ಲಿ ಬಂದು ಹೋದರಲ್ಲ, ಮಹಾಭಾರತ ರಾಮಾಯಣಗಳನ್ನು ತೂಗುವಂಥ, ಹೋಗಲಿ ಅವುಗಳ ಸಾರಹೀರಿ ಆ ಪರಂಪರೆಯನ್ನು ಮುಂದುವರಿಸಿದಂಥ ಎಷ್ಟು ಅದೇ ವಸ್ತುವಿನ ಕಾವ್ಯಗಳು ಬಂದಿವೆ? ಮೂಲ ಮಹಾಕೃತಿಗಳನ್ನು ಓದದಿದ್ದರೂ ಪರವಿಲ್ಲ ಎನಿಸುವಂಥ ಸಾರವತ್ತಾದ ಕೃತಿಗಳೆಷ್ಟಿವೆ? ಆಗಲಾರದೂ ತಿಳಿಯದೆ, ಹಳೆಯ ಪ್ರಸಿದ್ಧ ವಸ್ತುವನ್ನಾರಿಸಿ ಬರೆಯುವುದಕ್ಕಿಂತ ಹೊಸವಸ್ತು ಆಶ್ರಯಿಸಿ ಬರೆಯುವುದೇ ಹೆಚ್ಚು ಯಶಸ್ಕರ ಎಂದು? ಗೊಮ್ಮಟೇಶ್ವರ ಪ್ರತಿಮೆಗಳೇನೊ ಸುಮಾರು ಸಂಖ್ಯೆಯಲ್ಲೇ ಇವೆ. ಆದರೆ ಆ ಯಾವು ಈ ಪ್ರಥಮ ಪ್ರತಿಮೆಯಾದ ಶ್ರವಣಬೆಳಗೊಳದ ಮಹೋನ್ನತಭವ್ಯ ಮಹಾಮೂರ್ತಿಯ ದಿವ್ಯಶಿಶು ಮಂದಹಾಸವನ್ನು ಪ್ರತಿಮಿಸಿವೆ? ಆ ಮೂರ್ತಿಯನ್ನೂ ಮರೆಸುವಂತೆ ಮಾಡಿವೆ? ಒಂದು ವೇಳೆ ಮೂಲದ ಆ ಉನ್ನತ ಶಿಲ್ಪಸತ್ತ್ವವನ್ನು ಮತ್ತೊಂದು ಪ್ರತಿಭೆ ಕಡೆಯಲಾಗದಿದ್ದರೂ, ಅದೇ ಮಟ್ಟದ ಪ್ರತಿಭೆಯೆ ಆ ಶಿಲೆಯನ್ನೆ ಬೇರೆ ಪ್ರತಿಮೆಯಾಗಿ ಕಡೆದಿದ್ದರೂ, 'ಒಂದು ಬಗೆಯ ವಿಶಿಷ್ಟತೆ'



ಒದಗುತ್ತಿದ್ದುದರಿಂದಲಾದರೂ ಆ ಶಿಲ್ಪ ಮತ್ತೂ ಸ್ಮರಣೀಯವಾಗುತ್ತಿದ್ದಿತೇನೊ. ಹಳೆಯ ಎಷ್ಟೋ ಕವಿಗಳು ಹಳೆಯ ಮಹಾ ಕಾವ್ಯಗಳನ್ನೆ ಅಸಮರ್ಥವಾಗಿ ಹೇಳ ಹೊರಡುವ ಬದಲು ಹೊಸವಸ್ತುವನ್ನಾದರೂ ಆರಿಸಿ ತಕ್ಕಮಟ್ಟಿನ ವಿಶಿಷ್ಟ ಯಶಸ್ಸನ್ನು ಗಳಿಸಿಬಹುದಾಗಿತ್ತು ಅನಿಸುತ್ತದೆ. ಆದ್ದರಿಂದಲೆ, ಪ್ರಾಚೀನ ಮಹಾಕಾವ್ಯಗಳನ್ನು ಮಹಾಸಮರ್ಥನಲ್ಲದ ಆ ಮಹಾಕವಿಗಳ ಮಾನಸಪುತ್ರನಾಗಿ, ಪ್ರಜ್ಞಾಪುತ್ರನಾಗಿ, ಪರಂಪರೆಯ ಸಂವಾಹಕನಾಗಿ ಹುಟ್ಟಿಕೊಳ್ಳದ ಯಾವ ಮಹಾಕವಿಯೂ ಯಶಸ್ವಿಯಾಗಿ ತನ್ನ ಕಾಲದೇಶಗಳ ಆವರಣದಲ್ಲಿ ಪುನರ್ ಸೃಜಿಸಲಾರ. ಹೀಗೆ ನೋಡಿದರೆ, ಹಳಗನ್ನಡದ ಪಂಪ ಕುಮಾರವ್ಯಾಸರು ಮಹರ್ಷಿ ವ್ಯಾಸರ ಮಾನಸ ಪುತ್ರರಾಗಿ ಮಹಾಭಾರತದ ಪರಂಪರೆಯನ್ನು ಅನನ್ಯವಾದ ಶ್ರೇಷ್ಠ ರೀತಿಯಲ್ಲೆ ಮುಂದುವರಿಸಿದರು. ಆದರೆ ಆಮಟ್ಟದ ಸಿದ್ಧಿ ಹಳಗನ್ನಡ ರಾಮಾಯಣವಾವುದರಲ್ಲೂ ಬರಲಿಲ್ಲ ; ವಾಲ್ಮೀಕಿಗಳ ಪರಂಪರೆಯನ್ನು ಸಂವರ್ಧಿಸುವ ಆ ಅಲಭ್ಯ ಭಾಗ್ಯ ಶ್ರೀ ಕುವೆಂಪು ಅವರದಾಯಿತು.

ಹೊಸಗನ್ನಡ ಸಾಹಿತ್ಯದಲ್ಲಿ ಭಾರತೀಯ ಮೂಲ ಕಾವ್ಯಗಳಾದ ರಾಮಾಯಣ ಮಹಾಭಾರತಗಳ ಪರಂಪರೆಯನ್ನು ತುಂಬು ರೀತಿಯಲ್ಲಿ ಮುಂದುವರಿಸಿದ ಮಹಾಕವಿಯೆಂದರೆ ಶ್ರೀ ಕವಿ ಕುವೆಂಪು ಅವರು. ಸ್ವಲ್ಪ ಭಿನ್ನ ರೀತಿಯಲ್ಲಿ ಆ ಪ್ರಾಕ್ ಪರಂಪರೆಯನ್ನು ಬಹಳ ಯಶಸ್ವಿಯಾಗಿ ರೂಢಿಸಿದಂಥ ಮತ್ತೊಬ್ಬ ಧನ್ಯ ಕವಿಯೆಂದರೆ ಶ್ರೀ ಪುತಿನ ಅವರು. ರೂಪಸ್ವರೂಪಗಳಲ್ಲೂ ಹಾಗೂ ಈ ಇಬ್ಬರ ಪರಂಪರೆಯ ಸಂವರ್ಧನೆಯಲ್ಲೂ ತಕ್ಕಮಟ್ಟಿನ ಅಂತರವುಂಟು. ಅದರ ವಿವೇಚನೆ ಇಲ್ಲಿ ಅಪ್ರಕೃತ. ಇಪ್ಪತ್ತನೆಯ ಶತಮಾನದ ಕಾಲ ದೇಶಾವರಣಕ್ಕೆ ಆ ಭಿನ್ನ ಯುಗದ – ಜಗದ ವಾಣಿಯನ್ನು ಮರುಭವಿಸಿದ, ಪುನಸ್ಸೃಜಿಸಿದ ಕೀರ್ತಿ ಶ್ರೀ ಕುವೆಂಪು ಅವರದು. ಇವರಲ್ಲಿ ಆ ಹಳೆಯ ಕಾವ್ಯಗಳು ಬೆಳೆದು ಈ ಯುಗದ ಜೀವಿಗಳಾಗಿ ಮರುಹುಟ್ಟು ಪಡೆದಿವೆ. ಆ ಕವಿಗಳೇ ಆ ಕೃತಿಗಳನ್ನು ಈಗ ಬರೆಯುತ್ತಿದ್ದರೆ ಹೇಗಿರುತ್ತಿದ್ದಿತೊ ಹೆಚ್ಚು ಕಡಿಮೆ ಹಾಗೆಯೇ ಇವರ ಶ್ರೀ ರಾಮಾಯಣದರ್ಶನಂ, ಬೆರಳ್ಗೆಕೊರಳ್, ಶ್ಮಶಾನ ಕುರುಕ್ಷೇತ್ರ ; (ಬಹು ಪಾಲು) ಚಿತ್ರಾಂಗದಾ, ಶೂದ್ರ ತಪಸ್ವಿ ಇವರಿಂದ ಹುಟ್ಟಿಕೊಂಡಿವೆ. ಇವರ ಮೂಲಕ ಆ ಮೂಲ ಮಹಾ ಪ್ರತಿಭೆ ಮತ್ತೆ ಜನ್ಮಗೊಂಡಿದೆ. ಈ ಯುಗದ – ಕಾಲದೇಶದ – ಛಂದಕ್ಕೆ ತಕ್ಕದಾಗಿ ಮೈಗೊಂಡಿದ್ದರೂ, ತನ್ನ ಆತ್ಮಸ್ವರೂಪವನ್ನು ಇಂದಿನ ರೂಪಕ್ಕೆ ಒಪ್ಪಂದಾಗಿ ಪರಿಣಮಿಸಿಕೊಂಡಿದೆ. ಆ ಪ್ರಾಕ್ ಕಥಾ ಶರೀರವೇ ಈ ಆಧುನಿಕ ಯುಗದ ಚೈತನ್ಯವನ್ನು ಧಾರಣಮಾಡಿಕೊಂಡಿದೆ. ಸೂಕ್ತ

ಪರಿಣಾಮಕ್ಕೊಳಪಟ್ಟು. ಹೀಗಿರುವಾಗ ಮೂಲಕಥೆ ಬದಲಾವಣೆಗೊಂಡಿಲ್ಲ, ಪರಿಣಾಮಗೊಂಡಿದೆ ; ಸಹಜವಾಗಿ ಅನಿವಾರ್ಯವಾಗಿ ಬೆಳೆದಿದೆ. ಆ ಯುಗದಲ್ಲಿ ಆ ಮೂಲಕಥೆ ನೀಡಿದ್ದಿರದ, ತೋರಿದ್ದಿರದ, ಕಂಡಿದ್ದಿರದ ಎಷ್ಟೋ ಅಂತರ್ಗತ ಜೀವಸ್ವರೂಪವನ್ನೂ ದರ್ಶನವನ್ನೂ ಇಲ್ಲಿ ಇವರಲ್ಲಿ ಸಾಧಿಸಿದೆ. ಈ ಕವಿ, ಈ ಕವಿಯ ಕಾವ್ಯಗಳು ಬರಿಯ ನಿಮಿತ್ತವಷ್ಟೆ; ಆ ಪ್ರಾಚೀನ ಮಹರ್ಷಿ ಕವಿಗಳೇ ಅವರ ಕಾವ್ಯಗಳೇ ಈ ಯುಗಕ್ಕೆ ಅಗತ್ಯವಾದುದನ್ನು ನುಡಿಯುತ್ತಿದ್ದಾರೆ; ತಮ್ಮ ಸನಾತನ ವಿನೂತನವನ್ನು ಮುಂದುವರಿಸಿದ್ದಾರೆ ಎಂದೆ ಅನುಭವವಾಗುತ್ತದೆ, ಕುವೆಂಪು ಅವರ ಮೇಲೆ ಹೇಳಿದ ಕೃತಿಗಳನ್ನು ಮನಸ್ಸಿನಲ್ಲಿ ಚೆನ್ನಾಗಿ ಮನನ ಮಾಡಿದಾಗ.

ಹಳೆಯ ಕಾವ್ಯವನ್ನು ತನ್ನ ಕಾಲಕ್ಕೆ ಪುನರ್ಭವಿಸುವಾಗ ಇಂದಿನ ಕವಿ ಏನೇನೂ ಸ್ವತಂತ್ರನಲ್ಲ, ಸ್ವಕಪೋಲ ಕಲ್ಪಿತವಾದ ವಸ್ತುವನ್ನಾರಿಸಿಕೊಂಡಿದ್ದರೆ ಇದ್ದಿರುತ್ತಿದ್ದ ಸ್ವಾತಂತ್ರ್ಯದ ಹತ್ತರಲ್ಲೊಂದು ಪಾಲೂ ಸ್ವಾತಂತ್ರ್ಯ ಈ ಕವಿಗೆ ಇರದು. ವರ್ತಮಾನಕ್ಕೂ ಪ್ರಾಚೀನಕ್ಕೂ ಸಮರ್ಥವಾದ ಪ್ರಾಣಾಳಿಕೆ, ಪಾತ್ರ ಆಗಬೇಕಾಗುತ್ತದೆ ಈ ಕವಿ. ಯಾವುದು ಮೂಲ ಕಾವ್ಯದ ಜೀವಕೇಂದ್ರ ಬಿಂದುವಾಗಿದೆ; ಆ ಮೂಲ ಕವಿಯ ದರ್ಶನವಾಗಿದೆ ಎಂಬುದನ್ನರಿತುಕೊಳ್ಳುವುದೇ ಈಗಿನ ಕವಿಯ ಮೊದಲ ಮಹಾ ಸಾಧನೆಯಾಗುತ್ತದೆ. ಆ ಜೀವ ಬಿಂದು – ದರ್ಶನ ತನ್ನಲ್ಲಿ, ತನ್ನ ಕಾಲದೇಶಸ್ಥಿತಿಯಲ್ಲಿ ಹೇಗೆ ಮರುಹುಟ್ಟುಬೇಕು ಎಂದುದಕ್ಕೆ ಅವನು ಸಾರ್ಥಕವಾದ ಉತ್ತರ ಒದಗಿಸುವುದೇ ಎರಡನೆಯ ಮಹಾಸಾಧನೆಯಾಗುತ್ತದೆ. ತನ್ನ ಕಾಲದೇಶವನ್ನು ಅದರಲ್ಲಿ ಕಾಣುವ, ಆ ಕಾಲದೇಶದಲ್ಲಿ ತನ್ನ ಕಾಲದೇಶವನ್ನು ಕಾಣುವ – ಕಾಣಿಸುವ ; ಈ ಕಾವ್ಯಕ್ಕೆ ಒದಗಬಹುದಾದ ಎಲ್ಲ ಅಡೆತಡೆಗಳನ್ನೂ – ಅದು ತನ್ನ ವ್ಯಕ್ತಿಮಿತಿಯಾಗಿರಲಿ, ಆವರಣಮಿತಿಯಾಗಿರಲಿ – ನಿವಾರಿಸಿ ಗೆಲ್ಲುವ ಶಕ್ತಿಯೆ ಮೂರನೆಯ ಮಹತ್ತರ ಸಾಧನೆಯಾಗುತ್ತದೆ. ಈ ಮೂರು ದೃಷ್ಟಿಯಿಂದ ಶ್ರೀ ಕುವೆಂಪು ಅವರು ಶ್ರೀಮಂತ ಯಶೋವಂತರಾಗಿದ್ದಾರೆ ತಮ್ಮ ಕೃತಿಯಲ್ಲಿ. ಇದನ್ನು ಮುಂದೆ ಕಾಣಬಹುದು.

ಶ್ರೀ ಕುವೆಂಪು ಅವರು ಮಹಾಭಾರತಕ್ಕೆ ಸಂಬಂಧಪಟ್ಟಂತೆ ನಾಲ್ಕು ಕೃತಿಗಳನ್ನೂ – ಶ್ಮಶಾನ ಕುರುಕ್ಷೇತ್ರ, ಬೆರಳ್ಗೆ ಕೊರಳ್, ಚಂದ್ರಹಾಸ, ಯಮನ ಸೋಲು ನಾಟಕಗಳನ್ನು, ಚಿತ್ರಾಂಗದ ಎಂಬ ಖಂಡ ಕಾವ್ಯವನ್ನೂ – ರಾಮಯಣಕ್ಕೆ ಸಂಬಂಧಿಸಿದಂತೆ ವಾಲ್ಮೀಕಿಯ ಭಾಗ್ಯ, ಶೂದ್ರತಪಸ್ವಿ ನಾಟಕಗಳನ್ನೂ, ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯವನ್ನು ರಚಿಸಿದ್ದಾರೆ. ಪ್ರಧಾನ ಕೃತಿಗಳನ್ನಷ್ಟೆ



ನಾವಿಲ್ಲಿ ಗಮನಿಸಿದರೆ ಸಾಕು ನಮ್ಮ ಲೇಖನದ ಉದ್ದೇಶಕ್ಕೆ. ಮೊದಲಿಗೆ ಚಿತ್ರಾಂಗದ ಕಾವ್ಯವನ್ನು ವಿವೇಚಿಸಬಹುದು.

ಚಿತ್ರಾಂಗದೆಯ ಕಥೆ ಮಹಾಭಾರತದಲ್ಲಿ, ಅದರಲ್ಲೂ ಜೈಮಿನಿ ಭಾರತದಲ್ಲಿ ಬರುವಂಥ, ಅಷ್ಟೇನೂ ಅತಿಪ್ರಧಾನವಲ್ಲದ ಕಥೆ. ಮಹಾಭಾರತದಲ್ಲಿ ಸೂಚಿತವಾದ ಕಥೆ ಜೈಮಿನಿಯ ಹೊತ್ತಿಗೆ ಆಖ್ಯಾನವಾಗಿ ಬೆಳೆಯುತ್ತದೆ. ಕನ್ನಡ ಜೈಮಿನಿಭಾರತದಲ್ಲಿ ಯಕ್ಷಗಾನಗಳಲ್ಲಿ ಆಕೆಯ ಕಥೆ ವಿಶೇಷವಾಗಿ ಚಿತ್ರಿತವಾಗಿದೆ. ಇಲ್ಲೆಲ್ಲ ನಮಗೆ ಒದಗಿರುವುದು ಬಭ್ರುವಾಹನನ ತಾಯಿಯ ಕಥೆಯಷ್ಟೆ. ಹೆಣ್ಣು ಚಿತ್ರಾಂಗಿಯ ಪ್ರಣಯಾದಿ ಕಥೆಯೇನೂ ಅಲ್ಲ. ಅಲ್ಲಿ ಮಗನ, ಗಂಡನ ಹಿನ್ನೆಲೆಯಲ್ಲಿ ನಿಂತ ಚಿತ್ರಾಂಗದೆಯಷ್ಟೆ ನಮಗೆ ಕಾಣುವುದು. ಈಕೆಯ ಪೂರ್ವ ವೃತ್ತಾಂತವನ್ನು ಮೊದಲ ಬಾರಿಗೆ ಕಲ್ಪಿಸಿದ ಯಶಸ್ಸು ಶ್ರೀ ರವೀಂದ್ರನಾಥ ಠಾಕೂರರಿಗೆ ಸೇರುತ್ತದೆ. ಆಕೆಯ ತಾರುಣ್ಯ ಪ್ರಣಯದ ಮೋಹಕ – ರೋಚಕ ಕಥೆಯನ್ನು ಮನೋಜ್ಞವಾಗಿ ರೂಪಿಸಿ ತಮ್ಮ ಒಂದು ವಿಶಿಷ್ಟ ಕಾಣ್ಕೆಯನ್ನೂ ಅಲ್ಲಿ ಮಿಡಿಯುವ ಕೆಲಸಮಾಡಿದ್ದಾರೆ ಅವರು, ತಮ್ಮ 'ಚಿತ್ರಾಂಗದ' ನಾಟಕದಲ್ಲಿ. ಶ್ರೀ ಕುವೆಂಪು ಅವರ ಚಿತ್ರಾಂಗದ ಈ ಎರಡೂ ಕಥನದ ಸಂಗಮ. ಮೊದಲ ಭಾಗದ ಕಥೆಯ ಆ ಕಲ್ಪನೆಗೆ ಈ ಕವಿಯಾದರೂ ಠಾಕೂರರಿಗೆ ಋಣಿ. ಅಂತೆಯೇ ಉತ್ತರ ಭಾಗದ ಕಥೆಗೆ ಭಾರತ ಹಾಗು ಜೈಮಿನಿಭಾರತಕ್ಕೆ ಋಣಿ. ಆದರೆ ಈ ಎರಡರ ವಿಚಿತ್ರ ಸುಂದರ ಸಂಯೋಗಕ್ಕೆ ಮಹಾಭಾರತ ಪರಂಪರೆಯನ್ನು ಕಂಡಕೊಂಡ ಕವಿ ಪ್ರತಿಭೆಯೆ ಕಾರಣ. ಶ್ರೀ ರವೀಂದ್ರನಾಥ ಠಾಕೂರರ ಚಿತ್ರಾಂಗದವೇನೊ ಮೋಹಕವೂ ಅರ್ಥವತ್ತಾದುದೂ ಆಗಿದೆ, ಸರಿ. "ವಿಷಯದ ದೃಷ್ಟಿಯಿಂದಲೂ ಅದನ್ನು ಪ್ರತಿಪಾದಿಸಿರುವ ಕೌಶಲದ ದೃಷ್ಟಿಯಿಂದಲೂ ಇದು ಠಾಕೂರರ ನಾಟಕಗಳಲ್ಲೆಲ್ಲ ಅತ್ಯುತ್ತಮವಾದುದು" – ಇದ್ದಿರಬಹುದು. ಆದರೆ, "ಪ್ರಪಂಚದ ನಾಟಕಗಳಲ್ಲಿ ಅತ್ಯುತ್ತಮವಾದವುಗಳಲ್ಲಿ ಇದು ಒಂದಾಗಿರಬೇಕೆಂದೂ ಧಾರಾಳವಾಗಿ ಹೇಳಬಹುದು." ಎನ್ನುವ ಧಾರಾಳ ಬುದ್ಧಿಯನ್ನು ತೋರುವುದು ಕಷ್ಟವಾಗುತ್ತದೆ – ಮೂಲ ಮಹಾಭಾರತ ಕಲ್ಪನೆಗೂ ಠಾಕೂರರ ಈ ಕಲ್ಪನೆಗೂ ಇರುವ ಸಂಬಂಧ ವೈಪರೀತ್ಯಗಳನ್ನೆಲ್ಲ ವಿವೇಚಿಸಿದಾಗ, ಠಾಕೂರರ ಸೃಷ್ಟಿ ತಮ್ಮ ಚಿತ್ರಾಂಗದ ಕಾವ್ಯದ ಮೇಲೆ ಪ್ರಭಾವ ಬೀರುವಷ್ಟು ಅದನ್ನು ತಾವು ಮೆಚ್ಚಿಕೊಂಡಿದ್ದರೂ ಆ ನಾಟಕದ ಪೂರ್ಣಶಿಲ್ಪ – ಮುಕ್ತಾಯಗಳೆಲ್ಲ ತಮಗೆ ಏಕೆ ಹಿಡಿಸಲಿಲ್ಲ ಎನ್ನುವುದಕ್ಕೆ ಶ್ರೀ ಕುವೆಂಪು ಅವರೆ ಚಿತ್ರಾಂಗದ ಕಾವ್ಯದ ಪೀಠಿಕೆಯಲ್ಲಿ ಹೀಗೆಂದಿದ್ದಾರೆ: "ತಾರುಣ್ಯದ ಸಂಯಮರಹಿತ ವ್ರತಭ್ರಷ್ಟತೆಗೆ ಪ್ರಾಯಶ್ಚಿತ್ತ

ವಿಹೀನವಾದ ಭೋಗಕಿರೀಟವನ್ನಿಟ್ಟು ಪ್ರೇಮ ಮಂಗಳಾರತಿಯನ್ನೆತ್ತುವುದಕ್ಕೂ ಸಾಧ್ಯವಾಗಿಲ್ಲ.'' ಆದ್ದರಿಂದಲೆ ಅವರ ಚಿತ್ರಾಂಗದಾ ಕಾವ್ಯ ಠಾಕೂರರ ನಾಟಕದಲ್ಲಿ ಬೇರನ್ನಷ್ಟೆ ಬಿಟ್ಟು ಭಾರತ – ಜೈಮಿನಿಭಾರತ ಕಥಾವಕಾಶದಲ್ಲಿ ಬೆಳೆದು ಕೊಂಬೆರೆಂಬೆ ಬೀಸಿ ತನ್ನದೇ ಆದ ಹೂಹಣ್ಣುಗಳನ್ನು ಬಿಟ್ಟಿದೆ. ಈಗಿಲ್ಲಿ ಠಾಕೂರ್ ಕುವೆಂಪು ಅವರ ಈ ಕಾವ್ಯದರ್ಶನವನ್ನು ವಿವರಿಸಿ ಭಾರತಪರಂಪರೆಯ ದೃಷ್ಟಿಯಿಂದ ಯಾವುದು ಹೆಚ್ಚು ಸಂಯಕ್ ಆದುದೆಂಬುದನ್ನು ವಿವೇಚಿಸಬಹುದು.

ತೀರ್ಥಯಾತ್ರೆಯಲ್ಲಿದ್ದ ಅರ್ಜುನನನ್ನು ಮೊದಲಬಾರಿಗೆ ಕಂಡ ಚಿತ್ರಾಂಗದೆಯ ಮನಸ್ಸು ಅದುವರೆಗೂ ರಾಜಕುಮಾರನಂತೆ ಬೆಳೆದಿದ್ದ ತನ್ನಲ್ಲಿ ಕಾಣಲಾಗದಿದ್ದ ಪ್ರೇಮ ಭಾವವ ಅನುಭವಿಸುತ್ತದೆ. ವಧುವಿನಂತೆ ಅಪೂರ್ವವಾಗಿ ಅಲಂಕಾರಗೊಂಡ ಆಕೆ ಅರ್ಜುನನ ಬಳಿಗೆ ಹೋಗಿ ಪ್ರಣಯಾರ್ಥಿಯಾದಾಗ ಆಕೆಗೆ ದೊರೆತದ್ದು ಉದಾಸೀನ ಉಪೇಕ್ಷೆ. ಕಾಮನಬಿಲ್ಲಿನ ಬರೆಗೊಂಡ ಅವಳ ಹತಾಶ ಮನಸ್ಸು ತಪಿಸುತ್ತದೆ ; ತತ್ಫಲವಾಗಿ ಮದನ ವಸಂತರಿಂದ ಅವಳಿಗೆ ವರ್ಷಾವಧಿಯ ಸೌಂದರ್ಯಾತಿಶಯ ಲಭಿಸುತ್ತದೆ. ಮತ್ತೆ ಸುಂದರಿ ಚಿತ್ರೆ ಅರ್ಜುನನ್ನು ಕಂಡಾಗ ಅವನ ಮೊದಲ ಬಿಂಕ ಕರಗಿ ಅವನೆ ಇವಳ ಪ್ರಣಯ ಭಿಕ್ಷುವಾಗುತ್ತಾನೆ. ಗಾಂಧರ್ವ ವಿವಾಹ ಮಾಡಿಕೊಂಡು ಸುಖಮತ್ತರಾಗಿದ್ದಾಗಲೂ ಚಿತ್ರಾಂಗದೆಗೆ ಮಾತ್ರ ತಾನಲ್ಲದ ತನ್ನದಲ್ಲದ ಚೆಲುವನ್ನಷ್ಟೇ ಅರ್ಜುನ ಮೋಹಿಸಿದ್ದಾನೆ, ತಾನಗಣ್ಯವಾದೆ, ಎಂಬ ಒಳಕೊರೆ ಮೊರೆಯುತ್ತಲೆ ಇರುತ್ತದೆ. ಆದರಾವೇಳೆಗೆ ಮಣಿಪುರದ ರಾಜಕುಮಾರಿ ಚಿತ್ರಾಂಗದೆಯ ಬಗ್ಗೆ ಯೋಚನೆ ಹರಿಸಿರುತ್ತಾನೆ ಅರ್ಜುನ. ಅವನಿಗಿನ್ನೂ ತಿಳಿದಿಲ್ಲ ಈ ಹಿಂದೆ ತನ್ನಿಂದ ತಿರಸ್ಕೃತಳಾದವಳು ಎಂದು. ಗರ್ಭಿಣಿ ಚಿತ್ರಾಂಗದೆಯ ನಿಜ ಸ್ವರೂಪವರಿತ ಅರ್ಜುನ ಹೇಳುತ್ತಾನೆ, ಅಪೂರ್ವ ಸಂತೃಪ್ತಿಯಿಂದ : "ಇದೀಗ ನನ್ನ ಪ್ರಾಣಪಾತ್ರೆ ಪೂರ್ಣವಾಯಿತು" ಎಂದು. ಠಾಕೂರರ ನಾಟಕ ಅಲ್ಲಿಗೆ ಮುಗಿಯುತ್ತದೆ.

ಈ ಕಥನಸಂವಿಧಾನವನ್ನು ತಮ್ಮ ಕಾವ್ಯಕ್ಕೆ ಒಪ್ಪುವಂತೆ ಅಷ್ಟು ಮಾತ್ರ ಸ್ವೀಕರಿಸಿರುವ ಕವಿ ಕುವೆಂಪು ಅವರು ರಮ್ಯಾತಿಶಯ – ಉಜ್ಜ್ವಲರಾಗ ಸಂಪನ್ನ ಚಿತ್ರಣಗಳನ್ನು ಪ್ರಾರಂಭದ ಕಥಾ ಭಾಗದಲ್ಲೆ ತೋರಿಸಿದ್ದಾರೆ. ಆದರೆ ಅವರ ಚಿತ್ರಾಗಂದೆಯಾಗಲಿ ಅರ್ಜುನನಾಗಲಿ ಠಾಕೂರರ ನಾಟಕದ ಕಡೆಯ ಸಂವಾದ ನಡೆಸುವುದೆ ಇಲ್ಲ. ಇಲ್ಲಿನ ಅರ್ಜುನನಿಗೆ ಕಡೆಗೂ ಆ ಮೋಹಿನಿಯ ಹೆಸರೆ ತಿಳಿಯಲಿಲ್ಲ. ಚಿತ್ರಾಂಗದೆಗೆ ತಾನು ಇನ್ನು ಆರು ತಿಂಗಳಾದ ಮೇಲೆ ಹಿಂತಿರುಗಿ ಬರುವ ಭರವಸೆ ಕೊಟ್ಟು ಅವಳ ಬೆರಳಿಗೆ ಉಂಗುರವಿಟ್ಟ ಅರ್ಜುನ, ಮಲಗಿರುವಾಗ



ಅವಳನ್ನಗಲಿ ತೀರ್ಥಯಾತ್ರೆ ಮುಂದುವರಿಸುವ ಸಲುವಾಗಿ ದೂರ ಹೋಗುತ್ತಾನೆ. ಮಾತಿನಂತೆ ಅರ್ಜುನ ಆರು ತಿಂಗಳಲ್ಲಿ ಬರಲಿಲ್ಲ ; ಜೀವತ್ಯಾಗಕ್ಕೆ ಸಿದ್ಧಳಾಗಿ ಕಡಲ ಬಳಿ ನಿಂತಿದ್ದವಳನ್ನು ದಿವ್ಯ ಧ್ವನಿಯೊಂದು ತಡೆಯುತ್ತದೆ. ಅಂದಿನಿಂದವಳು ತಪಸ್ವಿನಿ ಆಗುತ್ತಾಳೆ. ತಂದೆ ತೀರಿಕೊಂಡ ಮೇಲೆ ತಾನೇ ರಾಜ್ಯಭಾರ ನಡೆಸಿ ಕಡೆಗೆ ಮಗನಿಗೆ ವಹಿಸಿ ತಾನು ತಪಶ್ಚಾರಿಣಿಯಾಗುಳಿಯುತ್ತಾಳೆ. ಮಹಾಭಾರತ ಯುದ್ಧದಲ್ಲಿ ಅರ್ಜುನನ ಬಲಕ್ಕೆ ನೆರವಾಗುವಂತೆ ತನ್ನ ತಪಶ್ಶಕ್ತಿಯನ್ನೂ ಇವಳು ಕಳಿಸುತ್ತಿರುತ್ತಾಳೆ. ಹೀಗಿರುವಾಗ ಅಶ್ವಮೇಧಯುದ್ಧ ಉಂಟಾಯಿತು. ಕುರುಕ್ಷೇತ್ರಯುದ್ಧಕ್ಕೆ ತನ್ನನ್ನು ಆಹ್ವಾನಿಸದೆ ನಿರ್ಲಕ್ಷಿಸಿದ ಅರ್ಜುನನಿಗೆ ತಾನೆಂದಾದರೂ ತನ್ನ ಕೈ ತೋರಿಸಬೇಕೆಂದಿದ್ದ ಬಭ್ರುವಾಹನನಿಗೆ ಈ ಸನ್ನಿವೇಶ ಬಹಳ ಪ್ರಿಯವಾಗಿ ಒದಗಿಬಂತು. ಯಜ್ಞಾಶ್ವವನ್ನು ಕಟ್ಟಿದ. ಆದರೆ ತಾಯಿಯ ಆಶಯದಂತೆ ಯುದ್ಧ ಮಾಡದೆ, ಆಕೆಯ ಬಾಲ್ಯದ ಧನುರ್‌ವಿದ್ಯಾ ಗುರುವಾದ ಅರ್ಜುನನ್ನು (ಹಾಗೆಂದಷ್ಟೆ ಚಿತ್ರಾಂಗದೆ ತಿಳಿಸಿದ್ದರಿಂದ) ಗೌರವದಿಂದ ನಗರಕ್ಕಾಹ್ವಾನಿಸಲು ಹೋದ ಬಭ್ರುವಾಹನನಿಗೆ ದೊರೆತದ್ದು ಅಸಹ್ಯ ತಿರಸ್ಕಾರ. ಗೌರವ ತೋರಲು ಹೋದವನು ರೌರವಯುದ್ಧದ ಪೈಜೆ ಹೊತ್ತು ಬರುತ್ತಾನೆ. ಸಿಡಿದೆದ್ದ ಯುದ್ಧ ಮಾರಕ ಘಟ್ಟ ಮುಟ್ಟಿದುದನ್ನು ತಿಳಿದ ಧವಳಾಂಬರೆ ಚಿತ್ರಾಂಗದೆ ಹೌಹಾರಿ ಧಾವಿಸುತ್ತಾಳೆ. ಬೆಳ್ಗುದುರೆ ಬೆಳ್ಗೊಡೆಹಿಡಿದು ಪ್ರಿಯ–ಪುತ್ರರಿಬ್ಬರ ಯುದ್ಧರಂಗ ಮಧ್ಯೆ ನುಗ್ಗಿದಾಗ ಆ ಇಬ್ಬರೂ ಬಿಟ್ಟಿದ್ದ ಕೂರಲಗೆರಗಿ ಕಣದಲ್ಲಿ ಕೆಡೆದು ಬೀಳುತ್ತಾಳೆ.

ಬಿದ್ದ ಆಗಂತುಕ ಶಾಂತಿದೂತೆಯ ಬಳಿಗೆ ಧಾವಿಸಿಬಂದ ಅರ್ಜುನ ಬಭ್ರುವಾಹನರಿಬ್ಬರಿಗೂ ನಿಜವೃತ್ತಾಂತ ತಿಳಿಸಿ ಕಣ್ಮುಚ್ಚುತ್ತಾಳೆ ಚಿತ್ರಾಂಗದೆ. ಮಣಿಪುರದಲ್ಲಿ ಅವಳ ಶುಭ್ರ ಸ್ಮೃತಿಯ ಪ್ರತಿಮೆಯಾದೊಂದು ಅಮೃತ ಸ್ಮಾರಕ ನಿರ್ಮಾಣವಾಗುತ್ತದೆ. ಚಿತ್ರಾಂಗದಾ ಕಾವ್ಯ ಹೀಗೆ ಮುಗಿಯುತ್ತದೆ.

ಮೇಲೆ ನಿರೂಪಿಸಿದ ಎರಡೂ ಕಥೆಗಳಿಂದ ತಿಳಿಯುತ್ತದೆ ಅವುಗಳಿಗಿರುವ ದೃಷ್ಟಿ ವ್ಯತ್ಯಾಸವೂ ಕೂಡ. ಠಾಕೂರರ ಚಿತ್ರಾ ವಿನೂತನ ಸೃಷ್ಟಿಯೇನೊ ಸರಿ. ಆದರೆ ಕುವೆಂಪು ಸೃಷ್ಟಿಸಿದ ಚಿತ್ರಾಂಗದಾ ಠಾಕೂರ್–ಲಕ್ಷ್ಮೀಶರ–ವ್ಯಾಸರ ಸಂಲಗ್ನದಿಂದ, ಹಾಗೂ ತಮ್ಮ ವಿಶಿಷ್ಟ ಕಾಣ್ಕೆಯಿಂದ ಮೂಡಿ ಬಂದ ಪಾತ್ರ. ಠಾಕೂರರ ಚಿತ್ರೆಗೆ ವ್ಯಾಸ ಮಹಾಭಾರತದಲ್ಲಿರವ ಸ್ಥಾನವಾದರು ನಾಮ ನಿಮಿತ್ತ ಮಾತ್ರವಾದದ್ದು. ಆಕೆ ಅರ್ಜುನ ಸತಿಯೆಂಬುದಷ್ಟೆ. ಅಷ್ಟೆ ಅಲ್ಲ, ಅಲ್ಲಿನ ಅರ್ಜುನನಾದರೂ ತನ್ನ ಮೂಲಕಥೆಗೆ ಬಹಳಷ್ಟು ಸಂಬಂಧಗೊಂಡಿಲ್ಲ. ಅಂದರೆ,

ಈ ಇಬ್ಬರ ತಾರಣ್ಯಪ್ರಣಯ, ಅದು ಫಲದಲ್ಲಿ ಹಠಾತ್ ಪರಿಣಾಮಗೊಂಡುದು – ಈ ಯಾವದೂ ಮಹಾಭಾರತದ ಕಥೆಯ ಅತ್ಯನಿವಾರ್ಯ ಅಂಗವೇನೂ ಅಲ್ಲವಾಗಿವೆ. ಕಾರಣ, ತೀರ್ಥಯಾತ್ರೆಯಲ್ಲಿದ್ದ ಅರ್ಜುನ ನಾಲ್ಕಾರು ಸುಂದರಿಯರನ್ನು ಕೈಡಿಹಿದ. ಚಿತ್ರಾಂಗದೆಯೆ ಕಡೆಯವಳಲ್ಲ. ಪ್ರಾಯಶಃ ಅವಳನ್ನು ಬಿಟ್ಟಮೇಲೂ ಕೆಲವರನ್ನು – ಉಲೂಪಿ ಮುಂತಾದವರನ್ನು ಮೋಹಿಸಿ ಕಡೆಗೆ ಸುಭದ್ರೆಯನ್ನು ಕೈ ಹಿಡಿದುಕೊಂಡು ತನ್ನರಮನೆಗೆ ಹಿಂತಿರುಗುತ್ತಾನೆ. "ಇದೀಗ ತನ್ನ ಪ್ರಾಣಪಾತ್ರೆ ಪೂರ್ಣವಾಯಿತು" ಎಂದು ಸಂತುಷ್ಟಿಯ ಉದ್ಗಾರ ಎಳೆಯುವ ಅರ್ಜುನನ ಮುಂದಿನ ಪ್ರಣಯಕ್ಕೆ ಈ ನಾಟಕದ ಫಲಪರಿಣಮನದ ಮುಕ್ತಾಯ ಹೇಗೆ ತಾನೆ ಒಪ್ಪುತ್ತದೆ? ಕಡೆಗೆ ಅಶ್ವಮೇಧ ಪರ್ವದಲ್ಲಿ ಒದಗಲಿರುವ ಬಭ್ರುವಾಹನ – ಅರ್ಜುನ ಸಂಗ್ರಾಮವಾದರೂ ಹೇಗೆ ಈ ಮೂಲಕಥೆಗೆ ಒಪ್ಪೀತು? ಹೇಳಬಹುದು, ಈ ಕಥೆಯೆ ಬೇರೆ ; ಅದನ್ನು ಒಪ್ಪಲೇಬೇಕೂ ಇಲ್ಲ, ಎಂದು. ಒಪ್ಪಲೇಬೇಕಿಲ್ಲವೆಂಬುದೇನೊ ಸರಿ, ಆದರೆ ಮೂಲಕಥೆಯನ್ನು ಮರೆಯಲಾಗುವುದಿಲ್ಲವಲ್ಲ. ವಕ್ಷಭಾಗದಿಂದ ಮೇಲಷ್ಟೆ ಕಡೆಯಲ್ಪಟ್ಟಿರುವ ಪ್ರತಿಮೆಯೊಂದರ ಉಳಿದರ್ಧಭಾಗವನ್ನು ಕಡೆಯ ಹೊರಡುವ ಶಿಲ್ಪಿ ತನ್ನ ಶಿಲ್ಪ ಪೂರ್ಣಸ್ವರೂಪ ಕೊಡುವಂತಿರಬೇಕೆಂಬ ದರ್ಶನ ಇಟ್ಟುಕೊಂಡೇ ಇರಬೇಕು ತಾನೆ? ಅಲ್ಲದಿದ್ದರೆ ಆತ ಬೇರಾವುದಾದರು ಶಿಲೆ ಆರಿಸಿಕೊಳ್ಳುವುದು ಲೇಸು. ಠಾಕೂರರು ಇಲ್ಲಿ ಕಂಡರಿಸಿರುವ ಕಾಣ್ಕೆಯಾದರೂ ಈ ಕಥಾವಸ್ತುವಿನಲ್ಲಿ ಮಾತ್ರವೆ ಪ್ರಕಟವಾಗಬೇಕಾದುದೇನು? ಅಂಥ ಅನಿವಾರ್ಯತೆ ಅವಿಭಾಜ್ಯತೆ ಇದೆಯೆ? ಬಾಹ್ಯ ಸೌಂದರ್ಯಮೋಹ ಪ್ರೀತಿಯಂತೆ ತೋರಿದರೂ ಅದು ಪ್ರೀತಿಯಲ್ಲ ; ಅದರಿಂದ ಶಾಶ್ವತ ತೃಪ್ತಿಯೂ ಇಲ್ಲ. ಸಂಯಮಿತ ಅಂತಃಕರಣದ ಅನುರಕ್ತಿಯ ಅನುವಾದನವಷ್ಟೆ ಪ್ರೀತಿ* – ಇತ್ಯಾದಿ ದರ್ಶನವನ್ನು ಸಾರುವುದಕ್ಕೆ ಅರ್ಜುನ ಚಿತ್ರಾಂಗದೆಯರ ಈ ಕಥೆಯೇ ಅಗತ್ಯವಿಲ್ಲ ತಾನೆ? ಮತ್ತಾವುದಾದರೂ, ಬೇರೆ ಪೂರ್ವೋಕತ್ತರ ವ್ಯಾಪ್ತಿಯಿರದ ಕಥೆಯನ್ನಷ್ಟೆ ಆರಿಸಿಕೊಳ್ಳಬಹುದಿದ್ದಿತಲ್ಲ.

ವ್ಯಾಸ ಮಹಾಭಾರತದ ಇಡೀ ಕಥೆಯ ಒಟ್ಟಂದಕ್ಕೆ ಒಪ್ಪಂದವಾಗುವಂತೆ ಕಲ್ಪಿಸಿಕೊಂಡಿದ್ದರೆ ಈ ನಾಟಕ ಹೀಗಾಗುತ್ತಿದ್ದಿತೆ? ಮೂಲ ಮಹಾ ಕಾವ್ಯದ ಯಾವುದೇ ಆಖ್ಯಾನವನ್ನು ಪ್ರಸಂಗವನ್ನು ನಾವು ನಮ್ಮ ಕಾವ್ಯ ವಸ್ತುವನ್ನಾಗಿ

* ಈ ದರ್ಶನವನ್ನೆ ಠಾಕೂರರು ಕಾಳಿದಾಸನ ಕುಮಾರಸಂಭವದಲ್ಲಿ ಕಂಡು ಮೆಚ್ಚಿ ಕೊಂಡಿರುತ್ತಾರೆ. ನೋಡಿ "ಪ್ರಾಚೀನ ಸಾಹಿತ್ಯ" – "ಕುಮಾರಸಂಭವ ಮತ್ತು ಶಾಕುಂತಲ." ಮೂಲ : ಠಾಕೂರರು, ಅನು : ತ.ಸು. ವೆಂಕಣ್ಣಯ್ಯನವರು.



ಆರಿಸಿಕೊಂಡು ನಮ್ಮ ಹೊಸ ಕಾಣ್ಕೆಯನ್ನೆ ಪ್ರತಿಮಿಸಿದರೂ ಅದು ಮೂಲದ ಕೂಡೆ ಸಹೃದಯ ಮಾಡುವ ವಿನೂತನ ಸಂದರ್ಶನವಾಗಿರಬೇಕು. ಅಂಗದಲ್ಲಿ ಮಿಡಿಯುವ ಅಂಗಿಯ ಪ್ರಾಣಸ್ಪಂದನದಂತೆ ಆಖ್ಯಾನದಲ್ಲೂ ಸಮಗ್ರ ಕೃತಿಯು ಮಿಡಿಯುತ್ತಿರಬೇಕು. ಹಾಗಲ್ಲದಿದ್ದರೆ ಅದು ಪೂರ್ಣ ಸಾರ್ಥಕ್ಯ ಪಡೆಯುವುದಿಲ್ಲ. ಮಹಾಭಾರತದ ಪರಂಪರೆಯಲ್ಲಿ ಠಾಕೂರರ ಚಿತ್ರಾಂಗದ ನಾಟಕ ಸಮಗ್ರ ಫಲಕಾರಿಯಾಗಿ ಮೂಡಿ ಬಂದಿರುಂತೆ ತೋರುವುದಿಲ್ಲ. ಈ ದೃಷ್ಟಿಯಿಂದ ಕುವೆಂಪು ಅವರ ಕಾವ್ಯ ಹೆಚ್ಚು ಮಹಾಭಾರತದ ಪರಂಪರೆಯುಲ್ಲಿ ಪರಿಣಾಮಗೊಂಡಿದೆ.

ಆದರೆ ಇಲ್ಲಿರುವ ಒಂದು ವೈಲಕ್ಷಣವನ್ನೂ ಗಮನಿಸಬಹುದು. ಅದೇ ಈ ಕಾವ್ಯದ ಮುಕ್ತಾಯ. ಠಾಕೂರರಲ್ಲಿ ಚಿತ್ರಾಂಗದೆ ಹೆಸರುಹೇಳಿಕೊಂಡರೆ, ಇಲ್ಲಿ ಅವಳು ತನ್ನ ಹೆಸರನ್ನೆ ಹೇಳಿಕೊಂಡಿರುವುದಿಲ್ಲ ! ಇದರಿಂದ ಮೂಲಕಥೆಯ ಸೊಗಸು ಬೇರೆ ಬಗೆಯಾಯಿತು. ಕಡೆಯ ಕಥೆಯಲ್ಲೂ ಮೂಲಕಥನಕ್ಕಿಂತ ಬೇರೆಯಾದ ತಿರುವು ಬಂದಿತು. ಇದೇನೊ ಚೆನ್ನವೆ ; ಅದಲ್ಲ ಸಮಸ್ಯೆ. ಅರ್ಜುನ ಬಭ್ರುವಾಹನರ ಯುದ್ಧಮಧ್ಯೆ ಚಿತ್ರಾಂಗದೆ ಅಶ್ವಾರೂಢೆಯಾಗಿ ಧಾವಿಸಿ ಬಂದು ಹತವಾಗಬೇಕೆ? ಅನಿರೀಕ್ಷಿತವಾಗಿ ತನ್ನೆಣಿಕೆಗೂ ವಿರುದ್ಧವಾಗಿ ಒದಗಿಬಂದ ತಂದೆ ಮಕ್ಕಳ – ತನ್ನ ಪತಿ ತನ್ನ ಮಗನ – ಮಾರಕಯುದ್ಧವನ್ನು ಕೇಳಿ ಗಾಬರಿಗೊಂಡು ಅಮಂಗಳ ಭೀತಿಯಿಂದ ಹಾಗೆ ಅವಳು ಹಾಗೆ ಧಾವಿಸಿಬರುವುದೇನೂ ಆಶ್ಚರ್ಯವಲ್ಲ. ಆದರೆ ಸಾಯಲೇ ಬೇಕಿತ್ತೆ? ಅವಳೆಲ್ಲ ತಪಕ್ಕೂ ಅಂತಹ ಮೃತ್ಯುವೇನು ಉತ್ತರ? ಅವಳಾವ ತಪ್ಪಿಗಾಗಿ, ಅಷ್ಟೂ ದಿನದ ವಿರಹ – ತಪಸ್ಸು, ಕಡೆಗೆ, ಮರಣ? ಸಂಯಮ ಯಮವೆಲ್ಲ ಈಕೆಗೆ: ಅರ್ಜುನನಿಗೇನು? ವ್ಯಾಸಮಹರ್ಷಿ ಅರ್ಜುನನ ಶೋಧನದತ್ತ ಗಮನ ಹರಿಸಿದ್ದಾರೆ. ಅವನಿಗೆ ತೋರ್ಕೆಯ ಮರಣವಾದರೂ ಆಗಲೇಬೇಕು, ಭೀಷ್ಮರನ್ನು ವಂಚಿಸಿ ಕೊಂದುದಕ್ಕಾಗಿ, ಆದ್ದರಿಂದಲೆ ಅವನಿಗೆ ಮಗ ಬಭ್ರುವಾಹನನಿಂದ ಮರಣ. ಇದು ವ್ಯಾಸರ ದೃಷ್ಟಿ. ಅವರ ಕಲ್ಪನೆಯ ಈ ಕಥನವನ್ನೆ ಇಲ್ಲಿ ನೋಡಬಹುದು.

ವ್ಯಾಸಮಹಾಭಾರತದಲ್ಲಿ ಚಿತ್ರಾಂಗದೆಯ ಕಥೆ, ಬಭ್ರುವಾಹನ–ಅರ್ಜುನ ಪ್ರಸಂಗದಲ್ಲಿ, ಅಶ್ವಮೇಧ ಪರ್ವದಲ್ಲಿ, ಸಂಕ್ಷೇಪವಾಗಿಯಾದರೂ ಬಹು ಪರಿಣಾಮಕರವಾಗಿ ಬರುತ್ತದೆ. ಅದನ್ನು ಹೀಗೆ ಸಂಗ್ರಹಿಸಬಹುದು :

ತನ್ನ ತಂದೆ ಅರ್ಜುನ ತನ್ನ ನಾಡಿನೊಳಕ್ಕೆ ಬಂದಿದಾನೆಂಬ ಸುದ್ದಿ ಕೇಳಿದ ಬಭ್ರುವಾಹನ ಅವನನ್ನೆದುರುಗೊಳ್ಳಲು ಐಶ್ವರ್ಯಾದಿ ಸಕಲ ಮರ್ಯಾದೆಯಿಂದ

ಬಹು ವಿನಮ್ರವಾಗಿ ತೆರಳುತ್ತಾನೆ. ಕ್ಷತ್ರಿಯ ಧರ್ಮವನ್ನು ನೆನೆದ ಮಹಾಪ್ರಾಜ್ಞ ಅರ್ಜುನ ಅದನ್ನೊಪ್ಪದೆ ಅವನನ್ನು ಭಂಗಿಸುತ್ತಾನೆ. ಅಶ್ವಮೇಧದ ಕುದುರೆಯೊಡನೆ ಬಂದಿರುವ ತನ್ನ ಮೇಲೆ ಯುದ್ಧಮಾಡದ ಅವನ ಕ್ಷತ್ರಧರ್ಮ ಪರಾಙ್ಮುಖತೆಯನ್ನು ಧಿಕ್ಕರಿಸಿ, ಶಾಂತಿಯಿಂದೆದುರುಗೊಳ್ಳಲು ಬಂದ ಅವನ ಹೆಣ್ತನಕ್ಕೆ ಛೀಮಾರಿಯ ರಾಡಿಯೆರಚುತ್ತಾನೆ, ಅರ್ಜುನನಿಗೆ ತನ್ನ ಮಗನೊಡನೆ ಯುದ್ಧ ಮಾಡಬೇಕೆಂಬ ಬಯಕೆ ಬಹಳ. ಈ ನುಡಿಗಳನ್ನು ಕೇಳಿ ಕೆರಳಿದ ಬಭ್ರುವಾಹನ ಮಲತಾಯಿ ಉಲೂಪಿ ಪಾತಾಳ ಲೋಕದಿಂದೆದ್ದು ಬಂದು ಆ ತನ್ನ ಮಗನನ್ನು ಯುದ್ಧಕ್ಕೆ ಪ್ರಚೋದಿಸುತ್ತಾಳೆ. ಯುದ್ಧದಿಂದ ಅರ್ಜುನ ತನ್ನ ಮಗನನ್ನು ಮೆಚ್ಚಿಕೊಳ್ಳುತ್ತಾನೆ. ಎಂದು ಬಭ್ರುವಾಹನನಿಗೆ ಸಮಾಧಾನ ಹೇಳುತ್ತಾಳೆ. ಇದರಿಂದ ನಿರ್ಧಾರಗೊಂಡು ದೃಢಮನಸ್ಕನಾದ ಆ ಯುವಕ ಯಜ್ಞಾಶ್ವವನ್ನು ಹಿಡಿದು ಪಶುವೈದ್ಯರ ರಕ್ಷೆಗೊಪ್ಪಿಸಿ ತಾನು ಯುದ್ಧಕ್ಕಣಿಯಾಗುತ್ತಾನೆ. ಅರ್ಜುನ – ಬಭ್ರುವಾಹನರ ಯುದ್ಧ ಅಸದೃಶವಾಯಿತು. ದೇವಾಸುರ ಸಂಗ್ರಾಮ ಸಮವಾಗಿತ್ತು. ನಗುನಗುತ್ತಲೆ ಬಭ್ರುವಾಹನ ತಂದೆಯ ಭುಜಕೀರ್ತಿಯನ್ನು ಕತ್ತರಿಸಿ ಬಾಣವೊಂದರಿಂದ ಅವನ ಶರೀರವನ್ನು ಭೇದಿಸುತ್ತಾನೆ. ಅರ್ಜುನನ ಮೈಯನ್ನು ಹೊಕ್ಕು ಆಚೆಕಡೆಯಿಂದ ಹೊರ ಹಾಯ್ದು ಆ ಬಾಣ ನೆಲ ಸೇರುತ್ತದೆ. ತೀವ್ರ ಯಾತನೆಗೊಂಡ ಅರ್ಜುನ ತುಸು ಹೊತ್ತು ಗಾಂಡಿವದ ಮೇಲೆ ಮೈ ಬಾಗಿ ನಿಂತು ಚೇತರಿಸಿಕೊಂಡು ಮತ್ತೆ ಮಗನ ಮೇಲೆರಗಿ ಅವನ ರಥ ಕುದುರೆಗಳನ್ನೆಲ್ಲ ಕತ್ತರಿಸುತ್ತಾನೆ. ನೆಲಕ್ಕೆಗರಿ ನಿಂತ ಬಭ್ರುವಾಹನ ಉಗ್ರವಾಗಿ ಹೋರುತ್ತಾನೆ ; ತಂದೆಯನ್ನು ದಣಿಸುತ್ತಾನೆ, ತಣಿಸುತ್ತಾನೆ. ಕಡೆಗೆ ಮಕ್ಕಳಾಟಿಕೆಯಿಂದ ಅರ್ಜುನ ಎದೆಗೊಂದು ಕೂರಲಗನ್ನೆಸೆದು ಅವನ ಜೀವಾತುವನ್ನೇ ಅಲಗಿಸುತ್ತಾನೆ. ತೀವ್ರ ಮೂರ್ಛೆಗೆ ಸಂದ ಪಾರ್ಥ ನೆಲಕ್ಕುರುಳುತ್ತಾನೆ. ಅದನ್ನು ಕಂಡು ತಾಳಲಾರದ, ದಣಿದ ಬಭ್ರುವಾಹನನೂ ಮೂರ್ಛೆ ಹೋಗುತ್ತಾನೆ. ಮಗನಿಂದ ತನ್ನ ಪತಿಯಳಿದ ಸುದ್ದಿ ತಿಳಿದ ಚಿತ್ರಾಂಗದೆ ರಣಭೂಮಿಗೆ ಧಾವಿಸಿ ಬರುತ್ತಾಳೆ. ದಾರುಣವಾಗಿ ಗೋಳಿಟ್ಟು ತಾನೂ ಮೈ ಮರೆಯುತ್ತಾಳೆ. ಎಚ್ಚತ್ತ ಮೇಲೆ ಆ ದುಃಖಿನಿ ತನ್ನ ಸವತಿ ಉಲೂಪಿಯನ್ನು ಅವಳು ಮಾಡಿದ ಪ್ರಮಾದಕ್ಕಾಗಿ ಆಕ್ಷೇಪಿಸುತ್ತಾಳೆ. ಗಂಡನ ಸಾವನ್ನೂ ಕಂಡು ಅಳದಿರುವ ತನ್ನಾಸವತಿಯನ್ನು ನೋಡಿ ಮತ್ತೂ ಖೇದಗೊಳ್ಳುತ್ತಾಳೆ. "ನನ್ನ ಮಗ ಸತ್ತದ್ದಕ್ಕೆ ನಾ ಅಳುವುದಿಲ್ಲ. ಆದರೆ ತನ್ನ ಮಗನ ಕೈಯಿಂದ ಈ ಆತಿಥ್ಯ ಪಡೆದ ನನ್ನ ಪತಿಗಾಗಿ ಗೋಳಾಡುವೆ. ನೀ ಹೇಗಾದರೂ ಅಳದಿರುವೆ, ತಂಗಿ?" ಎಂದು ಅತ್ತು, ತನ್ನ ಗಂಡನ ಮೈಯ್ಯ



ಬಳಿ ನಿಂತು, "ಏಳು, ಮಹಾವೀರ ! ಪ್ರಿಯತಮ ! ಕುರುಶ್ರೇಷ್ಠ ! ಏಳು ! ಇದೋ ನಿನ್ನ ಕುದುರೆಯನ್ನು ನಾನು ಬಿಡಿಸಿರುವೆ. ಅದನ್ನು ಹಿಂಬಾಲಿಸಿ ಹೋಗಬೇಕಾದ ನೀನೆ ಮಲಗಿರುವುದೆ ? ನನ್ನ ಪ್ರಾಣದ ಉಸಿರೆ ! ಏಕೆ ನೀನೇ ಉಸಿರಳಿದಿರುವೆ ? ಇತರರಿಗೆ ಜೀವದ ಉಸಿರು ನೀಡುವ ನೀನೆ ಹೀಗಾಗುವುದೇ? ಉಲೂಪಿ! ನೋಡು ನಿನ್ನ ಗಂಡನ ಈ ಸುಂದರಾಂಗವನ್ನು ನೋಡು! ಹೇಗಮ್ಮ ಕೊಲ್ಲಿಸಿದೆ ಇಂಥ ಗಂಡನನ್ನು ನಿನ್ನ ಮಗನ ಕೈಯಿಂದ? ಗಂಡನನ್ನೂ ಮಗನನ್ನೂ ಇಬ್ಬರನ್ನೂ ಕೊಂದೂ ನೀನು ಇನ್ನು ನನ್ನೀ ಪ್ರಭುವನ್ನು ಬದುಕಿಸದಿದ್ದಿರೆ, ನೋಡು ನಾನಿಲ್ಲೆ ಪ್ರಾಯೋಪವೇಶ ಮಾಡಿಕೊಳ್ಳುವೆ."

ಹೀಗೆಂದ ಚಿತ್ರಾಂಗದೆ ಗೋಳಾಟವನ್ನೆಲ್ಲ ನಿಲ್ಲಿಸಿ ಪತಿಪಾದಗಳನ್ನು ತನ್ನ ತೊಡೆಯ ಮೇಲಿಟ್ಟುಕೊಂಡು ನಿಟ್ಟುಸುರುಗರೆಯುತ್ತ ಅಲ್ಲೆ ಮಂಕಾಗಿ ಕುಳಿತುಕೊಳ್ಳುತ್ತಾಳೆ. ಪತಿ ಪ್ರಾಣದಂತೆಯೇ ಮಗನ ಉಸಿರನ್ನೂ ಹಿಂತಿರುಗಿ ಪಡೆಯಲೆಂದೆ ಅವಳು ಹಾರೈಸುತ್ತಾಳೆ. ಮೂರ್ಛೆಯಿಂದೆದ್ದ ಮಗ ಬಭ್ರುವಾಹನ ತನ್ನ ತಾಯಿಗೊದಗಿರುವ ಗತಿಯನ್ನು ಕಂಡು, ತನ್ನ ತಂದೆಯನ್ನು ತಾನು ತಿಳಿದು ತಿಳಿದೂ ಕೊಂದುದನ್ನು ನೆನೆದುಕೊಂಡು ಗೋಳಾಡುತ್ತಾನೆ. ತನ್ನಿಂದ ಆ ಕೆಲಸ ಮಾಡಿಸಿದ ಮಲತಾಯಿಯನ್ನು ಮಾಕರಿಸುತ್ತಾನೆ : "ಇನ್ನು ಸುಖವಾಗಿರು ತಾಯಿ, ಈ ನಿನ್ನ ಗಂಡನೊಡನೆ ನಾನೂ ಸಾಯುವೆ. ನಿನಗೇನು ಹಿತವೊ ಅದನ್ನು ನಾನೂ ಮಾಡಿರುವೆ. ನೀನೀದಿನ ನೆಮ್ಮದಿಯಾಗಿರು" ಎಂದು. ತಾನಿನ್ನು ತನ್ನ ತಂದೆಯ ತೊಗಲನ್ನು ಹೊದೆದು ಕೊಂಡು ಪತಿತ ಅಲೆಮಾರಿಯಾಗಿ ಭೂಮಂಡಲದ ಉದ್ದಗಲವೂ ಅಲೆಯುವುದೇ ತನಗೆ ಪ್ರಾಯಶ್ಚಿತ್ತವೆಂದೂ ಅಳುತ್ತಾನೆ. ಕಡೆಗೆ ತನ್ನ ತಂದೆಯ ಪ್ರಾಣ ಹಿಂತಿರುಗದಿದ್ದರೆ ಪ್ರಾಯೋಪವೇಶಮಾಡುವುದಾಗಿ ಪ್ರತಿಜ್ಞೆಗೊಳ್ಳುತ್ತಾನೆ. ಇದನ್ನು ಕಂಡ ಉಲೂಪಿ ಸರ್ವ ಸಂಜೀವಕ ಮಣಿಯನ್ನು ನೆನೆದೊಡನೆಯೆ ಅದೂ ಬರಲು, ಆಗ ಬಭ್ರುವಾಹನನಿಗೆ ಹೀಗೆ ಸಮಾಧಾನ ಮಾಡುತ್ತಾಳೆ: "ಏಳೀಗ ಮಗು ! ಗೋಳು ಸಾಕು! ಜಿಷ್ಣುವನ್ನು ನೀನೇನೂ ಗೆಲ್ಲಲಿಲ್ಲ. ಆತ ವಾಸವನೆ ಬಂದರೂ ಅಜೇಯನಾಗುಳಿಯುವ. ಆ ಮಾಯೆಯೆಲ್ಲ ನನ್ನದೆಯೆ. ಈ ಮಹಾವೀರನ ಶ್ರೇಯಕ್ಕಾಗಿಯೇ ಹೀಗೆ ಮಾಡಿದೆ. ನಿನ್ನ ಪರಾಕ್ರಮವನ್ನು ಕಾಣಬೇಕೆಂದೆ ಈ ನಿನ್ನ ತಂದೆ ಇಲ್ಲಿಗೆ ಬಂದ್ದು. ಅದಕ್ಕೇ ನಾನು ನಿನ್ನನ್ನು ಯುದ್ಧಕ್ಕೆ ಕೆರಳಿಸಿದೆ; ಬೇರೇನೂ ತಪ್ಪು ತಿಳಿಯಬೇಡ. ನೋಡು ಈ ದಿವ್ಯಮಣಿ ಇದೆ. ಇದನ್ನು ನಿನ್ನ ತಂದೆಯೆದೆಯ ಮೇಲಿಡು. ನೀನೆ ನೋಡುವೆ ಪಾಂಡುಪುತ್ರ

ಮೇಲೇಳುವುದನ್ನು.” ಉಲೂಪಿಯ ಈ ಮಾತಿನಂತೆ ಬಭ್ರುವಾಹನ ಮಾಡಲು ಜಿಷ್ಣು ತನ್ನ ಕೆಂಗಣ್ಣನ್ನು ಹೊಸಕುತ್ತ ಮೇಲೇಳುತ್ತಾನೆ. ನಿದ್ರೆಯಲ್ಲಿದ್ದದ್ದವನಂತೆ ಚೇತರಿಸಿಕೊಂಡೆದ್ದ ಅರ್ಜುನ ತನ್ನ ಮಗನನ್ನು ಅಪ್ಪಿಕೊಂಡು ಅವನ ತಲೆ ಮೂಸುತ್ತಾನೆ. ಆದರೆ ಅವನಿಗೂ ಆಶ್ಚರ್ಯ : ರಣರಂಗದಲ್ಲಿ ತನ್ನ ಸತಿಯರಿದ್ದಾರೆ. ಒಬ್ಬಾಕೆ ಅಳಲುಬ್ಬಸದಿಂದ ಇರುವಂತೆ ತೋರುತ್ತದೆ. ಅದರರ್ಥವಾಗದೆ ಅರ್ಜುನ ಮಗನನ್ನೇ ಕೇಳುತ್ತಾನೆ. “ಏಕೀ ವಿಶೋಕ? ಏಕೀ ವಿಸ್ಮಯ? ಏಕೀ ಸಂತಸ? ಏನು ಮಗು, ಏಕೀ ವಿಚಿತ್ರ? ನನ್ನಿಷ್ಟದಂತೆ ಯುದ್ಧಕ್ಕೆ ಬಂದೆ ನೀನು. ನಾವಿಬ್ಬರೂ ಯುದ್ಧಾಟವಾಡುತ್ತಿದ್ದದ್ದೇನೊ ತಿಳಿದಿದೆ. ಆದರೇಕೆ ಇವರೆಲ್ಲ ಬಂದಿದಾರೆ?”

ಆದಕ್ಕೆ ತಲೆ ಬಾಗಿಸಿದ ಬಭ್ರುವಾಹನ ತಾಯಿ ಉಲೂಪಿಯತ್ತ ಮುಖ ತಿರುಗಿಸುತ್ತಾನೆ. ಆಕೆ ಕಥೆಯೆಲ್ಲ ತಿಳಿಸಿ ತನ್ನ ಆ ಮಾಯಾಜಾಲಕ್ಕೇನು ಕಾರಣವೆಂಬುದನ್ನೂ ವಿವರಿಸುತ್ತಾಳೆ. “ಭೀಷ್ಮರನ್ನು ಕೊಂದ ಪಾಪಕ್ಕೆ ಶಿಕ್ಷೆಯಾಗಿ ನರಕದಲ್ಲುರುಳಬೇಕಿದ್ದ ಅರ್ಜುನನ್ನು ರಕ್ಷಿಸಲು ತಿಳಿದು ಬಂದಂಥ ಪ್ರಾಯಶ್ಚಿತ್ತ ಮಾರ್ಗವೆಂದರೆ ಮಗನಿಂದ ಅವನಿಗೆ ಮರಣವೊದಗುವಂತೆ ಮಾಡುವುದಷ್ಟೆ.” ಎಂದು ಸ್ಪಷ್ಟಪಡಿಸಿದ ಉಲೂಪಿ ತಾನು ನಿಷ್ಪಾಪೆಯೆಂದು ದೃಢಪಡಿಸುತ್ತಾಳೆ. ಅದನ್ನೆಲ್ಲ ಕೇಳಿ ಅರ್ಜುನ ಸಂತುಷ್ಟನಾದ; ಹಾಗೂ ಮುಂದೆ ಚೈತ್ರ ಪೂರ್ಣಿಮೆಯಂದು ನಡೆಯುವ ಯಜ್ಞ ಸಮಾರಂಭಕ್ಕೆ ಅವರನ್ನೆಲ್ಲ ಆಹ್ವಾನಿಸುತ್ತಾನೆ. ಅದನ್ನು ಕೇಳಿದ ಮಗ ಕಣ್ಣೀರು ತುಂಬಿಕೊಂಡು ಹೀಗೆನ್ನುತ್ತಾನೆ : “ಹೌದು ತಂದೆ, ನೀನೇನೊ ಕರ್ತವ್ಯ ಪರ ಯಾವಾಗಲೂ, ನಾನೂ ನಿನ್ನಿಷ್ಟದಂತೆ ತಾಯಂದಿರೊಡನೆ ಯಜ್ಞಕ್ಕೆ ಬಂದು ಬ್ರಾಹ್ಮಣ್ಯಕ್ಕೆ ಊಟೋಪಚಾರದ ವ್ಯವಸ್ಥೆ ನೋಡಿಕೊಳ್ಳುತ್ತೇನೆ. ಆದರೆ, ಈಗ ನೀನು ಕೃಪೆದೋರಿ ನಿನ್ನೀ ಸತಿಯರೊಡನೆ ನಿನ್ನದೇ ರಾಜಧಾನಿಗೇಕೆ ಬರಬಾರದು? ಎಲ್ಲ ಕರ್ತವ್ಯಧರ್ಮವನ್ನೂ ತಿಳಿದವ ನೀನು. ಒಂದೇ ಒಂದು ರಾತ್ರಿ, ನಿನ್ನರಮನೆಯಲ್ಲಿ ಸುಖವಾಗಿರು. ಆ ಮೇಲೆ ಕುದುರೆ ಹಿಂದೆ ನಡೆಯಬಹುದಲ್ಲ.”

ಇದಕ್ಕೆ ಕುಂತಿಯ ಕಂದ ಚಿತ್ರಾಂಗದೆಯ ಚಿಣ್ಣನಿಗೆ ಕೊಟ್ಟ ಉತ್ತರವಾದರೂ ಇಷ್ಟೆ; ನೋಡು, ಮಹಾಬಲ, ತಿಳಿದೇ ಇದೆ ನಿನಗೆ ನನ್ನ ದೃಢ ಪ್ರತಿಜ್ಞೆಯೇನೆಂದು. ಅದನ್ನಾಚರಿಸುವ ಮುಂಚೆ ನಾನು ನಿನ್ನ ಪುರ ಪ್ರವೇಶ ಮಾಡಲಾರೆ, ನೋಡು. ಈ ಯಜ್ಞಾಶ್ವವಾದರೂ ಮನಬಂದತ್ತ ಓಡುತ್ತೆ. ಇಷ್ಟೆ, ನಿನ್ನನ್ನು ಹರಸಿ ನಾನಾದರೂ ಈಗ ತೆರಳಲೇಬೇಕು. ತುಸು ಹೊತ್ತು ವಿಶ್ರಾಂತಿ ಪಡೆಯುವೆಡೆ ಯಾವುದೂ ನನಗಿಲ್ಲ, ವೀರ.” ಹೀಗೆಂದ ಪಾಕಶಾಸನನ ಪುತ್ರನಾದ ಅರ್ಜುನ ತನ್ನ ಮಗನಿಂದ ಯೋಗ್ಯ ರೀತಿಯಲ್ಲಿ ಸನ್ಮಾನ್ಯಗೊಂಡು, ತನ್ನ ಇಬ್ಬರೂ ಹೆಂಡಿರ ಒಪ್ಪಿಗೆ ಪಡೆದು ಆ ಎಡೆಯಿಂದ ಹೊರಡುತ್ತಾನೆ.*



ಮಹರ್ಷಿ ವ್ಯಾಸರು ಕೊಡುವ ಈ ಕಥೆಯಲ್ಲಿ ಎಳೆಯಾಗಿಯಾದರೂ ಸ್ವರ್ಣ ರೇಖೆಯಾಗಿ ಉಜ್ಜ್ವಲವಾಗಿ ಚಿತ್ರಾಂಗದೆಯ ಕಥೆ ಬರುತ್ತದೆ. ಅಲ್ಲಿ ಅವಳ ಸ್ವಭಾವ ಚಿತ್ರಣವೂ ತಕ್ಕಷ್ಟು ಬಂದಿದೆ. ಮಹರ್ಷಿ ಆಕೆಯನ್ನು ಅನೂನಸುಂದರಿಯೆಂದು, ದಿವ್ಯಸೌಂದರ್ಯದಿಂದ ಶೋಭಿಸಿದವಳೆಂದು ಏನೆಲ್ಲ ವಿಶೇಷಿಸುತ್ತಾರೆ ! ಆಕೆಯ ಸೌಂದರ್ಯ ತಪಕ್ಕೂ ಅಂಜದೆಂಬುದನ್ನೂ ಧ್ವನಿಸಿದ್ದಾರೆ. ಆಕೆ ಪ್ರಾಯೋಪವೇಶಕ್ಕೆ ಸಿದ್ಧವಾಗುವುದನ್ನು ಚಿತ್ರಿಸುವಲ್ಲಿ. ಬಭ್ರುವಾಹನನಾದರೂ ಮಹಾ ಸಂಯಮಿ, ಗಂಭೀರ. ಅರ್ಜುನ ಕೂಡ ವರ್ತಿಸುವುದು ಉಚ್ಛೃಂಖಲವಾಗಿಯೇನೂ ಅಲ್ಲ – ‘ನೀನು ವೈಶ್ಯರ ಮಗನಿದ್ದಿರಬೇಕು’ ಎಂದೇನೂ ಭಂಗಿಸಹೋಗುವುದಿಲ್ಲ. ಅಷ್ಟೆ ಅಲ್ಲ. ಅವನ ಮಾತಿನಲ್ಲಿ ಅವನು ರಾಜ್ಯಾಧಿಪತ್ಯಮತ್ತನಾಗಿ ತೋರುವುದೂ ಇಲ್ಲ. ಕ್ಷತ್ರಿಯ ಧರ್ಮದಲ್ಲಿ ಅಭಿಮಾನಿಯಾಗಿದ್ದಾನೆಯೇನೊ ಸರಿ. ಅಷ್ಟಲ್ಲದೆಯೆ ಎಷ್ಟು ನಿಷ್ಠುರ ಕರ್ತವ್ಯ ಶೀಲ ! ಹತ್ತಾರು ವರ್ಷಗಳ ಅನಂತರದಲ್ಲಿ ಮೊದಲನೆಯ ಬಾರಿಗೆ, ಇಡೀ ಜೀವಿತಾವಧಿಯಲ್ಲಿ ಎರಡನೆಯ ಬಾರಿಗೆ ಕಾಣುತ್ತಿರುವ ಸತಿಯರೊಡನಾಗಲಿ, ಮೊದಲ ಬಾರಿಗೆ ಕಾಣುತ್ತಿರುವ ವೀರ ಮಗನ ಪ್ರೀತಿಯ ಸತ್ಕಾರದಲ್ಲಾಗಲಿ ಒಂದು ದಿನವೂ ತಾನು ಇರಲಾಗದುದನ್ನು, ಅದೂ ಅಲ್ಲ, ವಿಶ್ರಾಂತಿಗಾಗಿ ತಾನು ಯಾವೆಡೆಯೂ ತಂಗಲಾರದುದನ್ನು ಅವನು ಹೇಳುವುದನ್ನು ಕಂಡು ನಮಗೆ ಆತನ ಬಗ್ಗೆ ಆಶ್ಚರ್ಯಗೌರವ ಮೂಡೀತು. ಆದರೆ ಅವನಿಗೆ ಆ ಸತಿಯರಲ್ಲಿದ್ದಿರಬಹುದಾದ ಪ್ರೀತಿ, ಅವನು ಅವರಪ್ಪಣೆ ಪಡೆದೇ ಮುಂದೆ ಹೊರಟ ಎಂಬುದನ್ನು ಕಂಡಾಗ ಅರಿವಾಗುತ್ತದೆ. ಇದೆಲ್ಲದರ ಕೂಡ ವ್ಯಾಸಮಹರ್ಷಿಗಳು, ಅರ್ಜುನ ಮರಣವನ್ನು ನಿಯೋಜಿಸುವಲ್ಲಿ ಎರಡಂಶವನ್ನು

* ವ್ಯಾಸಭಾರತದಲ್ಲಿ ಬರುವ ಸಂಯಮಿತವಾದ ಈ ಕಥೆಯಲ್ಲಿ ಕೃಷ್ಣಪಾತ್ರವೇನೊ ಬರದು. ಆದರೆ ಭಾಗವತ ಕವಿ ಲಕ್ಷ್ಮೀಶನಲ್ಲಿ ಕಥೆಯ ಕಡೆಯಲ್ಲಾದರೂ ಅವನು ಬರಲೇಬೇಕು. ಅರ್ಜುನ ಬದುಕಲು ಸಂಜೀವಕ ಮಣಿಯಷ್ಟೆ ಕೃಷ್ಣಾನುಗ್ರಹವೂ ಮುಖ್ಯ : ಒಂದು ಕೈ ಮಿಗಿಲು ಅವನಲ್ಲಿ. ಆದರೆ ಅವನ ಕಥೆಯಲ್ಲಿ ಕೃಷ್ಣಾರ್ಜುನಾದಿಗಳೆಲ್ಲ ನಾಲ್ಕೈದು ದಿನ ಮಣಿಪುರದಲ್ಲಿ ತಂಗುತ್ತಾರೆ ! ವ್ಯಾಸರ ಕಲ್ಪನೆ ಈ ಒಂದರಲ್ಲೆ ಎಷ್ಟು ಧ್ವನಿಪೂರ್ಣ !

ಧ್ವನಿಸಿದ್ದಾರೆ. ಅರ್ಜುನನೇನೋ ಮಹಾವೀರ, ಅಪ್ರತಿಹತ, ಆದರೆ ಇಲ್ಲಿ ಹತವಾಗುತ್ತಾನೆ ; ಆದರೂ ತೋರಿಕೆಯದು. ಅದರ ಅಂತಃಪರಿಣಾಮವೆಂದರೆ ಅರ್ಜುನನನ್ನು ಹೆಚ್ಚು ಕರ್ಮ ವಿಮುಕ್ತನನ್ನಾಗಿ ಮಾಡಿಸುವುದು. 'ಕರ್ಮದ ಪಾಂಗು ಮರಿಗೆ ಮರಿ, ಮರಿಗೆ ಮರಿ ಬೆರಳ್‌ಗೆ ಕೊರಳ್' ಎಂಬ ಕವಿದರ್ಶನ ಇಲ್ಲೂ ಸತ್ಯ.

ಆದ್ದರಿಂದ ಕುವೆಂಪು ಅವರ ಚಿತ್ರಾಂಗದಾ ಕಾವ್ಯದ ಮುಕ್ತಾಯದಲ್ಲೂ ಋಷಿ ವ್ಯಾಸಕಲ್ಪನೆಯ ಪರಂಪರೆ ದೃಢವಾಗಿ ಮಿಡಿದಿದ್ದರೆ ಈ ಕಾವ್ಯ ಮತ್ತೂ ಶ್ರೇಷ್ಠ ಕಾವ್ಯವಾಗಿ, ಭಾರತ ಪರಂಪರೆಯಲ್ಲಿ ಮುಂದುವರಿದ ವಿಶಿಷ್ಟ ಕೃತಿಯಾಗಿ ಮೈದಾಳುತ್ತಿತ್ತೆಂದು ತೋರುತ್ತದೆ.

ಮಹಾಭಾರತದ ಹೃದಯವನ್ನು ಹೆಚ್ಚು ಮಿಡಿದಿರುವ ಮತ್ತೊಂದು ಕೃತಿಯೆಂದರೆ 'ಶ್ಮಶಾನ ಕುರುಕ್ಷೇತ್ರ.' ೧೯೩೦ರ ವೇಳೆಗೆ ಬಂದ ಈ ನಾಟಕದಲ್ಲೆ ಅಷ್ಟರ ಮಟ್ಟಿನ ಪರಿಣತಿ, ಸಮಗ್ರದರ್ಶನ ಮೈದಾಳಿರುವುದು ಬಹಳ ಸಂತೃಪ್ತಿಯನ್ನುಂಟು ಮಾಡುವಂಥ ಸಂಗತಿ. ಮಹಾಭಾರತವನ್ನು ಮೊದಲ ಬಾರಿಗೆ ಶ್ರೇಷ್ಠವಾಗಿ ಸಂಗ್ರಹಿಸಿ ಪುನಸ್ಸೃಜಿಸಿದ ಪಂಪನಾಗಲಿ, ಅದರ ವಿಸ್ಮಯ ಅದ್ಭುತಗಳನ್ನೆಲ್ಲ ಕನ್ನಡಿಸಿದ ಕುಮಾರವ್ಯಾಸನಾಗಲಿ ಆ ಮಹರ್ಷಿ ಕಾವ್ಯವನ್ನು ಕುರುಕ್ಷೇತ್ರಾನಂತರದ ಪಾಂಡವರ ರಾಜ್ಯಾಭಿಷೇಕದಲ್ಲೇ ಮುಗಿಸಿ ಮಂಗಳಾರತಿ ಎತ್ತುತ್ತಾರೆ. ಆದರೆ ವ್ಯಾಸರ ವಿಪುಲಾಶ್ಚರ್ಯಕರವಾದ ಕಾಣ್ಕೆ ಅದೆಯೆ? ಒಂದು ಯುಗದ ಹೂಹಣ್ಣು ಕಾಯಿಗಳನ್ನೆಲ್ಲ ಸುಟ್ಟುಹಾಕಿದ ಕುರುಕ್ಷೇತ್ರ ಯುದ್ಧಭೂಮಿ ಪಟ್ಟಾಭಿಷಿಕ್ತರ ಸಿಂಹಾಸನವಾಗುವುದಷ್ಟೇ ವ್ಯಾಸರ ಕಾಣ್ಕೆಯೆ? ಹೋಗಲಿ ಸಿಂಹಾಸನ ಪಡೆದದ್ದಾರೂ ಎಷ್ಟು ಬೆಲೆಯಿಂದ? ಯಾರಿಗಾದರೂ ಸುಖ ? ಕಡೆಗಾದರೂ ಯಾರು ಸುಖಪಟ್ಟರು? ತರುಣ ಅಭಿಮನ್ಯುವಿಂದ ಹಿಡಿದು ವೃದ್ಧ ಭೀಷ್ಮರ ತನಕ, ಉತ್ತರನಿಂದ ಮೊದಲ್ಗೊಂಡು ದ್ರೋಣಕರ್ಣರ ತನಕ. ಕೌರವಾದಿಗಳಂತೆಯೆ ಯಾದವ ಸೈನ್ಯವೆಲ್ಲ ಕೆಡೆದುರುಳಿತಲ್ಲ ಆ ಕುರುಕ್ಷೇತ್ರದಲ್ಲಿ, ಅಷ್ಟಕ್ಕೇ ನಿಂತಿತೇ ಅದರ ರೌದ್ರ? ಮಲಗಿದ್ದ ಪಂಚಪಾಂಡವರು–ಪಂಚ ದ್ರೌಪದೇಯರು. ಬಸಿರಿನಲ್ಲಿದ್ದ ಅಭಿಮನ್ಯುಸತ್ತ್ವ ಎಲ್ಲವೂ ಹತವಾಯಿತಲ್ಲ, ಅಶ್ವತ್ಥಾಮನೂ ಶಪಿತನಾದ. ಕರ್ಣಾವಸಾನದ ನಿಜರಹಸ್ಯವರಿತ ಧರ್ಮಾದಿಗಳೂ ಸೋಲಿಗೆ ಬಿದ್ದರು. ಮಹಾಪುತ್ರನನ್ನು ಕಳೆದುಕೊಂಡ ಸುಭದ್ರೆ, ತನ್ನ ನೂರ್ವರೂ ಪುತ್ರರನ್ನು ಬಲಿಗೊಟ್ಟು ಅನಾಥರಾದ ಧೃತರಾಷ್ಟ್ರ ಗಾಂಧಾರಿಯರು, ತನ್ನೈದು ಮಕ್ಕಳಳಿದ ದ್ರೌಪದಿ ಈ ಯಾರಿಗೆ ಸುಖ? ಅತಿರಥ ಮಹಾರಥ ರಪಾಡೇ ಇದಾದ ಮೇಲೆ ಸಾಮಾನ್ಯ ಪದಾತಿಯ ಸಾವಿನ ನೋವಿನ, ಅವನ ಸಂಸಾರಕ್ಕಾದ ಗೋಳಿನ ಕಥೆ ಯಾರಿಗೆ ಬೇಕು. ಅಂತೂ ಯಾರಿಗೂ, ಯಾರಿಗೂ, ಸಿಗಲಿಲ್ಲ ಭೋಗ; ದುಃಖ ಭೋಗಿಯ ಭೋಗವೊಂದಲ್ಲದೆ.



ಈ ಅಪಾರ ವಿಪುಲ ವಿನಾಶವನ್ನು ವಿನಷ್ಟವನ್ನು ಮರೆಯುವುದಾದರೂ ಎಂತು? ಮಹಾಭಾರತದಲ್ಲಾದ ಯುದ್ಧ ವಿನಷ್ಟ ರಾಮಾಯಣ ಯುದ್ಧ ಪರಿಣಾಮದಂತಲ್ಲವಲ್ಲ, ಅದ್ದರಿಂದಲೆ ಪಾಂಡವರ ಪಟ್ಟಾಭಿಷೇಕದ ಮಂಗಳದ ಹಾಡಿನಿಂದ ಮಹಾಭಾರತ ಕಥೆಯ ಮುಕ್ತಾಯ ಹಾಡುವುದು ಅಪೂರ್ಣವಾಗುತ್ತದೆ* ವಿನಾಶವನ್ನೂ ಕಾಣುವ ಶ್ಮಶಾನ ಭೈರವನನ್ನೂ ದರ್ಶಿಸುವ ಧೈರ್ಯವಿಲ್ಲ ಕವಿಗೆ ಎಂದಂತಾಗುತ್ತದೆ. ಸಮಗ್ರ ವ್ಯಾಸಭಾರತದ ದೃಷ್ಟಿಯಿಂದ ಪಂಪಕುಮಾರವ್ಯಾಸರೂ ಮೊಟಕಾಗುತ್ತಾರೆ. ಕುಮಾರವ್ಯಾಸ ಪಂಪನಿಗಿಂತ ವಾಸಿ. ಅರ್ಜುನಪಟ್ಟೋತ್ಸವವಷ್ಟೆ ಪಂಪನ ಬಯಕೆಯಾಗಿದ್ದಂತೆ ಭಾಸವಾಗುವಂತೆ ಆ ಕವಿ ಭಾರತವನ್ನು ಬೇಗ ಅಲ್ಲಿಗೆ ಮುಗಿಸುತ್ತಾನೆ. ಕೌರವಾದಿಗಳ ಸಾವಿನ ದುಃಖದಿಂದ ಬೇಯುವ ಗಾಂಧಾರಿ ಧೃತರಾಷ್ಟ್ರ, ಐದು ಜನ ಮಕ್ಕಳಿದ್ದೂ ಬಂಜೆಯಾದ ಯುದ್ಧಮಾಡಿಸಿ ಗೆದ್ದೂ ವಿಜಯಪಾರಿತೋಷಕವಾಗಿ ಬಂದ ರಾಜ್ಯವನ್ನು ಆಳುವಂಥ ಮಕ್ಕಳನ್ನೆ ಬಲಿಕೊಟ್ಟಂತಹ ದ್ರೌಪದಿ, –ಈ ಎಲ್ಲ ಚಿತ್ರಣವನ್ನೂ ಕುಮಾರವ್ಯಾಸ ನೀಡುವಷ್ಟು ತಾಳ್ಮೆ ತೋರಿದ್ದಾನೆ. ಅದರೂ ಅವನ ಪಾಂಡವರು ಪಟ್ಟೋತ್ಸವವಷ್ಟರಲ್ಲೆ ಮುಕ್ತಿಕಂಡಂತಾಗುತ್ತದೆ. ಆದ್ದರಿಂದಲೆ ಸಮಗ್ರ ಭಾರತದ ದರ್ಶನ ಅವನಲ್ಲೂ ಅವ್ಯಕ್ತವಾಗಿಯೆ ಉಳಿಯುತ್ತದೆ.

ಮಹಾಭಾರತ ಮತ್ತೂ ಮುಂದುವರೆಯುತ್ತದೆ ವ್ಯಾಸರಲ್ಲಿ. ಗೆದ್ದ ಪಾಂಡವರು ನಾಲ್ಕ ದಿನ ರಾಜ್ಯಭಾರವೇನೊ ಮಾಡುತ್ತಾರೆ, ಸರಿ. ಆದರೆ ಧೃತರಾಷ್ಟ್ರ, ಅವರ ಆಶ್ರಯದಲ್ಲಿ ಹೆಚ್ಚು ದಿನ ಇರಲಾರದ ಮೂಗುಬ್ಬಸ ಅನುಭವಿಸುತ್ತಾನೆ. ಭೀಮನ ಕಟೂಕ್ತಿ ಅವನನ್ನು ಇರಿಯುತ್ತಲೆ ಇತ್ತು. ಅವನು ಕಾಡುಪಾಲಾಗುತ್ತಾನೆ. ಅವನನ್ನನು ಸರಿಸಿ ಗಾಂಧಾರಿ ಕುಂತಿ ವಿದುರರೆಲ್ಲ–ಧರ್ಮರಾಯನ ಎಷ್ಟೇ ಪ್ರಾರ್ಥನೆಗೂ ಬಗ್ಗದೆ–ಕಾಡಾಗುತ್ತಾರೆ, ಕಡೆಗೊ, ಕಾಡುಗಿಚ್ಚೆದ್ದು ನಾಲ್ಕೂ ಕಡೆಯಿಂದ ಸುತ್ತುವರಿದು ಅವರು ಸುಟ್ಟುಹೋಗುತ್ತಾರೆ. (ಎಂಥ ಭಯಂಕರ ಪ್ರತೀಕ ಇದು !)

* ಮಹಾಭಾರತದ ಕಥೆ ಪಾಂಡವ ಜಯದಲ್ಲಷ್ಟೆ ಮುಗಿಯುತ್ತದೆ ; ಅಲ್ಲಿ ಬರುವ ಮುಂದಿನ ಕಥೆ ಯಾವುದೂ ವ್ಯಾಸಸೃಷ್ಟಿಯಲ್ಲ ಎಂಬ ಭ್ರಮೆಯೂ ಇಲ್ಲದಿಲ್ಲ. ಅವರಿಗೆ ವ್ಯಾಸದರ್ಶನ ವೇದ್ಯವಾಗಿದೆಯೆನ್ನಬರುವುದಿಲ್ಲ.

ಈ ಘೋರ ವೃತ್ತಾಂತ ತಿಳಿದ ಧರ್ಮರಾಯ ಮೂಗಳಲು ಅಳುತ್ತಾನೆ. ಅಷ್ಟಕ್ಕೆ ನಿಲ್ಲಲಿಲ್ಲ ಇದು. ಕೃಷ್ಣ ನಿರ್ಯಾಣವಾಯಿತು. ಯಾದವನಾಶವೂ ಆಯಿತು. ಗೋಪಿಯರ ಮಾನಭಂಗ ಅರ್ಜುನನ ಮುಖಭಂಗ ಎಲ್ಲವೂ ಆಯಿತು. ಇದನ್ನೆಲ್ಲ ತಿಳಿದ ಧರ್ಮರಾಯ ತನಗಿನ್ನು ಲೋಕನಿವೃತ್ತಿ ಕಾಲ ಬಂತೆಂದು ತಿಳಿದು ಸಶರೀರವಾಗಿ ಸ್ವರ್ಗಾರೋಹಣಕ್ಕೆ ತೆರಳುತ್ತಾನೆ, ಸತಿ ತಮ್ಮಂದಿರೊಡನೆ. ಎಲ್ಲರೂ ದಾರಿಯಲ್ಲೆ ಕೆಡೆದುಹೋಗುತ್ತಾರೆ. ಎಲ್ಲಿಂದಲೊ ಬಂದ ನಾಯಿ ಮುಂದೆ ಅವನ ಸಂಗಾತಿಯಾಯಿತು. ಅದಕ್ಕೂ ಪುಷ್ಪಯಾನ ಕೊಡಿಸಿದ; ಧರ್ಮಪರೀಕ್ಷೆಯಲ್ಲೂ ಗೆದ್ದ. ಆದರೆ ಸ್ವರ್ಗದಲ್ಲಿ ಗೌರವಾನ್ವಿತನಾಗಿ ಮೆರೆದಿದ್ದ ಕೌರವನನ್ನು ಕಂಡ ಮಾತ್ರದಿಂದಲೆ ಅಸೂಯೆಗೊಂಡು ಮುಗ್ಗರಿಸಿದ ಧರ್ಮರಾಯ. ಅದಕ್ಕಷ್ಟೆ ನರಕದರ್ಶನವಾಗುತ್ತದೆ ಅವನಿಗೆ.

ಇದು ಮಹಾಭಾರತ ಕಥಾವಾಹಿನಿ. ಇದನ್ನೆಲ್ಲ ಯಾವ ಒಂದು ಕಾವ್ಯದಲ್ಲೂ ಸೆರೆಹಿಡಿಯಲಾಗಿಲ್ಲ ಈ ತನಕ. ವ್ಯಾಸ ಮಹರ್ಷಿಗಳ ವಿಪುಲಾಕಾಶದರ್ಶನವನ್ನು ಕುಮಾರವ್ಯಾಸ ಪಂಪರ ಭಾರತವಷ್ಟರಿಂದಲೆ ಮಾಡಿಕೊಳ್ಳುವುದು ಕಮನೀಯ ಪರ್ವತ ಕಂದರದ ತಪ್ಪಲಲ್ಲಿ ನಿಂತು ಆ ಪರ್ವತ ಶ್ರೇಣಿಯ ಎಲ್ಲ ವಿಸ್ತಾರವನ್ನೂ, ಶೃಂಗೌನ್ನತ್ಯಗಳನ್ನೂ ನಿಮ್ನ ಗಾಢಾಂಧಕಾರವನ್ನೂ ಕಾಣುವ ತೃಪ್ತಿ ತಾಳುವುದೂ ಒಂದೇ. ಕಾವ್ಯ ಹಿಮಾಲಯ ಶ್ರೇಣಿಯಾದ ಮಹಾಭಾರತವನ್ನು ಏಕೋ ಏನೊ ದುರ್ದೈವದಿಂದ ಇತಿಹಾಸವೆಂದಷ್ಟೆ ಭಾವಿಸಿ ಪ್ರಾಚೀನ ಕವಿಕಾವ್ಯಲಾಕ್ಷಣಿಕರು ಮಹಾನಷ್ಟ ಹೊಂದಿದರು. ಅಷ್ಟೇ ಅಲ್ಲ, ಯುದ್ಧಾನಂತರದ ಮಹಾಭಾರತವೆಲ್ಲವೂ ಬರಿಯ ತತ್ತ್ವೋಪದೇಶವೆಂದು ಕೆಲವರೂ, ಅದು 'ಜಯ'ಕಾವ್ಯವಾದ ಭಾರತಕ್ಕೆ ಒಪ್ಪಂದವಾಗದ ವಿಸ್ತೃಷ್ಟಿ ಎಂದು ಮತ್ತೆ ಕೆಲವರೂ ನಂಬಿರುವುದುಂಟು. ಇದರಿಂದಾದ ವಿನಷ್ಟ ಅಷ್ಟಿಷ್ಟಲ್ಲ. ಮೊದಲ ಪರ್ವತ ಶ್ರೇಣಿ ಶ್ರೇಣಿಗಳನ್ನುಷ್ಟೆ ಕಂಡು ಅಲ್ಲೇ ವಿಸ್ಮಿತರಾಗಿ ನಿಂತು ಅದರಾಚೆ ಏನೊಂದು ಶಿಖರ ಶ್ರೇಣಿಯೂ ಇದ್ದಿರಲಾರದೆಂದು ಊಹಿಸಿ ತಮ್ಮ ಶಿಖರಾರೋಹಣ ಸಾಹಸವನ್ನೂ ಪರ್ವತ ಶ್ರೇಣಿ ಪರ್ಯಟನವನ್ನೂ ಮುಕ್ತಾಯಗೊಳಿಸಿ ಮಹಾನುಭವ ಪರಂಪರೆಯಿಂದಲೆ ವಂಚಿತರಾಗುವ ಆಲಸ ಶಿಖರಾರೋಹಿಗಳಂತೆ ಈ ಕಾವ್ಯ ಯಾತ್ರಿಗರ ವಿಚಾರ. ಮಹಾಭಾರತದ ಯುದ್ಧಾಧಿನಂತರದ ಸಿದ್ಧಿ ಪರಂಪರೆಯ ಕಥಾಪ್ರಪಂಚವನ್ನು ಸಮಗ್ರವಾಗಿ ಸಶಕ್ತವಾಗಿ ಅನುಭವಿಸುವ, ಆ ಭಾಗ್ಯವನ್ನು ನಮಗೂ ನೀಡುವ ಕವಿಯಿನ್ನೂ ಬರಬೇಕಿದೆ.

ಈ ದೃಷ್ಟಿಯಿಂದ ನೋಡಿದಾಗ 'ಶ್ಮಶಾನ ಕುರುಕ್ಷೇತ್ರ' ಒಳ್ಳೆಯ ಹೊಸ



ಸಿದ್ಧಿಯಂತೆಯೆ ತೋರುತ್ತದೆ. ತನ್ನ ನಾಟಕವಸ್ತುಮಿತಿಯಲ್ಲಿದ್ದುಕೊಂಡೆ ಅಗಾಧ ಪರಿಣಾಮವನ್ನು ಮಾಡಬಲ್ಲ ಶಕ್ತಿಯನ್ನು ಪಡೆದಿದೆ, ಎಂದು ನಿರಾತಂಕವಾಗಿ ಹೇಳಬಹುದು. ಈ ನಾಟಕದ ಕಥಾವಸ್ತುವಾದರೂ ಯುದ್ಧ ಮುಗಿದು ಮಸಣವಾಗಿದ್ದ ಕುರುಕ್ಷೇತ್ರ. ಧರ್ಮಕ್ಷೇತ್ರವೆಂದಷ್ಟೆ ಪ್ರತೀತವಾಗಿದ್ದ ಕುರುಕ್ಷೇತ್ರ. ವಿಸ್ತಾರವಾದ ರುದ್ರಭೂಮಿಯಾಗಿ ಅಸಂಖ್ಯಗೋಳಿನ ಊಳಿನ ಗೂಡಾಗಿ ಪರಿಣಮಿಸಿರುವ ದುರಂತದ ವಿವರ್ಣನೆಯನ್ನಿಲ್ಲಿ ಕಾಣುತ್ತೇವೆ. ಸತ್ತವರ ಅನಂತ ಸಂತಾಪವನ್ನೂ ಪ್ರಲಾಪವನ್ನೂ, ಗೆದ್ದವರ ಸಲ್ಲಾಪ ಅಪಲಾಪವನ್ನೂ ಮನತಟ್ಟುವಂತೆ ಕವಿ ಚಿತ್ರಿಸಿರುವುದನ್ನೂ ಕಾಣುತ್ತೇವೆ. ರಾಜಾಧಿರಾಜರ ದುಃಖ ಘೋಷದ ನಡುವೆಯಲ್ಲೆ ಸಾಮಾನ್ಯ ಪದಾತಿಗಳ ಸಂಸಾರದ ಮೂಗಳ್ಕೆಯನ್ನಿಲ್ಲಿ ಮೊದಲ ಬಾರಿಗೆ ಕೇಳಿ ಮನಗರಗುತ್ತೇವೆ. ವ್ಯಾಸ ಮಹರ್ಷಿಗಳು ಅತಿರಥ ಮಹಾರಥರ ದುಃಖವನ್ನು ಮಹತ್ತರ ಸಂಕಟವನ್ನು – ಅಷ್ಟೆ ನಮಗೆ ಕೇಳಿಸಿದ್ದರು ಅಲ್ಲಿ. ಈ ನವ ಯುಗದ ಕವಿ ಆ ದುಃಖದ ಒಡನೊಡನೆಯೆ ಅಲ್ಪರೆಂದೆನಿಸಿಕೊಂಡವರ ಕರುಳಿರಿಯುವ, ಒಂದಿಷ್ಟೂ ಕೀಳಲ್ಲದ ನಿಃಸ್ವಾರ್ಥ ದುಃಖವನ್ನು, ವೈರಮಾತ್ಸರ್ಯಗಳಿಲ್ಲದ ವೀರದ ಸಾವು ತಂದ – ಯಾರ ಕಣ್ಣಿಗೂ ಕಾಣದ – ತ್ಯಾಗದ ಹುಚ್ಚು ತಂದಂಥ ಸಂಕಟವನ್ನು ನಮಗಿಲ್ಲಿ ತೋರುತ್ತಾರೆ. ಅದೂ ಅಲ್ಲ, ಗೆದ್ದವರ ಸಂತೋಷವನ್ನೂ ಈ ಸಾಮೂಹಿಕ ದುಃಖ ನೆಕ್ಕಿ ನೊಣೆಯುವುದನ್ನು ಕಾಣುತ್ತೇವೆ, ಇಷ್ಟೆಲ್ಲ ವಿನಾಶ ದಾರುಣ ವಿಷಾದಗಳ ಶ್ಮಶಾನದ ನಡುವೆಯೆ ತನ್ನ ಯುಗಾವಧಿಯ ಅಧಿಕಾರವನ್ನು ದ್ವಾಪರ ಮುಂದಿನ ಯುಗಾಧಿಪತಿಗೆ ಒಪ್ಪಿಸಲಿರುವುದನ್ನೂ ; ತನ್ನ ಸಮಸ್ತ ಸಾಧನೆಯೆಲ್ಲ ಪಾಳುಬಿದ್ದು ಹೋಗಿರುವಂದೇ, ಆ ಸ್ಥಿತಿಯಲ್ಲೇ ತಾನು ತನ್ನ ಅಧಿಕಾರವನ್ನು ಒಪ್ಪಿಸಬೇಕಾಯಿತಲ್ಲ ಎಂದೂ ಹಾಗೂ ತನ್ನ ಸಿದ್ಧಿಯನ್ನು ಕೊಡುಗೆಯಾಗಿ ಕೊಡುವ ಬದಲು ಆ ಭಗ್ನಸಿದ್ಧಿಯ ಸಮೃದ್ಧಿಯನ್ನಷ್ಟೆ ನೀಡಬೇಕಾಯಿತಲ್ಲ ಎಂದೂ ಮಹದ್‌ವಿಷಾದವನ್ನು ಆ ದ್ವಾಪರ ಯುಗಪುರುಷ ಅನುಭವಿಸುವುದನ್ನು ಕಾಣುತ್ತೇವೆ. ಅದಕ್ಕೆಲ್ಲ ಸಹಾನುಭೂತಿ ತೋರಿಯೂ ಅಷ್ಟೇನೂ ವಿಷಾದಗೊಳ್ಳದ, ನವಯುಗದ ಕನಸು ಕಾಣುತ್ತಿರುವ ಕಲಿ ತಾನು 'ಪೂರ್ವಯುಗದನುಭವದ ತಳಹದಿಯ ಮೇಲೆಯೇ ಬರುವ ಕಾಲದ ಭವ್ಯ ಮಂದಿರವ ನಿರ್ಮಿಪೆನ್', ಎಂಬ ಆಶ್ವಾಸನೆಯನ್ನೂ ನೀಡುವುದನ್ನಿಲ್ಲಿ ಕಾಣುತ್ತೇವೆ. ಈ ಎಲ್ಲಕ್ಕೂ ಸಿಲುಕಿಯೂ ಸಿಲುಕದೆ ಎಲ್ಲರ ನೋವನ್ನೂ ಬೇವನ್ನೂ ಹೀರಿಕೊಳ್ಳುವ ನಾಗಮಣಿಯಾಗಿ ಆ ಶ್ಮಶಾನದಲ್ಲೆ ಬಿಡುವಿಲ್ಲದೆ ಸಂಚರಿಸುತ್ತಿರುವ ಭಗವದ್‌ಸತ್ತ್ವದ ದ್ವಂದ್ವಾತೀತ

ವರ್ತನವನ್ನೂ, ಮತ್ತೆ  ಅದೇ ದಿವ್ಯಶಕ್ತಿ ಆ ಯುಗಾವಸಾನದ ಶ್ಮಶಾನದಲ್ಲೆ ಮತ್ತೂ ವಿಶಿಷ್ಟವಾದ ಆಶಾದಾಯಕವಾದ ಬರಲಿರುವ ಮತ್ತೊಂದು ಯುಗ ದರ್ಶನವನ್ನು ನೀಡುವ ವೈಚಿತ್ರವನ್ನೂ ಕಾಣುತ್ತೇವೆ. ಅತಿರಥರ ಅತಿರತಿ ಅಸೂಯೆ ವೈರಾದಿಗಳ ಮಹಾದಾವಾಗ್ನಿಗೆ ಬಲಿಯಾದ ಭೂಮಿಯಲ್ಲೆ ಮೂಡಿಕೊಳ್ಳುವ ಯುಗ ಭಿತ್ತಿಯ ಮೇಲೆ, 'ಸಾರ್ವಭೌಮತ್ವ ಭಂಗಂ. ಸ್ವತಂತ್ರ ಭಾರತರಂಗಂ.. ಸರ್ವ ಪ್ರಜಾಧಿಪತ್ಯಂ ಸರ್ವ ಸಮತ್ವಂ... ಜಗತ್ ಕಲ್ಯಾಣಂ... ಭೂ ವೈಕುಂಠಂ... ದೂರದೊಳ್, ಬಹು ದೂರದೊಳ್, ಕಾಲಗರ್ಭದೊಳ್... ಸಾಮಾನ್ಯಮಾನವ ಸಂಸಾರಂ... ಸತಿಪತಿಗಳ ಶೃಂಗಾರಂ ಮಕ್ಕಳಾಟಂ, ನೋಟಂ, ಕಾವ್ಯಂ, ಕಲಿಯುಗ ಮಹಾ ಕಾವ್ಯಂ ! ಸುಮಧುರಂ... ದಿವ್ಯಂ.... ಸುಶ್ರಾವಂ !' ಎಂಬೆಲ್ಲ ಭವಿಷ್ಯ ದೃಶ್ಯಾವಳಿಯನ್ನೂ ಕಾಣುತ್ತೇವೆ.

ವ್ಯಾಸ ಭಾರತದ ಯುದ್ಧಾನಂತರದ ಆ ಕಥಾ ವಿಸ್ತಾರವನ್ನೂ ದರ್ಶನವನ್ನೂ ಒಂದು ರೀತಿಯಲ್ಲಿ ಈ ನಾಟಕದ ಕಥಾಸ್ವರೂಪ ಪ್ರತಿಮಿಸುತ್ತದೆ. ವ್ಯಾಸರ ಕಥೆ, ಸಶರೀರಿ ಆತ್ಮದ ಸ್ವರ್ಗಾರೋಹವನ್ನೂ ಅದಕ್ಕೆ ಪೂರ್ವ ಸಿದ್ಧತೆಯಾಗಿ ಮಹಾ ದುಃಖಕ್ಲೇಶಗಳ ಆತ್ಮಶೋಧನ ಪರಂಪರೆಯನ್ನೂ, ಕಡೆಗೆ ಮರ್ತ್ಯಾವರಣದಲ್ಲಿ ಬಣ್ಣಗೆಡದೆ ಗೆದ್ದು ಶುದ್ಧ ಸುವರ್ಣವಾಗಿ ಪುಟವಾಗಿದ್ದ ಆತ್ಮವೂ ಸ್ವರ್ಗದಲ್ಲಿ ಸೂಕ್ಷ್ಮ ಅಸೂಯೆಯ ತೆಳುಕಂದು ಬಣ್ಣಗೊಂಡುದನ್ನೂ, ಅದರಿಂದ ದೇಹಗೊಂಡ ಆತ್ಮದ ಸ್ವಭಾವವೇ ಅಷ್ಟು ಎಂಬ ಅರಿವು ಪಡೆದು ಆ ಆತ್ಮ ಶರೀರದಿಂದ ಮುಕ್ತವಾಗಿ ಮುಕ್ತ ಲೇಪ–ಮುಕ್ತಾವರಣವಾಗುವುದನ್ನೂ ನಮಗೆ ಧ್ವನಿ ಪೂರ್ಣವಾಗಿ ಕಾಣಿಸುತ್ತದೆ. ಅಷ್ಟೇ ಅಲ್ಲ, ಮಹಾಭಾರತದಲ್ಲಿ ಎಷ್ಟೆಲ್ಲ ಮಹದ್ ಚೇತನಗಳಿದ್ದರೂ, ಸದೇಹಿಯಾಗಿ ಸ್ವರ್ಗಮಾರ್ಗಿಯಾದ ಆತ್ಮ, ಕಡೆಗೆ ಮುಕ್ತವಾದ ಮಹಾತ್ಮ, ಒಂದೇ ಒಂದು. ಆ ಒಂದು ಆತ್ಮದ ಆ ಸಿದ್ಧಿಗೆ ಎಷ್ಟೆಲ್ಲ ಕುರುಕ್ಷೇತ್ರವಾಗಬೇಕು?– ಎಂಬ ದರ್ಶನವನ್ನೂ ವ್ಯಾಸಭಾರತದ ಆ ಭಾಗದ ಕಥೆ ನೀಡುವಂತೆ ಅನುಭವವಾಗುತ್ತದೆ. ಇಷ್ಟೇ ಏಕೆ? ಇನ್ನೂ ಎಷ್ಟೋ ವಿಶೇಷ ಅನುಭೂತಿಗಳನ್ನೂ ಆ ಕಾವ್ಯ ನೀಡಬಲ್ಲದು. ಅದೆಲ್ಲದರ ವಿವರಣೆ ಇಲ್ಲಿ ಬೇಡ. ಆದರೆ, 'ಶ್ಮಶಾನ ಕುರುಕ್ಷೇತ್ರ' ನಾಟಕ ಮಹಾಭಾರತದ ಒಂದು ದರ್ಶನವನ್ನು – ದ್ವಾಪರ ಯುಗ ಕಂಡ ಮಹಾ ಸತ್ತ್ವಗಳೆಲ್ಲ ಹೇಗೆ ಯುದ್ಧದಲ್ಲಿ ವಿನಾಶಗೊಂಡವು, ಅಷ್ಟೆಲ್ಲವೂ ಧರ್ಮಕ್ಕೇ ಆದರೂ ಎಷ್ಟಿದ್ದರೂ ವಿನಾಶದ ದುಃಖ ಎಷ್ಟು ದುರ್ಭರ, ಎಂಬ ಅನುಭವಪರಂಪರೆಯನ್ನು – ತನ್ನಲ್ಲಿ ಪ್ರತಿಮಿಸಿದೆ. ಮುಂದಿನ ಭಾಗದ ಕಥೆಯಲ್ಲಿ ಇದು ತನ್ನ ವಿಶಿಷ್ಟತೆಯನ್ನು ತೋರಿದೆ. ವ್ಯಾಸರಲ್ಲಿ ಆತ್ಮದ ಪರಿಶೋಧನ – ನಿರ್ಲೇಪನ – ಅನಾವರಣ – ಉತ್ತರಣ ಕಾರ್ಯ ನಡೆಯುತ್ತದೆ, ಮುಂದಿನ ಕಥೆಯಲ್ಲಿ. ವಿನಾಶದ ಶ್ಮಶಾನಮಧ್ಯೆಯೇ ಆತ್ಮಕ್ಕೆ ಭವಮೋಚನವಾಗುವುದು ಸಾಧ್ಯ; ಆದರೆ ಭವ ಬಂಧನದ ಗಾಢತೆ ಭದ್ರತೆಯನ್ನನುಸರಿಸಿ ವಿರೇಚನವಿಧಿಯ ಉಗ್ರತೆ ಇರುತ್ತದೆ, ಎಂಬುದೂ ಅಲ್ಲಿ ಧ್ವನಿತವಾಗಿದೆ. ಇಲ್ಲೀ ನಾಟಕದಲ್ಲಿ, ಇಂದಿನ ಮಹಾವಿನಾಶವೆಲ್ಲ ಮುಂದಿನ ಅಪೂರ್ವಸೃಷ್ಟಿಗೆ ಬಿತ್ತನೆ ನೆಲವಾಗುತ್ತದೆಂಬ, ಎಷ್ಟೇ ಘೋರದಾರುಣವಾದ ಶ್ಮಶಾನವಾದರೂ ಕುರುಕ್ಷೇತ್ರ ಕಲಿಯುಗವನ್ನು ಹಡೆಯುವ ಸೂತಿಕಾಗೃಹವಾಯಿತು ಎಂಬಂಶ ಮಿಡಿತಗೊಂಡಿದೆ. ಮಾರಕವಾದ ಯುದ್ಧೋಗ್ರತೆಯಷ್ಟನ್ನೆ ಚಿತ್ರಿಸುವುದು ಕವಿಕ್ರತು ದರ್ಶನವಲ್ಲ. ಅದರಿಂದಲೆ ನಾಟಕ ಅಷ್ಟಕ್ಕೆ ನಿಲ್ಲದೆ ಭವಿಷ್ಯದ್ದರ್ಶನದಲ್ಲಿ ಪರಿಣಾಮಗೊಳ್ಳುತ್ತದೆ.



ಇದಿಷ್ಟೂ ಒಂದು ವಿವೇಚನೆಯಾಯಿತು. ಕವಿ ನಾಟಕದ ಪಾತ್ರಗಳನ್ನು ನಡೆಸುವಲ್ಲಿ ಹೇಗೆ ಮೂಲಕಾವ್ಯದ ಆಯಾ ಪಾತ್ರಗಳ ಸ್ವಭಾವವನ್ನು ಎಷ್ಟೂ ಮರೆತಿಲ್ಲ ; ಅಷ್ಟೆ ಅಲ್ಲ, ಹೇಗೆ ಆ ಪಾತ್ರಗಳೆ ಇಲ್ಲಿ ಹರಿದು ಬಂದಿವೆ ಬೆಳೆದು ಬಂದಿವೆ ಎಂಬುದನ್ನೂ ಮುಂದೆ ಕಾಣಬಹುದು. ಉದಾಹರಣೆಗಾಗಿ ಭೀಮ ಭಾನುಮತಿಯರಷ್ಟನ್ನೆ ತೆಗೆದುಕೊಳ್ಳಬಹುದು. ಕೌರವಸತಿ ಭಾನುಮತಿ ಮಹಾಭಾರತದಲ್ಲಿ ಯಾವ ಪರಿಣಾಮಕಾರಿಯಾದ ಸ್ವಂತ ಧ್ವನಿಯೂ ಇಲ್ಲದ ಹೆಣ್ಣು. ಪಂಚವಲ್ಲಭೆ ದ್ರೌಪದಿಯ ಮಟ್ಟಕ್ಕಿರಲಿ ಸುಭದ್ರೆಯ ಒರೆಗೂ ಬರುವುದಿಲ್ಲ ಈಕೆ. ಪ್ರತಿನಾಯಕನ ಹೆಂಡತಿಗೆ ಇರಬೇಕಾದ ಯಾವ ಸ್ಪಷ್ಟಗಾತ್ರವೂ ಈಕೆಗಿಲ್ಲ. ಆದರೆ ಆ ಪಾತ್ರ ಹಾಗಿರುವುದೇ ನಿಜ ಸೊಗಸು. ಪ್ರಾರಂಭದಿಂದಲೂ, ಪತಿತಗರ್ಭನಾಗಿ ಹುಟ್ಟಿ ಬೆಳೆದು ಕಟುಪಾಕನಾಗಿ ಪರಿಣಮಿಸಿದ ದುರ್ಯೋಧನನ ಅತ್ಯಂತ ವಿಶಿಷ್ಟವಾದ ತಲೆಬಾಗದ ಪ್ರತಿಷ್ಠೆಗೆ ಭಾನುಮತಿ ಹೇಗೂ ನೆಲೆಯಾಗದೆ ಹಿನ್ನೆಲೆಯಾಗದೆ ಅಬಲವಾಗೇ ಬರುತ್ತಾಳೆ. ಮತ್ತಾವುದಾದರೂ ಸನ್ನಿವೇಶದಲ್ಲಿ ಆವರಣದಲ್ಲಿ ಸಂಗದಲ್ಲಿ ಅಂತಹ ಏನೂ ಮಸುಳಿಸಿದಂತೆ ಕಾಣುತ್ತಿದ್ದಿಲ್ಲದ ಆ ಭಾನುಮತಿ ಕೌರವಸಂಗದಲ್ಲಿ ಹಾಗೆ ತೋರುತ್ತಾಳೆ. ಇವಳೂ ಶ್ಮಶಾನ ಕುರುಕ್ಷೇತ್ರದಲ್ಲಿ ಬರುತ್ತಾಳೆ. ಆದರಿವಳು ಬರಿಯ ನೆಳಲಾಗಷ್ಟೆ ಬರುತ್ತಾಳೆ, ಒಂದೂ ಮಾತಿಲ್ಲದೆ, ಹೊತ್ತ ಮುಸುಕಿನ ಅಸಹಾಯ ಛಾಯೆಯಾಗಷ್ಟೆ ಬಂದು ರಂಗಸ್ಥಲದಲ್ಲಿ ನಿಂತು ಮರೆಯಾಗುತ್ತಾಳೆ. ಈ ನಾಟಕದ ನಾಲ್ಕನೆಯ ದೃಶ್ಯ –

---

* ವ್ಯಾಸಭಾರತದಲ್ಲಿ ಇದೇ ತರದ ಪ್ರಸಂಗ ಬರುತ್ತದೆ. ಕುರುಕ್ಷೇತ್ರದ ವಿಫುಲ ಮಾರಣ ಹೋಮವನ್ನು ಕೃಷ್ಣನಿಗೆ ವರ್ಣಿಸುತ್ತಿರುವ ಗಾಂಧಾರಿ  ಈ ಭಾನುಮತಿಯ

ಅತ್ಯಂತ ಕಡಿಮೆ ಮಾತಿರುವ ದೃಶ್ಯ–ದಲ್ಲಿ ಈಕೆ ಅತ್ತೆ ಮಾವಂದಿರಾದ ಧೃತರಾಷ್ಟ್ರ ಗಾಂಧಾರಿಯರನ್ನು ಹಿಂಬಾಲಿಸಿಕೊಂಡು ಕುರುಕ್ಷೇತ್ರ ರಂಗದಲ್ಲಿ ಕೆಡೆದು ಬಿದ್ದಿರುವ ತನ್ನ ಪತಿಯನ್ನರಸಿ ಹೋಗುತ್ತಾಳೆ, ಸಖಿಯೊಬ್ಬಳ ಜತೆಯಲ್ಲಿ. ಭಾನುಮತಿಯ ಸ್ಥಿತಿಯ ಬಗ್ಗೆ ಕವಿ ಕೊಡುವ ವರ್ಣನೆ ಸೂಚನೆಯಾದರೂ ಇಷ್ಟೆ : 'ಭಾನುಮತಿ ಒಬ್ಬಳು ಸಖಿಯೊಡನೆ ಬರುತ್ತಾಳೆ. ಆಕೆಯ ದುಗುಡ ಮಾತಿಗೆ ಮೀರಿದೆ. ಹುಚ್ಚಳಂತಿದ್ದಾಳೆ.... ಭಾನುಮತಿ ಮುಸುಗು ಹಾಕಿಕೊಂಡು ಶೋಕದ ಛಾಯೆಯಂತೆ ಸಖಿಯೊಡನೆ ಹೋಗುತ್ತಾಳೆ' ಇಷ್ಟೆ. ಒಂದೆರಡು ಮಾತನ್ನಾಡುವುದಾದರೂ ಆಕೆಯ ಸಖಿಯೆ. ಇವಳು ಮೂಕದುಃಖಿನಿ*. ತನ್ನೆಲ್ಲ ಮಕ್ಕಳನ್ನು ಬಲಿಕೊಟ್ಟು ತನ್ನೆಲ್ಲ ರಾಜ್ಯ ವೈಭವವನ್ನೂ ಕಳೆದುಕೊಂಡು ತನ್ನೆಲ್ಲ ಬಲದ ಛಲದ ನಿಧಿಯಾಗಿದ್ದ ಗಂಡನನ್ನೂ ಕಳೆದುಕೊಂಡ ವಿಧವಸ್ಥಿತಿಯಲ್ಲಿರುವ ಆಕೆಯ ದುಃಖವೇನೊ ಹುಚ್ಚೆಡಿಸುವಂಥದೆ ಸರಿ. ಆದರೆ ಅದಕ್ಕೆ ಯಾವ ಉಕ್ತಿಯೂ ಒದಗಲಿಲ್ಲ. ತನ್ನ ಅಂದಿನ ದುಃಖಕ್ಕೆ ಹೇಗೊ ಹಾಗೆಯೆ ಅವಳು ತನ್ನ ಹಿಂದಿನ ವೈಭವ ಮುಂತಾದೆಲ್ಲ ಅನುಭವಕ್ಕೂ ಸಮರ್ಥವಾದ ಮಾತನ್ನು ಒದಗಿಸಲಾರದ ಪ್ರಭಾವ ಬೀರಲಾರದ ವ್ಯಕ್ತಿಯಾಗಿ ಉಳಿಯುತ್ತಾಳೆ. ಅವಳ ನಿರುಕ್ತಿ ಸ್ಥಿತಿಯೆ ಅಪಾರ ಧ್ವನಿ ಪೂರ್ಣವಾಗಿದೆ; ಅವಳ ಪಾತ್ರಸ್ವರೂಪದ ನಿಜನಿಲವನ್ನು ತೋರಿಸುವಂತಿದೆ. ಈ ಭಾನುಮತಿಯ ಈ ಚಿತ್ರಣದ ಜೊತೆಯಲ್ಲಿ 'ವೇಣೀ ಸಂಹಾರ'ದ ಆ ಭಾನುಮತಿಯನ್ನು ಹೋಲಿಸಿ ನೋಡಿದಾಗ ತಿಳಿದೀತು ಯಾವ ಕವಿ ಮೂಲಕಥೆಯ ಪರಂಪರೆಯನ್ನು ಹಿಡಿದಿದ್ದಾರೆ ಎಂಬುದು. ಯುದ್ಧಮಧ್ಯದ ಭಯಂಕರ ಕ್ರಿಯೆಗಳನ್ನು

---

ಗೋಳನ್ನು, ಅವಳ ಮಾತಿಲ್ಲದ ಬರಿಯ ಮೂಕಶೋಕದ ಛಾಯಾ ವರ್ತನವನ್ನು ಮನ ಬಿರಿಯುವಂತೆ ಹೀಗೆ ತಿಳಿಸುತ್ತಾಳೆ : 'ಭಾನುಮತಿ ತನ್ನ ಗಂಡನ ಮುಖವನ್ನೊಮ್ಮೆ ನೋಡುತ್ತಾಳೆ, ಹಾಗೆಯೆ ಅವನ ಮುಖದ ನೆತ್ತರನ್ನು ತನ್ನ ಮುಡಿಯಿಂದ ಒರಸುತ್ತಾಳೆ. ಪಕ್ಕದಲ್ಲೆ ಸತ್ತು ಬಿದ್ದಿರುವ ಮಗ ಲಕ್ಷಣನ ಮುಖವನ್ನೊಮ್ಮೆ ಒರಸಿ ಮುತ್ತಿಟ್ಟು ಮೂಸಿ ಗೋಳಾಡುತ್ತಾಳೆ; ಈ ದೃಶ್ಯವನ್ನು ನಾನು ನೋಡಲಾರೆ', ಎಂದು ಗಾಂಧಾರಿ ಅಳುತ್ತಾಳೆ ಕೃಷ್ಣನ ಮುಂದೆ.

ರಾಮಾಯಣದ ಪ್ರತಿನಾಯಕ ರಾವಣನ ಸತಿ ಮಂಡೋದರಿಯ ಪಾತ್ರದ ಔನ್ನತ್ಯವೇ ಬೇರೆ. ಈಕೆಯ ಪಾತ್ರಮಿತಿಯೆ ಬೇರೆ ಒಂದು ವೇಳೆ ಕವಿ ಈಕೆಯ ಪಾತ್ರವನ್ನು ಮಂಡೋದರಿಯ ಪಾತ್ರದ ನೆಳಲಿನಲ್ಲೆ ನಡೆಸಬಹುದಿತ್ತು. ತನ್ನ ಎಷ್ಟೇ ಬುದ್ಧಿವಾದಕ್ಕೂ ದಕ್ಕದ ಗಂಡ ಎಂತಹ ವಿನಾಶಕ್ಕೆ ತುತ್ತಾದ ಎಂದು ಭಾನುಮತಿ ಗೋಳಿಟ್ಟಂತೆ ವರ್ಣಿಸಿದ್ದರೂ ಆಗುತ್ತಿತ್ತು. ಆದರೆ ಅವಳು ವ್ಯಾಸ ಕಲ್ಪನೆ ಆಗುತ್ತಿದ್ದಳೊ ಹೇಳುವುದು ಕಷ್ಟ ; ಹಾಗೂ ಅವಳಿಗೆ ಈಗಿರುವ ಪ್ರಭಾವರಹಿತ ವಿಶಿಷ್ಟತೆ ಇರುತ್ತಿತ್ತೊ ಯೋಚಿಸಬೇಕು.



ನಿದರ್ಶಿಸಬೇಕಾಗಿರುವಾಗ ದುರ್ಯೋಧನ ಭಾನುಮತಿಯರ ಅಸಹ್ಯ ವಿಪ್ರಲಂಬ ಶೃಂಗಾರವನ್ನು ಇಡೀ ಒಂದು ದೃಶ್ಯದಲ್ಲಿ ಚಿತ್ರಿಸುವ ಮೂರ್ಖತನ ಪ್ರದರ್ಶಿಸಿದ್ದಾನೆ, ಭಟ್ಟ ನಾರಾಯಣ ಕವಿ ಅಲ್ಲಿ. ಮಹಾಭಾರತ ಕವಿ ಕಲ್ಪಿಸಿಕೊಳ್ಳಲಾಗದಿದ್ದ ಭಾನುಮತಿ ಚಿತ್ರವನ್ನು ಅಲ್ಲಿ ಕೊಡಲೆಳೆಸುತ್ತಾನೆ. ೬–೭ ಅಂಕ ಗಾತ್ರದ ನಾಟಕದಲ್ಲಿ ಭಾನುಮತಿ ದುರ್ಯೋಧನ ಶೃಂಗಾರವೊಂದೆ ಒಂದಂಕ ನುಂಗಿಕೊಳ್ಳುತ್ತದೆ. ತೋಲ ತಪ್ಪಿ ಪಾತ್ರ ತಪ್ಪುತ್ತದೆ ಆ ನಾಟಕ. ಮಹಾಭಾರತ ಪರಂಪರೆಯಿಂದ ಪಾತಾಳದಾಳಕ್ಕೆ ಕೆಡೆದುರುಳುತ್ತದೆ. ಶ್ಮಶಾನ ಕುರುಕ್ಷೇತ್ರ ಆ ದೃಷ್ಟಿಯಿಂದಲೂ ಎಷ್ಟು ಶ್ರೇಷ್ಠಸಾಧನೆ ಎಂಬುದನ್ನು ಕಾಣಬಹುದು.

ಭೀಮನ ಪಾತ್ರದ ಚಿತ್ರಣದಲ್ಲಿಯೂ, ಮೂಲಕಾವ್ಯದ ಜೀವವಾಹಿನಿ ಹೇಗೆ ಪರಂಪರಿತವಾಗಿದೆ ಎಂಬುದನ್ನು ವಿವೇಚಿಸಬಹುದು. ಭೀಮ ಮಹಾಭಾರತದಲ್ಲಿ ಮೊದಲಿನಿಂದಲೂ ತಲೆಬಾಗದ ಮಹಾ ಬಲಿ, ಪ್ರತಿಜ್ಞಾವಂತ. ಅವನು ಗೆದ್ದ ಮೇಲೆ ವಿನಮ್ರನಾಗುವುದೇನೂ ಇಲ್ಲ. ವ್ಯಾಸಭಾರತದಲ್ಲಿ ಈ ಭೀಮ ಶೋಕತಪ್ತೆಯಾದ ಗಾಂಧಾರಿಯ ಮುಂದಷ್ಟೆ ಅರೆ ಅಳುಕುತ್ತಾನೆ ! ಆಮೇಲೆ ಅದೂ ಮಾಯವಾಗಿ ದಿನವೂ ಕುರುಡ ಧೃತರಾಷ್ಟ್ರನಿಗೆ ಕೇಳುವಂತೆ, 'ಈ ನನ್ನ ತೋಳೆ ಇವನ ಮಕ್ಕನ್ನು ಬಲಿ ತೆಗೆದುಕೊಂಡಿತು,' ಎಂದೆಲ್ಲ ಚುಚ್ಚು ಮಾತಾಡುತ್ತಾನೆ. ಈ ಅವನ ವರ್ತನವನ್ನು ಸಮರ್ಥಿಸಿ, ಬಿಡಿ, ಆದರೆ ಅವನಿಗೆ ತಾನು ಗೆದ್ದ ಮೇಲೂ ಕೌರವರ ಮೇಲಿದ್ದ ವೈರಮಾಗುವುದೂ ಇಲ್ಲ, ಮಗ್ಗುವುದೂ ಇಲ್ಲ, ಗೆದ್ದ ಹಮ್ಮಿನಲ್ಲಿ ಮತ್ತೂ ಮುಗ್ಗಿದಂತೆ ತೋರುತ್ತದೆ. ಇದೆಲ್ಲದರ ಚಿತ್ರಣವೂ ಈ ನಾಟಕದಲ್ಲಿ ಕಿರಿದರಲ್ಲೆ ಬರುತ್ತದೆ. ಧರ್ಮರಾಯ ಯುದ್ಧ ತಂದ ಮಹಾ ವಿಶ್ವವಿನಾಶವನ್ನು ನೆನೆದು ದುಃಖಿಸುತ್ತಿದ್ದರೆ, ಅರ್ಜುನ ಅವನನ್ನೆ ಅನುಮೋದಿಸುತ್ತಿದ್ದರೆ ಈ ಮಹಾಬಲ, "ವಿಕಾಸವಾಗುವುದರೊಳೆ ವಿನಾಶಮೈತಂದಪುದು. ಬೋಧನೆಯ ಮಾರ್ಗಕ್ಕೆ ಶತಮಾನಗಳೆ ವೇಳ್ಕುಂ, ವಿಪ್ಲವದ ಪಥವಿಡಿಯೆ ದಿನಮೊಂದೆ ಸಾಲ್ಗುಂ. ಯುಗಯುಗಗಳೆದೆಗೆ, ಒರ್ದಿನಂ ಗದೆಗೆ!" ಎಂದೇ ತನ್ನ ಮಹಾ ಬಲ ಸಿದ್ಧಾಂತವನ್ನು ಪ್ರತಿಪಾದಿಸುತ್ತಾನೆ. ದ್ರೌಪದಿಯೂ ಅದನ್ನೆ ಸಮರ್ಥಿಸುತ್ತಾಳೆ. ಅಷ್ಟೆ ಅಲ್ಲ, ನೀರು ಬೇಡಿದ ಒಬ್ಬ ಮರಣೋನ್ಮುಖ ಸೈನಿಕನಿಗೆ ನೀರು ನೀಡಲು ಧರ್ಮರಾಯ ಸಹಜವಾಗಿಯೆ ಸಹಾನುಭೂತಿ ತೋರಿದರೆ ಈ ವೀರ, 'ಅಗ್ರಜಾ, ಮೊದಲ್ ಅವನಾರವನ್ ? ಕೇಳದನ್ ! ನಮ್ಮವನೊ ? ಕೌರವನ ಪಡೆಯವನೊ ?' ಎಂದಾರ್ಭಟಿಸುವಷ್ಟು ಕ್ಷಾತ್ರ ಮೆರೆಯುತ್ತಾನೆ ! ಅಣ್ಣನ ಮಾತೂ ಅವನಿಗೆ ಅಪಶ್ರುತಿ. ಆದರೆ ಇಂಥವನಿಗೂ

ಬುದ್ಧಿ ಕಲಿಸುತ್ತದೆ ಯುದ್ಧಭೂಮಿ. ಹಾಗೂ ಧರ್ಮರಾಯನ ಕೈಯ ನೀರನ್ನು ಕುಡಿದು ಸಾಯುತ್ತಿರುವ ಕೌರವರ ಕಡೆಯ ಆ ಅಜ್ಞಾತ ವೀರಭಟನ ಅಸಾಧಾರಣ ವರ್ತನೆ : "ಕೌರವ ಸ್ವಾಮಿಯೊಳ್ ಅಪರಾಧಮೆಸಗಿದೆನೆ ತುತ್ತತುದಿಯೊಳ್ ಪಾಂಡವರ ಕೈನೀರನೀಂಟಿ? ಮನ್ನಿಸೆನ್ನನ್ ಪ್ರಭೂ ! ಮನ್ನಿಸಯ್ !' ಎಂದು ಹೇಳಿ ಆ ಭಟ ಸತ್ತರೆ ಭೀಮನೇನೊ ಮೆಚ್ಚು ಮಾತನಾಡುತ್ತಾನೆ. ಆದರೆ ಅವನಿಗೆಂಥ ಘಾತವಾಗಲಿಲ್ಲ ಇದರಿಂದ? ಈ ಭೀಮ ಕಡೆಯಲ್ಲಿ ಮಕ್ಕಳ ಚಿತೆಗೆ, ಅದರಲ್ಲೂ ಅದರಲ್ಲಿದ್ದ ತನ್ನ ಮಗ ಘಟೋತ್ಕಚನ ಕಳೇಬರಕ್ಕೆ ಬೆಂಕಿ ಮುಟ್ಟಿಸುವಾಗ ಆದ ಅಳಲು ತಂದ ಮಬ್ಬರಿವು ಅಂತಹವನನ್ನೂ ತುಸ ಮಾಗಿಸುತ್ತದೆ. (ಶ್ಮಶಾನ ಎಲ್ಲರಹಮ್ಮ ನುಂಗಿ ನೀರು ಕುಡಿದದ್ದಲ್ಲವೆ?) ಅವನಾಡುವ ಮಾತು, 'ಅಣ್ಣಾ, ಕೊಲೆಗಾರನ್ ಆನ್ ಎಂಬುದನ್ನು ಈಗಳರಿತೆನ್. ಈ ಎನ್ನ ಮುದ್ದು ಶಿಶುಗಳ ಪೆಣಗಳೆಡೆ ನಿಂತು, ಗಾಂಧಾರಿ ಧೃತರಾಷ್ಟ್ರರಳಲಾಳಮಂ ತಿಳಿದೆನ್–' ಎಂಬ ಮಾತು ಅವನಿಗೇನೊ ಶಾಶ್ವತ ಜ್ಞಾನೋದಯವಾದಂತೆ ತೋರಿಸೀತು, ಆದರೆ ಮರುಕ್ಷಣವೆ, ಕುಂತಿ ಕರ್ಣನ ಶವಸಂಸ್ಕಾರವನ್ನೂ ಆ ಮಕ್ಕಳ ಚಿತೆಯಲ್ಲೆ ಮಾಡಬೇಕೆಂದಾಗ ಹಿಂದು ಮುಂದರಿಯದೆ ಭೀಮ ಪ್ರತಿಭಟಿಸುವಾಗ ತಿಳಿಯುತ್ತದೆ, ಅವನಿಗಾದ ಅನುಭವ ಚಿತಾದರ್ಶನದಿಂದ ಮಾತ್ರ ಬಂದದ್ದೆಂದು. ವಿಧಿವಕ್ರತೆಯೆಂದರೆ, ಕರ್ಣನ ನಿಜವನ್ನು ಕುಂತಿ ತಿಳಿಸುವ ಮುನ್ನವೆ ಅಶ್ವತ್ಥಾಮ ಬಂದು ಕೌರವನ ಅಂತಿಮೇಚ್ಛೆಯನ್ನು ನೆರವೇರಿಸುವ ಸಲುವಾಗಿ ಅವನ ಶವವನ್ನ ಕೊಂಡೊಯ್ಯುತ್ತಾನೆ. ಗೆಳೆಯರಿಬ್ಬರ ಶವಸಂಸ್ಕಾರವನ್ನೂ ಒಟ್ಟಿಗೆ ಮಾಡುವುದಕ್ಕಾಗಿ. ಆಗ ತಿಳಿಯುತ್ತದೆ ಕರ್ಣನ ನಿಜ ಗತಿ. ಧರ್ಮರಾಯ ಅರ್ಜುನರ ವಿಷಾದ ಒಂದು ರೀತಿಯದಾದರೆ ಭೀಮನದೆ ಮತ್ತೊಂದು ಬಗೆಯದು. 'ತಾಯೇ, ಏನನೆಸಗಿರ್ಪೆ ನೀನ್?' ಎಂದು ಧರ್ಮರಾಯ,* 'ಓ ಕೃಷ್ಣಾ, ಪುಸಿವೇಳ್ದು ಕೊಲಿಸಿದೆಯಾ !' ಎಂದು ಅರ್ಜುನ ದುಃಖಿಸಿದರೆ, 'ಕಡೆಗುಂ ಪೊಲಸಾದುದೀ ಭಾರತ ಸಂಗ್ರಾಮಂ' ಎಂದಷ್ಟೆ ಭೀಮ ಉದ್ಗರಿಸುತ್ತಾನೆ. ಅವನಂತೆಯೆ ಇವೆ ಅವನ ಮಾತೂ ಕೂಡ. ಈ ವ್ಯಕ್ತಿ ವ್ಯಾಸ

* ಕುಂತಿಯಿಂದ ಕರ್ಣ ರಹಸ್ಯವನ್ನು ತಿಳಿದ ಧರ್ಮರಾಯ ವ್ಯಾಸಭಾರತದಲ್ಲಿ ಅಪಾರ ದುಃಖ ಅನುಭವಿಸುತ್ತಾನೆ. ತನ್ನೆಲ್ಲ ಮಕ್ಕಳೂ ಬಂಧು ಬಾಂಧವರೂ ಹತವಾದುದಕ್ಕಿಂತಲೂ ಕರ್ಣನನ್ನು ಕೊಂದದ್ದರಿಂದ ಮಿಗಿಲಾದ ಯಾತನೆ ತನಗಾಗಿದೆ ಎಂದು ಆತ ಹೇಳಿ, ಮುಂದೆ ಅವನ ಸಮಸ್ತ ವೃತ್ತಾಂತವನ್ನೂ ಕೇಳಿ ತಿಳಿದು ದೀರ್ಘ ದುಃಖಿತನಾಗುತ್ತಾನೆ. ಇಲ್ಲಿ ಅದೆಲ್ಲ ಮತ್ತೂ ನಾಟಕೀಯವಾಗಿ ಒಂದೇ ಮಾತಿನಲ್ಲಿ ವ್ಯಕ್ತವಾಗಿದೆ.



ಭಾರತದ ಪರಂಪರೆಯಲ್ಲೆ ಬೆಳೆದವನು. ಅದೇ ಜೀವ ದ್ರವ್ಯ, ಅದೇ ರಕ್ತ ಮಾಂಸವೆಲ್ಲ. ಆದರೀತ ಅಲ್ಲಿನ ಪ್ರಕೃತಿಯಲ್ಲ.

ಇಲ್ಲಿ ಮೂಲ ಕಾವ್ಯದಿಂದ ಸ್ವಲ್ಪ ಭಿನ್ನವಾಗಿರುವಂತೆ ತೋರುವ ಪಾತ್ರಗಳೆಂದರೆ ಕೃಷ್ಣ ಕೌರವರದು. ಸಮಗ್ರ ಭಾರತ ಕಾವ್ಯವನ್ನು ಮನದಟ್ಟು ಮಾಡಿಕೊಂಡಾಗ ತಿಳಿಯುತ್ತದೆ – ಇವರೂ ಅದೇ ಪರಂಪರೆಯಲ್ಲಿ ಸಂಪೂರ್ಣವಾಗಿ ಬೆಳೆದು ಬಂದಿರುವವರು ಎಂಬುದು. ಅದರ ವಿವೇಚನೆಯನ್ನೇ ಬೇಕಾದರೆ ಬೇರೆಡೆ ಪ್ರತ್ಯೇಕವಾಗಿ ಮಾಡಬಹುದು. ಇಲ್ಲಿನ ಗಾತ್ರಕ್ಕದು ಕೈ ಮಿಕ್ಕು ಬೆಳೆಯುತ್ತದೆ.

ಒಟ್ಟಾರೆಯ ವಿವೇಚನೆಯಿಂದ ತಿಳಿಯುವುದಾದರೂ ಇಷ್ಟೆ, ಈ ಶ್ಮಶಾನ ಕುರುಕ್ಷೇತ್ರ ಪಂಪ ಕುಮಾರವ್ಯಾಸರ ಓದುಗರಿಗೆ ತಿಳಿದಿಲ್ಲದಿದ್ದ ಮಹಾಭಾರತದ ಒಂದು ಹೊಸ ಲೋಕವನ್ನು, ವ್ಯಾಸರ್ಷಿಗಳು ಕಂಡ ಪರಂಪರೆಯಲ್ಲೇ ಪುಷ್ಟವಾಗಿ ಬಂದ ಹೊಸ ಕಾಣ್ಕೆಯನ್ನು ನೀಡುತ್ತದೆ. ಇನ್ನು ಮುಂದೆ 'ಬೆರಳ್‌ಗೆ ಕೊರಳ್' ನಾಟಕವನ್ನು ವಿವೇಚಿಸಬಹುದು.

'ಬೆರಳ್‌ಗೆ ಕೊರಳ್' ನಾಟಕದ ವಸ್ತು ಏಕಲವ್ಯನ ಕಥೆಯೆಂದಷ್ಟೆ ಸ್ಥೂಲವಾಗಿ ಹೇಳುವುದುಟು. ಈ ಕಥೆ ಮೂಲ ಕಥೆಯ ಪರಂಪರೆಯಲ್ಲೆಷ್ಟರಮಟ್ಟಿಗೆ ಬೆಳೆದು ವಿಕಾಸವಾಗಿ ಬಂದಿದೆ ಎಂಬುದನ್ನೂ ನೋಡಬಹುದು. ವ್ಯಾಸಭಾರತದಲ್ಲಿ ಬರುವ ಕಥಾಸ್ವರೂಪ ಹೀಗಿದೆ :

ದ್ರೋಣರ ಕೌಶಲವನ್ನು ಕೇಳಿದ ಸಾವಿರಾರು ರಾಜರು ರಾಜಕುಮಾರರು ಧನುರ್ವೇದವನ್ನು ತಿಳಿಯುವ ಬಯಕೆಯಿಂದ ಅವನಲ್ಲಿಗೆ ಬರತೊಡಗಿದರು. ಹೀಗೆ ಬಂದವರಲ್ಲಿ ನಿಷಾಧರಾಜನಾದ ಹಿರಣ್ಯಧನುವಿನ ಮಗ ಏಕಲವ್ಯನೂ ಒಬ್ಬ. ಅವನು ಬೇಡನೆಂದು ತಿಳಿದು ದ್ರೋಣರು ಏಕಲವ್ಯನನ್ನು ಶಿಷ್ಯನನ್ನಾಗಿ ತೆಗೆದುಕೊಳ್ಳಲಿಲ್ಲ. ದ್ರೋಣರ ಅಡಿಯನ್ನು ಮುಡಿಯಿಂದ ಮುಟ್ಟಿ ನಮಿಸಿ ಕಾಡಿಗೆ ಹೋಗುತ್ತಾನೆ. ಅಲ್ಲಿ ಮಣ್ಣಿನಿಂದ ದ್ರೋಣರ ಪ್ರತಿಮೆ ಮಾಡಿಕೊಳ್ಳುತ್ತಾನೆ. ಅದನ್ನೇ ಆಚಾರ್ಯನೆಂದು ಸದಾ ಆರಾಧಿಸಿ ಪರಮ ಶ್ರದ್ಧೆಯಿಂದ ಅಭ್ಯಾಸ ಮಾಡಿ ಬಾಣಪ್ರಯೋಗದಲ್ಲಿ ನಿಷ್ಣಾತಿ ಪಡೆದ. ಒಂದು ದಿನ ಕೌರವ ಪಾಂಡವರಿಬ್ಬರೂ ದ್ರೋಣರ ಅನುಮತಿ ಪಡೆದು ರಥದಲ್ಲಿ ಕುಳಿತು ಬೇಟೆಗೆ ಹೊರಟರು. ಸೇವಕನೊಬ್ಬ ನಾಯೊಂದನ್ನು ತೆಗೆದುಕೊಂಡು ಅವರ ಹಿಂದೆಯೇ ಹೊರಟ. ಕಾಡಿನಲ್ಲಿ ಅಲ್ಲಿ ಇಲ್ಲಿ ಅಡ್ಡಾಡಿದ ಆ ನಾಯಿ ಬೇಡನೊಬ್ಬನ ಬಳಿ ಬಂದಿತು. ಅವನ ಕರಿಮೈ ಕೊಳಕು ವಾಸನೆ ಕೃಷ್ಣಾಜಿನಗಳನ್ನು ಕಂಡು ಅದು ಬೊಗುಳಿತು. (ಪ್ರಾಕೃತರನ್ನು

ಕಂಡು ಗದರಿಕೊಳ್ಳುವ ನಾಗರಿಕರಂತೆ!) ಒಡನೆಯೆ ಅವನು ತನ್ನ ಕೈಚಳಕದಿಂದ ಅದರ ಬಾಯಿಗೆ ಒಮ್ಮೆಲೇ ಏಳು ಬಾಣ ತೂರಿದ. ಬಾಣತುಂಬಿದ ಬಾಯಿಂದ ನಾಯಿ ಪಾಂಡವವೀರರ ಬಳಿ ಓಡಿತು. ಅದನ್ನು ನೋಡಿದ ಅವರಿಗೆ ಪರಮಾಶ್ಚರ್ಯವಾಯಿತು. ಬಾಣ ಪ್ರಯೋಗದ ಲಾಘವವನ್ನೂ ಶಬ್ದವೇಧಿತ್ವವನ್ನೂ ಅವರು ತುಂಬಾ ಹೊಗಳಿದರು ; ತಮ್ಮ ಕೌಶಲದ ಬಗ್ಗೆ ಅವರಿಗೆ ನಾಚಿಕೆಯೂ ಆಯಿತು. ಅವುಗಳನ್ನು ಎಚ್ಚಂಥ ವನವಾಸಿಯನ್ನು ಹುಡುಕಿಕೊಂಡು ಹೊರಟ ಅವರು ನಿರಂತರವಾಗಿ ಬಾಣಪ್ರಯೋಗ ಅಭ್ಯಾಸ ಮಾಡುತ್ತಿದ್ದ ಏಕಲವ್ಯನನ್ನು ಕಾಣುತ್ತಾರೆ. ಸಂಪೂರ್ಣ ಅಪರಿಚಿತನಾದ ಆ 'ವಿಕೃತದರ್ಶನ'ನ್ನು ಕಂಡು, ಅವರು 'ಯಾರು ನೀನು ? ಯಾರ ಮಗ ?' ಎಂದು ಕೇಳುತ್ತಾರೆ. 'ನಿಷಾಧ ಅಧಿಪತಿ ಹಿರಣ್ಯಧನುಷನ ಮಗ ನಾನು ; ವೀರರೆ, ದ್ರೋಣಶಿಷ್ಯ ನಾನು. ಧನುರ್ವೇದದಲ್ಲಿ ಶ್ರಮವುಳ್ಳವನೆಂದು ತಿಳಿಯಿರಿ.' ಎಂದು ಏಕಲವ್ಯ ಹೇಳುತ್ತಾನೆ. ಅವನೆಲ್ಲ ವೃತ್ತಾಂತವನ್ನು ತಿಳಿದ ಅವರು ಹಸ್ತಿನಾವತಿಗೆ ಹಿಂತಿರುಗಿ ಹೋಗಿ ದ್ರೋಣರಿಗೆ ತಾವು ಕಂಡ ಸಮಸ್ತ ಅದ್ಭುತವನ್ನು ಹೇಳುತ್ತಾರೆ. ಕೌಂತೇಯನಾದ ಅರ್ಜುನ ಏಕಲವ್ಯನನ್ನೇ ಸದಾ ನೆನೆದುಕೊಳ್ಳುತ್ತ ದ್ರೋಣರ ಹತ್ತಿರ ಹೋಗುತ್ತಾನೆ. ಇದನ್ನು 'ಪ್ರಣಯ'ದಿಂದ ಹೇಳುತ್ತಾನೆ. 'ಆಚಾರ್ಯ, ತಾವು ನನ್ನನ್ನು ಅಪ್ಪಿಕೊಂಡು ಪ್ರೀತಿಯಿಂದ ಹೀಗೆಂದಿರಿ : ನನ್ನ ಶಿಷ್ಯರಲ್ಲಿ ಯಾರೂ ನಿನ್ನನ್ನು ಮೀರಿಸರು. ನೀನು ವಿಶಿಷ್ಟವಾಗುವೆ, ಎಂದು. ಹಾಗಿದ್ದರೇಕೆ ನನ್ನ ವಿಶಿಷ್ಟತೆಯ ಮತ್ತೊಬ್ಬ, ಬೇಡರಾಜನ ಮಗನೊಬ್ಬ, ಈ ಲೋಕದಲ್ಲಿದ್ದಾನೆ ?' ಒಂದು ಮುಹೂರ್ತಕಾಲ ದ್ರೋಣರು ಚಿಂತಿಸಿ ಮಾಡಬೇಕಾದುದನ್ನು ನಿಶ್ಚಯಿಸಿದರು. ಸವ್ಯಸಾಚಿಯನ್ನು ಕರೆದುಕೊಂಡು ನೈಷಧನ ಬಳಿಗೆ ಬಂದರು. ಕೊಳೆಮೆಯ್ಯ ಸಿಕ್ಕುಮುಡಿಯ ಹರುಕು ಬಟ್ಟೆಯ ಧನುಷ್ಪಾಣಿಯಾದ ಏಕಲವ್ಯ ಎಡೆಬಿಡದೆ ಬಾಣಪ್ರಯೋಗಿಸುತ್ತಿರುವುದನ್ನು ಅವರು ಕಂಡರು. ತನ್ನೆಡೆಗೆ ಬರುತ್ತಿರುವ ದ್ರೋಣರನ್ನು ಕಂಡ ಏಕಲವ್ಯ ಮುನ್ನಡೆದು ಹೋಗಿ ಅವರ ಅಡಿಮುಟ್ಟಿ ನೆಲದ ಮೇಲೆ ಬಾಗಿ ನಮಸ್ಕರಿಸಿದನು. ಆ ಬೇಡ ದ್ರೋಣರನ್ನು ವಿಧಿವತ್ತಾಗಿ ಪೂಜಿಸಿ ತಾನವರ ಶಿಷ್ಯನೆಂದು ಅವರಿಗೆ ನಿವೇದಿಸಿಕೊಂಡು ಬೊಗಸೆಗೈ ಮಾಡಿಕೊಂಡು ಮುಂದೆ ನಿಂತನು. ಆಗ ಏಕಲವ್ಯನಿಗೆ ದ್ರೋಣರು ಹೀಗೆಂದು ಕೇಳಿದರು : 'ಶಿಷ್ಯನೇ ಆಗಿದ್ದರೆ ನನಗೆ, ವೀರ, ನನ್ನ ವೇತನವನ್ನು ಕೊಡು ; ಇದನ್ನು ಕೇಳಿ ಪ್ರೀತನಾದ ಏಕಲವ್ಯ, 'ಏನು ಹೇಳಿ, ಭಗವನ್, ಆಜ್ಞಾಪಿಸಿ, ಗುರುವೆ ! ಹೇಳಿ ; ನನ್ನ ಗುರುವಿಗೆ ಕೊಡಬಾರದ್ದು ಏನೂ ಇಲ್ಲ, ಹೇ ಬ್ರಹ್ಮವಿತ್ತಮ !' 'ಹೆಬ್ಬೆರಳನ್ನು, ನಿನ್ನ ಬಲಗೈ ಹೆಬ್ಬೆರಳನ್ನು



ಕೊಡು!' ದ್ರೋಣರ ಈ 'ದಾರುಣ'ವಾದ ಮಾತನ್ನು ಕೇಳಿದ. 'ಸತ್ಯದಲ್ಲೆ ಸದಾ ನಿಯತ'ನಾದ ಏಕಲವ್ಯ, ತನ್ನ ಪ್ರತಿಜ್ಞೆಯನ್ನು ಕಾಪಾಡಲು 'ಹೃಷ್ಟ ವದನ'ನಾಗಿ 'ಅದೀನಮಾನಸ'ನಾಗಿ ತತ್‌ಕ್ಷಣವೇ ಆ ಬೆರಳನ್ನು ಕತ್ತರಿಸಿ ಅವರಿಗೆ ಒಪ್ಪಿಸಿದನು. ಇದಾದಮೇಲೆ ಅವನು ತನ್ನುಳಿದ ಬೆರಳುಗಳಿಂದಲೆ ಬಾಣಬಿಡುತ್ತಿದ್ದ. ಆದರೆ ಮೊದಲ ವೇಗವಿರುತ್ತಿರಲಿಲ್ಲ. ಅದರಿಂದ ಅರ್ಜುನ 'ಪ್ರೀತಮನ'ನಾದ, 'ವಿಗತಜ್ವರ'ನಾದ. 'ಬೇರಾರೂ ಅರ್ಜುನನ್ನು ಸರಿಗಟ್ಟರು' ಎಂಬ ದ್ರೋಣರ ಮಾತೂ ಸತ್ಯವಾಯಿತು. ದ್ರೋಣರಿಗೆ ಮತ್ತಿಬ್ಬರು ಶಿಷ್ಯರು. ಭೀಮ ದುರ್ಯೋಧನರು ಗದಾಯೋಗ್ಯರಾದರು – ಸದಾ 'ಸಂಬದ್ಧ ಮಾನಸ'ರಾದರು.'

ಆದಿಪರ್ವದ ೧೩೩ನೆಯ ಅಧ್ಯಾಯದಲ್ಲಿ (೩೦–೬೦) ೩೦ರಷ್ಟೇ ಶ್ಲೋಕಗಳಲ್ಲಿ ವರ್ಣಿತವಾಗಿರುವ ಮನಕರಗುವ ಕಥೆ ಇದು. ಇಲ್ಲಿ ನಿರೂಪಿಸಿರುವ ಏಕಲವ್ಯಕಥೆ ಮೂಲದ ನಿಷ್ಠುರ ಅನುವಾದವಷ್ಟೇ. ಲಕ್ಷ ಸಮೀಪದಷ್ಟು ಸಂಖ್ಯೆಯ ಶ್ಲೋಕಗಳಲ್ಲಿ ವರ್ಣಿತವಾಗಿರುವ ವಿಸ್ತಾರ ಸಾಗರ ಸಮಾನವಾದ ಭಾರತ ಕಥೆಯಲ್ಲಿ ಇದೆಷ್ಟು ಮಹಾ ಗಾತ್ರದ ಕಥೆ. ಆದರೆ ಹಾಗೆಂದು ವ್ಯಾಸರು ಆ ಕಥೆಯನ್ನು ರವಷ್ಟೂ ನಿರ್ಲಕ್ಷಿಸಿಲ್ಲ. ಮೇಲಾಗಿ ಯಾವ ರಾಗದ್ವೇಷವೂ ಇಲ್ಲದೆ ಉದ್ವೇಗವೂ ಬಾರದಂತೆ ನಿರಪೇಕ್ಷಕವಾಗಿಯೇ ನಿಷ್ಠುರ ವಸ್ತುನಿಷ್ಠತೆಯಿಂದಲೆ ಅದನ್ನು ನಿರೂಪಿಸಿದ್ದಾರೆ. ನಾಲ್ಕೈದು ಮಾತ್ರ ಮಾತಾಡುವ ಏಕಲವ್ಯನ ಪಾತ್ರ ತೋರಿದ ಮಹೋನ್ನತಿ ಮುಂದಿನ ಮಹಾಭಾರತ ಜೀವನದ ಮೇಲೆ ಅಗಾಧ ಪರಿಣಾಮಮಾಡುವಷ್ಟು ಅಗಣ್ಯವಾದದ್ದು. ಗುರುಭಕ್ತಿಗೆ ಪರಮಶ್ರದ್ಧೆಗೆ ಸಂಕೇತವಾಗುತ್ತಾನೆ ಅವನು, ಮುಂದೆ ಬಂದ ಭಾರತ ಕಥೆಯಲ್ಲಿ, ಆದರೆ ಇದಷ್ಟೆ ಆ ಪಾತ್ರ ಧ್ವನಿಸುತ್ತಿರುವ ಅರ್ಥವ್ಯಾಪ್ತಿ ಅಲ್ಲ. ಅದು ಹೋಗಲಿ, ಭಾರತದಲ್ಲಿರುವ ಏಕಲವ್ಯ ಕಥೆ ವಿಷಮಭಾವನೆಗಳನ್ನೂ ಹುಟ್ಟಿಸುವುದು ಅಸಾಧ್ಯವಲ್ಲ. ಕುಲ ಜಾತಿ ಕಾರಣಕ್ಕಾಗಿ ಶಿಕ್ಷಣ ವಂಚಿತನಾಗುವುದೂ ಅಲ್ಲದೆ, ಮಹಾಸಮರ್ಥನೂ ಶ್ರದ್ಧಾವಂತನೂ ಆದ ಬೇಡನೊಬ್ಬ – ಬೇಡರಾಜ ಅವನು. ಸಾಮಾನ್ಯ ಪ್ರಜೆಯೂ ಅಲ್ಲ – ತನಗೆ ಹಿಂದೆ ಶಿಕ್ಷಣ ಕೊಡದೆ ವಂಚಿಸಿದ್ದ ಗುರುವೊಬ್ಬನಿಗೆ ಗುರುದಕ್ಷಿಣೆಯಾಗಿ ತನ್ನ ಧನುರ್‌ವಿದ್ಯೆಯ ಜೀವಧಾತುವೇ ಆದ ಹೆಬ್ಬೆರಳನ್ನು ಬಲಿಕೊಡುವ ದಾರುಣ ಸನ್ನಿವೇಶ ಉಂಟಾಯಿತು ಎಂದರೆ ಅದೆಷ್ಟು ಕೆಟ್ಟಕಾಲವಿದ್ದಿರಬೇಕು, ಎಂಬೆಲ್ಲ ಭಾವನೆಗಳೂ ಇಂದಿನ ಓದುಗರಲ್ಲಿ ಬಾರದಿರವು. ಹೀಗಿರುವುದರಿಂದಲೆ ಆ ಕಥೆಯನ್ನು ಆ ಯುಗದ ಆವರಣದಿಂದ ಈ ಯುಗಸ್ಥಿತಿಗೆ ನಾಟಿಹಾಕ ಬೇಕಾದರೆ, ಹುಲುಸಾಗಿ ಬೆಳೆಸಬೇಕಾದರೆ ಅದಕ್ಕೆ

ಬೇರೆ ಮಣ್ಣು ನೀರು ಗೊಬ್ಬರವನ್ನೆ ಹಾಕಬೇಕಾಗುತ್ತದೆ, ಹೊಸ ಕ್ರಿಮಿನಾಶಕಗಳನ್ನೆ ಅದಕ್ಕೆ ಸಿಂಪಡಿಸಬೇಕಾಗುತ್ತದೆ. ಮೇಲಾಗಿ, ಆ ಗಿಡಕ್ಕೆ ಅದರ ಪೂರ್ವದ ತಳಿಯ ಪ್ರಧಾನಸ್ವರೂಪವನ್ನು ಕೆಡಿಸದಂತಹ ಮತ್ತೊಂದು ತಳಿಯಕೂಡೆ ಕಸಿಕಟ್ಟಿ ಪುಷ್ಟವಾದ ನಿರೋಗಿಯಾದ ಹೊಸ ತಳಿಯನ್ನು ಸಿದ್ಧ ಮಾಡಬೇಕಾಗುತ್ತದೆ. ಇಲ್ಲ, ಅನಾಮತ್ ಹಾಗೆಯೆ ಅದನ್ನು ಇಂದಿಗೆ ತರುವುದರಿಂದ ಆಕ್ರೋಶವಷ್ಟೆ ಹುಟ್ಟೀತು. ದ್ರೋಣರನ್ನೂ, ಆ ವರ್ಗವನ್ನೂ ಕುರಿತು ಕುದಿತ ; ಅರ್ಜುನನನ್ನೂ, ಆತನ ವರ್ಗದವರನ್ನೂ ಕಂಡು ತೀವ್ರ ಕೋಪ ಅಸಮಾಧಾನ ಮಾತ್ರವೇ ಅದರಿಂದ ಹುಟ್ಟೀತು. ಪ್ರಾಚೀನ ಭಾರತದ ಹತಭಾಗ್ಯ ಗತಿಯನ್ನು, ಉತ್ತಮರ ಶೋಷಣವಿಧಾನವನ್ನು ಮಾತ್ರವೆ ಅದರಿಂದ ಕಾಣಬಹುದು. ಎಷ್ಟೆಲ್ಲ ಏಕಲವ್ಯಸತ್ತ್ವರು ಹೀಗೆಯೇ ಬಲಿಗೊಂಡು ಹೋದರೋ ಎಂದು ನಿಟ್ಟುಸಿರನ್ನೂ ಬಿಡಬಹುದು. ಕಡೆಗೆ ಅಂತಹ ಯುಗವನ್ನೇ, ಅಷ್ಟೇ ಅಲ್ಲ, ಆ ಮೂಲಕೃತಿಯನ್ನೆ ಧಿಕ್ಕರಿಸುವ ಕೋಪಕ್ಕೆ ಪಕ್ಕಾದರೂ ಆಶ್ಚರ್ಯವಿಲ್ಲ. ಆದ್ದರಿಂದ ಆ ಮೂಲಕಥೆಯನ್ನು ಕಸಿಮಾಡಿಕೊಂಡು ನಮ್ಮ ಯುಗಕ್ಕೆ ನಾಟಿಮಾಡಿಕೊಳ್ಳಬೇಕೆಂದದ್ದು. ಆ ಕಥೆಯ ಮೂಲ ಜೀವ ಬಿಂದು ಯಾವುದೊ ಅದಕ್ಕೆ, ಆ ವಸ್ತುವಿನ ವೈಶಿಷ್ಟ್ಯವೇನೋ ಅದಕ್ಕೆ ಘಾತವಾಗದಂತೆ ಈ ಕೆಲಸ ಆಗಬೇಕು. ಅದರ ಸಂಪೂರ್ಣ ಸಾರ್ಥಕ್ಯವನ್ನು ಪಡೆಯಬೇಕು. ಈ ದೃಷ್ಟಿಯಿಂದ ನೋಡುವುದಾದರೆ 'ಬೆರಳ್ಗೆ ಕೊರಳ್' ಅದ್ಭುತ ಸಾಧನೆಯೆಂದು ನಿಸ್ಸಂದೇಹವಾಗಿ ನಿರ್ಮಮ ಬುದ್ಧಿಯಿಂದ ನಿರ್ಭೀತಿಯಿಂದ ಸಾರಬಹುದು ; ಸಾಧಿಸಿ ತೋರಬಹುದು. ಅದನ್ನೀಗ ಇಲ್ಲಿ ನೋಡೋಣ.

ಶ್ರೀ ಕುವೆಂಪು ಅವರ ಏಕಲವ್ಯ ತನ್ನ ಯಾವ ಪ್ರಾಕೃತಿಕತೆಯ ಉತ್ತಮಾಂಶವನ್ನೂ ಕಳೆದುಕೊಳ್ಳದೆ ಸಂಸ್ಕೃತನಾದ ಅಪೂರ್ವ ತಳಿ. ಕವಿ ಅವನನ್ನು ನಾಗರಿಕನನ್ನಾಗಿ ಮಾಡಿ ಅವನ ಬೇಡತನವನ್ನು ಕಳೆಯ ಹೋಗಿಲ್ಲ. ಪ್ರಾಕೃತನಾಗಿದ್ದೂ ಸಂಸ್ಕೃತನಾಗುವುದನ್ನವನಲ್ಲಿ ಅನನ್ಯವಾಗಿ ಸಾಧಿಸಿದ್ದಾರೆ. ಇವೆರಡನ್ನೂ ಕೂಡಿಸಿ ಮಾಡಿದ ಈ ಹೊಸಸೃಷ್ಟಿ, ವಿಸೃಷ್ಟಿ ವಿಕಾರಸೃಷ್ಟಿಯಲ್ಲ, ವಿಶಿಷ್ಟ ವಿಶೇಷಸೃಷ್ಟಿ – ಮೊದಲೆರಡು ಸ್ಥಿತಿಗಿಂತ ಶ್ರೇಷ್ಠ. ಅವುಗಳ ದೋಷ ದೌರ್ಬಲ್ಯವಿದಕ್ಕಿಲ್ಲ ; ಸತ್ತ್ವಸಾಮರ್ಥ್ಯಗಳು ಬೆಳೆದುಕೊಂಡು ಬಂದಿವೆ. ಹೊಸ ಸ್ವರೂಪವೂ ಒದಗಿದೆ. ಈ ಏಕಲವ್ಯ ಹಿಂದಿನ ಏಕಲವ್ಯನಿಗಿಂತ ದ್ರೋಣನಿಗಿಂತ ವಿಶಿಷ್ಟನಾದ ವಿಶೇಷಕೃತನಾದ ಸಂಯಕ್‌ಕೃತಿ. ಕಾಡಿನ ಮಗನಿವ, ನಾಡಿನ ಮಗನಾಗುವ ಹಂಬಲದವನಲ್ಲ. ನಾಗರಿಕರಿಗೆ ಹತ್ತಿರುವ ಯಾವ ದುರ್ಮೇಧರೋಗವೂ ಇವನ ಕಾಡಿನೊಳಕ್ಕೆ ಅಡಿಯಿಟ್ಟಿಲ್ಲ. 'ಪೆಸರಾಸೆ ಅದೊಂದು ನಾಗರಿಕರ್ಗೆ ಮೀಸಲಾಗಿರ್ಪ ಮನೋಜಾಡ್ಯಂ ಕಣಾ !' ಎಂದೆನ್ನುತ್ತಾನೆ ಅವನೆ. ಅವನದು ಆಳುವ ಛಲವಲ್ಲ, ಬಾಳುವ ಬಲ. 'ನಾವಾರೆಂದಿರ್ಪೆ' ? ಆಳ್ವವರ್! ನೀನಾಳ್!' ಎಂದು ನಾಗರಿಕರ ಆಳರಸರ ಬಿಂಕ ಮೆರೆಯುವ ಅರ್ಜುನನಿಗೆ ತಕ್ಕನಾಗಿಯೇ ಮದ್ದರೆಯುವ ಮಾತಾಡುತ್ತಾನೆ ಅವನು. ಅವನಿಗೂ ಹೆಸರಿದೆ, ರಾಜ್ಯ ರಾಜ್ಯಾಧಿಪತ್ಯವೆಲ್ಲವಿದೆ. ಹೆಸರು ಮೆರೆಸಲಿಕ್ಕಲ್ಲ; ತನ್ನನ್ನು ಅರಿಸಲಿಕ್ಕೆ ಮರೆಸಲಿಕ್ಕೆ. ಆಳುವುದಕ್ಕಲ್ಲ ಕಾಪಾಡುವುದಕ್ಕೆ, ಆಧಿಪತ್ಯ. ಅವನಿಗೆ ಗುರುಕೃಪೆಯಿಂದ ಸಾಧಿತವಾಗಿರುವ ಅದ್ವಿತೀಯ ಸಾಮರ್ಥ್ಯವಾವುದೂ ಲೋಕಸಂಕ್ಷೋಭೆಗಾಗಿಯಲ್ಲ; ಶಿಷ್ಟ ಲೋಕ ಸಂರಕ್ಷಣಕ್ಕಾಗಿ, ಆತ್ಮ ಸಂಸ್ಕರಣಕ್ಕಾಗಿ. ಮುನ್ನೆಲೆಗೆ ಬರಬೇಕೆಂಬ ಯಾವ ರೀತಿಯ ನಾಗರಿಕ ಪೀಡೆಯೂ ಅವನನ್ನು ಕಚ್ಚಿಲ್ಲ. ಬೆನ್ನೆಲೆಯಲ್ಲಿದ್ದುಕೊಂಡೇ – ಭಗವಂತನ ಬೆನ್ನ ಬತ್ತಳಿಕೆಯ ಬಾಣದಂತೆ – ಸದಾ ಸಿದ್ಧವಾಗಿದುಕೊಂಡೇ ತನ್ನ ಸರದಿಗಾಗಿ ಕಾಯ್ದುಕೊಂಡಿರುವ ದಿವ್ಯ ಸಂಸ್ಕೃತಿ ಇವನದು. ತನ್ನ ಹೆಸರಿಗಾಗಿ ಗುರುವಿನ ಉಸಿರನ್ನು ಬಳಸಿಕೊಳ್ಳುವ ಅನ್ಯರ ರಕ್ತದ ಕೆಸರಿನಲ್ಲಿ ಆ ಹುಸಿ 'ತಾವರೆ' ಹೆಸರನ್ನು ಚಿರವಾಗಿ ಬೆಳೆಸುವ ಪತಿತಯೋಗಿಯಲ್ಲ ಆತ. ಅವನು ತನ್ನ ಗುರುವಿಗೆ ದಕ್ಷಿಣೆಯಾಗಿ ಹೆಬ್ಬೆರಳು ಕೊಡುವುದು ಕುರುಬನಿಗೆ ಕುತ್ತಿಗೆ ಒಪ್ಪಿಸುವ ಕುರಿಯಂತೆಯೂ ಅಲ್ಲ. ಅದು, ತನ್ನ ವ್ಯಷ್ಟಿ ಸಾಧನೆ ಸಿದ್ಧಿಗಳನ್ನು ಗುರುವಿನ ಮೂಲಕ ಒಪ್ಪಿಸಿಕೊಳ್ಳುವ, ಪರಾತ್ಪರ ಗುರುಬ್ರಹ್ಮಕ್ಕೆ ಅರ್ಪಿತವಾಯಿತೆಂಬುದಕ್ಕೆ ಗುರುತಾಗಿ ಬರುವ ಸ್ವೀಕರಣ ಮುದ್ರೆ. ಇವನು ಕಳಿಸಿದ ಭಾಂಗಿ – ಆತ್ಮಾರ್ಪಣ – ತನ್ನ ಕೈಸೇರಿತೆಂದು ಸ್ವೀಕೃತವಾಯಿತೆಂದು ಆತ ಬರೆದು ಕಳಿಸಿಕೊಟ್ಟ ಸಹಿ ಗುರುತು. ಅಥವಾ ಭಾಂಗಿಯ ಅಂಚೆ ವೆಚ್ಚಕ್ಕಾಗಿ ಇವನು ಕೊಟ್ಟ ಬೆಲೆ. ವ್ಯಷ್ಟಿ ಪರಮೇಷ್ಟಿಯಲ್ಲಿ ತನ್ನನ್ನು ಸಮರ್ಪಿಸಿ ಕೊಳ್ಳುವಾಗ ಮಾಡುವ, ಯಜ್ಞಾಗ್ನಿಗೆ ಅರ್ಪಿಸಲೇಬೇಕಾದ ಶರೀರಜವಾದ ಸ್ವಾಧೀನಸಂಪತ್ತು. ಇದರಿಂದ ಪರಮಾನಂದವೂ ಆಗುತ್ತದೆ ; ಪರಮಲಾಭವಾದ ಅನುಭವವೂ ಅವನಿಗಾಗುತ್ತದೆ. ಆದರೆ ಮೆಯ್ಯಾಗದ ನೋವು, ಆ ಪರಮ ಸಾಧನೆಯಲ್ಲಾದ ವ್ಯಷ್ಟಿಭಂಗದ ಯಾತನೆ ಅವನನುಭವಕ್ಕೂ ಬಂದಿದೆ. ಆದ್ದರಿಂದ ಇಲ್ಲಿನ ಏಕಲವ್ಯ ಬುದ್ಧಿ ಇಲ್ಲದ ಮುಗ್ಧನೇನೂ ಅಲ್ಲ. ಮುಗ್ಧತೆ ಇದ್ದೂ ಸ್ನಿಗ್ಧ ಸಿದ್ಧ. ಅಜ್ಞನಾಗಿಯಾಗಲಿ ಬರಿಯ ಲೌಕಿಕ ಬುದ್ಧಿಯಿಂದಾಗಲಿ ಅವನು ಆ ಅರ್ಪಣಮಾಡುವುದಿಲ್ಲ. ಪ್ರಾಜ್ಞನಾಗಿ, ಲೋಕದ ಯಾವುದನ್ನೂ ಪ್ರತಿಯಾಗಿ ಗಳಿಸಬೇಕೆಂಬ ಶೆಟ್ಟಿ ಬುದ್ಧಿಯಿಂದಲ್ಲದೆ ಆ ದಿವ್ಯ ಸಾಹಸಕಾರ್ಯವನ್ನು ಸಾಧಿಸುತ್ತಾನೆ. ಈ ಕವಿಯ ಒಂದು ಅದ್ಭುತ ಸಾಧನೆಯೆಂದರೆ ಈ ಏಕಲವ್ಯನನ್ನು ಪ್ರಾಕೃತನನ್ನಾಗಿರಿಸಿಯೂ

ಸಂಸ್ಕೃತನನ್ನಾಗಿ ಮಾಡಿದುದು; ಮುಗ್ಧನನ್ನಾಗಿಟ್ಟೂ, ಪ್ರಾಜ್ಞನನ್ನಾಗಿ ಪರಿಣಮಿಸಿರುವುದು; ಆದರೂ ಈ ಸಂಕ್ರಿಯೆಯ ಮಾರ್ಗದಲ್ಲಿ ಅವನಿಗೆ ನಾಗರಿಕತೆಯ ಪಿಡುಗು ತಾಕದಂತೆ ಸೋಕದಂತೆ ಎಚ್ಚರವಹಿಸಿರುವುದು. ಈ ಏಕಲವ್ಯ ನಿಜಕ್ಕೂ ನಾಗರಿಕತೆಯತ್ತ ಮಾರಕವೇಗದಲ್ಲಿ ಧಾವಿಸುತ್ತಿರುವ ಆಧುನಿಕ ಜಾನಪದಕ್ಕೆ (Folk) ಸುಮೂರ್ತವಾಗಿ ಒದಗಿರುವ ಆದರ್ಶ, ಸಾಧಿಸಲೇಬೇಕಾದ ಸುದುರ್ಲಭ ಸಿದ್ಧಿಫಲ. ಈ ನಾಟಕ ಈ ದೃಷ್ಟಿಯಿಂದಲೂ ಆಧುನಿಕ ಕನ್ನಡ ಕಾವ್ಯಲೋಕದ ಶಕ್ತಸಾಧನೆ ಎನ್ನಬೇಕು.

ದ್ರೋಣರ ದೃಷ್ಟಿಯಿಂದ ಈ ನಾಟಕವಾದರೂ ಅನಿರೀಕ್ಷಿತ ಸಿದ್ಧಿ ಪಡೆದಿದೆ. ತಮ್ಮ ಅಂದಿನ ವಿಕಾರ್ಯಕ್ಕೆ ಆ ದ್ರೋಣರು ಈ ಯುಗದಲ್ಲಿ ತಲೆಗುತ್ತಿಕೊಂಡೇ ಬಾಳ ಬೇಕಾಗಿದ್ದಿತು. ಆದರೀ ನಾಟಕ ಅವರನ್ನೂ ಪರಿಣಮಿಸಿದೆ. ಇವರು ಭೂತಕಾಲದವರೇ ಆದರೂ ವರ್ತಮಾನದಲ್ಲಿ ಮರುಹುಟ್ಟಿ ಬಂದು ದ್ವಿಜರಾಗಿದ್ದಾರೆ, ದ್ವಿಜೋತ್ತಮರಾಗಿದ್ದಾರೆ. ಭಂಗಗೊಂಡಿದ್ದ ತಮ್ಮ ಅಹಂಪ್ರತಿಷ್ಠೆಯ ಪುನಸ್ಸ್ಥಾಪನಕ್ಕಾಗಿ ತಾವೇ ಮಾಡಿಕೊಂಡ ಪ್ರತಿಜ್ಞೆಯೆ ತಮಗೆ ಮಿತ್ತಾಗುತ್ತದೆ ಅವರಿಗೆ. ತಮ್ಮನ್ನು ನೋಯಿಸಿದ ದ್ರುಪದನ ಅಹಂಭಂಗಕ್ಕೆ ಮಾಡಿಸಿದ ಮದ್ದು ಅವರಿಗೇ 'ಇಕ್ಕುಮದ್ದಾಗಿ' ಕ್ರಮಕ್ರಮವಾಗಿ ಅವರನ್ನು ಕೊಲ್ಲುತ್ತದೆ. ಅರ್ಜುನನಿಗೆ ಕೊಟ್ಟ ಮಾತು ಉಬ್ಬಸವಾಗಿ ಬೀರುತ್ತದೆ. ವಾಸ್ತವವಾಗಿ ಅದು, ಅವರು ದ್ರುಪದನಿಗೆ ಮಾಡಿದ ಪ್ರತೀಕಾರ ಹೆತ್ತ ಅವಳಿಮಕ್ಕಳಲ್ಲಿ ಒಂದು, ಅಷ್ಟೆ. ಮತ್ತೊಂದು, ಅದು ದ್ರುಪದನೇ ಯಜ್ಞವನ್ನು ಮಾಡಿ ಪಡೆದ ದ್ರೋಣರನ್ನು ಕೊಲ್ಲುವಂತಹ ಮಗ ; ಹಾಗೂ ಅರ್ಜುನನ್ನು ಗಂಡನನ್ನಾಗಿ ಪಡೆಯುವಂತಹ ಅಗ್ನಿಕನ್ಯೆ ಯಾಜ್ಞಸೇನಿ ದ್ರೌಪದಿ. ಒಬ್ಬಳು ಮಹಾಭಾರತ ಕಾರಣಿ – ಪ್ರೇರಕಿ. ಮತ್ತೊಬ್ಬ ದ್ರೋಣರ ಮೃತ್ಯು. ಈ ಇಬ್ಬರಿಗಿಂತಲೂ, ಆ ಅವಳಿ ಮಕ್ಕಳಲ್ಲಿ ಒಬ್ಬರಾದ ಈ ಇಬ್ಬರಿಗಿಂತಲೂ, ದುರ್ಬಲವೇನೂ ಅಲ್ಲ ಆ ಮತ್ತೊಂದು ಅವಳಿ ಮಗು : ಅದೇ, ಅರ್ಜುನನಿಗೆ ಕೊಟ್ಟ ಮಾತನ್ನು ಕಾಪಾಡಲೆಂದು ಮಾಡಬೇಕಾಗಿ ಬಂದ ದುರ್ನಿವಾರ್ಯ ಮಹಾಘೋರ ಹತ್ಯೆ ; ಅದೇ, ಏಕಲವ್ಯನ ಬಲಗೈ ಹೆಬ್ಬೆರಳು ಹತ್ಯೆ. ಅದರ ಬೆಲೆ ಇವರ ತಲೆ. ಏಕಲವ್ಯನ ತಾಯಿಯ ಶಾಪವೇ ಅದಕ್ಕೆ ಕಾರಣವೆಂದಲ್ಲ. ಅದೇನಿದ್ದರೂ ಬರಿಯ ಅರಗುಮುದ್ರೆ ಅಷ್ಟೆ. ವಿಧಿ ಹಾಕಿದ್ದ ವ್ಯಕ್ತಿಕರ್ಮದ ಈ ಮಹಾಭದ್ರವಾದ ಗಡಾರಿ ಬೀಗಕ್ಕೆ ಆಮೇಲೆ ಹಾಕಿದ ಅರಗುಮುದ್ರೆ ಅದು.

* ದ್ರೋಣನನ್ನು ಕೊಲ್ಲಲು ಮತ್ತಾವ ಬಗೆಯಿಂದಲೂ ಸಾಧ್ಯವಿಲ್ಲೆಂದು ಬಗೆದ ಕೃಷ್ಣ ಅವನಿಗೆ ಪುತ್ರಮೋಹವನ್ನು ಉಂಟುಮಾಡುವುದೊಂದೇ ಮಾರ್ಗ, ಅಂದರೆ, ಅಶ್ವತ್ಥಾಮ



ದ್ರೋಣರ ಭಾಗಕ್ಕೆ ಬಲಿ–ಕೊಲೆ ಆಗುತ್ತಿರುವ ಈ ಹೆಬ್ಬೆರಳಿನ ಕೊಲೆ ಏಕಲವ್ಯನ ಭಾಗಕ್ಕೆ, ಮೊದಲೇ ತಿಳಿಸಿದಂತೆ, ಯಜ್ಞಕುಂಡಕ್ಕೆ ಎರೆಯುವ ಹವಿಸ್ಸಾಗುತ್ತದೆ. ಆದ್ದರಿಂದ ಶಿಷ್ಯ ಏಕಲವ್ಯ ಮಹಾಭಾರತದಲ್ಲೆಲ್ಲ ಏಕೈಕ ಕರ್ಮಮುಕ್ತ ಸಿದ್ಧನಾಗುತ್ತಾನೆ. ಆದರೆ ಗುರು ದ್ರೋಣರು ಕರ್ಮಗರ್ತದಲ್ಲಿ ರೋಣಾಡುತ್ತಿರುವ ಮಹಾಜೀವವಾಗುತ್ತಾರೆ. ಏಕಲವ್ಯನಂತಹ ಮಹಾನಿಷ್ಠ ಶಿಷ್ಯನ ಹೆಬ್ಬೆರಳು ಊನವಾಗಿಲ್ಲದಿದ್ದರೆ ಅವನು ಮಹಾಭಾರತ ಯುದ್ಧದಲ್ಲಿ ಪಾಡವರ ಪಕ್ಷದಲ್ಲಲ್ಲ ಯುದ್ಧ ಮಾಡುತ್ತಿದ್ದುದು; ದ್ರೋಣಪಾದದ ಬಳಿ. ಹಾಗಾಗಿದ್ದರೆ ಗುರವನ್ನು ಕೊಲ್ಲುವುದಾದರೂ ಹೇಗೆ? ಅವರೊಬ್ಬರೇ ಇರುವಾಗಲೇ ಆ ಮಹಾಗುರುವನ್ನು ಕೊಲ್ಲಲು ಈ ಮಹಾಶಿಷ್ಯರು ಮಾಡಬಾರದ ಹೀನ ಕೃತ್ಯಮಾಡುತ್ತಾರೆ*. ಆದರೆ ಏಕಲವ್ಯನ ನಿರ್ಮಲತೇಜಸ್ಸಿನ ಶಕ್ತಿಯ ವ್ಯಕ್ತಿ ನೆರವಿಗಿದ್ದಿದ್ದರೆ? ದ್ರೋಣನನ್ನು ಕೊಲ್ಲಲೇ ಮತ್ತೊಂದು ಯುದ್ಧವಾಗಬೇಕಿತ್ತೆ? ಅವರನ್ನು ಕೊಂದರೂ ಅವರ ಪಕ್ಷದ ಏಕಲವ್ಯನನ್ನು ಕೊಲ್ಲುವುದು? ದ್ರೋಣರಿಗಾಗಿ ಪ್ರತೀಕಾರಮಾಡಿದ ಮಗ ಅಶ್ವತ್ಥಾಮನ ಮಹಾಸ್ತ್ರಕ್ಕೆ ಮಲಗಿದ್ದ, ಗೆದ್ದ ಪಾಂಡವ ಸತ್ತ್ವದ ಬಹುಪಾಲೆಲ್ಲ

ಸಾಯಬೇಕು, ಇಲ್ಲವೇ ಅವನು ಸತ್ತನೆಂಬ ಸುಳ್ಳು ಸುದ್ದಿ ಹಬ್ಬಿಸಬೇಕು ಎಂದು ಯೋಚಿಸಿ ಧರ್ಮರಾಯನಿಗೆ ಆ ಮಂತ್ರಾಲೋಚನೆ ಕೊಡುತ್ತಾನೆ. ಧರ್ಮರಾಯ ಸಮ್ಮತಿಸದಿದ್ದರೂ ಭೀಮ ಹಿಗ್ಗಿ ಮುನ್ನುಗ್ಗಿ, ಕೌರವಪಕ್ಷದಲ್ಲಿದ್ದ ಅಶ್ವತ್ಥಾಮ ಎಂಬ ಹೆಸರಿನ ಆನೆಯನ್ನು ಕೊಂದು, 'ಅಶ್ವತ್ಥಾಮ ಸತ್ತ' ಎಂದು ಕೂಗಿಕೊಳ್ಳುತ್ತಾನೆ. ಕಡೆಗೆ ದ್ರೋಣರ ರಥ ಹಿಡಿದಲುಗಿಸಿ ಆ ಸುದ್ದಿ ಚೆಲ್ಲುತ್ತಾನೆ ಅವರ ಮುಂದೆ. ಮುಂದುಗೆಟ್ಟ ಅವರು ಧರ್ಮರಾಯನನ್ನು ಬಂದು ಕೇಳಿದರೆ, 'ಅಹುದು, ಅಶ್ವತ್ಥಾಮ ಗಜ ತೀರಿತು' ಎಂದು ಜಾರುಮಾತಾಡುತ್ತಾನೆ. ಇದರಿಂದ ಭುಗಿಲೆದ್ದ ಅವರು ಮತ್ತೂ ಭಯಂಕರ ಯುದ್ಧ ಮಾಡಲು, ದಿಕ್ಕು ತಪ್ಪಿದ ಪಾಂಡವ ಸೈನ್ಯಕ್ಕೆ ರಕ್ಷಕರೆ ಇರದಾಗ, ಆಗ ಅವರ ಯಮಮನಸ್ಸಿನಲ್ಲಿ ಅತಿ ಮಾನಸದಿಂದ ಅವತರಿಸಿ ಬರುತ್ತಾರೆ ಸಪ್ತರ್ಷಿಗಳು. ಬಂದು ಇವರ ತಾಮಸವನ್ನು ಬೈಯ್ದು ಇವರಲ್ಲಿನ ಸ್ವಧರ್ಮ ಸತ್ತ್ವವನ್ನೆಚ್ಚರಿಸುತ್ತಾರೆ, ಅವರು. ಆಗ, ಅರಿವುಗೊಂಡ ದ್ರೋಣರು ಬಿಲ್ಲು ಬಾಣ ಎಸೆದು ಯೋಗಸಮಾಧಿಯಲ್ಲಿ ತಮ್ಮ ಮನಸ್ಸನ್ನು ಅಧಿಮಾನಸದಲ್ಲಿ ಲಯಗೊಳಿಸಿಕೊಂಡಿರುವಾಗ, ಆಗ, ಅರ್ಜುನ 'ಬೇಡ ಬೇಡ' ಎಂದರೂ ಕೇಳದೆ ಆ ಮಹಾವೀರ ಧೃಷ್ಟದ್ಯುಮ್ನ – ಅವರನ್ನು ಕೊಲ್ಲಲು ವರವಾಗಿ ಹುಟ್ಟಿಬಂದ, ಹಾಗಿದ್ದೂ ದ್ರೋಣರಲ್ಲೆ ಶಿಷ್ಯನಾಗಿದ್ದ ಆ ಪುಣ್ಯಾತ್ಮ – ಅವರ ಕತ್ತನ್ನು ಕತ್ತರಿಸಿ, ಚಿಮ್ಮಿಬಂದ ಅವರ ರಕ್ತದಲ್ಲಿ ಓಕುಳಿಯಾಡುತ್ತಾನೆ. ಭೀಮಸೇನ ಮಹಾವೀರ ಅವನತ್ತ ಸಂತೋಷದಿಂದ ನುಗ್ಗಿ ಗುರುರಕ್ತ ಸ್ನಾತವಾದ ಅವನನ್ನು ಅಪ್ಪಿಕೊಂಡು ಹಿಗ್ಗಾಡುತ್ತಾನೆ. "ನಾನೀಗ ನನ್ನ ಬಾಳಿನ ಮೊದಲ ಸುಖವನ್ನು ಅನುಭವಿಸುತ್ತಿರುವೆ, ಇನ್ನೊಂದು ಇಂಥದೇ ಆನಂದವಿದೆ, ದುಶ್ಶ್ಯಾಸನ ರಕ್ತ ಸ್ನಾನಪಾನ !' ಎಂದು ಅಪ್ಪಣೆಕೊಡಿಸುತ್ತಾನೆ ಅವನು.

ಹತವಾಯಿತು. ಅಷ್ಟೆ ಅಲ್ಲ, ಪಾಂಡವರ ಭಾವೀ ಸಂತಾನವೆ ಹತವಾಯಿತು. ಶ್ರೀಕೃಷ್ಣರಕ್ಷೆಯಿದ್ದೂ ಆ ಮಗು ಸತ್ತು ಹುಟ್ಟಿತು. ಕದಡಿದ ಅಶ್ವತ್ಥಾಮನಂತಹ ಅಸಂಯಮಿ ಮಹಾವೀರ ಅಷ್ಟೆಲ್ಲ ಅನಾಹುತಮಾಡಿ ಪಾಂಡವರನ್ನು ಪೀಡಿಸಿ ಶ್ರೀಕೃಷ್ಣನಿಗೆ ಕ್ಲೇಶ ಕೊಡಬಹುದಾದರೆ, ಏಕಲ್ವಯನಂತಹ ಗುರುಭಕ್ತ – ಶಕ್ತ – ಸಂಯಮಿತವ್ಯಕ್ತಿ ಏನು ತಾನೆ ವಿಪ್ಲವಮಾಡಲಾಗುತ್ತಿರಲಿಲ್ಲ ? ಆಗ ಕೃಷ್ಣನಿಗಾದರೂ ಹೊಣೆ ಏನಾಗುತ್ತಿತ್ತು. ಪಾಂಡವರ ಗೆಲವಿಗಾಗಿ ಶ್ರೀಕೃಷ್ಣ ಕೌರವಸತ್ತ್ವವನ್ನು ಹೇಗೆ ಹೇಗೆ ಗೆಲ್ಲಬೇಕೊ, ಮೊದಲೇ ನಿವಾರಿಸಿಕೊಳ್ಳಬೇಕೊ ತಿಳಿದಿದ್ದ. ಧಾರ್ಮಿಕ ಪ್ರಜ್ಞೆ ಕೆರಳಿಸಿ ಭೀಷ್ಮರನ್ನು ; ಪುತ್ರಮೋಹ ಭ್ರಾಂತಿಯನ್ನು ಸುಳ್ಳು ಸುದ್ಧಿಯ ಮೂಲಕ ಬಿತ್ತಿ, ಸ್ವಧರ್ಮವನ್ನು ಸಪ್ತರ್ಷಿಗಳ ಮೂಲಕ ಪ್ರಚೋದಿಸಿ ದ್ರೋಣರನ್ನೂ; ಹುಟ್ಟನ್ನರುಹಿ ಮಾತಿಗೆ ಕಟ್ಟುರುಳಿಸಿ, ಅದೂ ಸಾಲದೆ ಅನ್ಯಮಾರ್ಗದಿಂದಲೂ ವಂಚಿಸಿ ಬಂಧಿಸಿ ಕರ್ಣನನ್ನೂ ಕೌರವಪಕ್ಷದಿಂದ ಅಪಹರಿಸುವ ಶ್ರೀಕೃಷ್ಣ ಸತ್ತ್ವವೇ – ಮಹಾ ಭಾರತವನ್ನು ನಿಯೋಜಿಸುತ್ತಿರುವ ಸೂತ್ರಧಾರಿಸತ್ತ್ವವೇ – ಬಹು ಪೂರ್ವದಲ್ಲೇ ಅನ್ಯ ಮಾರ್ಗ ಅವಾರ್ಯವಾದ ಏಕಲವ್ಯ ಸತ್ತ್ವವನ್ನು ಗುರುದಕ್ಷಿಣೆಯ ಮೂಲಕ, ತನ್ಮೂಲಕ ಅವನ ಆತ್ಮಾರ್ಪಣವಾಗಿಸುವ ಮೂಲಕ, ನಿವಾರಿಸುತ್ತದೆ. ಆದ್ದರಿಂದಲೇ ಈ ನಾಟಕದಲ್ಲಿ ಏಕಲವ್ಯ ಬೆರಳೊಪ್ಪಿಸುವಾಗ ತಾನು ದ್ರೋಣಗುರುವಿನ ಮೂಲಕ ಪರಮಗುರುವಿನ ಮಹದಿಚ್ಛೆಗೆ ತನ್ನ ಸತ್ತ್ವಸಮಸ್ತವನ್ನೂ ಅರ್ಪಿಸುತ್ತಿರುವುದಾಗಿ ಅನುಭಾವಿಸುತ್ತಾನೆ. ಅವನು ಹಿಂದಿನ ದಿನ ಸ್ವಪ್ನದಲ್ಲಿ ಕಂಡಿದ್ದ ನೀಲದೇಹಿಯ, ನವಿಲುಮೆಯ್ಯ ಹಾವುಗೈಯ ವ್ಯಕ್ತಿಯ ಹಾವುದೋಳಪ್ಪುಗೆಗೆ ತನ್ನನ್ನುನಿರ್ಭೀತವಾಗಿ ಒಪ್ಪಿಸಿಕೊಂಡಿದ್ದ ಅನುಭಾವ ನಮಗೆ ಸಾಕ್ಷಿಯಾಗಬಲ್ಲದು ಮೇಲಿನ ಮಾತಿಗೆ. ಹೀಗೆಲ್ಲ ಕರ್ಮದ ಆಟವಾಡಿಸುವ ಶ್ರೀಕೃಷ್ಣನೂ ಬೇಡನ ಬಾಣಕ್ಕೇ ಬಲಿಯಾಗುತ್ತಾನೆ ನಿರಾಂತಕವಾಗಿ. ಅದೂ ಅವನ ಲೀಲೆಯೆಂದು ಸುಮ್ಮನಾಗಬಹುದು, ಆದರೆ ತನ್ನ ಲೀಲಾಸತ್ತೆಯನ್ನು ತಾನೇ ಎಂದೂ ಆ ಲೀಲಾಪುರುಷ ಅತಿಕ್ರಮಿಸಲಿಲ್ಲ ; ಸಂಕ್ರಮಿಸಿರಬಹುದಷ್ಟೆ. ತನ್ನ ನಿರ್ದೇಶನದ ನಾಟಕದಲ್ಲಿ ತಾನೇ ಪಾತ್ರಧಾರಿಯಾದವ ತಾನೇ ಮಾಡಿದ ನಿಯಮಗಳನ್ನು ಪರಿಪಾಲಿಸುವಂತೆ ತನ್ನ ಕರ್ಮಚಕ್ರಕ್ಕೆ ತಾನೇ ಬಲಿಯಾಗದೆ ಬಲಿಯಾಗುತ್ತಾನೆ. ಲೋಕ ಸಂಗ್ರಹಕಾರ್ಯ ನಡೆಸಿ, ಮುಳ್ಳನ್ನು ಮುಳ್ಳಿನಿಂದ ತೆಗೆದು ಆ ಮುಳ್ಳು ಈ ಮುಳ್ಳು ಎರಡನ್ನೂ ಬಿಸಾಡಿಬಿಡುವಂತೆ ತನ್ನ ದೇಹವನ್ನು – ಬೇಡನ ನಿಮಿತ್ತದಿಂದ – ಬಿಟ್ಟುಬಿಡುತ್ತಾನೆ. ಭಗವತ್ ಚೇತನಕ್ಕೆ ಎಂಥ ದಿವ್ಯ ವಿಲಕ್ಷಣ ಮುಕ್ತಾಯ ! ಈಗ ತಿಳಿಯುತ್ತದೆ, 'ಕರ್ಮದ ಪಾಂಗು ಮರಿಗೆ ಮರಿ,



ಮರಿಗೆ ಮರಿ, ಬೆರಳ್‌ಗೆಕೊರಳ್ !' ಎಂಬ ಮಂತ್ರ ವಾಣಿ, ದ್ರೋಣರು ಕೊಂಡ ಬೆರಳು, ಅದಕ್ಕೆ ಕಾರಣವಾದ ನಾನಾ ಸರಪಳಿಯಕೊಂಡಿಯಂತಹ ಉರುಳುಗಳು, ಅದಕ್ಕೆ ಬಲಿಯಾದ ಅವರ ಕೊರಳು, ಅದರಿಂದ ಸಿಡಿದೆದ್ದ ಅಶ್ವತ್ಥಾಮನ ಕೋಪಕ್ಕೆ ಬಲಿಯಾದ ಪಾಂಡವರ ವಂಶದ ಕುಡಿ, ಉತ್ತರೆಯ ಕರುಳು, ಇದೆಲ್ಲಕ್ಕೂ ಸೂತ್ರಧಾರನಾದವನ ಕುರುಳು – ಇವೆಲ್ಲ ಮಹಾಭಾರತದ ಮಹಾಪ್ರಸ್ಥಾನಗಳು. ಮಹಾಭಾರತದ ಪ್ರಾರಂಭ ಕೌರವಪಾಂಡವರ ಯುದ್ಧದಲ್ಲಲ್ಲ; ಅದರ ಕೊನೆ ಪಾಂಡವರ ಗೆಲುವು ಕೌರವರ ಸಾವೂ ಅಲ್ಲ. ದ್ರೋಣರ ಪ್ರತಿಜ್ಞೆ, ದ್ರುಪದ ಭಂಗ, ದ್ರೌಪದಿ ಧೃಷ್ಟದ್ಯುಮ್ನ ಜನನ, ಏಕಲವ್ಯನ ಬೆರಳು – ಇವುಗಳೂ ಕೂಡ ಮಹಾಭಾರತದ ತಲಕಾವೇರಿಯಲ್ಲ. ಗಾಂಧಾರಿ ಕುಂತಿಯರ ಪ್ರಮಾದ ಆತುರ, ಅದಕ್ಕೂ ಪೂರ್ವದ ಮಹಾತಾಯಿ ಸತ್ಯವತಿಯ ಕಾತರ – ಆತುರ – ಇವುಗಳ ತನಕ ಹೋಗುತ್ತದೆ ಆ ಅದರ ಮೂಲ. ಒಂದು ಪ್ರಮಾದವೇ ಸಂಕೀರ್ಣ ಕ್ರಿಯೆಯಾಗಿ, ಅವಾರ್ಯವಾಗಿ ಅದಮ್ಯವಾಗಿ ಧುಮ್ಮಿಕುತ್ತ ಎಲ್ಲರನ್ನೂ ತನ್ನ ಪ್ರವಾಹಕ್ಕೆ ಸೆಳೆದುಕೊಂಡು ಕೆಲವರನ್ನತ್ತ ದಡಕ್ಕೊಗೆದು ಮತ್ತೆ ಕೆಲವರನ್ನು ತನ್ನ ಸುಳಿಯಲಿಟ್ಟು ತಿರ‍್ರನೆ ತಿರುಗಿಸಿ ಪಾತಾಳಕ್ಕೆ ಮುಳುಗಿಸಿ ಮುಂದೆ ಸಾಗುತ್ತ ಹೋಗುತ್ತದೆ, ಮಹಾಭಾರತದ ಮಹಾದುರ್ದಮ್ಯ ಪ್ರವಾಹ ಶ್ರೀಕೃಷ್ಣನಿರ್ಯಾಣ ಸಾಗರದತ್ತ ; ಅಷ್ಟೇ ಅಲ್ಲ, ಸ್ವರ್ಗಾರೋಹಣದ ಮಾರ್ಗದಲ್ಲಿ ಮೋಕ್ಷಲೋಕದ ಕ್ಷೀರಸಾಗರದತ್ತ!

ಈಗ ತಿಳಿಯುತ್ತದೆ, ಮಹಾಭಾರತವೆಲ್ಲ – ಇಡೀ ಜೀವನಕ್ಕೆ ಪ್ರತಿಮೆಯಾದ ಆ ಮಹಾಕಾವ್ಯ ಪ್ರತಿಮೆಯೆಲ್ಲ – ಕರ್ಮ – ನಿಷ್ಕರ್ಮದ ಕಥೆ ಎಂದು. ಈ ದೃಷ್ಟಿಯಿಂದ ಈ ನಾಟಕ ವ್ಯಾಸ ಮಹಾಭಾರತದ ಮಹಾದರ್ಶನ ವ್ಯಾಖ್ಯಾನವೂ ಹೊಸ ಸೃಷ್ಟಿಯೂ ಆಗಿದೆ.

ಮತ್ತೆ ಇಲ್ಲಿ ಬರುವ ದ್ರೋಣರಿಗೆ ಆಗುವ ಒಳತೋಟಿ ಎಂತಹುದು ! ಆತ್ಮವಂತನಿಗೆ ಬರುವ ತನ್ನೊಳಗಿನ ದೌರ್ಬಲ್ಯ ಸಾಮರ್ಥ್ಯಗಳ ಅರಿವು. ತನ್ನ ಪ್ರಮಾದದ ಮೂಲಕ ಮಹಾವಿಧಿ ನಡೆಸುತ್ತಿರುವ ಲೋಕಲೀಲಾ ವ್ಯವಹಾರದ ತಿಳಿವು ಈ ದ್ರೋಣರಿಗೆ ಇದೆ. ತಮ್ಮ ಅಹಂಕಾರವನ್ನು ರಮಿಸಲು ಮಾಡಿಕೊಂಡ ಉಗುರುಬೆಚ್ಚನೆಯ ತರಗು ಬೆಂಕಿಯೆ ಹೇಗೆ ಕಾಡ ದಳ್ಳುರಿಯಾಯಿತೆಂಬುದರ ಅರಿವೂ ಅವರಿಗಿದೆ. ಅನ್ಯರನ್ನು ದೂಷಿಸದೆ, ಕಡೆಗೆ ತಮ್ಮನ್ನೇ ಹತ್ಯೆಮಾಡಿಕೊಳ್ಳದೆ, ಆದ ಎಲ್ಲತ್ನರಲ್ಲೂ ಬಲವತ್ತರದ ವಿಧಿಯನ್ನು ಕಾಣುವ ಯೋಗಶಕ್ತಿ ಬರುತ್ತದೆ, ಅವರಿಗೆ. ಈ ದ್ರೋಣರು ನಮ್ಮ ಯುಗದವರು, ಅಂತೆಯೆ ಭಾರತದ ಆ ಯುಗದವರು. ಇವರು ನಮ್ಮ ಆತ್ಮದ ತೊಳಲಾಟಕ್ಕೆ ಪ್ರತೀಕವೂ ಆಗಿದ್ದಾರೆ.

ಇಲ್ಲಿ ಉಳಿದಂತೆ ಬರುವ ಅಬ್ಬೆ – ಅರ್ಜುನ – ಅಶ್ವತ್ಥಾಮ – ಇವರಲ್ಲಿ ಅಬ್ಬೆ ಒಬ್ಬಳು ಹೊಸಬಳು. ಇವಳೆ, ಪ್ರಾಕೃತಿಕದ – ಜಾನಪದದ ಪ್ರತೀಕ, ಸಂಸ್ಕೃತೋತ್ತರ ಸಂಸ್ಕೃತನನ್ನು ಹಡೆದೂ ಅದನ್ನು ತಿಳಿದೂ ತಿಳಿಯಲಾಗದಿರುವಂತಹ ಪ್ರಾಕೃತೆ – ಈಕೆ. ದ್ರೋಣರು ಸಂಸ್ಕೃತ, ಆದರೂ ನಾಗರೀಕತೆಯ ಮಗ್ಗುಲಲ್ಲಿದ್ದು ಅದರ ದೋಷಕ್ಕೆ ತುತ್ತಾಗುತ್ತಾರೆ. ಅರ್ಜುನ ಸತತ ಸಂಸ್ಕೃತ ಸಂಗದಲ್ಲಿದ್ದೂ ನಾಗರಿಕತೆಯ ಸುಳಿಯಲ್ಲಿರುವಾತ. ಅಶ್ವತ್ಥಾಮನ್ ಪಾಕತಪ್ಪಿದ ಸಂಸ್ಕೃತ. ನಾಗರಿಕನಾಗಲಾರದ ವಿಸಂಸ್ಕೃತ. ಇವನ ಪಾತ್ರವೂ ಮಹಾಭಾರತದ ಅಶ್ವತ್ಥಾಮನ್ ಪಾತ್ರದ ರಕ್ತಸಂಚಾರವನ್ನೆ ಹೊಂದಿದೆ. ತಂದೆಯನ್ನು, ಯಾವುದೊ ಸಂಕ್ಲಿಷ್ಟ ಸಂಕಷ್ಟದಲ್ಲಿರುವ ದ್ರೋಣರನ್ನು, ಪಾರುಮಾಡಲು ಸಾಹಸ ತೋರುತ್ತಾನೆ ; ಏಕಲವ್ಯನ ಬಳಿಗೆ ತಾನೂ ಬರಲು ಹಠಹಿಡಿಯುತ್ತಾನೆ. ಸರಿದಾರಿಯನ್ನು ತೋರುತ್ತೇನೆಂದು ತಾನೇ ತೊಳಲುತ್ತಾನೆ., ಬಟ್ಟೆ ಇರದೆಡೆ ಬಟ್ಟೆಯರಸುತಿರ್ಪಯ್, ವತ್ಸ ! ಪುಟ್ಟು ಗುಣಮದು ನಿನಗೆ', ಎನ್ನುವ ದ್ರೋಣರ ಮಾತು ಅವನ ಪಾತ್ರದ ಸಮಸ್ತ ಜನ್ಮಕುಂಡಲಿ – ಜಾತಕ ಆಗಿವೆ. ಮಹಾ ಗುರುವಾದ ತಂದೆಯನ್ನು ಕೊಂದ ಪಾಂಡವ ಪಕ್ಷದವರನ್ನು ವೈಶಿಕಾಸ್ತ್ರಪ್ರಯೋಗದಿಂದ ನಿರ್ನಾಮ ಮಾಡುತ್ತೇನೆ ಎಂದು ಹುಚ್ಚಾಡುವ ; ಕಡೆಯಲ್ಲಿ, ಕೌರವನಿಗೇನಾದರೂ ಸೇವೆ ಸಲ್ಲಿಸುವ ಪ್ರತಿಜ್ಞೆ ಹೊತ್ತು ರಾತ್ರೋರಾತ್ರಿ ಪಾಂಡವರ ಪಾಳಯಕ್ಕೆಗರಿಬಿದ್ದು ಪಶುಪಕ್ಷಿ ಪ್ರಾಣಿ ಹೆಂಗಸು ಮಕ್ಕಳನ್ನೆಲ್ಲ ಉತ್ತರಿಸುವ ; ತುಟ್ಟತುದಿಯಲ್ಲಿ ನಿಷ್ಪಾಂಡವ ಪ್ರತಿಜ್ಞೆ ಹೊತ್ತು ಬ್ರಹ್ಮಶಿರೋಬಾಣವನ್ನು ಪ್ರಯೋಗಿಸಿ ಕಡೆಗದನ್ನು ಉತ್ತರೆಯ ಗರ್ಭಕ್ಕೆಚ್ಚು ಚಿರಶಪಿತನಾಗಿ ಪತಿತನಾಗಿ ಶಿರೋಮಣಿಯನ್ನು ಕಳೆದುಕೊಂಡು ನಿಂತಲ್ಲಿ ನಿಲ್ಲದೇ ಅಲೆದಾಡುವ ಗತಿಗೆ ಬಂದ ಆ ಅಶ್ವತ್ಥಾಮ, ದಾರಿಯಿಲ್ಲದೆಡೆ ದಾರಿಮಾಡ ಹೋಗಿ ಎಲ್ಲೂ ಸರಿನಡೆ

* ಕುಮಾರವ್ಯಾಸ ಈ ವಿಪರೀತದ ದರ್ಶನವನ್ನೂ ಬಹುಮಾರ್ಮಿಕವಾಗಿ ಮೂಡಿಸಿದ್ದಾನೆ ; ತನ್ನ ಚರ್ಮಾಕ್ಷಿಗೆ ಪ್ರತ್ಯಕ್ಷನಾದ ಪರಮೇಶ್ವರನಲ್ಲಿ ತಾನು ಪಡೆದದ್ದಾರೂ ಏನು ? ಬರಿಯ ಅಂಬು, ಎಂದು ಪಾರ್ಥನೇ ದಿವ್ಯವಿಷಾದಕ್ಕೊಳಗಾಗುತ್ತಾನೆ ;

"ಮರುಳ ದೇವಾರ್ಚನೆಯೊ, ಕನಸಿನ ಸಿರಿಯೊ, ಶಿಶುವಿನ ಕೈಯ ರತ್ನವೊ ?
ಹರಿಯ ಹೂ ಮಾಲೆಯೊ ! ಮದೀಯ ವಿವೇಕ ವಿಭ್ರಮವೊ
ಹರನನೀ ಚರ್ಮಾಕ್ಷಿಯಲಿ ಗೋಚರಿಸೆ ಬೇಡಿದುದಂಬು ; ಮರ್ತ್ಯದೊ
ಳಿರವು, ಮಝು ! ಭಾಪೆನ್ನ ಪುಣ್ಯವೆನುತ್ತ ಬಿಸುಸುಯ್ದ !"

ಕುಮಾರವ್ಯಾಸ ಭಾರತ : ಅರಣ್ಯ ಪರ್ವ ಸಂಧಿ ೭, ಪದ್ಯ ೨, ಪುಟ ೧೮೦.



ನಡೆಯಲಾರದ ಅಶ್ವತ್ಥಾಮ ನಿಜಕ್ಕೂ ಈ ನಾಟಕದಲ್ಲಿ ಶಕ್ತಿವತ್ತಾಗಿ ಪ್ರತಿಮಿತವಾಗಿದ್ದಾನೆ.

ಅರ್ಜುನನಾದರೂ ಎಲ್ಲ ನಾಗರಿಕತೆಯ ಪ್ರತೀಕ. ಸದಾ ಸಂಸ್ಕೃತ ಸಂಗದಲ್ಲಿದ್ದೂ ತನ್ನ ಬಿಂಕದಿಂದ ಬಿಡುಗಡೆಗೊಳ್ಳದ ರಾಜಸದ ಪ್ರತೀಕ. ಪರಮೇಶ್ವರನೇ ಪ್ರತ್ಯಕ್ಷವಾದರೂ ಆ ಚೇತನ ಕೇಳಿದುದು ಬಾಣಮಾತ್ರ*. ಅಂಥ ವ್ಯಕ್ತಿ ಶ್ರೀಕೃಷ್ಣಸಾಹಚರ್ಯದಲ್ಲೆ ಇದ್ದರೂ ತನ್ನ ಒಗರು ಬಿಡದೆ ಉಳಿಯುತ್ತದೆ, ಸದಾ ಆಕಾಶಪಾದದಡಿಯಲ್ಲೆ ಇದ್ದೂ ಒಡೆಯದಿರುವ ನಮ್ಮ ಅಹಂಗೋಲಗಳಂತೆ. ಅಂಥ ಅರ್ಜುನ 'ಶಿಷ್ಯತ್ವದ' ಒಂದು ಮುಖ, ಮತ್ತೊಂದು ಮುಖ ಏಕಲವ್ಯ ; ಇಬ್ಬರಿಗೂ ಅಭ್ಯಾಸ ಸಾಧನೆ ಶ್ರದ್ಧೆ ಇದೆ. ಆದರೆ ಅರ್ಜುನನ ಅಹಂ ಸಾಧನೆಯಿಂದ ಕರಗಲಿಲ. ಏಕಲವ್ಯ ಸಿದ್ಧಿಯಲ್ಲಿ ಕರಗಿದಹಂಕಾರದ ವ್ಯಕ್ತಿಯಾದ. ಇಬ್ಬರೂ ತೇಜೋವಂತರು. ಆದರೆ ಒಬ್ಬನ ತೇಜಸ್ಸಿನಲ್ಲಿ ಸುಡುಬಿಸುಪೆ ಹೆಚ್ಚು, ಮತ್ತೊಬ್ಬನಲ್ಲಿ ಪ್ರಭೆಯೆ ಪ್ರಭಾವಳಿಯೆ ಎಲ್ಲ ಎರಡೂ ಹಣ್ಣೆ. ಆದರೆ ಒಂದು ಹಣ್ಣಿನ ಒಳಗೆಲ್ಲ ಬೀಜಗಳೆ, ಗಟ್ಟಿ ಓಟೆಯೆ ಇದೆ ; ಮತ್ತೊಂದರಲ್ಲಿ ಬೀಜವೆ ಇಲ್ಲ ; ಬರಿಯ ತಿರುಳೆ ಎಲ್ಲ. ಒಬ್ಬ ಗುರುವನ್ನು ತನ್ನ ಏರಿಗೆ ಏಣಿಯನ್ನಾಗಿಸಿಕೊಳ್ಳುತ್ತಾನೆ. ಮತ್ತೊಬ್ಬ ಗುರುವಿಗೇ ಶ್ರೇಯಸ್ಸಿನ ಶ್ರೇಣಿಯಾಗಿ ಉಳಿಯುತ್ತಾನೆ ; ತನ್ನ ಗುರುಭಕ್ತಿಯಿಂದ ಲೌಕಿಕಗುರುವಿಗೇ ಶ್ರೀ ಗುರುದರ್ಶನ ಮಾಡಿಸುತ್ತಾನೆ. ಮಹಾಭಾರತದಲ್ಲಿ ಅದುರಾಗಿದ್ದ ಈ ಶಿಷ್ಯತ್ವದ ಎರಡು ಮುಖಗಳು ಆವಿಷ್ಕಾರ ಅನಾವರಣ ಆಗಿದೆ ಈ ಕಾವ್ಯನಾಟಕದಲ್ಲಿ.

ಮೇಲೆ ವಿವರಿಸಿದ ನಾನಾಕಾರಣಗಳಿಂದ, ಮತ್ತೆ ಈ ಪ್ರಬಂಧದ ವಿಷಯಮಿತಿಗೆ ಒಳಪಡದ ಮತ್ತೂ ಕೆಲವು ಕಾರಣಗಳಿಂದಾಗಿ, ಈ ನಾಟಕ ವ್ಯಾಸಮಹಾಭಾರತದ ದಿವ್ಯ ಪರಂಪರೆಯ ಶ್ರೇಷ್ಠ ಸಂತಾನವಾಗಿದೆಯೆಂದು ಧೈರ್ಯವಾಗಿ ಹೇಳಬಹುದು. ಪ್ರಾಚೀನ ಮಹಾಕೃತಿಯ ಕಸಿಯನ್ನಿಲ್ಲಿ ತನ್ನ ಕಿರುನಾಟಕದ ಮಿತಿಯಲ್ಲೆ ಬೆಳೆಸಿ ತೋರಿಸಿರುವ ಈ ಕೃತಿ ಕನ್ನಡ ಸಾಹಿತ್ಯದ ಒಂದು ಶ್ರೇಷ್ಠ ಸಿದ್ಧಿ.

ಇನ್ನು ಮುಂದೆ ರಾಮಾಯಣದತ್ತ ನಮ್ಮ ವಿವೇಚನೆಯನ್ನು ತಿರುಗಿಸಬಹುದು. ಮೊದಲಿಗೆ ಚಿಕ್ಕ ಕೃತಿಯನ್ನೆ ಗಮನಿಸುವುದು ವಾಸಿ. ಅದೇ, ಶೂದ್ರತಪಸ್ವಿ ಎಂಬ ನಾಟಕ ; ರಾಮಾಯಣದ ಉತ್ತರ ಕಾಂಡದಲ್ಲಿ ಬರುತ್ತದೆ ಎನ್ನುವ ಶಂಬೂಕ ಮುನಿಯ ಕಥೆಯನ್ನಾದರಿಸಿದ ನಾಟಕ.

ವಾಲ್ಮೀಕಿಗಳೆ ರಾಮಾಯಣದ ಉತ್ತರಕಾಂಡವನ್ನು ಬರೆದರೆ ? ಎಂಬ

ಚರ್ಚೆಯಿದೆ. ಇದರ ಚರ್ಚೆ ಇಲ್ಲಿ ಅನಗತ್ಯ. ಮೊದಲನೋಟಕ್ಕೆ, ಆ ದಿವ್ಯಾವಸಾನದ ದಾರುಣ ಕಥೆ ಈಗಿರುವ ಶ್ರೀರಾಮಪಟ್ಟಾಭಿಷೇಕದ ಮಂಗಳಕಥೆಗೆ ಒಪ್ಪಂದವಾಗದಂತೆ ಕಂಡರೂ, ಅದು ಎಂಥ ದಿವ್ಯಾತ್ಮದ ಜೀವನಕ್ಕೆ ಎಂಥ ದಿವ್ಯದಾರುಣ ಮುಕ್ತಾಯ ಒದಗಿಸಿತು ಎಂಬ ಅದ್ಭುತ ವಿಷಾದಾನುಭವಕ್ಕೆ ಮಾತೃಕೆಯಾಗುತ್ತದೆ, ಎಂದೆನಿಸದಿರದು. ಮಹಾಭಾರತದಲ್ಲಿನ ಅನೂಹ್ಯ ಗಹನದಲ್ಲಿನ ಕೃಷ್ಣನಿರ್ಯಾಣ, ಯಾದವರ ಅಪಗತಿ, ಧೃತರಾಷ್ಟ್ರ ಗಾಂಧಾರಿ ಕುಂತಿ ವಿದುರರ ದಾರುಣಾವಸಾನ, ಪಾಂಡವರ – ಉಸಿರು ಕಳಚಿ ಹೋಗುವಂತೆ ಮಾಡುವ – ವಿಲಕ್ಷಣ ನಿಷ್ಕ್ರಮಣ, ಎಲ್ಲವೂ ರಾಮಾಯಣದ ಸೀತಾ ರಾಮಲಕ್ಷ್ಮಣರ ಆ ಕರುಣಪೂರ್ಣವಾದ ನಿರ್ಯಾಣವನ್ನು ಪುಷ್ಟೀಕರಿಸುತ್ತವೆ. ಪ್ರಾಯಶಃ ಇದು ಲೋಕವ್ಯಾಪಾರದ ಚಿರಪ್ರತಿಮೆಯೆ ಇರಬಹುದು. ಆದ್ದರಿಂದಲೆ ಈ ಉತ್ತರಕಾಂಡದ ಕಥೆಯ ವಾಲ್ಮೀಕಿಕೃತವಲ್ಲದಿದ್ದರೂ ಮಹತ್ತರವಾದುದೆನ್ನಲು ಸಂದೇಹವಿಲ್ಲ. ಕವಿವರ್ಯ ಶ್ರೀಪು.ತಿ. ನರಸಿಂಹಾಚಾರ್ಯರು ಮಹಾಭಾರತ ವಿಷ್ಣುಪುರಾಣ ರಾಮಾಯಣಗಳಲ್ಲಿ ಬರುವ ಈ ದಿವ್ಯ ಚೇತನರ ನಿರ್ಯಾಣಕಥಾನಕವನ್ನು ಅನುವಾದಿಸಿ ಮಹಾಪ್ರಸ್ಥಾನ ಎಂಬ ಕೃತಿರೂಪದಲ್ಲಿ ಕನ್ನಡ ಸಹೃದಯರಿಗೆಕೊಟ್ಟಿದ್ದಾರೆ. ಆಕೃತಿಯ ಮುನ್ನುಡಿಯಲ್ಲಿ ಉತ್ತರಕಾಂಡದ ಬಗ್ಗೆ ಅವರಾಡುವ ಮಾತು ಮನನೀಯವಾಗಿವೆ ; "ಉತ್ತರಕಾಂಡದ ಕೊನೆಯಲ್ಲಿ ಬರುವ ಈ ಪ್ರಕರಣಗಳು (ಸೀತಾರಾಮಲಕ್ಷ್ಮಣಾದಿಗಳು, ಮಹಾಪ್ರಸ್ಥಾನದ ಪ್ರಕರಣಗಳು) ವಾಲ್ಮೀಕಿಪ್ರಣೀತವಲ್ಲವೆಂದು ಹೇಳಿದರೂ ತಿರಸ್ಕಾರಯೋಗ್ಯವಲ್ಲ. ಅವುಗಳ ಕಾವ್ಯಗುಣವನ್ನು ನೋಡಿದರೆ, ವಾಲ್ಮೀಕಿಗಳಲ್ಲದಿದ್ದರೆ ವಾಲ್ಮೀಕಿಯಂಥ ಮತ್ತೊಬ್ಬ ಮುನಿ ಇವುಗಳನ್ನು ನಿರೂಪಿಸಿರಬೇಕು ಎನಿಸುತ್ತದೆ... ನಿರ್ದಿಷ್ಟಾರ್ಥಕ್ಕಾಗಿ ಭೂಮಿಗಿಳಿದು ಕೃತಕೃತ್ಯರಾದೊಡನೆ ಸ್ವೇಚ್ಛೆಯಿಂದ ಮರಳುವ ಮಹಾಪುರುಷನ ಉದಯಂತೆ ಪ್ರಸ್ಥಾನ್ನವೂ ವಿಲಕ್ಷಣವಾದುದು, ಲೋಕ ಮೋಹಕವಾದುದು." (ಮಹಾಪ್ರಸ್ಥಾನ ; ಮೊದಲ ಮಾತು, ಪುಟ v-vi)

ಆದರೆ ಉತ್ತರಕಾಂಡದಲ್ಲೆ (೭೩–೭೬ ನೆಯ ಸರ್ಗ) ಬರುತ್ತದೆನ್ನಲಾದ ಶಂಬೂಕ ಪ್ರಸಂಗವು ಎಷ್ಟರಮಟ್ಟಿಗೆ ಆ ಮೂಲಕಥೆಯದೇ ಆಗಿದೆಯೊ ದೇವರೇ ಬಲ್ಲ. ಒಂದು ವೇಳೆ ಅಂಥೊಂದು ಕಥನವು ಅಲ್ಲಿದ್ದು ಅದಕ್ಕೇನಾದರೂ ಸೂಕ್ಷ್ಮ ಕೈವಾಡವೇನಾದರೂ ಆಗಿದೆಯೇ, ಹೇಳಬರದು ; ಅಂತು ಈಗಿರುವಂತೆಯೆ ಆ ಕಥೆಯನ್ನು ಒಪ್ಪಿಕೊಂಡು ಅದನ್ನಿಲ್ಲಿ ಉದ್ಧರಿಸಬಹುದು :

"ಕೆಲವು ದಿನಗಳ ನಂತರ ಜನಪದದಿಂದ ಒಬ್ಬ ವೃದ್ಧ ಬ್ರಾಹ್ಮಣನು ತನ್ನ ಸತ್ತ ಮಗುವನ್ನು ಹೊತ್ತಿಕೊಂಡು ರಾಮನರಮನೆಯ ಬಾಗಿಲಿಗೆ ಬಂದನು. ಸ್ನೇಹದುಃಖಗಳಿಂದ ಕೂಡಿ ಆ ಬ್ರಾಹ್ಮಣನು ಬಗೆಬಗೆಯಾದ ಮಾತನಾಡುತ್ತಾ, 'ಮಗನೆ, ಮಗನೇ !' ಎಂದು ಕೂಗಿಕೊಂಡು ಅಳುತ್ತಾನೆ. 'ಒಬ್ಬನೇ ಮಗನಾದ ನೀನು ಸತ್ತಿರುವುದನ್ನು ಕಾಣುತ್ತಿರುವ ನಾನು ಹಿಂದಿನ ಜನ್ಮದಲ್ಲಿ ಯಾವ ಪಾಪ ಮಾಡಿರಬಹುದೊ ! ಐದುಸಾವಿರ ದಿನಮಾತ್ರದ (ಐದುಸಾವಿರ ವರ್ಷ ಎಂದೂ ಇದೆ. ತಿಲಕರ ವ್ಯಾಖ್ಯಾನದಂತೆ ಅದಕ್ಕೆ ದಿನಗಳಂದೇ ಅರ್ಥ) ನೀನು ಅಕಾಲದಲ್ಲಿ ಸತ್ತು ನನಗೆ ದುಃಖ ತಂದಿರುವೆ, ಮಗುವೆ. ಕೆಲವು ದಿನಗಳಲ್ಲಿ ನಾನೂ ಸಾಯುತ್ತೇನೆ. ನಿನ್ನ ತಾಯಾದರೂ ನಿನ್ನ ಶೋಕದಿಂದ ಸಾಯುತ್ತಾಳೆ. ನಾನು ಸುಳ್ಳು ಹೇಳಿದ್ದಾಗಲಿ, ಯಾವ ಪ್ರಾಣಿಗಳಿಗಾಗಲಿ ಹಿಂಸೆ ಮಾಡಿದ್ದಾಗಲಿ ನನಗೆ ನೆನಪಿಲ್ಲ. ಪಾಪಮಾಡಿದ್ದೂ ನೆಲಪಿಲ್ಲ. ಪಿತೃ ಕಾರ್ಯಗಳನ್ನಾವುದನ್ನೂ ಮಾಡದೆಯೆ ನೀನು ಬಾಲಕನಾಗಿಯೆ ಯಾವ ಪಾಪದಿಂದ ಸತ್ತೆ, ಮಗನೆ ? ರಾಮನ ನಾಡಿನಲ್ಲಿ ಈಗ ಉಂಟಾದ ಈ ಮರಣದಂತಹದನ್ನು, ಪ್ರಾಪ್ತವಯಸ್ಸಿಗೆ ಬರದೇ ಸಾಯುವಂತಹ ಸಾವನ್ನು, ಈ ಹಿಂದೆ ಕಂಡಿರಲಿಲ್ಲ. ಇದರಲ್ಲಿ ರಾಮನ ಯಾವುದೋ ಮಹತ್ತರ ಪಾಪವಿದೆ. ಸಂಶಯವೇ ಇಲ್ಲ. ಇಲ್ಲದಿದ್ದರೆ ಅವನ ನಾಡಿನಲ್ಲಿ ಮಕ್ಕಳು ಸಾಯುವುದೆಂದರೇನು? ಬೇರೆ ದೇಶಗಳಲ್ಲಿ ಮಕ್ಕಳಿಗೆ ಮೃತ್ಯುಭಯವಿಲ್ಲ. ಹೇ ರಾಮ, ಸತ್ತ ಮಗುವನ್ನು ಬದುಕಿಸು. ಹೆಂಡತಿಯೊಡನೆ ರಾಜದ್ವಾರದಲ್ಲಿ ಅನಾಥನಂತೆ ಸಾಯುವೆ ನೋಡು. ಆಮೇಲೆ ಹೇ ರಾಮ, ಬ್ರಹ್ಮಹತ್ಯೆ ಪಡೆದು ಸುಖಿಯಾಗಿರು ನೀನು ! ಸೋದರರೊಡನೆ ದೀರ್ಘಾಯುವಾಗುವೆ ನೀನು ! ನಿನ್ನ ಈ ರಾಜ್ಯದಲ್ಲಾದರೂ ನಾವು ಬಹಳ ಸುಖವಾಗಿದ್ದೇವೆ. ಮಹಾಬಲ. ಆದರೆ ಇದೊಂದರಲ್ಲಿ ತಪ್ಪಿದೆ ನೀನು, ರಾಮ. ನಿನ್ನ ವಶದಲ್ಲಿರುವ ನಾವು ಕಾಲವಶರಾಗಿದ್ದೇವೆ ! ನಮಗೆ ಸ್ವಲ್ಪವೂ ಸುಖವಿಲ್ಲ ! ನಿನ್ನನ್ನು ನಾಥನನ್ನಾಗಿ ಪಡೆದ ಈ ನಾಡು, ಈ ಬಾಲಕನ ಮರಣಕ್ಕೆ ಕಾರಣನಾದ ನಿನ್ನನ್ನು ಪಡೆದ ಮಹಾತ್ಮ ಇಕ್ಷ್ವಾಕುವಿನ ಈ ನಾಡು ಈಗ ನಿಜವಾಗಿಯೂ ಅನಾಥವಾಯಿತು. ವಿಧಿಗಳು ಪಾಲಿಸದ ಪ್ರಜೆಗಳು ರಾಜನ ದೋಷದಿಂದ ಸಾಯುತ್ತಾರೆ. ರಾಜ ಸದಾಚಾರಿಯಲ್ಲದಾಗ ಅಕಾಲದಲ್ಲಿ ಜನ ಸಾಯುತ್ತಾರೆ. ಇಲ್ಲವೆ ಪುರಗಳಲ್ಲಿ ಜನಪದಗಳಲ್ಲಿ ತಕ್ಕದಲ್ಲದ್ದನ್ನ ಮಾಡುತ್ತಾರೆ ಜನ. ರಕ್ಷಣೆ ಇಲ್ಲ. ಆಗ ಕಾಲಭಯ ಉಂಟಾಗುತ್ತೆ. ರಾಜ ದೋಷ ಸ್ಪಷ್ಟವಾಗಿದೆ, ಸಂಶಯವಿಲ್ಲ. ಅದರಿಂದಲೇ ಹಳ್ಳಿ ಪಟ್ಟಣಗಳಲ್ಲೆಲ್ಲ ಬಾಲವಧೆ ನಡೆಯುತ್ತೆ". ಹೀಗೆ ದುಃಖದಿಂದ ಬೆಂದ ಆ ಮುದುಕ ನಾನಾ ನುಡಿಗಳಿಂದ ಗೋಳಿಟ್ಟು ಹಳಿದು ತನ್ನ ಮಗನನ್ನು ಎದೆಗವಚಿಕೊಂಡನು.

"ದುಃಖದಿಂದ ತುಂಬಿ ಕರುಣಾಪೂರ್ಣವಾದ ಆ ಅವನ ಗೋಳನ್ನೆಲ್ಲವನ್ನೂ ರಾಘವ ಕೇಳಿ ಮಂತ್ರಿಗಳನ್ನು – ವಸಿಷ್ಠ ವಾಮದೇವರನ್ನು ತನ್ನ ತಮ್ಮಂದಿರನ್ನು ವೇದವಿದರನ್ನು ಕರೆಸಿ ಅವರಿಗೆ ಬ್ರಾಹ್ಮಣನ ನಿಂದೆಯನ್ನೆಲ್ಲ ತಿಳಿಸಿದನು. ಅದನ್ನು ಕೇಳಿದ ನಾರದ, ಕೃತಯುಗದಲ್ಲಿ ಬ್ರಾಹ್ಮಣರು ತಪಸ್ವಿಗಳಾಗಿದ್ದರು. ಬ್ರಾಹ್ಮಣರಲ್ಲದವರು ಹೇಗೂ ತಪಸ್ಸು ಮಾಡುತ್ತಿರಲಿಲ್ಲ. ಆ ತೇಜೋವಂತ ಯುಗದಲ್ಲಿ ಸಾವಿಲ್ಲದ ನಿಡು ಜೀವಿಗಳೆ ಎಲ್ಲ. ಅನಂತರ ತ್ರೇತಾಯುಗ ಬಂತು... ಧರ್ಮ ಮೂರು ಯುಗಗಳಲ್ಲೂ ಮೂರು ವರ್ಣದಲ್ಲಿತ್ತು. ಯಾವ ಯುಗದಲ್ಲೂ ಅದು ಶೂದ್ರನಿಗೆ ಸಿಕ್ಕದು. ಆದರೆ ಕಲಿಯುಗದಲ್ಲಿ 'ಸುಮಹತ್ತಪ'ನಾದ 'ಹೀನವರ್ಣ'ನು ತಪಸ್ವಿಯಾಗುತ್ತಾನೆ, ಮುಂದೆ ಶೂದ್ರಯೋನಿ ತಪಸ್ವಿಯಾಗುತ್ತಾನೆ. ಆದರೆ ಈಗಲೇ ಆ ದುರ್ಬುದ್ಧಿಯಾದ ಆ ಶೂದ್ರ ತಪಸ್ಸು ಮಾಡುತ್ತಿದ್ದಾನೆ. ಅದರಿಂದ ಮಕ್ಕಳ ಕೊಲೆಯಾಗುತ್ತಿದೆ. ಅಧರ್ಮವಾದ ಅಶ್ರೀಮೂಲವಾದ ಯಾರದರೂ ಅಕಾರ್ಯ ಮಾಡುತ್ತಿದ್ದರೆ ನೀನವರಿಗಾಗಿ ನಾಡನ್ನೆಲ್ಲ – ಊರು ಪಟ್ಟಣಗಳನ್ನೆಲ್ಲ – ತಡಕು. ಪಾಪವನ್ನೆಲ್ಲಿ ಕಾಣುವೆಯೊ ಅಲ್ಲಿ ಕೈಮಾಡು, ಹೀಗಾದರೆ ಜನರಿಗೆ ಧರ್ಮವೃದ್ಧಿ ಆಗುತ್ತದೆ. ಹುಡುಗನೂ ಬದುಕುತ್ತಾನೆ' ಎಂದನು.

ನಾರದನ ಅಮೃತಮಯವಾದ ಈ ಮಾತನ್ನು ಕೇಳಿ ರಾಮ ಅತುಲ ಹರ್ಷ ಹೊಂದಿದ. ಬ್ರಾಹ್ಮಣನ ಸತ್ತ ಮಗುವಿನ ಶರೀರವನ್ನು ತೈಲದಲ್ಲಿಟ್ಟು ಕೆಡದಂತೆ ಸುಗಂಧಾದಿ ದ್ರವ್ಯಗಳಿಂದ ಕಾಪಾಡಿಕೊಳ್ಳುವಂತೆ ಲಕ್ಷ್ಮಣನಿಗೆ ತಿಳಿಸಿದನು. ಆ ಮೇಲೆ ನೆನೆದೊಡನೆಯೆ ಬಂದ ಪುಷ್ಪಕವನ್ನೇರಿ ಬ್ರಾಹ್ಮಣನೊಡನೆ ಮೇಲೆ ಹಾರಿದನು. ಪಶ್ಚಿಮ ದಿಕ್ಕನ್ನು ಮೊದಲು ನೋಡಿ ಬಂದ. ಅಲ್ಲೆಲ್ಲ ಒಳ್ಳೆಯದೆ ಕಂಡುಬಂದಿತು. ಉತ್ತರವನ್ನು ನೋಡಿ ಬಂದ ; ಅಲ್ಲೂ ಎಲ್ಲ ಸಮೃದ್ಧವಾಗಿತ್ತು. ಪೂರ್ವವೂ ಬಹಳ ಸಂಪನ್ನವಾಗಿತ್ತು. ಹಾಗೆಯೇ ದಕ್ಷಿಣ ದಿಕ್ಕಿನ ಕಡೆ ನಡೆದ. ಅಲ್ಲೊಂದು ಮಹತ್ತಾದ ಸರೋವರ ಕಂಡಿತು. ಅದರ ಉತ್ತರ ದಿಕ್ಕಿನಲ್ಲಿ ನೀರು ತಿಳಿಯೋ ತಿಳಿಯಾಗಿತ್ತು. ದಕ್ಷಿಣ ಭಾರತದ ನೀರೆಲ್ಲ ಪಾಚಿಯಿಂದ ತುಂಬಿತ್ತು. ಶ್ರೀ ರಾಘವ ಅದನ್ನು ನೋಡಿ ಕೆಳಗಿಳಿಯುತ್ತಾನೆ, ತಲೆಕೆಳಗಾಗಿ ಉತ್ತಮ ತಪಸ್ಸನ್ನೆಸಗಿದ್ದ 'ತಪಸ್ವಿ'ಯನ್ನಲ್ಲಿ ಕಾಣುತ್ತಾನೆ. ಅವನನ್ನು ಕಂಡು 'ನೀನು ಧನ್ಯ, ಸುವ್ರತ ! ನಿನ್ನ ಹುಟ್ಟು ಯಾವುದು, ದೃಢ ವಿಕ್ರಮ ! ನಾನು ದಾಶರಥಿ, ರಾಮ! ಕೌತೂಹಲದಿಂದ ಕೇಳಿದೆ. ನೀನಾವ ಅರ್ಥಬಯಸುತ್ತಿರುವೆ ಹೇಳು, ಸ್ವರ್ಗ ಲಾಭವೋ ? ಅಥವಾ ವರವೋ ? ಇಷ್ಟು ಅತಿ ದುಷ್ಕರ ತಪಸ್ಸನ್ನಾದರೂ ಏಕೆ ಆಚರಿಸುತ್ತಿರುವೆ ? ಯಾರನ್ನಾಶ್ರಯಿಸಿ ಈ ತಪಸ್ಸು? ಬ್ರಾಹ್ಮಣನೋ ನೀನು ? ಮಂಗಳವಾಗಲಿ ನಿನಗೆ ! ದುರ್ಜಯನಾದ ಕ್ಷತ್ರಿಯನೋ ? ಮೂರನೆಯ ವರ್ಣದ ವೈಶ್ಯನೋ, ಅಥವಾ ಶೂದ್ರನೋ ? ಸತ್ಯ ವಚನನಾಗು !'

ಹೀಗೆ ನರಾಧಿಪನ ಮಾತನ್ನು ಕೇಳಿದ ಆ ತಲೆಕೆಳಕಾಗಿದ್ದ ತಪಸ್ವಿ, ರಾಮನಿಗೆ ಹೀಗೆಂದ: 'ಶೂದ್ರಯೋನಿ ನಾನು. ಸಶರೀರವಾಗಿಯೆ ದೇವತ್ವವನ್ನು ಹೊಂದಲೆಂದೆ ಉಗ್ರ ತಪಸ್ಸನ್ನಾಚರಿಸುತ್ತಿರುವೆ. ಸುಳ್ಳನ್ನು ಹೇಳುವುದಿಲ್ಲ ನಾನು, ರಾಮ! ದೇವಲೋಕವನ್ನು ಗೆಲ್ಲಬೇಕೆಂಬಾಸೆಯಿಂದ ಈ ಉಗ್ರ ತಪಸ್ಸನ್ನು ಮಾಡುತ್ತಿರುವೆ.' ಆ ಶೂದ್ರನು ಹಾಗೆ ಮಾತಾಡುತ್ತಿದ್ದಂತೆಯೆ ರಾಮ ತನ್ನ ಸುರುಚಿರಪಟುವಾದ ವಿಮಲ ಖಡ್ಗವನ್ನು ಒರೆಯಿಂದೆಳೆದು ಅವನ ಕತ್ತನ್ನು ಕತ್ತರಿಸಿಬಿಟ್ಟನು !

"ಆ ಶೂದ್ರನು ಹತನಾದಾಗ ಇಂದ್ರಾಗ್ನಿಯಾದಿ ದೇವತೆಗಳೆಲ್ಲ 'ಸಾಧು ! ಸಾಧು !' ಎಂದು ಹೊಗಳಿದರು !".

ಈ ಮೇಲಿನ ಕಥೆಯನ್ನು ರಾಮಾಯಣದ ಮಹಾಕವಿ ವಾಲ್ಮೀಕಿಗಳೆ ಬರೆದರೆಂದು ಹೇಗೆತಾನೆ ಊಹಿಸಿಕೊಳ್ಳುವುದು? ಇಂಥ ಕೃತ್ಯವನ್ನೆಸಗುವ ಮಹಾತ್ಮನನ್ನು ಭಗವದವತಾರನೆಂದು ಹೇಗೆ ತಾನೆ ಭಾವಿಸಿಕೊಳ್ಳುವುದು? ಇಪ್ಪತ್ತನೆಯ ಶತಮಾನದ ವಿಜ್ಞಾನಾವರಣದ ಸಂದೇಹದ ಶೂನ್ಯಕ್ಕಾದರೂ ಹೇಗೆ ತಾನೆ ತಂದು ನಾಟಿ ಹಾಕಿಕೊಳ್ಳುವುದು. ಅಂಥ ಮಹಾಪುರುಷನ ಹೆಸರನ್ನು? ಇದು ವಾಲ್ಮೀಕಿಕೃತವಲ್ಲ ಎಂದು ಬಾಹ್ಯಾಂತರ ಕಾರಣಗಳಿಂದ ತೋರಿಸುವುದೇನೋ ಸರಿ. ಆದರೆ ಈ ಕಥೆಯ ರಾಮಚಂದ್ರನನ್ನು ಮರೆಯುವುದು ಹೇಗೆ? ಇಂಥ ಕಥೆಯನ್ನು ಕಲ್ಪಿಸಿದ ಮನಸ್ಸನ್ನು ಅರಿಯುವುದು ಹೇಗೆ? ನೋಟಕ್ಕೇನೊ ಈ ಕಥೆ ಏಕಲವ್ಯನ ಬೆರಳ್ಗೊಲೆಯ ಕಥೆಯಂತೆಯೆ ಇದೆ. ಆದರೆ ಅಲ್ಲಿನ್ನ ದ್ರೋಣ ಇಲ್ಲಿನ ರಾಮ ಇಬ್ಬರೂ ಒಂದೇ ಏನು? ಬೆರಳಕೊಲೆಯಿಂದೇನೊ ಅರ್ಜುನನ ಬಿಂಕ ಗೆಲ್ಲುತ್ತದೆ. ಶಂಬೂಕನ ಕೊಲೆಯಿಂದಾವ ಅಂಕ ಗೆಲ್ಲುತ್ತದೆ? ಆ ಕಥೆಯಾದರೂ ಮೂಲಕಥೆಯೊಡನೆ ಅವಿಭಾಜ್ಯವಾಗಿ ಹೆಣೆದುಕೊಂಡಿದೆ. ಈ ಕಥೆಯಾದರೂ ಹೇಗೆ ಹೊಂದಿಕೊಳ್ಳುತ್ತದೆ? ಸತ್ತ ಮಗು ಹೇಗೆ ಎದ್ದು ಬಂದಾನು? ಅದು ಅದ್ಭುತ! ಹಾಗಾದರೆ ಈ ಅಲ್ಪತನವೇಕೆ ? ವಾಲಿಯನ್ನು ಕೊಂದು, ಹಾಗೆಲ್ಲ ಕಾರಣವಿತ್ತವನು ಹೀಗೂ ಏಕೆ ಮಾಡಿರಲಾರ ಎಂಬ ಸಂದೇಹವೂ ಬಂದೀತು. ಆದರೆ ಸಮರ್ಥಿಸುವುದು ಹೇಗೆ ? ಯಾವುದೋ ಒಂದು ಕಾಲದ ಪ್ರಕಾರವು ಕಲ್ಪಿಸಿಕೊಂಡ ಕಥೆಯನ್ನು, ಅಂದಿನ ಆ ಪ್ರಕಾರವೇ ಪರಮವಿಕಾರವೆನಿಸಿಕೊಳ್ಳುವ ಈ ಯುಗಕ್ಕೆ ಹೇಗೆ ಒಗ್ಗಿಸಿಕೊಳ್ಳುವುದು, ಬಗ್ಗಿಸಿಕೊಳ್ಳುವುದು ? ಅದೇ ಶ್ರೀ ಕುವೆಂಪು ಅವರ ಮುಂದಿರುವ ಸಮಸ್ಯೆಯಾದರೂ ಕೂಡ.

ಈ ನಾಟಕದ ಚೌಕಟ್ಟನ್ನು ಮೂಲಕಟ್ಟಿನ ಆಯಕಟ್ಟಿನ ಮೇಲೆಯೆ ರಚಿಸಿಕೊಂಡಿದ್ದರೂ ಶಿಲ್ಪವೆಲ್ಲ, ಶಿಲ್ಪಶೈಲಿಗಾತ್ರವೆಲ್ಲ ತದ್ಭಿನ್ನವಾಗಿದೆ. ಇಲ್ಲೂ ರಾಮಚಂದ್ರ, ಶಂಬೂಕ ಋಷಿಯು ಬರುತ್ತಾರೆ. ಬ್ರಾಹ್ಮಣ ಅವನ ಮಗ ಕೂಡ ಬರುತ್ತಾರೆ. ಕಡೆಗೆ ಆ ಮಗುವಿನ ಸಾವು, ಬ್ರಾಹ್ಮಣ ರೋದನ, ರಾಮದರ್ಶನ ಎಲ್ಲವೂ ಬರುತ್ತದೆ. ಆದರೆ ರೀತಿ ಬೇರೆ. ಅದೇ ಹಳೆಯ ಸ್ವರಗಳು, ಬೇರೆ ಬೇರೆಯ ಆವರ್ತನಕ್ಕೊಳಗಾದಾಗಾ ಅವೇ ಬೇರೆ ಬೇರೆ ರಾಗವಾಗುತ್ತವೆ ; ಹಾಗೆಯೇ ಈ ಪಾತ್ರಗಳೂ ನಾಟಕದಲ್ಲಿ ಆಗಿವೆ. ಮೊದಲ ಅದ್ಭುತ ದೃಶ್ಯದಲ್ಲಿ ಬರುವ ಭೈರವ – ಮೃತ್ಯುಗಳ ಸಂವಾದದಲ್ಲೇ ತಿಳಿಯುತ್ತದೆ. ಶಂಬೂಕನ ತಪೋಮಹಿಮೆ, ಬ್ರಾಹ್ಮಣಬಾಲಕನ ಸಾವಿನ ಗರಿಮೆ, ಎಲ್ಲ. ಇಲ್ಲೂ ಬಾಲಕ ಸತ್ತಿರುತ್ತಾನೆ. ಕಾರಣ ಅಧರ್ಮದಿಂದ : ಶೂದ್ರನೆಂದು ಋಷಿಗೆ ತೋರಿಸಿದ ಅವಜ್ಞೆಯಿಂದ, ಅವಿನಯದಿಂದ. ಆ ಸಾವಿಗೆ ಕಾರಣವಾದ ಈ ಋಷಿ ತಿರಸ್ಕಾರವನ್ನು ಕೇಳಿದ ಭೈರವನ ಪ್ರತಿಕ್ರಿಯೆ ಇದು : 'ಶಿವಶಿವಾ ! ಏನ್ ಭಯಂಕರಂ ಪಾಪಂ, ಶ್ರೀರಾಮನಾಳುತಿರ್ಪ ಧರ್ಮ ರಾಜ್ಯದೊಳ್ !' ಅಲ್ಲಿ ಉತ್ತರಕಾಂಡದ ಕಥೆಯಲ್ಲಿ ಶಂಬೂಕನ ತಪಸ್ಸನ್ನು ಕಂಡೇ ಇಂಥ ಉದ್ಗಾರಮಾಡಿರುತ್ತಾನೆ ಬ್ರಾಹ್ಮಣ. ಇದೇ ಪ್ರಧಾನ ದೃಷ್ಟಿ ಭೇದ. ಇದು ಕವಿಯ ದೃಷ್ಟಿ ಮಾತ್ರವಲ್ಲ, ಇಡೀ ಸ್ವತಂತ್ರ ಜಗತ್ತೇ ಆ ದಿಶೆಯಲ್ಲಿ ಹೀಗೆ ಭಾವಿಸುತ್ತದೆ, ಆಲೋಚಿಸುತ್ತದೆ. ಮಹಿಮೆಯನ್ನು ಮನ್ನಿಸದ, ಹೋಗಲಿ, ಜಾತಿಕಾರಣಕ್ಕಾಗಿ ಗೌರವಿಸದ ಯಾವ ದರ್ಪಿಷ್ಠ ಪ್ರತಿಷ್ಠೆಗೂ ಸಿದ್ಧವಾಗಿರುವ ಗತಿಯೇ ಅದು.

ತನ್ನ ಮಗನ ಸಾವನ್ನು ಕುರಿತು ರಾಮನಿಗೆ ಬಿನ್ನೈಸಲೆಂದು ಅರಮನೆಯ ಮುಂದೆ ನಿಂತು ಆಳುವ ಬ್ರಾಹ್ಮಣನ ಅಳಲು ತನಗೆ ತಾನೇ ಬಹು ಹೃದಯಭೇದಕವಾಗಿದೆ.

"ನೀನೊರ್ವನೆಯೆ ಕಂದನುಂ ಕಣ್ಣುಮಾಗಿರ್ದ
ಕುರುಡಿ ನಿನ್ನಬ್ಬೆಯಂ ಮರಳಿ ನಾನೆಂತು ಕಾಣ್ಬೆನ್ ?
ನಾನ್ ಬಳಿಸಾರಲ್
ಪಜ್ಜೆಸದ್ದಂ ಕೇಳ್ದು, 'ಬಾ ಚಿಣ್ಣ' ಎನುತೆ
ಮೊಗದ ಸುರ್ಕಳಿಯೆ ಸುಖವುಕ್ಕಿ ಚಾಚಿದ ತೋಳ್ಗೆ
ಕರುಕಳಿದ ಹಸು ಹಾಲ್ ಕರೆವ ಗೌಳಿಗನಂತೆ
ನಾನಾವ ಚಕ್ಕಳದ ಕವಡು ಸಂತೈಕೆಯಂ ತುಂಬಿ,
ಬಾಳ್ಗಡಲ ಪೀರ್ವ ಬಡಬಾಗ್ನಿಯಂ ನಂದಿಸಲಿ ?"



ಇಷ್ಟು ಮನಕರಗುವಂತೆ ಬ್ರಾಹ್ಮಣನ ಅಳಲನ್ನು ಕವಿ ಚಿತ್ರಿಸಿರುವುದರಿಂದಲೆ ತಿಳಿಯುತ್ತದೆ, ಆತನಿಗೆ ಆ ಬ್ರಾಹ್ಮಣನ ಮೇಲೆ ಯಾವ ಪೂರ್ವಾಕ್ರೋಶವೂ ಇಲ್ಲ ಎಂದು. ಈ ಶೋಕಗೀತದ ಉಳಿದ ಬಹುತೇಕ ಪಂಕ್ತಿಗಳಲ್ಲಿ ಕವಿ ಮೂಲಕೃತಿಯನ್ನೆ ಮನಸ್ಸಿನಲ್ಲಿಟ್ಟುಕೊಂಡಿದ್ದಾರೆ, ಉದ್ದೇಶಪೂರ್ವಕವಾಗಿ. ಆದರೆ ಮುಂದೆ ಬರುವ ಆತ ಮಾಡುವ ಶ್ರೀರಾಮಸ್ತುತಿ, ಆ ಸನ್ನಿವೇಶಕ್ಕೆ, ಅಂದಿನ ಆ ಬ್ರಾಹ್ಮಣನ ಮನಸ್ಥಿತಿಗೆ ತುಸು ಭಾರವೆಂದೇ ತೋರುತ್ತದೆ. ಶ್ರೀರಾಮಚಂದ್ರನಾದರೂ ಧೀರಗಂಭೀರದುಃಖಿತನಾಗಿ ಆಡುವ ಮಾತು ತೂಕವಾಗಿದ್ದರೂ ಸ್ವಲ್ಪ ಹೆಚ್ಚೆನಿಸಬಹುದು, ಕಾರಣ, ಈ ಶ್ರೀರಾಮನಿಗೆ ತನ್ನ ಅವತಾರತ್ವದ ಅರಿವು ತುಸು ಗಾಢವಾಗಿರುವಂತೆ, ಸ್ವಗತಲಹರಿಯಲ್ಲೂ ಅದೇ ವ್ಯಕ್ತವಾಗುವಷ್ಟು ಕೊಂಚ ಸಾಂದ್ರವಾಗಿರುವಂತೆ ತೋರುತ್ತದೆ. 'ಅವತಾರಿಯುಣ್ಬ ಕೂಳಲ್ತೆ ಗೋಳ್ ; ಕುಡಿವಮರ್ದಲ್ತೆ ಕಣ್ಣೀರ್ !' ಎಂಬ ಮಾತು ರಾಮನೇ ಹೇಳಬೇಕಿತ್ತೆ ಎನ್ನಿಸುತ್ತದೆ.... ಮುಂದೆಬರುವ ರಾಮ – ಬ್ರಾಹ್ಮಣರ ಸಂಭಾಷಣೆಯೆಲ್ಲ ಮಾರ್ಮಿಕವಾಗಿದೆ. ರಾಮಚಂದ್ರನ ಮಾತಾವುದೂ ಬ್ರಾಹ್ಮಣನನ್ನು ಹೊಗಲೇ ಆಗುತ್ತಿಲ್ಲ. ಅದಕ್ಕೆ ಒಂದು ಕಾರಣ ಆತ ಪುತ್ರಶೋಕತಪ್ತ, ಮತ್ತೊಂದು ಕಾರಣ ಜಾತಿ ಭ್ರಾಂತ ಆಗಿದ್ದುದೆ ಆಗಿದೆ. ಆತ ಎಷ್ಟು ಜಾತಿ ಭ್ರಮಿತ ಎಂದರೆ ಶಂಬೂಕ ಋಷಿಯ ಹೆಸರನ್ನಾಗಲಿ, ಅವನ ತಪೋವನವನ್ನು ಕಾಡೆಂದಲ್ಲದೆ ತಪೋವನವೆಂದಾಗಲಿ ಹೇಳದಿರುವಷ್ಟು ; ಅದಿರುವ ದಿಕ್ಕನ್ನು ದಕ್ಷಿಣ ದಿಕ್ಕಂದಲ್ಲದೆ ಮೃತ್ಯುದಿಶೆಯೆಂದೇ ಕರೆಯುವಷ್ಟು ಮಟ್ಟಿಗೆ, ಇತ್ತು. ಮಗನ ಸಾವಿನ ನೋವಿನಲ್ಲೂ ಕರಗದಿರುವ, ಶ್ರೀರಾಮ ಪ್ರತ್ಯಕ್ಷ ದರ್ಶನದಿಂದಲೂ ಅರಗದ, ಶಂಬೂಕ ಋಷಿದರ್ಶನದಲ್ಲೂ ಬಾಗದೆ ತಾಗಿದ ಆತನ ಶಾಸ್ತ್ರಪ್ರತಿಷ್ಠಿತ ಜಾತಿಪ್ರತಿಷ್ಠೆಯನ್ನು ಯಾವ ಸಾಮಾನ್ಯ ಔಷಧಿಯಿಂದ ಕಾವಿನಿಂದ ವಾಸಿಮಾಡುವುದು. ಕರಗಿಸುವುದು? ಶ್ರೀರಾಮ ಅದನ್ನು ಕಲ್ಪಿಸಿಕೊಳ್ಳುತ್ತಾನೆ. ಬ್ರಾಹ್ಮಣಪುತ್ರ ಸತ್ತಿರುವುದಕ್ಕೆ ಕಾರಣ, ತಪೋನಿಮಗ್ನ ಶಂಬೂಕ ಮುನಿಯನ್ನು ಆ ಬಾಲಕ ಕಂಡು ನಮಸ್ಕರಿಸ ಹೋದಾಗ ಬೇಡ ಎಂದು ಆ ವೃದ್ಧ ತಡೆಯುವುದೆ ಆಗಿದೆ. ಇದನ್ನರಿತ ಶ್ರೀರಾಮ ಬ್ರಾಹ್ಮಣನಿಗೆ ಅವನ ಅಪರಾಧವೇನೆಂಬುದನ್ನು ಅರಿಸುವುದು ಹೇಗೆಂದೂ ನಿರ್ಧರಿಸಿಕೊಳ್ಳುತ್ತಾನೆ. 'ಕಾರಣದ ನಾಶದಿಂ ನಾಶಮಪ್ಪುದು ಕಾರ್ಯಮುಂ' ಎಂಬುದವನಿಗೆ ಗೋಚರಿಸುತ್ತದೆ. ಸರಿ, ಅವನೊಡನೆ ಪುಷ್ಪಕವನ್ನೇರಿ ಶ್ರೀರಾಮಚಂದ್ರ ಶಂಬೂಕ ಮುನಿಯಾಶ್ರಮಕ್ಕೆ ತೆರಳುತ್ತಾನೆ. ಅಲ್ಲಿ ನಡೆದುದು ಆಗಿ ಹೋಗಿದ್ದ ವಿಘಟನೆಯ ತಿದ್ದುಪಾಟಷ್ಟೆ ಆಗುತ್ತದೆ. 'ಏನ್ ಶಾಂತಿ ನೆಲೆಸಿರ್ಪುದೀ ಚೆಲ್ವಿನೊಳ್" ಎಂದು, ಶಂಬೂಕಮುನಿ

ಆಶ್ರಮಕ್ಕೆ ಬಂದೊಡನೆಯೆ ವಿಸ್ಮಿತನಾಗುವ ರಾಮನೇ ಆ ಋಷಿಯನ್ನು ಕಂಡಾಗ ಕೈಜೋಡಿಸುತ್ತಾನೆ. ಆದರೆ ಸತ್ತಮಗನಿಗಾಗಿ ಗೋಳಾಡಿದ್ದರೂ ಆ ವೃದ್ಧ ಬ್ರಾಹ್ಮಣನು ಶಂಬೂಕ ಋಷಿಯನ್ನು ಆತನ ತಪೋವನದಲ್ಲೆ ಅವನ ಮುಂದೆಯೆ ನಿಂತುಕೊಂಡು – ಬೈಯುತ್ತಾನೆ : 'ನಾಯಪಾಲ್ಗೆಣೆ ಶೂದ್ರನ ತಪಂ !' ಎಂದೂ ಕೂಡ ಉದ್ಗರಿಸುತ್ತಾನೆ. ಅಷ್ಟೆ ಅಲ್ಲ ಅವನನ್ನು ಕೊಲ್ಲುವಂತೆಯೂ ವಾದಿಸುತ್ತಾನೆ. ಅದರಂತೆ ಶ್ರೀರಾಮ 'ಅರಸಿಕೊಲ್ ಅರಗುಲಿಯ' ಎಂದು ತೊಡುವ ಬ್ರಹ್ಮಾಸ್ತ್ರವು, ಅದನ್ನು ಕಂಡು ಮೃತ್ಯು ಬೆಬ್ಬಳಿಸಿವೋದರೂ, ಶಂಬೂಕನತ್ತ ಧಾವಿಸಿ ವಿನೀತವಾಗಿ ಆ ಋಷಿಯ ಸುತ್ತು ಬಂದು ಕಾಲಿಗೆರಗುತ್ತದೆ. ಆಗಲೂ ಬ್ರಾಹ್ಮಣನಿಗೆಚ್ಚರವಾಗುವುದಿಲ್ಲ. ಶ್ರೀ ರಾಮಾಸ್ತ್ರವೂ ನಿಷ್ಫಲವಾಗಬೇಕಾದರೆ ಶೂದ್ರತಪಃಪ್ರಭಾವವೆ ಇದ್ದಿರಬೇಕೆಂದು ತರ್ಕಿಸುತ್ತಾನೆ. ಮುಂದೆ ನಡೆದುಬರಲಿರುವ ಆ ಮಹಾಸ್ತ್ರದ ದಾರಿಯನ್ನೂ ಗುರಿಯನ್ನೂ ತಿಳಿದ ಬ್ರಾಹ್ಮಣ ಶ್ರೀರಾಮನಡಿಗೆರಗುತ್ತಾನೆ. ಆದರೆ ಅಡಿಗೆರಗಬೇಕಾದುದು ಅವನಿಗಲ್ಲ, ಋಷಿಗೆ, "ಕಣ್‌ದೆರೆಯವೇಳ್ಕುಂ ಬುಧಪ್ರಜ್ಞೆಯುಂ, ದ್ವಿಜನ್ಮ ! ತಂದೆಯುಂ ಬರ್ದುಕುವನ್ ಕಂದನುಂ ಬಳ್ದಪನ್" ಎಂಬ ಶ್ರೀರಾಮನ ತಿಳುವಳಿಕೆ ಮಾತಿಗೂ ಎಚ್ಚರದ ಬ್ರಾಹ್ಮಣ "ಅಶಾಸ್ತ್ರಮೆಂದಳ್ಕುವೆನ್, ಕ್ಷತ್ರಿಯೋತ್ತಮ" ಎನ್ನುತ್ತಾನೆ. ಅದಕ್ಕೆ ರಾಮನಿಗೂ ಮರುಕವಾಗುತ್ತದೆ, ಕೋಪಕ್ಕೆ ಬದಲು. ಆ ವೃದ್ಧನಿಗೆ "ಸನ್ಮತಿಯ ಸತ್ಕೃತಿಗೆ ಶಾಸ್ತ್ರದ ನೆರು ಬೇಕೆ?" ಎಂಬುದೂ ತಿಳಿಯದ್ದರಿಂದ ಶ್ರೀರಾಮ ಅವನಿಗರ್ಥವಾಗುವ ಶಾಸ್ತ್ರವಾಕ್ಯದ ಮೂಲಕವೇ – ಸಂಸ್ಕೃತದ ಶ್ಲೋಕದ ಮೂಲಕವೇ – ಶ್ಲೋಕ ಪ್ರಮಾಣವನ್ನು ಕೇಳಿಸಿ ಬೋಧೆ ಮೂಡಿಸುತ್ತಾನೆ.

"ಬೋಧಮಾಯ್ತೆನಗೀಗಳ್, ಮಹಾಪ್ರಾಜ್ಞ
ಬುದ್ಧಿಗಲಿಸಿದಯ್ ಸಂಪ್ರದಾಯಬದ್ಧಂಗೆ,
ಶಾಸ್ತ್ರಸಂಮೂಢಂಗೆ, ಜಾತಿ ಗರ್ವಾಂಧಂಗೆ –
ಆವ ಜಾತಿಯ ತರವೂ ? ಇಂಧನಕೆ ಹೊರತುಂಟೆ ?
ಬೆಂಕೆಗೇಂ ಭೇದಮೆ ? ದಳ್ಳುರಿಗೆ ದಾಕ್ಷಿಣ್ಯಮೆ ?
ಆರಾದರೇನ್ ? ಆರಾಧ್ಯರ್ ತಪೋಧನರ್ !
ನಮಸ್ಕಾರಮೆ ಪುಣ್ಯಂ ; ತಿರಸ್ಕಾರಮೆ ಪಾಪಂ !"

ಈ ಅರಿವು ಅವನಿಗೆ ಆಗಿ ಮೈಮೇಲೆ ಬಂದಂತಾಗುತ್ತದೆ. ಋಷಿಗೆ ನಮಸ್ಕರಿಸುತ್ತಾನೆ. ತತ್‌ಕ್ಷಣವೆ ಸತ್ತ ಮಗು ಮೇಲೆದ್ದು ಬರುತ್ತದೆ. ಶ್ರೀರಾಮನನ್ನು ಕಂಡು ಆಶ್ಚರ್ಯಗೊಂಡು, ತಂದೆಯನ್ನನಂತರ ನೋಡಿ ತಬ್ಬಿಕೊಂಡು ಆ ಬದುಕಿ ಬಂದ ಮಗು ಹೊಸ



ಅರಿವನ್ನೆ ಉಂಟುಮಾಡುತ್ತದೆ. ತನಗೆ ಮಾಡಿದ ನಮಸ್ಕಾರಗಳನ್ನು ಶ್ರೀರಾಮ ಶಂಬೂಕರತ್ತ ನಿರ್ದೇಶಿಸುತ್ತಾನೆ. ನಾಟಕ 'ಅಖಿಲರ್ಗೆ ಶ್ರೇಯಮಕ್ಕೆ ! ರಾಜ್ಯಂ ನಿರ್ವಿಘ್ನಮಕ್ಕೆ ! ಋತಂಗೆಲ್ಗೆ' ಎಂಬ ಶ್ರೀರಾಮವಾಣಿಯಿಂದ ಕೊನೆಯಾಗುತ್ತದೆ.

ಈ ನಾಟಕ ಹೀಗವತರಿಸಿದ್ದುದು ಕೆಲವು ವರ್ಗಗಳಲ್ಲಿ ಅಸಮಾಧಾನವುಂಟು ಮಾಡಿತೆನ್ನುವುದಕ್ಕೆ ಪ್ರತಿನಿಧಿಯಾಗಿ ಶ್ರೀ ಮಾಸ್ತಿ ಅವರ ವಿಮರ್ಶೆ ಬಂದಿತು. ಅದಕ್ಕೆ ಅಗ್ನಿಸ್ನಾನ ಮಾಡಿಸುವಂತಹ ಮಾರ್ನುಡಿಯನ್ನು ಶ್ರೀ ಕುವೆಂಪು ಅವರೇ ನಾಟಕದ ಎರಡನೆಯ ಮುದ್ರಣದಲ್ಲಿ ಪ್ರಕಟಿಸಿದರು. ನಾವೀಗ ಈ ಎರಡು ಮುಖಗಳನ್ನಿಲ್ಲಿ ಕೂಲಂಕಷವಾಗಿ ವಿಮರ್ಶಿಸುವುದು ಅಗತ್ಯ. ಶ್ರೀ ಮಾಸ್ತಿ ಅವರ ದೃಷ್ಟಿಯಲ್ಲಿ ಈ ನಾಟಕವೇ 'ಅತೃಪ್ತಿ' ಉಂಟು ಮಾಡುವಂತಹುದು. "ಈ ದೃಶ್ಯದಲ್ಲಿಯ ಕಲ್ಪನೆ ಒಟ್ಟಿನಲ್ಲಿ ಓದುವವರ ಮನಸ್ಸಿನಲ್ಲಿ ಅತೃಪ್ತಿಯನ್ನು ಉಂಟುಮಾಡುತ್ತದೆ" ಎಂದವರು ಅಭಿಪ್ರಾಯಗೊಳ್ಳುವುದಕ್ಕೆ ಅವರವೇ ಆದ ಕಾರಣಗಳೂ ಉಂಟು. "ವಕ್ರದೃಷ್ಟಿಯ ಹಿಂದಿನ ಕಥೆಯನ್ನು ತಿದ್ದುವೆನೆಂದು ಹೋಗುವುದು ಬೇರೆಯವರು ಹಾಕಿದ ನೆಲಗಟ್ಟಿನ ಮೇಲೆ ನಮ್ಮ ಮನಸ್ಸಿಗೆ ಒಪ್ಪುವ ಭವನವನ್ನು ಕಟ್ಟುವೆವೆನ್ನುವ ಪ್ರಯತ್ನದಂತೆ. ಇಂದು ನಾವು ಏನು ಮಾಡಿದರೂ ಹಿಂದಿನ ಗೀರು ಇದ್ದೇ ಇರುತ್ತದೆ. ಹೊಸಕಾಲದ ಧರ್ಮವನ್ನು ಹೇಳುವುದಕ್ಕೆ ಹೊಸ ಕಥೆಯನ್ನೇ ಹೇಳುವುದು ಕ್ಷೇಮ ಎಂದು ಶ್ರೀ ಪುಟ್ಟಪ್ಪನವರಿಗೆ ಸೂಚಿಸುತ್ತೇನೆ." ಇದಕ್ಕೆ ಕವಿಗಳ ಉತ್ತರವೇ ಹೀಗಿದೆ : "ಈ ಟೀಕೆ ಮತ್ತು ಸೂಚನೆ ಅತ್ಯಂತ ಆಶ್ಚರ್ಯಕರವೂ ಹಾಸ್ಯಾಸ್ಪದವೂ ಆಗಿ ತೋರುತ್ತದೆ. 'ಅತ್ತ ಪುಲಿ, ಇತ್ತ ದರಿ !' ಹೊಸ ಕಾಲದ ಹೊಸ ಧರ್ಮವನ್ನು ಹೇಳಲು ಹೊಸ ಕಥೆಯನ್ನು ಕಟ್ಟಿದರೆ ಸಜೀವವಾದ ಜಾತಿವಿದ್ವೇಷದ ಉದ್ರೇಕಭೂತಗಳನ್ನು ಎಬ್ಬಿಸುತ್ತದೆ, ಆ ಸ್ಥಳದವರೂ ಆ ಮತದವರೂ ಈ ಕೋಮಿನವರೂ ಕೋರ್ಟಿಗೆ ಹೋಗುತ್ತೇವೆ ಎನ್ನುತ್ತಾರೆ. ಆ ರಗಳೆಯೆ ಬೇಡವೆಂದು ಹಳೆಯ ಕಥೆಗಳನ್ನು ಅಳವಡಿಸಿಕೊಂಡರೆ ವಿಮರ್ಶಕರು ನಮ್ಮ ಕ್ಷೇಮದ ವಿಚಾರವಾಗಿ, ಕಾತರರಾಗಿ ಸೂಚನೆಕೊಡಹೋಗುತ್ತಾರೆ. ಎಂತಹ ವಿಚಿತ್ರ ಸನ್ನಿವೇಶ – ಸಾಹಿತ್ಯದ ಸಮಾಧಿಗೆ! ಅದಿರಲಿ. ಈ ದೃಶ್ಯದಲ್ಲಿರುವುದೇನೂ ಹೊಸದಾದ ತತ್ತ್ವವಲ್ಲ. ಅತ್ಯಂತ ಪ್ರಾಚೀನವಾದುದು, ನಿತ್ಯವಾದುದು, ಅನಾದಿಯಾದುದು, ತಪಸ್ಸು ಶಕ್ತಿಯುತವಾದದ್ದು. 'ತಪಂ ಪೂಜ್ಯಕರ್ಮಂ', 'ತಪಕ್ಕೆಣೆಯುಂಟೆ, 'ತಪಂ ತಾನಿರ್ಪೆಡೆಯೊಳೆ ದೂರಕರ್ಮಿ' ಮೊದಲಾದ ತತ್ತ್ವಗಳು ನಿತ್ಯಸತ್ಯಗಳು. ಆದ್ದರಿಂದ ಹೊಸ ತತ್ತ್ವದ ಮಾತೆತ್ತುವುದು ಭ್ರಾಂತಿ."

"ಅಲ್ಲದೆ ಹಳೆಯ ಕಥೆಯನ್ನು ಹೊಸ ಸಾಹಿತಿ ತನ್ನ ಕೃತಿಗೆ ತನ್ನಿಷ್ಟ ಬಂದಂತೆ ಬಳಸಿಕೊಳ್ಳುವ ಪದ್ಧತಿಯೂ ಮಹಾಕವಿಸಿದ್ಧವಾದುದು. ನಾನು ತಪ್ಪಿದ್ದರೂ ಕಾಳಿದಾಸ, ಭಾಸ, ಪಂಪ, ಕುಮಾರವ್ಯಾಸಾದಿಗಳೊಡನೆ ತಪ್ಪಿದ್ದೇನೆ, ಮಹಿಮರೊಡನೆ ತಪ್ಪಿದ್ದರೆ ಆ ತಪ್ಪು ನನಗೊಪ್ಪು. 'ಸತ್ಸಂಗ ಜಾನಿ ನಿಧನನ್ಯಾಪಿ ತಾರಯಂತಿ' ಎಂದಿಲ್ಲವೆ ಭವಭೂತಿ."

ಮೇಲೆ ಉದ್ಧರಿಸಿರುವ ವಿಮರ್ಶಕರ ಟೀಕೆಗೆ ಕವಿಗಳ ಮಾತೇ ಸಮರ್ಥವಾಗಿ ಉತ್ತರವಿತ್ತಿದೆ. ಆದರೂ ಒಂದೆರಡು ಬೇರೆ ಮಾತನ್ನಿಲ್ಲಿ ಹೇಳಬಹುದು. 'ವಕ್ರ ದೃಷ್ಟಿಯ ಹಿಂದಿನ ಕಥೆಯನ್ನು ತಿದ್ದುವೆನೆಂದು ಹೋಗುವುದು ಬೇರೆಯವರು ಹಾಕಿದ ನೆಲೆಗಟ್ಟಿನ ಮೇಲೆ ನಮ್ಮ ಮನಸ್ಸಿಗೆ ಒಪ್ಪುವ ಭವನವನ್ನು ಕಟ್ಟುವೆವೆನ್ನುವ ಪ್ರಯತ್ನದಂತೆ, ಎಂಬ ಮಾಸ್ತಿಯವರ ಮಾತು ವಿಮರ್ಶೆಗೆ ಯೋಗ್ಯವಾದದ್ದೆ. ಇದನ್ನೊಪ್ಪಿದರೆ ನಾವು ಯಾವ ಹಳೆಯದನ್ನೂ ಅದು ಒಬ್ಬೊಬ್ಬರಿಗೆ ಒಂದೊಂದು ಕಾರಣದಿಂದ ವಕ್ರವಾಗಿರಬಹುದಾದ್ದರಿಂದ – ಮತ್ತೆ ನಮ್ಮ ಯುಗಕ್ಕೆ ಒಪ್ಪುವ ಹೊಸ ರೂಪದಲ್ಲಿ ತಂದುಕೊಳ್ಳುವುದೇ ಸಾಧ್ಯವಾಗುವುದಿಲ್ಲ. ಹಳೆಯದು ಬದುಕುವುದು ಬರಿಯ ಮಕ್ಕಿಕಾಮಕ್ಕಿ ಪಠಣದಿಂದಲ್ಲ : ಅದರ ಪುನರ್ ವ್ಯಾಖ್ಯಾನದಿಂದ ಪುನರ್ ಸೃಷ್ಟಿಯಿಂದ. ಅದಕ್ಕೊಗ್ಗದ ಯಾವ ಹಳತೂ ಹಳಸಿಹೋಗುತ್ತದೆ. ಶ್ರೀರಾಮ ಕಥೆ ಎಷ್ಟರಮಟ್ಟಿಗೆ ಈ ಯುಗಗಳಿಗೆ ಹರಿದುಬಂದಿದೆ ಎಂದರೆ ಅದಕ್ಕೆ ಹಿಂದಿದ್ದ ಆಕಾರ ತಕ್ಕಷ್ಟು ವ್ಯತ್ಯಾಸವಾಗಿದೆ. ಇದು ವ್ಯಷ್ಟಿ ಸೃಷ್ಟಿಯೇನೂ ಅಲ್ಲ. ಸಮಷ್ಟಿಯ ಅಪ್ರಜ್ಞಾಪೂರ್ವಕವಾದ ಪ್ರತಿಸೃಷ್ಟಿ – ಅನುಸೃಷ್ಟಿ. ಇದು ಒಂದು ಗಮನಾರ್ಹ ಪ್ರಮಾಣದಲ್ಲಾದರೆ ಆ ಯುಗದ ಸಮರ್ಥಕವಿ ಇದನ್ನು ಸಮರ್ಥವಾದ ಮಾಧ್ಯಮದ ಮೂಲಕ ಪ್ರತಿಮಿಸುತ್ತಾನೆ. ಶಂಬೂಕ ಪ್ರಸಂಗದ ಬಗ್ಗೆಯೆ ಹೇಳುವುದಾದರೆ, ನಾನು ಈ ಯುಗಕ್ಕೆ, ಈ ಕಥೆಯಲ್ಲಿ ಬರುವ ರಾಮನ ವರ್ತನವನ್ನು ಹೇಗೆ ತಾನೇ ಸಮರ್ಥಿಸುವುದು. ಅಂತಹವೊಂದು ಶೋಷಕವರ್ಗ ವಿಭೇದವೆ ಮುದಿಯಾಗದೆ ಈಗಲೂ ಇದ್ದಿದ್ದರೆ, ವಿಜ್ಞಾನ ಅದೆಲ್ಲಕ್ಕೂ ದಾವಾನಲವಾಗಿ ಈಗ ಬರದಿದ್ದರೆ, ರಾಜಕೀಯ ಗತಿಯೂ ಪ್ರಜಾಪ್ರಭುತ್ವದ ಸರ್ವಸಮಾನತೆಯನ್ನೊಪ್ಪಿಕೊಳ್ಳದ, ಪ್ರಾಕ್ ಸ್ಥಿತಿಯಲ್ಲೆ ಇದ್ದಿದ್ದರೆ ಆಗ ಸಾಧ್ಯವಾಗುತ್ತಿತ್ತು, ಆ ಕಥೆಯನ್ನೆ ಯಾವ ವ್ಯತ್ಯಾಸವೂ ಇರದೆ ಈ ನೆಲಕ್ಕೆ ಹಾಗೆಯೇ ಊರುವುದು. ದುರದೃಷ್ಟವೊ ದೈವಕೃಪೆಯೊ ತಿಳಿಯದು. ಕಾಲಚಕ್ರ ಮುಂದುರುಳಿದೆ. ಈ ಇಂಥ ಯುಗಕ್ಕೆ ಆ ಹಳೆಯ ಕಥೆ ಹೇಗೆ ಬರಬೇಕು, ಬರುವುದೇ ಬೇಡವೆಂದರೆ ಆ ಕಥೆಯನ್ನು ಹಾಗೆಯೆ ಮೂಲದಲ್ಲಿ ಯಾರಾದರೂ



ಹೇಗೆ ಓದಿ ಮೆಚ್ಚಿಕೊಂಡಾರು? ಉಳಿದೆಲ್ಲ ರಾಮಾಯಣದ ಕಥೆಯನ್ನೆಂತೊ ಅಂತೆ? ಅದರಿಂದ ಎಂಥ ಭಯಂಕರ ಪರಿಣಾಮವಾಗಬಹುದು? ಕಾರಣ, ಹಳೆಯ ಕಥೆಯನ್ನು ಓದುವವರಿಗೆಲ್ಲ ಚಾರಿತ್ರಿಕಪ್ರಜ್ಞೆ ಇದ್ದೇ ಇರುತ್ತದೆಂಬ ನಂಬುಗೆಯಿಲ್ಲವಲ್ಲ. ಒಂದು ವೇಳೆ, ಹೊಸ ಯುಗದಲ್ಲಿದ್ದೂ ಆ ಹಳೆಯ ಧರ್ಮಯುಗವನ್ನೆ ಜಪಿಸುತ್ತಿರುವವರು, ಈಗ ಅದರ ಸಿದ್ಧಿ ಲಭಿಸುವ ಯಾವ ಆಶೆಯೂ ಇಲ್ಲದ್ದರಿಂದ, ಆ ಹಳೆಯ ಶಂಬೂಕ ಮಹಾಕಥೆಯನ್ನೇ ಓದಿ ಓದಿ ಸವಿದು ಕೃತಾರ್ಥರೂ ಆಗುವುದು ಸಾಧ್ಯ ! 'ಇಂದು ನಾವು ಏನೇ ಮಾಡಿದರೂ ಹಿಂದಿನ ಗೀರು ಇದ್ದೇ ಇರುತ್ತದೆ', ಎಂಬ ಮಾಸ್ತಿ ಅವರ ಮಾತು ಅರ್ಥವತ್ತಾದುದು. ಅದು ಸತ್ಯವೂ ಅಹುದು. ಹೇಗೆಂದರೆ, ಇಂದಿನ ವಿಜ್ಞಾನಯುಗದಲ್ಲಿದ್ದೂ, ಹೆಚ್ಚು ಆಧ್ಯಾತ್ಮಿಕತೆಯನ್ನು ಅನುಭಾವಿಸಿಕೊಳ್ಳಬಹುದಾದ ಸ್ಥಿತಿ ಒದಗಿದ್ದೂ, ರಾಜಕೀಯ ಅನಿವಾರ್ಯತೆಗಳು ಹಳೆಯ ವ್ಯವಸ್ಥೆಗಳನ್ನೂ ಒಪ್ಪದಿರುವುದಾಗಿದ್ದೂ, ಸಂಪ್ರದಾಯಸ್ಥ ಮನಸ್ಸು ತನ್ನ ಹಳೆಯ ಗೆರೆ ಬರೆಗಳನ್ನೆ ಉಳಿಸಿಕೊಂಡಿರಬಹುದಾಗಿರುವಂತೆ! ಇದರ ಪ್ರತಿನಿಧಿ ಈ ನಾಟಕದ ಬ್ರಾಹ್ಮಣ. ದುಃಖಭಾರದಲ್ಲಿ ತತ್ತರಿಸಿದರೂ, ಶ್ರೀರಾಮಸಾನ್ನಿಧ್ಯದಲ್ಲಿದ್ದೂ, ಋಷ್ಯಾಶ್ರಮದಲ್ಲಿ ಅಲ್ಲಿನ ಮಹಿಮೆಯನ್ನು ಕಾಣುತ್ತಿದ್ದೂ ಕೂಡ, ಶೂದ್ರತಪಸ್ಸನ್ನು ಗ್ರಹಿಸಲಾಗದಿರುವ, ಅಷ್ಟೆ ಅಲ್ಲ ಒಪ್ಪಲು ಸಿದ್ಧವಿಲ್ಲದಿರುವ ಆ ಬ್ರಾಹ್ಮಣ ಇಂಥವರ ಪ್ರತೀಕವಷ್ಟೆ. ಅದಕ್ಕೆ ಆಗಬೇಕಾಗದದ್ದು

*Caught in endless thread of the net of infinite rites, cermonies, and customs, which it spread on all sides as external means for purification of the body and the mind with a view to keeping the society with the iron grasp of these innumerable bonds - the priestly power, thus hopelessly entangled from head to foot, is now asleep in despair. There is no escape out of it now. Tear the net and the priesthood of the priest is shaken to its foundation! There is implanted in every man, naturally a strong desire for progress... The chief cause of India's ruin has been the monopolising of the whole education and intelligence of the land, by dint of pride and royal authority, among a hanful of men- *Those who lay the fault of attempting to bring down the priestly class at the door of any particular person, or body of persons, other than themselves, ought to know that, in obedience to the inevitable law of nature, the Brahmin caste is erecting with its own hands, its own sepulchur; and that is what ought to be. It is good appropriate that every caste of high brith and privileged nobility should make it its principhl duty to raise its own funeral pyre with its own hands."*

- Sri Swamy Vivekananda
Complete works : Vol. IV, pp. 456, 458, 482.

ಶುದ್ಧಿಸ್ನಾನವಷ್ಟೆ.* ... ..... ಹೊಸ ಕಾಲದ ಹೊಸ ಧರ್ಮವನ್ನು ಹೇಳುವುದಕ್ಕೆ ಹೊಸ ಕಥೆಯನ್ನೆ ಹೇಳುವುದು ಕ್ಷೇಮ' ಎಂಬ ಮಾತಿಗೆ ಕಾರಣವಿಲ್ಲ. ತನ್ನ ಕಾಲದ ಕಥೆ ತನ್ನ ಕಾಲದ ಋತವನ್ನಷ್ಟೆ ಹೇಳವುದಲ್ಲ ಮುಖ್ಯ ; ಹಳೆಯ ಕಥೆ ಹೊಸ ಋತದಲ್ಲಿ ಹೇಗೆ ಬದುಕುತ್ತದೆ ಎನ್ನುವುದು. ಹಳೆಯ ಪ್ರಮಾದ ತನ್ನನ್ನು ತಾನು, ಹೊಸ ಅನಿವಾರ್ಯತೆಯಿಂದಲಾದರೂ ತಿದ್ದುಕೊಳ್ಳಲಾಶಿಸದಿದ್ದರೆ, ಆಗದಿದ್ದರೆ ಅದು ಇಂದು ಬದುಕಲು ಅನರ್ಹವಾಗುತ್ತದೆ. ನಮಗೆ ಶ್ರೀರಾಮ ಮುಖ್ಯ ; ಆತನು ಆ ಲೋಕದವನೆಂತೊ ಈ ಲೋಕದವನೂ, ಆಗಾಮಿ ಲೋಕದವನೂ ಹೌದು. ಇವನು ನಮ್ಮ ಇಂದಿನ ಅಗತ್ಯವಾದದ್ದರಿಂದ, ಅವನ ಕಾಲಿಗೆ ತಗಲಿರುವ ಮುಳ್ಳನ್ನು ಕಿತ್ತು ಬಿಸುಟು, ಅವನನ್ನು ನಮ್ಮಲ್ಲಿಗೆ ಕರೆದುಕೊಳ್ಳಬೇಕಾಗಿದೆ. ಆ ವಿಧಾನವೆಂದರೆ ಇಂಥ ಕೃತಿಗಳೆ!

"ಅಪರಾಧ ಯಾವುದು ಎಂಬ ವಿಷಯದಲ್ಲಿ ಉತ್ತರಕಾಂಡದ ಭಾವನೆಗೂ ಈ ದೃಶ್ಯದ ಭಾವನೆಗೂ ಬಹಳ ಅಂತರವಿದೆ ಎಂಬುದನ್ನು ಹೇಳಬೇಕಾಗಿಲ್ಲ. ಉತ್ತರ ಕಾಂಡದ ಕಥೆಯಲ್ಲಿ ಪ್ರಕಟವಾಗುವ ಮನೋಧರ್ಮ ವರ್ಣವ್ಯವಸ್ಥೆಯನ್ನು ಕುರಿತು ಒಂದು ತೀವ್ರವಾದ ಶ್ರದ್ಧೆ. ಈ ಕಾವ್ಯದಲ್ಲಿ ಅದನ್ನು ಜಾತಿಗರ್ವಾಂಧತೆ ಎಂದು ವರ್ಣಿಸಿರುವುದು ಕಾಣುತ್ತದೆ." ಎಂಬ ಶ್ರೀ ಮಾಸ್ತಿಯವರ ಮಾತಿಗೆ ಶ್ರೀ ಕುವೆಂಪು ಅವರ ಉತ್ತರವಿದು. "ಅವಿವೇಕ ತೀವ್ರವಾದ ಶ್ರದ್ಧೆಯಾದರೂ ಅವಿವೇಕವಾಗಿಯೇ ನಿಲ್ಲುತ್ತದೆ. ತನ್ನ ಶ್ರದ್ಧಾಂಶದಲ್ಲಲ್ಲದಿದ್ದರೂ ಅವಿವೇಕಾಂಶದಲ್ಲಿ ತಿದ್ದುಪಡೆಯಬೇಕಾದುದೇ ಅತ್ಯಂತ ಅಗತ್ಯ." ಈ ದೃಶ್ಯದಲ್ಲಿ ನಡೆದಿರುವ ಕೆಲಸವೂ ಅದೇ. ಶ್ರದ್ಧೆಯ ಖಂಡನೆಯಲ್ಲ. ಅವಿವೇಕದ ತಿದ್ದುಪಡಿ. ಈ ಉತ್ತರಕ್ಕಿಂತ ಬೇರೆ ಸಮಾಧಾನ ಅನಗತ್ಯವಾದರೂ ಒಂದು ಮಾತನ್ನಾಡಬಹುದು. ಒಂದು ಕಾಲದ ತೀವ್ರ ಶ್ರದ್ಧೆಗೆ ಅದು ಒಂದು ವ್ಯಕ್ತಿಯದಾಗಿದ್ದಾಗ ನಾವದಕ್ಕೆ ಗಮನಕೊಡಬೇಕಾದುದೇನೂ ಇಲ್ಲ. ಆದರೆ ಅದು ಯುಗದ ಶ್ರದ್ಧೆಯೆ ಆಗಿದ್ದಾಗ ಅದಕ್ಕೆ ಸೂಕ್ತ ಗಮನ ಕೊಡದಿರಲಾಗುವುದಿಲ್ಲ. ಅಂದಿನ ಮೌಲ್ಯ ಇಂದು ಎಷ್ಟರಮಟ್ಟಿಗೆ ವಿವಮೌಲ್ಯಗೊಂಡಿದೆ ಎಂದರೆ ಅಂದಿನದು ಇಂದಿಗೆ ಜಾತ್ಯಂಧತೆಯೆಂದಲ್ಲದೆ ಬೇರೆ ತೋರುತ್ತಿಲ್ಲ. ಅಂದು ತಪಸ್ಸು ಮಾಡಿದವ, ಸಂಸ್ಕೃತ ಓದಿದವ, ಶ್ರುತಿಗನ್ನು ಕೇಳಿದವ ಸಾಯುವುದು, ಕೊಲೆಗೊಂಬುದು ಪರಮ ಶ್ರದ್ಧೆಯಾಗಿತ್ತು. ಇಂದಾ ಸಂಸ್ಕೃತವೇ ತನ್ನ ಬದುಕಿಗೆ 'ನನ್ನನ್ನು ಎಲ್ಲ ಕಲಿಯಿರಿ' ಎಂದು, ಎಲ್ಲರಿಗೂ ಮೊರೆ ಇಟ್ಟುಕೊಳ್ಳುತ್ತಿದೆ. ಹಿಂದೆ ಬೇಡವೆಂದಿದ್ದ ಮಹಾಚಾರ್ಯರ ಮೂಲಕವೇ ! ಹಾಗೆಯೇ ತಪಸ್ಸಿನ ಬಗ್ಗೆಯೂ ಸತ್ಯ. ಆದ್ದರಿಂದಲೆ,



ಇದನ್ನು – ಈ ಯುಗದ ಪರಿವರ್ತನವನ್ನು ಆ ಕಥೆಯಾದರೂ ಹೇಗೆ ಮೈದಾಳಿಕೊಳ್ಳಬೇಕು, ಹೀಗಲ್ಲದೆ? ಶೂದ್ರತಪಸ್ವಿಯ ತಪಸ್ಸನ್ನು ಕೊಲೆಗೈಯುವುದಿನ್ನು ಸಾಧ್ಯವಿಲ್ಲ. ಅದನ್ನು– ಯಾರೂ ನಮಸ್ಕರಿಸಲೆ ಬೇಕು. ತಪಸ್ಸಿಗೆ ಶಕ್ತಿಯಿದ್ದರೆ, ಎಂದರೆ, ಇಲ್ಲಿನ ಬ್ರಾಹ್ಮಣನಿನ್ನು ಶೂದ್ರತಪಸ್ವಿಯನ್ನು ಗುರುತಿಸದೆ ಗೌರವಿಸದೆ ಅನ್ಯಥಾ ಶರಣಿಲ್ಲ ; ಅದಲ್ಲದೆ ಬದುಕಿಲ್ಲ. ಆದ್ದರಿಂದಲೆ, ಅವನು ನಮ್ಮ ಯುಗದ ಅನುಭವವಾಗಿ ಈ ನಾಟಕದಲ್ಲಿ ವರ್ತಿಸುತ್ತಾನೆ. ಅವನು ಶೂದ್ರ ತಪಸ್ವಿಯನ್ನು ಒಪ್ಪುವುದು ನಮಸ್ಕರಿಸುವುದು ತನ್ನ ಉದ್ಧಾರಕ್ಕೇ ಹೊರತು ಅವನ ಶ್ರೇಯಸ್ಸಿಗಲ್ಲ.

"ಆದರೆ ಪೂಜ್ಯನಿಗೆ ನಮಸ್ಕಾರ ಮಾಡದಿದ್ದವನಿಗೆ ಸಾವು ಶಿಕ್ಷೆ ಎನ್ನುವುದು ಹಿಂದಣ ಕ್ರೌರ್ಯಕ್ಕೆ ಪ್ರತಿಯಾದ ಇನ್ನೊಂದು ಕ್ರೌರ್ಯವಾಗುತ್ತದೆ. ಜೊತೆಗೆ ತಂದೆಯ ಮಾತಿನಂತೆ ನಡೆದ ಎಳೆಯನು ಹೀಗೆ ಸಾಯುವುದು 'ಅಪ್ಪ ಸೋರೆಗಾಯಿ ತಿಂದರೆ ಮಗನಿಗೆ ಹೊಟ್ಟೆನೋವು' ಎಂಬ ನೀತಿಯಾಗುತ್ತದೆ." ಎಂಬುದು ಶ್ರೀ ಮಾಸ್ತಿ ಅವರ ಅಭಿಪ್ರಾಯವಾದರೆ ಶ್ರೀ ಕುವೆಂಪು ಅವರ ಸಮಾಧಾನವಿದು : "ಈ ಟೀಕೆ ತನಗೆ ತಾನೆ ಸತ್ಯವಾದರೂ ಪ್ರಕೃತ ದೃಶ್ಯಕಾವ್ಯಕ್ಕೆ ಸ್ವಲ್ಪವೂ ಅನ್ವಯವಾಗುವುದಿಲ್ಲ. ಏಕೆಂದರೆ, ಇಲ್ಲಿ ಬ್ರಾಹ್ಮಣ ಕುಮಾರ ಸಾಯುವುದಿಲ್ಲ. ಅಲ್ಲಿ ಶಂಬೂಕನು ತೀರಿಕೊಂಡಂತೆ. ಕೊನೆಯಲ್ಲಿ ಬದುಕುತ್ತಾನೆ. ಶ್ರೀ ರಾಮಚಂದ್ರನೇ ಆಶ್ವಾಸನೆ ಕೊಟ್ಟಿದ್ದಾನೆ : 'ಅಮೃತನಕ್ಕುಂ ನಿನ್ನೀ ಚಿರಂಜೀವಿ' ಎಂದು. ಅವನು ನಿಜವಾಗಿಯೂ ಸತ್ತಿದ್ದರೆ 'ಅಪ್ಪ ಸೋರೆಗಾಯಿ ತಿಂದರೆ ಮಗನಿಗೆ ಹೊಟ್ಟೆನೋವು ಎಂಬ ನೀತಿ' ಒಪ್ಪಾಗುತ್ತಿತ್ತು. ಅಲ್ಲದೆ ಸಾಯುವುದು ಸತ್ತವನಿಗೆ ಶಿಕ್ಷೆಯಾಗುವುದಕ್ಕಿಂತ ಸಮಧಿಕತರವಾಗಿ ಬದುಕಿ ದುಃಖಿಸುವವರಿಗೆ ಶಿಕ್ಷೆಯಾಗುತ್ತದಲ್ಲವೆ ?.. ಅವನ ಜೀವನವನ್ನು ಸೆಳೆದ ಮೃತ್ಯು ಧರ್ಮಸಂಸ್ಥಾಪನೆಯ ಸಲುವಾಗಿ ಅಮೃತ ಕ್ಷೇತ್ರವಾದ ತಪೋವನದಿಂದ ಬಾಲಕನ ಜೀವವನ್ನು ಕೊಂಡೊಯ್ಯವುದೂ ಇಲ್ಲ. ಈ ದೃಶ್ಯದ ಉದ್ದೇಶ ಒಟ್ಟಿನಲ್ಲಿ ಶಿಕ್ಷೆಯೂ ಅಲ್ಲ, ಕ್ರೌರ್ಯವೂ ಅಲ್ಲ. 'ಈ ಶಾಸ್ತ್ರ ಮೂರ್ಖಂಗೆಂತು ಬುದ್ಧಿಗಲಿಪೆನ್' ಎಂಬುದೂ ಶ್ರೀರಾಮನ ಆಶಯ." ಶ್ರೀ ಮಾಸ್ತಿ ಅವರ ಆಕ್ಷೇಪಣೆಯ ಮೊದಲ ಈ ವಾಕ್ಯ. "ಅಂದಿನ ಕ್ರೌರ್ಯಕ್ಕೆ ಮತ್ತೊಂದು ಹೊಸ ಕೌರ್ಯವನ್ನು ಒಡ್ಡಿದ್ದಾರೆ," ಎಂದೇನೂ ಅರ್ಥ ನೀಡುತ್ತಿಲ್ಲ ಎಂದೇ ಆಶಿಸಬಹುದು. ಆದರೊಂದು ಮಾತು. ಬ್ರಾಹ್ಮಣ ಬಾಲಕ ನಮಸ್ಕರಿಸದಿದ್ದರೇಕೆ ಸಾವುಂಟಾಗಬೇಕು ? ತಪಸ್ಸಿಗೇಕೆ ಆ ಆಕ್ರೋಶ? ಎಂಬ ಸಂದೇಹ ಏಳದಿರದು, ತನ್ನನ್ನು ಧಿಕ್ಕರಿಸಿದವರನ್ನು ಗಮನಿಸುವುದಾಗಲಿ ತಿರಸ್ಕರಿಸುವುದಾಗಲಿ ಸಾತ್ವಿಕ ತಪಸ್ಸಿನ ಗುಣವಾಗುತ್ತದೆಯೊ ತಿಳಿಯದು. ಅದರಿಂದ

ತಪಸ್ಸಿಗೂ ನಷ್ಟವಾದೀತೇನೋ ! ಹೀಗೆ ಮತ್ತೂ ಲಹರಿ ಬರುವುದು ಸಾಧ್ಯ. ಆದರೆ ಇದಕ್ಕೆ ಸ್ವಲ್ಪ ಸಮಾಧಾನವಿಷ್ಟೆ. ಮೊದಲ ಸಂಗತಿಯೆಂದರೆ, ವಾಸ್ತವವಾಗಿ ಆ ಮಗು ಸತ್ತಿರುವುದೇ ಇಲ್ಲ. ಸಾವಿನ ಮೋಡಿಗೆ ಒಳಗಾಗಿರುತ್ತದೆ. ಮತ್ತೊಂದು ಸಂಗತಿಯೆಂದರೆ ಅಷ್ಟಾದದ್ದೂ ಕೂಡ ಋಷಿಯ ದೆಶೆಯಿಂದಲ್ಲ ; ಋತ ರಕ್ಷಕ ದೈವದಿಂದ. ಅದು ತನ್ನ ಕೆಲಸವನ್ನು ಮಾಡಿಯೆ ಮಾಡುತ್ತದೆ. ಯಾರು ಒಪ್ಪಲಿ ಬಿಡಲಿ. ಯಾವ ರೀತಿಯ ಅಧರ್ಮವೂ ಅದಕ್ಕೆ ಸಹ್ಯವಲ್ಲವಾದ್ದರಿಂದಲೆ, ತಪಸ್ಸಿನ ಧಿಕ್ಕಾರ ಶೂದ್ರ ಭಾವನೆಯಿಂದಾಗಿಯಾದರೂ ಆ ಶಿಕ್ಷೆಯನ್ನನುಭವಿಸಬೇಕಾಗುತ್ತದೆ. ಅದೊಂದು ರೀತಿಯ ಪ್ರಜ್ಞೆತಪ್ಪಿಸಿ ಶಸ್ತ್ರ ಚಿಕಿತ್ಸೆ ಮಾಡುವ ಅನೆಸ್ತಿಸಿಯ ಕರ್ಮ ; ಕೊಲೆಯಲ್ಲ.

"ಈಗ ನಮಗೆ ಬೇಕಾಗಿರುವುದು, ಅಂದು ಒಂದು ಜಾತಿಯ ಹೆಸರಿನಲ್ಲಾದ ತಪ್ಪಿಗೆ ಇಂದು ಇನ್ನೊಂದು ಜಾತಿಯ ಹೆಸರಿನಲ್ಲಿ ಬದಲ ತಪ್ಪಲ್ಲ.... ಕವಿ ಬ್ರಾಹ್ಮಣನನ್ನು ಅನವಶ್ಯಕವಾಗಿ ಅವಿವೇಕಿಯನ್ನಾಗಿ ಮಾಡಿದ್ದಾರೆ. ಹಾಗೆಯೇ ರಾಮಚಂದ್ರನನ್ನು ಈ ಬ್ರಾಹ್ಮಣನೊಂದಿಗೆ ವ್ಯಂಗವಾಡುವ, ಶೂದ್ರ ತಪಸ್ವಿಗೆ ಯಾವುದೋ ವ್ಯಾಜದಿಂದ ಕೈಮುಗಿಯುವ, ಮಿತ್ರನಂತೆ ನಟಿಸುತ್ತ ಬ್ರಾಹ್ಮಣನ ಕುತ್ತಿಗೆಗೆ ಬ್ರಹ್ಮಾಸ್ತ್ರವನ್ನು ಪ್ರಯೋಗಿಸುವ ಒಬ್ಬ ಅಧೀರ ಅನುದಾತ್ತ ನಾಯಕನಾಗಿ ಮಾಡಿದ್ದಾರೆ." ಶ್ರೀಮಾಸ್ತಿ ಅವರ ಇಂಥ ಮಾತಿಗೆ ಕವಿ ತುಸು ವ್ಯಗ್ರವೇ ಆಗಿ ಹೀಗೆಂದಿದ್ದಾರೆ. "ಈ ವಿಮರ್ಶೆ ಪ್ರತ್ಯುತ್ತರಕ್ಕೂ ಯೋಗ್ಯವಲ್ಲದಷ್ಟು ಅಪ್ರಾಜ್ಞವಾಗಿದೆ. ಇದು ಎಚ್ಚರಿಕೆಯಿಂದ ಓದಿಕೊಳ್ಳದ ಪ್ರಮಾದದಿಂದ ಉಂಟಾದುದೆಂದು ಭಾವಿಸುತ್ತೇನೆ. ಕಾವ್ಯದ ಧ್ವನಿಶಕ್ತಿಯ ವಿಧಾನದ ಅಪಾರ್ಥ ಪ್ರತಿಪಾದನೆಯೇ ಇಲ್ಲಿ ಮೂರ್ತಿಮತ್ತಾದಂತಿದೆ. ಓದಬೇಕಾದ ಧ್ವನಿಯಲ್ಲಿ ಓದಿಸಿ ಕೇಳಿದರೆ ಇಂತಹ ದೃಷ್ಟಿಯ ವಕ್ರತೆ ಋಜುವಾಗುತ್ತದೆಂದು ಭರವಸೆ ಕೊಡುತ್ತೇನೆ. ಏಕೆಂದರೆ ವಾಸ್ತವವಾಗಿ ಇಲ್ಲಿ ಬ್ರಾಹ್ಮಣ ಕೊನೆಗೆ ವಿವೇಕಿಯಾಗಿ ಬೆಳಕು ಕಂಡು ಬೆಳಗುತ್ತಾನೆ. ಶ್ರೀರಾಮನೂ ಇಂಗಿತವಾದ ವಾಕ್ ಮತ್ತು ಕ್ರಿಯಾರೀತಿಗಳಿಂದ ಬ್ರಾಹ್ಮಣನ ಆತ್ಮಪ್ರಜ್ಞೆಯ ಬೋಧವನ್ನು ಎಚ್ಚರಗೊಳಿಸಿ, ತಿದ್ದುವ ಅತ್ಯಂತ ಮಹೋದಾತ್ತ ಅಂತರ್ಯಾಮಿ ಶಕ್ತಿಯಾಗಿ ನಿಲ್ಲುತ್ತಾನೆ." ಇಲ್ಲಿ ಒಂದಂಶವನ್ನು ಯೋಚಿಸಬಹುದು. ಶ್ರೀ ಮಾಸ್ತಿ ಅವರೆಂದಿರುವಂತೆ ನಮಗೆ ಇಂದು ಬೇಕಾಗಿರುವುದು ತಪ್ಪಿನ ಮರುಕೊಳಿಕೆಯಲ್ಲ. ಆದರೆ ಈ ನಾಟಕದಲ್ಲಿ ಅದರ ಯಾವ ಸೂಚನೆಯೂ ಇಲ್ಲವಲ್ಲ. ಬ್ರಾಹ್ಮಣ ಇಲ್ಲಿ ಅವರು ಭಾವಿಸಿರುವಂತೆ ಬೆಪ್ಪನೂ ಅಲ್ಲ. ಶ್ರೀರಾಮ ಅವನ ಬಗ್ಗೆ ವಕ್ರನೂ ಅಲ್ಲ. ಬದಲಾಗಿ ಶ್ರೀರಾಮ ಆತನ ಎಷ್ಟೋ ಕ್ರಿಯೆಯಲ್ಲಿ



ತನ್ನ ಸ್ವಂತ ಜೀವನದ ಗೌರವಾನ್ವಿತ ಭಾವನೆಗಳನ್ನೆ ನೆನೆದುಕೊಳ್ಳುತ್ತಾನೆ. ತಾನೂ ಸಹಾನುವರ್ತಿಯಾಗುತ್ತಾನೆ. ಉದಾಹರಣೆಗೆ ಬ್ರಾಹ್ಮಣ ತನ್ನ ಸತ್ತ ಮಗನ ಶರೀರದತ್ತ ಧಾವಿಸಿ 'ನೋಡಲ್ಲಿ ನೋಡಲ್ಲಿ ಕೋಸಲೇಶ್ವರ, ಕೆಡೆದಿರ್ಪುದೆನ್ನ ಕುಲಗೋಪುರದ ಕಲಶಮಣಿ ರಕ್ಷಿಸಯ್, ನನ್ನೀ ಕಣ್ಮಣಿಯಂ !' ಎನ್ನುವ ಕರುಳು ಮಿಡಿಯುವ ಮಾತಿಗೆ ಶ್ರೀರಾಮನಿಗಾದ ಅನುಭವವಾದರೂ ಅಲ್ಪವಲ್ಲ. ಅವನಿಗೂ ಕಣ್‌ತೊಯ್ಯುತ್ತದೆ.

"ಸ್ಥಿತಪ್ರಜ್ಞಂಗುಂ ಅಧೈರ‍್ಯಮನೊಡರ್ಚುವುದೀ
ಪುತ್ರಶೋಕದ ದೃಶ್ಯಮೇಗಳುಮ್
ನನ್ನ ಗಲ್ಕೆಗಂದು ಎದೆಬಿರಿಯಲ್ ಪಳಯಿಸಿದಾ
ನನ್ನಯ್ಯನಂ ಬಗೆಗೆ ತರ್ಪನೀ ಮುದುಕ ತಂದೆ !
ಏನ್ ಮಾಯೆ !
ಅಮೃತ ಸಾಕ್ಷಾತ್ಕಾರಮಾದರ್ಗಂ
ಮೃತ್ಯು ಸಂಕಟಕರಂ !
ನಾಟಕದ ನಿಜವನರಿವುದು
ನೇಪಥ್ಯಮಂ ಪೊಕ್ಕ ಮೇಲಲ್ತೆ !
ರೋದಿಸದಿರ್ ಅಬೋಧನೊಲ್, ವೇದವೇತ್ತ.
ನೆಡೆದೊಂದಧರ್ಮಮಂ ಪರಿಹರಿಸಲೊಡಂ
ಅಮೃತನಕ್ಕುಮ್ ನಿನ್ನೀ ಚಿರಂಜೀವಿ !"

ಇದಕ್ಕೆ ಮತ್ತೇನೂ ವ್ಯಾಖ್ಯಾನ ಬೇಡ. ಶ್ರೀಮಾಸ್ತಿ ಅವರು ತಿಳಿದಂತೆ ಬ್ರಾಹ್ಮಣನೇನೂ ಬೆಪ್ಪನಾಗಿ, ಖಂಡನಾರ್ಹನಾಗಿ ಚಿತ್ರಿತವಾಗಿಲ್ಲ. ಕವಿಯ ಮನಸ್ಸಿನಲ್ಲಿ ಹಾಗೇನಾದರೂ ಆಕ್ರೋಶ ಸುಪ್ತಸ್ತರದಲ್ಲಾದರೂ ಕೆಲಸ ಮಾಡುತ್ತಿದ್ದರೆ ಇಲ್ಲಿನ ಬ್ರಾಹ್ಮಣನೆ ವಿವರ್ಣನಾಗಿರುತ್ತಿದ್ದ ; ಅಲ್ಲಿ ಬೆರಳ್‌ಗೆ ಕೊರಳ್ ನಾಟಕದ ದ್ರೋಣ ಅಧಮಾಧಮನಾಗೂ ಚಿತ್ರಿತವಾಗುತ್ತಿದ್ದ. ಆದರೊಂದು ಮಾತು ಮಾತ್ರ ಕೊಂಚ ಸರಿ. ಅದೆಂದರೆ ಶ್ರೀ ರಾಮನ ಮಾತುಗಳಿಗೆ ವಿವರಣೆ ಕೊಡುವಾಗ 'ವ್ಯಂಗ್ಯವಾಗಿ' ಎಂದಿತ್ಯಾದಿ ತಿಳಿಸಿರುವುದರ ಅಗತ್ಯ. ಯಾವ ಸೂಚನೆಯನ್ನೂ ಒಳಗೊಂಡು ಇಲ್ಲದೆ ಹಾಗೆಯೆ ಇದ್ದಿರುತ್ತಿದ್ದರೆ ಆ ಮಾತುಗಳು ಶ್ರೀರಾಮನ ನಿರ್ವ್ಯಂಗ ಋಜು ಮನೋಧರ್ಮವನ್ನು ಹೆಚ್ಚು ವಿಶದಗೊಳಿಸುತ್ತಿದ್ದವು, ಎನ್ನಬಹುದು.

ಒಟ್ಟಿನಲ್ಲಿ ಶಂಬೂಕ ಕಥೆ ಶೂದ್ರತಪಸ್ಸಿನಲ್ಲಿ ಪುನರ್ಭವಿಸುವಾಗ ರೂಪಾಂತರವನ್ನು ಹೊಂದಲೆ ಬೇಕಾಯಿತು. ಕಬ್ಬಿಣದ ಕೋಡಗ ಚಿನ್ನದ

ಕೋಡಗನಾದರೆ ಆಗದು, ಅದರ ರೂಪವೂ ತಿದ್ದಿಬರಬೇಕಲ್ಲ. ಅದಕ್ಕೇ ಈ ಶಂಬೂಕ ಕಥೆಯಲ್ಲಿ ಸ್ವರೂಪಾಂತರ ರೂಪಾಂತರ ಎರಡೂ ಆಗಿ ಬಂದಿದೆ. ಇದು ಕಾಣಬೇಕಾದಷ್ಟು ಪರಿಣಾಮಕಾರಿಯಾಗಿ ಕಾಣದಿರುವುದಕ್ಕೆ ಮೂಲಕಥೆಯ ಗತಿಯೂ ಕಾರಣವಾಗಿದೆ. ಅದರ ಪರಂಪರೆ ತಾನಾಗಬೇಕಾದಾಗ ಇದು ಅದನ್ನೆ ತಿದ್ದದೆ ಹಾಗೆಯೇ ಸ್ವೀಕರಿಸಿಕೊಳ್ಳುವುದು ಸಾಧ್ಯವಾಗಿಲ್ಲ. 'ಬೆರಳ್‌ಗೆ ಕೊರಳ್' ನಾಟಕಕ್ಕೂ ಇದಕ್ಕೂ ಕಲಾಸಿದ್ಧಿಯಲ್ಲಿ ಅಂತರವಿದ್ದರೂ ಪರಂಪರೆಯನ್ನು ಜೀರ್ಣಿಸಿಕೊಂಡಿರುವ ವಿಚಾರದಲ್ಲಿ ಅಂತಹ ಹೆಚ್ಚು ಅಂತರ ಇಲ್ಲ. ಬೆರಳ್‌ಗೆ ಕೊರಳ್, ಶ್ಮಶಾನ ಕುರುಕ್ಷೇತ್ರಗಳಲ್ಲಿ ಮೈಗೂಡಿರುವ ಪರಂಪರೆಯ ಪ್ರಜ್ಞೆಯ ಪರಮಸಿದ್ಧಿಯನ್ನು ಶ್ರೀರಾಮಾಯಣ ದರ್ಶನಂ ಮಹಾ ಕಾವ್ಯದಲ್ಲಿ ಕಾಣುತ್ತೇವೆ. ಪ್ರಾಚೀನವನ್ನು ತನ್ನ ಯುಗದ ಹೊಸ ಕಾಣ್ಕೆ ಕಂಡದ್ದು ಮಾತ್ರವಲ್ಲದೆ ಅದನ್ನು ಮೂಲ ಗಾತ್ರಕ್ಕೆ ಎಂದೂ ಭಂಗ ಬಾರದಂತೆ ಕಂಡರಿಸಿರುವುದೂ ಈ ಮಹಾ ಕಾವ್ಯದ ಸಿದ್ಧಿಗಳಲ್ಲೊಂದಾಗಿದೆ. ವಾಲ್ಮೀಕಿ ರಾಮಾಯಣ ಈ ತನಕ ಭರತ ವರ್ಷದಲ್ಲೆಷ್ಟೊ ಬಾರಿ ರೂಪಾಂತರ ಹೊಂದಿ ಬಂದಿದೆ. ಆದರೆ ಅದು ಎಂದೂ ಈ ಸಿದ್ಧಯನ್ನನುಭವಿಸಿರಲಿಕ್ಕಿಲ್ಲ. ವಾಲ್ಮೀಕಿ ರಾಮಾಯಣದ ಯುಗಪ್ರಜ್ಞೆಯನ್ನು ಸಮಗ್ರವಾಗಿ ತನ್ನ ಪ್ರಜ್ಞೆಯನ್ನಾಗಿ ಹಾಗೂ ಆ ಯುಗಪ್ರಜ್ಞೆಯನ್ನು ಸಂಪೂರ್ಣವಾಗಿ ತನ್ನ ಪ್ರಜ್ಞೆಯನ್ನಾಗಿ ಮಾಡಿಕೊಂಡು ಭವ್ಯವಾಗಿ ಮೂಡಿರುವ ಕಾವ್ಯಶ್ರೀ ಎಂದರೆ ಶ್ರೀ ರಾಮಾಯಣದರ್ಶನಂ.

ಇಲ್ಲಿ ಬರುವ ಒಂದೊಂದು ಪಾತ್ರಕ್ಕೂ ಅಲ್ಲಿ ಬೇರುಂಟು ನೆಲವುಂಟು ನೆಲೆಯುಂಟು ಬೆಲೆಯುಂಟು. ಅಷ್ಟೇ ಅಲ್ಲ, ಸೆಲೆ ಉಂಟು. ಮೇಲಾಗಿ ತನ್ನ ಮೂಲ ಪ್ರತಿ (Archetype) ಅಲ್ಲುಂಟು. ಆದರೆ ಇಲ್ಲಿ ಬರುವ ಆ ಎಲ್ಲ ಪಾತ್ರವೂ ಈ ಯುಗ ಮನೋಧರ್ಮ ಸಹಜವಾದ ಸ್ವರೂಪಗಾತ್ರವನ್ನೇ ತಾಳಿಬಂದಿವೆ. ರಾಮ ಸೀತಾ ಲಕ್ಷ್ಮಣಾದಿಗಳೆ, ರಾವಣ ವಿಭೀಷಣ ಕುಂಭ ಕರ್ಣಾದಿಗಳೆ, ಮಂಥರೆ ಮಂಡೋದರಿ ಕೈಕೆ ಶೂರ್ಪನಖಿಯರೇ ಯಾರೂ ಈ ಮಾತಿಗೆ ಹೊರತಲ್ಲ. ಒಂದರ್ಥದಲ್ಲಿ ವಾಲ್ಮೀಕಿ ರಾಮಾಯಣವೆ ಈ ಯುಗಕ್ಕೆ ಬೆಳೆದು ಬಂದಿದೆ, ಈ ಮಹಾಕಾವ್ಯದಲ್ಲಿ. ಅಲ್ಲಿನ ಪಾತ್ರಗಳೆ ನಮ್ಮ ಯುಗದ ಆವರಣಕ್ಕೆ ನಡೆದು ಬಂದಿವೆ, ಈ ಪಾತ್ರಗಳಲ್ಲಿ ಉಸಿರಾಡಿ, ಮರು ಬಾಳನ್ನು ಬಾಳಲು.

ಈ ಕಾವ್ಯದ ಪಾತ್ರಗಳ ಒಂದು ಅಪೂರ್ವ ವೈಶಿಷ್ಟ್ಯವೆಂದರೆ, ಅವರು ಬಾಹ್ಯ ಸ್ತರದಲ್ಲಿ ಒಂದೊಂದೂ ಭಿನ್ನ ಭಿನ್ನವಾದ ತಮ್ಮತಮ್ಮ ಕೇಂದ್ರದ ಸುತ್ತಲಷ್ಟೇ



ಸುತ್ತುತ್ತಿರುವಂತೆ ಕಂಡರೂ, ಆಂತರ್ಯದಲ್ಲಿ ಅವೆಲ್ಲವುಗಳ ಕೇಂದ್ರವೂ ಒಂದೆ ಆಗಿರುವಂತೆಯೂ, ವೃತ್ತ ವ್ಯಾಸ ಮಾತ್ರ ವ್ಯತ್ಯಾಸಗೊಂಡಿರುವಂತೆಯೂ, ತೋರುತ್ತದೆ. ಮಂಥರೆ ರಾಮನನ್ನು ಕಾಡಿಗೆ ಕಳಿಸಲಾದ ಪಾಪಿ ಎಂದು ಹೊರಗೆ ಕಂಡರೂ ಒಳಗೆ ಅವಳು ಅಷ್ಟೇ ಸಹಜವಾಗಿ ಶ್ರೀರಾಮನನ್ನು ಹಿಂದಕ್ಕೆ ಕರೆತರಲು ತಪಿಸುತ್ತಿರುವ ಹೋರಾಡುತ್ತಿರುವ ಶಕ್ತಿಗಳಲ್ಲಿ ಒಂದಾಗುತ್ತಾಳೆ. ತನ್ನನ್ನು ರಾವಣ ಅಪಹರಿಸಿಕೊಂಡೊಯ್ದ ಮಹಾಪಾಪಿ, ಮಹಾ ಹೇಯ ಶತ್ರು ಎಂದೆಲ್ಲ ತಿಳಿದಿದ್ದೂ ಸೀತೆ ಅವನ ಶ್ರೇಯಸ್ಸಿಗಾಗಿಯೆ ತಿಳಿದೂ ತಿಳಿಯದೆ ತಪಿಸುತ್ತಿರುತ್ತಾಳೆ. ಮಂಡೋದರಿಯ ಪಾತಿವ್ರತ್ಯವನ್ನು ಕಂಡ ಮೇಲಂತೂ ಸೀತೆಗೆ ರಾವಣನ ಬಗ್ಗೆ ಕರುಣೆ, ಅವನುದ್ಧಾರದ ಹಾರೈಕೆ ಮೂಡುತ್ತದೆ ; ಮಾತ್ರವಲ್ಲ, ಅದಕ್ಕಾಗಿ ಆತ್ಮ ಪ್ರಜ್ಞಾಪೂರ್ವಕವಾಗಿಯೆ ತಪಿಸುತ್ತದೆ. ಬಾಹ್ಯಸ್ಥಿತಿಯಲ್ಲಿ ಮಿತ್ರರಲ್ಲದಿದ್ದರೂ, ಅಘೋರ ಶತ್ರುಗಳೆ ಆಗಿದ್ದರೂ ಈ ಜೀವ ಆಂತರ್ಯದಲ್ಲಿ ಪರಸ್ಪರ ಉದ್ಧಾರಕ್ಕಾಗಿ ಪ್ರಾರ್ಥಿಸುತ್ತಿರುತ್ತವೆ. ಇಲ್ಲಿ ಒಂದೊಂದರ ಬೇರೂ ಹೆಣೆದುಕೊಂಡಿರುತ್ತದೆ, ಯಾವುದೊ ಪ್ರಮಾಣದಲ್ಲಿ. ಜೈನ ಕಾವ್ಯ ಪುರಾಣಗಳಲ್ಲಿ ಬರುವ ಕಥೆಗಳಲ್ಲಿ ಈ ಬಗೆಯ ಉದ್ಧಾರ ಸಹಕಾರ ಅದ್ಭುತವಾಗಿರುವಂತೆ ಸ್ಪಷ್ಟವಾಗಿ ಚಿತ್ರಿತವಾಗಿದೆ. ಒಂದು ಜೀವ ಮತ್ತೊಂದರ ಉದ್ಧಾರಕ್ಕಾಗಿ, ದ್ವೇಷಿಸುವ ಮೂಲಕವೂ ಹಾರೈಸುವುದನ್ನಲ್ಲಿ ಕಾಣುತ್ತೇವೆ. ಭವಜಾಲದಲ್ಲಿ ಸಿಲುಕಿದ ಒಂದು ಜೀವವನ್ನು ರಕ್ಷಿಸಲು ಭವ ಭವಾಂತರದಲ್ಲಿ ಹೆಣಗುವ ಉದಾತ್ತ ಜೀವವು ತಾನಿನ್ನೂ ಅರ್ಹತ್ ಪದವಿಯಿಂದ ಬಹುದೂರ ಇರುವಾಗಲೇ ಪ್ರೇರಿತವಾದ ಆಜೀವ ಬಹುಮುಂದುವರಿದಿರುತ್ತದೆ. ತನ್ನ ವೈರಿಯಾಗಿದ್ದು ಸತ್ತು ಪಾಪಜೀವಿಯಾಗಿ ಹುಟ್ಟುವಾತನನ್ನೂ ಆ ಉದಾತ್ತ ಜೀವ ಕ್ಷಮಿಸುವುದು ಮಾತ್ರವಲ್ಲದೆ, ಅದರ ಬಿಡುಗಡೆಗೂ ಶ್ರಮಿಸುತ್ತದೆ. ಬಿಡುಗಡೆ ಪುಣ್ಯಜೀವಿಗಿನ್ನೂ ದೂರದ ಕನಸಾಗಿರುವಾಗಲೆ ಆ ಬದ್ಧಜೀವ ಭವ್ಯಾತ್ಮವಾಗುತ್ತದೆ. ಇದೆಲ್ಲ ಜೈನ ಧರ್ಮದ ಕಾಣ್ಕೆ. ದೇವರನ್ನು ಕಲ್ಪಿಸಿಕೊಳ್ಳದೆ ಹೋದರೂ, ಯಾವಾಗಲೂ ಜೀವ ಏಕಾಂಗಿ, ತನ್ನ ಉದ್ಧಾರಕ್ಕೆ ಸಂಸಾರ ಮೋಹಬಂಧಗಳೆಲ್ಲ ಬಾಧಕ – ಎಂದು ಮತ್ತೆ ಮತ್ತೆ ಘೋಷಿಸಿದರೂ ಆ ಧರ್ಮ ಜೀವರನ್ನೆ ಅನ್ಯೋನ್ಯಾಶ್ರಯಿಯನ್ನಾಗಿ ಕಲ್ಪಿಸಿತು. ಈ ಒಂದು ದರ್ಶನ ಹಿಂದೂ ದರ್ಶನದಿಂದ ಹುಟ್ಟಿದ ಕಾವ್ಯಗಳ ಜೀವನಾಡಿಯಾಗಿದ್ದಂತೆ ತೋರುವುದಿಲ್ಲ. ಭಾರತೀಯ ಸಮಗ್ರ ಪರಂಪರೆಯನ್ನು ತಮ್ಮಲ್ಲಿ ರೂಢಿಸಿಕೊಂಡಿರುವ ಈ ಕವಿಯ ಈ ಹಿರಿಯ ಕೃತಿಯಲ್ಲಿ ಅದೂ ಮೈದಾಳಿದೆ.

ಈ ಅಂಶದಲ್ಲಿ ಈ ಕಾವ್ಯ ಈ ಯುಗದ ಮೂಲ ಸೆಳೆತಗಳಿಂದಲೂ ಪ್ರೇರಣೆ ಪಡೆದಿದೆ. ಎಷ್ಟೆಲ್ಲ ವಿಪರೀತ ಯುಗವಾಗಿ ಈ ಶತಮಾನ ತೋರುತ್ತಿದ್ದರೂ, ಅನ್ಯೋನ್ಯಾಶ್ರಯದಿಂದಲ್ಲದೆ ಬದುಕದೇ ಗತಿಯಿಲ್ಲ ಎಂಬ ಅರಿವನ್ನು ಕಂಡುಕೊಳ್ಳುತ್ತಿರುವುದರಿಂದ ಇದನ್ನು ಹಿಂದಿನ ಯುಗಗಳಿಗಿಂತಲೂ ಕೀಳೆಂದು ತಿಳಿಯಬೇಕಾಗಿಲ್ಲ. ಅತ್ಯಂತ ಸಣ್ಣ ರಾಷ್ಟ್ರವನ್ನೂ ತನ್ನ ಮುಷ್ಟಿಯಲ್ಲಿಟ್ಟುಕೊಳ್ಳಬಹುದೆಂದಾಗಲಿ, ಅದರ ಹಂಗಿಲ್ಲದೆ, ಅದನ್ನು ಅರೆಹೊಟ್ಟೆಯಲ್ಲಿರಿಸಿಯಾದರೂ ತಾನು ಪಟ್ಟ ಭದ್ರವಾಗಿರುವೆನೆಂದಾಗಲಿ ಭ್ರಾಂತಿಗೊಳ್ಳದಂತಾಗುತ್ತಿದೆ ಈ ಯುಗದ ರಾಷ್ಟ್ರಗಳಿಗೆ. ಇಷ್ಟವಿಲ್ಲದಿದ್ದರೂ ಒಂದು ಶ್ರೀಮಂತ ರಾಜ್ಯ ತನ್ನ ನೆರವನ್ನು, ಒಂದಷ್ಟನ್ನಾದರೂ, ಬಡನಾಡಿಗೆ ಹರಿಸದಿದ್ದರೆ ನೆಮ್ಮದಿಯಿಂದ ಬದುಕುವುದೇ ಕಷ್ಟ. ಮತ್ತೆ ಇದೇ ಯುಗದಲ್ಲಿಯೇ ಪರಸ್ಪರ ವಿರೋಧ ತತ್ತ್ವಗಲೂ ಕೂಡ ಒಟ್ಟಿಗೆ ಬದುಕಬಹುದು, ಬದುಕಬೇಕು ಎಂಬ ಅನಿವಾರ್ಯವಾದ ಅರಿವು ಮೂಡುತ್ತಿರುವುದಾದರೂ ಕೂಡ. ತಮ್ಮ ತಮ್ಮ ರಕ್ಷಣೆಗೆ ಮಾಡಿಕೊಂಡ ಬೃಹತ್ ಪ್ರಮಾಣದ ಶಸ್ತ್ರಾಸ್ತ್ರಗಳೇ ತಮ್ಮ ವಿಪತ್ತಾಗುತ್ತಿರುವ ಅರಿವು ರಾಷ್ಟ್ರಗಳಿಗೆ ಬರುತ್ತಿದೆ. ಫಲವೆಂದರೆ, ಪರಸ್ಪರ ಕೈಕುಲುಕಿಸದೆ ತಮ್ಮ ಬದುಕು ಸಾಧ್ಯವಿಲ್ಲ ಎಂಬರಿವು ಮೂಡುತ್ತಿದೆ.

ಈಗ ಮೂಡುತ್ತಿರುವ ಸಹಕಾರ ಆಧ್ಯಾತ್ಮಿಕ ಅರಿವಿನಿಂದ ಬಂದದ್ದೇನೂ ಅಲ್ಲ. ಮಾನವ್ಯದ ಆದರ್ಶಗಳೇನೇ ಇದ್ದರೂ, ವಾಸ್ತವವಾಗಿ ಈಗ ಪ್ರೇರಕಶಕ್ತಿಯಾಗಿರುವುದು ಅಸ್ತಿತ್ವದ ಪ್ರಶ್ನೆ. ತಾನು ಬದುಕಬೇಕಾದರೆ ನೆರೆಹೊರೆಯೂ ಬೇಕೇ ಬೇಕು ಎಂಬ ಅನಿಸಿಕೆ ಎಂಥ ಮಂದ ಜೀವಿಗೂ ಎಂಥ ಮಂದಗಾಮಿ ರಾಷ್ಟ್ರಕ್ಕೂ ಸ್ವಪ್ರತಿಷ್ಠಿತವಾದ ಜನಾಂಗಕ್ಕೂ ಈಗ ಉಂಟಾಗುತ್ತಿದೆ. ಕಮ್ಯುನಿಸಮ್ ಆದರೂ ಕೂಡ ಮಾನವನ ಅನ್ಯೋನ್ಯಾಶ್ರಯವನ್ನು, ಪರಸ್ಪರ ಶ್ರೇಯಸ್ಸಿಗೆ ದುಡಿಯುವುದನ್ನು ಕನಸಿಟ್ಟುಕೊಂಡದ್ದೆ. ಆದರೆ ಗಾಂಧೀಜಿ ಕಂಡ ಸರ್ವೋದಯದ ಕನಸಾಗಲಿ, ಶ್ರೀ ರಾಮಕೃಷ್ಣಪರಮಹಂಸರು ಸಾಧಿಸಿ ಸಾರಿದಂತಹ ಸರ್ವಧರ್ಮ ಸಮನ್ವಯವಾಗಲಿ, ಶ್ರೀ ಅರವಿಂದರು ಯೋಗಿಸಿದ ಪೂರ್ಣ ಯೋಗವಾಗಲಿ – ಶಕ್ತಿ ವ್ಯಕ್ತಿಗಳ ಪರಿಣಮನ ಸಮಗ್ರ ಪರಿವರ್ತನವೆಂಬುದಾಗಲಿ – ಕೇವಲ ಭೌತ ಅನಿವಾರ್ಯದಿಂದ ಹುಟ್ಟಿಕೊಂಡ ಸರ್ವರ ಸಹಕಾರವಲ್ಲ. ಪರಸ್ಪರ ವಿರುದ್ಧವೆಂಬಂತೆ ತೋರುವ ಧರ್ಮಗಳನ್ನು ಸಹಿಸಿಕೊಂಡಿರುವುದು ಮಾತ್ರವಲ್ಲ, ಅನುಭಾವಿಸಿಕೊಳ್ಳುವುದೂ ಒಂದೇ ಬಾಳಿನಲ್ಲಿ ಸಂಗಮಿಸಿಕೊಳ್ಳುವುದೂ ಸಾಧ್ಯ ಎಂದು ಸಾಧಿಸಿ ಸಿದ್ಧಿಪಡಿಸಿ ತೋರಿದರು, ಭಗವಾನ್ ಶ್ರೀರಾಮಕೃಷ್ಣರು. ಪರಸ್ಪರ



ಭಿನ್ನತತ್ತ್ವಗಳು ಸಹಕರಿಸಿ ಬಾಳಬಹುದೆಂದು ಅನಿವಾರ್ಯತೆಯಿಂದ ಒಪ್ಪಿಕೊಳ್ಳುವುದಕ್ಕಿಂತ ಬಹುದೂರದ ಆದರ್ಶಸ್ಥಿತಿ ಇದು. ಆದರೆ ಇದೂ ಸಾಧ್ಯ. ಎಲ್ಲರ ಉದ್ಧಾರ ಆಗಬೇಕು, ಎಲ್ಲರಿಂದ ಆಗಬೇಕು, ಎಲ್ಲ ಮಟ್ಟದಲ್ಲೂ ಆಗಬೇಕು; ಇದೇ ಸರ್ವೋದಯದ ಕನಸು. ವ್ಯಕ್ತಿಯಲ್ಲಿರುವ ತಮಃ ಪ್ರವೃತ್ತಿಗಳು ದೈವೀ ವೃತ್ತಿಯಾಗಿ ಪರಿವರ್ತಿತವಾಗಬೇಕು, ಈಗ ಅತೀತದಲ್ಲಿರುವ ಅಧಿಮಾನಸ ಸ್ಥಿತಿಯ ಅವತರಣವಾಗಬೇಕಾದರೆ – ಹೀಗೆಂದ ಶ್ರೀ ಅರವಿಂದರು ವಸ್ತು ಆತ್ಮಗಳ ಪರಿವರ್ತನಘಟ್ಟವನ್ನು ಕಂಡರು. ಈ ಎಲ್ಲ ಮಹದನುಭೂತಿಗಳು ಈ ಯುಗದ ಮಾನಸಾವರಣದಲ್ಲಿ ಗಾಢವಾಗಿ ಪ್ರಭಾವ ಹರಿಸುತ್ತಿರುದಾಗ, ಯಾವ ಈ ಯುಗಪ್ರಜ್ಞೆಯಿಂದುದ್ಭವಿಸಿದ ಮಹಾಕಾವ್ಯ ತಾನೆ ಈ ಒಳ ಹೊರಗಿನ ಕ್ರಿಯೆ ಪ್ರಕ್ರಿಯೆಗಳನ್ನು ಮೈಗೂಡಿಸಿಕೊಳ್ಳದಿರಲು ಸಾಧ್ಯ ? ಶ್ರೀ ರಾಮಾಯಣದರ್ಶನಂ ಕಾವ್ಯದಲ್ಲಿ ಈ ವಿದ್ಯುತ್ ಪ್ರವಾಹಗಳ ಹರಿತವನ್ನು ಕಾಣಬಹುದು. ವಾಲ್ಮೀಕಿ ರಾಮಾಯಣ ಈ ಯುಗದಲ್ಲಿ ಮರುಹುಟ್ಟಬೇಕಾದರೆ ಅದು ತನ್ನನ್ನು ಈ ಯುಗದ ಈ ಎಲ್ಲ ಶಕ್ತಿ ಆವರಣಗಳಿಗೂ ಒಪ್ಪಿಸಿಕೊಂಡೇ ತೀರಬೇಕಾದ್ದರಿಂದ ಶ್ರೀರಾಮಯಣ ದರ್ಶನ ಈ ಸ್ವರೂಪದಲ್ಲಿ ಮೂಡಿಕೊಂಡಿದೆ. ಆದ್ದರಿಂದ ಈ ಕಾವ್ಯ ಪ್ರಾಚೀನ ರಾಮಕಥೆಯ ಪುರಾಣಕಥನವಲ್ಲ. ನಿತ್ಯ ರಾಮಾಯಣದ ವರ್ತಮಾನಾಯಣವಾಗಿದೆ.

ಶ್ರೀ ರಾಮಾಯಣದ ಕಥೆ ಹೇಗೂ ಮೂಲಸ್ವರೂಪದಲ್ಲಿ ವ್ಯತ್ಯಸ್ಥವಾಗದೆ ಸಂಭವಿಸಿದ್ದರೂ ಅದರ ಆಂತರ್ಯದ ವಿಕಾಸವನ್ನಿಲ್ಲಿ ಸ್ಪಷ್ಟವಾಗಿಯೇ ಗುರುತಿಸಬಹುದು. ಶ್ರೀರಾಮಚಂದ್ರ ತಂದೆಯ ಮಾತಿನಂತೆ ಕಾಡಿಗೆ ಹೋಗಿಯೆ ಹೋಗುತ್ತಾನೆ. ಮಂಥರೆ ರಾಮನನ್ನು ಕಾಡಿಗಟ್ಟಲು ಕಾರಣಳೂ (–ಕರಣಳು ಕಾವ್ಯದ ದೃಷ್ಟಿಯಲ್ಲಿ) ಆಗಿ ಕೆಲಸ ಮಾಡಿಯೆ ಮಾಡುತ್ತಾಳೆ. ಕೈಕೆಯೂ ಆ ತನ್ನ ಹಿಂದಿನ ವರ್ತನವನ್ನೆ ತೋರುತ್ತಾಳೆ. ದಶರಥನಾದರೂ ಹಿಂದಿನಂತೆಯೆ ಇದ್ದಾನೆ. ಭರತ ಲಕ್ಷ್ಮಣರೂ ಅಷ್ಟೆ. ವಾಲಿ ಸುಗ್ರೀವರು ತಮ್ಮ ಮೊದಲಿನ ಕಾರಣಕ್ಕಾಗಿಯೆ ಕಲಹಗೊಂಡಿರುತ್ತಾರೆ ; ಹೋರಾಡಿ ರಾಮನಿಂದ ವಾಲಿ ಸಾಯುತ್ತಾನೆ. ರಾವಣನಾದರೂ ಸೀತೆಯನ್ನು ಕದ್ದು ತಂದೆತೀರುತ್ತಾನೆ. ತನ್ನ ಮೂಗರಿದ ತಂಗಿಯ ಮಾತಿನಿಂದ ಪ್ರಚೋದನೆಗೊಂಡು. ಸೀತಾನ್ವೇಷಣಕ್ಕಾಗಿ ಆಂಜನೇಯ ಸಾಗರವನ್ನೂ ಹಾರುತ್ತಾನೆ. (ನಮ್ಮ ಯುಗದಲ್ಲವನನ್ನು ಹೆಲಿಕಾಪ್ಟರ್‌ನಲ್ಲಾದರೂ ಕಳಿಸಬಹುದಿತ್ತು, ಅಥವಾ ರಾಕೆಟ್‌ನಲ್ಲಾದರೂ ಬೀರಬಹುದಾಗಿತ್ತು – ಎನ್ನಿಸುತ್ತೆ ಕೆಲವರಿಗೆ !) ಸೀತಾದೇವಿಯಾದರೂ ದುಃಖಿತೆಯಾಗಿರುವುದು ಅಶೋಕವನದಲ್ಲೆ.

ಶ್ರೀರಾಮಚಂದ್ರನ ದೂತನಾಗಿ ಹೋದ ಆಂಜನೇಯ ಆಕೆಗೆ ಮುದ್ರಿಕೆಯನ್ನಿತ್ತು ಚೂಡಾಮಣಿ ಪಡೆದುಕೊಂಡೂ ಬರುತ್ತಾನೆ. ಸಾಗರಕ್ಕೆ ಸೇತುವೆಯನ್ನೂ ಕಟ್ಟುತ್ತಾರೆ. ಯುದ್ಧವೂ ಆಗುತ್ತದೆ ; ವಿಭೀಷಣನೂ ರಾಮಪಕ್ಷ ಸೇರುತ್ತಾನೆ. ಕುಂಭಕರ್ಣ ಇಂದ್ರಜಿತ್ ಮಹಾಕಾಯಾದಿಗಳೆಲ್ಲರೂ ಸಾಯುತ್ತಾರೆ. ರಾವಣನೂ ಸಾಯುತ್ತಾನೆ. ಬಿಡುಗಡೆಗೊಂಡ ಸೀತೆಯಾದರೂ ಅಗ್ನಿಸೇತುವೆಯನ್ನೇರಿಯೆ ರಾಮನನ್ನು ಮುಟ್ಟುವುದು. ಶ್ರೀರಾಮ ಸೀತಾಸಮಾಗಮ, ಅಯೋಧ್ಯಾಭಿಗಮನ ಭರತ ಆತಂಕನಿವಾರಣ, ಪಟ್ಟಾಭಿಷೇಕ – ಎಲ್ಲವೂ ಈ ಕಾವ್ಯದಲ್ಲೂ ಆಗುತ್ತವೆ. ಅವು ದಿಟಕ್ಕೂ ಆಗುತ್ತವೆ ಇಲ್ಲಿ ; ಆಗುತ್ತವೆ.

ವ್ಯಕ್ತಿ ಎಷ್ಟೆ ಪಾಪಿಷ್ಠನಾಗಿದ್ದರೂ ಅವನೊಳಗೆ ಕೈಕಾಲು ಮುರಿದುಕೊಂಡಿರುವ ದೈವೀ ಪ್ರಜ್ಞೆಯೊಂದಿರುತ್ತದೆ. ಆ ದೈವೀಪ್ರಜ್ಞೆ ತನ್ನ ಕುಂಟುಗಾಲಿಕ್ಕಿಕೊಂಡೆ ಒಮ್ಮೊಮ್ಮೆ ತನ್ನ ಬಂಧನದಿಂದ ಬಿಡುಗಡೆಗೊಳ್ಳಲು ಮುರಿದ ಕೈ ಬೀಸುತ್ತಲೆ ಹೆಣಗುತ್ತಿರುತ್ತದೆ. ಆಗದಕ್ಕೆ ಮತ್ತೊಂದು ದೈವೀಚೇತನದ ಅಸ್ಥಿವೈದ್ಯ ಸಹಾಯವಾದರೆ ಅದರ ಬಿಡುಗಡೆ ಖಂಡಿತ ಆಗಿಯೆ ಆಗುತ್ತದೆ. ಕಾವ್ಯದಲ್ಲಿ ನಡೆದಿರುವ ಮಹತ್ ಕ್ರಿಯೆಯೆಲ್ಲ ಇದೆ. ನೂರು ಜೀವಿಗಳು ನೂರು ರೀತಿಯಲ್ಲಿ ಯಾನಮಾಡುತ್ತಿದ್ದರೂ ಅವರೊಳಗಿರುವ ಅಂತರ್ ಮುಖಿ – ಉತ್ತರ ಮುಖಿ ಮಾತ್ರ ಭಗವತ್ ತೀರದ ಕಡೆಗೇ ತಿರುಗುತ್ತಿರುತ್ತದೆ. ಬಿರುಗಾಳಿಗೆ ಸಿಕ್ಕಿಂಯೊ, ಪೂರ್ವನಿಯೋಜಿತವಾಗಿರುವುದರಿಂದಲೊ ಕೆಲವರ ಯಾನ ವಿಮುಖವಾಗಿಯೆ ಸಾಗಬಹುದು. ಆದರೆ ಎಚ್ಚರಿಸುವ ಉತ್ತರಮುಖಿ ಎಚ್ಚರಿಸುತ್ತಲೆ ಇರುತ್ತದೆ. ಅದರ ಕೆಲಸ ದಿಕ್ಕು ತೋರುವುದು ಹೊರತು ದಿಕ್ಕಿನತ್ತ ಸಾಗುವಂತೆ ಮಾಡುವುದೂ, ಬಲವಂತಮಾಡುವುದೂ ಅಲ್ಲ. ಶ್ರೀರಾಮಾಯಣ ದರ್ಶನದ ಮಿಶ್ರಪಾತ್ರಗಳು, ಎಲ್ಲವೂ ಮೊದಲಿನಂತೆಯೆ ಯಾನಮಾಡಿದರೂ ಈ ಉತ್ತರಮುಖಿಯ ನಿರ್ದೇಶನಕ್ಕೆ, ಋಜುಯಾನ ಮಾಡುತ್ತಿರುವ ಊರ್ಧ್ವಯಾನರಾಗಿರುವ ಉಳಿದ ಮಹಾಭೈತ್ರಗಳ ಸೆಳೆತಕ್ಕೆ ಸಿಕ್ಕು ತಮ್ಮ ಯಾನವನ್ನೂ ಕಡೆ ಕಡೆಗಾದರೂ ಅತ್ತ ಕಡೆಗೇ ತಿರುಗಿಸಿಕೊಳ್ಳುತ್ತವೆ. ತಿರುಗಿಸದಿದ್ದರೂ ಬಹುದೀರ್ಘವಾಗಿ ಗೋಲಯಾನ ಮಾಡಿದ ಮೇಲೆ ತಿಳಿಯದೆ ಆ ಶಿವತೀರದತ್ತವೆ ಸಾಗುತ್ತವೆ ! ರಾವಣಾದಿ ಎಲ್ಲ ಪಾತ್ರಗಳಲ್ಲೂ ಆಗುವ ಪರಿಣಾಮಕ್ರಿಯೆ ಹೀಗೆಯೆ. ದುರ್ಬಲವಾಗಿ ಒಳಗೆ ಹತವಾಗಿ ಬಿದ್ದಿರುವ ದಿವ್ಯಸತ್ತ್ವ ಎಚ್ಚರವಾಗುವುದು ಬಿಡುಗಡೆಗೊಳ್ಳುವುದು – ಇಲ್ಲೆಲ್ಲ ನಡೆಯುವ ಪರಿಣಾಮದ ರೀತಿ.

ಯಾವ ಪಾತ್ರವೂ ಕೇವಲ ಬಹಿರ್ಮುಖಿಯಲ್ಲತಾನೆ. ಯಾವನ



ಸದ್ಯಜೀವನದ ಆಗುಹೋಗಿಗೂ ಪ್ರೇರಕವಾಗಿ ನಿರ್ದೇಶಕವಾಗಿ ಹಿಂದಿನ ಜೀವನಾನುಭವಗಳು ಇರುತ್ತವೆ. ಪ್ರತಿಯೊಂದು ಚೇತನಕ್ಕೂ ಒಂದೊಂದು ಭೂತವುಂಟು. (ಜೈನಕಾವ್ಯಗಳು ದರ್ಶಿಸುವ ಚಿತ್ರಿಸುವ ಆ ಭವಾವಳಿಗಳು ಇಲ್ಲಿ ಬರುವುದಿಲ್ಲ.) ಅಂತೆಯೆ ಆದರ್ಶಿಸಬೇಕಾದ ಭವಿಷ್ಯವೊಂದುಂಟು. ಮಂಥರೆಯ ಭರತಮೋಹದ ವರ್ತನಕ್ಕೆ ರಾವಣನ ಕಾಮದ ಗರ್ತಕ್ಕೆ ಎಲ್ಲಕ್ಕೂ ಭೂತಾವರ್ತನವುಂಟು. ಆದ್ದರಿಂದಲೆ ಅವರಿಗೆ ಭವಿಷ್ಯೋದ್ಧಾರವೂ ಉಂಟು, ಕವಿ ಈ ಪಾತ್ರಗಳನ್ನು ಚಿತ್ರಿಸಿರುವುದು ಇಂಥ ವಿಸ್ತಾರಭಿತ್ತಿಯ ಮೇಲೆ. ರಾವಣನಾದರೂ ಭಯಂಕರ ಕಾಮಿಯೆ. ಅದು ಅವನನ್ನೆ ಆಹುತಿ ತೆಗೆದುಕೊಳ್ಳುವಷ್ಟು ವಿಕಾರವೂ ಮಾರಕವೂ ಆದ ಪ್ರಮಾಣದಲ್ಲಿ ಬೆಳೆಯುತ್ತದೆ. ಆದರೆ ಅವನಿಗೆ ಮಂಡೋದರಿಯಂತಹ ಪತಿವ್ರತೆ ಸತಿ ಇದ್ದಾಳೆ. ಲೋಕದಲ್ಲಿ ತನಗೊಲಿಯದವರೇ ಇಲ್ಲ, ಪತಿವ್ರತೆಯರೆ ಇಲ್ಲ ಎನ್ನುವ ಆ ಹತಭಾಗ್ಯ ತನ್ನಲ್ಲೆ ಇರುವ ನಿಧಿಯನ್ನು ಕಂಡಿರುವುದಿಲ್ಲ. ಅದೇ ಅವನ ತಾರಕಸತ್ತ್ವ. ಅದನ್ನರಿಯುವ ವೇಳೆಗೆ ಕೈಮೀರಿರುತ್ತದೆ.

ಶ್ರೀಕುವೆಂಪು ಕಂಡಿರುವ ಈ ರಾವಣ ಎಂಥ ಭಯಂಕರ ಕಾಮಿ ಆಗಿದ್ದರೂ ಮಂಡೋದರಿಯ ಪ್ರಾಣೇಶ್ವರನಾಗಿದ್ದಾನೆ. ಶ್ರೀಮದ್ ವಾಲ್ಮೀಕಿ ರಾಮಾಯಣದಲ್ಲಿ ನಾವು ಮೊದಲ ಬಾರಿಗೆ ರಾವಣನನ್ನು ಕಾಣುವುದು ರಾಕ್ಷಸ ಸಭೆಯಲ್ಲಿ : ಮಂಡೋದರಿಯ ಪಕ್ಕದಲ್ಲಿ, ಸೀತಾಪಹರಣಕ್ಕೆ ಹೊರಟಿರುವ ರಾವಣ, ತನ್ನ ಮಹಾತ್ಕಾರ್ಯದ ವಿವರಣೆ ಸಮರ್ಥನೆ ನೀಡುವ ದೃಶ್ಯದಲ್ಲಿ. ಅವನು ಕಡೆಯುಸಿರನ್ನೆಳೆಯುವುದಾದರೂ ಮಂಡೋದರಿಯ ತೊಡೆಯ ಮೇಲೆಯೆ. ಹೀಗೆ ಅವನ ಕಡೆ ಮೊದಲೆರಡನ್ನೂ ಸಂಸಾರಾವರಣದಲ್ಲೆ. ಪತಿವ್ರತಾಸಾನ್ನಿಧ್ಯದಲ್ಲೆ ನಾವು ಕಾಣುತ್ತೇವೆ. ಇದೇ ಅವನ ಉದ್ಧಾರಕ್ಕಿರುವ ತೆರೆದ ರಾಜ ಮಾರ್ಗ. ರಾವಣನಿಗಿದ್ದ ಕಾಮ ಯಾವುದೊ ಒಂದು ಘಟ್ಟದಲ್ಲಿ ಅಹಂಕಾರಪೋಷಕವಾದದ್ದಾಗಿ ಪರಿವರ್ತಿತವಾಗಿರುತ್ತದೆ. ಅವನ ಅದಮ್ಯ ಕಾಮಕ್ಕೆ ಎಲ್ಲರೂ ಬಲಿಬೀಳುತ್ತಿದ್ದುದರಿಂದ ಅದು ತೃಪ್ತಿ ಪಡೆಯುವ ಬದಲು ಕೆರಳುತ್ತದೆ ; ಮಾತ್ರವಲ್ಲ, ಕಾಮಾತುರದಲ್ಲಿ ಕಣ್ಮುಚ್ಚಿಕೊಂಡಿದ್ದ ಅವನ ಮಹಾಭಯಂಕರ ಅಹಂಕಾರ ತನ್ನ ಸಾವಿರ ಹೆಡೆ ರೆಪ್ಪೆಗಳನ್ನು ಬಿಚ್ಚುತ್ತದೆ. ಕಾಮ ಅಹಂಕಾರ ಎರಡೂ ಒಂದಾಗಿ ಆಧಿಪತ್ಯಮಾಡುತ್ತವೆ. ತನ್ನನ್ನು ಒಲಿಯದ, ತನಗೆ ಬಲಿಯಾಗದ ಯಾವ ಪತಿವ್ರತೆಯೂ ಇಲ್ಲ. ಕಡೆಗೆ ಲೋಕದಲ್ಲಿ ಪತಿವ್ರತೆಯರೇ ಇಲ್ಲ ಎಂಬ ನಿಲುವನ್ನು ಪಡೆದಿರುತ್ತಾನೆ. ಯಾರನ್ನೂ ಬಲಾತ್ಕಾರವಾಗಿ ಭೋಗಿಸೆನೆಂಬ ಅವನ ನೇಮ

– ಹಿಂದಿನಂತೆ ಋಷಿಯ ಶಾಪವಾದರೂ – ಕೇವಲ ಅವನ ಧರ್ಮಬುದ್ಧಿಯಿಂದ ಬಂದದ್ದೇನಲ್ಲ ; ಅಹಂಕಾರ ಪ್ರತಿಷ್ಠೆಯ ಮತ್ತೊಂದು ತ್ರಿಗರ್ತನರ್ತನವಾಗಿರುತ್ತದೆ ಅದು. ಆದ್ದರಿಂದಲೇ ಈ ರಾವಣ ಆ ರಾವಣನಿಗಿಂತಲೂ ಸಂಕೀರ್ಣ, ಮೂಲತಃ ಅವನೇ ಆಗಿದ್ದರೂ, ಸಂಕೀರ್ಣತೆ ನಮ್ಮ ಯುಗದ ಸಹಜ ಲಕ್ಷಣತಾನೆ?

ಇವನ ಉದ್ಧಾರಕ್ಕಾಗಿ ಮಂಡೋದರಿ ದೃಢವ್ರತೆಯಾಗುತ್ತಾಳೆ ; ಹಾಗಾಗಿ ತಪಸ್ವಿನಿಯಾಗುತ್ತಾಳೆ. ಇವಳನ್ನು ಸೀತೆ ಕಾಣಬಾರದೆಂಬುದು ರಾವಣನ ಇಚ್ಛೆ. ಕಾರಣ ತನ್ನ ಪತಿವ್ರತೆಯನ್ನು ಕಂಡು ಸೀತೆಗೂ ಪಾತಿವ್ರತ್ಯ ದೃಢವ್ರತವಾಗಬಹುದೆಂಬ ಶಂಕೆ. ಅದರಂತೆ ಮಂಡೋದರಿ ಸೀತೆಯನ್ನು ತಾನೇ ಕಾಣುವುದಿಲ್ಲ ; ಕಂಡರೂ ಮಾತನಾಡಿಸುವುದಿಲ್ಲ. ಮೊದಲು ಮಾತಾಡಿಸುವುದು ಸೀತೆಯೆ. ಆ ಮಹಾತ್ಮಗಳ ಶುಭ್ರ ಸಂಗಮ ಆಗುತ್ತದೆ ಬೆಳುದಿಂಗಳಲ್ಲಿ. ಅಂದಿನಿಂದ ಸೀತೆಗೆ ಮಂಡೋದರಿಯ ಮೇಲೆ ಮೂಡಿದ ಸಹಾನುಭೂತಿ ಪ್ರೀತಿ ಗೌರವ, ರಾವಣನ ಬಗೆಗಿನ ಕನಿಕರವಾಗಲು ಕಾರಣವಾಗುತ್ತದೆ. ಇಬ್ಬರೂ ತಮ್ಮ ತಪಸ್ಸನ್ನತ್ತ ಹರಿಸುತ್ತಾರೆ. ತಮ್ಮ ಬಿಡುಗಡೆ ಎಂದರೆ ಅವನ ಬಿಡುಗಡೆ ಎಂಬರಿವಾಗುತ್ತದೆ ಅವರಿಗೆ. ಅಶೋಕವನದಲ್ಲಿ ಸೀತೆ, ಅರಮನೆಯಲ್ಲಿ ಮಂಡೋದರಿ ತಪಿಸುತ್ತಾರೆ. ಈ ಇಬ್ಬರನ್ನೂ ಮೋಹಿಸಿರುವ ರಾವಣ ಈ ಇಬ್ಬರ ಶಕ್ತಿಕೇಂದ್ರದಿಂದ ಹಾಗೂ ಶಕ್ತಿಕ್ಷೇತ್ರದಿಂದ ಬಿಡಿಸಿಕೊಂಡು ಹೋಗಲಾಗುವುದಿಲ್ಲ. ಮೇಲಿಂದ ಮೇಲೆ ಎರಗುವ ದುರ್ಭರ ಸಂಕಟ, ಅಹಂಕಾರಹತಿ ಎಲ್ಲವೂ ಅವನನ್ನು ಹೊರಗಿನಿಂದ ಮಾಗಿಸುತ್ತವೆ. ಅವನೂ ರಾಮ ಸತ್ತ್ವನೆ ; ಆದರೆ ಬಿದ್ದವ. ವಜ್ರವಾಗಿದ್ದ ಚೇತನ ಬಿದ್ದು ಇದ್ದಿಲಾಗಿದೆ. ಅದಕ್ಕೆ ತನ್ನ ಪೂರ್ವಸ್ಥಿತಿಗೇರಲು ಹಕ್ಕಿದೆ. ಅದಕ್ಕೆ ಎಷ್ಟೆಲ್ಲ ಶಕ್ತಿದಾನವಾಗಬೇಕು ! ಅಷ್ಟು ಇದ್ದಿಲು ಒಂದಿಷ್ಟು ವಜ್ರವಾಗಲು ಎಷ್ಟೆಲ್ಲ ಕಾವು, ಕಾಲ, ರಾಸಾಯನಿಕ ವಸ್ತುಸಂಗ ಆಗಬೇಕಿದೆ ! ರಾವಣನ ಪರಿಣಾಮಕ್ಕೆ ಮಂಡೋದರಿ ಸೀತೆಯರ ತಪಸ್ಸಷ್ಟೇ ಅಲ್ಲ, ಉಳಿದೆಷ್ಟೋ ಜೀವರ ನಿಟ್ಟುಸಿರಿನ ಕಾವೂ ಕೂಡಿ ಬರುತ್ತದೆ. ರಾವಣನಿಗೆ ತಿಳಿಯದಂತೆ ಅವನೊಳಗಿನ ಕಾಮವೆಲ್ಲ ಮೆಲ್ಲಗೆ ಸೀತಾವಿಷಯಕ ಮಾತೃ ಪ್ರೇಮವಾಗಿ ಪರಿಣಮಿಸಿರುತ್ತದೆ. ಆದರೆ ಅವನ ಅಹಂಪ್ರತಿಷ್ಠೆ ಪೂರ್ಣವಾಗಿ ಪರಿಣಾಮವಾಗಿರುವುದಿಲ್ಲ. ಆದ್ದರಿಂದಲೆ, ಯುದ್ಧದಲ್ಲಿ ರಾಮನನ್ನು ಗೆದ್ದು ತಂದು ಸೀತೆಗೊಪ್ಪಿಸುತ್ತೇನೆಂಬ ಛಲ ಅವನಿಗಿರುತ್ತದೆ ; ಹಾಗೂ ತನ್ನ ಒಳಗಿನ ಪರಿಣಾಮವನ್ನು ಲೋಕಕ್ಕೆ ಪ್ರಕಟಿಸಬೇಡವೆಂದೂ ಮಂಡೋದರಿಯನ್ನು ಕೇಳಿಕೊಂಡಿರುತ್ತಾನೆ. ಇದು ಮತ್ತೂ ಸೂಕ್ಷ್ಮವಾದ ಅಹಂಕಾರ ಕೋಶವಾಗುತ್ತದೆ.



ರಾವಣನ ಒಳಗಿನ ಸಂಪೂರ್ಣ ಪರಿವರ್ತನದ – ಆ ಮಾರ್ಗದ ಪ್ರತಿಮಾ ಸೃಷ್ಟಿಯೆ ಅವನಿಗಾದ ಧ್ಯಾನ ಸ್ವಪ್ನದರ್ಶನ. ಅದನ್ನಿಲ್ಲಿ ವಿವರಿಸುವುದು ಸಾಧ್ಯವಿಲ್ಲ. ಒಟ್ಟಿನಲ್ಲಿ ಅವನ ಛಲ ಸೀತೆಯನ್ನು ಪಡೆಯುತ್ತದೆ. ಕಾಮವಾಗಿಯಲ್ಲ ತಾಯಾಗಿ. ಅದೂ ಈಗಲ್ಲ ಮರುಭವದಲ್ಲಿ – ಲವಕುಶರಾದಾಗ. ರಾಮನನ್ನೂ ಗೆಲ್ಲುತ್ತಾನೆ, ಈಗಲ್ಲ ಆಗ.

ಇಲ್ಲಿ ಕಾಣುವುದು ಕಾಮದ ಅಹಂಕಾರದ ನಾಶವನ್ನಲ್ಲ. ಅವುಗಳ ಊರ್ಧ್ವಮುಖೀ ಕರಣವನ್ನೂ ಅಲ್ಲ. ಅದಕ್ಕಿಂತ ಮಿಗಿಲಾಗಿ ಅವುಗಳ ಸ್ವರೂಪಾಂತರ, ಪರಿಣಮನವನ್ನು. ಇದನ್ನು ಸಾಧಿಸುತ್ತದೆ ಆತ್ಮವೇನೊ. ಆದರೆ ಹಳೆಯ ವಾಸನೆಗೆ ಅಂಟಿಕೊಂಡಿರುವ ಶರೀರ ಒಗ್ಗಬೇಕಲ್ಲ. ಮೇಲಾಗಿ ಅಸಾಧ್ಯ ಪರಿಣಾಮವನ್ನು ತಾಳಿಕೊಳ್ಳಲು ಲೋಕದ ಸಮಸ್ತ ಭವ–ಭಾವನೆಗಳೂ ಸಿದ್ಧವಾಗಬೇಕಲ್ಲ. ಆದ್ದರಿಂದಲೆ ರಾವಣನ ಒಳಗು ಗಿಟುಕಾಗುತ್ತದೆ. ಚಿಪ್ಪು ಹೊರಕ್ಕುಳಿಯುತ್ತದೆ. ಸೀತಾಕಾಮ ಪ್ರೇಮವಾಗುತ್ತದೆ : ತಾನು ಮಗುವಾಗುತ್ತದೆ. ಹಾಗಾಗಿ ಅದರ ಸದ್ಯ ರೂಪವೂ ಕಳಚಿ ಬೀಳುತ್ತದೆ. ಶ್ರೀರಾವಣತ್ವ ಶ್ರೀರಾಮತ್ವದಲ್ಲಿ ಪರಿಣಮಿಸುತ್ತದೆ.

ಈ ರಾವಣ ಪರಿಣಾಮವನ್ನು ಸರಳಗೊಳಿಸುವ ವಿಮರ್ಶಕರೂ ಉಂಟು. ರಾಮ–ರಾವಣ, ಇಬ್ಬರೂ ಒಂದೇ ಆದ ಮೇಲೆ ಯಾವ ಹೋರಾಟವೂ ಇಲ್ಲ; ಹಾಗಾದರೆ ಯಾವ ಜೀವವೂ ಈ ಕಾವ್ಯದಲ್ಲಿಲ್ಲ, ಎಂಬ ಸುಲಭ ಪರಾಮರ್ಶೆಯ ಮಾತುಗಳಿಗೆ ಒಂದು ಸಮಾಧಾನ ಹೇಳುವುದು ಅಗತ್ಯ. ಇಲ್ಲಿ ರಾವಣ ಸ್ವಭಾವತಃ ರಾಮ ಸತ್ತ್ವವೇ ಆಗಿದ್ದಾನೆ ಎಂದರೆ ಸಾಧನೆಯೇ ಅಗತ್ಯವಿಲ್ಲವೆಂದರೇನು? ನಾವೆಲ್ಲ ಬ್ರಹ್ಮಸತ್ತ್ವರೆ ಎಂದ ಅದ್ವೈತವೂ ಸಿದ್ಧಿಯನ್ನು ಹೀಗೆ ಸುಲಭಗೊಳಿಸಿತೆ? ವಜ್ರ – ಇಜ್ಜಲು ಮೂಲತಃ ಒಂದೇ ಆದರೂ ಇಜ್ಜಲು ವಜ್ರವಾಗಲು ಸುಲಭಮಾರ್ಗವಿಲ್ಲ. ರಾವಣ ರಾಮನಾಗುವುದು ಅಷ್ಟೆ ಅಂತರಗತ್ಯವಾಗಿರುವಂತೆ ಕಷ್ಟ ಸಾಧ್ಯವೂ ಅಹುದು ; ಅದು ಏಕಾಂಗ ಸಾಧ್ಯವೂ ಅಲ್ಲ, ಸಮಷ್ಟಿ ಸಹಯೋಗದಿಂದಲ್ಲದೆ. ಅಷ್ಟೆ ಅಲ್ಲ, ರಾಮನ ಪೂರ್ಣ ಪ್ರಕಟನವಾಗುವುದಾದರೂ ಹಠಾತ್ತಾನೆ ಸಾಧ್ಯವಲ್ಲ. ಹಲವು ಚೇತನಗಳ ಸಂಗಮವೂ ಆ ಅಂತರಂಗಕ್ಕೆ ಕೂಡಿಬರುತ್ತದೆ. ಮಂಥರೆಯಂತಹ, ಮೇಲು ನೋಟಕ್ಕೆ ರಾಮನನ್ನು ಕಾಡಿಗೆ ಕಳಿಸಲು ಕಾರಣಳಾದ, ಗೂನಿಯೂ ಅವನ ಪೂರ್ಣ ಯೋಗಕ್ಕೆ ತಿಳಿಯದೆ ನೆರವಾಗಿದ್ದಾಳೆ. ಅವಳು ರಾಮನಿಗಿಂತ ಭರತನನ್ನು ಮೋಹಿಸಿದುದಕ್ಕೆ ಸಹಜ ಕಾರಣವೂ ಉಂಟು. ಅದರ ಸುಂದರ ಚಿತ್ರ ಈ ಕಾವ್ಯದಲ್ಲಿ ಚೆನ್ನಾಗಿ ಬಂದಿದೆ.

ಅವಳು ಕೈಕೆಯನ್ನು ಪ್ರಚೋದಿಸದಿದ್ದರೆ ಶ್ರೀರಾಮ ಕಾಡಿಗೆ ಹೋಗುವುದೆಲ್ಲಿತ್ತು. ಅದಾಗದೆ ರಾವಣ ವಧೆಯೂ ಇಲ್ಲ ; ಶ್ರೀರಾಮನ ಪೂರ್ಣ ಪ್ರಕಾಶನವೂ ಇಲ್ಲ; ಸೀತಾತ್ವದ ಸತ್ತ್ವದರ್ಶನವೂ ಆಗುತ್ತಿರಲಿಲ್ಲ. ಅವಳ ಭರತ ಮೋಹ – ಕೈಕೆಯ ಬಗೆಗಿನ ವಾತ್ಸಲ್ಯ ಶ್ರೀರಾಮನ ವನವಾಸವನ್ನು ಯೋಚಿಸಿದಂತೆಯೇ, ಅದೇ ಭರತ ಪ್ರೇಮದ ಪುನರ್ಲಾಭಕಾತರವಾಗಿ ಕಾಡಿನಿಂದ ರಾಮ ಹಿಂತಿರುಗುವಂತೆ ಮೊರೆಯಿಡುತ್ತದೆ. ಅವಳ ರಾಮಪ್ರೇಮ ಭರತ ಪ್ರೇಮದ ವಿಸ್ತರಣವಷ್ಟೆ ; ಅದರಿಂದಷ್ಟೆ ಇದಕ್ಕೆ ಬೆಲೆ. ಇದು ಬಹಳ ಅಕೃತಕ ವಿಧಾನ. ಹೀಗೆ ಒಂದೊಂದು ಪಾತ್ರವೂ ವಿಶೇಷವಾಗಿ ಮಂಥರೆ ರಾವಣರಂತಹ ಪಾತ್ರ – ತಮ್ಮ ತಮ್ಮ ಸ್ವಭಾವದಲ್ಲೇ ಉತ್ಕಟವಾಗಿ ಬದುಕುತ್ತ ಸಮಷ್ಟಿ ಕಲ್ಯಾಣದತ್ತ ಸಾಗುತ್ತವೆ ; ಶ್ರೀರಾಮತ್ವದತ್ತ ತೆವಳುತ್ತಲೋ, ಉರುಳುತ್ತಲೋ, ಹೊರಳುತ್ತಲೋ ಧಾವಿಸುತ್ತವೆ. ಪ್ರಬಲ ನಕ್ಷತ್ರದಿಂದ ಸಿಡಿದೆರಗುವ ಜ್ಯೋತಿರ್ಗ್ಗೋಲವೊಂದು ದೂರ ದೂರ ಧಾವಿಸಿಯೂ ಕಡೆಯಲ್ಲಿ ತನ್ನ ವೇಗವನ್ನು ಅದರ ಸೆಳೆತಕ್ಕೊಪ್ಪಿಸಿಕೊಂಡು ನಿಯತ ಅಕ್ಷದಲ್ಲಿ ದೃಢಗತಿಯಿಂದ ಸುತ್ತುತ್ತ ತಣ್ಣಗಾಗಿ ಆ ಮೂಲ ಜ್ಯೋತಿರ್ ಬಿಂಬವನ್ನೇ ಪ್ರತಿಬಿಂಬಿಸುತ್ತ ಜೀವಗರ್ಭೆಯಾಗುತ್ತ ಹೋಗುವಂತೆ ತೋರುತ್ತಾರೆ ಈ ಪಾತ್ರಗಳು.

ಹೀಗೆ ಶ್ರೀ ಕುವೆಂಪು ಅವರು ಹಲವು ಪಾತ್ರ ಸೃಷ್ಟಿಯಲ್ಲೂ ಈ ಯುಗದ ಎಷ್ಟೋ ಭಾವಗಳ ವಿಕಾಸ ವಿಧಾನವನ್ನು ಪ್ರತಿಮಿಸಿದ್ದಾರೆ. ಅಂದ ಮಾತ್ರದಿಂದಲೆ ಈ ಕಾವ್ಯ ವಾಲ್ಮೀಕಿ ರಾಮಾಯಣವನ್ನು ಮರೆಸಿತೆಂದು ತಿಳಿಯುವುದು ತಪ್ಪಾಗುತ್ತದೆ. ಅದರ ಪ್ರಾಕೃತಿಕ ಸೌಂದರ್ಯ ಅದರದೆ. ಅದು ಚಿರಸುಂದರವಾಗಿ ಉಳಿಯುತ್ತದೆ. ಆದರೂ ಈ ಯುಗದ ಎಲ್ಲ ಆಶೆ ಆಕಾಂಕ್ಷೆಗಳಿಗೂ ಸಂದೇಹಗಳಿಗೂ ಹೊಸ ಉತ್ತರವನ್ನು ಅಲ್ಲಿ ಕಂಡು ಕೊಳ್ಳಬರುವುದಿಲ್ಲ. ಈ ಕೃತಿಯಲ್ಲಿ ಕಂಡುಕೊಳ್ಳಬೇಕಾಗುತ್ತದೆ. ಇದರ ವಿವರವಾದ ಅಭ್ಯಾಸಕ್ಕೆ ಈ ಪ್ರಬಂಧ ವಿಷಯಮಿತಿಯಲ್ಲಿ ಎಡೆ ಇಲ್ಲ.

ಶ್ರೀ ಕುವೆಂಪು ದರ್ಶನದ ವೈಶಿಷ್ಟ್ಯ ಪ್ರಾಚೀನ ಅರ್ವಾಚೀನ ಯುಗಪ್ರಜ್ಞೆಗಳೆರಡರ ಸಂಘರ್ಷ ಸಮನ್ವಯದಿಂದ ಬಂದದ್ದು. ಈ ಸಿದ್ಧಿ ಸಾಹಿತ್ಯಲೋಕದಲ್ಲಿ ವಿಶಿಷ್ಟವಾದದ್ದು. ಈ ಕವಿದರ್ಶನ ಭಾಸನಂತೆ ಮೂಲಸಮಸ್ಯೆಯನ್ನು ಸರಳಗೊಳಿಸುವುದಿಲ್ಲ.* ಕಾಳಿದಾಸನಂತೆ ಕೆಲವೊಮ್ಮೆ ಅದನ್ನು ಮರೆಯುವಂತಹದಲ್ಲ. ±ಕೆಲವು ಹಿಂದೀ ಕವಿಗಳಂತೆ ಭಾವಾತಿರೇಕದ ಉಚ್ಛೃಂಖಲತೆಗೆ ಪಕ್ಕಾಗುವುದಿಲ್ಲ. #ಇದು ಬಂಡಾಯಗಾರನಾಗಿದ್ದೂ



ತಲೆಮೊರೆಗೆಡೆದೆ ವರ್ತಮಾನಕ್ಕೆ ಭಾರತೀಯ ಸನಾತನ ನೈರಂತರ್ಯದ ಭಾಗೀರಥ್ಯ ನಡೆಸುವ ಶಕ್ತಿಫಲವಾಗಿ ಬಂದದ್ದು.

---

* ಭಾಸಕವಿಯನ್ನು ಕ್ರಾಂತಿಕವಿಯೆಂದೂ, ಮಹಾಕಾವ್ಯಗಳನ್ನು ಸ್ವತಂತ್ರ ಪ್ರತಿಭೆಯಿಂದ ನಡೆಸಿದವನೆಂದೂ ಹೊಗಳುವುದುಂಟು. ಇದು ಅವಿಚಾರಿತ ರಮಣೀಯವಷ್ಟೆ. ಆತನ ಶಕ್ತಿ ಇರುವುದು ಇದರಲ್ಲೆ ಆದರೆ ಅದು ದೌರ್ಬಲ್ಯ ಪೂಜೆ ಆಗುತ್ತದೆ. ಭಾಸಕವಿ ಸುಮಧುರ ಭಾವಗಳ ಮೋಹಕ ಪ್ರತಿಪಾದಕನೇನೊ ಅಹುದು. ಆದರೆ ಅವನ ಮನಸ್ಸು ಸಂಕೀರ್ಣವಲ್ಲದ ಸರಳಕಲ್ಪನೆಯಲ್ಲೆ ಹೆಚ್ಚು ವಿಲಾಸಿ. ಮಹಾಭಾರತದ ಮಹಾಜಟಿಲ ಕರ್ಮಾರಣ್ಯವನ್ನು ರಾಮಾಯಣದ ಕರುಣತ್ಯಾಗ ಲೋಕೋತ್ತರ ವಿಚಿತ್ರಸ್ತರದ ಕಥೆಯನ್ನು ಆತ ಆ ಹಿಂದಿನ ಋಷಿಕವಿಗಳು ಗರ್ಭೀಕರಿಸಿಕೊಂಡ ಬೃಹದ್ ಗಾತ್ರದಲ್ಲಿ, ಸಂಕ್ಲಿಷ್ಟ ಪಾತ್ರಸ್ವರೂಪದಲ್ಲಿ ಕಲ್ಪಿಸಿಕೊಳ್ಳದೆ ಸರಳಗೊಳಿಸುವ ಬಾಲ ಸಾಹಸ ತೋರಿ ಮೆಚ್ಚುಗೆ ಪಡೆದಿದ್ದಾನೆ. ಪಂಚರಾತ್ರವಂತೂ ಈ ಮಾತಿಗೆ ಅತ್ಯಂತ ಸೂಕ್ತ ನಿದರ್ಶನವಾಗುತ್ತದೆ. ಭಾಸನಿಗೆ ಮಹಾಭಾರತ ಯುದ್ಧವಾಗದಿದ್ದರೆ ಚೆನ್ನು ! 'ಹೌದಲ್ಲ, ಯಾರು ಬಯಸರು' ! ಹಾಗೆಂದು ಹಾಗೆಯೆ ಮಾಡಿಬಿಡುವ ಹಗಲುಗನಸಿನ ರಮ್ಯಕಲ್ಪನೆ ಬರುತ್ತದೆ, ಅವನಿಗೆ. ಕುರುಕ್ಷೇತ್ರವನ್ನು ತಪ್ಪಿಸಿ ಕೌರವಪಾಂಡವರಿಗೆ ಸಂಧಾನಮಾಡಿಸಿಬಿಡುತ್ತಾನೆ. ಹಾಗೆ ಮಾಡಿಸುವ ಬಯಕೆ, ಮಾಡಿಸುವ ರೀತಿ ಎಲ್ಲ ಮೆಚ್ಚತಕ್ಕವೇ ಸರಿ. ಆದರೆ ಇದು ಹುಡುಗು ಬುದ್ಧಿಯ ಫಲ ಅಷ್ಟೆ. ವ್ಯಾಸಕಥೆಯ ಆ ಹಿಮಾಚಲ ಸಾಗರಗಳ ಅನಿವಾರ್ಯ ಸಂಕೀರ್ಣ ಕ್ರಿಯೆಯ ಇರವಿಲ್ಲದ್ದರೆ, ಅರಿವಿಲ್ಲವಾದರೆ, ಈತನ ಮುಗ್ಧಭಾವುಕ ಸರಳಾಮೋದದ ಸರೋವರ ಕೃತಕಾಚಲಗಳಷ್ಟನ್ನೆ ರಮ್ಯ ಭವ್ಯಗಳೆಂದು ಗಣಿಸಬಹುದಾಗಿತ್ತು. ಮಹಾಭಾರತದ ಯುದ್ಧ ತಪ್ಪಬೇಕೆಂಬ ಬಯಕೆ ತೀವ್ರವಾಗಿಯೊ ತೆಳುವಾಗಿಯೊ ತಾತ್ಕಾಲಿಕವಾಗಿಯೊ ಸ್ಥಾಯಿಯಾಗಿಯೊ ಯಾರಲ್ಲಿ ತಾನೆ ಇರಲಿಲ್ಲ, ವ್ಯಾಸ ಮಹಾಭಾರತದಲ್ಲಿ ಕೂಡ ? ಧರ್ಮರಾಯ, ವಿದುರ, ಭೀಷ್ಮ, ದ್ರೋಣಾದಿಗಳಿಗೆ ಆ ಶ್ರದ್ಧೆ ಇದ್ದುದು ಹೋಗಲಿ, ಸಾಕ್ಷಾತ್ ಭೀಮನಿಗೆ – ದುಶ್ಯಾಸನನ ಎದೆ ನೆತ್ತರು ಕುಡಿದು ದ್ರೌಪದಿಯ ಮುಡಿಗಟ್ಟುವ, ಸುಯೋಧನನ ತೊಡೆಯುಡಿದು ಮುಡಿ ಒದೆಯುವ ಭಯಾನಕ ಪ್ರತಿಜ್ಞೆಮಾಡಿ, ಯುದ್ಧಾಗ್ನಿಗೆ ಪೆಟ್ರೋಲಿಯಂ ಇಂಧನಗಳ ಬಾವಿಗಳನ್ನೆ ಬಹು ತಳಕ್ಕೆ ಕೊರೆದು ತೆರೆದ ಆ ಯಮನಿಗೆ – ಕೂಡ ಯುದ್ಧ ಬೇಡವೆಂಬ ಸಂಚಾರಿಭಾವ ಬರುತ್ತದೆ. ಶ್ರೀಕೃಷ್ಣ ರಾಯಭಾರದಲ್ಲದನ್ನವನು ತಿಳಿಸಿಯೂ ತಿಳಿಸುತ್ತಾನೆ. ಅವರಾರೂ ಅದಮ್ಯ ಕಾಲಕರ್ಮವನ್ನು ತಡೆಯಲಾರದಾದರು ; ಅದನ್ನು ಅಲ್ಲಗಳೆದು ಇಲ್ಲಗಳೆಯಲಾರದಾದರು, ಸುತ್ತಳಿಯಲಾರದಾದರು. ಹೀಗಿರುವಾಗ ಭಾಸ ತಡೆಯಲಾಸಿಸಿದರೆ ? ತಿದ್ದ ಬಯಸಿದರೆ! ಮುಗ್ಧನೆನ್ನಬೇಕು. ನಿಯಂತ್ರಿತ ಕಾವ್ಯನಂದನದಲ್ಲಿ ಆ ಬೆಳೆ ಸಾಧ್ಯವಾಯಿತು. 'ಕಟ್ಟುಗೆ ಕಟ್ಟದಿರ್ಕೆ.....'

ಎಂದು ಎಂದು ಹಾಡಿ ಇದನ್ನು ಸಮರ್ಥಿಸಿ ಸುಮ್ಮನಾಗಬಹುದು. ಆದರೆ, ಮಹಾಭಾರತದ ಜಟಿಲ ಕರ್ಮ ಜಾಲವನ್ನು ಎಷ್ಟು ತಾನೆ ಪರಿಕ್ರಮಿಸಿದ್ದಾನೆ ಇದರಿಂದ ಭಾಸ? ಕೌರವ ಭೀಮರು ಕಾವು ಕಳೆದವರಾದರು ; ಯುದ್ಧ ತಪ್ಪಿತು : ಆದರೆ ಮಾನವ ಮನಸ್ಸಿನ ಕುಟಿಲ ಜಟಿಲ ಸಂಕೀರ್ಣತೆಯನ್ನು ಹೀಗೆಯೆ ಸರಳಗೊಳಿಸಬರುವುದೆ? ವ್ಯಾಸರ ಯಾವ ಪರಂಪರೆಯನ್ನು ಅರಗಿಸಿ ಕೊಂಡಂತಾಯಿತು ಪಂಚರಾತ್ರಕಾರ? ಎಲ್ಲ ವಿಸೃಷ್ಟಿಗಳಂತೆ ಇದೂ ಪ್ರದರ್ಶನಯೋಗ್ಯ ; ದರ್ಶನ ಯೋಗ್ಯವಲ್ಲ. ಭಾರತವನ್ನು ಸರಳಮಾಡಿ ಪಾತ್ರ ವೈವಿಧ್ಯವನ್ನೂ ವಿರಳಮಾಡಿ ಸೃಷ್ಟಿ ರಹಸ್ಯದ ಬಗೆಗಿನ ತನ್ನ ಅರಿವನ್ನು ತರಳಗೊಳಿಸಿದ್ದಾನೆ ಕವಿ. ಅವನೇನಿದ್ದರೂ ಸ್ವಪ್ನವಾಸವದತ್ತದಂತಹ ಬಹು ಮೋಹಕ ರಮ್ಯನಾಟಕಕ್ಕಷ್ಟೆ ಸಮರ್ಥ ಕವಿ. ಅವನ ಜಗತ್ತು ಸೂರ್ಯನೇತ್ರದಲ್ಲಿ ಕಂಡದ್ದಲ್ಲ ; ಚಂದ್ರ ನಯನದಲ್ಲಿ ಕಂಡದ್ದು. ವ್ಯಾಸ ವಾಲ್ಮೀಕಿಗಳಿಗೆ ಹತ್ತಿರವಿದ್ದವನು ಈ ಪುಣ್ಯಕವಿ. ಇವನ ಕಾಲಕ್ಕಾಗಲೆ ನಮ್ಮ ಭಾರತೀಯ ಸಮೃದ್ಧ ಸಂಸ್ಕೃತ ಅರಣ್ಯಕ ಜೀವನವೆಲ್ಲ ನಾಗರಿಕ ಸಭ್ಯವಾಗಿ ಮೂಗುತಿ ಮೂಗುದಾರ ಬಳೆ ತೊಡಿಸಿಕೊಳ್ಳತೊಡಗಿತ್ತು. ಇವರ ಕೈಗೆಬಿದ್ದ ವ್ಯಾಸವಾಲ್ಮೀಕಿಗಳೂ ನಂದನಸರೋವರವಾಗತೊಡಗಿದರು.

±ಕವಿಕುಲಗುರು ವಿಶೇಷಣದಿಂದ ಪ್ರಸಿದ್ಧನಾದ ಕಾಳಿದಾಸ ಕವಿಯಾದರೂ ಕೆಲವೊಮ್ಮೆ ತುಸು ಕಡಿಮೆ ಇಷ್ಟೆ. ನಾಟಕವಾಗಿ ಶಾಕುಂತಲ ಒಂದೆ ಅವನ ಸಮಗ್ರ ಪರಿಣತ ಕೃತಿ. ಅಲ್ಲಿ ಮಾತ್ರವೇ ಅವನು ತನ್ನ ಹಿಂದಣ ಪರಂಪರೆಯನ್ನು ಯಶಸ್ವಿಯಾಗಿ ಪಳಗಿಸಿಕೊಂಡಿದ್ದಾನೆ; ನಾಗರಿಕಗೊಳಿಸಿಯೂ ಕೃತಕಗೊಳಿಸಿಲ್ಲ. ಆದರೂ, ಅವನು ಆ ನಾಟಕದಲ್ಲಿ ಮೂಲ ವ್ಯಾಸ ಕಥೆಯ ರೂಕ್ಷತೆಯನ್ನು ಸುಂದರಗೊಳಿಸಿದ್ದಾನೆ, ಎಂಬಿತ್ಯಾದಿ ಮಾತುಗಳು ಅವನಿಗೆ ಬಹುಮಾನವಾದರೂ ಮೂಲ ಕವಿಗೆ ಅವಮಾನವಷ್ಟೆ ಸರಿ. ವ್ಯಾಸರ ಸೃಷ್ಟಿಯೆ ಒಂದು ವಿಶಿಷ್ಟ ಲೋಕ ; ಪ್ರಾಕೃತಿಕತೆಯನ್ನು ಬಿಡದ ಸಂಸ್ಕೃತ – ನಾಗರಿಕ ಲೋಕ. ಕಾಳಿದಾಸನಾದರೊ ನಾಗರಿಕ – ಸಭ್ಯನಾದ ಕವಿ. ಆದರೆ, ಜಾನಪದದ ಪ್ರಾಕೃತಿಕ ಅರಿವು ಅಷ್ಟಾಗಿ ಇಲ್ಲದವ. ಇದು ಅವನ ಕೃತಿಗಳಲ್ಲಿ ಕಾಣುತ್ತದೆ. ನಾಗರಿಕಾವರಣದಲ್ಲಿದ್ದದ್ದರಿಂದ ಅವನ ಪಾತ್ರಗಳು, ವಿಶೇಶವಾಗಿ ಸ್ತ್ರೀ ಪಾತ್ರಗಳು, ಸಭ್ಯ ಸಂಯಮಿಗಳಾಗುತ್ತಾರೆ. ವ್ಯಾಸರ ಶಕುಂತಲೆಗೂ ಕಾಳಿದಾಸನ ಶಕುಂತಲೆಗೂ ಪ್ರಧಾನ ವ್ಯತ್ಯಾಸ ಇದೇ. ವಿಕ್ರಮೋರ್ವಶೀಯದ ಊರ್ವಶಿಯಾದರೊ ಹೆಚ್ಚು ಉರಿಬೆಳಕು ಕಳೆದುಕೊಂಡಿದ್ದಾಳೆ. ಎಂತಹ ಜಾಜ್ವಲ್ಯ ಮಾನವಾದ ಶಿಖಿ – ಖಡ್ಗಧಾರಾ ಸೌಂದರ್ಯದ ವೇದಕಥೆಯನ್ನು ಈ ಕವಿ ಹೇಗೆಲ್ಲ ಮೃದುಗೊಳಿಸಿದ್ದಾನೆ ? ಅಲ್ಲಿನ ತಟಿತ್‌ಸುಂದರಿ ಊರ್ವಶಿ, 'ನ ವೈ ಸ್ತ್ರೈಣಾನಿ ಸಖ್ಯಾನಿ ಸಂತು ಸಾಲಾವೃಕಾಣಾಂ ಹೃದಯಾನ್ಯೇತಾ' – ಎಂದು ಸಿಡಿಲೆರಗಿ ಪುರೂರವನನ್ನು ಉರಿಗತ್ತಲಲ್ಲೆ ಬಿಟ್ಟುಹೋಗುತ್ತಾಳೆ. ಆದರವಳು ವಿಕ್ರಮೋರ್ವಶಿಯದಲ್ಲಿ ಬರಿ ಕಾಮಾತುರೆಯಾಗಿ, ತನ್ನ ವೈದಿಕೋಜ್ವಲತೆಯನ್ನೂ



ಭಾರತ ಪುರಾಣಗಳ ಹೊಳಪನ್ನೂ ಕಳೆದುಕೊಂಡವಳಾಗಿ, ಪುರೂರವನಲ್ಲಿ ಸಂಸಾರಮಾಡುತ್ತಾಳೆ. ಎಲ್ಲಕ್ಕಿಂತ ಅಸಹ್ಯವೆಂದರೆ ಪುರೂರವನೊಡನೆ ದಾಂಪತ್ಯ ತೀರಿಬಿಟ್ಟೀತೆಂದು ತನ್ನ ಮಗನನ್ನು ಅವನಿಗೆ ತೋರಗೊಡದೆ ೧೦–೧೨ ವರ್ಷ ತಪೋವನದಲ್ಲಿ ಮರೆಸಿಟ್ಟಿರುವುದು. ಸಂಸ್ಕೃತರಿರಲಿ ಜಾನಪದರೂ ನಾಚುವ ನಡೆ ಇದು. ಆದರೆ, ತಮ್ಮ ಮಕ್ಕಳನ್ನು ದೂರದ ನಗರದ ಆಶ್ರಮಶಾಲೆಗಳಲ್ಲಿ ಬಿಟ್ಟ ತಾವು ಹಾಯಾದ ಮುಕ್ತಸಂಸಾರ ನಡೆಸುತ್ತಿರುವ ನಾಗರಿಕ ಶ್ರೀಮಂತರೆ ಹೆಚ್ಚುತ್ತಿರುವ ನಮ್ಮ ಕಾಲಕ್ಕೆ ಅದು ವಿಸಂಗತವಾಗಿಯೇನೂ ತೋರದಿದ್ದರೆ ತಪ್ಪಲ್ಲ. ಕಾಳಿದಾಸ ಇದ್ದದ್ದೂ ಮತ್ತೊಂದು ನಾಗರಿಕ ಯುಗವೆ ತಾನೆ ? ಆದರದು ಸಂಸ್ಕೃತ ಜೀವನದ ಕಡೆಗೆ ಆಗಾಗ ಮುಖ ತಿರುಗಿಸುತ್ತಿದ್ದ ಕಾಲ. ನಮ್ಮದು ? .... ! ಹಾಗಾಗಿ ಊರ್ವಶಿ ಮಿಂಚಳಿದ ನಾಗರಿಕಳಾಗುತ್ತಾಳೆ. ಮಿಂಚುಹುಳುವಾಗುತ್ತಾಳೆ. ವೇದಋಷಿ ಕಥೆಯ ಪರಂಪರೆಯನ್ನು ಕಾಳಿದಾಸ ಗ್ರಹಿಸಿಕೊಂಡ ವೈಭವವಿದು. ಅದಕ್ಕೆ ಅವನೂ ಅವನ ನಾಗರಿಕ ಯುಗವೂ ಕಾರಣ.

# ಊರ್ಮಿಳಾ ದೇವಿಯನ್ನು ಕುರಿತ ಸ್ವತಂತ್ರ ಕಾವ್ಯವನ್ನೆ ಹಿಂದಿಯ ಕವಿ ಶ್ರೀ ಮೈಥಿಲೀ ಶರಣಗುಪ್ತರು ಬರೆದಿದ್ದಾರೆ. ಅದರ ಮೇಲೇಳುವ ಪ್ರಶ್ನೆ ಇದು : ಊರ್ಮಿಳೆಯ ಶುಚಿಸ್ಮಿತ ಪಾತ್ರವನ್ನು ಒಂದು ಕಾವ್ಯದಷ್ಟು ಉದ್ದಗಲದ ಬೆಳ್ಳಂ ಬೆಳಕಿನಲ್ಲಿ ತಂದು ಓಡಾಡಿಸಬಹುದೆ? ಊರ್ಮಿಳೆ ಸೀತೆಯಲ್ಲ, ದ್ರೌಪದಿಯಲ್ಲ, ಸಾವಿತ್ರಿ ದಮಯಂತಿಯೂ ಅಲ್ಲ. ಅವಳ ಮಹತ್ತು ಅನುಕ್ತಿಯಲ್ಲೆ ಇರಲೆಂದೊ ಏನೊ ವಾಲ್ಮೀಕಿ ಋಷಿ ಹಾಗೆಯೆ ಬಿಟ್ಟುಬಿಟ್ಟಂತೆ ತೋರುತ್ತದೆ. ಅವು ಸಂಗಮದಲ್ಲೂ ಅದೃಶ್ಯವಾಗಿರುವ ಅಂತರ್ಗತ ಸ್ರೋತವಾದ ಸರಸ್ವತೀನದಿಯಂತೆ ಇದ್ದಾಳೆ. ಹಾಗೆಂದು ಹೇಳಿದ ಕವಿ ರವೀಂದ್ರರಿಗೂ ವಾಲ್ಮೀಕಿಗಳ ಮೌನ ಅನಾದರವೆಂಬಂತೆ ಕಂಡಿತು. ಅದು ಅನಾದರವಾದರೂ ಎಂಥ ಧ್ವನಿಮಯ ಅನಾದರ. ಠಾಕೂರರ ಹೃದಯಪೂರ್ಣ ಆದರದಿಂದ ಪ್ರೇರಿತವಾದ ದೀರ್ಘಕಾವ್ಯಗಳು ತೋರಿದ ವಿಶೇಷ ಆದರಗಳೂ ಕಾಣಲಾರದ ಸೂಕ್ಷ್ಮ ಸೌಂದರ್ಯ ಅಲ್ಲಿದೆ. ತನ್ನೊಡನೆ ಕಾಡಿಗೆ ಬರಲು ಹಠಮಾಡಿದ ಲಕ್ಷ್ಮಣನನ್ನು ಒಪ್ಪಿಕೊಂಡ ಶ್ರೀರಾಮ ಅವನಿಗೆ ಹೇಳುವುದಾದರೂ : 'ನಿನ್ನವರಿಗೆ ಹೇಳುವುದನ್ನೆಲ್ಲ ಹೇಳಿ ಬಾ' ಎಂದು. ಅಲ್ಲೆ ವಾಲ್ಮೀಕಿಗಳ ಊರ್ಮಿಳೆ ನಿಂತಿದ್ದಾಳೆ, ಮೌನವಧುವಾಗಿ. ಕುವೆಂಪು ಅವರ ಊರ್ಮಿಳಾ ಪಾತ್ರಕ್ಕೆ ಠಾಕೂರರ ಪ್ರೇರಣೆ ಇದ್ದರೂ ಸುದೈವದಿಂದ ಅವಳನ್ನು ಅನುಕ್ತ ಸುಂದರಿಯನ್ನಾಗಿಯೆ ಪ್ರತಿಮಿಸಿದ್ದಾರೆ, ಮೀಟಿಲ್ಲದೆ ಬೆರಳೊತ್ತಿನಿಂದಲೆ ಮುಂದಣ ಸ್ವರ ಸೌರಭಗಳನ್ನು ಉಕ್ಕಿಸುವ ವೈಣಿಕನಂತೆ. ಇವರ ಕಾವ್ಯದಲ್ಲಿ ಊರ್ಮಿಳೆಯ ಪ್ರತ್ಯಕ್ಷ ಸಂದರ್ಶನವಾದರೂ ಆಗುವುದು ಕಡೆಯಲ್ಲಿ. ಆ ಮುನ್ನ ಈ ತಾಯಿ ಒಂದೆರಡು ಮೂರು ಬಾರಿ ಶಾಂತಕಾಂತಿಯಾಗಿ ಬೆಳಗಿ ಹೋಗುತ್ತಾಳೆ, ನೆನಪಿನಲ್ಲಿ. ಒಂದೆರಡು ಕಂಬಗಳ ಮೇಲೇ ಬಹು ಅಗಲದ ಕಮಾನನ್ನು ಬೀಸಿ, ತೂಗು ಸೇತುವೆ ಬಿಗಿಯುವಂತೆ

ಇದೆ ಈ ಕಲೆ. ಅವಳು ನಿಜಕ್ಕೂ ಸರಸ್ವತೀ ನದಿಯೆ. ಅವಳ ವಿಶಿಷ್ಟ ಶಕ್ತಿ ಸಿದ್ಧಿಯೆಲ್ಲ, 'ತನ್ನ ತಾನ್ ಇಲ್ಲಗೈವುದೆ ಎಲ್ಲ ಸಾಧನೆಯ ಕೊನೆಯ ಗುರಿ' ಎಂಬುದರ ಸಾಧನೆಯಲ್ಲೆ ತುಂಬಿದೆ. ಎಂತಹ ಉಗ್ರ ನಿಷ್ಠ ಗಂಡನಿಗೆ ಏನೆಂತಹ ಸೌಮ್ಯ ನಿಷ್ಠೆಯ ಶಾಂತನಂದಾದೀವಿಗೆಯಂತಹ ಸತಿ ಇವಳು. ಇವಳು, ಹಿಂದೀ ಕವಿಗಳು ಕಲ್ಪಿಸಿದಂತೆ ಬರಿಯ ವಿರಹಿಣಿಯಲ್ಲ. ಕುವೆಂಪು ಅವರಲ್ಲಿ ಮಾತ್ರವಲ್ಲ, ಜಾನಪದ ಕಲ್ಪನೆಯಲ್ಲೂ ಬರಿಯ ವಿರಹಿಣಿಯಲ್ಲ, ತಪಸ್ವಿನಿ. ಚಿಕ್ಕಂದಿನಲ್ಲಿ ನನ್ನ ಚಿಕ್ಕಮ್ಮ ಹೇಳಿದ, ನಾನೀಗಲೂ ಎಲ್ಲೋ ಅಡಿಮನದಲ್ಲಿ ನಂಬಿರುವ ಕಥೆ ಹೀಗಿದೆ : 'ಲಕ್ಷ್ಮಣಸ್ವಾಮಿ ಕಾಡಿಗೆ ಹೋದ ಸುದ್ದಿ ತಿಳಿದ ಊರ್ಮಿಳೆ ಸ್ನಾನಮಾಡುತ್ತಿದ್ದವಳು ಹಾಗೆಯೆ ಅಲ್ಲಿಯೆ ಮುಡಿಬಾಗಿ ಕುಳಿತಳಂತೆ – ಹದಿನಾಲ್ಕು ವರ್ಷದ ತನಕ ! ಕಾಡಿನಿಂದ ಬಂದ ಗಂಡನನ್ನು ಮಿಂದು ಮಡಿಯುಟ್ಟು ಎದುರುಗೊಂಡಳಂತೆ. ಅಲ್ಲ, ಕಾಡಿಗೆ ಹೊರಟ ಗಂಡ ಮನೆಗೆ ಬಂದು ಹೋಗುತ್ತಾನೆಂದು ತಂಬಿಗೆ ಹಿಡಿದು ಬಿಸಿ ಪಾದೋದಕ ಎರೆಯಲು ನಿಂತಿರುತ್ತಾಳಂತೆ. ಕರ್ತವ್ಯ ಭರದಲ್ಲಿ ಪತಿ ಮನೆಗೆ ಬರಲಿಲ್ಲ. ಆಕೆ ಅಲ್ಲೆ ನಿಂತಿದ್ದಳು. ಹದಿನಾಲ್ಕು ವರ್ಷವೂ. ಗಂಡ ಹಿಂದಿರುಗಿದಾಗ ಅದೇ ಬಿಸಿ ನೀರನ್ನು – ತುಸವೂ ತಣ್ಣಗಾಗದ ಬಿಸಿ ನೀರನ್ನು – ಅವನ ಕಾಲಿಗೆರೆದು ಸ್ವಾಗತಿಸುತ್ತಾಳಂತೆ, ಯಾವ ಮಾತೂ ಇಲ್ಲದೆ. ಜಾನಪದದ ಈ ಮಹಾಸೃಷ್ಟಿ ವಿಲಕ್ಷಣವಾಗಿ ತೋರಬಹುದು. ಕುವೆಂಪು ಅವರ ಊರ್ಮಿಳಾಇಂತಹ ಮೌನ ತಪಸ್ಸಿನಿಯೆ. ಋಷಿಜಾನಪದ ಪರಂಪರೆಯ ಕವಿಯ ದೃಷ್ಟಿ ಹೀಗೆ.

(ಕುವೆಂಪು ಅವರ ಷಷ್ಟ್ಯಬ್ದ ಸಮಯದಲ್ಲಿ ಅವರಿಗೆ ನೀಡಿದ "ಗಂಗೋತ್ರಿ" ಅಭಿನಂದನ ಗ್ರಂಥದಲ್ಲಿ ಮೊದಲು ಪ್ರಕಟವಾದ ಲೇಕನವಿದು. ೧೯೬೭–೮.)

* * * *



# ಕುವೆಂಪು ಕೃತಿ : ಪ್ರವೇಶ

ಈ ಸಭಾಂಗಣಕ್ಕೆ ಬರುವಾಗ, ನೀವು ದಾರಿಯಲ್ಲಿಟ್ಟಿದ್ದ ಗಣಪತಿಯ ವರ್ಣಚಿತ್ರವನ್ನು ಕಂಡೆ. ಎಂದೂ ಮೋಹಕವಾಗಿರುವ ವಿನಾಯಕನ ಸಂಕೇತ ಈಗಲೂ ಹೊಸ ಹೊಳಪಿನಿಂದಲೆ ಕಂಡಿತು. ಇಲ್ಲಿಗೆ ಬಂದು ಅದೇ ಭಾವವನ್ನು ಮನಗಾಣುತ್ತಿರುವಾಗ, ಈಗತಾನೆ ಕೇಳಿದ – ಈ ಮಕ್ಕಳು ಹಾಡಿದ – ಶ್ರೀ ಕುವೆಂಪು ಗೀತಗಳಲ್ಲಿ ಒಂದು ಮತ್ತೊಂದು ಅರ್ಥವನ್ನು ಮನಸ್ಸಿಗೆ ತಂದಿದೆ. ಈ ಎರಡೂ ಭಾವಾರ್ಥಗಳು ಕುವೆಂಪು ಕಾವ್ಯಸೃಷ್ಟಿಯ ವಿಚಾರಮಾಡುವುದಕ್ಕೆ ಕೀಲಿಕೈಯಂತಿವೆ. ಒಂದು, ಗಣೇಶ ವಿಚಾರ : ಈ ದೈವ, ನೋಡಿ, ತುಂಬಾ ವಿರುದ್ಧಗಳನ್ನು ಕೂಡಿಸಿ ಆಡಿಸಿದ್ದಾನೆ. ಇಲಿ ವಾಹನವಾದರೆ ಕಟಿಬಂಧ ಸರ್ಪ. ಎರಡೂ ಬಿಲಗಾಮಿಗಳು ; ಒಂದು ಬಿಲ ತೋಡಿದರೆ ಮತ್ತೊಂದು ಅಲ್ಲಿರುತ್ತದೆ; ಅಷ್ಟೆ ಅಲ್ಲ, ಅದನ್ನೆ ತಿನ್ನುತ್ತದೆ. ಜೊತೆಗೆ ಆನೆಯ ಮುಖ. ಕೈಯಲ್ಲಿ ಅಂಕುಶ. ಯಾವ ಆನೆ ತಾನೆ ತನ್ನ ಅಂಕುಶವನ್ನು ತಾನೆ ಹಿಡಿದುಕೊಳ್ಳಬಲ್ಲದು ? ಹಾಗೆಯೆ, ಮಹೋದರನಿಗೆ ಕ್ಷುದ್ರವಾಹನಯೋಗ – ಹೀಗೆ ಪರಸ್ಪರ ವಿರುದ್ಧಗಳೆನಿಸುವ ಅಸಂಗತಗಳನ್ನು ಸುಹಾಸ ನೀಡುತ್ತಲೆ ಸುಸಂಗತಗೊಳಿಸುವ ಚದುರು ಗಣೇಶನಿಗುಂಟು. ಅದರಿಂದಲೆ ಅವನು ವಿನಾಯಕನೆನಿಸಿದ್ದಾನೆ. ಬದುಕಿನಲ್ಲಿ ಕೇವಲ ಸರಳ ಸತ್ಯವನ್ನು ಯಾರೂ – ಅವರೆಷ್ಟೆ ಬಯಸಿದರೂ – ಕಾಣಬರುವುದಿಲ್ಲ; ಕಂಡರೂ ಪಡೆಯಬರುವುದಿಲ್ಲ. ವಿಷಮಗಳನ್ನು ಕಂಡಾಗ, ತನ್ನ ಪಾಲಿಗೆ ಅವು ಬಂದಾಗ ತರಳ ಮನಸ್ಸಿಗೆ ಗಾಬರಿಯಾಗುತ್ತದೆ. ಘಟ್ಟಿಗ ಚೇತನ ಅರಗಿಸಿಕೊಳ್ಳಬಯಸುತ್ತದೆ ; ಕೂಡಿಸಿ ಆಡಿಸಬಯಸುತ್ತದೆ. ಕವಿಯಾದವನು ಬದುಕನ್ನು ಸರಳಗೊಳಿಸದೆ, ಅದನ್ನು ಅದರ ಸಂಕೀರ್ಣತೆಯಲ್ಲಿ ಕಂಡು ಅರ್ಥಮಾಡಿಕೊಳ್ಳುವ, ಹಾಗೂ ಅರ್ಥಪೂರ್ಣವಾಗಿ ಕಾಣಿಸುವ ಸಾಹಸ ಮಾಡಿದಾಗ ಅವನ ಕೃತಿಸಮೂಹ ಅರ್ಥಯುಕ್ತವಾಗಿ ಸತ್ತ್ವಸಂಪನ್ನವಾಗಿ ಕಾಣುತ್ತವೆ.

ಹೀಗೆಯೆ, ಈಗಿಲ್ಲಿ ನಾವೆಲ್ಲ ಕೇಳಿದ ಕುವೆಂಪು ಅವರ 'ಕನ್ನಡ ಡಿಂಡಿಮ' ಕವನ ತಂದುಕೊಟ್ಟ ಭಾವವೆಂತಹದೆಂಬುದನ್ನೂ ಹೇಳಬಯಸುತ್ತೇನೆ. ಈ ಕವನ

ಕರ್ನಾಟಕ ಹೃದಯಶಿವನಿಗೆ ಸಂಬಂಧಿಸಿದಂತಿದ್ದರೂ ಸರ್ವಹೃದಯಶಿವನಿಗೂ ಸಂಬಂಧಿಸಿದೆ. ಅಂತೆಯೇ ಈ ಕವಿತೆ ಕವಿಕಾವ್ಯ ವಿಚಾರವಾಗಿಯೂ ಬೆಳಕು ಚೆಲ್ಲಬಲ್ಲದು. ಕಾವ್ಯವನ್ನು ಮೂರುನಾಲ್ಕು ಮೆಟ್ಟಿಲಲ್ಲಿಟ್ಟು ನೋಡಬೇಕು. ಏನಿಲ್ಲದಿದ್ದರೂ ಕಾವ್ಯ ಬಡಿದೆಬ್ಬಿಸುವ ಶಕ್ತಿಯನ್ನು – ಸತ್ತಂತೆ ಇರುವ ಜೀವರನ್ನು ಬಡಿದೆಬ್ಬಿಸುವ ಶಕ್ತಿಯನ್ನು ಪಡೆದಿರಬೇಕು. ಮಲಗಿದ್ದವರನ್ನು ಕೂಗಿ ಎಬ್ಬಿಸಬಹುದು, ಆದರೆ ಮಲಗಿದಂತೆ ಇರುವವರನ್ನು – ಸತ್ತಂತೆ ಇರುವವರನ್ನು ಬಡಿದೆಬ್ಬಿಸುವುದು ಸುಲಭವಲ್ಲ. ಯಾರನ್ನೇ ಆಗಲಿ ಹಠಾತ್ತನೆ ಸಾಮೂಹಿಕವಾಗಿ ಎಬ್ಬಿಸಿದಾಗ ಅನಿರೀಕ್ಷಿತವಾದದ್ದೆಲ್ಲ ಆಗಿಹೋಗುತ್ತೆ. ಮೊದಲು ಎದ್ದವರು ಗೊಣಗುತ್ತ, ಕಣ್ಣುಜ್ಜುತ್ತ, ಮುಗ್ಗರಿಸುತ್ತ ಒಬ್ಬೊಬ್ಬರನ್ನೂ ಮತ್ತೊಬ್ಬೊಬ್ಬರು ನೂಕುತ್ತ ನಡೆಯುತ್ತಾರೆ. ಹಾಗೆ ನಡೆಯುವಾಗ ಯಾರು ಯಾರ ಕಾಲನ್ನು ತುಳಿಯುತ್ತಾರೋ ? ಯಾರು ಇನ್ನೂ ಮಲಗಿರುವ ಮತ್ತಾರ ಮೈಕೈತಲೆಗಳನ್ನು ಮೆಟ್ಟುತ್ತಾರೊ ತಿಳಿಯದು. ಬಡಿದೆಬ್ಬಿಸುವ ಕವಿತೆ ತಾನು ಎಬ್ಬಿಸಿದವರ ಅಂಥ ವಿಪರೀತ ವರ್ತನವನ್ನು ಸಂಯಮಿಸುವ ಶಕ್ತಿಯನ್ನೂ ಪಡೆದುಕೊಂಡಿರಬೇಕು. ಕ್ರಾಂತಿಕವಿತೆಗೆ ಅದು ಅಗತ್ಯವೆನ್ನಿಸದಿರಬಹುದು. ಆದರೂ, ಅದು ತನ್ನ ಕ್ರಾಂತಿಫಲವಾದರೂ ವ್ಯರ್ಥವಾಗದಂತೆ ನೋಡಿಕೊಳ್ಳಬೇಕಾದ್ದರಿಂದ, ತನ್ನ ಗೀತವನ್ನು 'ಸಹನಾವವತು' ಮಂತ್ರವನ್ನಾಗಿ ಮಾಡಿಕೊಳ್ಳಬೇಕಾಗುತ್ತದೆ. ಎದ್ದವರು ತಾನೆ ಕಚ್ಚಾಡುವುದು ? ಮಲಗಿದ್ದವರೆಲ್ಲ ನಿಷೇಧಾತ್ಮಕ ಸೌಮ್ಯಸ್ಥಿತಿಯಲ್ಲಿರುತ್ತಾರೆ. ಎದ್ದವರ ಕಚ್ಚಾಟವನ್ನರಗಿಸಿಕೊಳ್ಳಲಾಗದವರು ಮಲಗಿದ್ದವರೇ ಒಳ್ಳೆಯವರಾಗಿದ್ದರೆಂಬ ಹತಾಶೆಗೆ ಬರಲೂ ಬಹುದು. ಕಚ್ಚಾಟವನ್ನು ಹೊರಗಿನಿಂದ ದಮನಮಾಡಿದರೂ ಅದು ಒಳ ಬೆಂಕಿಯಾಗಿ – ಹೊಟ್ಟೆಯ ಕಿಚ್ಚಾಗಿ – ಉರಿಯುತ್ತಲೆ ಇರುತ್ತದೆ. ಆ ಕಿಚ್ಚಿಗೆ ಅಗ್ನಿಶಾಮಕವೆಲ್ಲಿ ? (–ಹೊಟ್ಟೆಯ ಕಿಚ್ಚು ಎನ್ನುವ ಕನ್ನಡ ಪದವಾದರೂ ಸಂಸ್ಕೃತದ ಮಾತ್ಸರ್ಯ, ಅಸೂಯೆ, ಈರ್ಷೆ ಇತ್ಯಾದಿ ಪದಗಳಿಗಿಂತಲೂ ತುಂಬಾ ಪರಿಣಾಮಕಾರಿಯಾಗಿದೆ.) ಈ ಹೊಟ್ಟೆಯುರಿ, ಹೊಟ್ಟೆಯ ಕಿಚ್ಚು ನಂದುವುದು ದುಸ್ಸಾಧ್ಯ. ನಂದಿಸುವ ಆ ನೀರೂ ದುರ್ಲಭ. ಅದಕ್ಕೆ ನಮ್ಮ ಕಣ್ಣೀರೆ ಬೇಕು. ನಮ್ಮ ಕಣ್ಣೀರೂ ಆಗದು ! ನಮ್ಮ ಅಂತಶ್ಶಿವನ ಕಣ್ಣೀರು ಅಗತ್ಯ ; ಹಣೆಗಣ್ಣಿನ ಆ ಕಣ್ಣಿನ ನೀರೂ ಅಗತ್ಯ. ಆದ್ದರಿಂದ ನಮ್ಮ ನಮ್ಮ ಒಳಗಿರುವ ಆ ಶಿವ ಕಣ್ಣೀರಿಡಬೇಕೆ ? ಅವನ ಜಡೆಯ ಗಂಗೆಯ ತಂಬನಿಯೂ ವ್ಯರ್ಥವೆ ? ಕಂಬನಿಗಿಂತ ತಂಬನಿಯಿಲ್ಲ ; ಅದು ಚಿತ್ತಶೋಧಕ. ಚಿತ್ತ ವಿಷಾನಲಶಾಮಕ. ಅದರಿಂದಾಗಿ ವ್ಯಕ್ತಿವ್ಯಕ್ತಿಗಳ ನಡುವಣ ಎದೆಗುದಿ ನಂದಿ ಅವರು ಸೌಹಾರ್ದ



ಹೊಂದುವ ಸಾಧ್ಯತೆ ಹೆಚ್ಚುತ್ತದೆ. ಆಗ ಅವರು ತಾವಾಗಿಯೆ ಒಟ್ಟಿಗೆ ಒಲಿದು ಬಾಳುತ್ತಾರೆ. ದೊಡ್ಡಕವಿತೆ ಈ ಗುರಿಯನ್ನು ನಿಚ್ಚಳವಾಗಿ ಕಾಣಿಸಬೇಕು. ಬಡಿದೆಬ್ಬಸುವುದಷ್ಟೆ ತನ್ನ ಕೆಲಸವೆಂದು ತಿಳಿದುಕೊಂಡರೆ ಅದು ದೊಡ್ಡದನ್ನು ಸಾಧಿಸಿದಂತಾಗುವುದಿಲ್ಲ. ಬಹುತೇಕ ಕವಿತೆಗಳು ಮೊದಲ ಮೆಟ್ಟಿಲಲ್ಲೆ ನಿಲ್ಲುತ್ತವೆ. ಕೆಲವು ಆ ಮೆಟ್ಟಿಲಿಗೆ ಕಾಲಿಡದೆಯೆ ಮೇಲಿನ ಮೆಟ್ಟಿಲಿಗೆ ಕಾಲಿಡುವುದೂ ಉಂಟು. ದೊಡ್ಡಕವಿ ತನ್ನ ಕೃತಿಸಮಷ್ಟಿಯಿಂದ ಸಾಮೂಹಿಕವಾಗಿ ಹಾಗೂ ಪ್ರತ್ಯೇಕಪ್ರತ್ಯೇಕವಾಗಿ ಈ ನಾಲ್ಕೂ ಕಾರ್ಯವನ್ನು ನೆರವೇರಿಸಬಲ್ಲ. ಕುವೆಂಪು ಅಂಥ ಕೆಲಸ ಸಾಧಿಸಿದ್ದಾರೆ ಎಂದೇ ತೋರುತ್ತದೆ. ಕೋಗಿಲೆ ಮತ್ತು ಸೋವಿಯತ್ ರಷ್ಯಾ, ನಿರಂಕುಶಮತಿಗಳಾಗಿ, ವಿಚಾರಕ್ರಾಂತಿಗೆ ಆಹ್ವಾನ, ಹಾಗೂ ಅಂಥ ಕವನ – ಕೃತಿಗಳಲ್ಲಿ ಮೊದಲ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸುತ್ತಾರೆ. ಆದರೆ ಅವರ ಪ್ರಧಾನ ಕೃತಿಗಳು ಈ ನಾಲ್ಕೂ ಕಾರ್ಯವನ್ನು ನೆರವೇರಿಸುವತ್ತ ಸಾಗುತ್ತವೆ.

ಹಾಗೆಯೆ ಅವರ ಕೃತಿಗಳು ವಿಷಮಗುಣಗಳನ್ನು ಸುಷಮಗೊಳಿಸುವ ಸಾಧನೆಯನ್ನು ನಡೆಸಿವೆ. ಮಾನವ ವರ್ತನವನ್ನು ಅದರ ಸಂಕೀರ್ಣತೆಯಲ್ಲಿ ಕಂಡು ಹಾಗೆಯೆ ಕಾಣಿಸುವ ಹಾಗೂ, ವಿಷಮಗಳನ್ನೂ ವಿಕಾರಗಳನ್ನೂ ಸುಷಮವಾಗಿ ಪ್ರಕಾರವಾಗಿ ಮೂಡಿಸುವ ಕಾಣ್ಕೆಯನ್ನು ಅವರ ಯಶಸ್ವೀ ಕೃತಿಗಳು ಗರ್ಭೀಕರಿಸಿಕೊಂಡಿವೆ. ವಿರುದ್ಧಾಂಶಗಳನ್ನು ಸಂಯೋಗಗೊಳಿಸುವುದು ಕುವೆಂಪು ಅವರಿಗೆ ಮೂಡಿಬಂದ ಗುಣವಾಗಿದೆಯೆನಿಸುತ್ತದೆ. ಅದರಿಂದಲೆ ಅವರು ರೂಪಿಸುವ ಪದಪ್ರತಿಮೆಗಳಲ್ಲೂ ಈ ಪ್ರಥಮ ಸುಷಮನ ಕಾರ್ಯವು ಕಂಡುಬರುತ್ತದೆ. 'ಮೃತ್ಯುಮಾಧುರೀ', 'ಪ್ರೇಮರಾಹು', 'ಕೃಪಾರಾಹುಬಾಹು', 'ಸುಖನಖಕೃಪೆ', 'ದೇವಕೇತು', 'ಕೃಪಾತ್ರಿಶೂಲ', 'ಪಿನಾಕಪಾಣಿ', 'ದಯಾತ್ರಿಶೂಲ', 'ದೇವಕಿರಾತ', 'ನಮ್ರಗರ್ವ', 'ಅಮೃತದ ಮರಣ' ಇತ್ಯಾದಿ – ಹಲವಾರು ಪದಪ್ರತಿಮೆಗಳ ಶಿಲ್ಪದಲ್ಲೂ ಈ ವಿಷಮತಾಸಾಂಗತ್ಯದ ದಾಂಪತ್ಯ ಭಾವವನ್ನು ಕಾಣಬಹುದು. ಇದರಿಂದಾಗಿಯೆ ಕುವೆಂಪು ತೀರಾ ವಿಚಾರವಾದಿಗಳಾಗಿರುವಂತೆಯೇ ತೀರಾ ಶ್ರದ್ಧಾಲುವಾಗಿದ್ದಾರೆ. ವಾಸ್ತವ ಜಗತ್ತಿನ ವ್ಯಾಪಾರಗಳನ್ನು ಅಲ್ಪಾನಲ್ಪವೆಂಬ ಮಡಿವಂತಿಕೆಯಿಲ್ಲದೆ ಕಾದಂಬರಿಗಳಲ್ಲಿ ಚಿರಂಜೀವಗೊಳಿಸಲೆಳಸಿದಂತೆಯೇ, ಪೌರಾಣಿಕ ಕಲ್ಪನೆಯ ಮಹದ್ವ್ಯಾಪಾರಗಳ ಅಮೃತಾಂಶವನ್ನು ಬಿಡಿಸಿ ಮಡುಗಟ್ಟಿಸುವ ಸನಾತನ ತೇಜಸ್ಸೂ ಇದೆ. ಒಂದು ರೀತಿಯಲ್ಲಿ ಇವೆಲ್ಲ ಗಣೇಶಸತ್ತ್ವವನ್ನೇ ದ್ಯೋತಿಸುತ್ತವೆ.

ಶ್ರೀ ಕುವೆಂಪು ಸಾಹಿತ್ಯ ತುಂಬಾ ಹರಹಿನಿಂದ ಕೂಡಿದೆ. ಶಿಶುಮನಸ್ಸಿನಿಂದ ಋಷಿಮನಸ್ಸಿನ ತನಕ, ಪಶುಸ್ವಭಾವದಿಂದ ಹಿಡಿದು ಹಸುಸ್ವಭಾವದ ತನಕ, ತೃಷಿತ ಕಾಮುವಿಕೃತರಿಂದ ಹಿಡಿದು ದೀಪ್ತಪ್ರೇಮಸುಕೃತರ ತನಕ, ಮುಗ್ಧಶ್ರದ್ಧಾಭಕ್ತರಿಂದಹಿಡಿದು ವಿದಗ್ಧ ಚಿತ್ತರ ತನಕ – ಹಲವಂದದ ಮನಸ್ಸಿನ ಚಿತ್ತವನ್ನು ನೀಡಿದ್ದಾರೆ. ಶುದ್ಧ ಶ್ರದ್ಧಾಭಕ್ತಿಯಂತೆಯೆ ಕಟುವಿಚಾರವಾದವೂ, ಆಧ್ಯಾತ್ಮಿಕ ದೃಷ್ಟಿಯಂತೆಯೆ ವೈಜ್ಞಾನಿಕ ದೃಷ್ಟಿಯೂ, ಹಳೆಯ ಮೂಢನಂಬಿಕೆಗಳ ಖಂಡನದಂತೆಯೆ ಉದ್ಧಾರಕವಾದ ನಂಬಿಕೆಗಳ ಮಂಡನವೂ, ಪ್ರತಿಕೃತ ವಿಧಾನದ ಪರಿಣತಿಯಂತೆಯೆ ಪ್ರತಿಮಾವಿಧಾನದ ಸಿದ್ಧಿಯೂ ತಾತ್ತ್ವಿಕವಾಗಿ ನೆಲೆಗೊಂಡಿವೆ. ಹಾಗೆಯೆ ಶಿಶುಛಂದದಿಂದ ಹಿಡಿದು ಮಹಾ ಛಂದಸ್ಸಿನವರೆಗೆ ಶೈಲಿಯ – ಛಂದಸ್ಸಿನ ಹರಹಿದೆ. ಇದರಿಂದಾಗಿ, ಇವರ ಕೃತಿಗಳ ಸಮಗ್ರ ವಿಮರ್ಶನವಾಗಲಿ, ಏಕಾಖಂಡಗ್ರಹಣವಾಗಲಿ ಯಾರೊಬ್ಬ ವಿಮರ್ಶಕನಿಗಾದರೂ, ಸಾಹಸೋದ್ಯಮವಾದೀತು. ಆಂಶಿಕವಾಗಿ ಕುವೆಂಪು ಕಾವ್ಯಗಳನ್ನು ಅತ್ಯಧಿಕ ಮಮತೆಯಿಂದ ಮೆಚ್ಚಿ ಒಪ್ಪುವ, ಇಲ್ಲವೇ ತಿರಸ್ಕರಿಸುವ – ಖಂಡತುಂಡಾಗಿಸುವ ಕೆಲಸವೇನೊ ನಡೆದಿದೆ. ಅವರ ಕಾದಂಬರಿಗಳನ್ನು ಮೆಚ್ಚಿಕೊಂಡು ಅವರ ಕವಿತೆಗಳನ್ನಾಗಲಿ, ಶ್ರೀ ರಾಮಾಯಣದರ್ಶನವನ್ನಾಗಲಿ ನಿರ್ಲಕ್ಷಿಸುವ – ಬೀಳುಗಳೆವ ಕೆಲಸ ಕೂಡ ಯಶಸ್ವಿಯಾಗಿ ನಡೆದಿದೆ. ಅವರ ಕೃತಿಸಮಷ್ಟಿಯ ಹಿಂದೆ ಕೆಲಸ ಮಾಡಿರುವುದು ಒಂದೇ ಸೃಜನಶೀಲ ವ್ಯಕ್ತಿತ್ವವೆಂಬುದನ್ನು ಮರೆತುಬಿಡಬಾರದು. ಹಾಗೆಯೆ ಇವರ ಕೃತಿಗಳನ್ನೆಲ್ಲ ತಲೆಯ ಮೇಲಿಟ್ಟುಕೊಂಡು – ಅಲ್ಲಿರುವುದೆಲ್ಲ ಮೌಲಿಕವಾದದ್ದೆಂದು ಆರಾಧನಾ ಭಾವ ತಳೆಯುವುದಾಗಲಿ, ಅವುಗಳೇ ನಿರರ್ಥ – ನೀರಸ – ಅವಿಚಾರಿತವೆಂದು ಮೋಜುಗಾರ ಮೋಜಿಣಿದಾರಿಕೆ ಮಾಡಹೋಗುವುದಾಗಲಿ ಸಾಮಾನ್ಯವಾಗಿರುವ ಈ ದಿನಗಳಲ್ಲಿ ತೂಕದ ನೆಲೆಬೆಲೆ ಕಾಣುವ ಮಾತನ್ನಾಡುವುದು ಕಷ್ಟದ ವಿಚಾರವಾಗುತ್ತದೆ.

ಕುವೆಂಪು ಹೆಚ್ಚು ಮಾತುಗಾರಿಕೆಯ ಹಲವಾರು ಕವಿತೆಗಳನ್ನು ಬರೆದಿದ್ದಾರೆ; ಪರಿಪೂರ್ಣವಾದ ಭಾವಗೀತೆಗಳಿರುವುದಕ್ಕಿಂತ ಕಡಿಮೆಯಲ್ಲದ ಸಂಖ್ಯೆಯಲ್ಲಿ ಅಂಥ ಕವನಗಳಿವೆ – ಎನ್ನುವ ಅರಿವು ನನಗೂ ಉಂಟು. ಶ್ರೀರಾಮಾಯಣದರ್ಶನಂ ಕಾವ್ಯದಲ್ಲಿ ಅಸಾಧಾರಣ ಚಿತ್ರಣಗಳಿರುವಂತೆಯೆ ತೀರಾ ಸಾಧಾರಣ ಚಿತ್ರಗಳೂ ಪಂಕ್ತಿಗಳೂ ಮಾತುಗಾರಿಕೆಯೂ ಮುಚ್ಚುಮರೆಮಾಡದೆ ಕಾಣುತ್ತಿವೆ, ಎಂಬ ತಿಳಿವೂ ಉಂಟು. ಶ್ರೀವಾಲ್ಮೀಕಿರಾಮಾಯಣಕ್ಕಿಂತ ಭಿನ್ನಸತ್ತ್ವವನ್ನು ಅದು ಕಾಣಿಸುತ್ತಿರುವಂತೆಯೇ



ಕೆಲವೊಮ್ಮೆ ಅಲ್ಲಿನ ಸುಂದರ ಚಿತ್ರಗಳಲ್ಲಿ ನೀರಸವಾಗಿರುವುದೂ ಉಂಟೆಂಬ, ಅಲ್ಲಿನ ಪ್ರಾಕೃತಿಕ ರಮಣೀಯಕತೆ ಕೆಲವೊಮ್ಮೆ ಇಲ್ಲಿ ಸಂಸ್ಕೃತವಾಗುವ ಹಾದಿಯಲ್ಲಿ ಢಾಳನ್ನು ಕಳೆದುಕೊಳ್ಳುವುದೂ ಉಂಟೆಂಬ ಎಚ್ಚರವುಂಟು. ವಾಕ್ಸಂಯಮಸೌಂದರ್ಯವನ್ನು ಕಾಣಿಸಿರುವಂತೆಯೆ ಮಾತುಗಾರಿಕೆಯ ದುಂದುಗಾರಿಕೆಯ ಬೆಡಗನ್ನೂ ಮೆರೆದಿದೆ ಎಂಬ ಮನವರಿಕೆಯೂ ಉಂಟು. ಹೀಗಿದ್ದರೂ ಕುವೆಂಪು ಕೃತಿಗಳಲ್ಲೆಲ್ಲ ಅವರದೇ ಆದ ವಂಶವಾಹಿ ರಕ್ತಸಂಚಾರವಿದೆಯೆಂಬ ಖಚಿತ ಇತ್ಯರ್ಥವೂ ಉಂಟು. ಅವರದೇ ಆದ ಪಂಕ್ತಿಗಳು ಪದಪ್ರತಿಮೆಗಳು ಛಂದೋವಿಲಾಸಗಳು ಬೃಹತ್‌ಕಲ್ಪನೆಗಳು ಸೂಕ್ಷ್ಮಮನೋದರ್ಶನಗಳು ತುಂಬಿರುವುದನ್ನು ಯಾರೂ ಕಾಣಬಹುದು. ಮಾತುಗಾರಿಕೆಯಿಂದ ಧ್ವನಿಸೌಂದರ್ಯವನ್ನು ಕಳಂಕಗೊಳಿಸುವ ಭಾಷೆಯೆ ನಿರಾಯಾಸವಾಗಿ ಮಂತ್ರವತ್ತಾಗಿ ಸಂಯಮಪೂರ್ಣ ಧ್ವನಿಯಾಗಿ ಪರಿಪಕ್ವಗೊಳ್ಳುವುದನ್ನೂ ಕಾಣುತ್ತೇವೆ. ಆದ್ದರಿಂದ ವಿಮರ್ಶೆಯ ಮೌಲ್ಯಮಾಪನ ಎಚ್ಚರತಪ್ಪದೆ ಬೆಲೆಗಟ್ಟುವುದು ಕಷ್ಟಸಾಧ್ಯ. ಆ ಸಾಧನೆಯಾದರೂ ಅಗತ್ಯವಾಗಿದೆ. ಅದರ ಅಭಾವದಲ್ಲಿ ಅತಿರೇಕಗಳಷ್ಟೆ ರಾಜ್ಯಭಾರ ಮಾಡುತ್ತವೆ. ದೊಡ್ಡ ಕೃತಿಕಾರನ ಕೃತಿಗಳನ್ನು ಅವಿಚಾರಿತವಾಗಿ ಹೊಗಳುವುದರಿಂದ ಅವುಗಳಿಗೆ ಲಾಭವೇನೂ ಆಗದು. ಅಂತೆಯೆ, ಅವುಗಳನ್ನು ವಿಚಿಕಿತ್ಸಖಂಡನಕ್ಕೆ – ಛಿದ್ರಣಕ್ಕೆ ಈಡುಮಾಡುವ ಬುದ್ಧಿಮತ್ತತೆ ವಿಚಾರಿತವೆಂಬಂತೆ ಕಂಡರೂ ಕಾವ್ಯಾಭ್ಯಾಸುಲೋಕಕ್ಕೆ ಮಾತ್ರ ತುಂಬಲಾರದ ನಷ್ಟವನ್ನೆ ಮಾಡುತ್ತದೆ.

ಭಾವಗೀತಕವಿಯಾಗಿ ಕುವೆಂಪು ಪ್ರಧಾನತಃ ಪ್ರಕೃತಿಕವಿಯೆಂದಷ್ಟೆ ಪ್ರತೀತವಾಗಿದ್ದರೂ ಅವರು ಅಷ್ಟೆ ಕ್ರಾಂತಿಗೀತಗಳನ್ನೂ ಪ್ರೇಮಗೀತಗಳನ್ನೂ ಮೇಲಾಗಿ ಆಧ್ಯಾತ್ಮಿಕ ಗೀತಗಳನ್ನೂ ಸಾಮಯಿಕ – ಸಕಾಲಿಕವೆನ್ನಬಹುದಾದ ನಾಡುನುಡಿ ಪ್ರೇಮದ ಗೀತಗಳನ್ನೂ ನೀಡಿದ್ದಾರೆ. ಪ್ರಕೃತಿಗೀತಗಳು, ಕವಿಯ ಸೌಂದರ್ಯತೃಷೆಯನ್ನೂ ತನ್ಮಯತೆಯನ್ನೂ ರಸಾವೇಶಪರತೆಯನ್ನೂ ಚಿತ್ರಸುವಂತೆಯೆ, ತನಗಾದ ಅನುಭವ ಲೋಕಜನಕ್ಕೆಲ್ಲ ಆಗಬಾರದೇಕೆ ಎಂಬ ಕಾಳಜಿಯನ್ನೂ – ಅನುಭವ ಚಿತ್ರಣದ ನಡುವೆ, ಅದೆಷ್ಟೋ ಆಗಂತುಕ ಅನಗತ್ಯ ಭಾವವೆನಿಸಿದರೂ, ಅದರಿಂದಾಗಿ ಕವನದ ಸಾಂದ್ರಪರಿಣಾಮ ದುರ್ಬಲವಾಗಿ ಕೇಂದ್ರಪಲ್ಲಟವಾಗುತ್ತದೆನಿಸಿದರೂ – ಚಿತ್ರಿಸುತ್ತವೆ. ಪ್ರಕೃತಿ ಸೌಂದರ್ಯಾನುಭವ ಮತದೇವಾಲಯಾದಿಗಳ ಅನಗತ್ಯತೆಯನ್ನು ಸಾರುತ್ತದೆ. ಆದರೆ ಎಲ್ಲೂ ಶಿವನನ್ನು ಅಲಕ್ಷಿಸಿ ಸೌಂದರ್ಯವನ್ನೆ ಪೂಜಿಸುವ ಯತ್ನವಿಲ್ಲ. ಹಾಗೆಯೆ

ಪ್ರಕೃತಿಸೌಂದರ್ಯಪಲಾಯನಕಾರಕವಾಗಿ, ಭವವಿಮುಖವನ್ನಾಗಿ ಮಾಡುವ ಆಸವವಾಗುವುದಿಲ್ಲ. ಅದು ಬದುಕಿನಂತೆ, ಭೀರುವಿಗೆ ಯಮಭಯಂಕರವೂ ಧೀರನಿಗೆ ಕಲಾ ಶಂಕರವೂ ಆಗಿ ತೋರುತ್ತದೆ. ಕವಿಗೆ ಪ್ರಕೃತಿ ಅನಾದಿಕವಿಯನ್ನು ತೋರಿಸುವ ಸುಂದರ ಕಲಾಸೃಷ್ಟಿಯಾಗುತ್ತದೆ. ಹೀಗೆಯೆ ಭಕ್ತಿಗೀತಗಳಲ್ಲಿ ಶ್ರದ್ಧಾಭಕ್ತಿ ಮಾಗುತ್ತ ಆನುಭಾವಿಕ – ಆಧ್ಯಾತ್ಮಿಕವಾಗುವ ಹಂತಗಳನ್ನೆಲ್ಲ ಕಾಣುತ್ತೇವೆ. ಅಲ್ಲಿ ಪ್ರಕೃತಿಗೀತಗಳಿಗೂ ಅನುಭಾವಗೀತಗಳಿಗೂ ಸೀಮಾರೇಖೆ ಕಾಣುವುದಿಲ್ಲ. ಬೃಂದಾವನಕ್ಕೆ ಬೆಣ್ಣೆಯನ್ನ ಮಾರುತ್ತಹೋಗಿ ಗೋವಿಂದನನ್ನು ಕೊಳ್ಳುವ ಗೋಪೀ ಮುಗ್ಧಸ್ನಿಗ್ಧಭಕ್ತಿಯಂತೆಯೆ, 'ನಾನಳಿವ ಹಾದಿಯದೆ ನೀನಿಳಿದು ಬಹು ಪಥಂ' ಎಂಬ ಪರಿಣತಭಕ್ತಿಯೂ ಆ ಕವನಗಳಲ್ಲಿ ಮನಗೊಳ್ಳುತ್ತದೆ. 'ಮರೆವು ನೀನೆ ಮೇಣರಿವು ನೀನೆ.. ರೋಗಶಕ್ತಿ ನೀನೌಷಧಿಯ ಶಕ್ತಿ ; ಕೊಲುವೆ ಕಾವೆಯೋವಿ' ಎಂಬ ಆಧ್ಯಾತ್ಮಿಕ ಶಮತೆಯೂ, 'ನನ್ನ ನ್ಯೂನತೆಯೆಲ್ಲ ನಿನ್ನ ಪೂರ್ಣತೆಗಾಗಿ ನೋಯಲಿ ಸದಾ ; ನನ್ನ ನಶ್ವರವೆಲ್ಲ ನಿನ್ನ ನಿತ್ಯತೆಗಾಗಿ ಸಾಯಲಿ ಸದಾ' ಎಂಬ ಧೀರ ಆನುಭಾವಿಕ ಭಕ್ತಿಯ ಅಪೂರ್ವತೆಯೂ ಆ ಕವನಗಳಲ್ಲೆಲ್ಲ ಶುಚಿಸ್ಮಿತವನ್ನು ಬೀರುತ್ತವೆ. ತುಳಿವ ಗೋವಿಂದನ ಚರಣಕ್ಕೆ ತನ್ನ ಕಾಳೀಯಮನವನ್ನು ಒಪ್ಪಿಸಿಕೊಂಡು ವಿಷವಮನದ ಅಮೃತದ ಮರಣವನ್ನು ಪ್ರಾರ್ಥಿಸುವ ಶಕ್ತಿಯನ್ನೂ, ದುಃಖಹಿರಣ್ಯನನ್ನು ಸುಖನಖಕೃಪೆಯಿಂದ ಇರಿಯುವ ನರಸಿಂಹನ ಅಪಾರ ದಯವನ್ನು ಕಾಣುವ ಶಕ್ತಿಯನ್ನೂ ತೋರುವ ಇವರ ಈ ಕವನಗಳು ಎಂದೂ ದುರ್ಬಲಮನಸ್ಸಿನ ಪ್ರತೀಕವಲ್ಲ. ಸೃಷ್ಟಿಯಲ್ಲೆಲ್ಲವೂ ಭಗವಂತನ ಪವಾಡವನ್ನೆ ಮೆರೆಸುತ್ತವೆ, ಎಂಬ ಕವಿಗೆ, 'ಒಂದು ಹಲ್ಲಿಯ ಕಣ್ಣು ಕಂಬವನೊಡೆದು ಮೂಡಿಬರುವ ನೃಸಿಂಹನಿಗೇನು ಕಡಿಮೆಯ ಪವಾಡವಲ್ಲ !' ಎಂಬುದಾಗಿ ಅನುಭವಕ್ಕೂ ಬರುತ್ತದೆ. ಹೀಗಾಗಿ ಕುವೆಂಪು ಅವರ ಭಕ್ತಿಗೀತ–ಆಧ್ಯಾತ್ಮಿಕ ಗೀತ ಅನ್ಯಾನುರಣನವಾಗಿರದೆ ಸ್ವಾನುಭವಕರಣವೂ ಕಿರಣವೂ ಆಗಿವೆ.

ಪ್ರೇಮಗೀತಗಳು ಕೂಡ ಸಾರದಲ್ಲಿ ಹೀಗಿಯೆ ಆಗಿವೆ. ಪ್ರೇಮಗೀತಗಳು ಸ್ಥೂಲವಾಗಿ ಎರಡು ಬಗೆ – ಒಂದು ಭಗವಂತನನ್ನು ಪ್ರೇಮಿಯಂತೆ ಅನುರಾಗಿಸುವ ಚಿತ್ರಣ ನೀಡುವ, ಮತ್ತೊಂದು ದಾಂಪತ್ಯಾನುರಕ್ತಿಯನ್ನು ಚಿತ್ರಿಸುವ ಗೀತಗಳಾಗಿವೆ, ಎರಡನೆಯ, ದಾಂಪತ್ಯಾನುರಾಗದ ಚಿತ್ರಣದಲ್ಲಿ ಕೆಲವೊಂದು ವಿಲಕ್ಷಣ ವಿಶೇಷತೆಯಿದೆ. ಕವಿಗೆ ಮೊದಲು ದಾಂಪತ್ಯಪ್ರೇಮಚಿತ್ರಣ ವಿಷಯವಾಗಿ ಸಂಕೋಚವಿತ್ತೊ ಎನ್ನಿಸುವಂತಹ ನಿರ್ಭಿಡೆಯ ಪ್ರಣಯ ಕವನಗಳೂ ಆಮೇಲೆ ಪ್ರಕಟವಾಗಿವೆ. ಜಘನ್ಯವನ್ನೂ ರಸಧನ್ಯವಾಗಿಸುವ



ವಿಶೇಷತೆಯನ್ನು ತೋರುವ ಈ ಕವಿತೆಗಳು ತುಂಬಾ ವಿಲಕ್ಷಣ ಅನನ್ಯಸತ್ತ್ವದಿಂದ ಕೂಡಿವೆ. ಶಿಶುವಿರಹಗೀತೆಗಳಲ್ಲಿ ಕೆಲವಂತೂ ವಾತ್ಸಲ್ಯವಿರಹದ ಶುದ್ಧೋತ್ಕಟತೆಯನ್ನು ಎದೆಮಿಡಿಸುತ್ತವೆ.

ಇಲ್ಲೆಲ್ಲ ಶ್ರದ್ಧಾಲುವ್ಯಕ್ತಿಯಾಗಿ ಕಾಣುವ ಕವಿ ಕ್ರಾಂತಿಗೀತಗಳಲ್ಲಿ ಬಂಡಾಯಗಾರನಾಗಿ ವ್ಯಗ್ರವಾಗುವುದೂ ಉಂಟು. 'ನೂರು ದೇವತೆಗಳನೆಲ್ಲ ನೂಕಾಚೆ ದೂರ ಭಾರತಾಂಬೆಯೆ ಜನನಿ ನಮಗಿಂದು ಬಾರ !' 'ಮತದ ಮತಿಹೀನತೆಯು ಸಾಕೆಮಗೆ ; ಬೇಕು ಸನ್ಮತಿಯ ನಾಗರಿಕತೆಯು ; ನರನ ಸನ್ಮತಿಗಿಂತ ಬೇರೆಯ ಜಗದ್ಗುರುವೆ ?' 'ಗುಡಿ ಚರ್ಚು ಮಸಜೀದಿಗಳ ಬಿಟ್ಟು ಹೊರಬನ್ನಿ... ಸಿಲುಕದಿರಿ ಮತವೆಂಬ ಮೋಹದಜ್ಞಾನಕೆ... ಆ ಮತದ ಈ ಮತದ ಹಳೆಮತದ ಸಹವಾಸ ಸಾಕಿನ್ನು ಸೇರಿರೈ ಮನುಜಮತಕೆ, ಓ ಬನ್ನಿ ಸೋದರರೆ ವಿಶ್ವಪಥಕೆ !' .... ಹೀಗೆಲ್ಲ ಕಹಳೆಯೂದುವ ಕವಿಯನ್ನು ಕೇವಲ ವಿಲಯಮನೋಧರ್ಮದ ಬಂಡಾಯಗಾರನೆನ್ನಬಹುದೆ ? ಇಲ್ಲಿ ನಾಸ್ತಿಕನನ್ನಲ್ಲ ಕಾಣುವುದು ; ಮಾನವತಾವಾದಿಯನ್ನು; ವಿಚಾರವಾದಿಯಾದ ವಿಶ್ವಧರ್ಮಾನುರಕ್ತನನ್ನು, ಮತಮೌಢ್ಯಗಳನ್ನೆ ಧರ್ಮವೆಂದು ಭಾವಿಸಿರುವ, ಇಂದಿಗೆ ಬಾರದ ಹಳೆಯ ಸಾಮಾಜಿಕಾಚರಣೆಯನ್ನು ಶಾಶ್ವತಗೊಳಿಸಲೆಳಸುವ ಮತವಳರಿಗೆ ಈ ಕವಿ ನಾಸ್ತಿಕನಾಗಿ ತೋರಬಹುದು. ಇಲ್ಲೆಲ್ಲ ಕವಿವಾಣಿಯಲ್ಲಿ ಸ್ವಾಮಿ ವಿವೇಕಾನಂದರ ವಾಣಿಯೂ ಸೇರಿಕೊಂಡಿದೆಯೆಂಬುದನ್ನು ಮರೆಯಬಾರದು.[೧] ಶ್ರೀರಾಮಾಯಣದರ್ಶನದ ಕವಿಯನ್ನು, ಬೆರಳ್ಗೆ ಕೊರಳ್, ಶ್ಮಶಾನ ಕುರುಕ್ಷೇತ್ರ ನಾಟಕದ ಕವಿಯನ್ನು, ಅಗ್ನಿಹಂಸ ಭಕ್ತಿಗೀತಗಳ ಕವಿಯನ್ನು ಅನ್ಯತ್ರ ಭಾವಿಸಿಕೊಂಡು ರಾಗೋದ್ರೇಕವಶವಾಗುವುದು ಕ್ಷೇಮಕರವೇನೂ ಅಲ್ಲ.

ಕುವೆಂಪು ಎಷ್ಟರ ಮಟ್ಟಿಗೆ ಸನಾತನ ಸತ್ತ್ವದಿಂದ ಕೂಡಿದ್ದಾರೆ ಎಂಬುದನ್ನು

---

೧. ಸ್ವಾಮಿ ವಿವೇಕಾನಂದರ ನುಡಿಯ ತುಣುಕನ್ನಿಲ್ಲಿ ಕಾಣಬಹುದು : Caught in .the cndless thread of the net of infinite rites, ceremonies, and customs, which it spread on all sides as external.means for purification of the body and .the mind with a view to keeping society in the iron grasp of these innumerable bonds-the priestly power, thus hopelessly entangled from head to foot, is now asleep in despair! There is no escaping out of it now.Tear the net and the priesthood of the priest is shaken to its foundation!... It is good and appropriate that every caste of high birth and privileged nobiIity should make it its principal duty to raise its own funeral pyre with its own hands.'-'Modern India'. *The Complete Works of Swamy .Vivekananda,* Vol. IV pp. 456-58

ಕಾಣಲು ಅವರ ಪ್ರಧಾನ ಕೃತಿಗಳನ್ನೆ ನೋಡಬೇಕಿಲ್ಲ. ಅವರ ಶ್ರೇಷ್ಠ ಅನುವಾದ ಕವನ 'ದೇವಕೇತು'ವನ್ನು ವಿವೇಚಿಸಿದರೂ ವೇದ್ಯವಾಗುತ್ತದೆ. ಕ್ರಿಶ್ಚಿಯನ್ ಆವರಣದಲ್ಲಿ ಸಾವಯವವಾಗಿ ಮೂಡಿದ ಮೂಲ ಕವಿತೆ The Hound of Heaven ಅನ್ನು ಅದ್ಭುತವಾಗಿ ಭಾರತೀಯ ಆವರಣಕ್ಕೆ ಸನಾತನಾವರಣಕ್ಕೆ ತಂದಿದ್ದಾರೆ. ಕನ್ನಡ ಅನುವಾದದ ಮೂಲಕ. ಅನುವಾದ ಮಾತ್ರವೇ ಆಗಿದ್ದರೆ ದೇವನಾಯಿಯೊ ಸ್ವರ್ಗ ಜಾಯಾಲವೊ ಆಗಬೇಕಿದ್ದ The Hound of Heaven ಕವಿತೆ ದೇವಕೇತುವಾಗಿದೆ. ಅಲ್ಲಿಯ ಧಾರ್ಮಿಕಾವರಣವೆಲ್ಲ ನಮ್ಮದಾಗಿ ಪರಿಭಾಷೆ – ಪ್ರತಿಮೆಗಳೆಲ್ಲ ನಮ್ಮವಾಗಿ ರೂಪಾಂತರಗೊಂಡಿವೆ. ಅಲ್ಲಿಯ ಸ್ವರ್ಗದ ನಾಯಿ ಇಲ್ಲಿ ದೇವಕಿರಾತನ ಸ್ವರ್ಗಶ್ವಾಪದವಾಗಿ, ಸ್ವರ್ಗಶ್ವಾನವಾಗಿ, 'ಸರಮಾ' ಆಗಿ ಭಾರತೀಯವಾಗುತ್ತದೆ. ಇಲ್ಲಿ ಬರುವ ಪಿನಾಕಪಾಣಿ, ಕೃಪಾಣಪಾಣಿ, ಕರುಣಸುದರ್ಶನ, ದಯಾತ್ರಿಶೂಲ, ಕೃಪಾರಾಹು, ಸುಮನೋಕೇತು – ಎಲ್ಲವೂ ನಮ್ಮ ಆನುಭಾವಿಕ ಲೋಕವನ್ನೆ ಸೃಷ್ಟಿಗೊಳಿಸುತ್ತದೆ. ಮೇಲಾಗಿ ಮೂಲಕವಿತೆಯ ಇಂಗ್ಲಿಷ್ ಲಯವನ್ನು ಕನ್ನಡ ಲಯಕ್ಕೆ ಒಗ್ಗಿಸಿಕೊಂಡಿರುವ ರೀತಿಯಂತೂ ಅಸಾಧಾರಣವಾದ ಸಾಧನೆ. ಸರ್ವಾಂಗೀಣವಾಗಿ ಮೂಲ ಕೃತವೆಂಬಂತೆ ಕಾಣುವ ಈ ಕವಿತೆ ಅತಿಶಯ ಛಂದೋಗತಿಯನ್ನೂ ಮೆರೆದಿದೆ. ಕ್ರಿಶ್ಚಿಯನ್ ಧರ್ಮ ನಮ್ಮದಾಗಿ ವಿಸ್ತರಣಗೊಳ್ಳುತ್ತದೆ. ಈ ಕವಿತೆಯಲ್ಲಿ ಕವಿ ನಮ್ಮ ಅನುಭಾವವಲಯದ ವಿಸ್ತರಣ ಮಾಡಿದ್ದಾರೆ ಹಾಗೂ ಭಾಷೆಯ ಲಯವನ್ನು ಶ್ರೀಮಂತಗೊಳಿಸಿದ್ದಾರೆ.[2]

---

2. I fled Him, down the nights and down the days;
        I fled Him. down the arches of the years;
    I flcd Him, down the labyrinthine ways
        Of my Own mind; and in the mist of tears.
    I hid from Him, and under running laughter
        Up vistaed hopes, I sped.
    Adown titanic glooms of chasmed fears,
    ..................................................................
        I pleaded outlaw- wise
    By many a hearted casement, curtained red,
        Trellised with intertwining charities;
    (For, thou I knew His love who followed;
        Yet was I sore adread.
    Lest having Him, 1 must have naught beside);

*-The Hound of Heaven,*
Francis Thompson, ll. 1-6, 16-22



ಆದ್ದರಿಂದ ಕುವೆಂಪು ಕಾವ್ಯವನ್ನು ಕೇವಲ ಅದಾಗಿ, ಇದಾಗಿ ನೋಡುವುದು ತಪ್ಪಾಗುತ್ತದೆ. ಈ ಕವಿಯ ವಾಣಿಯಲ್ಲಿ ಕೇವಲ ವಿಚಾರವಾದಿಯ ಬಂಡಾಯಗಾರನ ಶ್ರದ್ಧಾವಂತನ ಮಾನವತಾವಾದಿಯ ಆದರ್ಶ ಆಶಾವಾದಿಯ ಧ್ವನಿ ಮಾತ್ರವಷ್ಟನ್ನೆ ಪೃಥಕ್‌ಪೃಥಕ್ಕಾಗಿ ಬಿಡಿಸಿಕೊಳ್ಳಬಯಸುವುದು ಸಮಜಸವಾಗದು. ನನ್ನ ದೃಷ್ಟಿಯಲ್ಲಿ ಇಡೀ ಭಾರತೀಯ ಪರಂಪರೆಯೆ ನಮ್ಮ ಯುಗಋತಕ್ಕೆ ಹದಮಾಗಿ ಇವರಲ್ಲಿ ಮಾತನಾಡಲೆಳಸಿರುವಂತೆ ಕಾಣುತ್ತದೆ ; ಭಾರತೀಯ ಪ್ರಾಕ್ ಚೇತನಸಮಷ್ಟಿ ವರ್ತಮಾನದ ಮೂಲಕ ನಿತ್ಯತ್ವವನ್ನಾಶಿಸುತ್ತಿರುವಂತೆಯೂ ಕಾಣುತ್ತದೆ.

ಈ ದೃಷ್ಟಿಯಿಂದ ಇವರ ಪ್ರಧಾನ ಕೃತಿಗಳಾದ ಶ್ಮಶಾನಕುರುಕ್ಷೇತ್ರ, ಬೆರಳ್‌ಗೆ ಕೊರಳ್ ನಾಟಕಗಳೆನ್ನೂ ; ಶ್ರೀ ರಾಮಾಯಣದರ್ಶನಂ ಕಾವ್ಯವನ್ನೂ ಹಾಗೂ ಅವರ ಎರಡು ಕಾದಂಬರಿಗಳನ್ನೂ ವಿವೇಚಿಸಬೇಕು.

---

        ಓಡಿದೆ ನಾ
ಹಗಲಿರುಳೇಣಿಯ ಧುಮುಧುಮುಕಿಳಿದು ;
        ಓಡಿದೆ ನಾ
ಕೋಟಿ ಕಮಾನಿನ ಕಾಲವ ತುಳಿದು ;
        ಓಡಿದೆ ನಾ
ನುಗ್ಗುತ್ತಾಶಾಮಂಟಪತತಿಗೆ
        ನಲ್ಮೆಯ ತೆರೆ ಮೇಲಾಡುತ್ತಂ
ಮುಗ್ಗಿ ನಿರಾಶಾಶೈಲಕ್ಷಿತಿಗೆ
        ನೋವಿನ ನದಿಯೊಳಗಾಳುತ್ತಂ
ಮನಸಿನ ಗುಹೆಯಾ ಮಾಪಾತಾಳದಿ
        ಜಟಿಲ ವಿರೂಪದ ಶತಪಥ ಜಾಲದಿ.
.......................................................................
ಹೃದಯದ ನಾನಾ ರಮ್ಯಗವಾಕ್ಷಕೆ
        ಪೀತಾಂಬರವುಡಿಸಿ,
        ಮಣಿತೋರಣ ತೊಡಿಸಿ,
ದಾನದ ಧರ್ಮದ ಬಿಡಿಹೂ ನೆಯ್ದೆ ;
ಪತಿತನವೋಲಾಂ ಪ್ರಾರ್ಥನೆಗೆಯ್ದೆ.
(ಸ್ವರ್ಗಶ್ವಾನ ಪ್ರೇಮವನರಿತೂ
        ಸುಮನೋಕೇತುಗೆ ಬೆದರಿದ್ದೆ ;
ಬರಲವನನ್ನಕ್ಕೆಲ್ಲಾ ಶೂನ್ಯಂ
        ಎಂದವಿಚಾರದಿ ಹೆದರಿದ್ದೆ.)

'ದೇವಕೇತು'
ಕುವೆಂಪು : ಅಗ್ನಿ ಹಂಸ, ಪಂ. ೧–೧೧, ೨೬–೩೪

ಕುವೆಂಪು ಕಾದಂಬರಿಗಳು ಪ್ರಧಾನತಃ ಕವಿಯಾದವನ ಕೃತಿಗಳಾಗಿವೆ. ಅಂತಲೆ, ಅವು ವಿಶಿಷ್ಟವೂ ಆಗುವುದು ಸಹಜ. ಭಾವಗೀತಕವಿಯಾದವನ ಕಾದಂಬರಿಗಳು ಸಾಮಾನ್ಯವಾಗಿ ಭಾವುಕವೂ ಕಾಲ್ಪನಿಕವೂ ವ್ಯಕ್ತಿನಿಷ್ಠವೂ ಆದ ಸೌಂದರ್ಯದಿಂದ ರಂಜಿಸುವುದು ಆಶ್ಚರ್ಯಕರ ಸಂಗತಿಯೇನೂ ಅಲ್ಲ. ರವೀಂದ್ರರ ಕಾದಂಬರಿಗಳಲ್ಲಿ ಇಂಥ ಮನಮೋಹಕ ಸೌಂದರ್ಯ–ಭಾವಗೀತಾತ್ಮಕತೆ ತುಂಬಿದೆ. ಆದರೆ ಕುವೆಂಪು ಕಾದಂಬರಿಗಳು ಭಾವಗೀತಕ್ಕಿಂತ ಮಹಾಕಾವ್ಯಶಿಲ್ಪದ ಕೃತಿಗಳು. ಅಲ್ಲಿ ಭಾವಗೀತಾತ್ಮಕತೆಯಿದ್ದರೂ ಅದು ವಸ್ತುನಿಷ್ಠ ಕಥಾವಿಸ್ತರಕ್ಕೆ ಸೊಬಗು ಬರಬಹುದಾದಷ್ಟು ಮಾತ್ರ ಬಂದಿರುತ್ತದೆ – ಪಾತ್ರ ಚಿತ್ರಣದಲ್ಲಿ ; ಅವುಗಳನ್ನು ಅನುದ್ವಿಗ್ನ ಮನಸ್ಸಿನಿಂದ ನಿರ್ಲಿಪ್ತ ಹಾಸ ರುಚಿರ ಚಿತ್ರಸಮಾಧಾನದಿಂದ – ನೆಡೆಸುವ ರೀತಿಯಲ್ಲಿ, ಜಘನ್ಯಾಜಘನ್ಯವೆಂಬ ಮೈಲಿಗೆ – ಮಡಿ ಭಾವವಿಲ್ಲದೆ, ಸಣ್ಣದೊಡ್ಡ ವಿವರಣೆಯೆಂಬ ಭೇದವಿಲ್ಲದೆ ನಿಃಸ್ಪೃಹ ತನ್ಮಯತೆಯಿಂದ ಕೃತಿಕರ್ಮನಿರ್ವಹಿಸುವ ರೀತಿಯಲ್ಲಿ ಕುವೆಂಪು ಅದ್ಭುತಸಾಮರ್ಥ್ಯವನ್ನು ಮೆರೆದಿದ್ದಾರೆ, ಈ ಕೃತಿಗಳಲ್ಲಿ. ಬದುಕಿನಿಂದ ಅಲ್ಲಿನ ಪಾತ್ರಗಳು ಅನಾಮತ್ತಾಗಿ ಕೃತಿಯೊಳಕ್ಕೆ ನುಗ್ಗಿಬಂದುಬಿಟ್ಟುವೊ ಎನ್ನುವಷ್ಟು ಪ್ರಾಕೃತಿಕತೆಯಿಂದ ಮೆರೆಯುತ್ತವೆ ಆ ಪಾತ್ರಗಳು. ವಿವರಗಳನ್ನು ಕೇವಲ ಪ್ರತಿಕೃತಿಚಿತ್ರದ ಮಟ್ಟದಲ್ಲೇ ಉಳಿಸದೆ, ಅವುಗಳೆಲ್ಲ ಬಹುಪಾಲು ಸಾಂಕೇತಿಕ ಧ್ವನಿಶಕ್ತಿಯಿಂದ ಕೂಡಿರುವಂತೆ ನೋಡಿಕೊಂಡಿದ್ದಾರೆ. ಪ್ರಕೃತಿಚಿತ್ರಗಳನ್ನು ಕೇವಲ ಸ್ವಸಂತೋಷಕ್ಕಾಗಿ ನೀಡಹೋಗದೆ ಕೃತಿಭೂಮಿಯಲ್ಲಿ ಅವು ಅರ್ಥವಂತಿಕೆಯಿಂದ ಬಾಳುವಂತೆ ನೀಡುತ್ತಾರೆ. ಅಂತೆಯೆ ಮಾನವ ವರ್ತನ – ವ್ಯವಹಾರಗಳ ವಿವರಪೂರ್ಣ ಚಿತ್ರಗಳನ್ನೂ ಸತ್ತ್ವಪೂರ್ಣವೂ ಆಗಿರುವಂತೆ ಮಾಡುತ್ತಾರೆ. ಇವೆಲ್ಲಕ್ಕೂ ಹಿನ್ನೆಲೆಯಾಗಿ ಅವರಿಗಿರುವ ಬದುಕಿನ ಪ್ರಕೃತಿಯ ವೀಕ್ಷಣ – ಮನನ ಆಶ್ಚರ್ಯ ತರುವಂತಹದು. ಈ ಯಾವ ಚಿತ್ರಣನಿರೂಪಣದಲ್ಲೂ ಆತುರಾತುರವೆಂಬುದೇನೂ ಇಲ್ಲ. ಹಿಂದೂಸ್ತಾನಿ ಸಂಗೀತದ ವಿಲಂಬಗತಿಯ ವಿಸ್ತಾರ ನಿರೂಪಣವುಂಟು. ಕುಮಾರವ್ಯಾಸಭಾರತದ ಸೂಕ್ಷ್ಮಚಿತ್ರಣ ಪೂರ್ಣವಾದ ವಿರಾಮಗತಿ, ಟಾಲ್ಸ್ಟಾಯ್ ಕಾದಂಬರಿಗಳ ವಿವರ ಪೂರ್ಣಗತಿ ಇವರ ಕಾದಂಬರಿಗಳಲ್ಲಿ ಕಂಡುಬರುತ್ತದೆ. ಕಥೆಯನ್ನೂ ಆಲ್ಲೋಚಿನೆ ಬರೆಯದೆ ಕಾಣುತ್ತ ಬರೆಯುವುದಾಗಿ ಕುವೆಂಪು ಹೇಳುವುದುಂಟು. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯನ್ನು ಬರೆಯುತ್ತಿದ್ದ ದಿನಗಳಲ್ಲಿ ನಾನೊಮ್ಮೆ 'ಕಾದಂಬರಿ ಎಲ್ಲಿಗೆ ಬಂತು ಸರ್?' ಎಂದು ಕೇಳಿದಾಗ ಅವರು ಕೊಟ್ಟ ಉತ್ತರ ಗಮನಾರ್ಹ ಆಶ್ಚರ್ಯವುಂಟು ಮಾಡಿತು. "ಐತ ಪೀಂಚಲು ಮುಕುಂದಯ್ಯ ತೋಟದಲ್ಲಿರೊ ಒಂದು ಪ್ರಸಂಗ. ಹೊಂಬಾಳೆಯನ್ನ ಯಾರು ಉದುರಿಸಿದ್ದು? ಅದೇ ಬಿದ್ದಿತ್ತೊ ? ಎನ್ನುವ ಮುಕುಂದಯ್ಯನಿಗೆ ಪಿಂಚಲು ಉತ್ತರ ಕೊಡುತ್ತಾಳೆ: 'ಇಲ್ಲಯ್ಯ, ಹತ್ತಿ ತೆಗೆದದ್ದು' ಎಂದು. 'ಯಾರು ಹತ್ತಿದ್ದು ? ನೀನೋ ಅವನೋ?' ಎಂದ ಮುಕುಂದಯ್ಯನಿಗೆ 'ಇಸ್ಸಿ, ಅಯ್ಯ, ಏನು ಹೀಂಗೆ ಎಲ್ಲಾ ಹೇಳುತ್ತೀರಿ? ನಾನು ಯಾಕೆ ಹತ್ತಲಿ ? ಅವನೇ ಹತ್ತಿ ಕುಯ್ದದ್ದು' ಎಂದು ಪೀಂಚಲು ನುಡಿಯುತ್ತಾಳೆ. ಅಲ್ಲಿಗೆ ನಿಂತಿದೆ. ಮುಂದೆ ಏನು ಮಾತು ಆಡಬೇಕು ಅವರು, ಎನ್ನೋದು ಹೊಳೆದಿಲ್ಲ. ಅಲ್ಲಿಗೆ ನಿಂತಿದೆ ಹದಿನೈದು ದಿನದಿಂದ" ಎಂದು ಅವರು ಹೇಳಿದಾಗ, ಅವರ ಕೃತಿರಚನೆಯ ವಿಧಾನದ ಬಗೆಗೆ ಕೆಲವೊಂದು ಇಣುಕುಗಳು ನನಗೆ ದೊರೆತವು. ಶ್ರೀರಾಮಾಯಣದರ್ಶನಂ ಬರೆದ ಮೇಲೆ ರಚಿಸುತ್ತಿದ್ದ ಈ ಕಾದಂಬರಿ ಸಾಮಾನ್ಯವಾಗಿ ಕಾನೂರು ಹೆಗ್ಗಡತಿಯಂತಿರುವುದಿಲ್ಲ. ಏನಿದ್ದರೂ ಇಲ್ಲೆಲ್ಲ ಯಾವುದೊ ಮಹದಾದರ್ಶದತ್ತ ತುಡಿಯುವ – ದುಡಿಯುವ ಪಾತ್ರಗಳು ತುಂಬಿರುತ್ತಾರೆ, ಎಂದು ಕೊಂಡಿದ್ದ ನನಗೆ ಅದರಿಂದ ಆಶ್ಚರ್ಯವಾಯಿತು. ಕುವೆಂಪು ಖಂಡಿತ 'exhausted resource' ಅಲ್ಲ, 'burnt-out energy' ಅಲ್ಲ, ಎನ್ನುವುದು ಖಂಡಿತವಾಯಿತು. ಆ ದಿನವೇ ಕುವೆಂಪು ಅವರು, ೧೯೩೬ರ ವೇಳೆಯಲ್ಲಿ 'ಅರ್ಥಸಾಧಕ' ಪತ್ರಿಕೆಯಲ್ಲಿ ೮೦ ಪುಟ (ಡೆಮ್ಮಿ ೧/೮) ಪ್ರಕಟವಾಗಿದ್ದ ಮಲೆಗಳಲ್ಲಿ ಮದುಮಗಳು ಕಾದಂಬರಿಯ offprint ನ್ನು ನನಗೆ ಓದಲು ಕೊಟ್ಟರು. ಕುತೂಹಲಗೊಂಡು ಓದಿದ ನನಗೆ ಮತ್ತೂ ಆಶ್ಚರ್ಯವಾಯಿತು. ಕಾದಂಬರಿಯ ಸತ್ತ್ವಸಂಪನ್ನವಾದ ಹರಹನ್ನು ಭಾವಿಸಿಕೊಂಡು. ಸುಮಾರು ೩೦ ವರ್ಷವಾದಮೇಲೆ ಬಂದ ಪೂರ್ಣ ಕಾದಂಬರಿಯಲ್ಲೀಗ ಆ ಪುಟಗಳು ಹಾಗೆಯೆ ಸೇರಿಕೊಂಡಿವೆ. ಒಂದು ಭಾವವನ್ನು ಸುಧೀರ್ಘಾವಧಿಯ ತನಕ ಧಾರಣ ಮಾಡಿಕೊಂಡಿರುವುದು ವಿಶೇಷಸತ್ತ್ವದ ಚಿಹ್ನೆ. ಅಂದು ಕಲ್ಪಿಸಿಕೊಂಡಿದ್ದ ನಾಯಿಗುತ್ತಿ, ನಾಯಿಹುಲಿಯ, ಸುಬ್ಬಣ್ಣ ಹೆಗಡೆ – ಅವರ ಹಂದಿ ಕೋಳಿ ಕುರಿ ಹಾಡ್ಯ – ಅಂತಕ್ಕ, ಕಾವೇರಿ, ಕಣ್ಣಾ ಪಂಡಿತರು, ಕರಿಮೀನ ಸಾಬಿ – ಇತ್ಯಾದಿ ಪಾತ್ರಗಳನ್ನೆಲ್ಲ (ಆ ೬೪ ಪುಟಗಳಲ್ಲಿ ಬಂದಿದ್ದ ಇನ್ನೂ ಹಲವಾರು ಪಾತ್ರಗಳನ್ನೆಲ್ಲ) ಊನಗೊಳಿಸದೆ ಅದೇ ಜೀವದ್ರವ್ಯದಿಂದ ಕೂಡಿಕೊಂಡು ಬೆಳೆಸಿರುವುದು, ಕಾದಂಬರಿಯ ಉದ್ದಕ್ಕೂ ನಡೆಸಿರುವುದು ಅಸಾಧಾರಣ ಶಕ್ತಿಯಷ್ಟೆ ಅಲ್ಲದೆ ಸೃಜನಶೀಲತೆಯ ಪಕ್ವಧಾರಣ ತಾರುಣ್ಯವನ್ನೂ ಸೂಚಿಸುತ್ತದೆ, ಹಾಗೂ, ಕುವೆಂಪು ಕೃತಿರಚನೆಯ ದೃಢ ವಿಲಂಬಗತಿಯನ್ನೂ ಮನದಟ್ಟು ಮಾಡಿಕೊಡುತ್ತದೆ. ೧೫–೨೦ ದಿನಗಳ ಅವಧಿಯಲ್ಲಿ ಸೃಜನಶೀಲ ಅಸ್ವಸ್ಥತೆಯಿಂದ ಕಾದಂಬರಿಯೊಂದನ್ನು ಏಕಸ್ರೋತವಾಗಿ ಬರೆಯುವ ರೀತಿಯೂ ಯಶಸ್ವಿಯಾಗಿದೆ. ಆದರೆ, ಕುವೆಂಪು ರೀತಿ ಇದು. ಈ ರೀತಿ ದೀರ್ಘಾವಧಿಯ ಸಾವಧಾನ ಯಾತ್ರೆಯನ್ನು ಒಪ್ಪಿಕೊಂಡಿರುವುದರಿಂದಲೇ ಇವರ ಕಾದಂಬರಿಗಳು

ಸಾಮಯಿಕ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಹೋಗುವುದಿಲ್ಲ. ಬರೆಯುವ ಅವಧಿಯಲ್ಲಿ ಎಷ್ಟೋ ಪತ್ರಿಕಾಸಮಸ್ಯೆಗಳೂ ಬಂದುಹೋಗಿರುತ್ತವೆ. ಹೇಗೆ ಅವಕ್ಕೆಲ್ಲ ಎಡೆಗೊಡುವುದು ಹಾಗೂ ಕುವೆಂಪು; ಕಾದಂಬರಿಗಳು ಸುತ್ತಣ ಸದ್ಯ ಸಮಾಜವನ್ನೂ ಕುರಿತವಲ್ಲ. ಪ್ರಾಯಶಃ ಈಗಾಗಲೆ ಕಣ್ಮರೆಯಾಗಿರಬಹುದಾದ ಮಲೆನಾಡಿನ, ೧೮೫೦–೧೯೩೦ರ ಅವಧಿಯಲ್ಲಿ ಇದ್ದ ಸಮಗ್ರ ಜೀವನದ ಒಂದು ಸೂಕ್ಷ್ಮ ಆತ್ಮಕಥೆಯ ರೂಪದಲ್ಲಿ ಇವರ ಎರಡೂ ಕಾದಂಬರಿಗಳು ಮೂಡಿವೆ. ಆ ಪ್ರಾದೇಶಿಕ ಆತ್ಮಕಥಾನಕದಲ್ಲಿ ಕಾದಂಬರಿಕಾರ ತಮ್ಮ ಈಗಿನ ಕಾಲವನ್ನೆಲ್ಲ ತುಂಬುವುದು ಸಾಧುಕರ್ಮವಲ್ಲವಲ್ಲ. ಆದರಿಂದಲೆ ಕೃತಿಕಾರರು, ತಮ್ಮ ಬಾಲ್ಯದಲ್ಲಿ ಕಂಡ ಮಲೆನಾಡ ಜೀವನದ ಗಾಢ ಅನುಭವವನ್ನು – ಸುದೂರ ಸಾಮೀಪ್ಯವೀಕ್ಷಣದಿಂದ ಪಡೆದ ಅರಿವನ್ನು – ಆಲೋಚನ ಮಾಡುತ್ತ ಮಾಡುತ್ತ ಪುನಃ ಸೃಜಿಸುತ್ತಾರೆ. ಪ್ರಾಕ್ತನಶಾಸ್ತ್ರವಿಚಕ್ಷಣನ ಸಾಮರ್ಥ್ಯವೂ ಇಲ್ಲಿ ಕೆಲಸ ಮಾಡಿದೆ. ಅನೈತಿಹಾಸಿಕವಾಗದಂತೆ ಆದಷ್ಟೂ ಆ ಕಾಲದ ಆವರಣವನ್ನೆ ನಿರ್ಮಿಸುವಲ್ಲಿ ಸಾರ್ಥಕ್ಯಲಭಿಸಿದೆ. ಕಾನೂರು ಹೆಗ್ಗಡತಿ ಕಾದಂಬರಿಗಿಂತ ಹಿಂದಿನ ಕಥೆ ಮದುಮಗಳು ಕಾದಂಬರಿಯದು. ಈ ಕಾದಂಬರಿಯ ತುದಿ ಹೆಗ್ಗಡತಿ ಕಾದಂಬರಿಯ ಮೊದಲಾಗುತ್ತದೆಯಾಗಿ ಎರಡೂ ಕಥೆಗಳು ಆ ಆತ್ಮಕಥೆಯ ಎರಡು ಸಂಪುಟಗಳಾಗಿ ಪರಿಣಮಿಸುತ್ತವೆ.

ಸ್ಥಿತ್ಯಂತರ ಸಮಾಜ ತನ್ನ ಆ ಸಂಧ್ಯವಸ್ಥೆಯ ಆತ್ಮಕಥೆಯನ್ನು ತನ್ನ ಸಮರ್ಥ ಕೃತಿಕಾರನ ಮೂಲಕ ಹೇಳಿಕೊಳ್ಳಬಯಸುತ್ತದೆ. ಕುವೆಂಪು ತಾವು ಹುಟ್ಟಿಬಂದ ಸಮಾಜದ ಅಂಥ ವಕ್ತಾರರಾಗಿದ್ದಾರೆ. ಆದರೆ ಹೀಗೆ ವಕ್ತಾರರಾಗುವಾಗ ಅವರು ಕೇವಲ ಪ್ರಾದೇಶಿಕ ಪ್ರತಿನಿಧಿಯಾಗಿ ಉಳಿಯದೆ ಮಾನವ ಮನಸ್ಸಿನ ಕಥೆಯನ್ನೆ ಹೇಳುತ್ತಿದ್ದಾರೆ. ತನ್ನ ಊರಿನ ನೀರಿನ ಮೂಲದ್ರವ್ಯಗಳನ್ನು ಸರಿಯಾಗಿ ಕಂಡುಕೊಂಡ ವಿಜ್ಞಾನಿ ಪ್ರಪಂಚದ ಎಲ್ಲ ನೀರಿನ ಮೂಲ ದ್ರವ್ಯಗಳನ್ನೂ ಕಂಡಿರುತ್ತಾನೆ. ಈ ಕಾರಣದಿಂದಾಗಿ ಈಕೃತಿ ಸಾಮಾಜಿಕ ಮಾನವಶಾಸ್ತ್ರೀಯ ಅಧ್ಯಯನವಾಗದೆ, ಮಾನವ ಮನಸ್ಸಿನ – ಒಂದು ಪರಿಸರದಲ್ಲಿ ಅದು ಹೇಗೆ ವಿಲಾಸ ತೋರಿತು. ವಿಕಾಸಗೊಂಡಿತು ಎಂಬುದರ– ಚಿರಂಜೀವಿ ಕಥೆಯಾಗಿದೆ. ಸಾಮಯಿಕ ಕೃತಿಯಂತೆ ತತ್ಕಾಲಗೌರವದಲ್ಲಿ ಬೆಳೆದು ಆಮೇಲೆ ಮರವೆಯ ಸಂಪುಟ ಸೇರಿಹೋಗುವ – ತಾನು ಚಿತ್ರಿಸುವ ಸಮಸ್ಯೆ ಸಮಸ್ಯೆಯಾಗಿ ಉಳಿಯದ ಕಾಲ ಬಂದಂತೆಲ್ಲ ನೀರಸವಾಗುತ್ತ ನಿರರ್ಥವಾಗುವ – ಕಾದಂಬರಿಯಲ್ಲ ಇವು. ಸಮಸ್ಯಾತ್ಮಕ ಕೃತಿರಚನಕಾರ ಅಥವಾ, ಸಾಮಯಿಕ ಕೃತಿಕಾರ ತನ್ನ ಕೃತಿಯನ್ನು ಬೌದ್ಧಿಕಸ್ತರದಲ್ಲಿ



ನಡೆಸುವಂತೆ, ಪಾತ್ರ ಸ್ವಭಾವದ – ಪ್ರವೃತ್ತಿಪ್ರಧಾನದ ವರ್ತನದ ಮಟ್ಟದಲ್ಲಿ realize ಮಾಡಿಸಲು ಕಷ್ಟವಾಗುತ್ತದೆ. ಕುವೆಂಪು ಪಾತ್ರಗಳು ಎಂದೂ ಬೌದ್ಧಿಕಸ್ತರದಲ್ಲೆ ನಡೆಯುವುದಿಲ್ಲ. ಇಲ್ಲಿ ಬರುವ ಪಾತ್ರಗಳಾದರೂ ಬುದ್ಧಿಜೀವಿಗಳಲ್ಲ, ಒಂದಿಬ್ಬರನ್ನು ಬಿಟ್ಟು. ಹಾಗೆಂದ ಕಾರಣದಿಂದಲೆ ಅವರ ಸ್ವಭಾವ ಚಿತ್ರಣ ಸುಲಭವಾಗಿದೆಯೆಂದೂ ಅಲ್ಲ. ಹಾಗೆಂದು ಭಾವಿಸಿದ್ದರೆ ಈ ಪಾತ್ರಗಳನ್ನೆಲ್ಲ ಸರಳರೇಖೆಯಲ್ಲಿ ನಡೆಸಬಹುದಿತ್ತು. ಎಂಥದೇ ಪಾತ್ರವೂ ಸರಳರೇಖೆಯಲ್ಲಿ ನಡೆದಿಲ್ಲ. ಅದರಿಂದಲೆ ಈ ಪಾತ್ರಗಳೆಲ್ಲ ಪ್ರಾಕೃತಿಕ ಸಂಪತ್ತಿನಿಂದ ಸಂಪನ್ನವಾಗಿವೆ. ಅದುರಿನಂತೆ ನಾನಾ ಧಾತುವಿನಿಂದ – ಪ್ರಧಾನವಾಗಿ ಒಂದು ಲೋಹ ಅದರಲ್ಲಿ ಹೆಚ್ಚಾಗಿದ್ದರೂ – ಸಮೃದ್ಧವಾದವಾಗಿರುವ ಈ ಪಾತ್ರಗಳು ಯಾವುದೋ ತತ್ತ್ವದ ಅಥವಾ ಅವಸರದ ಜೀತದಾಳಾಗಿಲ್ಲ. ಅದರಿಂದಲೆ ಅವರ ವರ್ತನ ಕಲ್ಪನಾಜನ್ಯವಾಗಿಲ್ಲ, ಅವರೆಲ್ಲ ಅವರವರ ಸ್ವಭಾವಸಿದ್ಧ ಹಾದಿಯಲ್ಲಿ ನಡೆಯುತ್ತಾರೆ; ಪ್ರವೃತ್ತಿಮಟ್ಟದಲ್ಲಿ ವರ್ತಿಸುತ್ತಾರೆ. ಕಾದಂಬರಿಯ ಪ್ರಾರಂಭದಲ್ಲಿ ತನ್ನ ಯಾತ್ರೆ ಮೊದಲುಮಾಡುವ ನಾಯಿಗುತ್ತಿ ಕಾದಂಬರಿಯ ಮುಕ್ಕಾಲು ಕಥೆಯ ತನಕ ಸಾಗುತ್ತಾನೆ. ಅವನ, ಅವನ ನಾಯಿ ಹುಲಿಯನ ಕಥೆ ನಡಗೆಯಲ್ಲೆ ಸಾಗುತ್ತದೆ. ಅವರು ಎಲ್ಲೂ ನಾಲ್ಕು ಹೊತ್ತು ನಿಲ್ಲುವುದೇ ಇಲ್ಲ. ತನ್ನ ಅನ್ವೇಷಣೆಯ ಸಾರವಾದ ತಿಮ್ಮಿಯನ್ನು ಅವನು – ಆಕೆ ಅವನನ್ನು – ತೀವ್ರಾತಪದಿಂದ ನೋಡುವ ಭಾವಪೂರ್ಣವಾದ ಒಂದು ಶ್ರೇಷ್ಠ ಚಿತ್ರವನ್ನು[೩] ನೀಡಿದವೇಲೂ ಕಾದಂಬರಿಕಾರ ಅವರನ್ನು ಪ್ರವೃತ್ತಿಯ ಮಟ್ಟದಲ್ಲೆ ನಡೆಸುತ್ತಾರೆ. ಅಷ್ಟು ಅನುರಕ್ತರಾದವರು ಹೀಗೆ ಅಪಸ್ವರ

೩. ತನ್ನ ಸೋದರ ಅತ್ತೆಯ ಸಹಕಾರದಿಂದ ತಿಮ್ಮಿಯನ್ನು ಕರೆದುಕೊಂಡು ಹೋಗಲಿದ್ದ ನಾಯಿಗುತ್ತಿ ಊಟಮಾಡಿ ಕೈ ಒರಸಿಕೊಂಡು ಇನ್ನೇನು ಹೊರಡಿಲಿದ್ದಾನೆ. ಆಗ ಅವನ್ನು ತಿಮ್ಮಿಯನ್ನೊಮ್ಮೆ ನೋಡುತ್ತಾನೆ. ಅದರ ವರ್ಣನೆ ಹೀಗೆದೆ : 'ಪ್ರಶ್ನಿಸುವ ರೀತಿಯಲ್ಲಿ ತಿಮ್ಮಿಯನ್ನು ಕಣ್ಣಿಗೆ ಕಣ್ಣಿಟ್ಟು ನೋಡಿದನು, ಅವಳೂ ಹಾಗಿಯೇ ನೋಡುತ್ತಿದ್ದಳು. ಗುತ್ತಿಯ ಕಣ್ಣನ್ನೆಲ್ಲ, ಹೃದಯಾಂತರಾಳವನ್ನೇ, ಜೀವವನ್ನೆ ! ಎಂಥ ನೋಟಗಳೊ ಅವು ? ಗಂಡುಹೆಣ್ಣು ಸರ್ಪಗಳು ಎಣೆಯಾಡುವಾಗ ಒಂದನ್ನೊಂದು ಸರಪಣಿ ಸುತ್ತುವಂತೆ ಸುತ್ತಿ ಬಿಗಿಯುವ ಪ್ರಣಯಫಣಿಬಂಧವೂ ಸಪ್ಪೆಯಾಗುವಂತೆ ಒಂದನ್ನೊಂದು ಆಲಿಂಗಿಸಿದ್ದುವು. ಕೆಂಪಗೆ ಕರಗಿ ದ್ರವವಾದ ಜೀವಗಳೆರಡರ ಚೈತನ್ಯವೇ ಅತ್ತಿಂದಿತ್ತ ಇತ್ತಿಂದತ್ತ ಹೃದಯದಿಂದ ಹೃದಯಕ್ಕೆ ಬೇಟದ ಒದಗೆಗಳಾಗಿದ್ದುವು ಆ ನೋಟಗಳು ! ಸಮರ್ಪಣೆ, ಆಶ್ವಾಸನೆ, ಧೈರ್ಯ, ವಿಶ್ವಾಸ, ಪ್ರತಿಜ್ಞಾಸ್ಥೈರ್ಯ, ಆಮರಣಪರ್ಯಂತ ತ್ಯಾಗಭಾವ, ದುರ್ದಮ್ಯ ಸಾಹಸೋಲ್ಲಾಸ – ಇವೆಲ್ಲವನ್ನೂ ಒಬ್ಬರಿಂದೊಬ್ಬರಿಗೆ ಸಾಗಿಸುವ ಜೀವಂತ ವಿದ್ಯುನ್ಮಯ ತ್ಯಾಗಪ್ರಣಾಳಿಗಳಾಗಿದ್ದುವು ಆ ದೃಷ್ಟಿದ್ವಯ!'

– 'ಮಲೆಗಳಲ್ಲಿ ಮದುಮಗಳು', ಪುಟ ೧೬೧, ಪಂಕ್ತಿ ೮–೧೭

ನುಡಿಯುತ್ತಾರೆಯೆ, ಇಷ್ಟು ಬೇಗ ಎಂದು, ಯಾರಾದರೂ ಸುಲಭ ಕಾದಂಬರಿಕಾರನಾಗಿದ್ದರೆ ಆ ಚಿತ್ರವನ್ನೆ ಕಲ್ಪಿಸಿಕೊಳ್ಳುತ್ತಿರಲಿಲ್ಲ. ಕಾಡುಮೇಡಿನಲ್ಲಿ, ಕತ್ತಲಲ್ಲಿ ಗುತ್ತಿ ತನ್ನೊಡನೆ ತಿಮ್ಮಿಯನ್ನು ಕರೆದುಕೊಂಡು ಹೋಗುತ್ತಿರುವಾಗ, ಅವರನ್ನು ಬಿಡದೆ ಬೆಂಗಾವಲಾಗಿ ಬರುತ್ತಿದ್ದ ದೈತ್ಯನಾಯಿ ದಟ್ಟಕಾಡಿನ ಕತ್ತಲಿನಲ್ಲಿ ಎಲ್ಲೊ ಚಿರತೆಯನ್ನು ತರುಬಿ ಎದುರಿಸಿ ಹೋರಾಡಿ ಅದಕ್ಕೂ ಘಾಸಿಮಾಡಿ ತಾನೂ ಘಾಯಗೊಳ್ಳುತ್ತದೆ. ತನ್ನ ನಾಯಿಯ ವೀರ್ಯಕ್ಕಾಗಿ ಹಿಗ್ಗಿದ ಗುತ್ತಿ ಗಾಯಗೊಂಡ ಅದನ್ನು ಎತ್ತಿಕೊಂಡೆ ಸಾಗಿಸುತ್ತಾನೆ. ಔಷಧೋಪಚಾರ ಮಾಡಿದ ಮೇಲೆ ಮೆಲ್ಲಮೆಲ್ಲಗೆ ನಡೆಯುತ್ತ ಸಾಗಿದ ನಾಯಿ ಕಾಡಿನಲ್ಲಿ, ಹಿಂಡುಹಿಂಡೇ ಹಂದಿಗಳು ಅಡ್ಡಹೋದರೂ ಬೊಗುಳದೆ ನಾಲಿಗೆ ಜೋಲು ಹಾಕಿಕೊಂಡು ಮುಗ್ಗರಿಸುತ್ತ ಬರುತ್ತದೆ. ಅದನ್ನು ಕಂಡ ಗುತ್ತಿಗೆ ಜೀವಹೋದಂತಾಗಿ ನೋವೂ ಅವಮಾನವೂ ಆದಂತಾಗಿ ಮತ್ತೆ ಅದರ ಉಪಚಾರಕ್ಕೆ ತೊಡಗುತ್ತಾನೆ. ರಕ್ತರಸ ಒಸರುತ್ತಿದ್ದ ಅದರ ಘಾಯಗಳನ್ನು ನೋಡಿ, ಅದರ ನೋವಿನ ನೋಟವನ್ನು ಕಂಡು, ದುಃಖಮಿಶ್ರಿತವಾದ ಸಿಟ್ಟು ಉಕ್ಕಿಬಂತು. ಆ ಚಿತ್ರ ಹೀಗಿದೆ : "ಭಾವಾಂಧನಾಗಿ ಗುತ್ತಿ ತಿಮ್ಮಿಯ ಕಡೆ ತಿರುಗಿ 'ಸನಿಮುಂಡೆ, ನಿನ್ನ ದೆಸಿಂದ ನನ್ನ ನಾಯಿನೂ ಹೋಯ್ತಲ್ಲೇ? ಯಾವ ಇಸಗಳಿಗೇಲಿ ಹುಟ್ಟಿದ್ಯೋ ನೀನು, ಹುಲಿಯನ ತಿನ್ನಾಕೆ!' ಎಂದು ಸಿಡುಕಿದನು. ಅವನ ಕಣ್ಣು ಆಗಲೇ ನೀರು ತುಂಬಿಕೊಂಡಿತ್ತು. ತಿಮ್ಮಿಗೆ ಏನೂ ತೋಚಲಿಲ್ಲ. ತಾನು ಏನು ತಪ್ಪು ಮಾಡಿದುದಕ್ಕಾಗಿ ಭಾವ ಬಯ್ಯುತ್ತಿದ್ದಾನೆ ಎಂದು. ನಿಂದೆಯ ಆಘಾತಕ್ಕೆ ಮೊದಲು ತಟಕ್ಕನೆ ಬೆಪ್ಪು ಬೆರಗಾದಳು. ಒಡನೆಯೆ, ಬಂಡೆಯು ಬೆಟ್ಟದನಿಗೆ ಮರುದನಿಕೊಡುವಂತೆ, ನಿಸರ್ಗಸಹಜವಾದ ಪ್ರತಿಕ್ರಿಯೆಯಿಂದಲೊ ಎಂಬಂತೆ ಪಡಿನುಡಿದೇ ಬಿಟ್ಟಳು : ನಾನ್ಯಾಕೆ ಅದೇನು ಸನಿಮುಂಡೆ? ಬೇಕಾದರೆ ನೀನೆ ಸನಿಮುಂಡೆ ಗಂಡ !" (ಪುಟ ೩೧೨).

ಇಲ್ಲಿ ಬರುವ ಗುತ್ತಿ–ತಿಮ್ಮಿಯರ ಪರಸ್ಪರ ಭರ್ತ್ಸನವಾದರೂ, ಮದುವೆಯಾಗಲು ಕದ್ದು ಊರು ಬಿಟ್ಟು ಕಾಡುಮಲೆಗಳನ್ನು ನಟ್ಟಿರುಳಲ್ಲಿ ನಡೆದು ಮೊದಲ ರಾತ್ರಿಯನ್ನು ಕಳೆದ ಮದುಮಕ್ಕಳ ಬೈಗುಳ. ಈ ಬೈಗುಳ ಸಾಧ್ಯವೆ? ಎಂದು ಯೋಚಿಸಿ ಲೆಕ್ಕಾಚಾರ ಹಾಕಿದ್ದರೆ ಈ ರೀತಿ ಚಿತ್ರವೆ ಸಾಧ್ಯವಾಗುತ್ತಿರಲಿಲ್ಲ. ಹಾಗಾದರೆ ಈಗಿದು ಉಚಿತವಾಗಿದೆಯೆ? ಮಾವನ ಮನಸ್ಸು ಯಾವ ಯಾವ ಅವಸ್ಥೆಯಲ್ಲಿ ಹೇಗೆ ಹೇಗೆ ವರ್ತಿಸುತ್ತದೆ? ಅಂದಂದು ಪ್ರೇರಕಗಳು ಏನೇನಾಗಿರುತ್ತವೆಯೆಂಬುದೂ ಕೂಡ ಕಾರಣವಾಗಿರುತ್ತದೆ. ನಾಯಿಗುತ್ತಿಗೂ ಹುಲಿಯನಾಯಿಗೂ ಎಂಥ ಹೆಣೆತವಿದೆಯೆಂಬುದು ಕಾದಂಬರಿಯಲ್ಲಿ



ಚಿತ್ರಿತವಾಗಿದೆ. ತಿಮ್ಮಿಯನ್ನು ಕಾಣಲು ಆ ಮೊನ್ನೆಯ ರಾತ್ರಿ ಯಾತ್ರೆ ಹೊರಟ ಗುತ್ತಿಗೆ ತನ್ನ ನಾಯಿ ತನ್ನ ಸಾಹಸಕ್ಕೆ ಅಡ್ಡಿಯಾಗುತ್ತದೆಂಬ ಆತಂಕವಿದ್ದು ಅದನ್ನು ಹಿಂದೆಹಿಂದಕ್ಕೆ ಅಟ್ಟುತ್ತಾನೆ. ಅಲಭ್ಯಸಾಧನೆಯ ನೆಲೆಯಲ್ಲಿ ಅದನ್ನು ಬೈಯುತ್ತಾನೆ. ಆದರೂ ಅದು ಅವನನ್ನು ಬೆನ್ನಂಟಿ ಬರುತ್ತದೆ. ಅದಿದ್ದದ್ದರಿಂದಲೆ ರಾತ್ರೋರಾತ್ರಿ ನಿರ್ಭಯವಾಗಿ ಹುಲಿಕಲ್ಲನ್ನೂ ತಿಮ್ಮಿಯೊಡನೆ ಏರುತ್ತಾನೆ, ಅಂಥ ನಾಯಿ ಈಗ ಘಾಯಗೊಂಡು ನೋವಿನ ನೋಟ ಬೀರಿದಾಗ 'ಭಾವಾಂಧ'ನಾಗಿ ತನ್ನ ತಿಮ್ಮಿಯನ್ನು ಹಾಗೆ ಬೈಯುತ್ತಾನೆ. ಇನ್ನೂ ಮದುವೆಯಾಗಬೇಕಾದ ಹೆಣ್ಣು ತಿಮ್ಮಿ ತನ್ನ ಅಭಿಮಾನಭಂಗಕ್ಕೆ ಸಹಜವಾಗಿ ಸೆಟೆಯುತ್ತಾಳೆ. ಅವಳಾಡುವ ಮಾತು ಆ ನೆಲೆಯಲ್ಲಿ ಸರಿ. ಕಾಮೋತ್ಕಟ ಘಳಿಗೆಯಲ್ಲಿ ವ್ಯಕ್ತಿಯ ಅಹಂಪ್ರತಿಷ್ಠೆ ಮಲಗಿರಬಹುದು, ಇಲ್ಲವೆ ಆ ಪೂರದಲ್ಲಿ ಮುಳುಗಿ ಅದೃಶ್ಯವಾಗಿದ್ದಿರಬಹುದು. ಆದರೆ ಆ ಪೂರ ಇಳಿದಾಗ? ಮತ್ತೊಮ್ಮೆ ಪ್ರೀತಿದ್ರಾವಕ ಉಕ್ಕಿ ಅಹಂದ್ರವಣಕಾರ್ಯಕ್ಕೆ ತೊಡಬೇಕಾಗುತ್ತದೆ. ಮತ್ತೆ ಮತ್ತೆ ಹೀಗೆಯೆ ವ್ಯಕ್ತಿವ್ಯಕ್ತಿಗಳ ನಡುವಣ ಅಹಂ–ಕಾವುಗಳ ಏರಾಟ ಕರಗಾಟ, ತಾತ್ಕಾಲಿಕ ಶಮನ, ಸಾಗುತ್ತಲೇ ಇರುತ್ತದೆ. ಕುವೆಂಪು ತಮ್ಮ ಎಲ್ಲ ಚಿಕ್ಕ ಪುಟ್ಟ ದೊಡ್ಡ ಪಾತ್ರಗಳಲ್ಲೆಲ್ಲ ಈ ಅಂಶವನ್ನು ಕಾಣಿಸಿದ್ದಾರೆ. ಚಿತ್ರಾಂಗದೆ ಇರಬಹುದು. ರಾವಣನಿರಬಹುದು ಅಥವಾ ಕಾದಂಬರಿಯ ಪ್ರಣಯಿಗಳಿರಬಹುದು : ಹೇಗೆ ಈ ಪ್ರಣಯ–ಕಾಮ–ಅಹಂ–ಅಭಿಮಾನ ಅವರಲ್ಲೆಲ್ಲ ಸಂಘರ್ಷ–ಸಂಧಾನ–ಸಮ್ಮರ್ದ–ಸಮಾಧಾನವನ್ನು ನಡೆಸಿದೆ, ಎಂಬುದನ್ನವರು ಕಾಣಿಸಿದ್ದಾರೆ. ಪಾತ್ರಗಳನ್ನು ಆಲೋಚಿತ ಪಥದಲ್ಲೆ ನಡೆಸಿಕೊಂಡು ಹೋದಾಗ ಇದೆಲ್ಲ ಸಾಧ್ಯವಾಗುವುದಿಲ್ಲ. ಸಾಧುವಾಗಿ ತೋರುವುದೂ ಇಲ್ಲ. ಪ್ರವೃತ್ತಿ – ಸ್ವಭಾವ – ಪ್ರವರ್ತನದ ಪ್ರವಾಹದಲ್ಲೆ ಪಾತ್ರಗಳನ್ನು ಯಾನಮಾಡಿಸಿದಾಗ ಮಾತ್ರ ಇದೆಲ್ಲ ಸಾಧ್ಯವಾಗುತ್ತದೆ.[೪] ಇದು

೪. ಕುವೆಂಪು ಚಿತ್ರಾಂಗದಾ ಖಂಡಕಾವ್ಯದ ಪ್ರಾರಂಭದ ಕಥೆ ರವೀಂದ್ರರ ಚಿತ್ರಾ ನಾಟಕದಿಂದ ಪ್ರಭಾವಿತವಾಗಿದೆ. ಗಂಡುಮಕ್ಕಳಿಲ್ಲದ ಮಣಿಪುರದ ರಾಜ, ಮಗಳನ್ನೆ ಕ್ಷತ್ರಿಯ ತರುಣನನ್ನು ಬೆಳೆಸುವಂತೆ ಬೆಳೆಸಿದ್ದ, ಗಂಡುಡುಗೆಯಲ್ಲಿ ಚಿತ್ರಾಂಗದೆ ಕಾಡಲೆಯುತ್ತಿರುವಾಗ ಸಂನ್ಯಾಸಿ ಅರ್ಜುನನನ್ನು ಸಂಧಿಸುವ ಚಿತ್ರ ಇಬ್ಬರಲ್ಲೂ ಬರುತ್ತದೆ. ಠಾಕೂರರ ಚಿತ್ರಾಂಗದೆ, ತನ್ನ ಕಿರುದಾರಿಯಲ್ಲಿ ಮಲಗಿದ್ದ ಸಂನ್ಯಾಸಿಯನ್ನು ರೋಷಗೊಂಡು ತನ್ನ ಬಿಲ್ಲ ಕೊಪ್ಪಿನಿಂದ ನೂಕಿ ಎಬ್ಬಿಸುತ್ತಾಳೆ. ಘೃತಾಹುತಿಗೊಂಡ ಬೆಂಕಿಯಂತೆ ಮೇಲೆದ್ದ ಸಂನ್ಯಾಸಿಯನ್ನು ಕಂಡ ಆ ಗಂಡು ಹೆಣ್ಣಿಗೆ ತನಗೇ ಗೊತ್ತಿಲ್ಲದ ಹೆಣ್ಣಾಸೆ ಬುಗಿಲೇಳುತ್ತದೆ. ಸಂನ್ಯಾಸಿ ಅರ್ಜುನನೆಂದು ತಿಳಿದಮೇಲಂತೂ ಬೆಬ್ಬೆರಗಾಗುತ್ತಾಳೆ. ಬಾಲ್ಯದಲ್ಲಿ ಅವನ ಹೆಸರು ಕೇಳಿದ್ದ ಆಕೆ ಅವನೊಡನೆ ಯುದ್ಧಗೊಳ್ಳಬೇಕೆಂದು ಬಯಸಿದ್ದವಳು, ಅವನನ್ನು ಕಂಡು ಧೂಲೀಗತ ಶೌರ್ಯವುಳ್ಳವಳಾದಳು. ಆಗ ಆ ಸಂನ್ಯಾಸಿ ಕಾಡಿನೊಳಕ್ಕೆ ಮರೆಯಾದುದನ್ನು ಕಂಡು ಆಕೆ ಮರುಗುತ್ತಾಳೆ. 'ಛೇ !

ಅತಾರ್ಕಿಕ ವಿಧಾನವಾಗಿ ಅವೈಚಾರಿಕ ಮಾರ್ಗವಾಗಿ ತೋರಿದರೂ ಅಲ್ಲೂ ಅದರದೆ ಆದ ತರ್ಕವಿಚಾರವುಂಟೆಂಬುದನ್ನು ಮರೆಯಬಾರದು.

ಕಾಮದ ನೆಲೆಯಲ್ಲಿ ಪ್ರಾಣಿಸ್ನೇಹ, ಹಸಿವೆಯ ನೆಲೆಯಲ್ಲಿ ಅದೇ ಪ್ರಾಣಿ ಸ್ನೇಹ, ಹಾಗೂ ಆ ಸ್ನೇಹದ ನೆಲೆಯಲ್ಲಿ ಆ ಎಲ್ಲ ಹಸಿವೆ – ಹೇಗೆ ನಡೆದುಕೊಳ್ಳುತ್ತವೆಂಬುದನ್ನೂ ಈ ಮೇಲೆ ನಿರೂಪಿಸಿದ ಪ್ರಸಂಗವಾದಮೇಲೆ ಬರುವ ಪ್ರಸಂಗಗಲ್ಲಿ ಸೊಗಸಾಗಿ ಚಿತ್ರಿಸುತ್ತಾರೆ. ದಟ್ಟ ಕಾಡಿನಲ್ಲಿ ಅಲೆದೂ ಅಲೆದೂ ದಾರಿತಪ್ಪಿದ ಗುತ್ತಿ ತನಗೆ ಪೋಲಿಸ್ ಪೇದೆಯ ಸಾವಿನ ಕಾರಣಕ್ಕಾಗಿ ಮರಣದಂಡನೆಯಾದೀತೆಂದು ನೆನೆದು ಹೌಹಾರುವುದು ಹೇಗಾದರೂ ತಲೆತಪ್ಪಿಸಿಕೊಂಡು ಆ ವಿಪತ್ತಿನಿಂದ ಪಾರಾಗಬಹುದೆಂದು ಯೋಚಿಸುವಾಗ ಅವನ ಕಣ್ಣಮುಂದೆ ತಿಮ್ಮಿಯ ಚಿತ್ರ ಬಂದು, ತಾನಿನ್ನು ಅವಳನ್ನು ಬಿಟ್ಟೆಲ್ಲಿ ತಪ್ಪಿಸಿಕೊಂಡು ಇರುವುದು ಎಂಬ ಒಂಟಿತನದ ಭಾವ ಬಂದೊಡನೆಯೆ ಗಳಗಳ ಬಿಕ್ಕುತ್ತ ತನ್ನ ಪಕ್ಕದಲ್ಲಿ ಕುಳಿತಿದ್ದ ತನ್ನ ನೆಚ್ಚಿನ ನಾಯನ್ನು ಬಿಗಿದಪ್ಪಿ ಭೋರಿಡುವಂತೆ ಅಳುವುದು – ಈ ಶ್ರೇಷ್ಠ ಚಿತ್ರ ಒಂದು ಕಡೆ ಇರಲಿ, ಇದೇ ನಾಯಿಗುತ್ತಿ, ಮುಂದೆ ಕಾಗಿನಹಳ್ಳಿಯಲ್ಲಿ ಹಸಿದು ಉಣ್ಣುವಾಗ ತನ್ನ ಮಂದೆ ಅವನ ಅನ್ನದ ರಾಶಿಯನ್ನೂ ತುತ್ತನ್ನೂ ಬಾಯನ್ನೂ ಲಾಳಿಬೀಸುವ ನೋಟದಿಂದ ನೋಡುತ್ತ ಕುಳಿತಿದ್ದ ನಾಯನ್ನು ಕಂಡು 'ಹಥೀ ! ಏನು ಹೊಟ್ಟೆಬಾಕ ಮುಂಡೇದೊ ಹಾಳ್

ಆತನಿಗೆ ನಮಿಸಲೂ ಇಲ್ಲ ; ಕ್ಷಮೆ ಕೋರಲೂ ಇಲ್ಲ. ನಾ ಸತ್ತಿದ್ದರೇ ಚೆನ್ನಾಗಿತ್ತು !' ಎಂದು ಹಳಿದುಕೊಳ್ಳುತ್ತಾಳೆ. ಠಾಕೂರರ ಚಿತ್ರ ಇದಾದರೆ, ಕುವೆಂಪು ಚಿತ್ರಾಂಗದೆಯ ಚಿತ್ರವಿದು : ಸ್ವಪ್ನದಲ್ಲಿ ತಾನು ಕಂಡಿದ್ದ ತೇಜೋಮೂರ್ತಿಯಂತಹ ಮೂರ್ತಿಯನ್ನು ವನವಿಹಾರದಲ್ಲಿ ಕಾಣುತ್ತಾಳೆ, ಚಿತ್ರಾಂಗದೆ. ಆ ಧ್ಯಾನಸ್ಥ ಸಂನ್ಯಾಸಿಯನ್ನು ಕಂಡು ಆ ಗಂಡುಡುಗೆಯ ವೀರಕನ್ಯೆಯ ಎದೆಯಲ್ಲಿ ಮೊದಲ ಬಾರಿಗೆ ಲಜ್ಜೆಯಾಡುತ್ತದೆ. ಅವಳನ್ನು ಕಂಡ ಸಂನ್ಯಾಸಿ 'ಆರು ನೀನೆಲೆ ತರುಣ ವೀರ ? ವಿಪಿನಾಂತರದಿ ಇನಿತು ಮುಂಬೊಳ್ತಿನೊಳಗೇಂ ಗೆಯ್ದು ತಿರುಗುತಿಹೆ? ನುಡಿ, ಅಂಜದಿರು ; ನಾವು ಮುನಿವ ಮುನಿವರರಲ್ಲ !' ಎನ್ನುತ್ತಾನೆ. ಆಶ್ವರ್ಯವೆಂದರೆ ಠಾಕೂರರ ಚಿತ್ರಾಂಗದೆಯಂತೆ ಇವಳು ಮೂಕವಿಸ್ಮಿತಳಾಗದೆ, ಅವನ 'ಅಂಜದಿರು' ಎಂಬ ಮಾತಿಗೆ ಅವಳ ಕ್ಷತ್ರ ತಾರುಣ್ಯ ಸೆಟೆದು ನಿಲ್ಲುತ್ತದೆ. "ಅಂಜುವವರಾವಲ್ಲ, ಅಂಜಿಕೆಯ ಕಂಡಿಲ್ಲ ! ಕೇಳಿಲ್ಲ ! ಅಂಜುಕುಳಿಗಳ ರಕ್ಷಣೆಯೆ ನಮ್ಮ ಕುಲಕರ್ಮ !' ಅಂಜದಿರು ! ಅಂಜದಿರು, ನುಡಿ' ಎನಲ್, ನೀನಾರ್ ಎಲೆ ತಪಸ್ವಿ?" ಎನ್ನುತ್ತಾಳೆ. ಠಾಕೂರರ ಚಿತ್ರಾಂಗಿ ಹೆಣ್ಣು, ಗಂಡುಡುಗೆಯಲ್ಲಿದ್ದರೂ ಕುವೆಂಪು ಚಿತ್ರಾ, ಕ್ಷಾತ್ರಶಿಕ್ಷಣ ಪಡೆದು ಬೆಳೆದು ಬಂದದ್ದರಿಂದ, ಹಾಗೂ ಸಹಜ ಅಭಿಮಾನದಿಂದಾಗಿ ಸೆಟೆದು ನಿಲ್ಲುವ ಛಲವಂತೆ. 'ಅಂಜದಿರು' ಎಂಬ ಮಾತು ಅವಳನ್ನು ಕೆರಳಿಸುತ್ತದೆ. ಪ್ರಣಯ – ಅಭಿಮಾನ, ಕಾಮ – ಅಹಂಕಾರಗಳ ಮೇಲಾಟದ ಅರಿವು ಕುವೆಂಪು ಅವರ ವೈಶಿಷ್ಟ್ಯ.



ನಾಯಿ!' ಎಂದು ಹಸಿವಿನ ನೆಲೆಯಲ್ಲಿ ನಿಂತು ನುಡಿಯುವುದೂ ; ಹಾಗಿದ್ದೂ ಆಗ ಅದೇ ನಾಯಿಯ ಒಂಟಿಕಣ್ಣಿನ ನೋಟವನ್ನು ಕಂಡು ಏಕೋ ಕರುಳಿರಿದಂತಾಗಿ ತಾನು ತಿನ್ನುತ್ತಿದ್ದ ಅನ್ನದ ಅರ್ಧವನ್ನೆ ಅದರ ಮುಂದಕ್ಕೆ ಇಟ್ಟುಬಿಡುವುದೂ – ಈ ಮತ್ತೊಂದು ಚಿತ್ರ ಮತ್ತೊಂದು ಕಡೆ ಇರಲಿ. ಈ ಎಲ್ಲ ಚಿತ್ರಗಳನ್ನು ಅಕ್ಕಪಕ್ಕದಲ್ಲಿಟ್ಟರೆ ಏನನ್ನಿಸುತ್ತದೆ ? ಸಮತಟ್ಟಾದ ನೆಲದಲ್ಲೆ ಕಾಲುವೆ ತೋಡಿ ನೀರನ್ನು ಹರಿಸುವಂತೆ ಕಾಣುತ್ತದೆಯೊ, ಅಥವಾ ನದಿಯನ್ನು ಪ್ರಕೃತಿಯೆ ಹರಿಸಿದಂತೆ ಇದೆಯೊ? ಈ ಒಂದು ಸಣ್ಣ ನಿದರ್ಶನದ ಉದ್ದೇಶ ಸ್ಪಷ್ಟವಾಗಿದ್ದಿರಬೇಕು. ಕಾದಂಬರಿಗಳಲ್ಲಿ ಕುವೆಂಪು, ಪಾತ್ರಗಳನ್ನಂತೂ ಹೇಗೂ ಬೌದ್ಧಿಕವಾಗಿ – ಯೋಚಿಸಿ ನುಡಿಸುವುದೂ ಇಲ್ಲ, ನಡೆಸುವುದೂ ಇಲ್ಲ.[೫] ಮನೋವಿಜ್ಞಾನದ ಅಭ್ಯಾಸ ಪಾತ್ರಸ್ವಭಾವಗಳನ್ನು ಬಿಡಿಸಲು ನೆರವಾಗಿದೆಯಾದರೂ ಇವರ ಈ ಪಾತ್ರಚಿತ್ರಣಕ್ಕೆಲ್ಲ ಜೀವನಾನುಭವ–ಮಾನವ ಮನೋವರ್ತನದ ಅರಿವು ಮಾತ್ರವೆ ಪ್ರೇರಕವಾಗಿದೆ. ಯೂಂಗ್ ಹೇಳುವಂತೆ, ಮನೋವಿಜ್ಞಾನದ ಅರಿವಿನಿಂದ ರಚಿಸಿದ ಕೃತಿಗಳು ಆ ವಿಜ್ಞಾನಿಯ ಗೌರವಾಧ್ಯಯನವನ್ನೆಂತೂ ಕೆರಳಿಸಲಾರವು ; ಮೇಲಾಗಿ ಜೀವನಾನುಭವ ಹಾಗೂ ಮಾನವಮನೋವರ್ತನಗಳ ಅರಿವಿನಿಂದ ಹುಟ್ಟಿಕೊಂಡ ಕಾವ್ಯಕೃತಿಗಳು ಮಾತ್ರವೆ ಮನೋವಿಜ್ಞಾನಿಯ ಗಮನವನ್ನು ಸೆರೆಹಿಡಿದು ಅವನ ಅಧ್ಯಯನಕ್ಕೆ ಆಧಾರಗಳಾಗುತ್ತವೆ. ಈ ಹೇಳಿಕೆಯನ್ನು ಕುವೆಂಪು ಚೆನ್ನಾಗಿ ತಿಳಿದಿದ್ದಾರೆ.

ಈ ಕಾದಂಬರಿಗಳ ಹಿನ್ನೆಲೆಯಲ್ಲಿ ವಿವೇಚಿಸಿದಾಗ ಶ್ರೀ ರಾಮಾಯಣದರ್ಶನಂ ಮಹಾಕಾವ್ಯವಾಗಲಿ, ಚಿತ್ರಾಂಗದಾ ಖಂಡಕಾವ್ಯವಾಗಲಿ, ಅಥವಾ ಅವರ ಪ್ರಧಾನ ನಾಟಕಗಳಾಗಲಿ ಮತ್ತೊಂದು ಆಯಾಮಕ್ಕೆ ಸೇರಿದ

೫. ಕಾನೂರು ಹೆಗ್ಗಡತಿಯ ಒಂದು ಸಣ್ಣ ಪ್ರಸಂಗವನ್ನಿಲ್ಲಿ, ಲಕ್ಷ್ಮೀ–ಸಿಂಗಪ್ಪಗೌಡರ ನಡುವೆ ಆಗುವ ಒಂದು ಸಂವಾದವನ್ನಿಲ್ಲಿ ನೆನೆದುಕೊಳ್ಳಬಹುದು; "ಸಿಂಗಪ್ಪಗೌಡರು ಹೊದ್ದುಕೊಂಡಿದ್ದ ಶಾಲನ್ನು ಹಿಡಿದುಕೊಂಡು ಆ ಹುಡುಗಿ, 'ಇದು ಅಪ್ಪಯ್ಯನ ಶಾಲು !' ಎಂದು ರಾಗ ಎಳೆಯುತ್ತಾಳೆ. 'ಒಳ್ಳೆ ಹುಡುಗಿ ನೀನು ! ನಾನಿವತ್ತು ತೀರ್ಥಹಳ್ಳಿಯಿಂದ ತಂದೀನಿ.' 'ಹೂಂ, ನಂಗೊತ್ತು ಇದಪ್ಪಯ್ಯನ ಶಾಲು' 'ಅದು ಹ್ಯಾಗೆ ಗೊತ್ತು ? ಏನು ಹೆಸರು ಬರೆದಿದೆಯೇನು?' ಲಕ್ಷ್ಮೀ ಶಾಲನ್ನು ತನ್ನ ಮೂಗಿನ ಹತ್ತಿರ ಹಿಡಿದುಕೊಂಡು 'ಅಪ್ಪಯ್ಯನ ವಾಸನೆ ಇದೆ. ನೋಡಿ !' ಎಂದಳು. ಎಲ್ಲರೂ ಗೊಳ್ಳೆಂದು ನಗತೊಡಗಿದರು. ಲಕ್ಷ್ಮಿ ಮೊದಲು ಅಪ್ರತಿಭಳಾದರೂ ಕಡೆಗೆ ತಾನೂ ಗಹಗಹಿಸಿ ನಕ್ಕಳು.' – ಇಲ್ಲಿ ತರ್ಕವನ್ನೂ ಮೀರಿ ಪ್ರವೃತ್ತಿ ವರ್ತನ ತನ್ನದೆ ಆದ ವಾದಸರಣಿಯನ್ನು ಹೇಗೆ ಮಂಡಿಸುತ್ತದೆಂಬುದನ್ನು ಕಾಣಬಹುದು.

ಕೃತಿಗಳಂತೆ ಕಾಣುತ್ತವೆ. ವಾಸ್ತವತೆಯ ಪರಮಾವಧಿಯನ್ನು ಗಮನದಲ್ಲಿಟ್ಟುಕೊಂಡೂ ಅತಿವಾಸ್ತವದ ಎಳೆಗಳನ್ನೂ ಬಿಡಿಸುವ : ಸಹಜಪ್ರವೃತ್ತಿಯ ಪ್ರೇರಣಗಳಂತೆ ನಡೆಯುವುದನ್ನು ಚಿತ್ರಿಸುತ್ತಲೆ ಮೌಲ್ಯಪ್ರೇರಿತವಾಗಿ ನಡೆಯಲಾಶಿಸುವುದನ್ನೂ ಚಿತ್ರಿಸುವ ಚದುರನ್ನು ಕಾದಂಬರಿಯಲ್ಲಿ ಕುವೆಂಪು ಮೆರೆದಿದ್ದಾರೆ. ಆದರೆ, ಮೇಲೆ ಸೂಚಿಸಿದ ಕೃತಿಗಳಲ್ಲಿ ವಾಸ್ತವತೆ ಅತಿ ವಾಸ್ತವತೆಗೆ ಆದರ್ಶಕ್ಕೆ, ಸಹಜಪ್ರವೃತ್ತಿಗಳು ಅತಿಶಯ ಪ್ರವೃತ್ತಿಗಳಿಗೆ, ಪ್ರತಿಕೃತಿ ಕಲಾವಿಧಾನ ಪ್ರತಿಮಾವಿಧಾನಕ್ಕೆ ತಲೆಬಾಗುವುದನ್ನು ಕಾಣುತ್ತೇವೆ. ಒಬ್ಬನೆ ಕೃತಿಕಾರ ಈ ಎಲ್ಲ ಕೃತಿಗಳನ್ನೂ ಬರೆದನೆ ಎಂಬ ಆಶ್ಚರ್ಯ ಉಂಟುಮಾಡುವಷ್ಟು ಸಂಕೀರ್ಣವಾಗಿದೆ ಕುವೆಂಪು ಕೃತಿಸೃಷ್ಟಿ.

ಬೆರಳ್‌ಗೆ ಕೊರಳ್, ಶ್ಮಶಾನ ಕುರುಕ್ಷೇತ್ರಗಳಂತಹ ಶ್ರೇಷ್ಠ ನಾಟಕಕೃತಿಗಳಲ್ಲೂ ಕವಿ ಸಾಮಯಿಕ ಅರ್ಥಗಳಷ್ಟನ್ನೆ ಬಿಡಿಸದೆ ಚಿರಕಾಲಿಕ ಮೌಲ್ಯಗಳನ್ನು ಅರಳಿಸಿದ್ದಾರೆ. ಮಹಾಭಾರತ ಕಥೆ ನಮ್ಮ ಕಾಲಕ್ಕೆ ಹರಿದುಬಂದು ತನ್ನ ಸೂಕ್ಷ್ಮಾರ್ಥಗಳನ್ನು ಕಂಡುಕೊಳ್ಳುವ – ಕಾಣಿಸುವ ಹಾಗೆ ಈ ಎರಡೂ ನಾಟಕಗಳನ್ನು ರಚಿಸಿದ್ದಾರೆ, ಕುವೆಂಪು. ಬೇಡನ ಮಗನಿಗೆ ಶಸ್ತ್ರವಿದ್ಯಾಭ್ಯಾಸವನ್ನೂ ನೀಡದೆ ಅವನ ಹೆಬ್ಬೆರಳನ್ನೂ ಕತ್ತರಿಸುವ ಜನರ ಸ್ಥೂಲ ಕಥೆ ಆಧುನಿಕ ಮನಸ್ಸಿಗೆ ತೀವ್ರರೋಷವನ್ನುಂಟುಮಾಡಿದರೂ ಕವಿ ನಿರ್ವಹಿಸುವ ರೀತಿಯಿಂದಾಗಿ ಇಡೀ ಮಹಾಭಾರತವೆ ಈ ಕಥಾಕೇಂದ್ರದಲ್ಲಿ ಅಭಿನಯಗೊಂಡು ವಿಸ್ತೃತಗೊಳ್ಳುತ್ತದೆ. ಕೇವಲ ವರ್ಗವರ್ಣಗಳ ಶೋಷಣ ಸಮಸ್ಯೆಯಾಗಬಹುದಾಗಿದ್ದ, ಅಥವಾ ಮೂಢಗುರುಭಕ್ತಿಯ ಪ್ರತೀಕತವಾಗಬೇಕಾಗಿದ್ದ ಈ ಏಕಲವ್ಯ ಕಥೆ ಈ ನಾಟಕದಲ್ಲಿ ಪ್ರಬುದ್ಧ ಗುರುಭಕ್ತಿಯ ಕಥೆಯಾಗಿ, ಅರ್ಪಣದ – ಯಜ್ಞದ ಕಥೆಯಾಗಿ, ವ್ಯಕ್ತಿ ಕರ್ಮ – ವಿರಾಡ್ ಧರ್ಮಗಳ ತಳುಕಿನ ಕಥೆಯಾಗಿ ಪರಿಣಮಿಸುತ್ತದೆ. ಏಕಲವ್ಯನ ಗುರುಭಕ್ತಿಯನ್ನು ಪ್ರೇರಿಸಿದ ದ್ರೋಣ ತನ್ನ ಮೂಲಕ ವ್ಯವಹರಿಸುವ ಗುರು ತತ್ತ್ವದ ಮಹಿಮೆಯನ್ನು ಶಿಷ್ಯನ ಮೂಲಕ ಕಂಡುಕೊಳ್ಳುವ ಜೊತೆ ಜೊತೆಗೇ, ತನ್ನ ವ್ಯಕ್ತಿಕರ್ಮದ ವಕ್ರರೇಖೆಗಳ ಮೂಲಕವೇ ವಿಶ್ವಮರ್ಮದ ಪೂರ್ಣವೃತ್ತ ನಿರ್ಮಾಣಗೊಳ್ಳುತ್ತಿರುವುದನ್ನೂ ಕಂಡುಕೊಳ್ಳತ್ತಾನೆ. ಕಾಡಿನಲ್ಲಿ ಹಾಯಾಗಿ ತಂದೆ ಮಕ್ಕಳೊಡನೆ ಇದ್ದ ದ್ರೋಣ ತನ್ನ ತಂದೆಯ ಹಠಾತ್ ಮರಣದಿಂದಾಗಿ ಹಸಿವೆ ಪೂರೈಸಿಕೊಳ್ಳುವ ಅನಿವಾರ್ಯಕ್ಕೆ ಬಲಿಯಾಗುತ್ತಾನೆ. ಸಹಪಾಠಿ – ಮಿತ್ರನಾದ ದ್ರುಪದರಾಜನಲ್ಲಿ ಪರಿಹಾರ ಕಾಣಲು ಹೋಗಿ ಸಮಸ್ಯೆಯನ್ನು ಜಟಿಲಗೊಳಿಸಿಕೊಳ್ಳುತ್ತಾನೆ. ಪರಿಹಾರವಾಗದ ಹಸಿವೆ ಅವಮಾನಪ್ರತೀಕಾರದ ದಳ್ಳುರಿಯಾಗಿ ಬೆಳೆದುಕೊಳ್ಳುತ್ತದೆ. ರಾಜತ್ವದ ಮತ್ತಿನಲ್ಲಿ ತನ್ನನ್ನು ಹೀಯಾಳಿಸಿ



ಧಿಕ್ಕರಿಸಿದ ದ್ರುಪದನನ್ನು ಪ್ರತ್ಯವಮಾನಕ್ಕೆ ದೂಡಬೇಕೆಂಬ ಬೇಗೆಗೆ ಸಿಕ್ಕಿಕೊಂಡ ದ್ರೋಣ ತನ್ನ ಮೊದಲ ಹಸಿವೆಗಿಂತ ಶತಾಧಿಕವಾದ ಹಸಿವೆಯ ಬೇಗೆಗೆ ಬೀಳುತ್ತಾನೆ. ಪಾಂಡವಕೌರವರ ಮಕ್ಕಳಿಗೆ ಪಾಠಹೇಳಿ ತಾತ್ಕಾಲಿಕವಾಗಿ ಹೊಟ್ಟೆ ತುಂಬಿಕೊಂಡರೂ ಶಾಶ್ವಾತ ಫಲದ ಕಡೆಗೇ – ಪ್ರತೀಕಾರ ಲಾಭದ ಕಡೆಗೇ – ಕಣ್ಣಿಟ್ಟಿರುತ್ತಾನೆ. ಅದರ ಕಾರಣದಿಂದಲೆ ಅರ್ಜುನನನ್ನು ಬೆಳೆಸುತ್ತಾನೆ. ಅವನಿಗೆ ಅರ್ಹತೆ ಇದ್ದುದರ ಜೊತೆಗೆ ತನ್ನ ಒಲವರದಿಂದಾಗಿ ಅವನ ಬಗೆಗೆ ಹೆಚ್ಚು ಓತುಕೊಳ್ಳುತ್ತಾನೆ. ಅವನಿಗೆ ತಾನು ಅತಿಸಮಾಧಾನದಿಂದ ಕೊಟ್ಟ ವರವೆ ತನ್ನನ್ನು ಅಷ್ಟುಬೇಗನೆ ಇಗ್ಗತ್ತರಿಯಲ್ಲಿ ಸಿಕ್ಕಿಸುತ್ತದೆಂದು ಅವನೆಂದೂ ಊಹಿಸಿರಲಿಲ್ಲ. (ಅದಲ್ಲದೆ ಅರ್ಜುನನನ್ನು ಹೆಚ್ಚು ಬೆಳೆಸುವ ಸಲುವಾಗಿ ಕರ್ಣನನ್ನೂ, ಉಳಿದ ಕೌರವರನ್ನೂ ನಿರ್ಲಕ್ಷಿಸಿದ. ಅದೆಲ್ಲ ಮಹಾಭಾರತದ ವ್ಯೂಹರಚನೆಗೆ ಸಾಮಗ್ರಿ ಒದಗಿಸಿಕೊಟ್ಟಿದೆ.) ಅದರ ಪರಿಹಾರ ದಾರಿಯಲ್ಲಿ ಹೊರಟಾಗ ಅವನಿಗೆ ತಾನು ಹಿಂದೆ ನಡೆದುಬಂದ – ತನ್ನನ್ನು ವಿಧಿ ನಡೆಸಿತಂದ – ಹಾದಿಯೆಲ್ಲ ಕಂಡುಬರುತ್ತದೆ. ಮುಂದೆ ನಡೆಯಲೆ ಬೇಕಾದ ಹಾದಿಯೂ ಕಂಡುಬರುತ್ತದೆ. ವ್ಯಕ್ತಿಸ್ವಭಾವದ – ಅಹಂಕಾಮಗಳ – ಮೂಲಕವಾಗಿಯೆ ನಡೆಯುವ ಕರ್ಮಗಳು ಸರಳ ನಿಷ್ಕೃತಿಯನ್ನು ಕಂಡುಕೊಳ್ಳುವ ಮಾರ್ಗದಲ್ಲಿ ಹೇಗೆಲ್ಲ ಜಟಿಲವಾಗುತ್ತ ಸಂಕೀರ್ಣವಾಗಿ ಕಡೆಗೆ ನಿರ್ದಿಗಂತವಾಗುತ್ತವೆ ಎಂಬುದನ್ನೂ ಅವನು ಕಂಡುಕೊಳ್ಳುತ್ತಾನೆ. ಪ್ರಾರಂಭದಲ್ಲೆ ಬೀಜರೂಪದ ಕರ್ಮವನ್ನು ಮುಷ್ಟಿಗ್ರಹಣ ಮಾಡಲಾರದ ತಾನು ಹೇಗೂ ಆಕರ್ಮದ ಜಟಿಲ ವೃಕ್ಷರೂಪವನ್ನು ಬಿಗಿಹಿಡಿದುಕೊಳ್ಳಬರುವುದಿಲ್ಲವೆಂದು ವೇದ್ಯವಾಗುತ್ತದೆ, ದ್ರೋಣನಿಗೆ. ಈ ತೊಳಲಾಟ ಅರಿವುಗಳ ಮೂಲಕವೇ ಅವನು ಕರ್ಮನಿಷ್ಕೃತಿಯ ದಾರಿಯನ್ನರಸುತ್ತಾನೆ. ಏಕಲವ್ಯನ ಹೆಬ್ಬೆರಳು ತಾತ್ಕಾಲಿಕ ಪರಿಹಾರವಾದರೂ ಶಾಶ್ವತನಿಷ್ಕೃತಿಯಲ್ಲ ; ಮೇಲಾಗಿ ಆ ಹಾದಿಯ ನಡುಘಟ್ಟವಾಗಿ ಅವನಿಗೆ ತೋರುತ್ತದೆ. ಅವನ ಬೆರಳು ಮರಿಗೆ ಮರಿಯಿಕ್ಕುತ್ತ ಇಕ್ಕುತ್ತ ತನ್ನ ಕೊರಳನ್ನು ಆಹುತಿಗೊಳ್ಳುವುದರಲ್ಲಿ ಸಮಾಧಾನಗೊಳ್ಳುತ್ತದೆಯೆಂಬ ಅರಿವನ್ನೂ ಪಡೆಯುತ್ತಾನೆ.

ದ್ರೋಣಪಕ್ಷದಲ್ಲಿ ಹೀಗೆ ಕರ್ಮದ ಕರ್ಮನಿಷ್ಕೃತಿಯ ಘಟನೆಯಾಗಿ ಪರಿಣಮಿಸುವ ಏಕಲವ್ಯ ಪ್ರಸಂಗ, ಸ್ವಯಂ ಏಕಲವ್ಯನಿಗೆ ಗುರುಸಾಕ್ಷಾತ್ಕಾರದ, ತನ್ನನ್ನು ತನ್ನ ಮೂಲ ಗುರುಸತ್ತ್ವಕ್ಕೆ ಅರ್ಪಿಸಿಕೊಳ್ಳುವ ಯಜ್ಞಕರ್ಮದ ಸಂಕೇತವಾಗಿ ಅನುಭೂತವಾಗುತ್ತದೆ. ಏಕಲವ್ಯ ಕನಸಿನಲ್ಲಿ ಕಂಡಿದ್ದ ಹುಲಿಯ ಬೇಟೆ ; ಆ ಸತ್ತ ಹುಲಿಯಿಂದೆದ್ದ ನೀಲದೇಹಿಯ ಸರ್ಪಬಾಹುಗಳು ತನ್ನನ್ನು

ಅಪ್ಪಿಕೊಳ್ಳಲು ಚಾಚಿಕೊಳ್ಳುವುದು ; ತಾನು ಆ ತೋಳುಗಳಲ್ಲಿ ಆಲಿಂಗತನಾಗಿ ಮುದಗೊಳ್ಳುವುದು – ಎಲ್ಲವೂ ಮಹಾಭಾರತದ ಸೂತ್ರಧಾರಿಸತ್ತ್ವವಾದ ಶ್ರೀಕೃಷ್ಣ ಶಕ್ತಿಯನ್ನೂ ಅದರಲ್ಲಿ ಏಕಲವ್ಯ ಐಕ್ಯವಾಗುವುದನ್ನೂ ಸಂಕೇತಿಸುತ್ತದೆ.

ಕುಮಾರವ್ಯಾಸನಂತಹ ಭಕ್ತಕವಿಗಳು ಮಹಾಭಾರತಕಥೆಯ ಸೂತ್ರಧಾರ ಶಕ್ತಿಯಾಗಿ ಶ್ರೀಕೃಷ್ಣಶಕ್ತಿ ವ್ಯವಹರಿಸಿರುವುದನ್ನು ಕಂಡಿದ್ದಾರೆ. ಆ ಶಕ್ತಿಯೆ ತನ್ನ ಇಚ್ಛೆಯ ಲೀಲಾನಾಟಕವನ್ನು ನೆರವೇರಿಸಿಕೊಳ್ಳುವ ಸಲುವಾಗಿ ಒಬ್ಬೊಬ್ಬರನ್ನು ಒಂದೊಂದು ಬಗೆಯಿಂದಾಗಿ ರಂಗಸ್ಥಲದಿಂದ ನಿರ್ಗಮನಗೊಳಿಸುತ್ತದೆ. ಭೀಷ್ಮರನ್ನು ವಾತ್ಸಲ್ಯ ಜಾಗ್ರತಗೊಳಿಸುವ ಮೂಲಕವಾಗಿ, ದ್ರೋಣರನ್ನು ಪುತ್ರಮೋಹ ಹಾಗೂ ಸ್ವಧರ್ಮ ಜಾಗ್ರತಿಯ ಮೂಲಕವಾಗಿ, ಕರ್ಣನನ್ನು ನಾನಾ ರೀತಿಯಿಂದ ನಾನಾ ಸ್ತರದಲ್ಲಿ, ವಿದುರನನ್ನು ದುರ್ಯೋಧನಭರ್ತ್ಸನದ ಮೂಲಕವಾಗಿ – ಕೌರವಪಕ್ಷದಿಂದ ಆಚೆಗೆ ನಿವಾರಿಸುತ್ತದೆ. ಆ ಶ್ರೀಕೃಷ್ಣಶಕ್ತಿಯೆ ಕುವೆಂಪು ದೃಷ್ಟಿಯಲ್ಲಿ ಮಹಾಭಾರತ ಆದ್ಯಂತವೂ ಕೆಲಸ ಮಾಡಿದೆ. ದ್ರೋಣನ ಅಹಂಕಾರಕೃತವಾದ ಕರ್ಮದಿಂದ ಮೂಡಿದ ಕರ್ಮಪರಂಪರೆಯಾಗಿ. ಏಕಲವ್ಯನ ಬೆರಳನ್ನು ಬಲಿತೆಗೆದುಕೊಳ್ಳುವ ವಿಧಾನದಿಂದ ಆ ಶಕ್ತಿ ಕೆಲಸಮಾಡಿದೆ. ಆದರೆ ಏಕಲವ್ಯನ ಬೆರಳು ಬಲಿಯಾಗದೆ ಅವನ ಅರ್ಪಣವಾಗಿ, ಯಜ್ಞಕರ್ಮವಾಗಿ ಪರಿಣಮಿಸುತ್ತದೆ. ಅವನು ಭಗವದ್ ಇಚ್ಛೆಯ ಲೀಲಾನಾಟಕದ side wings ನಲ್ಲಿ ಮರೆಗೊಳ್ಳುವುದು ತಪಃಫಲವಾಗಿ ಸಿದ್ಧವಾಗುತ್ತದೆ. ಭಗವಂತನ ಬತ್ತಳಿಕೆಯಲ್ಲಿ ಹಾಯಾಗಿ ಆತುರಾತುರಗೊಳ್ಳದೆ ತನ್ನ ಸರದಿಗಾಗಿ ಕಾಯುತ್ತಾ ಕುಳಿತಿರುವ ಮತ್ತೊಂದು ತಪಸ್ಸಿಗೆ ತೊಡಗುತ್ತಾನೆ ಏಕಲವ್ಯ. ಇವನನ್ನು ಸ್ವೀಕರಿಸಿಕೊಳ್ಳುವ ಮೂಲಕ ಪಾಂಡವ ವಿಜಯವನ್ನು ಸಿದ್ಧಮಾಡಿಕೊಳ್ಳುತ್ತದೆ ಆ ಶಕ್ತಿ.[೬] ಕರ್ಣಸತ್ತ್ವವನ್ನು ದುರ್ಬಲಗೊಳಿಸಲು ಅವನ ಹುಟ್ಟಿನಿಂದಲೆ ಇಂದ್ರಾದಿ ಶಕ್ತಿಗಳು

---

೬. ಮಹಾಭಾರತದ ಯುದ್ಧವಾಗುವಾಗ ಏಕಲವ್ಯನಂತಹ ಗುರುಭಕ್ತ ಎಲ್ಲಿರುತ್ತಿದ್ದ? ಗುರುಸಮೀಪದಲ್ಲಲ್ಲದೆ? ಅವನಂತಹ ಶಿಷ್ಯನ ಸಾಹಚರ್ಯೆಯಿರುತ್ತಿದ್ದರೆ ಯಾರು ತಾನೆ ದ್ರೋಣವಧೆ ಮಾಡಬರುತ್ತಿತ್ತು? ಮಾಡಿದ್ದರೂ ಅವನನ್ನು ಕೊಲ್ಲಬರುತ್ತಿತ್ತು. ಇತರರನ್ನು ನಿವಾರಿಸಿದಂತೆ ನಿವಾರಿಸಬರುತ್ತಿತ್ತು? ಆ ವಿದುರನ ಕೈಯಲ್ಲೇ ಅವನ ಧನುಸ್ಸನ್ನು ಮುರಿಸದಿದ್ದರೆ ದುರ್ಯೋಧನವಧೆ ಎಲ್ಲಿ ಸಾಧ್ಯವಿತ್ತು? ಈ ಕಾರಣದಿಂದಾಗಿಯೇ ಶ್ರೀಕೃಷ್ಣ ಶಕ್ತಿ ಇವನನ್ನು ನಿವಾರಿಸಿಕೊಳ್ಳುತ್ತದೆ. ಏಕಲವ್ಯನ ಸಾಧನೆಯಿಂದಾಗಿ ಆ ಕಾರ್ಯವೆ ಅವನ ಅರ್ಪಣಮಾರ್ಗವಾಗುತ್ತದೆ.



ಉದ್ಯುಕ್ತರಾಗಿರಲಿಲ್ಲವೆ? ಆದರಿಲ್ಲಿ ಆಗುವುದು ಏಕಲವ್ಯನ ವಧೆಯೂ ಅಲ್ಲ, ಹತ್ಯೆಯೂ ಅಲ್ಲ. ತೇಜೋವಧೆರೂಪದ ತೇಜೋವರ್ಧನ. ಮಹಾತೇಜೋಮೂಲದಲ್ಲಿ ಈ ತೇಜಸ್ಸಿನ ಸಮರ್ಪಣ.

ಹೀಗೆ ಸೂತ್ರಧಾರ ಕಾರ್ಯ ನಿರ್ವಹಿಸುವ ಶಕ್ತಿಯೂ ತನ್ನ ಲೋಕಕರ್ಮಜಟಿಲತೆಯಿಂದ ಮುಕ್ತವಾಗುವುದು ಕರ್ಮನಿಷ್ಕೃತಿಯ ಮೂಲಕವೆ ಆಗಿದೆ. ತಂದೆ ದ್ರೋಣನ ಸಾವಿನಿಂದ ಸಿಡಿದೆದ್ದ ಅಶ್ವತ್ಥಾಮ ನಿಷ್ಪಾಂಡವಮಂತ್ರ ಜಪಿಸುವುದು, ಕಡೆಯಲ್ಲಿ ಉತ್ತರೆಯ ಗರ್ಭಕ್ಕೆ ಅಭಿಮಂತ್ರಿಸುವುದೂ ; ತನ್ನ ಮಕ್ಕಳನ್ನೆಲ್ಲ ಆಹುತಿ ತೆಗೆದುಕೊಂಡನಲ್ಲ ಎಂದು ದುಃಖಭೀಕರೆಯಾದ ಗಾಂಧಾರಿ ಕೃಷ್ಣವಂಶ ನಾಶವಾಗಲೆಂದು ಶಪಿಸುವುದೂ ; ಶ್ರೀ ಕೃಷ್ಣನ ಮುಂದೆ ಅವನ ವಂಶವೆಲ್ಲ ಭೂಗತವಾಗುವುದು ಹಾಗೂ ಅವನು ತನ್ನ ನಿರ್ಯಾಯಣದ ಮಾರ್ಗ ತಿಳಿದು ಯೋಗಸ್ಥನಾಗಿ ಮಲಗಿದ್ದಾಗ ಬೇಡನ ಬಾಣಕ್ಕೆ ಅಸುನೀಗುವುದೂ – ಈ ಎಲ್ಲ ಘಟನೆ ವ್ಯಾಸಭಾರತದಲ್ಲಿ ಬರುತ್ತದೆ. ಅದನ್ನೆಲ್ಲ ಧ್ವನಿಸುವಂತೆ 'ಕರ್ಮದ ಪಾಂಗು ಮರಿಗೆ ಮರಿ ಬೆರಳ್‌ಗೆ ಕೊರಳ್' ಎಂಬ ಮಾತು ಬರುತ್ತದೆ. 'ಕೊರಳ್‌ಗೆ ಕರುಳ್, ಕರುಳ್‌ಗೆ ಕುರುಳ್' ಎಂಬ ನಾಟಕವನ್ನೂ ಕುವೆಂಪು ಮಹಾಭಾರತದ ಮೇಲೆ ತಿಳಿಸಿದ ಕಥಾಧಾರದ ಮೇಲೆ ಬರೆಯಬೇಕೆಂದಿದ್ದರು.

ಹೀಗೆ ಈ ನಾಟಕ ಸಮಗ್ರ ವ್ಯಾಸಭಾರತದ ದರ್ಶನ ಮಾಡಿಸುವ ಶಕ್ತಿನಾಟಕವಾಗಿದೆ. ಇಲ್ಲಿ ಬರುವ ಭಾಷೆ ಹಳೆಗನ್ನಡಗಂಧಿಯಾಗಿದ್ದರೂ ಸಮಕಾಲೀನ ಸತ್ತ್ವದಿಂದ ಕೂಡಿದೆ ; ತುಂಬಾ ಪರಿಣಾಮವತ್ತಾಗಿದೆ. ನಾಟ್ಯಛಂದಸ್ಸು ಮುಕ್ತಛಂದಸ್ಸಿನಂತಿದ್ದರೂ ಶ್ರೀ ರಾಮಾಯಣದರ್ಶನಂ ಕಾವ್ಯದ ಮಹಾಛಂದಸ್ಸಿನ ಒಂದು ವಿಸ್ತರಣವೇ ಆಗಿದೆ.

ಕಾಲದ ದೃಷ್ಟಿಯಿಂದ ಬೆರಳ್‌ಗೆ ಕೊರಳ್ ನಾಟಕ ರಾಮಾಯಣದರ್ಶನದ ಜೊತೆಯಲ್ಲಿ ಹುಟ್ಟಿಕೊಂಡದ್ದು. ಸತ್ತ್ವದ ದೃಷ್ಟಿಯಿಂದಲೂ ಆ ಪರ್ವತಶ್ರೇಣಿಯಲ್ಲೆ ಬರುವ ಭೀಮಶಿಖರವಾಗಿದೆ. ಆದರೆ ಇವೆಲ್ಲಕ್ಕೂ ಮೂವತ್ತು ವರ್ಷ ಮುಂಚೆ ಹುಟ್ಟಿಕೊಂಡ ಶ್ಮಶಾನಕುರುಕ್ಷೇತ್ರ ನಾಟಕವಾದರೂ ಅದೇ ಶ್ರೇಣಿಯ ಮುನ್ನೆಲೆಯ ಶಿಖರವಾಗಿ ನಿಂತಿದೆ. ಇಲ್ಲಿನ ಭಾಷೆ ಮಹಾಛಂದಸ್ಸಿನ ಭಾಷೆಯಲ್ಲ ; ಕುಮಾರವ್ಯಾಸಭಾರತದ ಭಾಷೆ, ಪ್ರಾಯಃ ಅದಕ್ಕಿಂತ ಸರಳವಾದ ಭಾಷೆ, ಹಳೆಗನ್ನಡ – ನಡುಗನ್ನಡ ಗಂಧಿ ಭಾಷೆಯಾದರೂ. ಆದರೆ ಅಷ್ಟೇ, ಇವುಗಳಷ್ಟೆ, ಪರಿಣಾಮಕಾರಿಯಾದ ಭಾಷೆ. ಛಂದಸ್ಸಾದರೂ ಮಹಾಛಂದಸ್ಸಾಗುತ್ತಿರುವ ಸರಳರಗಳೆ. ಇಲ್ಲಿಯ ಕಥೆ ಮಹಾಭಾರತ ವಿಜಯಾನಂತರದ ಕಥೆ ; ಶ್ಮಶಾನವಾದ

ಕುರುಕ್ಷೇತ್ರದ ಕಥೆ. ಕುಮಾರವ್ಯಾಸ ಪಂಪರು ಪಾಂಡವ ವಿಜಯದಲ್ಲಿ ಮಹಾಭಾರತವನ್ನು ಮುಕ್ತಾಯ ಮಾಡಿದ್ದರೂ ವ್ಯಾಸಕಥೆ ಅನಂತರದ ಘಟನಾಪರಂಪರೆಯನ್ನೆ ತೆರೆಯುತ್ತ ಮಹಾಪ್ರಸ್ಥಾನದಲ್ಲಿ ಎಲ್ಲವನ್ನೂ ಕಳಚಿಸುತ್ತ ಕಡೆಗೆ ಸ್ವರ್ಗಾರೋಹಣದಲ್ಲಿ ಇದ್ದ ಧರ್ಮಜನ ದೇಹವನ್ನೂ ಕಳಚಿಬಿಡುತ್ತದೆ.[೭] ಶ್ಮಶಾನಕುರುಕ್ಷೇತ್ರದ ಕಥೆ ಆ ಹರಹಿನ ಕಥೆಯ ಒಂದು ದೊಡ್ಡ ಸೆರಗನ್ನು ಒಳಗೊಂಡು, ಅಲ್ಲೂ ಬಾರದ ಮತ್ತೊಂದು ಭವಿಷ್ಯತ್ ಕಥೆಯನ್ನೂ ತೆರೆದು ತೋರುತ್ತದೆ.

ದ್ವಾಪರ – ಕಲಿಪುರುಷರ ಸಂಭಾಷಣೆಯಿಂದ ಪ್ರಾರಂಭವಾಗುವ ಕಥೆ ಕೃಷ್ಣ–ರುದ್ರರ ಸಂವಾದದಿಂದ – ಮುಂಬರುವ ಕಲಿಯುಗದ ಮುಂಗಾಣಿಕೆಯಿಂದ ಮುಗಿಯುತ್ತದೆ. ತನ್ನ ಯುಗದ ಸಮಸ್ತ ಸಾಧನೆಯೂ ಸರ್ವನಾಶದಲ್ಲೆ ಸಾಫಲ್ಯವನ್ನು ಕಂಡಿರುವಾಗ ತನ್ನ ಅಧಿಕಾರವನ್ನು ಕಲಿಯುಗಾಧಿಪತಿಗೆ ಒಪ್ಪಿಸಬೇಕಾದ ಕರುಣಪೂರ್ಣ ಸ್ಥಿತಿಯಲ್ಲಿರುವ ದ್ವಾಪರನ ನೈರಾಶ್ಯವನ್ನೂ ; ಇನ್ನೂ ಆಧಿಪತ್ಯದ ಹೊಣೆಗಾರಿಕೆಯನ್ನಾಗಲಿ ಕೃಷಿಯನ್ನಾಗಲಿ ಕಂಡಿಲ್ಲದ ಕಲ್ಕಿ ಪಡುವ ಉತ್ಸುಕತೆಯನ್ನೂ ತೋರುವ ಆಶಾವಾದಗಳನ್ನೂ ಮೊದಲ ದೃಶ್ಯ ಪರಿಣಾಮವತ್ತಾಗಿ ಮೂರ್ತೀಕರಿಸುತ್ತದೆ. ಸಾಧನೆಯೆಲ್ಲ ಸಮಾಧಿಗೊಂಡಿತಲ್ಲ ಎಂಬ ದೃಷ್ಟಿಯಂತೆಯೆ, ಮರುಸೃಷ್ಟಿಗೆ ಅದೇ ಫಲಭರಿತ ನೆಲವಾಗುತ್ತದೆಂಬ ದೃಷ್ಟಿಯೂ ಬರುತ್ತದೆ. ನವಗರ್ಭಧಾರಣಕ್ಕೆ ಗರ್ಭಶೋಧನವೂ ಅಗತ್ಯವೆಂಬ ಭಾವ ಬರುತ್ತದೆ. ಆದರೆ

---

೭. ಮಹಾಭಾರತವೆಂದರೆ ಜಯದ ಕಥೆ ಮಾತ್ರವೆ ಆಗಿದೆ ; ಮುಂದಿನದೆಲ್ಲ ಅಪಸೃಷ್ಟಿ ; ಅಪಸ್ಮಾರ ಮನಸ್ಸಿನ ಸೃಷ್ಟಿ ಎಂದು ಹೇಳುವ ವಿದ್ವಾಂಸರೂ ಇದ್ದಾರೆ. ಅವರಿಗೆ ಮಹಾಪುರುಷರ ಜೀವನಾಂತ್ಯದ ಚಿತ್ರ ಸ್ಪಷ್ಟವಾಗಿಲ್ಲ. ಸಮುದ್ರ ಸೇರುವ ಸಿಹಿನೀರಿನ ಮಹಾನದಿಗಳೆಲ್ಲ ಹೇಗೆ ಛಿನ್ನ ವಿಚ್ಛಿನ್ನವಾಗಿ ಹರಿದು ಸೇರುತ್ತವೆ ಎಂಬುದರ ಚಿತ್ರ ಅವರಿಗೆ ಕಂಡಿಲ್ಲ. ಅದು ಹೇಗಾದರೂ ಆಗಲಿ, ನನಗೆ ಮಾತ್ರ ಯುದ್ಧೋತ್ತರ ಭಾರತಕಥೆಯೆ ಉತ್ತಮಾಂಗರೂಪದಿಂದ ಭಾಸವಾಗುತ್ತಿದೆ. ಈ ಭಾವನೆಯಿಂದ, ಆದರೂ ಅಳುಕಿನಿಂದ, ಕುವೆಂಪು ಅವರನ್ನು ೧೯೬೦ರ ಅವಧಿಯಲ್ಲಿ ಒಮ್ಮೆ ಕೇಳಿದೆ', 'ಸರ್, ಮಹಾಭಾರತದ ಯುದ್ಧಾನಂತರದ ಕಥೆ ಅದ್ಭುತಮಾಲೆಗಳಿಂದ ತುಂಬಿಕೊಂಡಿದೆಯಲ್ಲವೆ?... ತಾವು ಏಕೆ ಬರೆಯಬಾರದು, ಸರ್ ?' ಎಂದು ಒಳಗೆ, ಏನೆನ್ನುತ್ತಾರೊ ? ಅದೆಂತಹ ಕಥೆ ಎಂದುಬಿಟ್ಟು ನನ್ನ ಆಶಾಮಂದಿಗೋಪುರಗಳನ್ನೆಲ್ಲ ಎಲ್ಲಿ ಒಡೆದು ಬಿಟ್ಟಾರೋ ಎಂದು ಆತಂಕಗೊಂಡಿದ್ದೆ. ಆದರವರರು, 'ರಾಮಾಯಣವನ್ನು ಕೊಟ್ಟ ಸರಸ್ವತಿ ಒಬ್ಬನಿಗೇ ಆ ಮಹತ್ತನ್ನೂ ಕೊಡುವುದು ಬಹುದೊಡ್ಡ ಕೃಪೆಯಾಗುತ್ತದೆ. ಮುಂದೆ ಯಾರೋ ಬರುತ್ತಾರೆ. ಅದನ್ನೂ ಬರೆಯುವ ಮಹಾಕವಿ !' ಎಂದಾಗ ನನಗಾದ ಆಶ್ಚರ್ಯಾನಂದ ಹೇಳತೀರದು.



ಅದನ್ನು ಪ್ರತಿಪಾದಿಸುವಾತ ಅಧಿಕಾರವಹಿಸಿಕೊಳ್ಳಲಿರುವ ಉತ್ಸಾಹೀ ಕಲ್ಕಿಯಾದದ್ದರಿಂದ ಅವನ ಮಾತಿನಲ್ಲಿ ಅನುಭವದ ಪರಿಪಾಕವಿಲ್ಲವೆಂದು ಔದಾಸೀನ್ಯ ತಾಳುತ್ತೇವೆ. ಆದರೆ ಇದೇ ಅಂಶ – ಕಾಣ್ಕೆ – ಕೃಷ್ಣನ ನಿರೂಪಣದಲ್ಲಿ ಕೇಳಿಬರುತ್ತದೆ. ರುದ್ರನ ನೆರವಿನಿಂದ ದ್ವಾಪರಯುಗದ ರುದ್ರಕಾವ್ಯ ಸಂಪೂರ್ಣವಾಯಿತು. ಇನ್ನು ಕಲಿಯುಗಮಹಾಕಾವ್ಯ – ಮಹಾಲಲಿತಕಾವ್ಯ ! – ನಿರ್ಮಾಣವಾಗಲಿದೆಯೆಂದು ಕೃಷ್ಣ ನುಡಿಯುತ್ತಾನೆ. ಉಪನಿಷದಾರಾಮದಿಂದ ಹಿಡಿದು ಸರ್ವ ಧರ್ಮಾಚಾರ್ಯ ಶ್ರೀರಾಮಕೃಷ್ಣರ, ಸ್ವಾತಂತ್ರ್ಯ ಸಂಗ್ರಾಮದ ಅಧ್ವರ್ಯು ಮಹಾತ್ಮನ ತನಕ ಈ ಮಹಾಲಲಿತಕಾವ್ಯ ಸಾಗಿಬಂದು; ಸಾರ್ವಭೌಮತ್ವಭಂಗ, ಸ್ವತಂತ್ರ ಭಾರತರಂಗ, ಸರ್ವಪ್ರಜಾಧಿಪತ್ಯ, ಸರ್ವಸಮತ್ವ, ಜಗತ್‌ಕಲ್ಯಾಣದ ತನಕ ಸಾಗುತ್ತದೆ. ಅಷ್ಟೆ ಅಲ್ಲ, ಭೂವೈಕುಂಠವಾಗಿ, ಸಾಮಾನ್ಯ ಮಾನವ ಸಂಸಾರ, ಸತಿಪತಿಗಳ ಶೃಂಗಾರ, ಮಕ್ಕಳಾಟದಲ್ಲಿ ಮುಗಿಯುತ್ತದೆ.

ಇದನ್ನೆಲ್ಲ ಬರೆದ ಕವಿ–ಇಪ್ಪತ್ತೈದರ ಹರೆಯದ ಸಂಸಾರನಿರನುಭವಿಯಾದ ಆಶಾವಾದಿ ಕವಿ ಕುವೆಂಪು. ಸ್ವಾತಂತ್ರ್ಯಾನಂತರ ದಿನಗಳ ಅಧಿಕಾರಕಲಹಪರಿಪೀಡಿತ ಆವರಣದಲ್ಲಿರುವ ನಮಗೆ ಈ ಕವಿಕಾಣ್ಕೆ ವಿಲಕ್ಷಣವಾಗಿಯೂ ಕಾಣಬಹುದು. ಅದರ ಸೂಕ್ತಾಸೂಕ್ತತೆಯ ಬಗೆಗಿನ ಚರ್ಚೆ ಇಲ್ಲಿ ಅನಗತ್ಯ. ಸ್ವಾತಂತ್ರ್ಯ ಸಾಧನೆಯ ದುರಂತದಿನಗಳಲ್ಲಿ ಸ್ವಾತಂತ್ರ್ಯ ಲಾಭದ ಕನಸು ದೂರಲಾಭವಾಗಿ ಮಾತ್ರವೇ ಕಾಣುತ್ತಿತ್ತು. ಈಗದು ನಮಗೆ ಸಾಧಿತವಾಗಿದೆ. ಆದ್ದರಿಂದಲೆ ವೇದ್ಯವಾಗಿಲ್ಲ – ಸಂವೇದ್ಯವೂ ಆಗಿಲ್ಲ. ಅಂದಮಾತ್ರದಿಂದಲೆ ಸ್ವಾತಂತ್ರ್ಯಸಾಧನೆಯೂ, ಹಾಗೂ ಅನಂತರ ದಿನಗಳ ಸಾಧನೆಯೂ ಅಲ್ಪವಾದುವೆಂದು ಯಾರೂ ಭಾವಿಸಬೇಕಾಗಿಲ್ಲ. ಅದೆಲ್ಲ ಹೋಗಲಿ, ಮೂವತ್ತರ ಆಚೆ ಈಚಿನ ವರ್ಷಗಳಲ್ಲಿ ಕವಿ ಕಂಡ ದಿಟ್ಟ ಕಾಣ್ಕೆ, 'ಸಾರ್ವಭೌಮತ್ವಭಂಗಂ, ಸ್ವತಂತ್ರಭಾರತರಂಗಂ, ಸರ್ವಪ್ರಜಾಧಿಪತ್ಯಂ' ಎಂಬ ಧೀರದೂರದರ್ಶನ ಆ ಕಾಲಕ್ಕೆ ಸುಲಭವಾಗಿರಲಿಲ್ಲ. ಸ್ವಾತಂತ್ರ್ಯ ಬಂದಮೇಲೂ ಭಾರತ ಪ್ರಜಾಧಿಪತ್ಯವನ್ನು ಒಪ್ಪಿಕೊಳ್ಳುತ್ತದೆ ಎಂಬ ಕನಸು ಬಹಳ ಜನರಿಗಿರಲಿಲ್ಲ. ಸುಭಾಸ್‌ಚಂದ್ರಬೋಸರಂತಹ ವೀರರಿಗೆ ಭಾರತಕ್ಕೆ ಸ್ವಾತಂತ್ರ್ಯ ಬಂದ ೨೫–೩೦ ವರ್ಷಗಳ ತನಕವಾದರೂ ಸೇನಾಧಿಪತ್ಯವಿರಬೇಕು ಎಂದೆನಿಸಿತ್ತು. ಹಾಗೆಂದು ಅವರು ಬರ್ಮದಲ್ಲಿ ಐ.ಎನ್.ಎ. ಸೇನಾ ಸದಸ್ಯರನ್ನುದ್ದೇಶಿಸಿ ಘೋಷಿಸಿದ್ದರು. ಆದ್ದರಿಂದ, ಕವಿಯ ದೃಢದರ್ಶನ ಮನನೀಯವಾಗಬಹುದು. ಮುಂದಿನ, 'ಸರ್ವಸಮತ್ವಂ, ಜಗತ್‌ಕಲ್ಯಾಣಂ, ಭೂವೈಕುಂಠಂ, ಸಾಮಾನ್ಯ ಮಾನವಶೃಂಗಾರಂ, ಸತಿಪತಿಗಳ ಶೃಂಗಾರಂ,

ಮಕ್ಕಳಾಟಂ...' ಇತ್ಯಾದಿ ಕಣಸು ಈಗ ಸಾಧ್ಯವಾಗಬಹುದು, ಹೋಗಬಹುದು. ಕವಿಯ ಮನಸ್ಸು ಎತ್ತ ಹರಿದಿದೆ ಎಂದಿಷ್ಟೆ ತಿಳಿಯಬಹುದು. ಸರ್ವಸಮತ್ವ, ಸಮಾನ್ಯ ಮಾನವಸಂಸಾರ, ಸತಿಪತಿಗಳ ಶೃಂಗಾರ, ಮಕ್ಕಳಾಟಗಳ ಬಗೆಗೆ ಕುವೆಂಪು ಅವರ ನಿಲುವು ಮಲೆಗಳಲ್ಲಿ ಮದುಮಗಳು ಕಾದಂಬರಿಯ ತನಕ ಬೇರೆಯಾಗಿಲ್ಲ. ಒಂದರ್ಥದಲ್ಲಿ ಅದೇ ಇಲ್ಲಿ ಸಾಕಾರಗೊಂಡಿದೆ. ಐತ–ಪೀಂಚಲು, ನಾಯಿಗುತ್ತಿ–ತಿಮ್ಮಿಯರ ಸಂಸಾರವು ಸುಖವಾಗಿರಲೆಂದು ಅವರವರೇ ಎಷ್ಟು ದುಡಿಯುತ್ತಾರೊ ಅಷ್ಟೆ ಸೃಷ್ಟಿಶಕ್ತಿಯೂ ಇಷ್ಟಪಟ್ಟಿದೆ, ಅಷ್ಟೇ ದುಡಿದಿದೆ ಎಂಬ ಕಾಣ್ಕೆಯನ್ನು ಇಲ್ಲಿ ಕವಿ ತೋರಿದ್ದಾರೆ. ದಾಂಪತ್ಯ ಶೃಂಗಾರವನ್ನು – ವಿಕೃತಕಾಮಗಳನ್ನು ವೈದೃಶ್ಯಕ್ಕಾಗಿ ಚಿತ್ರಿಸಿದ್ದರೂ – ನಿಃಸ್ಪೃಹ ತನ್ಮಯತೆಯಿಂದ ಚಿತ್ರಿಸಿದ್ದಾರೆ, ಗುತ್ತಿ–ತಿಮ್ಮಿಯರ, ಐತ–ಪೀಂಚಲುಗಳ ಅಸ್ಪೃಶ್ಯ ಶೃಂಗಾರವೆಂದು ಮಡಿಮಡಿ ಸಿಡಿಯದೆ, ಮುಕುಂದಯ್ಯ – ಚಿನ್ನಮ್ಮರ ದಾಂಪತ್ಯಯೋಗಕ್ಕಾಗಿ ಎಷ್ಟು ವ್ಯಕ್ತವಾಗಿ ಪ್ರಕೃತಿ ಕಾತರವಾಗಿದೆಯೊ ಅಷ್ಟೆ, ವ್ಯಕ್ತವಾಗಿಲ್ಲದಿದ್ದರೂ ತೀವ್ರವಾಗಿ, ಕಾತರವಾಗಿದೆ ಈ ಕೆಳವರ್ಗದವರ ಮದುವೆ – ಮದುಬಾಳ್ವೆಯ ಬಗೆಗೂ ಕೂಡ, ಎಂಬುದನ್ನು ಕುವೆಂಪು ಎಚ್ಚರದಿಂದ ಚಿತ್ರಿಸಿದ್ದಾರೆ.

ಶ್ಮಶಾನಕುರುಕ್ಷೇತ್ರದ ಉಳಿದ ದೃಶ್ಯಗಳಲ್ಲಿ ಯುದ್ಧವಿನಾಶಕ್ಕೆ ತುತ್ತಾದ ಸಾಮಾನ್ಯ ಸಂಸಾರಗಳ ಹಾಗೂ ಕುರುಪಾಂಡವರ ಚಿತ್ರವೂ, ಕೃಷ್ಣನು ಸಕಲ ಜೀವಕ್ಕೂ ಮೃತ್ಯುಶಯ್ಯೆಯಲ್ಲಿ ಅವರವರ ಅನಿಸಿಕೆಯ ಸಂತೈಕೆಯಾಗಿ ಬಂದು ಸಮಾಧಾನ ನೀಡುವ ಚಿತ್ರವೂ, ಹಾಗೆಯೆ ಹತಾಶಕೌರವನನ್ನು ಕಂಡು ಅವನ ಒಳಹೊರಗನ್ನು ತೆರೆದು ತೋರಿ ನುಡಿಸುವ ಚಿತ್ರವೂ ಬರುತ್ತದೆ. ಈ ಕಥೆಯನ್ನು ನಿರ್ವಹಿಸುವಾಗ ಕವಿ ಮಾಡಿಕೊಂಡಿರುವ ಹೊಸ ಕಲ್ಪನಾಚಿತ್ರಗಳು ಮಹಾಭಾರತ ಕಥೆಯ ಒಪ್ಪಂದಕ್ಕೆ ಎಂತೂ ಬಾಹಿರವಾಗದಂತೆ ಬಂದಿವೆ. ಮೇಲಾಗಿ ವ್ಯಾಸಕಥೆಯ ಸೂಕ್ಷ್ಮತೆಯನ್ನೆ ಮಿಡಿದಿವೆ. ಇದಕ್ಕೆ ಉದಾಹರಣೆಯಾಗಿಲ್ಲಿ ಭಾನುಮತಿ ಚಿತ್ರವನ್ನೆ ಗಮನಿಸಬಹುದು. ತಮ್ಮ ಮಗ ಕೌರವನನ್ನರಸುತ್ತಾ ಬರುವ ಧೃತರಾಷ್ಟ್ರ ಗಾಂಧಾರಿಯರ ಚಿತ್ರ ಎರಡು ದೃಶ್ಯದಲ್ಲಿ ಬರುತ್ತದೆ. ಒಂದು ದೃಶ್ಯದಲ್ಲಿ, ಅಳುತ್ತಾ ಹೋಗುವ ಅತ್ತೆಮಾವಂದಿರ ಹಾಗೂ ಸಂಜಯ, ಸಖಿಯರ ಹಿಂದೆ ಮುಸುಕುಹಾಕಿಕೊಂಡಷ್ಟೆ ರಂಗಸ್ಥಲದ ಮೇಲೆ ಹೋಗುವ ಭಾನುಮತಿಯ ಚಿತ್ರ ಬರುತ್ತದೆ. ಮತ್ತೊಂದರಲ್ಲಿ ಕೌರವನನ್ನು ಕಂಡು 'ಅಪ್ಪಾ ಮಗು, ಎಲ್ಲಿರ್ಪಯ್' ಎಂದು ಧೃತರಾಷ್ಟ್ರ ತಡವರಿಸಿದರೆ, ಗಾಂಧಾರಿ 'ಅಯ್ಯೋ ಮಗೂ !' ಎಂದು ಹುಯ್ಯಲಿಡುತ್ತಾಳೆ. (ಈ ವಿವರಣೆ ಕವಿ ಕೊಟ್ಟೂ ಇಲ್ಲ.) ಕಡೆಯದಾಗಿ ಭಾನುಮತಿ.



'ಅಯ್ಯೋ ! ಅಯ್ಯೋ !" ಎಂದಷ್ಟೆ ಅಳುತ್ತಾಳೆ ! ಇಷ್ಟೆ ಚಿತ್ರದ ಮೂಲಕ ಕೌರವಸತಿಯ, ಕುರುರಾಜ್ಞಿಯ ಪಾತ್ರ ಧ್ವನಿತವಾಗಿದೆ. ವ್ಯಾಸಭಾರತದಲ್ಲಿ ಗಾಂಧಾರಿ ಕೃಷ್ಣನಿಗೆ, ತನ್ನ ಮಗ ಹಾಗೂ ಪತಿಯ ಶವಗಳ ತಲೆಗಳನ್ನು ತನ್ನ ಎರಡೂ ತೊಡೆಯ ಮೇಲೆ ಇರಿಸಿಕೊಂಡು ಮುಖ ಮುಚ್ಚಿಕೊಂಡು ಅಳುತ್ತಿರುವ ಭಾನುಮತಿಯ ದುಃಖವನ್ನು ದೂರದಿಂದ ತೋರಿಸಿ ಅಳುತ್ತಾಳೆ. ವ್ಯಾಸರೂ ಕೂಡ ಭಾನುಮತಿಯ ದುಃಖವನ್ನು ಮಾತಾಗಿಸಿಲ್ಲ. ಮಹಾ ಕಾವ್ಯಗಳ ಪ್ರತಿನಾಯಕರ ಸತಿಯರಲ್ಲಿ ಭಾನುಮತಿಯಷ್ಟು ಮೂಕವಾದವಳು ಮತ್ತೊಬ್ಬಳು ಇಲ್ಲ. ರಾವಣಸತಿಯಾದ ಮಂಡೋದರಿಗೆ ಸ್ಪಷ್ಟ ವ್ಯಕ್ತಿತ್ವವಿತ್ತು. ಗಂಡನನ್ನು ತಿದ್ದಹೋಗಿ ಹತಾಶಳಾಗಿರುತ್ತಾಳೆ. ಭಾನುಮತಿ ಅವಳ ಪ್ರತಿಯಲ್ಲ. ಇವಳು ತನ್ನ ಪತಿಯನ್ನು ಪ್ರೇರಣಮಾಡುವ ಇಲ್ಲವೆ ಸಂಯಮನ ಮಾಡುವ ಯಾವ ಸಾಮರ್ಥ್ಯವನ್ನೂ ಉಳ್ಳವಳಲ್ಲ. ಅವಾಜ್ ಮೂಕ ವ್ಯಕ್ತಿತ್ವದ ವ್ಯಕ್ತಿ ಇವಳು. ಇವಳ ಮಹಾಭೀಷಣದುಃಖದಲ್ಲೂ ಇವಳಿಗೆ ಉಕ್ತಿಯಿಲ್ಲ. ಹಾಗಿರುವಾಗ ಉಳಿದೆಡೆಯಲ್ಲಾದರೂ ಕೌರವನ ಧ್ವನಿಯನ್ನೂ ಮೀರಿಸುವಂತಹ, ಅಥವಾ ಅದರ ಪಕ್ಕದಲ್ಲಿ ಶೋಭಿಸುವಂತಹ ಧ್ವನಿಯಾದರೂ ಇವಳಿಗಿಲ್ಲ. ತನ್ನ ವೀರರೈದೂ ಜನ ಪತಿಗಳನ್ನೂ ಆಡಿಸುವ ಚೇಡಿಸುವ ಓಡಿಸುವ ದಿಟ್ಟ ಮೊನಚಾದ ದನಿಯುಳ್ಳ ದ್ರೌಪದಿ ಇವಳಿಗೆ ಎದುರು ನಿಂತಿದ್ದಾಳಲ್ಲ ! ವ್ಯಾಸರು ಇಂಥ ಭಾನುಮತಿಯನ್ನು ಧ್ವನಿಸಿದ್ದಾರೆ. ಕುವೆಂಪು, ಪ್ರಾಯಃ ಆ ಕಾಲದಲ್ಲಿನ್ನೂ ವ್ಯಾಸಮಹಾಭಾರತಕಥೆಯನ್ನು ಗಮನಿಸಿದ್ದಿಲ್ಲದ ದಿನಗಳಲ್ಲಿ, ಪ್ರತಿಭಾಮಾತ್ರದೀಮದಲೇ ಮೂಲಕವಿಚಿತ್ರವನ್ನು ಕಣ್ಣ ಮುಂದಿಡುವಂತಹ ಪಾತ್ರವನ್ನೆ ಸೃಷ್ಟಿಸಿದ್ದಾರೆ, ಈ ಎರಡು ದೃಶ್ಯಗಳ ಅನುಕ್ತಿಮಯ ಚಿತ್ರದಲ್ಲಿ.[೮]

ಹೀಗೆಯೆ ಎರಡೆರಡೇ ಮಾತಿನಲ್ಲಿ ಪ್ರಧಾನಪಾತ್ರಸ್ವಭಾವದ ಸ್ವರೂಪವನ್ನು ಕಡೆದುನಿಲ್ಲಿಸುವ ಚಾತುರಿಯನ್ನು ಮೆರೆದಿದ್ದಾರೆ. ಕರ್ಣನ ಹೆಣವನ್ನು ಅಭಿಮನ್ಯು ಘಟೋತ್ಕಚರನ್ನು ಸುಡುವ ಚಿತೆಯಲ್ಲೆ ಸುಡಲೆಂದು ಅರೆಮಾತಿನಿಂದ ಕುಂತಿ

---

೮. ವೇಣೀಸಂಹಾರದ ಭಟ್ಟನಾರಾಯಣ ವೇಣೀಸಂಹಾರ ನಾಟಕದ ಇಡೀ ಒಂದು ಅಂಕದಲ್ಲಿ ಭಾನುಮತಿ – ಕೌರವರ ಆಭಾಸಮಯವಾದ ಅಸಹ್ಯ ವಿಪ್ರಲಂಬಶೃಂಗಾರಚಿತ್ರವನ್ನು ರಬ್ಬುರಬ್ಬಾಗಿ ಗಬ್ಬು ನೀಡುತ್ತಾನೆ. ಯುದ್ಧ ಮಧ್ಯದಲ್ಲಿರುವ ಕೌರವನಿಗೆ ತನ್ನ ಹೆಂಡತಿಯೊಡನೆ ವಿಪ್ರಲಂಬಶೃಂಗಾರವಂತೆ ! ಅದೂ ಭಾನುಮತಿ ಇಡೀ ಒಂದು ಅಂಕವೆಲ್ಲ ವಿಪ್ರಲಂಬಶೃಂಗಾರದ ನಾಯಿಕೆಯಾಗುತ್ತಾಳೆ. ಎಂಥ ಅಭಾಸ, ಹಾಗೂ ಮೂಲವಿಕಲ್ಪನೆಗೂ ಎಂಥ ಅಪಚಾರ, ಆದರೂ ಸಂಸ್ಕೃತದ ಆ ನಾಟಕದಂತಹವು ಎಷ್ಟೆಲ್ಲ ಪ್ರಸಿದ್ದಿಪಡೆದಿಲ್ಲ!

ನುಡಿದಾಗ ಎಲ್ಲರಿಗೂ ಆಶ್ಚರ್ಯ. ಕರ್ಣನ ಹೆಣವನ್ನ ಕೌರವನ ಬಯಕೆಯಂತೆ ಅವನ ಚಿತೆಯಲ್ಲಿಟ್ಟೆ ಸುಡಲೆಂದು ಅಶ್ವತ್ಥಾಮ ಬರುತ್ತಾನೆ. ಭೀಮನಿಗೂ ಕರ್ಣನ ಹೆಣವನ್ನಾಚೆ ತೊಲಗಿಸುವುದೇ ಇಷ್ಟ. ಅದರಿಂದ ತನ್ನ ಕೆಲಸ ಸುಲಭವಾಗಲು ಕರ್ಣನ ಹೆಣವನ್ನು ಅಶ್ವತ್ಥಾಮ ಕೊಂಡುಹೋಗುತ್ತಾನೆ. ದುಃಖಹತಳಾದ ಕುಂತಿಯ ಮೊರೆ ಅರ್ಥವಾಗದೆ ಧರ್ಮರಾಜ ಸಹದೇವನತ್ತ ಪ್ರಶ್ನಾರ್ಥವಾಗಿ ನೋಡುತ್ತಾನೆ. ಅವನು ಕರ್ಣಜನನದ ನಿಜ ತಿಳಿಸಿದಾಗ ಧರ್ಮಜ ಸಿಡಿಲೆರಗಿದಂತಾಗಿ, 'ಏನನ್ ನುಡಿದಯ್?' ಎಂದಷ್ಟೆ ಕೇಳುತ್ತಾನೆ. ಆದರೆ, ಭೀಮನ ಪ್ರತಿಕ್ರಿಯೆ 'ಪುಸಿಯಾಡದಿರ್!' ಎಂದಷ್ಟೆ. ಅರ್ಜುನನ ಕೊರಗು, 'ಅಯ್ಯೋ, ಏನಾದುದು ಕಡೆಗೆ?' ಎಂದು. ತಾಯಗೋಳನ್ನು ಕೇಳಿದ ಧರ್ಮರಾಯ ಅವಳನ್ನು ಕಂಡು, 'ತಾಯೇ, ಏನನೆಸಗಿರ್ಪೆ ನೀನ್?' ಎಂದರೆ, ಅರ್ಜುನ 'ಓ ಕೃಷ್ಣಾ, ಪುಸಿವೇಳ್ದು ಕೊಲಿಸಿದೆಯಾ!' ಎಂದು ಸುಯ್ಯುತ್ತಾನೆ, ಆಗಲೂ ಭೀಮನ ಮಾತೇ ಮಾತು : 'ಕಡೆಗುಂ ಪೊಲಸಾದುದೀ ಭಾರತಸಂಗ್ರಾಮಂ!'

ಈ ಮೂವರ ಪ್ರತಿಕ್ರಿಯೆ – ಮಾತುಗಳನ್ನು ಕುರಿತೆ ವ್ಯಾಖ್ಯಾನ ಮಾಡಬಹುದು, ಆದರಿಷ್ಟೆ, ಎಷ್ಟು ಸಮರ್ಥವಾಗಿ ಸಮಗ್ರವಾಗಿ ಮೊನಚಾಗಿ ಕವಿ ಈ ಪಾತ್ರಸ್ವಭಾವವನ್ನು ಅವರ ಮಾತಿನಿಂದಲೆ ಮಿಡಿದು ಧ್ವನಿಸಿದ್ದಾರೆ ಎಂಬುದಷ್ಟೆ ನಾವಿಲ್ಲಿ ಮನನಮಾಡಬೇಕಾದ ಅಂಶ. ಈ ಮೂರು ಪಾತ್ರಗಳು ಎಷ್ಟು ದೃಢಖಚಿತವಾಗಿ ಮೂಡಿವೆ, ಇಲ್ಲಿ ! ವ್ಯಾಸಚಿತ್ರಕ್ಕಾಗಲಿ. ಪಂಪಕುಮಾರವ್ಯಾಸರ ಚಿತ್ರಕ್ಕಾಗಲಿ ಊನ ಮಾಡದಂತೆ ಈ ಪಾತ್ರಚಿತ್ರಗಳನ್ನು ಹೊಸದಾಗಿ ಹೊಳೆಸಿದ್ದಾರಲ್ಲ, ಸೃಷ್ಟಿಸಿದ್ದಾರಲ್ಲ, ಕವಿ! ಸಾಮಾನ್ಯವಾಗಿ ಕುವೆಂಪು ಧ್ವನಿಪೂರ್ಣ ಚಿತ್ರಗಳನ್ನು ಹೆಚ್ಚು ಮಾತಿನಿಂದ ಕೆಡಿಸುತ್ತಾರೆ ಎಂಬ ಪ್ರತೀತಿ ಉಂಟು. ಇಲ್ಲಿ ಉದ್ಧರಿಸಿರುವ ಒಂದೆರಡು ಸನ್ನಿವೇಶ – ನಾಲ್ಕೈದು ಪಾತ್ರ ಚಿತ್ರಗಳಲ್ಲಿ ಕುವೆಂಪು ಎಲ್ಲಾದರೂ ಹೆಚ್ಚು ಮಾತಾಗಲಿ ಅಪನುಡಿಯಾಗಲಿ ಆಡಿದ್ದಾರೆಯೇ? ಇದಕ್ಕಿಂತ ಧ್ವನಿಪೂರ್ಣ ಪಾತ್ರಚಿತ್ರಣ ಬೇಕೆ? ಕುವೆಂಪು ವಾಗ್ವಿಜೃಂಭಿಸುವಂತೆಯೇ ವಾಙ್‌ಮೌನ ವ್ರತವನ್ನೂ ಕೈಗೊಳ್ಳಬಲ್ಲರು. ಎರಡರಲ್ಲೂ ಅವರು ಅಸಾಧಾರಣರಾಗಿರಲೂ ಬಲ್ಲರು.

'ಶೂದ್ರತಪಸ್ವಿ' ಕುವೆಂಪು ಅವರ ವಿಶಿಷ್ಟ ನಾಟಕವಾದರೂ ಅದರ ಕಲಾಸಿದ್ಧಿ ಈ ಎರಡೂ ನಾಟಕಗಳ ಓರೆಗೆಯದೆ ಆದರೂ ಅವುಗಳ ಕಿರಿ ತಮ್ಮನಂತೆ ತೋರುತ್ತದೆ. ವಾಲ್ಮೀಕಿಗಳೆ ಬರೆದಿದ್ದಿರಲಾರದ ಶಂಬೂಕ ಕಥೆಯ ವಿಕೃತಿಯನ್ನು – ವಿಕೃತಾಂಗವನ್ನು ತಿದ್ದುವ ಸಲುವಾಗಿ ಶಸ್ತ್ರಚಿಕಿತ್ಸೆ ಮಾಡಿರುವ ಕವಿ ಎಷ್ಟೇ ಸಾಧಿಸಿದ್ದರೂ ಶಸ್ತ್ರಚಿಕಿತ್ಸೆಯ ಆಳವಾದ ಗುರುತುಗಳು ಮಾಯವಾಗುವುದು



ಸುಲಭವಲ್ಲದ್ದರಿಂದ ಈ ನಾಟಕದ ಅನೂನ ಸೌಂದರ್ಯ ವಿಮರ್ಶೆಯ ಕಣ್ಣಿಗೆ ಇನ್ನೂ ಎದ್ದುಕಾಣುತ್ತಿಲ್ಲ. ಹಳೆಯ ವಿಕೃತಿಯನ್ನೆ ಸುಂದರವಾಗಿ ಕಾಣುವ ಕಣ್ಣುಗಳಿಗಂತೂ ಈ ಶಸ್ತ್ರಚಿಕಿತ್ಸೆ ಅಚಿಂತನೀಯ ಭಾರವಾಗುತ್ತದೆ. ಆದ್ದರಿಂದ ಈ ಕೃತಿಯ ಸಾಧನೆಯೂ ಅಂಥವರಿಗೆ ಅಪರಾಧವೇ ಆಗಿ ಭ್ರಮಣಗೊಳ್ಳಬಹುದಾದ್ದರಿಂದ 'ಶೂದ್ರತಪಸ್ವಿ' ಶೂದ್ರವಾಗಿಯೆ ಉಳಿದಿದೆ.

ಕಾವ್ಯವಿಮರ್ಶೆ ಹಾಗೂ ಕಾವ್ಯಮೀಮಾಂಸೆಗೆ ಕುವೆಂಪು ಕಾಣಿಕೆ ಘನವಾದದ್ದೆ ಆಗಿದೆ. ಕನ್ನಡ ಹಳೆಯ ಹಿರಿಯ ಕವಿಕಾವ್ಯಗಳನ್ನು ಬೆಲೆಕಟ್ಟುವಲ್ಲಿ ಕುವೆಂಪು ಉತ್ಸಾಹ ತೋರಿದ್ದರೂ ಅವರ ಬೆಲೆಕಟ್ಟುವಿಕೆ ನಿಸ್ತೂಕವಾಗಿದೆ. ಪಂಪ ನಾರಣಪ್ಪ ರಾಘವಾಂಕ ಲಕ್ಷ್ಮೀಶರ ಕಾವ್ಯಗಳ ಬಗೆಗೆ ಅವರಾಡಿರುವ ಮಾತು ಜೀವಕೋಶಕೇಂದ್ರದಂತಹ ಮೌಲಿಕ ಸೂಕ್ತಿಗಳಾಗಿವೆ. ದ್ರೌಪದಿಯ ಶ್ರೀಮುಡಿ, ಸರೋವರದ ಸಿರಿಗನ್ನಡಿಯಲ್ಲಿ – ಪ್ರಬಂಧಗಳಂತೂ ಪ್ರಾಯೋಗಿಕ ವಿಮರ್ಶೆಗೆ ತೋರುಗಂಬವಾಗಿವೆ. ಮಹಾಶ್ವೇತೆಯ ತಪಸ್ಸು ಪ್ರಾಯಃ ಬಾಣಕಾದಂಬರಿ ಕಾವ್ಯದ ಪ್ರಾಮುಖ್ಯವನ್ನು ತಪ್ಪಾಗಿ ಗ್ರಹಿಸಿದ್ದವರನ್ನು ಸರಿದಾರಿಯಲ್ಲಿಡುವಂತಹದಾಗಿದೆ. ಬಾಣನ ಬಗೆಗೆ ಅಂತಹ ಮಾತು ಈ ತನಕ ಪ್ರಚಲಿತವಾಗಿಲ್ಲದಿರುವುದೇ ಆಶ್ಚರ್ಯ. ಆದರೆ ಕುವೆಂಪುವಾದರೂ ಕನ್ನಡ ಪುನಃಸೃಷ್ಟಿ ರೂಪದ ನಾಗವರ್ಮನ ಕಾವ್ಯವಷ್ಟನ್ನೆ ಗಮನದಲ್ಲಿಟ್ಟುಕೊಂಡು ವಿಮರ್ಶಿಸಿದ್ದರೂ ಮೂಲಕಾವ್ಯದ ದರ್ಶನಾಂಶದ ವಿಶದೀಕರಣ ಕಾರ್ಯವನ್ನೆ ಮಾಡಿದ್ದಾರೆ. 'ಕಾವ್ಯ ವಿಮರ್ಶೆಯಲ್ಲಿ ಪೂರ್ಣದೃಷ್ಟಿ' ಪ್ರಬಂಧ ಹೊಸ ಹಾದಿಯಲ್ಲಿ ವಿಮರ್ಶೆಯನ್ನು ಒಯ್ಯುವ ವಿರಳ ಸಾಹಸಮಾಡುತ್ತದೆ. ಹೀಗೆ ಕುವೆಂಪು ಮೌಲ್ಯಮಾಪನವನ್ನು ಮೌಲಿಕ ರೀತಿಯಲ್ಲಿ ಮಾಡಿದ್ದಾರೆ. ಕಾವ್ಯಮೀಮಾಂಸೆಗೆ ಸಂಬಂಧಿಸಿದಂತೆ ಕನ್ನಡಕ್ಕೆ ಮೊದಲ ಬಾರಿಗೆ ಎನ್ನಬಹುದಾದ ಕೆಲವೊಂದು ಮಾತುಗಳನ್ನು ಆಡಿದ್ದಾರೆ. 'ಪ್ರತಿಮಾ ಮತ್ತು ಪ್ರತಿಕೃತಿ' ಲೇಖನವಿರಬಹುದು. 'ಭೂಮಾನುಭೂತಿ' 'ರಸೋ ವೈ ಸಃ'ದಂತಹ ಕ್ಲಿಷ್ಟಚಿಂತನದ ಪ್ರಬಂಧಗಳಿರಬಹುದು – ಅಲ್ಲೆಲ್ಲ ಕುವೆಂಪು ಮುದ್ರೆಯಿರುವ ಚಿಂತನವಿದ್ದೀತು. ಈ ಕಾವ್ಯಚಿಂತನದಲ್ಲಿ ಭಾರತೀಯ ಹಾಗೂ ಪಾಶ್ಚಾತ್ಯ ಚಿಂತನೆಗಳು ಮೇಳಗೊಂಡಿರುವುದರ ಜೊತೆಗೆ ಕವಿಯ ಸ್ವಾನುಭವಜನ್ಯ ವಿಶಿಷ್ಟಾನುಭವಗಳೂ ಮೇಳಗೊಂಡಿವೆ. ಆದರೆ ಕುವೆಂಪು ಶೈಲಿ ರೀತಿ ಶಾಸ್ತ್ರಬರಹಕ್ಕೆ ಕೊಂಚ ಸಾಂದ್ರವೆನಿಸಿ ಗಹನಾಲೋಚನೆ ಸಾಮಾನ್ಯಗಮ್ಯವಾಗುವುದು ಕಷ್ಟವಾಗುತ್ತದೆ.

ಕಾವ್ಯಚಿಂತನ ಲೇಖನಗಳು ಹೇಗಿದ್ದರೂ ಮಿತಸಹೃದಯ ವರ್ಗವನ್ನು

ಮುಟ್ಟುತ್ತವೆ. ಆದರೆ ವೈಚಾರಿಕ ಬರಹಗಳು ಕುವೆಂಪು ಅವರನ್ನು ವ್ಯಾಪಕ ವಾಚಕವೃಂದಕ್ಕೆ ಪರಿಚಯಿಸಿರುವುದಲ್ಲದೆ ಇತ್ತೀಚಿನ ದಿನಗಳಲ್ಲಿ ಚರ್ಚೆಯ ವ್ಯಕ್ತಿಯನ್ನಾಗಿಯೂ ಮಾಡಿದೆ. ವಿಚಾರ ಶೀಲರಾಗಲು ಆಹ್ವಾನ ನೀಡುವ ಕವಿ ಒಂದೊಂದು ವರ್ಗಕ್ಕೆ ಒಂದೊಂದು ಬಗೆಯಾಗಿ ಅರ್ಥವಾಗಿ ಅಪಾರ್ಥವಾಗಿದ್ದಾರೆ. ಮತಮೌಢ್ಯಗಳು ತೊಲಗಬೇಕು, ಜಾತಿ ಭೇದ–ವರ್ಣಾಶ್ರಮ ಪದ್ಧತಿ ತೊಲಗಬೇಕು ಎನ್ನುವ ಕುವೆಂಪು ಕಳಕಳಿಯಲ್ಲಿ ನಾಸ್ತಿಕನ – ಭೌತವಾದಿಯ – ವಿಷಯಪರನ ಸುಳಿವೂ ಇಲ್ಲ. ಶ್ರೀ ರಾಮಕೃಷ್ಣಪರಮಹಂಸರ ಗೋತ್ರ ಸಂಜಾತನೆಂದು ತಮ್ಮನ್ನು ಕರೆದುಕೊಳ್ಳುವ ಕುವೆಂಪು ಪ್ರಧಾನತಃ ಆಧ್ಯಾತ್ಮಿ ; ಶ್ರದ್ಧಾಲುವಾದ ವಿಚಾರವಾದಿ. ಈ ವಿಚಾರವಾದ ನಾಸ್ತಿಕ್ಯವಲ್ಲ. ಭೌತಮಿತವಾದವನ್ನು ಕುವೆಂಪು ಒಪ್ಪುವುದೂ ಇಲ್ಲ. ಅವರ ಕಾವ್ಯಕಾದಂಬರಿಗಳೆಲ್ಲೆಲ್ಲೂ ಅದಕ್ಕೆ ಎಡೆಯೆ ಇಲ್ಲ. ಹಾಗಿದ್ದೂ ಇವರ ವಿಚಾರವಾದ ಯಾವುದು? ಒರೆಹಚ್ಚಿನೋಡಿ ಪರೀಕ್ಷಿಸಿದ ಮೇಲೆಯೆ ಒಪ್ಪಬೇಕೆನ್ನುವ ವಿಚಾರವಾದ. ಆ ಭಯ ಈ ಭಯಗಳಿಂದ ವ್ಯಕ್ತಿಯನ್ನು ಮುಕ್ತಗೊಳಿಸಿ ಸುಖಿಯಾಗಿಸಬೇಕೆನ್ನುವ ವಾದ. ಮತಗಳು ಒಂದು ಕಾಲದಲ್ಲಿ ಮಾನವ ಹಿತೋದ್ದೇಶದಿಂದಲೇ ಹುಟ್ಟಿಕೊಂಡರೂ ಅವುಗಳೆಲ್ಲ ಅದೇ ಮಾನವೀಯತೆಯನ್ನೆ ಒಡೆದು ನೀರು ಕುಡಿಯತೊಡಗಿದುದರಿಂದ ಆ ಮತಗಿತಗಳ ಹಿಂಸಾಚಾರ ನಮಗಿಂದು ಬೇಕಾಗಿಲ್ಲವೆಂದು ಇವರ ವಿಚಾರ. ವಿನೋಬಾ ಭಾವೆಯವರು ಹಿಂದೊಮ್ಮೆ ಹೇಳಿದ, ನೆಹರೂ ಮೆಚ್ಚಿದ್ದ ಸೂಕ್ತಿಯಲ್ಲಿ ಇವರಿಗೆ ಪ್ರೀತಿ : 'ಮತಗಳ ಮತ್ತು ರಾಜಕೀಯದ ಕಾಲ ಆಗಿಹೋಯಿತು ; ಇನ್ನು ಮುಂದೆ ಅಧ್ಯಾತ್ಮದ ಮತ್ತು ವಿಜ್ಞಾನದ ಯುಗ ಬರಬೇಕಾಗಿದೆ' ಎಂಬ ಆ ಮಾತನ್ನ ಕೇಳುವ ಮುಂಚಿನಿಂದಲು ಅವರ ದೃಷ್ಟಿ ಇದೇ ಆಗಿದೆ. 'ಬರಲಿ ವಿಜ್ಞಾನ ಬುದ್ಧಿ', 'ಸೇರಿರೈ ಮನುಜಮತಕೆ', 'ಬನ್ನಿ ವಿಶ್ವಪಥಕೆ', 'ವಿಜ್ಞಾನದೀವಿಗೆಯ ಹಿಡಿಯಬನ್ನಿ', 'ನೂರು ಮತದ ಹೊಟ್ಟ ತೂರಿ, ಎಲ್ಲ ತತ್ತ್ವದೆಲ್ಲೆ ಮೀರಿ, ನಿರ್ದಿಗಂತವಾಗಿ ಏರಿ, ಓ ನನ್ನ ಚೇತನಾ ಆಗು ನೀ ಅನಿಕೇತನ !' – ಈ ಎಲ್ಲ ಉಕ್ತಿಗಳಲ್ಲೂ ಅದೇ ಮಿಡಿತ ಮೊದಲಿನಿಂದ ಮಿಡಿಯುತ್ತಿರುವುದು ಕಾಣುತ್ತದೆ. ಆದರೂ ಏಕೆ ಕುವೆಂಪು ಅವರನ್ನು ಪ್ರತಿರೋಧಿಸಿದರು? ಕಾರಣವಿಷ್ಟೆ : ನಮ್ಮಲ್ಲಿ ಯಾರೇ ಚಾರ್ವಾಕ ತತ್ತ್ವವನ್ನೆ ಹೇಳಲಿ, ಅನಧ್ಯಾತ್ಮವಾದವನ್ನೆ ಹೇಳಲಿ ಅದಕ್ಕೆ ನಾವು ಯಾರೂ ಕೋಪಿಸಿಕೊಳ್ಳಲಾರೆವು. ಆದರೆ ಯಾರಾದರೂ, ಅವರು ಎಷ್ಟೆ ಆಧ್ಯಾತ್ಮಿಯಾಗಿರಲಿ, ಮತಮೌಢ್ಯವನ್ನು ಜಾತಿ ಪದ್ಧತಿ ವರ್ಣವ್ಯವಸ್ಥೆಗಳನ್ನು ಖಂಡಿಸಿದರಂತೂ ಅವರ ಮೇಲೆ ಮಿಸ್ಸೈಲ್‌ಗಳ ದಾಳಿಯೆ ನಡೆದೀತು. ಈಗಲೂ,



ಹಿಂದೆ ಮಾತ್ರವೇ ಅಲ್ಲ, ಇದು ನಡೆದಿದೆ. ಆದ್ದರಿಂದ ಕುವೆಂಪು ಏನೂ ಅಪವಾದವಲ್ಲ.

ಈ ಎಲ್ಲ ಧಾಳಿಗೆ ತುತ್ತಾಗಬೇಕಾಗಿರುವ ಕುವೆಂಪು ಶ್ರೀರಾಮಾಯಣದರ್ಶನಂ ಕವಿ ಎಂಬುದನ್ನು ಮರೆಯಬಾರದು. ದ್ರವಿಡ ಕಳಗಂ ನಾಯಕ ರಾಮಸ್ವಾಮಿ ನಾಯಕರ್ ಅವರ ವಿಚಾರವಾದ ರಾಮಾದಿಗಳ ಚಿತ್ರಪಟಗಳಿಗೆಲ್ಲ ಜೋಡಿನ ಮಾಲೆ ಹಾಕಿಸಿ ಮೆರವಣಿಗೆ ಮಾಡಿ, ಪೊರಕೆ ಚಾಮರ ಬೀಸಿತು. ಎಕ್ಕಡಗಳಲ್ಲಿ ಆ ಚಿತ್ರ ಪಟಗಳನ್ನು ಹೊಡೆಸಿತು. ಸುಮಾರು ಇಪ್ಪತ್ತು ವರ್ಷಗಳ ಹಿಂದೆ ದೊಡ್ಡ ಮೆರವಣಿಗೆ ಸೇಲಂನಲ್ಲಿ ನಡೆದೂ ನಡೆಯಿತು. ಕರ್ನಾಟಕದ ಈ ಭಾಗದಲ್ಲಿ ಅದೇ ಸಮಯದಲ್ಲಿ ಶ್ರೀರಾಮಾಯಣದರ್ಶನಂ ಕಾವ್ಯದ ಪ್ರವಚನ ನಡೆಯುತ್ತಿತ್ತು. ಒಂದು ವೇಳೆ ಈ ಕಾವ್ಯವೇ ಇಲ್ಲದಿದ್ದರೆ, ಕುವೆಂಪು ಬರೆಯದಿದ್ದರೆ, ಕರ್ನಾಟಕದಲ್ಲೂ ಆ ಚಳುವಳಿ ಯಾವ ರೂಪ ತಾಳುತ್ತಿತ್ತು ಹೇಳಬರುವುದಿಲ್ಲ. ಆದರೂ ಕುವೆಂಪು ವಿಚಾರವಾದಕ್ಕೆ ಏಕೆ ಈ ಎಲ್ಲ ಪ್ರತೀಕಾರ ಒದಗಿತು? ಈ ಸಂಕೀರ್ಣ ಸಮಸ್ಯೆಗಳ ವಿಶ್ಲೇಷಣಕ್ಕೆ ಇದು ಎಡೆಯಲ್ಲ.[೯]

ಕುವೆಂಪು ರಾಮಾಯಣಕಾವ್ಯ ಬರೆಯಲು ತೊಡಗಿದುದು ೧೯೩೬ರಲ್ಲಿ. ಆಗತಾನೆ ಚಿತ್ರಾಂಗದಾ ಕಾವ್ಯವನ್ನೂ ಕಾನೂರು ಸುಬ್ಬಮ್ಮ ಹೆಗ್ಗಡತಿ ಕಾದಂಬರಿಯನ್ನೂ ಪ್ರಕಟಿಸಿ ಆಗಿತ್ತು. ಆಗಿನ್ನೂ ಮದುವೆ ಆಗಿರಲಿಲ್ಲ. ಮಹಾಕಾವ್ಯವನ್ನು ಬರೆಯಬೇಕೆಂಬ ಅಭೀಪ್ಸೆ ಮೊದಲಿನಿಂದಲೂ ಕುವೆಂಪು ಅವರಿಗಿದ್ದಂತೆ ಕಾಣುತ್ತದೆ. ೧೯೩೦ರ ಮುನ್ನವೆ ಕೆಲವು ಖಂಡಕಾವ್ಯಗಳನ್ನೂ ರಚಿಸಿ ಆ ಸಿದ್ಧತೆ ಮಾಡಿಕೊಳ್ಳುತ್ತಿದ್ದರು. ರಾಮಾಯಣ ಕಾವ್ಯವನ್ನು

---

೯. ೧೯೨೮ರ ಸುಮಾರಿನಲ್ಲಿ ಶ್ರೀ ಕುವೆಂಪು ಅವರು ಶ್ರೀ ರಾಮಕೃಷ್ಣಾಶ್ರಮದಲ್ಲಿದ್ದಾಗ ತಾವೊಂದು ದಿನ ಯಾವುದೋ ಮಹಾಕಾವ್ಯ ಬರೆಯುತ್ತಿದ್ದುದರ ಕನಸು ಕಾಣುತ್ತಿದ್ದರಂತೆ, ಸ್ವಾಮಿಗಳೊಬ್ಬರು ಬಂದಾಗ ನಿದ್ದೆಯೊಡೆದು ಎಚ್ಚರವಾದಾಗ ಅದು ಯಾವ ಕಾವ್ಯ – ಏನು ಎಂಬುದೆಲ್ಲ ಮಸುಕುಮಸುಕಾಗಿಯೆ ಉಳಿಯಿತಂತೆ. ಮಹಾಕೃತಿಯ ರಚನೆಯ ಅಭೀಪ್ಸೆ ಅವರಿಗೆ ಆ ಹಿಂದಿನಿಂದಿದ್ದಂತೆಯೆ, ಅವರ ಛಂದಸ್ಸಿನ ರೂಪಣವೂ ನಡೆದಿದ್ದಿತು ಅವರಲ್ಲಿ. ಕಾನೂರು ಹೆಗ್ಗಡತಿಯಂತಹ ಆ ಕಾಲಕ್ಕೆ ಅತಿವಿಸ್ಮಯಕಾರಿಯಾದ ಕಾದಂಬರಿಯನ್ನೂ, ಚಿತ್ರಾಂಗದ ಕಾವ್ಯದಂತಹ ಪ್ರೌಢ ಶೈಲಿಯ ಪಕ್ವ ಛಂದಸ್ಸಿನ ರಮ್ಯೋಜ್ವಲ ಕೃತಿಯನ್ನೂ, ಶ್ಮಶಾನಕುರುಕ್ಷೇತ್ರದಂಥ ಧ್ವನಿಪೂರ್ಣ ನಾಟಕವನ್ನೂ, ನೂರಾರು ಕವನಗಳನ್ನೂ, ಶ್ರೀ ರಾಮಕೃಷ್ಣ ಪರಮಹಂಸರ – ಸ್ವಾಮಿ ವಿವೇಕಾನಂದರ ಆವೇಶಪೂರ್ಣ ಜೀವನ ಚರಿತ್ರೆಗಳನ್ನೂ ಬರೆದು ಹದಗೊಂಡಿದ್ದರು, ಮಹಾಕಾವ್ಯ ಸೃಷ್ಟಿಗಾಗಿ.

ಬರೆಯತೊಡಗಿದಾಗ ಪ್ರಾಯಃ ಅವರಿಗೆ ತಮ್ಮ ದರ್ಶನದ ಬಗೆಗೆ ನಿಚ್ಚಳ ಅರಿವಿದ್ದಿತೆ ತಿಳಿಯದು. ಆದರೂ ಆ ಕಾವ್ಯ ಹಳೆಯ ಕಾವ್ಯದ ಪಡಿನೆಳಲಾಗಬಾರದೆಂಬ ಆಶಯವಿತ್ತು. ಹಾಗೂ ಅದು ಆದದ್ದರ ಪ್ರತಿಬಿಂಬವಾಗದೆ ಆಗಬೇಕಾದುದರ – ಆಗುವುದರ – ಮುನ್ನುಡಿಯೂ ಆಗುತ್ತದೆಂಬ ಭಾವನೆಯಿತ್ತು. ವಾಲ್ಮೀಕಿ ಋಷಿಗೆ ಧ್ಯಾನದಲ್ಲಿ ಕಂಡು ಆಮೇಲೆ ಮಾತಿನಲ್ಲಿ ಕಂಡರಣೆಗೊಂಡ ಆ ರಾಮಾಯಣದ ಬಗೆಗೆ ಕವಿ ಹೇಳುವ ಮಾತು ತಮ್ಮ ಕಾವ್ಯಕ್ಕೂ ಅನ್ವಯವಾಗಲಿ, ಅನ್ವಯವಾಗುತ್ತದೆ, ಎಂಬ ಆಶಯ ನಂಬುಗೆ ಇತ್ತೆಂದು ಕಾಣುತ್ತದೆ : 'ಪಿಡಿವವೊಲ್ ಅಲ್ತಾದುದಕೆ ಕನ್ನಡಿಯನಪ್ಪುದಕೆ ಮುನ್ನುಡಿಯನುಲಿವಂತೆಯುಂ, ಕಂಡ ರಾಮಾಯಣವನೆಲ್ಲಮಂ ಕಂಡಂತೆ ಹಾಡಿದನೊ. ಕೇಳ್ದ ಲೋಕಂಗಳೆಲ್ಲಂ ತಣಿವವೊಲ್' (ಶ್ರೀ. ರಾ.ದ. : ಕವಿಕ್ರತುದರ್ಶನಂ, ಪಂಕ್ತಿ ೫೨–೫೫). ಹೀಗೆ ಮೊದಲುಗೊಂಡ ಕೃತಿ ಒಂಬತ್ತು ವರ್ಷ ಅವಧಿಯಲ್ಲಿ ರೂಪಗೊಂಡು ೧೯೪೫ರಲ್ಲಿ ಮೈದೋರುತ್ತದೆ. ಕಡೆಯ ಪಂಕ್ತಿಗಳನ್ನು ಬರೆಯುವ ವೇಳೆಗೆ ಕವಿಗೆ ತಮ್ಮ ಕೃತಿಯ ಮಹತ್ತಿನ ಬಗೆಗೆ ಖಚಿತ ವಿಶ್ವಾಸ ಮೂಡಿತ್ತು.

'ಯುಗಯುಗದಿ ಸಂಭವಿಪೆನೆಂಬ ಭಗವದ್ದಿವ್ಯಮಾ
ವಚನಮೇಂ ನರರೂಪ ಮಾತ್ರಕೆ ಮುಡಿಪೆ, ಪೇಳ್?
ನರಸಿಂಹ ಮತ್ಸ್ಯ ಕೂರ್ಮಾದಿ ಚರಮಾ ಲೀಲೆಗೇಂ
ಪೊರತೆ ಈ ಕೃತಿರೂಪಮಾ ಭಗವದಾವಿರ್ಭಾವ
ಬಹುರೂಪ ಸೂತ್ರತೆಗೆ ? ರಾಮಂಗೆ ಮೊದಲಲ್ತೆ,
ರಾಮಾಯಣಂ ? ಮುನ್ನಲ್ತೆ, ಪಿರಿದಲ್ತೆ, ಮೆಯ್ಯಲ್ತೆ,
ಮನೆಯಲ್ತೆ ರಾಮಾಯಣಂ ? ರಾಮನಾಮದ ಮಹಿಮೆ
ರಾಮಂಗೆ ಮಿಗಿಲೆಂಬವೋಲ್ ರಾಮಾವತಾರಕಿಂ
ಗುರುತರಂ ತಾನ್ಯೆಸೆ ರಾಮಾಯಣಾವತಾರಂ ?
ಓಂ ನಮೋ, ರಾಮಾವತಾರಕಿರ್ಮ್ಡಿಯೆನಲ್
ಮೂಲವಿಗ್ರಹಕೆತ್ತಿದುತ್ಸವದ ಪಡಿಯೆನಲ್
ನನ್ನೊಳೀ ರಾಮಾಯಣಾವತಾರವನೆತ್ತಿ ಮೇಣ್
ಸರ್ವಭಾಷಾಮಯೀ ಭಗವತಿಯ ಪೂವಡಿಯ
ಕನ್ನಡದ ಸಿರಿಗುಡಿಯ ನುಡಿಯ ಕಣ್ಪಡಿಮೆಯೊಳ್
ಕಡೆದು ಮೂಡಿಹ ನಿತ್ಯರಾಮಂಗೆ, ಓಂ ನಮೋ,
ಓಂ ನಮೋ, ಓಂ ನಮಃ ! ಓಂ ಶಾಂತಿ ಶ್ಯಾಂತಿಶಾಂತ್ಯಿಃ !

–ಶ್ರೀ. ರಾ. ದ. : ಅಭಿಷೇಕವಿರಾಡ್‌ದರ್ಶನಂ, ಪಂಕ್ತಿ ೨೨೩–೨೩೮



ಇಲ್ಲಿ ಕವಿಗೆ ತನ್ನ ಕೃತಿರೂಪದ ಶ್ರೀ ರಾಮಾವತಾರದ ಬಗೆಗಿರುವ ಗೌರವ ವ್ಯಕ್ತವಾಗಿರುವುದು ಸ್ಪಷ್ಟವಾಗುತ್ತದೆ. ಈ ಕೃತಿಯ ಅವತರಣಕ್ಕೆ ತಾನು ನಿಮಿತ್ತವಾದೆನೆಂಬ ವಿನಯ–ಹೆಮ್ಮೆಗಳೂ ಉಂಟು. ಹಾಗೆಯೇ ತನ್ನ ಕಾವ್ಯದ ಕರ್ತೃ ತಾನಲ್ಲ ; ಅದನ್ನು ಸೃಜಿಸಿದಾತ ತಾನೆಂಬುದಕ್ಕಿಂತ ಅದೇ ತನ್ನನ್ನು ಸೃಜಿಸಿದೆ ಎಂಬಶ್ರದ್ಧೆಯೂ ಉಂಟು. ಕುಮಾರವ್ಯಾಸನ 'ವೀರನಾರಾಯಣನೆ ಕವಿ, ಲಿಪಿಕಾರ ಕುವರವ್ಯಾಸ' ಎನ್ನುವ ಪ್ರಸಿದ್ಧ ಉಕ್ತಿಯನ್ನೆ ನೆನಪಿಗೆ ತಂದುಕೊಡುವ 'ಶ್ರೀ ಕುವೆಂಪುವ ಸೃಜಿಸಿದೀ ಮಹಾಛಂದಸಿನ ಮೇರು ಕೃತಿ, ಮೇಣ್ ಜಗದ್‌ಭವ್ಯರಾಮಾಯಣಂ'[೧೦] ಎಂಬ ಮಾತು ಮತ್ತೊಂದು ಅರ್ಥವನ್ನು ಸೂಚಿಸುತ್ತದೆ. ಈ ಮಾತನ್ನು ಕವಿಯೆ ಹೇಳಿಕೊಳ್ಳದೆ, ದೇವ ಲೋಕದಲ್ಲಿ ನೆರೆದಿರುವ ಪೂರ್ವದ ಮಹಾಕವಿಗಳ ಸಭೆಗೆ ತಮ್ಮ ಗುರು ವೆಂಕಣ್ಣಯ್ಯನವರು ಆಡುತ್ತಿರುವಂತೆ ಕಲ್ಪಿಸಿಕೊಂಡಿದ್ದಾರೆ. ಕವಿಗಾದರೂ ತಮ್ಮ ಕೃತಿ ಜಗದ್ಭವ್ಯ ಮೇರುಕೃತಿ ಎಂಬ ಮಾತಿನಲ್ಲಿ ತಳುಕೇನೂ ಇರಬೇಕಿಲ್ಲ. ಅಂದರೆ, ಕೃತಿಸೃಷ್ಟಿಯೊಡನೆಯೆ ಕವಿ ಸೃಷ್ಟಿಯೂ ಆಗುತ್ತಹೋಗಿದೆ ಎಂಬ ಅನುಭವ – ಕೃತಿ ಪೂರ್ವದೃಷ್ಟವಲ್ಲ, ಪೂರ್ವಸಿದ್ಧವಾದದ್ದಲ್ಲ, ಅದು ಸಿದ್ಧವಾಗುತ್ತಾ ಹೋಯಿತು, ಅಂತೆಯೆ ತಮ್ಮನ್ನೂ ಸಿದ್ಧಿಗೊಯ್ಯುತ್ತ ಹೋಯಿತು ಎಂಬ ಅನುಭವ – ಇಲ್ಲಿ ಮುಖ್ಯ. ಈ ಕೃತಿ ತಮ್ಮೊಳಗೆ ಬೆಳೆಯುತ್ತ, ತಮ್ಮನ್ನೂ ಬೆಳೆಸುತ್ತಾ ನಡೆದಿದೆ ಎಂಬ ಶ್ರದ್ಧೆ ಮುಖ್ಯ ಮನನೀಯಾಂಶ. ಆದ್ದರಿಂದ ಈ ಕಾವ್ಯಕರ್ಮ ಬರಿಯ ಟೈಪಿಸ್ಟ್ ಕೆಲಸವಲ್ಲ ; ಅದು ಸಾಧನೆ, ತಪಸ್ಸು ಎಂಬ ಶ್ರದ್ಧೆಗೆ ಅರ್ಥ ಬರುತ್ತದೆ. ಇದು ವೇದ್ಯವಾಗದಿದ್ದರೂ ಅದರ ಒಂದಂಶ ಮಾತ್ರ ಸತ್ಯ. ರಾಮಾಯಣದರ್ಶನಂ ಕಾವ್ಯ ಮುನ್ನಡೆದಂತೆಲ್ಲ ಭೂ ಸಂಚಾರ ಬಿಟ್ಟು ವ್ಯೋಮಸಂಚಾರಕ್ಕೆ, ಸಮುದ್ರಯಾನಕ್ಕೆ ತೊಡಗುತ್ತದೆ. ಹೆಚ್ಚು ಪ್ರಜ್ಞಾಪೂರ್ಣವಾಗಿದ್ದ ಕಾವ್ಯರಚನೆ ಅತಿಪ್ರಜ್ಞಾವಲಯದ ಹಾಗೂ ಸುಪ್ತಸಮಷ್ಟಿ ಪ್ರಜ್ಞೆಯ ದೃಷ್ಟಿಯಾಗತೊಡಗುತ್ತದೆ. ನಾಲೆಯ ಪಾತ್ರ ನದಿಯ ಪಾತ್ರದಂತಲ್ಲ. ನಾಲೆ ಮುಂದುವರಿದಂತೆಲ್ಲ ಅದರ ಪಾತ್ರ ಕಿರಿದೂ ತೆಳ್ಳೆಯೂ ಆಗುತ್ತದೆ. ನದೀಪಾತ್ರ ಅದಕ್ಕೆ ವಿರುದ್ಧವಾಗಿ ವಿಸ್ತಾರವೂ ಗಂಭೀರವೂ ಆಗುತ್ತದೆ.

ಪ್ರಾರಂಭದಿಂದ ಕವಿ ತನ್ನ ಸ್ಫೂರ್ತಿಕೇಂದ್ರವಾಗಿ ಆದಿಕವಿ ವಾಲ್ಮೀಕಿಯನ್ನು

---

೧೦. ಮಹಾಕೃತಿಯನ್ನು ಕವಿ ಸೃಷ್ಟಿಸುವುದಕ್ಕಿಂತ ಕವಿಯನ್ನು ಅದೇ ಸೃಷ್ಟಿಸುತ್ತದೆಂಬ ಮಾತನ್ನು ಗಯಟೆ ಕವಿ ಎಕರ್ಮನ್ನನಿಗೆ ಹೇಳಿದ್ದ.

ಸ್ವೀಕರಿಸಿಕೊಂಡಿದ್ದಾರೆ. ಕಾವ್ಯದ ಹಲವೆಡೆ ಮತ್ತೆ ಮತ್ತೆ ಸ್ಮರಿಸಿಕೊಂಡು ಸ್ಫೂರ್ತಿಗೊಂಡಿದ್ದಾರೆ. ಆದರೆ, ಕಾವ್ಯ ಮುನ್ ಸಾಗಿದಂತೆ ಪರಾತ್ಪರವಾಣಿ ಸರಸ್ವತಿಯನ್ನು ಮೊರೆಹೋಗುತ್ತಾರೆ. ಕಾವ್ಯಾಂತದಲ್ಲಿ ಅನಾದಿಕವಿ ಪರಮಪುರುಷೋತ್ತಮನ – ಶಿವೆ ಸರಸ್ವತಿ ಲಕ್ಷ್ಮಿಯರೆ ಮೊದಲಾದ ದೇವಗೋಷ್ಠಿ ಸಮಷ್ಟಿರೂಪದ ಸೃಷ್ಟಿಕಾರಿಣಿ–ಭವತಾರಿಣಿ – ಜಗದ್ಧಾರಿಣಿಯಾದ ಮಹಾಮಾತೆಯ – ವಶಕ್ಕೆ ತನ್ನನ್ನು ಅರ್ಪಿಸಿಕೊಳ್ಳುತ್ತಾರೆ. ವ್ಯಾಸ ವಾಲ್ಮೀಕಿ ಹೋಮರಾದಿಗಳು ಆ ಅನಾದಿಕವಿಯ ಬಾಹು ಮಾತ್ರರು. ಹಾಗೆಯೆ ಕುವೆಂಪು ಕೂಡ ಆ ಅನಾದಿಕವಿಯ ಬಾಹುವೆ. ಆ ಕವಿಯೆ ಆಗಿರುವುದಾಗಿ ಹೊಳೆಯುತ್ತದೆ. ದ್ವೈತದಲ್ಲಿ ಮೊದಲಾಗುವ ಸಾಧನೆ ಮುಂದುವರಿಯುತ್ತ ವಿಶಿಷ್ಟಾದ್ವೈತದಲ್ಲಿ ಸಾಗುತ್ತ ಅದ್ವೈತದರ್ಶನದಲ್ಲಿ ಸಾರ್ಥಕವಾಗುವಂತೆ ಇದೆ ಇಲ್ಲಿನ ಅನುಭವ. ಕಾವ್ಯಾರಂಭದಲ್ಲಿದ್ದ ಕಾವ್ಯಸಿದ್ಧಿ ಬೆಳೆಯುತ್ತಾ ಹೋಗುವುದರ ಸಂಕೇತವೂ ಆಗುತ್ತದೆ ಇದು.

ಶ್ರೀ ರಾಮಾಯಣದರ್ಶನಂ ಕಾವ್ಯ ವಾಲ್ಮೀಕಿರಾಮಾಯಣದ ಕನ್ನಡಾನುವಾದವಾಗದೆ ಅಥವಾ ಅದರ ಸರಳೀಕರಣವಾಗದೆ ನಮ್ಮ ಯುಗಕ್ಕೆ ಅದರ ಪುನರ್ಭವವಾಗಿದೆ. ಅಂದ ಮಾತ್ರದಿಂದ ವಾಲ್ಮೀಕಿರಾಮಾಯಣ ಅದೃಶ್ಯವಾಗುತ್ತದೆಂದೇನೂ ಅಲ್ಲ. ಇತ್ತೀಚಿನ ಅವತಾರಗಳಿಂದ ಆದ್ಯವತಾರಗಳು ನಿರರ್ಥವಾಗಬೇಕಾಗಿಲ್ಲ. ಇದು ಮೂಲವಿಗ್ರಹಕ್ಕೆತ್ತಿದ ಉತ್ಸವದ ಪ್ರತಿಮೆಯೆಂದೂ ಕವಿಗೆ ತಿಳಿದಿದೆ. ನಮ್ಮ ಯುಗದ ಆಚಾರವಿಚಾರಸಂವೇದನೆಗಳು ವಾಲ್ಮೀಕಿರಾಮಾಯಣವನ್ನು ಹಾಗೆಯೆ ಕಾಣಲಾಗದಿರಬಹುದು. ನಿತ್ಯರಾಮನ ಸತ್ತ್ವ ಮುಖ್ಯವಾದದ್ದರಿಂದ ಅದರ ತತ್ತತ್ಕಾಲೀನ ಅವತಾರರೂಪದ ಕಾವ್ಯ ಯಾವುದಕ್ಕೆ ಹೊಣೆಯಾಗಿರಬೇಕಾದೀತು? ಆ ನಿತ್ಯಸತ್ತ್ವದ ಅಭಿವ್ಯಕ್ತಿಗೆ ಆಪೋಹವಾಗದಿದ್ದಲ್ಲಿ ಇದರ ಸಾರ್ಥಕ್ಯ ಸಿದ್ಧವಾದಂತಾಯಿತು. ಈ ಕಾವ್ಯದ ಸಾಧನೆ ಅದು. ನಮ್ಮ ಯುಗದ ಅಗತ್ಯಪೂರೈಕೆಯಾಗಿ – ಅಭೀಪ್ಸೆಯಾಗಿ ಈ ಕಾವ್ಯ ಬಂದಿದೆಯೆ? ಎಷ್ಟರ ಮಟ್ಟಿಗೆ ನಮ್ಮೆಲ್ಲರ ಅನುಭವವಾಗಿದೆ. ಇಲ್ಲವೆ ಪರಿಮಿತವಾಗಿದೆ. ಇಲ್ಲವೆ ವೈಯಕ್ತಿಕವಾಗಿದೆ? ಎಂಬೆಲ್ಲವೂ ವಿವೇಚನಾರ್ಹ ವಿಚಾರಗಳು. ಪೂರ್ವಾಗ್ರಹ – ಪೂರ್ವಗ್ರಹಗಳಿಲ್ಲದೆ ವಿವೇಚಿಸಿದಾಗ ಹೇಗೆ ತೋರೀತು ಈ ಕಾವ್ಯ? ಎಂಬುದೇ ಗಂಭೀರ ವಿಚಾರ.

ಶ್ರೀ ರಾಮಾಯಣ ಕಾವ್ಯ ಇಂದಿಗೂ ನಿತ್ಯಪಾರಾಯಣದ ಪುಣ್ಯಕೃತಿಯಾಗಿರುವಂತೆಯೆ, ಶ್ರೀರಾಮಚಂದ್ರಾದಿಗಳು ನಿತ್ಯಧ್ಯಾನದ ದಿವ್ಯಾಕೃತಿಯಾಗಿರುವಂತೆಯೆ ಅಲ್ಲಲ್ಲಿ ಅಪಸ್ವರ ಪ್ರತಿಕ್ರಿಯೆಗೂ ಎಡೆಗೊಟ್ಟಿದ್ದಾರೆ.



ಹೀಗಿರುವಾಗ ಇಂಥ ಯುಗವೂ ಆ ಮಹಾಕಾವ್ಯವನ್ನೂ ಮಹಾಸತ್ತ್ವವನ್ನೂ ಅನುಭವಿಸಬೇಕಾದರೆ ಏನು ಮಾಡಬೇಕು ? ಮೇಲೆತ್ತುವುದಕ್ಕಾಗಿಯೇ ತಾನು ಕೆಳಗೆ ಇಳಿದು ಬರುವ ಅವತಾರ ಅಂದಂದಿನ ಪರಿಸರದ ಅಗತ್ಯಕ್ಕೆ ಅನುಗುಣವಾಗಿಯೆ ರೂಪುಗೊಂಡು ಬರುತ್ತದೆ. ರಾಮಾವತಾರದ ಸಾತ್ತ್ವಿಕತೆ ರಜೋದೀಪ್ತವಾದ ದೃಪ್ತ ದ್ವಾಪರಕ್ಕೆ ಕೃಷ್ಣಾವತಾರವಾಗಿಯೆ ಬರಬೇಕಾಯಿತು. ವಿಚಾರದಗ್ಧ – ಸಂದೇಹತಪ್ತ – ಭೌತನಿಷ್ಠವಾದ ಹಾಗೂ ದಾಂಪತ್ಯಮೌಲ್ಯ ಶಿಥಿಲವಾಗುತ್ತಿರುವ ನಮ್ಮ ಯುಗಕ್ಕೆ ಹೇಗೆತಾನೆ ರಾಮಾಯಣ ಬರಬೇಕು ? ಕಂಬ ತುಲಸಿಯರ ರಾಮಾಯಣದ ಭಕ್ತಿಕಥಾರೂಪದಲ್ಲಿ ಬರುವಂತಿಲ್ಲ. ಜೈನರಾಮಾಯಣ ಕಥಾರೂಪದಲ್ಲೂ ಬರುವಂತಿಲ್ಲ. ಅಥವಾ ಪ್ರತಿಕೃತಿರೂಪದಲ್ಲಿ ವಾಸ್ತವಕಥಾರೂಪದಲ್ಲೂ ಮೈಗೊಂಡು ಬರುವಂತಿಲ್ಲ. ನಮ್ಮ ಯುಗದಲ್ಲಿ ರಾಮನಾಮದಿಂದಲೇ ನಿತ್ಯ ಸ್ಫೂರ್ತಿ ಪಡೆದ ಮಹಾತ್ಮ ಗಾಂಧೀಜಿಯವರೇ ಮೊದಲಾದ ಚೇತನಗಳೂ ಇದ್ದರು, ಇದ್ದಾರೆ. ಅದರಿಂದ ಶ್ರೀರಾಮಸ್ಫೂರ್ತಿಯ ಸೆಲೆ ಬತ್ತಿಲ್ಲ, ಬಗ್ಗಡವಾಗಿಲ್ಲ. ನಮ್ಮ ದುಷ್ಟ ಜಲ ಕ್ರೀಡೆಯಿಂದಷ್ಟೆ ಆ ಗಂಗಾಸ್ರೋತ ಕಾಶಿಯ ಬಳಿಯ ಗಂಗಾಜಲದಂತಾಗಿದ್ದೀತು. ಆದರೆ ಆ ಪ್ರವಾಹ ಮಾತ್ರ ಇನ್ನೂ ಸರಸ್ವತೀನದಿಯಾಗಿಲ್ಲ. ಆದ್ದರಿಂದ ನಮ್ಮ ಯುಗಕ್ಕೆ ಶ್ರೀರಾಮಕಥೆ ಹೇಗೆ ಬರಬೇಕು? ಕುವೆಂಪು ಅದಕ್ಕೆ ಕಂಡುಕೊಂಡ ಉತ್ತರ ಅವರ ಈ ಕಾವ್ಯದಲ್ಲಿದೆ.

ರಾಮಾಯಣ ಕಥೆಯನ್ನು ನಾವು ನಿತ್ಯ ಕೇಳುತ್ತಿದ್ದರೂ ನಮಗೆ ಅಲ್ಲಿ ಬೇಕು ಬೇಡಗಳ ಸಂಗತಿಗಳೂ ಪಾತ್ರಗಳೂ ಬರುತ್ತವೆ. ರಾಮ ಆ ಕಾರಣದಿಂದಾಗಿಯೆ ಕೆಲವರಿಗೆ ವಿಷಮವಾಗಿಯೂ ಪರಿಣಮಿಸಿದ್ದಾನೆ. ಅಂಥವರಿಗೆ ಇದು ಎರಡು ಜನಾಂಗದ ಆಂಶಿಕ ಕಥೆಯಾಗಿ ಕಂಡುಬರುತ್ತದೆ. ಆ ನೆಲೆಯಲ್ಲಿ ಕಂಡಾಗ ರಾಮಚಾರಿತ್ರ್ಯವೆಲ್ಲವೂ ಶತ್ರುವಿನ ಗುಣಗಳಾಗಿ ತ್ಯಾಜ್ಯವೇ ಆಗಿ ತೋರುತ್ತದೆ. ಇದರಿಂದಾಗಿ ಕುವೆಂಪು ತಮ್ಮ ಕಥೆಯನ್ನು ಮಾನವತೆಯ ಕಥೆಯನ್ನಾಗಿ ಮಾನವ ಮನಸ್ಸಿನ ಕಥೆಯನ್ನಾಗಿ ಮಾಡಬೇಕಿದೆ. ಶ್ರದ್ಧೆಯ ಕೂಡೆಯೆ ವಿಚಾರವೂ ಸಂಗಮಗೊಂಡು ಇಲ್ಲಿನ ಎಲ್ಲಕ್ಕೂ ಎಲ್ಲ ವರ್ತನಕ್ಕೂ ಪ್ರೇರಣಕಾರಣಗಳೇನೆಂಬ ವಿವೇಚನೆ ನಡೆಯುತ್ತಲೆ ಹೋಗುತ್ತದೆ. ಹಾಗಾದಾಗ ಇಷ್ಟಾನಿಷ್ಟ ಸಂಗತಿಗಳಾಗಲಿ ಪಾತ್ರಗಳಾಗಲಿ ಕಡೆಯತನಕ ಕೂಡದ ತುದಿಗಳಾಗಿ ಉಳಿಯುವುದಿಲ್ಲ. ವಾಲಿಯ ವಧೆ ರಾಮನನ್ನು ಅಷ್ಟಾಗಿ ತೊಡಕಿಗೆ ಈಗಿಲ್ಲಿ ಸಿಲುಕಿಸಲಾರದು. ಹಾಗೆಯೇ ಅಗ್ನಿಪ್ರವೇಶ ಸಂಗತಿಯಾದರೂ ಅನಿಷ್ಟವಾಗದು.

ಅಂತೆಯ ಕೈಕೆಮಂಥರೆಯರೆ ಮೊದಲಾದ ಮಾನವ ಪಾತ್ರಗಳೂ, ರಾವಣಾದಿ ಅಸುರ ಪಾತ್ರಗಳೂ ಅನಿಷ್ಟ ಅಮಂಗಳವಾಗುಳಿಯವು. ಅಂದರೆ ಆ ಪಾತ್ರಗಳು ಮೊದಲಿನಿಂದಲೂ ಉತ್ಕಟ ವಿರೋಧಿ ಸ್ಥಾನದಲ್ಲಿರುವುದಿಲ್ಲವೆಂದಲ್ಲ; ಆ ಪಾತ್ರಗಳೇನೂ ತೋತಾಪುರಿ ಮಾವಿನಕಾಯಿಯಂತೆ ಹುಳಿಯಿಲ್ಲದ ಕಾಯಿಗಳಲ್ಲ; ಆದರೆ, ಕಸಿಮಾವು ಕಾಯಿಯಾಗಿರುವಾಗ ತುಂಬಾ ಹುಳಿ, ಹಣ್ಣಿನಲ್ಲಿ ಸಿಹಿಯಾದಂತೆ ! ಇಲ್ಲಿ ಆ ಎಲ್ಲ ಪಾತ್ರಗಳೂ ತಮ್ಮ ತಮ್ಮ ಸ್ವಭಾವದಲ್ಲಿ ಉತ್ಕಟವಾಗಿ ಬದುಕುತ್ತವೆ. ಆ ಉತ್ಕಟತೆಯೆ–ಮಾವಿನ ಹುಳಿಯೆ ಅದರ ಕಸಿಯ ಹಣ್ಣಿನಲ್ಲೂ ಮಾಗಿದೆ ಸಿಹಿಯಾಗುವಂತೆ – ಅವುಗಳನ್ನು ಸತ್ತ್ವತಮವಾಗಿ ಶೋಧಿಸುತ್ತದೆ. ಎಲ್ಲ ಪಾತ್ರವೂ ಶ್ರೀರಾಮಾಯಣದ ದಿವ್ಯಘಟನೆಯಲ್ಲಿ ಪಾಲುಗಾರರು, ಪಾತ್ರಧಾರಿಗಳು. ಆದ್ದರಿಂದಲೆ ಆ ದಿವ್ಯೋದಯದ ಫಲದಲ್ಲಿ ಅವರೆಲ್ಲ ಪಾಲುದಾರರು. ಮಂಥರೆಯಿಲ್ಲದೆ ಶ್ರೀರಾಮ ಕಾಡಿಗೆ ಹೋಗುವುದನ್ನು ಸಾಧ್ಯ ಮಾಡಬಹುದೆ ? ರಾಮನು ಅಯೋಧ್ಯೆಯಲ್ಲೆ ಇದ್ದಿದ್ದು ಎಷ್ಟೆ ಸತ್ತ್ವಗುಣ ಸಾಕ್ಷಾದ್ರೂಪನಾಗಿದ್ದರೂ ಶ್ರೀರಾಮಚಂದ್ರನಾಗುತ್ತಿದ್ದನೆ ? ರಾವಣವಧೆ ಇವನ ಅವತಾರದ ಉದ್ದೇಶವಷ್ಟೆ ಆಗಿದ್ದಿದ್ದರೆ ಅವನನ್ನು ಹೇಗಾದರೂ ಕೊಲ್ಲಬಹುದಿತ್ತಲ್ಲ ? ಹಾಗೆ ಮಾಡಬರುತ್ತಿದ್ದಿತೆ ? ಹಾಗಿದ್ದರೂ ಶ್ರೀರಾಮಸೀತಾಲಕ್ಷ್ಮಣ ಆಂಜನೇಯಾದಿಗಳ ಸತ್ತ್ವಸಾಕ್ಷಾತ್ಕಾರವಾಗುತ್ತಿದ್ದಿತೆ ? ಆದ್ದರಿಂದಲೇ ಸತ್ಯಕಾರಣಕ್ಕಾಗಿ ಶ್ರೀರಾಮ ರಾಜ್ಯತ್ಯಾಗಮಾಡಿ ವನವಾಸಮಾಡಬೇಕಿದ್ದಿತು. ಅದು ಸಾಧ್ಯವಾಗಲು ಮಂಥರೆಗಿಂತಲೂ ಸಮರ್ಥ ಕರಣ–ಸಾಧನ ಯಾರು ? ಕೈಕೆಯನ್ನು ಪ್ರೇರಿಸಿ ಆ ಕಾರ್ಯಕ್ಕೆ ತೊಡಗುವಂತೆ ಮಾಡುವ ಈ ವ್ಯಕ್ತಿಯನ್ನು ಮತ್ತೆ ಯಾವ ರಾಮಪ್ರಿಯರು ತಾನೆ ಮೆಚ್ಚಿಕೊಂಡಾರು ? ಆಕೆ ತ್ಯಾಜ್ಯವ್ಯಕ್ತಿಯಾಗೆ ಉಳಿಯುವುದಾದರೆ ನಮ್ಮ ಯುಗಕ್ಕೆ ಅದರಿಂದ ಬಂದ ಅರ್ಥವೇನು ? ಆಧುನಿಕ ಮನೋವಿಜ್ಞಾನ ನಮ್ಮ ದೋಷದೌರ್ಬಲ್ಯಗಳಿಗೆ ಪರಿಸರವೆಷ್ಟು ಕಾರಣವೆಂಬುದನ್ನು ಮನದಟ್ಟುಮಾಡಿಕೊಟ್ಟಿದೆ. ಅದರ ಫಲವಾಗಿ ನಮ್ಮ ಅಪರಾಧ, ಅಪರಾಧಿ ಕಲ್ಪನೆಯೆ ವ್ಯತ್ಯಾಸಗೊಂಡಿದೆ. ಕ್ರಿಸ್ತಾದಿ ಮಹಾಪುರುಷರ ಕರುಣೆಗಿಂತಲೂ ಬಲಿಷ್ಠವಾಗಿ ಈ ವಿಜ್ಞಾನ ಪರಿಣಾಮ ಬೀರಿದೆ. ಫಲವಾಗಿ ಅಪರಾಧ ಸಿಕ್ಷೆ – ಸೆರೆಮನೆಗಳೆಲ್ಲ ಹೆಚ್ಚು ಮಾನವೀಯವಾಗತೊಡಗಿವೆ. ಕದ್ದ ಕೈ ಕತ್ತರಿಸು, ಕದ್ದು ನೋಡಿದ ಕಣ್ಣು ಕೀಳು, ಕದ್ದು ಕೇಳಿದ ಕಿವಿಗೆ ಕಾದ ಸೀಸವನ್ನು ಸುರಿ – ಎಂಬ ಇತ್ಯಾದಿ ಶಿಕ್ಷಾತತ್ತ್ವಗಳೆಲ್ಲ ದಸ್ಯುನೀತಿಗಳಾಗಿ ತೋರತೊಡಗಿವೆ. ಹೀಗಿರುವಾಗ ಮಂಥರೆಗೆ ಮನೋವಿಜ್ಞಾನದ ನೆಲೆಯಿಂದ



ಸಮಾಜವಿಜ್ಞಾನದ ನೆಲೆಯಿಂದ ಹಳೆಯ ತಿರಸ್ಕಾರ ತಕ್ಕದ್ದಲ್ಲ, ಮಿಗಿಲಾಗಿ ಕವಿ ಕಂಡ ಕಾಣ್ಕೆ ಪೂರ್ಣದೃಷ್ಟಿಯಾಗಬಯಸಿರುವುದರಿಂದ ಅದು ಮಂಥರೆಯ ಪಾತ್ರವನ್ನು ಮನೋವೈಜ್ಞಾನಿಕ – ಸಾಮಾಜಿಕ ಎಂದು ಮಾತ್ರವೆ ನೋಡಲು ಇಚ್ಛಿಸುವುದಿಲ್ಲ, ರಾಮಾಯಣದ ಪಾತ್ರಗಳ ಆಗುವಿಕೆಯ ಅನಿವಾರ್ಯಪಥ ಪ್ರಾರಂಭವಾಗುತ್ತಾಳೆ. ಅದನ್ನೆ ಸೀತಾದೇವಿ ತ್ರಿಜಟೆಗೆ ಹೇಳುವುದು :

‘ಆವುದಾಗಲಿ ನೆಪಂ,
ಫಲದಾಯಕಂ ತಪಂ, ನನಗೆ ರಘುನಾಥಂಗೆ,
ಮೇಣ್ ರಾಕ್ಷಸೇಂದ್ರಂಗೆ ಮೂವರ್ಗಮವರವರ
ಕರ್ಮಾನುಸಾರಿ ಜನ್ಮೋದ್ದೇಶಸಾಧನೆಗೆ
ಮೇಣಾತ್ಮವಿಕಸನದ ಪರಿಣಾಮಸಿದ್ಧಿಗೆ,
ಸಹಾಯಮಾದುದು ಮಂಥರೆಯ ಮೂಲದೀ ಬೃಹದ್
ದುರ್ಘಟನೆ. ಇನ್ನೆನಿತು ಜೀವರಿಗೆ ತಂತಮ್ಮ
ಕರ್ಮಕ್ಷಯಕೆ ಮತ್ತು ಧರ್ಮಾಭ್ಯುದಯಕಿದು
ನಿಮಿತ್ತಮಾದುದೊ ಪೇಳ್ವರಾರ್ ?’

– ಶ್ರೀ ರಾ. ದ. : ಶ್ರೀರಾಮರಾವಣ ಚಿತ್‌ತಪಸ್‌ಶ್ರೀ. ಪಂಕ್ತಿ ೧೯೬–೨೦೪

ಉಪವಾಸವ್ರತಗೊಂಡು ಶ್ರೀರಾಮಾಗಮನವನ್ನು ಎದುರುನೋಡುತ್ತ ಅಗ್ನಿಕುಂಡದ ಬಳಿಯಲ್ಲಿದ್ದ ಭರತನ ಕಣ್ಮುಂದೆ ಯಜ್ಞಾಗ್ನಿಯ ನಡುವೆ ಬೆಳ್ಳುರಿಯ ಮೈಯಾಗಿ ಮೈದೋರುವ ಮಂಥರೆಯ ಆತ್ಮ ಹೇಳುವಂತೆ ‘ಕಾರಣಳಲ್ತು ; ಬರಿ ಕರಣಮಾ ಕುಬ್ಜೆ.’[೧೧] ಹೀಗೆ ಶ್ರೀರಾಮಾಯಣದ ಆಗುವಿಕೆಗೆ ಕರಣವಾಗುವ

೧೧. ಶ್ರೀರಾಮಭರತಾದಿಗಳೆಲ್ಲರು ಎಳೆಕಂದಗಳಾಗಿದ್ದಾಗ ಒಂದು ಘಟನೆ ನಡೆಯುತ್ತದೆ. ಒಂದು ಹುಣ್ಣಿಮೆಯ ರಾತ್ರಿ – ತಾಯಂದಿರ ಕಂಕುಳಲ್ಲಿ ಶಿಶುಗಳೆಲ್ಲ ನಲಿಯುತ್ತಿವೆ, ಆಗ ಒಮ್ಮೆಲೆ ಶಿಶುರಾಮ ಅಳತೊಡಗುತ್ತಾನೆ. ಯಾರ ಸಂತೈಕೆಗೂ ಅಳು ನಿಲ್ಲಲಿಲ್ಲ. ರಾಜ ದಶರಥನ ಸಂತೈಕೆಗೂ ಮಗ್ಗಲಲ್ಲಿ ; ಕಂದನ ಗೋಳು ತಪ್ಪಿಸುಂತಹ ಸಾಮರ್ಥ್ಯವಿರದ ತನ್ನ ರಾಜತ್ವ ಬಡತನವಾಗಿರುವಂತೆ ತೋರುತ್ತದೆ ಅವನಿಗೆ. ಆಗ ಅದಾರೋ ಬೆನ್ನುಬಾಗಿದ ವ್ಯಕ್ತಿಯೊಂದು ಯಾರ ಕೈಯಲ್ಲೊ ಏನನ್ನೊ ಕೊಟ್ಟು ಪಿಸುಗುಟ್ಟಿ ಹೋಗುತ್ತದೆ. ಅದನ್ನು ಹಸುಳೆಯ ಗೋಳು ಕಿಲಿಕಿಲಿ ಮುಗುಳಾಗುತ್ತದೆ. ಆಗ, ಬಾಗುಬೆನ್ನಿನ ಆ ವ್ಯಕ್ತಿ ಮುಂದೆ ಬಂದು ಕಂದನನ್ನು ಎತ್ತಿಕೊಳ್ಳಹೋಗುತ್ತದೆ. ‘ಕಂದಂಗಮಂಗಳಮ್! ಮುಟ್ಟದಿರ್ ಮುಟ್ಟದಿರ್’ ಎಂದು ಕೌಸಲ್ಯೆ ಆಕೆಯನ್ನು ನಿವಾರಿಸುತ್ತಾಳೆ. ಆ ಮುದುಕಿ ಯಾರು? ಮಂಥರೆ? ಕೊಟ್ಟದ್ದೇನು? ಕನ್ನಡಿ ! ಯಾರ ಕೈಯಲ್ಲಿ? ಕೈಕೆಯ ಕೈಯಲ್ಲಿ, ಶಿಶುರಾಮನಿಗೆ ಬೇಕಾಗಿದ್ದ ಗಗನಚಂದ್ರನನ್ನು ಆ ಕನ್ನಡಿಯಲ್ಲಿ ತಂದುಕೊಟ್ಟಳು ಆಕೆ. ರಾಮ ಶ್ರೀರಾಮಚಂದ್ರನಾಗಲು ವನವಾಸ ಅನಿವಾರ್ಯ ಯೋಗವಾಗಿದೆ. ಅದಕ್ಕೆ ಮಂಥರೆ – ಕೈಕೆಯರು ಕನ್ನಡಿ ನೀಡಿದ, ಕನ್ನಡಿ ತಂದು ತೋರಿದವರಾದರು.

ಮಂಥರೆಯ ಪಾತ್ರ ತನ್ನ ಸ್ವಭಾವದಲ್ಲೆ ಆಳವಾಗಿ ಬೇರುಬಿಟ್ಟು, ಅದರಿಂದಾಗಿಯೆ ಬಾನೆತ್ತರಕ್ಕೆ ಬೆಳೆದು ದೇವಗಂಗಾಜಲಸ್ತನ್ಯಪಾನ ಮಾಡುವಂತೆ ಆಕೆಯ ಪಾತ್ರವನ್ನು ಸೃಷ್ಟಿಮಾಡಿದ್ದಾರೆ ಕವಿ. ಅದಕ್ಕೆ ಅವಳ ಹುಟ್ಟನ್ನು ಕಲ್ಪಿಸುತ್ತಾರೆ. ಹೇಗೆ ಆ ಪರಿಸರವೆ ಅವಳ ಸಮಸ್ತ ಪಾತ್ರವು ಬಹಿರ್ಮುಖವಾಗಿ ಹಬ್ಬದೆ ಸ್ವಗತವಾಗಿಯೆ ಬೆಳೆಯಲು ಕಾರಣವಾಯಿತು ಎಂಬುದನ್ನೂ ಧ್ವನಿಸುತ್ತಾರೆ. ದಸ್ಯುಶಿಶುವಾಗಿ ಅಪುತ್ರವಂತ ಕೈಕೆರಾಜನ ವಾತ್ಸಲ್ಯವನ್ನು ಸೂರೆಗೊಂಡ ಶಿಶುಮಂಥರೆ ಉಳಿದ ಜನರಿಗೆ ತನ್ನ ರೂಪ–ಕುಲದಿಂದಾಗಿ ಅಸಹ್ಯವಾಗುತ್ತಾಳೆ. ಅದರಿಂದಾಗಿಯೆ ಒಳವರಿಯುತ್ತದೆ ಅವಳ ಬಾಳಕುಡಿ. ರಾಜಪುತ್ರಿಯನ್ನು ಆಡಿಸುವ ಏಕೈಕದಾದಿಯಾದ ಹದಿಹರಯದ ಮಂಥರೆಯ ಪ್ರೀತಿ–ಮದುವೆ ಮುದಗಳೊಂದನ್ನೂ ಕಾಣಲಾಗದಿದ್ದಾಗ ಆ ಮಗು ಸುತ್ತವೆ ಗಾಢಘನವಾಗಿ ಸಾಂದ್ರವಾಗುತ್ತ, ಧ್ರುವಪ್ರದೇಶದಲ್ಲಿ ಶೀತದಿಂದ ಘನೀಭೂತವಾಗಿ ಪರ್ವತವಾಗಿ ಬೆಳೆದಿರುವ ಜಲಸಂಪತ್ತಿನಂತೆ ಧ್ರುವೀಕೃತವಾಗುತ್ತದೆ. (ಆಶ್ಚರ್ಯವೆಂದರೆ ಆ ಮಂಜುಬೆಟ್ಟ ಶುದ್ಧ ಸಿಹಿನೀರು ; ಅದು ಕರಗಿದರೆ ನಮ್ಮ ಪ್ರಪಂಚದ ಎಷ್ಟೋ ಮಟ್ಟ ನೆಲಗಳು ಸಾಗರ ಸೇರಬೇಕಾಗುತ್ತವೆ !) ಬೆಳೆದು ಮದುವೆಯಾದ ಕೈಕೆಯ ಜೊತೆಯಲ್ಲೆ ಮಂಥರೆಯೂ ಅಯೋಧ್ಯೆಗೆ ನಡೆಯುತ್ತಾಳೆ. ಮೈವಿಕಾರ ಮತ್ತೂ ಹೆಚ್ಚುತ್ತಿರುವಾಗ ಅಲ್ಲಾದರೂ ಅವಳಿಗೆ ಜನಪ್ರೀತಿಯೆಲ್ಲಿ ? ಹೊಸ ಪರಿಸರದಲ್ಲಿ ಕೈಕೆಯೊಬ್ಬಳೆ ಪ್ರೀತಿಧ್ರುವವಾಗುತ್ತಾಳೆ. ಭರತಜನನವಾದ ಮೇಲೆ ಆ ಧ್ರುವ ವಿಸ್ತರಣವಾಗುತ್ತದೆ. ಸೂರ್ಯಚಂದ್ರಾದಿ ಸೃಷ್ಟಿಯಾಗಲಿ ಅಯೋಧ್ಯೆ ದಶರಥಾದಿಗಳು ಇರುವುದಾಗಲಿ ಆ ಇಬ್ಬರಿಗಾಗಿಯೆ ಎಂಬ ಖಚಿತ ವಿಶ್ವಾಸ ಅವಳದು. ಹಾಗಿರುವಾಗ ರಾಮನಿಗೆ ಪಟ್ಟಾಭಿಷೇಕ ಆಗಬರುವುದೆಂದು ? ಕೈಕೆಯನ್ನು ಪ್ರೇರಣ ಮಾಡುವ ಮಂಥರೆಯ ಹಿನ್ನೆಲೆ ಇದು. ಈ ಹಿನ್ನೆಲೆಯ ಸೃಷ್ಟಿಯಿಂದ ಮನೋವೈಜ್ಞಾನಿಕ ಭೂಮಿಕೆಯಷ್ಟನ್ನೆ ಸೃಷ್ಟಿಸಿದಂತಾಗುತ್ತಿತ್ತು, ಕವಿಯೇನಾದರೂ ಮಂಥರಾ ವೃತ್ತಾಂತವನ್ನು ಅಷ್ಟಕ್ಕೆ ನಿಲ್ಲಿಸಿದ್ದರೆ. ಆದರೆ ಮನೋವೈಜ್ಞಾನಿಕ ಸಹಜತೆಯಿಂದ ನಡೆಯುತ್ತಲೆ ಅವಳ ಪಾತ್ರ ಆಧ್ಯಾತ್ಮಿಕ ವಲಯವನ್ನು ಸೇರುತ್ತದೆ.

ಶ್ರೀರಾಮಸೀತಾಲಕ್ಷ್ಮಣರು ಕಾಡಿಗೆ ಹೊರಟಮೇಲೆ ದಶರಥ ಅಸುನೀಗಿದ. ಆ ಭೀಷಣ ಶ್ಮಶಾನದಲ್ಲಿ ಸಂತೋಷಾತಿಶಯದಿಂದ ಇದ್ದವಳೆಂದರೆ ಮಂಥರೆಯೊಬ್ಬಳೆ. ತನ್ನ ಬದುಕಿನ ಪೂರ್ಣಫಲ ಸಾಕ್ಷಾತ್ಕಾರವಾದಂತಿರುತ್ತಾಳೆ. ತನ್ನ ಸಾಧನೆಯೆಲ್ಲ ಕೈಕೆ–ಭರತರಿಗಾಗಿ ನಡೆದು ಫಲ ಬಿಟ್ಟಿತೆಂದೆ ಭಾವಿಸಿರುತ್ತಾಳೆ. ಅದನ್ನು ಗೋಪನ ಮಾಡಿಕೊಳ್ಳಲೂ ಬಾರದು ಅವಳಿಗೆ. ತನ್ನ ಭರತ ಮಾವನ ಮನೆಯಿಂದ ಹಿಂದಿರುಗಿದಾಗ ಎಷ್ಟೆಲ್ಲ ಮೆಚ್ಚಿಕೊಳ್ಳುತ್ತಾನೋ ಎಂದೇ ಮಂಡಿಗೆ ತಿನ್ನುತ್ತಿರುತ್ತಾಳೆ. ಆದರೆ ರುದ್ರಭೂಮಿಯಂತಹ ಅಯೋಧ್ಯೆಯನ್ನು ಪ್ರವೇಶಿಸಿದ ಭರತಶತ್ರುಘ್ನರು ಅವಳನ್ನು ಬಹುಮಾನಿಸಲಿಲ್ಲ. ನಿಜಸಂಗತಿ ತಿಳಿದ ಶತ್ರುಘ್ನ ಅವಳಿಗೆ ಯಮಸ್ವರೂಪಿಯಾಗುತ್ತಾನೆ. ಅವಳ ಜಡೆಯನ್ನು ಕೊಯ್ದೆಸೆದು ನೆಲಕ್ಕೆ ಕುಕ್ಕುತ್ತಾನೆ. ಅವಳ ಆಕ್ರಂದನವನ್ನು ಕೇಳಿ ಸಹಜವಾಗಿ ಅಕ್ಕರೆ ಉಕ್ಕಿದ ಭರತ ಆ ಎಡೆಗೆ ಓಡಿಬಂದು ಅವಳನ್ನು ಕಂಡೊಡನೆಯೆ ಕಹಿಗೊಳ್ಳುತ್ತಾನೆ. ರಕ್ಷೆ ಬೇಡಿ ತನ್ನೆಡೆಗೆ ಬಂದ ಅವಳನ್ನು ತೊಲಗಿಸಿ ಬಿಕ್ಕಳಿಸುತ್ತಾನೆ. ಅವನಾಡಿದ ಉಗ್ರನುಡಿಗೆ ಹಾಗೂ ತನ್ನನ್ನು ನೋಡದೆಯೂ ಹೋದ ಭರತನ ಪ್ರತಿಕ್ರಿಯೆಗೆ ತೀವ್ರಹತಳಾದ ಮಂಥರೆ ಕೆಡೆದು ಬೀಳುತ್ತಾಳೆ, ಗುಂಡುಬಡಿದಂತೆ. ಅವಳ ಆತ್ಮವಾದರೋ ಸೂರ್ಯಾಕರ್ಷಣೆ ತಪ್ಪಿದ ಭೂಮಿ ನೀಲಶೂನ್ಯಕ್ಕುರುಳುವಂತೆ ತಳಗೆಟ್ಟು ಚೂರ್ಣವಾಗುತ್ತದೆ.

ಇಷ್ಟಕ್ಕೇ ಮಂಥರೆಯ ಕಥೆಯನ್ನು ನಿಲ್ಲಿಸಿದ್ದರೂ ಅದು ಕೇವಲ ಮನೋವೈಜ್ಞಾನಿಕ ಭೂಮಿಕೆಯಲ್ಲಷ್ಟೇ ಸ್ಥಾಪಿತವಾದ ವಾಸ್ತುಶಿಲ್ಪವಾಗುತ್ತಿತ್ತು. ಆದರೆ ಮನೋವೈಜ್ಞಾನಿಕ ಸಹಜತೆಯಾದರೂ ಅಲ್ಲಿ ನಿಲ್ಲದೆ ಸಹಜವಾಗಿಯೆ ಮುಂದಕ್ಕೆ ಧಾವಿಸುತ್ತದೆ – ಬಿದ್ದ ಮಂಜುಬೆಟ್ಟ ಬೀಳುವಿಕೆಯಲ್ಲೆ ಕೊನೆಗೊಳ್ಳದೆ, ಹುಚ್ಚು ಪ್ರಳಯ ಪ್ರವಾಹವಾಗಿ ಹರಿಯುವಂತೆ. ಭರತ ಪ್ರೀತಿಯು ವಿಶೇಷಲಾಭಾಕಾಂಕ್ಷೆಯಿಂದ ಹಾಗೂ ತನಗದು ಸಹಜಪ್ರೀತಿಮಾರ್ಗವಾಗಿದ್ದುದರಿಂದ ಆ ಮಂಥರೆ ಮಾಡಿದ ಕಾರ್ಯ ಆಕೆಗೆ ತಂದು ಕೊಟ್ಟದ್ದೇನು? ತನಗಾದ ಭರತಪ್ರೇಮದ ಘೋರನಷ್ಟವನ್ನು ಸಹಿಸಲಾರದೆ ಮತ್ತದನ್ನು ಗಳಿಸಿಕೊಳ್ಳುವ ಮಾರ್ಗ ಹುಡುಕುತ್ತಾಳೆ. ಅದೆಂದರೆ ರಾಮಪುನರಾಗಮನ. ರಾಮನನ್ನು ಪ್ರೀತಿಸದೆ ತನ್ನನ್ನೆ ಪ್ರೀತಿಸಹೋದರೆ, ನೀರನ್ನು ಬಿಟ್ಟು ತಾವರೆ ತನ್ನ ಪ್ರಿಯಸಖ ಸೂರ್ಯನನ್ನು ಅಪ್ಪಿಕೊಳ್ಳಹೋದಂತಾಗುತ್ತದೆಂದು ಭರತನೇ ಹೇಳಿದ್ದ. ಆ ಮಾತಿನಲ್ಲಿ ನಿಷ್ಠೆಯಿದ್ದ ಅವಳಿಗೆ ಅದರಿಂದಲೆ ಹಾದಿಯೂ ಹೊಳೆಯಿತು. ರಾಮನನ್ನು ಹಿಂತರಬೇಕು. ಆದರಾ ರಾಮ ರಾಮನಾಗಲ್ಲ, ಭರತನ ಅಣ್ಣಯ್ಯನಾಗಿ. ತನಗಾಗಲ್ಲ, ತನ್ನ ಭರತನಿಗಾಗಿ, ಅವನಿಂದಾಗಿ ತನಗಾಗಿ. ಹೀಗೆ ಪುಣ್ಯವನ್ನರಸುತ್ತ ಹೋಗುವ ಪಾಪದಂತೆ ಕಾಡತ್ತ ಧಾವಿಸಿದ ಅವಳು ಹಸಿದು, ನೆತ್ತರು ಬಸಿದು, ದಣಿದು ತತ್ತರಿಸಿದ್ದರೂ 'ತೊಟ್ಟ ನೋಂಪಿಯ ಬಲ್ಮೆಯೂರೆಗೋಲಂ ನೆಮ್ಮಿ'–ರಾಮನ್ನು ಕರೆಯುತ್ತ ಮುಗ್ಗರಿಸುತ್ತ ನಡೆಯುತ್ತಾಳೆ. ಆ ಅವಸ್ಥೆಯಲ್ಲಿದ್ದ ಕಣ್ಣಿಗೆ ಕಾಡುಗಿಚ್ಚೆ ರಾಮನಂತೆ ತೋರುತ್ತದೆ. ಅದರೊಳಗೆ

ಧಾವಿಸುತ್ತಾಳೆ. ಅತ್ತ ಇದೇ ವನಾಗ್ನಿಯನ್ನು ಶ್ರೀರಾಮ ಸೀತೆಯರು ಚಿತ್ರಕೂಟದ ತುದಿಯಿಂದ ನೋಡಿ ಸವಿಯುತ್ತಿರುತ್ತಾರೆ ! (ಈ ಶ್ರೇಷ್ಠ ಚಿತ್ರ ಪ್ರತಿಮೆಯ ಧ್ವನಿಯನ್ನು ಕವಿ ಕೊಂಚವೂ ವಾಚ್ಯಮಾಡ ಹೋಗಿಲ್ಲ. ಮೇಲಾಗಿ ತಾವೇ ಗಮನಿಸಿಯೂ ಇಲ್ಲವೆಂಬಂತೆ ಚಿತ್ರಿಸಿದ್ದಾರೆ).

ಮಂಥರೆಯ ಪಾತ್ರದಲ್ಲಾಗುವ ತಿರುವೂ ಮನೋವೈಜ್ಞಾನಿಕ ಸಹಜತೆಯಿಂದಲೆ ಕೂಡಿದೆಯೆಂಬುದನ್ನು ಮೇಲೆ ಕಂಡಿದ್ದೇವೆ. ಆದರೆ ಅದೀಗ ಅಲ್ಲೆ ನಿಲ್ಲುತ್ತದೆಯೆ? ಶ್ರೀರಾಮವನವಾಸಕ್ಕೆ ಕಾರಣವಾದವಳು ಮತ್ತೆ ಅವನನ್ನೆಂತು ಹಿಂತರಬರುತ್ತದೆ? ಭೌತಸತ್ತ್ವದಿಂದಂತೂ ಸಾಧ್ಯವಿಲ್ಲ. ಪ್ರಾರ್ಥನೆಯಾಗಿ ಆತ್ಮಿಕ ಶಕ್ತಿಯಾಗಿ ಶ್ರೀರಾಮನ ಹಿಂದೆಯೆ ಹೋದ ಸತ್ತ್ವಗಲ್ಲಿ ಮಂಥರೆಯೂ ಒಬ್ಬಳೆಂಬುದು ಕವಿಯ ಕಾಣ್ಕೆ. ಅದೆಲ್ಲಿ ಬಂತು, ಅದು ಹೇಗೆತಾನೆ ಆದೀತು? ಎಂದರೆ ಅಂಥವಳಿಂದ ರಾಮವನವಾಸವಾದರೂ ಹೇಗೆ ಸಾಧ್ಯವಾಯಿತು ಎಂಬ ಪ್ರಶ್ನೆ–ಸಮಾಧಾನ ಬರುತ್ತದೆ. ಯಾವ ವ್ಯಕ್ತಿ ಶಕ್ತಿಯೂ ಸಾಯುವುದರಿಂದಲೆ ಕೊನೆಗೊಳ್ಳುವುದಿಲ್ಲ. ಮಂಜುಗಡ್ಡೆ ಸತ್ತರೆ ನೀರು ; ನೀರು ಸತ್ತರೆ ಆವಿಯಾಗಿ ಬದುಕೀತು. ಮಂಥರೆಯ ಘೋರಸಂಚಿತ ಪ್ರೀತಿ ಹೇಗೆತಾನೆ ಪಾತಾಳ ಬಿದ್ದು ಲಯವಾದೀತು, ಭರತನ ಪ್ರೀತಿಯನ್ನು ಕಾಣುವ ತನಕ? ಅದರಿಂದಲೆ ಆ ಮಂಥರಾತ್ಮಜ್ಯೋತಿ ಭರತನಿಗೆ ರಾಮಾಯಣದ ಕಡೆಯಲ್ಲಿ, ಯಜ್ಞಾಗ್ನಿಮಧ್ಯದಿಂದೆದ್ದು ಕಾಣಿಸಿಕೊಳ್ಳುತ್ತದೆ. ಸುಮ್ಮಸುಮ್ಮನಲ್ಲ. ಶ್ರೀರಾಮಾಗಮನವಾಗದಿದ್ದರೆ ಯಜ್ಞಾಗ್ನಿಯಲ್ಲಿ ಬಿದ್ದು ಕೊಳ್ಳುವುದಾಗಿ ವ್ರತಗೊಂಡಿರುವ ಭರತನಿಗೆ ಸಮಾಧಾನ ಹೇಳಲಾಗಿ, ಶ್ರೀರಾಮಾಗಮನವಾರ್ತೆ ತಿಳಿಸಲಾಗಿ. ಮಂಜುಗಡ್ಡೆಗೆ ತನ್ನ ಗಾತ್ರದಷ್ಟು ಮಾತ್ರ ನೆಲದರಿವಿದ್ದೀತು. ಜಲರೂಪಿಯಾದಾಗ ಅದಕ್ಕೆ ಮತ್ತೂ ವಿಸ್ತಾರದ ಅರಿವು ಒದಗುತ್ತದೆ. ಆದರದೇ ಮೋಡವಾದಾಗ, ನೆಲದವರಿಗೆ ಕಾಣದ ದೂರಗಳೆಲ್ಲ ವಿಸ್ತಾರಗಳೆಲ್ಲ ಕಾಣುತ್ತದೆ. ಮಂಥರೆಗೆ ಶ್ರೀರಾಮಾಗಮನ ತಿಳಿಯುತ್ತದೆ. ಪ್ರೇಮಭೈರವಿ ಪ್ರೇಮಲಕ್ಷ್ಮಿಯಾಗಿ, ಮಂಥರಾ ಲಕ್ಷ್ಮಿಯಾಗಿ ಆಧ್ಯಾತ್ಮಿಕವಾಗುತ್ತಾಳೆ. ಕಾಡುಗಿಚ್ಚಿನಲ್ಲಿ ಮುಳುಗಿ ಯಜ್ಞಾಗ್ನಿಯಲ್ಲಿ ಜ್ಯೋತಿಶ್ಶರೀರಿಯಾಗಿ ಮೇಲೆದ್ದು ಮೈದೋರುತ್ತಾಳೆ. ಹೀಗೆ ಕವಿ ಕಾಡುಗಿಚ್ಚನ್ನು ಯಜ್ಞಾಗ್ನಿಯಾಗಿ ಪರಿಣಾಮಗೊಳಿಸುತ್ತಾರೆ.

ಹೀಗೆ, ಶ್ರೀರಾಮಾಯಣದರ್ಶನದಲ್ಲಿ ರಾವಣನ ಪಾತ್ರವನ್ನೂ ಕವಿ ಮನೋವೈಜ್ಞಾನಿಕ ಭೂಮಿಕೆಯ ಮೇಲೆ ನಿಲ್ಲಿಸಿ ಆಧ್ಯಾತ್ಮಿಕ ಆಯಾಮವಿತ್ತು ಬೆಳೆಸುತ್ತಾರೆ. ಇಲ್ಲಿನ ಪಾತ್ರಗಳಿಗೆಲ್ಲ ಈ ಎರಡು ಆಯಾಮಗಳು ಸೇರಿಕೊಂಡಿವೆ.



ಒಮ್ಮೊಮ್ಮೆ ಬೌದ್ಧಿಕಸ್ತರದಲ್ಲೆ ಉಳಿದೂ ಬಿಡಬಹುದಾದ ಈ ವ್ಯಾಪಾರ ಹೆಚ್ಚು ಅಪ್ರಜ್ಞಾವಲಯದಲ್ಲಿ ನಡೆಯುವುದು ರಾವಣನ ಪಾತ್ರದಲ್ಲಿ. ಶ್ರೀರಾಮಸೀತಾಲಕ್ಷ್ಮಣ ಹನುಮಂತ ಭರತಾದಿ ಪಾತ್ರಗಳು ವಾಲ್ಮೀಕಿರಾಮಾಯಣದ ಖಚಿತ ರೂಪದಲ್ಲೆ ಉಸಿರಾಡಿದರೂ ಅವರಲ್ಲೂ ಈ ಆತ್ಮಿಕ ಜಾಗೃತಿಯ ಅವಸ್ಥೆಗಳನ್ನು ಬಿಡಿಸಿ ತೋರುತ್ತಾರೆ ಕವಿ. ಮೊದ ಮೊದಲು ಜಾಗ್ರತ ಮಾನುಷಸ್ತರದಲ್ಲಿ ವರ್ತಿಸುವ ಈ ಪಾತ್ರಗಳು ಹೆಚ್ಚು ಸಂಘಾತಕ್ಕೆ ಒಳಗಾದಂತೆಲ್ಲ, ಹೆಚ್ಚು ಅಂತಸ್ತಾಪಕ್ಕೆ ಈಡಾದಂತೆಲ್ಲ ತಪೋಮಯವಾಗಿ ಆಧ್ಯಾತ್ಮಿಕವಾಗುತ್ತವೆ. ಈ ಪರಿಣಾಮಕ್ರಿಯೆಗೆ ಒಬ್ಬೊಬ್ಬರೇ ಕರ್ತರಾಗದೆ ಪರಸ್ಪರ ಚೋದಕ–ಪ್ರೇರಕ– ಸಹಾಯವಾಗುತ್ತಾರೆ. ರಾವಣನ ಅಂತಸ್ಸತ್ತ್ವದ ಮಾಗುವಿಕೆಗೆ – ಪರಿಣಾಮಕ್ಕೆ – ಅವನೇ ಬೌದ್ಧಿಕವಾಗಿ ಸಿದ್ಧನಿಲ್ಲ. ಆದರೆ ಅವನೊಡನೆ ತೆಕ್ಕೆಗೊಂಡಿರುವ ಇತರ ಚೇತನಗಳು, ಅವುಗಳೊಡನೆ ಕೊಂಡಿಗೊಂಡಿರುವ ಇತರ ಚೇತನಗಳು ತಮ್ಮ ತಮ್ಮ ಹಿತೋದ್ಧಾರಕ್ಕಾಗಿ ಮಾಡುವ ಸಾಧನೆಯೆ ಅವನನ್ನು ಮಾಗಿಸತೊಡಗುತ್ತದೆ. ಅಥವಾ, ಅವನ ವ್ಯಕ್ತಿತ್ವದಲ್ಲೆ ನಿಗೂಢವಾಗಿ ಅಂತರ್‌ನಿಹಿತವಾಗಿದ್ದ ಶಿವಾಂಶ – ಶ್ರೀ ರಾಮತ್ವ ಅವನ ಪರಿಣಾಮಕ್ಕೆ ಕಾರಣವಾದರೂ ಅದನ್ನು ಆ ಪಾರಿಣಾಮಕತೆಯನ್ನು ತ್ವರೆಗೊಳಿಸುವ ವೇಗೋತ್ಕರ್ಷಕಗಳಾಗುತ್ತವೆ.

ಶ್ರೀರಾಮಾಯಣದರ್ಶನದ ರಾವಣ ಶ್ರೀವಾಲ್ಮೀಕಿಗಳ ರಾವಣನಷ್ಟೆ ಉತ್ಕಟ ಕಾಮಿ, ಅಹಂಕಾರಿ, ಶಕ್ತ ; ಆದರಿಲ್ಲಿ ಇವರು ಅವನನ್ನು ಸಂಸಾರಾವರಣದಲ್ಲಿಟ್ಟು ನೋಡುತ್ತಾರೆ. ವಾಲ್ಮೀಕಿಗಳ ರಾವಣನನ್ನು ಮೊದಲು ನಾವು ಕಾಣುವುದು ರಾಕ್ಷಸ ಆಸ್ಥಾನದ ಸಿಂಹಾಸನದಲ್ಲಿ, ಶೂರ್ಪನಖಿ ಬಂದು ತನ್ನ ವೃತ್ತಾಂತವನ್ನು ತಿಳಿಸುವಾಗ, ಕುವೆಂಪು ರಾವಣನಾದರೂ ಶೂರ್ಪನಖಿಯ ವೃತ್ತಾಂತದಿಂದ ಪ್ರೇರಿತನಾಗಿ, ಸೀತಾಪಹರಣಕಾರ್ಯಕ್ಕೆ ಹೊರಟು ಮಂಡೋದರಿಯನ್ನು ಬೀಳ್ಕೊಡುವಾಗ ನಮಗೆ ಮೊದಲು ಕಾಣುತ್ತಾನೆ. ವಾಲ್ಮೀಕಿಗಳ ರಾವಣ ಸಕಲ ಭಯಂಕರನಾಗಿ ರಾಕ್ಷಸಾಧಿಪತಿಯಾಗಿ ತೋರಿದರೆ, ಇಲ್ಲಿವನು ಸಂಸಾರಿಯಾಗಿ ಸೌಮ್ಯಭಯಂಕರನಾಗಿದ್ದಾನೆ. ಆ ವರ್ಣನೆ ಹೀಗೆ ಬರುತ್ತದೆ :

'ತನ್ನ ಮನೋಹರಿಯ, ಲಂಕೇಶ್ವರಿಯ, ದಯಿತೆ
ಮಂಡೋದರಿಯ ಮೆಯ್ಯ ಮೋಹ ಸರಿಸಿಯೊಳಾಡಿ
ತಡಿಗೇರ್ದ ಮತ್ತೇಭ ಸನ್ನಿಭ ಪುಲಸ್ತ್ಯಜಂ
ಮೀಸೆಗೆಯ್ಯಾಗಿ, ಕಿರುನಗೆವೆರಸಿ, ತಂಬುಲಂ
ಹೃದಯರಾಗಮನಧರಕಿತ್ತಂತೆ ಕೆಂಪೆಸೆಯೆ

ಒರೆದನಿಂತೋಪಳಿಗೆ : "ಪ್ರಿಯೆ, ಪಯಣವಿದೆ ನಾಳೆ ;
ದೂರಂ ಮಹತ್ತರಂ ; ಅನಿವಾರ್ಯಮುಂ ದಿಟಂ.
ನಿನ್ನ ದಾಸಿಯರಿತರ ಮಹಿಷಿಯರಿಗದನರುಹಿ
ನನಗಾಗಿ ಮುಂದೆ ತಳ್ಪೌತಣದ ಕೂಟಮಂ,
ವೇಲಾದ್ರಿಸಾನುವನದಾ ವಿಹಾರಯಾತ್ರೆಯಂ
ಪುಷ್ಪಕ ವಿಮಾನದಾ. ಬಂದೊದಗಿತೊಯ್ಕನೆಯೆ
ನಿನಗೇತಕಾ ರಾಜಕಾರಣಂ, ಬರಿಯ ಗಂಡು
ಹಗರಣಂ ?'

– ಶ್ರೀ. ರಾ. ದ. : ಲಂಕೇಶನೊಲಿಸಿದನು ಮಾರೀಚನಂ, ಪಂಕ್ತಿ ೩೨–೪೪

ಈ ರಾವಣ ಪ್ರಾಣನೀಗುವುದಾದರೂ ಮಂಡೋದರಿಯ ಸನ್ನಿಧಿಯಲ್ಲಿ: ಅವನೆದೆಗೆ ನಾಟಿದ್ದ ಶ್ರೀರಾಮಶರವನ್ನು ರಾವಣನ ಆಣತಿಯಂತೆ ಬಿಗಿಹಿಡಿದೆಳೆದುದರಿಂದ ರಕ್ತ ಜೀರ್ಕೊಳವಿ ಹರಿಯುತ್ತದೆ, ಪ್ರಾಣದೊಡನೆ. ಹೀಗೆ ಮಂಡೋದರಿಯ ಪಕ್ಕದಲ್ಲೆ ರಾವಣ ಮೊದಲು ತುದಿಯೆರಡೂ ಸನ್ನಿವೇಶದಲ್ಲಿದ್ದಾನೆ.[೧೨] ಕವಿ ಹೀಗೆ ಸಂಸಾರಾವರಣದಲ್ಲಿ ಈ ರಾಕ್ಷಸೋತ್ತಮನನ್ನು ಬೆಳೆಸಿ ಅವನೆಷ್ಟೆ ಭೀಷಣಕಾಮಿ – ಅಹಂಕಾರಿಯಾಗಿದ್ದರೂ – ಅವನ ಮಾಗುವಿಕೆಯನ್ನು ದೃಢಗೊಳಿಸುತ್ತಾರೆ.

ಆ ಮಾಗುವಿಕೆ ಶ್ರೀರಾಮತ್ವದ ಸಾಧನೆಯಾಗುತ್ತದೆ. ಮೊದಮೊದಲು ಪತ್ನೀ ವ್ರತ ಸಾಧನೆಯಲ್ಲಿದ್ದ ರಾವಣ ನಿಜದಲ್ಲಿ ಹುಟ್ಟಿನಿಂದಲೆ ಹೆಣ್ಣಮೋಹವನ್ನು ಒಳಗೊಂಡು ಬಂದಿರುತ್ತಾನೆ. ಅವನು ಎಳಸುವ ಮೊದಲೆ ಹೆಣ್ತನ ಅವನನ್ನು ಸೆಳೆದುಕೊಂಡದ್ದರಿಂದ ರಾವಣನ ಸತೀವ್ರತಭಾವವೆಲ್ಲ ರತಿಕಂದರದಲ್ಲಿ ಧುಮ್ಮಿಕ್ಕಿ

೧೨. ಇಂದ್ರಜಿತುವನ್ನಾದರೂ ನಾವು ಮೊದಲು ಕಾಣುವುದು ಸತಿ ತಾರಾಕ್ಷಿಯ ಹಾಗೂ ಶಿಶು ವಜ್ರಾರಿಯ ಪಕ್ಕದಲ್ಲಿ. ಸನ್ನಿವೇಶ ಹೀಗಿದೆ : ಸೀತಾದೇವಿಯನ್ನರಸಿ ಆಂಜನೇಯ ನಾನಾ ಲಂಕಾವೀರರ ಮನೆಗಳನ್ನೂ ನಾನಾರೂಪದಿಂದ ಪ್ರವೇಶಿಸುತ್ತಾನೆ. ಮೊದಲು ಇಂದ್ರಜಿತ್ತನ ಮನೆಯನ್ನು ಧೂಮರೂಪದಲ್ಲಿ ಪ್ರವೇಶ ಮಾಡುತ್ತಾನೆ. ಆ ಅಂತಃಪುರದ ಬಾಗಿಲುಕಾಯುವ ನಾಯಿ ಊಳಿಡುತ್ತದೆ. ನವಿಲು ಹೌಹಾರಿ ಕೇಕೆಹಾಕುತ್ತದೆ. ದೀಪಕಾಂತಿಮಸುಳಿಸುತ್ತದೆ. ಒಡನೆಯೆ ಎದ್ದುಬಂದ ತಾಯಿ ತಾರಾಕ್ಷಿ ಮಗುವನ್ನಪ್ಪಿ ಮುದ್ದಿಟ್ಟು ಸಂತೈಸುತ್ತಾಳೆ ; ಮಂಕಾಗಿದ್ದ ಸೊಡರ ಕುಡಿಯನ್ನು ರಜಗೊಳಿಸುತ್ತಾಳೆ. ಅಧ್ಯಯನಕಕ್ಷೆಯಲ್ಲಿದ್ದ ತನ್ನ ಪತಿಯನ್ನು ಕರೆತರಲು ಸೇವಕಿಯನ್ನು ಕಳಿಸುತ್ತಾಳೆ. ಆಗ ಅಲ್ಲಿಗೆ ಬಂದ ಅವನ ಚಿತ್ರವಿದು :



ಹೋಯಿತು. ಪತಿವ್ರತೆಯೆಂದಿದ್ದವರೆಲ್ಲ ಅವನ ಹಾಸಿಗೆಗೆ ಬಂದುದರಿಂದ ಅವನಲ್ಲಿದ್ದ ಪಾವತ್ರಿತ್ಯ ಪೂಜೆ ಹಾಗೂ ಸಾತಿವ್ರತ್ಯ ಸಾಧನೆಗಳೆಲ್ಲವೂ ಅವನ ಕಾಮಸೀಮೆಯನ್ನು ವಿಸ್ತರಿಸಿ ಅಹಂಕಾರಸೀಮೆಯಲ್ಲಿ ಕೂಡಿತು. ದೇವೇಂದ್ರಾದಿ ಅಷ್ಟದಿಕ್ಪಾಲಕವೃಂದವನ್ನೆಲ್ಲ ಬಲದಿಂದ ಬಾಯ್ಕೇಳಿಸಿದ್ದ ಅವನು ತಪೋಬಲದಿಂದ ಶಿವನನ್ನೂ ಗೆದ್ದು ಪರಮ ಅಹಂಮತ್ತನಾಗಿದ್ದ. ಆ ಅಹಂಕಾರ ಕಾಮಸೀಮೆಯಲ್ಲೂ ದಿಗ್ವಿಜಯಕ್ಕೆ ಹೊರಟಿತ್ತು. ತನ್ನನ್ನು ಕಾಮಿಸಿ ಕೂಡದವರು ಯಾರೂ ಇಲ್ಲವೆ ಇಲ್ಲ ಎಂಬ ನಿಲುವಿಗೆ ಬಂದ ಅವನ ಅತಿಕಾಮ ಅತಿ ಅಹಂಕಾರದ ಮತ್ತೊಂದು ರೂಪವೇ ಆಗಿತ್ತು. ಆದದ್ದರಿಂದಲೆ ತನ್ನ ಅಹಂಕಾರಕ್ಕೆ ಮೃತ್ಯುವಾಗಿದ್ದ ಶ್ರೀರಾಮನನ್ನು, ತನ್ನ ಕಾಮಕ್ಕೆ ಸವಾಲಾಗಿ ಮೃತ್ಯುವಾಗಿದ್ದ ಸೀತಾ ದೇವಿಯನ್ನು ಕದ್ದು ತರುವ ಮೂಲಕ ಎದುರಿಸಬೇಕೆನ್ನುತ್ತಾನೆ. ಅವಳು ತನ್ನ ಕಾಮಕ್ಕೆ ಬಲಿಯಾಗದೆ ಹೋದಂತೆಲ್ಲ, ಅವನ ಕಾಮ ಹತಾಶವಾದಂತೆಲ್ಲ ಅವನ ಅಹಂಕಾರ ಘಾಸಿಗೊಂಡು ಭುಗಿಲೇಳುತ್ತದೆ. ಸೀತೆಯನ್ನೆ ಏಕೆ, ಯಾವ ಹೆಣ್ಣನ್ನೂ ಬಲಾತ್ಕಾರವಾಗಿ ತಾನು ಭೋಗಿಸುವುದಿಲ್ಲೆಂಬುದೆ ಅವನ ವ್ರತವಾಗಿತ್ತೆನ್ನುವುದು ಅವನ ಅಹಂಕಾರದ ಮೈಲುಗೈತನವನ್ನೆ ಸಂಕೇತಿಸುತ್ತದೆ. ಬಲಾತ್ಕಾರದಿಂದ ಕೂಡಿದನೆಂದರೆ ಇಂದ್ರ ವಿಜಯಿಯ ಪ್ರತಿಷ್ಠೆಗೆ ಎಂತಹ ಮರ್ಮಾಘಾತ ! ತಾವಾಗೆ ಅವರೆಲ್ಲ ಒಲಿದರೆ ಕಾಮ ತೃಪ್ತಿಯೂ ಹಿತಕರವಾಗಿ, ಅಹಂಕಾರವೂ ಪೋಷಿತಾಗುತ್ತದೆ. ಈ ಚಿತ್ರವನ್ನು ಕಲ್ಪಿಸುವ ಕುವೆಂಪು, ಈ ಹಿಂದೆಯೆ

'ಕಳವಳದ ನುಡಿಗೇಳ್ದು, ಅಧ್ಯಯನಕಕ್ಷದಿಂ,
ಓಡೋಡಿಯ್ಯೆತಂದನೊಂದು ಹೊತ್ತಗೆವೆರಸಿ,
ರಣಧೀರನಿಂದ್ರಜಿತು, ಸಾಮಾನ್ಯನೊಲ್, ಕಂಡು
ಆ ಭದ್ರರೂಪದ ಸುದೀರ್ಘದೇಹಿಯನವನ
ಸಲ್ಲಲಿತ ಲಲಿತಾಂಗಿಯೆಡೆ ಮತ್ತೆ ಶಿಶುವಿನೆಡೆ,
ನಾಲಗೆಗೆ ನೆಗೆದ ಹರಕೆಯನೆನಿತೊ ಸಂಯಮದಿ
ಸಂಹರಿಸಿ, ಬಿಸುಸುಯ್ದನಾಂಜನೇಯಂ !'

– ಶ್ರೀ ರಾ. ದ. : ಕನಕಲಂಕಾನ್ವೇಷಣಂ, ಪಂಕ್ತಿ ೧೪೭–೧೫೩

ಅಂತೆಯೆ ವಿಭೀಷಣನನ್ನು ನಾವು ಕಾಣುವುದಾದರೂ ಆಂಜನೇಯನ ಕಣ್ಣಿಗೆ ಅವನು ಕಂಡಾಗಲೆ, ಸತಿಪುತ್ರಿಯರ ಕೂಡೆ ಇದ್ದಾಗಲೆ. ಇತರ ನಾಯಕರ ಮಂದಿರಗಳನ್ನು ಪ್ರವೇಶಿಸಿದಂತೆ ಪಶುಪಕ್ಷಿರೂಪದಿಂದ ಪ್ರವೇಶಿಸಲಾಗದೆ. ಓಂಕಾರರೂಪದಿಂದ ವಿಭೀಷಣ ಮಂದಿರವನ್ನು ಒಳಹೊಗುತ್ತಾನೆ ಆಂಜನೇಯ. ಅವನಾಗ ಅಲ್ಲಿ ಕಂಡ ದೃಶ್ಯ :

'ಚೆಲುವೆ ಅನಲಾ ಕನ್ಯೆ, ಮಗಳಾ ವಿಭೀಷಣೆಗೆ.

ಸೂಚಿಸಿರುವಂತೆ, ಕಾಮ – ಅಹಂತತ್ತ್ವಗಳ ಹೊಸ ಆಯಾಮವನ್ನು, ಅಥವಾ ಅಪರಿಚಿತ ಆಯಾಮವನ್ನು ತೆರೆದು ತೋರಿದ್ದಾರೆ.

ಪಾತಿವ್ರತ್ಯದ ಬಗೆಗೆ ಸಂದೇಹ ಬಂದ ರಾವಣ ಮೌಲ್ಯನಾಸ್ತಿಕನಾಗುತ್ತಾನೆ. ಆದರವನಿಗೆ ತನ್ನ ಸತಿ ಮಂಡೋದರಿಯೆ ಪತಿವ್ರತೆಯೆಂಬುದು ತಿಳಿಯದು. ಪವಿತ್ರೆಯೆಂಬ ಅರಿವಿದ್ದರೂ ಪಾತಿವ್ರತ್ಯ ಸ್ಥಾಪನವಾದಂತಾಗಿರಲಿಲ್ಲ. ತನಗೆ ಎಲ್ಲರೂ ಮೋಸಲು ; ಅಂತೆಯೆ ಅವಳೂ ಸಹ, ಎಂಬ ಧೋರಣೆ. ಅದರಿಂದಾಗಿ ನಾವು ನೆಲ ಗಾಳಿ ಆಕಾಶಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳದಂತೆ, ಅವುಗಳ ಅಸ್ತಿತ್ವವನ್ನು ನಾಮಮಾತ್ರವೆಂದು ಗಣಿಸುವಂತೆ ಅವನೂ ತನ್ನ ಸತಿಯನ್ನು ಕಾಣುತ್ತಾನೆ. ಹಾಗಿರುವಾಗ ಸೀತಾದೇವಿ ಅವನ ಕಾಮಕ್ಕೆ ಅದಕ್ಕಿಂತ ಮಿಗಿಲಾಗಿ ಅಹಂಕಾರಕ್ಕೆ ಸಿಡಿಲೇಟಾಗುತ್ತಾಳೆ. ಸೀತೆಯ ಆಗಮನದಿಂದ ದುಃಖಗೊಂಡಿದ್ದರೂ ಮಂಡೋದರಿಗೆ, ಇನ್ನಾದರೂ ತನ್ನ ಪತಿಯ ಮೌಲ್ಯವಿನಷ್ಟಚೇತನಕ್ಕೆ ಮೌಲ್ಯಶ್ರದ್ಧೆ ಬಂದೀತೆಂಬ ಆಶೋದಯವಾಗುತ್ತದೆ. ಅದರಿಂದಲೆ ಅವಳು ಪತಿಯ ಆಣತಿಯನ್ನು ಉಲ್ಲಂಘಿಸದ ರೀತಿಯಿಂದ ಸೀತಾದೇವಿಯ ದರ್ಶನಪಡೆದು ಅವಳ ದುಃಖಕ್ಕೆ ತನ್ನ ನಿತ್ಯನಾರಕದುಃಖ ಕೂಡಿಸಿ ಅವಳ ಸಹಾನುಭೂತಿಯನ್ನು ಕರೆದುಕೊಳ್ಳುತ್ತಾಳೆ. ಎಷ್ಟೋ ಜನ ಸೀತೆಯರ ದುಃಖಕ್ಕೆ ಕಾರಣನಾದ ರಾವಣನ ಸತಿಯಾದ ಮಂಡೋದರಿಯ ದುಃಖವಿಮೋಚನದ ಕೂಡೆ ತನ್ನ ದುಃಖ ಮುಕ್ತಿಯೂ ತೆಕ್ಕೆಗೊಂಡಿದೆಯೆಂಬ ಅರಿವು ಸೀತಾದೇವಿಗೆ ಬರುತ್ತದೆ.

'ನಿನ್ನ ಮಂಗಳಮೆನಗೆ ಮಂಗಳಂ ! ನನ್ನಂತೆ
ದೇವಿ, ನೀನುಂ ಪ್ರಾರ್ಥಿಸಾ, ನನ್ನ ಪತಿಯೆರ್ದೆಗೆ
ಶುದ್ಧಿ ದೊರೆಕೊಳ್ವಂತೆ. ನಾನದನೆ ಬೇಡಲ್ಕೆ

---

ರತ್ನ ಕಂಬಳ ಚಿತ್ರವೇದಿಕೆಯ ಮೇಲಿರ್ದು
ಮೀಂಟಿದಳ್ ತಂತಿಯಿಂಚರವೊನಲ್ ವೀಣೆಯಂ.
ಮಂದಿರದ ಮರದ ಮಣ್ಣಿನ ಜಡಪದಾರ್ಥಗಳ್
ಪ್ರತಿರಣಿಸುವೋಲ್. ನಾದರೂಪಿ ಮರುತಾತ್ಮಜಂ
ಮೋದಮೂರ್ಛೆಗೆ ಸಂದನವ್ಯಕ್ತಶೋಕಮಯ
ಸ್ವರಸುಖವನೀಂಟಿ. ಬಳಿಯೊಳೆ ವಿಭೀಷಣ ಸತಿ
ಸರಮೆ ಕುಳ್ತಿರಲನತಿದೂರದೊಳವಂ ತನ್ನ
ಮಗಳ ಕಲೆಯಂ ಮೆಚ್ಚಿ, ಕಣ್ ಮುಚ್ಚಿ. ಕವಿದೆರೆದು,
ಸವಿಯುತಿರ್ದನು ನಿಶ್ಚಲಂ.

– ಶ್ರೀ. ರಾ. ದ. : ಕನಕಲಂಕಾನ್ವೇಷಣಂ, ಪಂಕ್ತಿ ೪೨೭–೪೩೬



ಬರುತಿರ್ದನೀಂಯೆಡೆಗೆ ನಿನ್ನ ಸಾನಿಧ್ಯಕ್ಕೆ !
............ ಹದಿಬದೆತನಕೆ ಮೀರ್ವ
ಸಾಧನೆಯಿಲ್ಲ, ತಂಗಿ .... ಕೊಳೆಗೆ ತಗುಳಲ್ಕಗ್ನಿ
ಕೊಳೆಯುಮುರಿಯಪ್ಪುದಂತೆಯೆ ನಿನ್ನ ನೋಂಪಿಯಿಂ
ಕಿಡುಗೆನ್ನ ಪತಿಯ ಹೃದಯದ ಪಾಪಕಿಲ್ಬಿಷಂ.
ಸನ್ಮತಿಯುದಿಸಿ ಶಾಂತಿಸುಖಮಕ್ಕೆ ಸರ್ವರಿಗೆ !'

– ಶ್ರೀ. ರಾ. ದ. : ನಾನಕ್ಕನೆನ್ ನಿನಗೆ. ತಂಗೆ ! ಪಂಕ್ತಿ ೧೫೩–೧೬೭

ಈ ನುಡಿ ನುಡಿದು ಸೀತೆಯಡಿಗೆರಗಿ ಮತ್ತೆ ಆ ಬೆಳದಿಂಗಳಲ್ಲಿ ಬೆಳುದಿಂಗಳಾಗಿ ಮರೆಯಾಗಿ ಹೋಗುತ್ತಾಳೆ ಮಂಡೋದರಿ. ಸೀತಾದೇವಿಗೆ ಸಾಧನಾಶಕ್ತಿ ವರ್ಧಿಸಿದಂತಾಗುತ್ತದೆ.

'........ ತನ್ನ ನೋಂಪಿಗೆ ಪೆರರ
ನೋಂಪಿಯೆ ನೆರಂ, ಗುರಿಯೊಳಿಲ್ಲದಿರಲಂತರಂ.
ಮಂಡೋದರಿಯ ದೃಢತೆಯಾದುದುಕ್ಕಿನ ಸಾಣೆ
ಮೈಥಿಲಿಯ ಚಿತ್ತಕೆಂತೆನೆ, ತನ್ನ ದೇವತೆಗೆ
ಪೂಜೆ ಸಲ್ಲಿಸಿ ಮಣಿಯುವನ್ಯರಂ ಕಾಣಲ್ಕೆ
ಹೊಂಪುಳಿಯಿನುಕ್ಕಿದಪುದಲ್ತೆ ಭಕ್ತಗೆ ಭಕ್ತಿ
ಹುರಿಗೊಂಡು? ಸೆರೆಮನೆಯೆ ಆತ್ಮಸಾಧನೆಗೊಂದು
ಎಲೆಯ ಮನೆಯಾಯಿತ್ತು ; ಪೌಲಸ್ತ್ಯಜನ ಲಂಕೆ
ಮಂಡೋದರಿಯ ಲಂಕೆಯಾಯಿತ್ತು ; ರಾವಣನ
ಮೇಲಿರ್ದ ವೈರಭಾವಂ ಸುಲಭದಿಂ ಕರಗಿ
ಮಂಡೋದರಿಯ ಪತಿಯ ಮೇಲಣ ಕರುಣೆಯಾಯ್ತು !
ಸೂರ್ಯನಾತಪಕೆ ಕಾಲದ ತಪಂ ನೆರವಾಗಲಾ
ಬಜ್ಜರತನಂ ಬರ್ಪುದೊಯ್ಯನಿದ್ದಿಲಿಗೆನಲ್,
ಸೀತೆ ಮಂಡೋದರಿಯರಿರ್ವರ್ ತಪಂ ಬಡಲ್
ರಾವಣನ ಮನದ ಪೊನ್ ಹೃತ್ತಾಪ ಮೂಷೆಯೊಳ್
ಕುದಿಕುದಿದು ಕರಕರಗಿ ಕಾಳಿಕೆಯನುಳಿಯದೇನ್?
ತಿಳಿಯದೇನ್? ಪೊಳೆಯದೇನ್? ಪೊಚ್ಚಪೊಸಪೊನ್ನಾಗಿ
ತಳತಳಿಸದೇನ್?'

– ಶ್ರೀ. ರಾ. ದ : ನಾನಕ್ಕನೆನ್ ನಿನಗೆ, ತಂಗೆ ! ಪಂಕ್ತಿ ೧೭೫–೧೯೧

ಇಲ್ಲಿ ಕಾಣುವುದು ಇಷ್ಟು : ರಾವಣನ ಉದ್ಧಾರದಲ್ಲಿ ಮಂಡೋದರಿ ಮಾತ್ರವಲ್ಲ, ಸೀತೆಯೂ ತೊಡಗಿದ್ದಾಳೆ. ಅಷ್ಟೆ ಅಲ್ಲ, ಎಲ್ಲರೂ ಎಲ್ಲರ ಆಗುವಿಕೆಯಲ್ಲಿ ಭಾಗಿಗಳಾಗಿದ್ದಾರೆ. ಮತ್ತೆ ರಾವಣನ ಮಾಗುವಿಕೆ ಅವನ ಅಂತರ್ಗತವಾದ ಹಕ್ಕು. ಇದ್ದಿಲು ರಸಾಯನವಸ್ತುಗಳ ಸಂಗದಲ್ಲಿ ತೀವ್ರಶಾಖಕ್ಕೆ ಒಳಗಾದಾಗ ವಜ್ರವಾಗುತ್ತದೆ ಎಂಬುದು ಆಧುನಿಕ ವಿಜ್ಞಾನ ಹೇಳಿಕೊಟ್ಟ ಸಂಗತಿ. ಇದ್ದಿಲು ವಜ್ರಗಳು ಒಂದೇ ಇಂಗಾಲವೃಕ್ಷದ ಎರಡು ತುದಿ. ವಜ್ರಾವಾದರೂ ಸುಟ್ಟರೆ ಇದ್ದಿಲೇ ಆಗುತ್ತದೆ. ರಾವಣನಾದರೂ ಬಿದ್ದ ರಾಮಸತ್ತ್ವವೆ ಆಗಿದ್ದಾನೆ. ಜಯವಿಜಯರ ಕಲ್ಪನೆಯಲ್ಲಿ ಆ ಅಂಶವಿದೆ. ರಾಮಾಯಣದರ್ಶನದಲ್ಲಿ ಶ್ರೀರಾಮನಾದರೂ ಇದೇ ಅಂಶವನ್ನು ಸ್ಪಷ್ಟ ಪಡಿಸುತ್ತಾನೆ ಆಂಜನೇಯನಿಗೆ :

> ‘ಇದು ರಹಸ್ಯಮಾಲಿಸು : ನಾನೆ
> ಆ ರಾವಣನ ಮೂಲಬಲಶಕ್ತಿ ! ನನ್ನ ಸತ್
> ಶಕ್ತಿಯಂ ಗೆಲಲರಿದು ನನಗಲ್ಲದಿತರರಿಗೆ
> ..............................................
> ನಾನೆ ಅವನಲ್ಲದಿರೆ ಆ ದಶಗ್ರೀವಂಗದೇನ್
> ಸೀತೆಯನ್ನೊಲಿವುದುಂ ಮೇಣವಳನುಯ್ವುದುಂ,
> ಪೇಳ್, ಮೊರ್ಗ್ಗೆ ?’
>
> – ಶ್ರೀ. ರಾ. ದ. : ಶ್ರೀರಾಮರಾವಣ ಚಿತ್‌ತಪಸ್ ಶ್ರೀ, ಪಂಕ್ತಿ ೩೫೫–೩೬೩

ಶ್ರೀರಾಮನೂ ರಾವಣನೂ ಒಂದೇ ಶಕ್ತಿಯ ಎರಡು ರೂಪಗಳು ಈಗ; ಮೂಲದಲ್ಲಿ ಅವರಿಬ್ಬರೂ ಒಂದೆ, ಎಂದಮಾತ್ರದಿಂದಲೆ ಕವಿ ಈ ಪಾತ್ರಗಳನ್ನು ಸರಳಗೊಳಿಸಿದ್ದಾರೆಂದು ಯಾರೂ ಭಾವಿಸಬಾರದು. ವಾಸ್ತವವಾಗಿ ರಾವಣಕಾಮಾಹಂರಕಾಗಳ ಅದ್ಭುತ ಪರಿಣಾಮಕ್ರಿಯೆಯನ್ನು ವರ್ಣರಂಜಿತವಾಗಿಯೆ ಚಿತ್ರಿಸುತ್ತಾರೆ ಕವಿ. ತನಗೆ ಸೋಲದ, ತನ್ನನ್ನು ಗೆದ್ದ ಸೀತಾದೇವಿಯನ್ನು ಕಾಮಸ್ತರದಲ್ಲಿ ಪಡೆಯಲಾಗುವುದಿಲ್ಲವೆಂಬ ಕಾಣ್ಕೆ ರಾವಣನಿಗೆ ಬರುತ್ತದೆ. ತನ್ನನ್ನು ಗೆದ್ದವಳಿಗೆ ಅವಳನ್ನು ಗೆದ್ದ ರಾಮನನ್ನೆ ತಾನು ಗೆದ್ದು ತರುವುದಾಗಿ, ತಂದು ಒಪ್ಪಿಸುವುದಾಗಿ ಮತ್ತೊಂದು ಬಗೆಯ ಅಹಂಕಾರಿಯಾಗುತ್ತಾನೆ. ಸೀತಾವಿಷಯಕವಾದ ಕಾಮ ಮಾಗಿ ಅವಳಿಗೆ ಮಗುವಾಗುತ್ತದೆ. ಅವಳನ್ನು ತಾಯಾಗಿ ಅಪ್ಪಲಾಶಿಸುತ್ತದೆ. ಆದರೆ ರಾಮನನ್ನು



ಗೆಲ್ಲುವ ಅಹಂಕಾಮನೆ ಮಾತ್ರ ಉಳಿದೇ ಇರುತ್ತದೆ. ಈ ಎರಡೂ ಕ್ರಿಯೆ ಸುಲಭವಾಗಿಯೇನೂ ಇರುವುದಿಲ್ಲ. ಇಲ್ಲಿ ಯಾವ ಮಾಯಾಮಂತ್ರ ಬೂದಿಕಟ್ಟುಗಳ ಸುಲಭ ಮಾರ್ಗವೂ ತೆರೆದುಕೊಳ್ಳುವುದಿಲ್ಲ.

ತನ್ನ ಮೂಲವೆಲ್ಲವನ್ನೂ ಶ್ರೀರಾಮಸೈನ್ಯದ ಮೇಲೆ ಒಡ್ಡಿದ ರಾವಣ ಆ ಬಲವನ್ನು ಉತ್ತೇಜಿಸುವ ವಾಣಿಯಿಂದ ನುಡಿಯುತ್ತಾನೆ.[೧೩] ಹಾಗೆ ನುಡಿದೊಡನೆಯೆ ಅವನ ಎದೆಯ ತಳದಲ್ಲಿ ಸೀತಾಮೋಹ ಕುಡಿಚಾಚಿ ನೆಕ್ಕುತ್ತದೆ. ತನ್ನ ಆ ಮೋಹಕ್ಕೆ, ಆ ಯುದ್ಧಭೀಷಣ ಸನ್ನಿವೇಶದಲ್ಲಿಯೂ ದಳ್ಳುರಿದೆದ್ದೆ ಆ ವಿಮೋಹಕ್ಕೆ, ಬುದ್ಧಿಜಾತ ಜಾರರೂಪವಿತ್ತು, ತಾನು ಕಡೆಯ ಬಾರಿಗೆ ಸೀತೆಯನ್ನು ಪರೀಕ್ಷಿಸಿ ಬರುವುದಾಗಿ ಅವಳ ಪರ್ಣಕುಟಿಯತ್ತ ತೆರಳುತ್ತಾನೆ – ಕಿಡುವ ಮುನ್ನ ಸೊಡರ ಕುಡಿ ಉಜ್ಜ್ವಲಗೊಂಡಂತೆ, ಸೀತಾಕುಟೀರವನ್ನು ಸಮೀಪಿಸಿದಂತೆಲ್ಲ ಅವನಿಗೆ ಏನೋ ಮನಸ್‌ಶಾಂತಿ. ಅದು ತನಕ ಅವನಿಗೆ ಕಂಡಿದ್ದಿಲ್ಲದ ಕಡಲ್‌ನೀಲಿ, ಬಾನ್ನೀಲಿಗಳೆಲ್ಲ ಕಂಡು ಅವನ ಎದೆಯ ಕದಡನ್ನು ತೊಳೆಯುತ್ತವೆ. ಆಶ್ಚರ್ಯವೆಂದರೆ ದಿಗಂತವಿಶ್ರಾಂತವಾದ ವನಶ್ರೇಣಿ ಅವನಿಗೆ ಬೇರೆ ಸಾಹಸದ ದಾರಿಗಳನ್ನು ತೆರೆದು ತೋರುತ್ತವೆ ! ಪ್ರಪಾತಜಲರಾಶಿಯನ್ನು ಕೊಳಾಯಿಗಳಲ್ಲಿ ಹಾಯಿಸಿ ವಿದ್ಯುತ್ತನ್ನು ತಯಾರಿಸುವ ಹಾದಿಯನ್ನೂ ತೋರುತ್ತವೆ. ಅದಕ್ಕೆಲ್ಲ ಅದುತನಕ ಕಣ್ಣು ಮುಚ್ಚಿದ್ದ ಆ ‘ಅನಿಮಿಷಾರಿ’ ಅದನ್ನೆಲ್ಲ ‘ನಿರ್ನಿಮೇಷ’ನಾಗಿ ನೋಡುತ್ತಾನಂತೆ !

ಹಾಗೆ ನೋಡುವಾಗ ಅವನಿಗೆ ಕಂಡದ್ದು ಸೀತಾಕುಟೀರವಲ್ಲ, ಜ್ವಾಲಾಮಧ್ಯೆ ಕುಣಿಯುತ್ತಿರುವ ರುಂಡಮಾಲಿನಿ ದುರ್ಗೆಯ ರೂಪ. ಅದು ಅವನೊಳಗಿನ ಮಾಗುವಿಕೆಯ ಸಿದ್ಧಿಯ ಉಪಾಂತಸ್ಥಿತಿ. ಹಾಗೂ ಸೀತಾದೇವಿಯ ಸಿದ್ಧಿಯ ಪ್ರಕಟಣಾ ಮುಹೂರ್ತವೂ ಆಗಿರುತ್ತದೆ. ಈ ಎತ್ತರಕ್ಕೆ ಬರಬೇಕಾದವನು ಅನಾಮತ್ತಾಗಿ ಜಿಗಿದು ಬಂದನೇನು? ಕುವೆಂಪು ಕಲ್ಪಿಸುವ ಸಂಕೀರ್ಣಮಾರ್ಗಜಾಲ ರಮ್ಯಾದ್ಭುತವಾಗಿದೆ. ರಾವಣ ಅಲ್ಲಿಗೆ ಬರುವ ದಿನ ಉಷೋದಯಪೂರ್ವದಲ್ಲಿ

---

೧೩. ರಾವಣನ ಈ ಭಾಷಣವೈಖರಿ, ಹಾಗೂ ಅವನು ತನ್ನ ಸೇನಾಶರಧಿಯನ್ನು ವಿದ್ಯುತ್‌ಚೋದನಕ್ಕೆ ಒಳಪಡಿಸುವ ರೀತಿ ಹಿಟ್ಲರ್ ತನ್ನ ಜರ್ಮನ್ ಸೇನೆಯನ್ನೂ, ಜರ್ಮನ್ ಪ್ರಜಾಕೋಟಿಯನ್ನೂ ಉದ್ದೇಶಿಸಿ ಸನ್‌ಮೋಹಕ ರೀತಿಯಲ್ಲಿ ಮಾತನಾಡುತ್ತಿದ್ದ ರೀತಿಯೆ ಆಗಿದೆ. ಶ್ರೀರಾಮಾಯಣದರ್ಶನಂ ಕಾವ್ಯದ ಈ ಭಾಗ ಬರೆಯುತ್ತಿದ್ದಾಗ ಜರ್ಮನಿಯಲ್ಲಿ ಅದೇ ಘಟನೆ ನಡೆದಿತ್ತು.

ಇಂದ್ರಿಜಿತು ಮಡಿದಿರುತ್ತಾನೆ. ಅದನ್ನು ಕೇಳಿ ಮಂಡೋದರಿ ತತ್ತರಿಸಿದರೆ, ತಾರಾಕ್ಷಿ ಸಹಗಮನಕ್ಕೆ ತೊಡಗಿರುತ್ತಾಳೆ. ಅದೇ ಸಮಯದಲ್ಲಿ ಅತಿಕಾಯನ ಸಾವಿನಿಂದ ತನ್ನ ಜೀವಿತಾಂತ್ಯವನ್ನು ಬಗೆದ ಧಾನ್ಯಮಾಲಿನಿ – ರಾವಣ ಮೋಹಕ್ಕೆ ಬಲಿಯಾಗಿ ಈಗ ಸೀತಾಸಾನ್ನಿಧ್ಯದಿಂದ ಎಚ್ಚೆತ್ತಿದ್ದ ಪತಿವ್ರತೆ – ತನ್ನ ಪಾಪನಿವೇದನಮಾಡಿಕೊಂಡು ಸಾಯುತ್ತಾಳೆ. ಅಂದತೂ ರಾವಣನ ಕಾಮಾಹಂಕಾರಕ್ಕೆ ಬರೆಯೆಳೆಯುತ್ತದೆ. ಹಾಗೂ ಸತ್ತಿದ್ದ ಅವನ ಮೌಲ್ಯಪೂಜೆಯನ್ನು ಜಾಗ್ರತಗೊಳಿಸುತ್ತದೆ. ಅದುತನಕ ತಾನವಳನ್ನು ತನಗೊಲಿದವಳೆಂದೇ ಭ್ರಮಿಸಿ ಕೂಡುತ್ತಿದ್ದೆನಲ್ಲ ಎಂಬ ಹೇಸಿಗೆಯ ಭಾವ ಬರು.ತ್ತದೆ. ಬೀಭತ್ಸವಾದರೂ ಸಶಕ್ತವಾದೊಂದು ಪ್ರತಿಮೆಯಿಂದ ಅವನ ಸ್ಥಿತಿಯನ್ನು ಚಿತ್ರಿಸುತ್ತಾರೆ, ಕವಿ :

'ತನ್ನ ಕಾಮಾತಿಶಯದಿಂದೆ
ಶವದ ಸಹವಾಸದೊಳ್ ಭೋಗಿಯಾರ್ದವಂ
ಬೋಧೆ ತಿಳಿದೇಳುತೆ ಜುಗುಪ್ಸೆಯಿಂದತಿ ನಾಣ್ಚಿ
ಯಾತನಾಪಂಕದೊಳಸಹ್ಯದೊಳುರುಳ್ವವೋಲ್,
ಪಿಂತೆಂದುಮಾವ ಕಾರಣಕನುಭವಿಸದೊಂದು
ಮರ್ಮಘಾತದ ವೇಧೆಯಿಂ ನೆರಳ್ದನಾಳದಿಂ
ಮಂಡೋದರೀಪ್ರಿಯಂ. ಧಾನ್ಯಮಾಲಿಯಾತ್ಮಮಂ
ಕ್ಷಮೆಬೇಡುವಂದದಿ ಮುಡಿಮಣಿದನವಳಡಿಗೆ
ದೇವದಾನವ ಭಯಂಕರನಾತ್ಮಸಂತಾಪ
ದೀನಮನನಾಗಿ ! ಪುಲಕಿಸಿತು ಶಿವನ ಮೆಯ್
ಮುಗುಳುನಗೆ ಮಲರಿತ್ತಾದಿಶಕ್ತಿಯ ಮೊಗಕೆ ;

– ಶ್ರೀ. ರಾ. ದ. : ಪಂಕ್ತಿ ೧೧೨–೧೨೨

ಹೀಗೆ ಹಲವು ಘಾತಗಳಿಂದ ಜಜ್ಜಿಹೋಗಿದ್ದು ಎಚ್ಚೆತ್ತ ರಾವಣ ತಾನೆ ತನ್ನ ಮೂಲಬಲಸಹಿತ ಶ್ರೀರಾಮನನ್ನು ಎದುರಿಸುವುದಾಗಿ ನಿರ್ಧರಿಸುತ್ತಾನೆ. ಆ ವೇಳೆಯಲ್ಲೆ ಲಂಕಾನಗರದ ದುಃಸ್ಥಿತಿಯನ್ನೆಲ್ಲ ನೋಡಿ ಬಂದು ದಂಡನಾಯಕನಿಗೆ ತನ್ನ ಮೂಲಬಲ ಸಮಸ್ತದ ಸಜ್ಜಿಕೆಯನ್ನು ಮಾಡೆಂದೂ ಬಂದಿರುತ್ತಾನೆ. ತಾನೇ ಯುದ್ಧಕ್ಕೆ ಹೊರಡಬೇಕಾದ ಆ ಹೊತ್ತಿನಲ್ಲಿ ಕೊಂಚ ದಣಿವಾರಿಸಿಕೊಳ್ಳಲೆಂದು ಮಂಚದ ಮೇಲೂ ಒರಗುತ್ತಾನಂತೆ ! ಯುದ್ಧಸಿದ್ಧನಾಗಿ



ಸೇನಾಭಿಮುಖವಾಗಿ ವೀರೋದ್ಘೋಷ ಮಾಡಿದ ಮರುಕ್ಷಣದಲ್ಲಿ – ಮೇಲೆ ಆಗಲೆ ವಿವರಿಸಿದಂತೆ – ಸೀತಾಮೋಹ ಕುಡಿಯಾಡುತ್ತದೆ. ಸಂಕೀರ್ಣತೆಯ ಬೊಬ್ಬೆಯಿಡುತ್ತಿರುವ ಇತ್ತೀಚಿನವರಿಗೆ ಈ ಮಹಾಸಂಕೀರ್ಣ ಸಂಘರ್ಷ – ಪರಿಣಾಮಗಳೇಕೆ ಕಾಣುವುದಿಲ್ಲ ?

ಹೀಗೆ ಸಂಕೀರ್ಣವಾದ ಚೇತನ ನಾನಾ ತುಮುಲಭಾವಕ್ಕೆ ಕಾರಣನಾದ ರಾವಣನ ಮನ, ತನ್ನ ಅಂತಸ್ತಿಮಿರ ಕುಹರಗಳಲ್ಲಿ ಕಂಡ ಜ್ಯೋತಿಃಪರಿಣಾಮವನ್ನು ಸ್ವಾಪ್ನಿಕವಾಗಿ ಕಾಣುತ್ತದೆ. ದುರ್ಗಾರಾಧನೆಯ ತುರೀಯಸ್ಥಿತಿಯಲ್ಲಿ ಅವನು ಕಾಣುವ ಅನಿದ್ರಾಸ್ವಪ್ನದಲ್ಲಿ ಈ ಮಾಗುವಿಕೆ – ಮುಂದಾಗುವಿಕೆ ಎಲ್ಲವೂ ಶ್ರುತಿಮಿತವಾಗುತ್ತದೆ. ಈ ಅಸಾಧಾರಣ ಪ್ರತಿಮಾಪ್ರಸಂಗವಂತೂ ಕುವೆಂಪು ಅವರ ದಾರ್ಶನಿಕ ಸ್ವೋಪಜ್ಞತೆಯನ್ನು ದ್ಯೋತಿಸುತ್ತದೆ. ರಾವಣನ ಅಂತರ್ ನಿಗೂಢ ಅಭೀಪ್ಸೆಯನ್ನು ಬಿಚ್ಚಿತೋರಿಸುವ ಹಾಗೂ ಸದ್ಯದ ಪಕ್ವತೆಯನ್ನೂ ಪಾರಿಣಾಮಿಕ ಭವಿಷ್ಯವನ್ನೂ ಮುಂಗಾಣಿಸುವ ಸಲುವಾಗಿ ದುರ್ಗೆ–ಮೊದಲು ಧಾನ್ಯಮಾಲಿನಿಯಾಗಿ ಆಮೇಲೆ ಲಂಕಾದೇವಿಯಾಗಿ ಆಮೇಲೆ ಶಿವೆಯಾಗಿ ಕಾಣಿಸಿದ ದುರ್ಗೆಯೆ – ಅವನು ಬೇಡಿದುದನ್ನು ನೀಡುವುದಾಗಿ ವರ ನೀಡುತ್ತಾಳೆ. ರಾವಣ ಬೇಡುವ ಮೊದಲ ವರ : ರಾಮನನ್ನು ಯುದ್ಧದಲ್ಲಿ ಗೆಲ್ಲುವುದು. ಅದಕ್ಕೆ ಶಿವೆ ತಥಾಸ್ತು ಎಂದಮೇಲೆ ಅವನು ಬೇಡುವ ಎರಡನೆಯ ವರವಿದು: ಸೀತೆ ವಶವಾಗುವುದು. ಅದಕ್ಕೂ ತಥಾಸ್ತು. ರಾವಣನಿಗೆ ಆಶ್ಚರ್ಯ. ಆದರದು ಸೋಜಿಗವಲ್ಲ ; ಒಲಿದ ತಾಯಿ ಕಂದನಿಗೆ ಸೋಲುವುದು ತಪ್ಪಲ್ಲ ; ಈ ಶಿವೆಯ ಮಾತು ವಕ್ರೋಕ್ತಿಯೆನಿಸುತ್ತದೆ ರಾವಣನಿಗೆ. ಅದು ವಕ್ರೋಕ್ತಿಯಲ್ಲ, ಅವನ ಅಂತರ್ನಿಗೂಢಕ್ಕೆ ಉಕ್ತಿಯಷ್ಟೆ. ಸೀತೆಯೂ ಸೋಲುತ್ತಾಳೆ. ರಾಮನನ್ನೂ ಗೆಲ್ಲುತ್ತಾನೆ ಅವನು ; ಆದರದು ಮರುಭವದಲ್ಲಿ ! ಎಂದು ಶಿವೆ ಹೇಳಿದೊಡನೆಯೆ ಪ್ರತಿಮಾರೂಪದ ಭವಿಷ್ಯದ್ ದರ್ಶನವಾಗುತ್ತದೆ ರಾವಣನಿಗೆ. ಕುದುರೆ ತನ್ನ ಮುಂಗಾಲಿನಿಂದ ವಿಗ್ರಹ ರಹಿತವಾದ ಪೀಠದ ಮೇಲೆ ಕಾಲೂರಿನಿಂತು, ತನ್ನಂಗವನ್ನು ನಿಮಿರಿ ನರ್ತಿಸುತ್ತದೆ– ಯಾವುದೋ ಬೃಹನ್ಮುಷ್ಟಿ ನಿಡುಖಡ್ಗದಿಂದ ಅದರ ಕೊರಳನ್ನು ಕತ್ತರಿಸುತ್ತದೆ. ಬೆದರಿದ ರಾವಣ ಹೊಳೆದಡದಲ್ಲಿದ್ದ ದೋಣಿಯೊಂದನ್ನೇರಿ ದಾಟಿ ಹೋಗುತ್ತಾನೆ. ಮುಂಡ ಕುಪ್ಪಳಿಸುತ್ತ ಬಂದು ಅವನ ನಾವೆಯನ್ನು ತಳಮೇಲು ಕೆಡಹುತ್ತದೆ. ರಕ್ತಮಯ ನದಿಯಲ್ಲಿ ಈಜುತ್ತ ತೇಲುತ್ತ ಕಡೆಗೆ ತಳಕ್ಕೆ ಮುಳುಗುತ್ತಾನೆ. ತೆಕ್ಕನೆಯೆ ಕುಂಭಕರ್ಣನನ್ನು ಕಂಡು ಕೂಗುತ್ತಾನೆ. ಇಬ್ಬರೂ ಹೊಳೆಯೊಡನೆ ಹೋರಾಡಿ ದಡಕ್ಕೇರಿ ಬರುತ್ತಾರೆ,

ಶಿಶುಗಳಾಗಿ. ಅಳುತ್ತಿರುವ ಆ ಅವಳಿಗಳನ್ನು ತಾಯಿ ಸೀತೆ ಬಂದೆತ್ತಿಕೊಂಡು ಮುದ್ದಾಡಿ ಮೊಲೆಯೂಡುತ್ತಾಳೆ. ಈ ವಿಸ್ಮರಣಮರಣದಿಂದ ಸೆಣಸುತ್ತ ಮೇಲೆದ್ದು ಬರುತ್ತಾನೆ, ರಾವಣ – 'ಮಂಡೋದರಿ ! ಮಯಾತ್ಮಜೇ ! ಪ್ರಿಯೇ ! ರಕ್ಷಿಸೆನ್ನನ್!' – ಎಂದು ಕಿರುಚುತ್ತ. ಆಗತಾನೆ ಹುಟ್ಟಿದ ಮಗುವಿನಂತೆ ಅಳುತ್ತ ಎಚ್ಚೆತ್ತ ರಾವಣನನ್ನು, ಅಳುದನಿ ಕೇಳಿ ಅಲ್ಲಿಗೆ ಬಂದ ಮಂಡೋದರಿ ಉಪಚರಿಸಿ ಅವನು ಕಂಡ ಕನಸನ್ನು ತಿಳಿದುಕೊಳ್ಳುತ್ತಾಳೆ ; ಗಂಡನ ಒಳ ಬಗೆಯ ತಿಳಿಮೆಗೆ ಹಿಗ್ಗುತ್ತಾಳೆ. ಆ ಅಂತಃಪರಿಣಾಮವನ್ನು ಲೋಕಕ್ಕೆ ತಿಳಿಸಬೇಕೆಂದುಮಂಡೋದರಿಗೆ ಆಸೆ ; ಅಷ್ಟೇ ಅಲ್ಲ, ಸೀತಾದೇವಿಯನ್ನೂ ಶ್ರೀರಾಮಚಂದ್ರನಿಗೆ ಕಪ್ಪಗೊಟ್ಟು ತಪ್ಪೊಪ್ಪಿಕೊಳ್ಳುವ ಬಯಕೆ. ಆದರೆ ತನ್ನನ್ನು ಗೆದ್ದ ಸೀತೆಗೆ ರಾಮನನ್ನೆ ಗೆದ್ದು ತಂದೊಪ್ಪಿಸುವ ಛಲ ರಾವಣನದು ; ಸೀತಾಶುಭೋದಯಕ್ಕಷ್ಟೆ ರಾಮನನ್ನು ಗೆದ್ದುತರಬೇಕೆಂಬ ಇಚ್ಛೆ. ಆಶ್ಚರ್ಯವೆಂದರೆ, ಮಂಡೋದರಿಗೆ ಗಂಡನ ಪರಿವರ್ತನ ಲೋಕಕ್ಕೆ ತಿಳಿಯಬೇಕೆಂದು ಆಸೆಯಾದರೆ, ರಾವಣನಿಗೆ ಅದು ತಿಳಿಯಲೇಬಾರದು ಎಂಬ ನಿರ್ಧಾರ.

> 'ತಿಳಿಯಬಾರದದೆ ವೀರತೆಗೆ
> ದೀಕ್ಷೆ !ಪೇಳ್ದೊಡಮದಂ ನಂಬರಾರುಂ ! ಪೇಳೆ
> ಪೇಡಿತನಮಲ್ಲದನ್ಯಪ್ರಯೋಜನಮೆನಗೆ
> ತೋರದು. ಮಹಾರಾಜ್ಞಿ, ಯಾಚಿಸುವೆನೊಂದನಾಂ
> ನಿನ್ನನೀ ನನ್ನ ಪೂಣ್ಕೆಯನಾರ್ಗಮೊರೆಯದಿರು :
> ಹೃದಯಗಹ್ವರದಲ್ಲಿ ಭವ್ಯಕೃತಿಯಾಗಿರಲಿ
> ನನ್ನ ನಿನ್ನೀ ದಿವ್ಯಗುಹ್ಯಂ. ಜಗತ್ತ್ರಯಂ
> ತಿಳಿವುದೀ ಪೂಣ್ಕೆ ಕೈಗೂಡಲಲ್ಲದಿರೆ, ಪೋ,
> ಪೇಳ್ದ ನೀನೆಯೆ ನಗೆಗೆ ಪಕ್ಕಾಗುವಣಕಮಂ
> ಸಹಿಸದೆನ್ನಾತ್ಮಂ ! ತೆರಳ್, ಪೋಗು, ಸೀತೆಯಂ
> ಸೇವಿಸುತ್ತಿರು, ರಾಮನಂ ಗೆಲ್ದು ಸೆರೆವಿಡಿದು
> ತರ್ಪನ್ನೆಗಂ !'
>
> – ಶ್ರೀ. ರಾ. ದ. : ದಶಾನನಸ್ವಪ್ನಸಿದ್ಧಿ, ಪಂಕ್ತಿ ೩೦೩–೩೧೪

ಇಲ್ಲಿ ಮತ್ತೆ ತಿಳಿಯುತ್ತದೆ ರಾವಣನ ಅಹಂ – ಅಭಿಮಾನಗಳ ಏರಾಟ.



ಅವನ ತರ್ಕ ಸಕಾರಣವಾಗಿದ್ದರೂ ಅದರ ಬೆನ್ನೆಲುಬಾಗಿರುವುದು ಈ ಅಂಶವೆ. ಕುವೆಂಪು ಹೇಗೂ ರಾವಣನ ಪಾತ್ರವನ್ನು ಸಾಫಾಗಿಸಿಲ್ಲ, ಸರಳಗೊಳಿಸಿಲ್ಲ. ಮತ್ತೂ ಸಂಕೀರ್ಣಗೊಳಿಸಿದ್ದಾರೆಂಬುದನ್ನು ಮೇಲಿನ ಸ್ಥೂಲ ವಿವರಣಗಳಿಂದಲೂ ತಿಳಿಯಬಹುದು.. ಇದ್ದಿಲು ರಸಾಯನಿಕ ಅಗ್ನಿಕ್ರಿಯೆಯಿಂದ ವಜ್ರವಾದಾಗ ಆದರೆ ಹೊರಕವಚದಲ್ಲಿ ಇದ್ದಿಲಂಶವೆ ಇದ್ದಿರುವಂತೆ ರಾವಣನ ಹೊರಮನಸಿನಲ್ಲಿನ್ನೂ ಅಹಂಕಾಮಗಳ ಧೂಳೇ ಉಳಿದಿರುತ್ತದೆ.

ಕುವೆಂಪು ಇಲ್ಲಿ ಸೃಷ್ಟಿಸಿರುವ ದಶಾನನ ಸ್ವಪ್ನಪ್ರತಿಮೆಯನ್ನು ಇಲ್ಲಿ ವಿವರವಾಗಿ ವಿಶ್ಲೇಷಿಸಬರುವುದಿಲ್ಲ. ಸ್ಥೂಲವಾಗಿಷ್ಟು ಹೇಳಬಹುದು : ಅಲ್ಲಿ ಅವನ ಅಂತರಂಗದ ಮಾಗುವಿಕೆಯ ಹಾಗೂ ಆಗುವಿಕೆಯ ಪ್ರತಿಮನ ನಡೆದಿದೆ. ಅಲ್ಲಿ ಬರುವ ಕುದುರೆ ಮೂಲಕಾಮಕ್ಕೆ ಸಂಕೇತ. ದೇವಪೀಠದ ಮೇಲೆ ದೇವಪ್ರತಿಮೆ ಇಲ್ಲ, ಅದು ಕಾಲೂರಿದೆ. ರಾವಣತಪಸ್‌ಶಕ್ತಿಯು ಮೂಲಬಲವೆಲ್ಲವೂ ಕಾಮಾರ್ಪಿತವಾಗಿತ್ತು. ಆ ಕಾಮಹತಿ ಆಯಿತು. ಪರಿವರ್ತನದ ತುತ್ತತುದಿಯಲ್ಲಾಗುವ ಹೊರಕವಚದ ಉಳಿಕೆಯ ನಷ್ಟವದು. ರಾವಣಕುಂಭಕರ್ಣರು ಲವಕುಶರಾಗುತ್ತಾರೆಂಬುದು ಅದಿವ್ಯ, ಎಂಬ ದೃಷ್ಟಿಗೆ ವಿನಾ ಉಳಿದವರಿಗೆಲ್ಲ ಇದು ಅತಿಶಯ ಕಾಣ್ಕೆಯೆಂದೆ ಕಾಣುತ್ತದೆ.[೧೪] ರಾವಣಪರಿಣಾಮದ ಅನಿವಾರ್ಯ ಸಿದ್ಧಿಯೆ ಅದು ಎಂಬಂತೆ ಸಿದ್ಧವಾಗುತ್ತದೆ. ಇದರ ಬಗೆಗಿನ ಚರ್ಚೆ ಇಲ್ಲಿ ಮುಗಿಯುವಂತಹದಲ್ಲ. ರಾವಣಪರಿವರ್ತನ ಆ ಭವದಲ್ಲೆ ಏಕೆ ಪ್ರಕಟವಾಗಬಾರದಿತ್ತು, ಎಂಬ ಪ್ರಶ್ನೆ ಏಳುವುದು ಸಹಜ. ಅದಕ್ಕೆ ರಾವಣ ಮಂಡೋದರಿಗೆ ಹೇಳಿದ ಮಾತಿನಲ್ಲಿ ಅರ್ಧ ಉತ್ತರವಿದೆ. ಹೇಳಿದರೂ ಯಾರು ನಂಬುತ್ತಾರೆ ? ಹೇಳಿದರೆ ರಾವಣಾಭಿಮಾನಹಾನಿ. (ಇದೇ ಬಗೆಯ ಇಕ್ಕಟ್ಟು, ತನ್ನ ಹುಟ್ಟನ್ನು ತಿಳಿಸಿದ ತಾಯಿಗೆ ಕರ್ಣನಾಡುವ ಮಾತಿನಲ್ಲಿ ವ್ಯಕ್ತವಾಗುತ್ತದೆ.

---

೧೪. ನರನಾರಾಯಣರು ಡಂಭಾಸುರನ ತೊಂಬತ್ತೊಂಬತ್ತು ತಲೆಗಳನ್ನು ಕತ್ತರಿಸಿದ ಮೇಲೆ ಉಳಿದೊಂದು ತಲೆ ಸೂರ್ಯನ ಮೊರೆಹೊಕ್ಕಿತೆಂದೂ ಅದೇ ಕರ್ಣನಾಗಿ ಸೂರ್ಯಪುತ್ರನಾಯಿತೆಂದೂ ಕೃಷ್ಣಾರ್ಜುನರಾಗಿ ನಾರಾಯಣನರರೇ ಹುಟ್ಟಿದರೆಂದೂ ಕಥೆಯಿದೆ. ಕಡೆಯ ತಲೆ ನರನ ಸರದಿಯಾಗಿದ್ದುದರಿಂದ ಕರ್ಣವಧೆಯಾದರೂ ಅರ್ಜುನನ ಹೊಣೆ ; ಸಹಾಯ ಕೃಷ್ಣನದಾದರೂ. ಈ ಕಥೆಗೆ ಹೇಗೂ ನೇರ ಸಂಬಂಧವಿಲ್ಲವಾದರೂ ರಾವಣಕುಂಭಕರ್ಣ ಲವಕುಶರಾಗುವ ಕಲ್ಪನೆಗೆ ಒಂದೆಳೆ ಸಂಬಂಧವನ್ನು ಒದಗಿಸುತ್ತದೆ, ಅದು. ಕಾಮ ಮಾಗಿ ಮಾತೃಪ್ರೇಮವಾಗುವುದು ಅಕಲ್ಪನೀಯವೆಂದು ಭಾವಿಸುವುದಾಗಲಿ, ಇದರಲ್ಲಿ ಲಿಬಿಡೊ–ಈಡಿಪಸ್ ಕಾಂಪ್ಲೆಕ್ಸ್‌ಗಳನ್ನು – ಕಾಣುವುದಾಗಲಿ ಅಸಹಜವೇನೂ ಅಲ್ಲ. ಅವೆಲಕ್ಕೂ ವಿವರವಾದ ಸಮಾಧಾನಕ್ಕೆ ಇಲ್ಲಿ ಅವಕಾಶವಿಲ್ಲ.

ಮತ್ತಾರಿಗೂ ಅದನ್ನು ಹೇಳಬೇಡ ಎಂದು ಅವನೇಕೆ ಕೇಳಿಕೊಳ್ಳಬೇಕಿತ್ತು ?) ಮೇಲಾಗಿ ಅದರಿಂದ ರಾವಣ ಪಾತ್ರದ ಸರಳೀಕರಣವಾಗುತ್ತದೆ... ಪರಿಣಾಮದ ಹಾದಿಯಾದರೂ ಸರಳವಲ್ಲ, ಶೀಘ್ರವಲ್ಲ. ಅಂತಸ್ಸತ್ತ್ವ ಪರಿಣಾಮಗೊಂಡಾಗ ಹೊರಗೂ ಪರಿಣಾಮಗೊಳ್ಳಬೇಕಾಗುತ್ತದೆ. ಬಸವಣ್ಣನವರು ಹೇಳುವ ಕಬ್ಬಿಣದ ಕೋಡಗ, ಪರುಷ ಮುಟ್ಟಿ ಸುವರ್ಣದ ಕೋಡಗವಾದುದನ್ನಿಲ್ಲಿ ನೆನೆದುಕೊಳ್ಳಬೇಕು. ಒಳಗಿನೊಡನೆಯೆ ಹೊರಗೂ ಮಾಗಬೇಕು. ವಿಕಾಸದ ಹಾದಿಯೆ ಇದನ್ನು ಸಾರುತ್ತಬಂದಿದೆ. ಲೌಕಿಕವಾಗಿಯೆ ಹೇಳುವುದಾದರೆ ರಾಷ್ಟ್ರಾಧ್ಯಕ್ಷನಾಗಿ ಆಯ್ಕೆಯಾಗುವ ರಾಷ್ಟ್ರನಾಯಕ, ತಾನೆಷ್ಟೆ ದೊಡ್ಡವನಾಗಿದ್ದರೂ ಸ್ವಂತ ಮಹಾಭವನದಲ್ಲೆ ವಾಸಿಸುತ್ತಿದ್ದರೂ ತನ್ನ ಆ ಮನೆಯಲ್ಲೆ ಉಳಿದುಕೊಂಡು ರಾಷ್ಟ್ರಪತಿಯಾಗಿ ಕಾರ್ಯಭಾರಮಾಡಲು ಇಕ್ಕಟ್ಟುಗಳಿವೆ. ಅಂತಃಪರಿಣಾಮ ಬಹಿಃ ಪರಿವರ್ತನೆಯನ್ನು ಬಯಸುತ್ತದೆ. ಅದರಿಂದಾಗಿ ರಾವಣಕುಂಭಕರ್ಣರು ಲವಕುಶರಾಗುವ ಕಣಸು. ಆಗ ನಿಜಕ್ಕೂ ರಾಮನನ್ನವರು ಗೆಲ್ಲುತ್ತಾರೆ. ಸೀತೆಯನ್ನೂ ತಾಯಾಗಿ ಪ್ರೀತಿಸುತ್ತಾರೆ. ಇವೆಲ್ಲ ಹುಚ್ಚಾಗಿ ಕಾಣಬಹುದು. ಎಲ್ಲ ಕ್ರಾಂತಿದರ್ಶನವೂ ಹಾಗೇ ತೋರಿಯಾವು. ರಾವಣನ ಈ ಪಾರಿಣಾಮಿಕ ಅವಸ್ಥಾಂತರವನ್ನು ಕಾಣುವಂತೆಯೇ ಉಳಿದೆಲ್ಲ ಪಾತ್ರಗಳ ಮೇಲೇರಿಕೆಯನ್ನೂ ಕವಿ ಕಾಣಿಸಿದ್ದಾರೆ. ಒಂದೊಂದು ಪಾತ್ರದ ಸ್ವಭಾವಕ್ಕೆ ತಕ್ಕನಾಗಿ ಆ ಕ್ರಿಯೆ ಆಗತೊಡಗಿದೆ. ಶ್ರೀರಾಮಸೀತಾದೇವಿಯರ ದೈವೀ ಸತ್ತ್ವವಾದರೂ – ಅವತಾರ ಸತ್ತ್ವವಾದರೂ – ಪೂರ್ಣ ಪ್ರಕಟವಾಗುವುದು, ಅವರಿಗೇ ಅದು ಅನುಭೂತವಾಗಿ ಬರುವುದು ಕಡೆಯಲ್ಲಿ ಮಾತ್ರವೆ. ಹೀಗೆ ಈ ಕಾವ್ಯದಲ್ಲಿ ಎಲ್ಲ ಚೇತನಗಳೂ ತಮ್ಮ ಆಗುವಿಕೆಯ ಹಾದಿಯಲ್ಲಿ ಮುನ್‌ಧಾವಿಸುತ್ತವೆ, ಒಪ್ಪಲಿ ಬಿಡಲಿ. ಎಲ್ಲ ಚೇತನಗಳೂ ಆ ಕ್ರಿಯೆಯಲ್ಲಿ ಅರಿತೊ ಅರಿಯದೆಯೊ ತೊಡಗಿವೆ. ಎಲ್ಲವೂ ಶ್ರೀರಾಮಸತ್ತ್ವದ ಕೇಂದ್ರದಲ್ಲೆ ಸುತ್ತುವುದು ಕಡೆಕಡೆಗೆ ಸ್ಪಷ್ಟವಾಗುತ್ತದೆ. ಅಲ್ಲ, ಆ ಕ್ಷೀರಸಾಗರದತ್ತಲೆ ಎಲ್ಲ ಜೀವನದಿಗಳೂ ಧಾವಿಸುತ್ತವೆ.

ನಮ್ಮ ಯುಗಕ್ಕೆ ಶ್ರೀರಾಮಾಯಣಾವತಾರವಾಗಿರುವುದು ಹೀಗೆ. ಕನ್ನಡದ ಮಟ್ಟಿಗೆ ಹೇಳುವುದಾದರೆ, ವ್ಯಾಸಭಾರತದ ಸ್ಫೂರ್ತಿಯಿಂದ ಹುಟ್ಟಿಕೊಂಡ ಸಮರ್ಥ ಭಾರತಗಳು ಎರಡಾದರೂ ಇರುವಂತೆ, ಶ್ರೀರಾಮಾಯಣ ಕೃತಿಗೆ ಅಪಚಾರಮಾಡದಂತಹ ಶಕ್ತ ಕನ್ನಡ ಕೃತಿ ಈ ತನಕವೂ ಬಂದಿರಲಿಲ್ಲವೆನ್ನುತ್ತಿದ್ದಾಗ ಉತ್ತರವಾಗಿ ಶ್ರೀ ರಾಮಾಯಮದರ್ಶನ ಮೂಡಿಬಂದಿದೆ. ಕವಿಗಳೇ ಭಾವಿಸಿರುವಂತೆ ಅವತರಿಸಿದೆ. ಭಾರತೀಯ ಜೀವನದ ಮೇಲೆ ಇದರ ಪ್ರಭಾವವೇನು



ಎಂಬುದಕ್ಕೆ ಇನ್ನೂ ಕಾಲ ಬರಲಿದೆ. ಭುವನದ ಭಾಗ್ಯದಿಂದ ಮಹಾಕಾವ್ಯ ಹುಟ್ಟುತ್ತದೆ ಎಂಬ ಪ್ರಸಿದ್ಧ ವಾಣಿಯಿದೆ. ಶ್ರೀರಾಮಾಯಣದರ್ಶನಂ ಅಂತಹ ಕಾವ್ಯ ಎಂಬುದನ್ನು ವಾದಿಸಿ ಸಿದ್ಧಪಡಿಸಬೇಕಾಗಿಲ್ಲ.

ದರ್ಶನ, ಕಾವ್ಯಸಿದ್ಧಿಗಳ ದೃಷ್ಟಿಯಿಂದಲ್ಲದೆ ಛಂದಸ್ಸಿನ ದೃಷ್ಟಿಯಿಂದ ಕೂಡ ಈ ಕಾವ್ಯ ಇಡೀ ಕನ್ನಡದ ಛಂದಸ್ಸನ್ನೆಲ್ಲ ಮೈಗೂಡಿಸಿಕೊಂಡು ಬೆಳೆದಂತಿದೆ. ಸರಳರಗಳೆ ಮಹಾಛಂದಸ್ಸಾಗುವಾಗ ಷಟ್ಪದಿತನದೊಡನೆ ಕಂದವೃತ್ತಗಳ ಸಮಾಗಮವೂ ಆಗಿದೆ. ಮಿಲ್ಟನ್ ಕವಿಯ Blank vers ಪ್ರಭಾವ ಬೀರಿದ್ದರೂ ಅದನ್ನು ಮರೆತು ಓದಿದರೂ ಕನ್ನಡದ ಎಲ್ಲ ಲಯಗತಿಗಳನ್ನೂ ಬಿಗಿಯನ್ನೂ, ಸಂಸ್ಕೃತ ವೃತ್ತಗಳ ಗಾಯತ್ರಿ ಮತ್ತು ಮಂತ್ರಗಳ ಛಂದೋವಿನ್ಯಾಸಗಳನ್ನೂ ಗರ್ಭೀಕರಿಸಿಕೊಂಡು ಮಹಾಛಂದಸ್ಸು ಸುಂದರ ಸಂಪನ್ನವಾಗಿರುವುದನ್ನೂ ಕಾಣಬಹುದು. ಈ ಕಾವ್ಯ ಭಾಷೆಯಾದರೂ, ಇತ್ತೀಚೆಗೆ ಆಡುಮಾತು ಎಂಬ ಓಡುಮಾತಾಡುತ್ತಿರುವ ಕಾಲದಲ್ಲಿ ಸುಲಭಪಾಕವಾಗಿ ತೋರದಿದ್ದರೂ, ಕನ್ನಡದ ಸಂಸ್ಕೃತದ, ವೃತ್ತದ ಷಟ್ಪದಿಯ, ಪಂಪನ ರನ್ನನ ಕುಮಾರವ್ಯಾಸನ ಕಸಿಯಿಂದ ಬಂದಂತೆ ಕಂಡೀತು. ಆಡುಮಾತಿನ ವಿಲಾಸದಿಂದ, ಗಂಭೀರಸಾಗರಘೋಷವಾಗಿ, ಮಂದಮಾರುತವಾಗಿ, ಚಂಡ ಮದ್ದಲೆಯಾಗಿ, ಮೃದಂಗವೀಣಾವೇಣುವಾಗಿ, ಮಂತ್ರವತ್ತಾಗುವ ತನಕ ಬೆಳೆದಿದೆ. ತುಂಬ ಹತ್ತಿರದಲ್ಲಿ ನಿಂತಾಗ ದೊಡ್ಡ ಪರ್ವತ ಶ್ರೇಣಿಯ ಎತ್ತರಬಿತ್ತರ ಕಣ್ಣಿಗೆ ಸಿಗುವುದಿಲ್ಲ. ಮಹಾಕಾವ್ಯಮಾನದಿಂದ ನೋಡುವುದಾದರೆ ಆ ಕೃತಿ ಹುಟ್ಟಿ ಕಾಲವೇನೂ ಆಗಿಲ್ಲ. ಮುಂದೆ ಇದು ಒಂದು ಅಧ್ಯಯನದ ಹಿಡಿತಕ್ಕೆ ಬರುವುದು ಸಾಧ್ಯ.

ಕುವೆಂಪು ಶ್ರೀರಾಮಾಯಣದರ್ಶನದಿಂದ ಮಹಾಕವಿಯಾದರು ಎಂಬಂತೆಯೆ, ಅವರ ಕೃತಿಸಮಷ್ಟಿಯಿಂದಾಗಿ ಮತ್ತೂ ಮಹಾಕವಿಯಾಗಿದ್ದಾರೆ. ಶ್ರೀರಾಮಸೀತೆಯರ ದಿವ್ಯ ಪ್ರೇಮಕಥೆಯನ್ನು ತನ್ಮಯೀಭಾವದಿಂದ ಚಿತ್ರಿಸಿದಂತೆಯೇ ಐತ–ಪೀಂಚಲು–ನಾಯಿಗುತ್ತಿ – ತಿಮ್ಮಿಯರ ಪ್ರಣಯಕಾಮನೆಗಳನ್ನೂ ನಿರ್ಮಮ ತನ್ಮಯತೆಯಿಂದ ಚಿತ್ರಿಸಿದ್ದಾರೆ. ಮೇಲುವರ್ಗದ ದೋಷದೌರ್ಬಲ್ಯಗಳನ್ನು ವ್ಯಕ್ತನೈಷ್ಠುರ್ಯದಿಂದ ಪ್ರಕಟಿಸಿರುವಂತೆ ತಮ್ಮವರೆನಿಸಿಕೊಂಡವರ ರಾಗದ್ವೇಷಗಳನ್ನೂ, ಸಣ್ಣತನ–ದೊಡ್ಡಸ್ತಿಕೆಗಳನ್ನೂ, ಹಸುತನ–ಪಶುತನಗಳನ್ನೂ ವಿವರವಾಗಿ ಕರುಣಮಿಶ್ರಿತ ವ್ಯಂಗ್ಯದಿಂದ ಚಿತ್ರಿಸಿದ್ದಾರೆ. ತಮ್ಮ ಯುಗದ ಬಗ್ಗೆ ಚೆನ್ನಾಗಿ ಪ್ರತಿಕ್ರಿಯೆ ತೋರಿಸುವಂತೆಯೆ ನಿತ್ಯ ವರ್ತಮಾನದ ಬಗ್ಗೆಯೂ ಗಾಢವಾಗಿ ಪ್ರತಿಸ್ಪಂದಿಸಿದ್ದಾರೆ. ಯಾವುದನ್ನೂ ಮುಚ್ಚಿಕೊಂಡು ಕೊಳೆಯದೆ, ಇಲ್ಲವೆ ಕಚ್ಚದೆ

ವಿಷ ಕಾರದೆ ಬಿಚ್ಚುನುಡಿದಿದ್ದಾರೆ. ಕೊಚ್ಚುಗತ್ತಿಯನ್ನೂ ಬೀಸಿದ್ದಾರೆ. ಬದುಕಿನ ಮಾಗನ್ನು ಕೃತಿಯಲ್ಲಿ ಕಂಡರಿಸಿದ್ದಾರೆ. ಕೃತಿಯ ಮಾಗನ್ನು ಬದುಕಿನಲ್ಲಿ ಕಂಡಿದ್ದಾರೆ, ಉಂಡಿದ್ದಾರೆ. ಇವರ ಸಮಗ್ರ ಕೃತಿಗಳೂ ಯಾವೊಬ್ಬ ಲೇಖಕನಿಗೂ ಮಹತ್ತನ್ನು ತರುತ್ತವೆಂಬುದು ಮಾತ್ರವಲ್ಲ ಯಾವೊಬ್ಬ ವಿಮರ್ಶಕನಿಗೂ ಮುಡಿಗೆಯಾಗುವುದರ ಜೊತೆಗೆ ಮಹತ್ತನ್ನೂ ತರುತ್ತವೆಂಬುದರಲ್ಲಿ ಸಂದೇಹವಿಲ್ಲ.

–ಮಾರ್ಚ್ ೧೯೭೯

---

("ಕುವೆಂಪು–ಬೇಂದ್ರೆ–ಕಾರಂತ" ಎಂಬ ಗ್ರಂಥದಲ್ಲಿ ಪ್ರಕಟವಾದ ಈ ಲೇಖನ, ಮಣಿಪಾಲದ ಮಹಾತ್ಮಗಾಂಧಿ ಮೆಮೊರಿಯಲ್ ಕಾಲೇಜಿನಲ್ಲಿ ೧೯೭೯ರ ಮಾರ್ಚ್ ತಿಂಗಳಲ್ಲಿ ಮಾಡಿದ ಉಪನ್ಯಾಸದ ಆಧಾರದಲ್ಲಿ ಸಿದ್ಧಗೊಂಡಿದೆ)



# ಶ್ರೀ ರಾಮಾಯಣ ದರ್ಶನದ ಮಂಥರೆ

ಶ್ರೀ ರಾಮಾಯಣದರ್ಶನಂ ಮಹಾಕಾವ್ಯದಲ್ಲಿ ಯುಗಮನೋಧರ್ಮದ ಪ್ರಮುಖ ವಾಹಿನಿಯು ಪ್ರವಹಿಸುತ್ತಿದೆಯೆಂಬುದಕ್ಕೆ ಅಲ್ಲಿ ಮೈದಾಳಿರುವ ಮಂಥರೆ ರಾವಣರ ಪಾತ್ರಕ್ಕಿಂತಲೂ ಸ್ಪಷ್ಟವಾದ ನಿದರ್ಶನವೆ ಬೇಕಿಲ್ಲ. ಸಮಗ್ರ ಕಾವ್ಯವೆ ಯುಗ ಸಮಷ್ಟಿಯ ಗುಪ್ತ ಪ್ರಜ್ಞೆಯ ಅಭಿವ್ಯಕ್ತಿಯೆ ಆಗಿದ್ದರೂ ಈ ಪಾತ್ರಗಳಂತೂ ಆ ಅಭಿವ್ಯಕ್ತಿಯ ಮುಷ್ಟಿ ಗ್ರಾಹ್ಯವಾದ ಆದರೂ ಸೂಕ್ಷ್ಮವೂ ಸಂಕೀರ್ಣವೂ ಆದ ಪ್ರತಿಮೆಗಳಾಗಿ ನಿಂತಿವೆ. ಕವಿಯ ಪ್ರತಿಭಾಯಾತ್ರೆ, ಪ್ರಾಚೀನ ಅರ್ವಾಚೀನಗಳಲ್ಲೆಂತೊ ಹಾಗೆಯೆ ಅನಾಗತವಾದರೂ ಸಂಭಾವ್ಯವಾದ ಭವಿಷ್ಯದಲ್ಲೂ, ಸುಪ್ತ ಜಾಗ್ರತ್ ಸ್ವಪ್ನ ಮನೋಭೂಮಿಕೆಗಳಲ್ಲೆಂತೊ ಅತಿಮಾನಸದಲ್ಲೂ, ವ್ಯಕ್ತಿವಿಶಿಷ್ಟತೆಯೆ ಜಟಿಲ ಕುಟಿಲ ವಿಪಿನದಲ್ಲೆಂತೊ ಅಂತೆ ಸಮಷ್ಟಿ ಮನಸ್ಸಿನ ಚಕ್ರವ್ಯೂಹದಲ್ಲೂ ಯಶಸ್ವಿಯಾಗಿ ನಡೆದಿದೆ ಎಂಬುದರ ಜೀವಂತೋಜ್ವಲ ಸಾಕ್ಷಿ ಈ ಪಾತ್ರಗಳು. ಸದ್ಯದ ವಿವೇಚನೆಗೆ ಮಂಥರೆಯನ್ನಿಲ್ಲಿ ಗಮನಿಸಬಹುದು.

ತುಂಬು ಬೆಳದಿಂಗಳ ರಾತ್ರಿ, ಅಯೋಧ್ಯೆಯ ಅರಮನೆಯ ಉದ್ಯಾನದಲ್ಲಿ ಮಕ್ಕಳಾಡಿಸುತ್ತಿರುವ ತಾಯಂದಿರ ಸರಸ ಸಾಗಿದೆ. ಆದರೇತಕ್ಕೆ ಇದ್ದಕ್ಕಿದಂತೆಯೆ ಆ ಮಗು – ರಾಮಚಂದ್ರನಿರಬೇಕಲ್ಲವೆ ? – ಅಳುತ್ತಿರುವುದಾದರೂ ? ಏನು, ಚಂದಮಾಮ ಬೇಕೆಂದೆ? ಮತ್ತಾವುದೂ ಬೇಡವೇನು ? ತಾಯಂದಿರ ಸಂತೈಕೆ, ತಂದೆ ದಶರಥನ ಸಡಗರ ಏನೊಂದೂ ರುಚಿಸಲೇ ಇಲ್ಲವೇನು ? ಅಯ್ಯೋ ಪಾಪ ! ವೃಥಾ ಅತ್ತು ಅತ್ತು ಬಳಲುತ್ತಿದೆಯಲ್ಲ ಮಗು ! ಆ ಗೋಳಾಟವನ್ನು ನೋಡಲಾಗದಲ್ಲ. ಆ ತಂದೆ ತಾಯಂದಿರಿಗೆ ಏಕೆ, ಯಾರಿಗೂ. ಅಹುದು ! ಯಾರಿಗೂ ಆ ಮಗುವಿನ ಚೀತ್ಕಾರ ದುಸ್ಸಹ್ಯ ಅಹುದು ! ಯಾರೋ ಬರುವಂತೆ ಕಾಣುತ್ತಿದೆಯಲ್ಲ ಅಲ್ಲಿಗೆ, ಯಾರಾಕೆ ? ಯಾರೊ ! ಏನೋ ಯಾರಿಗೊ ಕೊಟ್ಟಂತಿದೆ. ಯಾರೋ ತಾಯಿ ಆ ಛಾಯಾ ವ್ಯಕ್ತಿ ನೀಡಿದುದೇನನ್ನೊ ಕೊಂಡು, ಮಗುವಿಗೆ ತೋರುತ್ತಿರುವಂತಿದೆಯಲ್ಲ ! ಅಹುದಲ್ಲ. ಮಗು ಏನನ್ನೊ ಕಂಡು ಕಿಲ ಕಿಲ ನಗುತ್ತಿದೆ ! ಅಹ ಹಿಗ್ಗಿದೆ ! ಏನಾ ಮೋಡಿ ? ಯಾರಾ ಮೋಡಿ ?

ಅತ್ಯಂತ ನಾಟಕೀಯವಾಗಿ ಆಗುತ್ತದೆ ಮಂಥರೆಯ ಪ್ರವೇಶ. ಬಾನಿನ ತಿಂಗಳನ್ನು ಬಯಸಿ ಕೈನೀಡಿ ಅಳುವ ಶಿಶು ರಾಮಚಂದ್ರನ ಬಯಕೆಯನ್ನು ಈಡೇರಿಸದೆ ಎಲ್ಲರೂ ರಿಕ್ತರಾಗಿದ್ದ ಆ ಬೆಳುದಿಂಗಳ ರಾತ್ರಿ ನೆರಳಿನಂತ ಬರುತ್ತಾಳೆ, ಆ ಕುಬ್ಜೆ, ತನಗಾವ ಆಹ್ವಾನವೂ ಇಲ್ಲದಿದ್ದರೂ, ಅಷ್ಟೆ ಅಲ್ಲ, ತಾನಲ್ಲಿಗೆ ನಿಷಿದ್ಧವೆನಿಸಿದ್ದರೂ ! ಏಕೆ ? ಶಿಶು ಭರತನನ್ನು ಕಂಕುಳಲ್ಲಿಟ್ಟುಕೊಂಡ ಆ ಗೂನಿಗೆ ಮಗು ರಾಮಚಂದ್ರನ ಅಳು ಬಗೆಗದಡಲಿಲ್ಲವೆ ? ಅವನ ಗೋಳಾಟವೂ ಇವನ ಅಳುವಿನಂತೆ ಕಂಡಿತೇನು ? ಏನೊ ! ಅಂತೂ ಏನೊ ಸಂತೈಕೆಯ ದಾರಿ ತೋರಿದಳು. ತನ್ನ ಸೆರಗಿನಲ್ಲಿ ಮುಚ್ಚಿಟ್ಟು ತಂದಿದ್ದ ಕನ್ನಡಿಯನ್ನು ತನ್ನ ಸಾಕು ಅರಸು ಮಗಳು ಕೈಕೆಗೆ ನೀಡುತ್ತಾಳೆ. ಅದನ್ನಾಕೆ ಮಗು ರಾಮನ ಮುಖದ ಮುಂದೆ ಹಿಡಿಯುತ್ತಾಳೆ. ಕೈಯ ಕನ್ನಡಿಯಲ್ಲಿ ಕಂಡ ಚಂದ್ರ ಕೈಗೆ ಸಿಕ್ಕನೆಂದೆ ಹಿಗ್ಗುತ್ತದೆ ಆ ಮಗು.

ಈ ಇಡೀ ಪ್ರಸಂಗವೇ ಅದ್ಭುತವಾದ ಪ್ರತಿಮೆಯಾಗಿ ನಿಲ್ಲುತ್ತದೆ. ಅದರ ವಿಶ್ಲೇಷಣೆ ಮುಂದೆ ಮಾಡುವ. ಆದರೀಗ ಅಲ್ಲಿ ಆ ಮುದುಕಿಗಾದರೂ ಮುಂದೇನಾಯಿತು ? ಆ ಶಿಶು ರಾಮಚಂದ್ರನ ಹಿಗ್ಗಿಗೆ ತಾನು ಕಾರಣಳಾದೆನಲ್ಲಾ ಎಂದು ಸಂತಸಗೊಂಡ ಆ ಮುದಿ ಗೂನಿ ಆ ಕಂದಯ್ಯನನ್ನು ಎತ್ತಿಕೊಳ್ಳಲು ತೋಳ್ ಚಾಚಿದರೇಕೆ ಮಹಾರಾಣಿ ಕೌಸಲ್ಯೆ ಸಿಡಿಯುತ್ತಾಳೆ ? 'ಕಂದಂಗಮಂಗಳಂ ಮುಟ್ಟದಿರ್, ಮುಟ್ಟದಿರ್ ! ಬೇಡ !' ಹೀಗೆನ್ನಬೇಕೆ ಪಾಪ ಅವಳಿಗೆ ? ಅವಳೇನೆಸಗಿದ ಮಹಾಪರಾಧಕ್ಕೆ ಆ ಧಿಕ್ಕಾರ ? ಓಹೊ ಅವಳು ಕುಬ್ಜೆ, ವಿಕೃತೆ, ತೊನ್ನಮಯ್ಯ ಮುದಿಗೂನಿ. ಮೇಲಾಗಿ, ಅವಳು ಕೈಕೆಯ ಪ್ರಿಯ ಸಹಚರೆ ಎಂಬ ಭಾವನೆಯೂ ಇತ್ತೆ ? ಏನೊ ! ಅಂತೂ, ಅವಳು ಅಮಂಗಳೆ ಎಂದು ಮಗುವನ್ನವಳ ಕೈಗೆ ಕೊಡಲಿಲ್ಲ. ಏನಾಯಿತದರಿಂದ ? ಮುದಿಮಂಥರೆಯ ಮೈತ್ರಿ ಜಜ್ಜರಿತವಾಯಿತೆ ? ಅಹುದು : 'ಮುರಿದೊಲ್ಮೆಯವಮಾನದಿಂದೆ ಕಣ್ಬನಿ ಚಿಮ್ಮಿ ನಿಲ್ಲದಲ್ಲಿಂ ನಡೆದಳಯ್ ಭರತನಂ ಬಿಗಿದಪ್ಪಿ, ತುಳಿದ ಸರ್ಪಿಣಿಯಂತೆ ಮುಳಿಸಿನುರಿಯಿಂ ಪೊಗೆದು, ಸುಯ್ದು ಹೆಡೆಯೆತ್ತಿ !'

ಒಂದು ದೃಷ್ಟಿಯಲ್ಲಿ ಇದಿಷ್ಟೆ ಸಾಕಿತ್ತು ಮಂಥರೆಯ ಪಾತ್ರಕ್ಕೆ ಪೂರ್ವ ವೇದಿಕೆಯಾಗಿ. ಆದರೆ, ತಾನು ನಿರ್ಮಿಸಲಿರುವ ಮಂಥರಾ ಮಹಾಮಂದಿರಕ್ಕೆ ಕವಿ ಅಡಿಪಾಯವನ್ನು ಮತ್ತೂ ಆಳಕ್ಕೆ ಶೋಧಿಸುತ್ತಾರೆ. ಆ ಮಹೋನ್ನತ ಶಿಲ್ಪದ ಭಾರ ಸುಪ್ರತಿಷ್ಠಾಪಿತವಾಗಿರಲಿ ಎಂದು.

ಮಂಥರೆ ಎಲ್ಲಿಂದಲೊ ತೇಲಿ ಬಂದ ತರಗೆಲೆಯಲ್ಲ. ತನ್ನ ಸೃಷ್ಟಿಯ



ಮಹದ್ ವಿಲಾಸಕ್ಕಾಗಿ ಅವಳನ್ನು ವಿಧಿ ಎಲ್ಲರಿಗಿಂತಲೂ ಮೊದಲೆ ವಿಲಕ್ಷಣವಾಗಿಯೆ ಸೃಷ್ಟಿಸುತ್ತದೆ. ತನ್ನ ಮಹದ್ ಪ್ರಕಾರಗಳನ್ನೆಲ್ಲಾ ವಿಕಾರಗಳ ಮೂಲಕವೂ ಅಲಕ್ಷಿತಗಳ ಮೂಲಕವೂ ಸಾಧಿಸುತ್ತದೆ. ಅದೆಲ್ಲವೂ ಅನ್ಯಾಸಾಧ್ಯವೆಂಬಂತೆಯೂ ತೋರಿ, ಮೇಲಾಗಿ ಸೃಷ್ಟಿಕರ್ತ ತನ್ನ ಯಾವ ಲೀಲಾ ಕಾರ್ಯವನ್ನೂ ಎಷ್ಟು ಹಿಂದೆಯೆ ಪ್ರಾರಂಭಿಸಿ ಬಿಡುತ್ತಾನೆ ! ಮಂಥರೆಯನ್ನೆಂದು ಸೃಷ್ಟಿಸುತ್ತಾನೊ ಅಂದೇ ರಾಮಾಯಣದ ಮಾರ್ಗವಿನ್ಯಾಸವನ್ನೂ ಸಂಕಲ್ಪಿಸಿ ಬಿಡುತ್ತಾನೆ. ರಾಮ ರಾವಣರಾರೂ ಹುಟ್ಟಿಲ್ಲದ ಮುನ್ನವೆ ಈ ವ್ಯಕ್ತಿಯ ಪ್ರಾದುರ್ಭಾವವಾಗುತ್ತದೆ ! ಕುವೆಂಪು ಅವರ ಪ್ರಾಗ್ ವರ್ತಮಾನ ಭವಿಷ್ಯದ್ ವ್ಯಾಪಿಯಾದ ಸರ್ವಂಕಷ ಪ್ರತಿಭೆಗದು ಸಾಕ್ಷಿ. ಕಥೆ ಹೀಗಿದೆ :

ಕೈಕೆಯ ತಂದೆ ಕೇಕೆಯ ರಾಜ ಒಂದು ದಿನ ಬೇಟೆಯ ಆಯಾಸದಿಂದ ಸಂಜೆ ವೇಳೆ ನಟ್ಟಡವಿಯಲ್ಲಿ ಬರುತ್ತಿರುವಾಗ ಹಳುವವೇ ಗೋಳಿಟ್ಟಂತೆ ಕೇಳಿ ಬರುತ್ತದೆ, ಒಂದು ಶಿಶು ರೋದನ. ರಾಜ ಕೇಳುತ್ತಾನೆ. ಅವನಿಗೂ ಕರುಣೆ ಬಂತು. ಆ ಮಗುವನ್ನು ಮೊದಲೆ ಕಂಡಿದ್ದರೇನಾಗುತ್ತಿತ್ತೊ ! ಅಂತೂ, 'ಕಟ್ಟಲಿಹ ಕಬ್ಬಕೆ ಮೊದಲ್ ಗುದ್ದಲಿಯ ಪೂಜಿಪೋಲ್' ಕರುಣೆ ಮೂಡುತ್ತದೆ, ಅವನಿಗೆ. ಮುಂದೆಲ್ಲ ಆ ಕರುಣೆಯೆ ಅವನಲ್ಲಿ ಸ್ಥಾಯಿಯಾಗುಳಿದು ಬಿಡುತ್ತದೆ. ಆದರಲ್ಲಿ ಆಗ ಅವನು ರೋದನದೆಡೆಗೆ ನಡೆದು ಹೋಗಿನೋಡುತ್ತಾನೆ ! ಕಂಡದ್ದಾದರೂ ಏನು ! ಯಾವುದೊ ದಸ್ಯುಶಿಶು ! 'ಮುಳ್ ಮಣ್ ತರಗೆಲೆಯಿಡಿದ ನೆಲದ ಮೇಲಿರುವೆ ಮುತ್ತಿ, ಹಾ, ವಿಕೃತಿ ವಕ್ರತೆ ರೂಹುಗೊಂಡತೆ !' ಇದ್ದ ದಸ್ಯು ಶಿಶು! ಹೆತ್ತವರ ಸುಳಿವೂ ಇಲ್ಲ. ಆದರೂ ಬಿಟ್ಟು ಹೋಗಿದ್ದ ಆ ವಿಕೃತ ಶಿಶುವಿನ ಮೇಲೆ ಆ ರಾಜನಿಗೆ ಕನಿಕರವೆ ! ಪಾಪ ಆ ಹೆಣ್ಣು ಮಗುವನ್ನೆತ್ತಿಕೊಂಡು ಕಟ್ಟಿರುವೆಗಳೆಲ್ಲವನ್ನು ಒರೆಸಿ ಸಂತೈಸುತ್ತಾನೆ ; ಗೂಬೆಯುಪಶಕುನದ ವಿಕಾರದುಲಿಯನ್ನೂ ಮೀರಿ ಕಾಡಗತ್ತಲು ಕವಿಯುತ್ತಿರಬೇಕಾದರೆ ಆ ಮಗುವನ್ನಷ್ಟಕ್ಕೆ ಬಿಡದೆ ತನ್ನರಮನೆಗೂ ತರುತ್ತಾನೆ. ವಿಧಿ ತನ್ನ ಮುಂದಣ ಮಹದ್ ಕಾರ್ಯವನ್ನೆಷ್ಟು ಅಲ್ಪ ಪ್ರಮಾಣದಲ್ಲಿ, ಅಗಣ್ಯರೀತಿ ಪ್ರಾರಂಭಿಸುತ್ತದೆ !

ಆ ಹಸುಗೂಸು ಹುಡುಗಿಯಾಗಿ ಬೆಳೆಯುತ್ತಾಳೆ. ಆದರೇನು ಹೇಸಿನಾಕೃತಿಯಾಗಿ ಹೊಳೆಯುತ್ತಾಳೆ. ಕಂಡ ಕಂಡವರೆಲ್ಲರೂ ಚೀಃ ಚೀಃ ಎಂದು ದೂರ ಸಿಡಿದು ಬಿಡುತ್ತಾರೆ. ಆ ಹುಡುಗಿಯ ಹೊರಗೆಲ್ಲ ಇಂಥ ಸೀಗೆಯ ದಾವನಲವೆ ಹಬ್ಬಿಕೊಳ್ಳುತ್ತದೆಯಾದರೂ ಕೇಕೆಯ ರಾಜಮಾತ್ರ ಅಪ್ರೀತಿ ತೋರಲಿಲ್ಲ. ಬಹುದಿನವಾದ ಮೇಲೆ ತನಗಾದ ಮಗಳನ್ನು ಆ ಸಾಕು ಹೆಣ್ಣಿನ ಸೇವೆಗೇ

ಒಪ್ಪಿಸುತ್ತಾನೆ. ಅವಳ 'ಭೀಷಣೈಕಾಂತತೆಗೆ ಬಗೆಗರಗಿ' ಹೊರಲೋಕವೆಲ್ಲ ಬೆಂಕಿಯುರಿ ಸುರಿಯುತ್ತದೆ, ಆದರೂ ಬೆಳುದಿಂಗಳ ಸಿರಿ ಅವಳೊಬ್ಬಳಿಗೆ ತೋರುತ್ತದೆ. ಕೈಕೆಯೆ ಅವಳ ಸರ್ವಸ್ವವಾಗುತ್ತಾಳೆ. ದಿಕ್ಕಿಲ್ಲದವಳಿಗೆ ದಿಕ್ಕಾದ ರಾಜ. ಈಗ ಯಾವ ಅಕ್ಕರೆಯ ಹಕ್ಕೂ ತನ್ನದಾಗಿ ಲೋಕದಲ್ಲಿಲ್ಲದಾಗ ರಾಜಪುತ್ರಿ ಕೈಕೆಯ ಸ್ನೇಹ ದೊರೆತರೇನಾಗಬೇಡ ಅವಳ ಬಾಳು ! ಕವಿಯ ಮಾತನ್ನೆ ಕೇಳುವ :

ಮಳೆಹೊಯ್ದ ತೆರನಾಯ್ತು ಮಂಥರೆಯ ಮರುಧರೆಗೆ,
ಚೈತ್ರನಾಗಮವಾಯ್ತು ಮಂಥರೆಯ ಶಿಶಿರಕ್ಕೆ,
ಮಂಥರೆಯ ಬಾಳ್‌ನಿಶಿಗೆ ಶಶಿಯುದಿಸಿದಂತಾಯ್ತು,
ಮಂಥರೆಯ ಮೃತ್ಯುವಿಗೆ ತಾನಮೃತ ಸೇಚನೆಯಾಯ್ತು,
ಶುಷ್ಕತಾ ಶೂನ್ಯತೆಯೊಳೊಲ್ಮೆ ಸಂಚರವಾಯ್ತು ;
ಬದುಕು ಸಾರ್ಥಕ ಮಧುರಮಾಯ್ತು ಶಿಶುಸನ್ನಿಧಿಯ
ಪ್ರೇಮ ಸೌಂದರ್ಯ ಮಹಿಮೆಯಲಿ. ರೂಪ ವಿಹೀನೆ
ರೂಪಸಿಯೊಳಿರ್ದು ತನಗಿಲ್ಲದಾ ಚೆಲ್ವಿನಲಿ
ಲೋಲಾಡಿದಳ್, ತೇಲ್ವವೋಲ್ ಪಾಲೊಳಿದ್ದಲಿನ
ಚೂರು. ಮೆರೆದಳು ಕೈಕೆ ಮಂಥರೆಯ ತೊಡೆಯಲ್ಲಿ.
ಕಾಳಾಹಿ ಭೋಗದಲಿ ಹೊಳೆವ ಹೆಡೆ ಮಣಿಯಂತೆ,
ತಾರತಮ್ಯದಿ ಮತ್ತಿನಿತು ಚಾರುತರಮಾಗಿ,

ಶಿಶು ಕೈಕೆಯ ಆಗಮನದಿಂದ ಮಂಥರೆಯ ಮರುಭೂ ಜೀವನದಲ್ಲಿ ಏನಂತಹ ಜೀವ ಸಂಚಾರವಾಯಿತು ಎಂಬುದನ್ನು ವರ್ಣಿಸುವಾಗ ಕವಿ ಪ್ರಧಾನತಃ ಪ್ರಾಕೃತಿಕ ಪ್ರತಿಮೆಗಳನ್ನೆ, ಅವು ಎಷ್ಟೆ ಹಳೆಯವಾಗಿದ್ದರೂ, ಬಳಸುತ್ತಾರೆ. ಲೋಕ ದೃಷ್ಟಿಯಲ್ಲಿ ಅತಿ ನಿಕೃಷ್ಟ ಜೀವವಾಗಿದ್ದರೂ ಆ ಮಂಥರೆ ಭಗವದ್ ದೃಷ್ಟಿಗೆ ಅವಳೆ ಅತ್ಯನಿವಾರ್ಯವಾದ ಕಾರ್ಯ ವಿಧಾನವಾಗಿದ್ದಾಳೆ. ಕವಿ ದೃಷ್ಟಿಯಲ್ಲಿ ಅವಳು ತಿರಸ್ಕಾರಪತಿತ ಜೀವರ ಪ್ರತೀಕವಾಗಿಯೂ ಪ್ರತಿನಿಧಿಯಾಗಿಯೂ ಇದ್ದಾಳೆ. ಲೋಕ ನೇತ್ರಕ್ಕೇನೊ ಅವಳು ಹಾಲಿನಲ್ಲಿ ತೇಲಾಡುವ ಇದ್ದಲಿನ ಚೂರು. ಆದರೆ ವಾಸ್ತವವಾಗಿ, ಕೈಕೆ ಮಂಥರೆಯರ ಜೀವನ ಹಾಲು ಇದ್ದಲುಗಳಂತೆ ಹೊಂದದ ವಿಷಮ ಸಂಗಮವಾಗಿತ್ತೆ ? ಮರುಭೂಮಿ–ಚೈತ್ರ, ಕಾರಿರುಳು–ಬೆಳದಿಂಗಳು, ಶುಷ್ಕ ಶೂನ್ಯ–ಪ್ರೀತಿ, ಇವುಗಳ ಸಂಬಂಧ ಅವರಿಬ್ಬರ ಪ್ರೇಮ ಬಾಂಧವ್ಯ : ರೂಪಸಾದೃಶ್ಯದಿಂದ ಇದ್ದಲು ಹಾಲುಗಳಿದ್ದಂತೆ ತೋರಿದ್ದರೂ



ಸಹ. ಕಾಳನಾಗರ ಮತ್ತು ಅದರ ಹೆಡೆಮಣಿಗಳಲ್ಲಿ ರೂಪವೈದೃಶ್ಯವಿದ್ದರೂ ಆ ಎರಡರಲ್ಲಿ ಅವಿಭಾಜ್ಯ ಸಂಬಂಧವಿದೆ. ಆ ಮಣಿ ಆ ನಾಗಭೋಗದಿಂದಲೆ ಬರುವಂಥದು. ಅದನ್ನದು ಪ್ರಾಣ ತೆತ್ತು ರಕ್ಷಿಸಿಕೊಳ್ಳುತ್ತದೆ. ತನ್ನಹಂಕಾರವಾಗಿ ಅಲಂಕಾರವಾದ ಆ ಮಣಿಯನ್ನದು ತನ್ನುತ್ತಮಾಂಗದಲ್ಲೆ ಧರಿಸಿರುತ್ತದೆ. ಮಂಥರೆ–ಶಿಶು ಕೈಕೆಯರ ಸಂಬಂಧ ಹೀಗೆ ಬೇರೆ ಬೇರೆ ದೃಷ್ಟಿಗೆ ಬೇರೆ ಬೇರಾಗಿ ತೋರುತ್ತ ಪರಿಣಮಿಸುತ್ತದೆ. ಹೀಗಿರುವಾಗ ಆ ಕುಬ್ಜೆ ಮಂಥರೆಗೂ ತಾರುಣ್ಯ ತುಂಬಿ ಬಂದು ಬಾಹ್ಯವಿಕಾರದೊಳಗಿನ ಅವಳಂತರಂಗ ರತಿಭಾವಪುಲಕಿತವಾಗುತ್ತದೆ. ಅದೇನೊ ಪ್ರಕೃತಿ ಗುಣ. ಆದರೆ ಓಗೊಡುವ ಪ್ರೀತಿಯೆಲ್ಲಿದೆ ಹೊರಗೆ ? ಕಾಮನಾಗಿ ಬಂದು, ಇನಿಯನಾಗಿ ನಿಂದು ತನ್ನೊಳಗಿನ ಸುಪ್ತರತಿಯನ್ನೊಲಿದು ತಣಿಸಿ ತಾಯ್ತನವನ್ನರಳಿಸುವ ಕಾಮರಾಯನೆಲ್ಲಿದ್ದ ? ಅವ ಬಾರಲೇ ಇಲ್ಲ. ಆದರೆ ಅವಳ ತಾಯ್ತನ ಸತ್ತಿತ್ತೆ ? ಹೂವಾಗದೆ ಹಣ್ಣಾಗುವ ಅತ್ತಿಯ ಮರವಾಗುತ್ತಾಳೆ ಅವಳು. ತಾರುಣ್ಯದ ಅತೃಪ್ತ ಕಾಮದಲ್ಲವಳು ವಿಕಾರಿಯಾಗದಂತೆ ಮಾಡಿ ಅವಳಲ್ಲಿದ್ದ ವಾತ್ಸಲ್ಯವನ್ನುದ್ದೀಪಿಸಿ ಅವಳ ತಾಯ್ತನವನ್ನಚಲವಾಗುಳಿಸುವ ಶಕ್ತಿಯಾಗಿ ಬರುತ್ತಾಳೆ, ಕೈಕೆ.

'ಚಕ್ಕಮುಕ್ಕಿಯ ಕಲ್ಲಿನಂತರಂಗದೊಳಗ್ನಿ
ಗುಪ್ತವಾಗಿರ್ಪಂತೆ, ಬಾಹ್ಯ ವಿಕೃತಿಯ ಮಧ್ಯೆ
ಮಂಥರೆಯ ಹೃದಯದಲ್ಲಿ ಸುಪ್ತವಾಗಿರ್ದ ರತಿ,
ಚೆಲುವೊಲವುಗಳ ಚಿಲುಮೆ ತಾಂ ಕಣ್ದೆರೆದುದೊಯ್ಯನೆಯೆ
ಮುಕ್ತ ಮುಕ್ತಹಾರ ಧಾರೆಯಲಿ. ತನ್ನೊಂದು
ಜೀವಿತಕೆ ರಾಜಪುತ್ರಿಯೆ ಸರ್ವಸುಖಮಾಗೆ
ಮರೆತಳನ್ಯಾಯಮಂ, ಮರೆತಳಪಮಾನಮಂ,
ಮತ್ತೆ ಮರೆತಳು ತನ್ನನುಂ ತಾನೆ, ಕೈಕೆಯೊಳ್
ಸಾಯುಜ್ಯವೊಂದಿ'.

ಮನೋವೈಜ್ಞಾನಿಕ ದೃಷ್ಟಿಯಿಂದ ಮಾತ್ರವೆ ಮಂಥರೆಯ ಪಾತ್ರವನ್ನಿಲ್ಲಿ ಕವಿ ದರ್ಶಿಸುತ್ತಿರುವಂತೆ ಕಂಡರೂ, ಈ ಪೀಠಿಕೆ ಆ ಪಾತ್ರದ ಪೂರ್ಣದರ್ಶನಕ್ಕೆ ಭದ್ರವೇದಿಕೆಯಾಗುತ್ತದೆ : ಮುಂದಿನ ಪೂರ್ಣದೃಷ್ಟಿಯ ಸಂಕೀರ್ಣತಮ ಚಿತ್ರಣಕ್ಕೆ ಭಿತ್ತಿಯಾಗುತ್ತದೆ.

ಈ ಮಂಥರೆ ಲೋಕತಿರಸ್ಕೃತಳಾಗಿ, ಕೈಕಾಕೇಂದ್ರರಕ್ಷಿತಳಾಗಿ ಬೆಳೆಯುತ್ತಿರುವಾಗ ಮುಂದೆ ಕಥೆ ಅಯೋಧ್ಯೆಗೆ ಸಾಗುತ್ತದೆ. ಕೈಕೆ ಹೆಣ್ಣಾಗುತ್ತಾಳೆ,

ಶೃಂಗಾರ ಶರಲ್ಲಕ್ಷ್ಮಿಯಂತಾಗುತ್ತಾಳೆ. ಕಾಲಗತಿಯಂತೆ, ಮಂಥರೆಗೆ ಇಳಿವಯಸ್ಸು ಸಮೀಪಿಸುತ್ತದೆ. ಮೊದಲೆ ಕುಬ್ಜೆಯಾಗಿದ್ದವಳು ಈಗ ಇಳಿವಯಸ್ಸಿನ ಸುಕ್ಕೇರಿ ವಿಕಾರತರವಾಗುತ್ತಾಳೆ ; ತತ್ಫಲವಾಗಿ ಹೆಚ್ಚು ಜನಹೇಯದೂಷಿತಳಾಗುತ್ತಾಳೆ. ದಶರಥನ ಮೋಹದ ಸತಿಯಾದ ಕೈಕೆಯೊಡನೆ ಅಯೋಧ್ಯೆಗೆ ಅವಳು ಬರುವಾಗ ಇದ್ದ ಸ್ಥಿತಿ ಅದು. 'ರವಿವಂಶದರಸರೂರಾದೊಡೇಂ ಮನ್ನಣೆಯೆ ಕುರೂಪತೆಗೆ ತಾನಲ್ಲಿ ?' ಕೇಕೆಯ ರಾಜನೂರಿನಲ್ಲಾದರೂ ಅವಳಿಗೆ ರಾಜ ವಾತ್ಸಲ್ಯ ರಕ್ಷೆಯಿತ್ತು. ಮುಪ್ಪಿನಲ್ಲಿದ್ದ ಆತ ಅವಳನ್ನು ಕರುಣೆಯಿಂದ ಕಂಡಿದ್ದ ; ಮಗಳಂತೆ ಅಂದು ತಂದು ಸಾಕಿದ್ದ. ಆ ಕಾರಣದಿಂದಲಾದರೂ ಆ ಊರ ಜನ, ಅರಮನೆಯ ಅರಸು ಪರಿವಾರ ಎಲ್ಲವೂ ಅವಳನ್ನಲ್ಲಿ ಬಹಿರಂಗವಾಗಿ ತಿರಸ್ಕರಿಸುವ ಸಾಹಸಕ್ಕೆ ಹೋಗಿರುವುದಿಲ್ಲ. ಅವಳನ್ನು ಧಿಕ್ಕರಿಸುವುದೆಂದರೆ ಅವಳ ಸಾಕು ದೈವವಾದ ಅರಸನ ಕರುಣೆಯನ್ನೆ ಧಿಕ್ಕರಿಸಿದಂತಾಗುತ್ತಿತ್ತು. ಆದ್ದರಿಂದ ಅಲ್ಲಿ ಅವಳಿಗೆ ಪುರಸ್ಕಾರ ಏನೇನೂ ಹೊರಗೆ ಸಿಗದಿದ್ದರೂ, ಬಹಿಷ್ಕಾರವೆ ಎಲ್ಲೆಡೆಯೂ ಕಂಡು ಬಂದಿದ್ದರೂ, ಪ್ರತ್ಯಕ್ಷ ತಿರಸ್ಕಾರ ತೀವ್ರವಾಗಿದ್ದ ಹಾಗೆ ತೋರುವುದಿಲ್ಲ. ಆದರೀ ಅಯೋಧ್ಯೆಯಲ್ಲಿ ಎಲ್ಲ ಹೊಸ ಜನ. ಯಾರವಳ ಭಾಗಕ್ಕೆ ಪ್ರೀತಿ ಆದರ ತೋರುವವರು? ಕೈಕೆಯೇನೊ ರಾಜನ ಪ್ರೇಯಸಿ. ಅದಕ್ಕಾಗಿ ಆಕೆಗೆ ಗೌರವವುಂಟು. ಈಕೆಗೇಕೆ ಅದರಿಂದ ಪುರಸ್ಕಾರ ? ಸ್ವಯಂ ಕೈಕೆಯ ಆಗಮನ ದಶರಥನಿಗಲ್ಲದೆ ಮತ್ತಾವ ಅಂತಃಪುರಪರಿವಾರಕ್ಕೆ ಸಂತಸ ನೀಡುವುದಾಗಿತ್ತು ! ಕೌಸಲ್ಯೆಗೆ ? ಸುಮಿತ್ರೆಗೆ ? ಉಳಿದ ನೂರಾರು ಹೆಂಡಿರಿಗೆ ? ಆ ಆ ಯಾರಿಗೂ ಅವಳ ಬಗ್ಗೆ ಮಾತ್ಸರ್ಯ ಭುಗಿಲ್ಲನೆದ್ದಿದ್ದರೂ ಪಾತಿವ್ರತ್ಯದ ಕಟ್ಟಿಗೊಳಗಾಗಿ ಸುಮ್ಮನಿದ್ದರು. ಅವಳನ್ನು ಗುಪ್ತವಾಗಿ ದ್ವೇಷಿಸಿದ್ದರೂ ವ್ಯಕ್ತವಾಗಿ ಹೆದರಿದ್ದರು. ಆದರೆ ಅವಳ ಮೇಲಿದ್ದ ಆಕ್ರೋಶ ಅವಳ ಪ್ರೀತಿಗೆ ಪಾತ್ರಳಾದ ಆ ಮುದಿ ಗೂನಿಯ ಕಡೆಗೆ ಹರಿಯುತ್ತದೆ. ವ್ಯಕ್ತವಾಗಿ ಮಂಥರಾ ತಿರಸ್ಕಾರದಂತೆ ಕಾಣುತ್ತಿದ್ದರೂ (ಅದಕ್ಕೆ ಕಾರಣವೂ ಇತ್ತು) ಬಹುಮಟ್ಟಿಗಾದರೂ ಆ ಭಾವ ಕೈಕೆಯ ಕಾರಣದಿಂದಾಗಿ ಮೂಡಿದುದಾಗಿತ್ತು.

'ಮುದಿಗೂನಿ
ಮಂಥರೆಗೆ ಮೊಲದ ಕೋಡಾದುದು ಸೊಗಂ. ಶನಿಯೆನುತೆ
ಶಪಿಸಿದುದು ಮಂದಿ : ಕಂಡರೆ ಹುಬ್ಬುಗಂಟಿಕ್ಕಿ
ದೂರ ಸರಿದುದು ಮೊಸಳೆಗಂಡಂತೆ. ಸನಿಹಕ್ಕೆ
ಬರಗೊಡರ್, ಗಾಳಿ ಸೋಂಕುವುದೆಂಬ ಮೈಲಿಗೆಗೆ



ಪೇಸಿ, ಬಳಿಗೀಶ್ವರಾರಾಧನೆಗೆ ಸೇರಿಸರ್,
ಉಣಲಿಡುವ ಪೊಳ್ತು ಪೊರನೂಂಕುವರ್ ತೊಳ್ತುಗಳ್
ಕಿರಿರಾಣಿಯಾಜ್ಞೆಗೆ ಕಿವುಳ್ಗೇಳ್ದು.

ಕೈಕಾ ಮಂಥರೆಯರ ವಿಷಯವಾಗಿ ಉಳಿದ ರಾಣಿಯರಿಗಿದ್ದ ಅಸಮಾಧಾನಕ್ಕಿಂತ ಹೆಚ್ಚಿನದಾಗಿತ್ತು ಆ ಅವನ ತೊತ್ತುಗಳಿಗಿದ್ದ ಅಸೂಯೆ. ರಾಣಿ ರಾಣಿಯರಿಗೆ ಇರುವ ಅಸೂಯೆಯನ್ನು ಗೋಪನಮಾಡಿಕೊಳ್ಳಲು ಅವಕುಂಠನವಿರುತ್ತದೆ. ಆದರೀ ದಾಸಿ ದಾಸಿಯರಲ್ಲಿ ಹೊಗೆಯ ಮುಸಕನ್ನುಗಿದೆ ಸಿಡಿದೇಳುತ್ತದೆ ಆ ಹೊಟ್ಟೆಯ ಕಿಚ್ಚ. ಆ ಕಿಚ್ಚಿಗೆ ತೈಲಾಹಾರವಾಗುವಂತೆ ಮಂಥರೆಯ ಆಕೃತಿಯೂ ನೆರವಿಗೆ ಬರುತ್ತಿರಬೇಕಾದರೆ !

ದಾಸಿಯರ ವರ್ಗ ಹೀಗೆ ಮಂಥರೆಯನ್ನು ಅಸಹ್ಯದ ಅಮೇಧ್ಯ ಕಂದರಕ್ಕೆ ನೂಕಿ ಸಂತೋಷಗೊಂಡಂತೆಯೆ ಹಿರಿಯರಸಿಯರು ವ್ಯಕ್ತವಾಗಿ ಅಷ್ಟು ರೂಕ್ಷವಾಗಿ ವರ್ತಿಸುವುದು ಸಾಧ್ಯವಿಲ್ಲವಲ್ಲ :

ಕೌಸಲ್ಯೆಯುಂ
ಲಕ್ಷ್ಮಣನ ತಾಯಿ ಮೊದಲಪ್ಪ ಸಿರಿವೆಂಡಿರುಂ
ಮಂಥರೆ ಅನಿಷ್ಟೆಯೆನುತಾ ಸವತಿ ಕೈಕೆಯಂ
ಬಳಿ ಸೇರಿಸದೆ ಹೆದರಿ ಹೇಸಿ ಹಿಂಜರಿದರಾ
ಗೂನಿಯಿರಲೊಡನೆ.'

ಇಷ್ಟೆಲ್ಲ ಅವ್ಯಾಹತವಾಗಿ ಆಗುತ್ತಲೆ ಇರುವಾಗ ಆ ಹೊರಗೂನಿ ಒಳಗೂ ಊನೆಯಾಗಿ ಗೂನಿಯಾಗಿ ಆಗದಿದ್ದುದೆ ಆಶ್ಚರ್ಯ. ಆದರೆ ಆ ಒಳಗನ್ನು ಕೈಕೆಯ ಪ್ರೀತಿ ಸಂಗೋಪನ ಮಾಡಿತ್ತು. ಅವಳಿಗೂ ಆ ಪ್ರೀತಿಯೆ ತವನಿಧಿಯಾಗಿ, ಅದನ್ನು ಕಾಯುವುದೆ ತನ್ನ ಪರಮ ಕರ್ಮವೆಂದೆನಿಸುತ್ತದೆ. ತನ್ನ ಭೋಗರತ್ನವನ್ನು ಕಾಯುವ ಕಾಳಾಹಿಯಂತೆ ಕಾದುಕೊಳ್ಳುತ್ತಾಳೆ, ಆ ಏಕೈಕ ಪ್ರೀತಿಯನ್ನು ಅವಳು. ಅದಕ್ಕಾಗಿಯೆ ಹೊರಗಿನೆಲ್ಲ ವಿಕಾರವನ್ನೂ ಸಹಿಸಿಕೊಳ್ಳುತ್ತಾಳೆ.

'ಸಹಿಸಿದಳನಿತುಮಂ ಕುಬ್ಜೆ
ತನ್ನೊಡತಿಯೊಲ್ಮೆಯ ಸೊಗಕೆ ಜೀವವನೆ ಬೇಳ್ದು,
ಕಮ್ಮಾರನಡಿಗಲ್ಲೆನಲ್ ಬಾಳ್ದು'.

ಹೀಗಿರುವಾಗ ಮಂಥರೆಗೆ ಮತ್ತೊಂದು ಭಾಗ್ಯದ ಉದಯವಾಗುತ್ತದೆ. ಭರತ ಕೈಕೆಯಲ್ಲಿ ಹುಟ್ಟುತ್ತಾನೆ. ಅವಳಿಗೆ ಮೂರನೆಯ ಕಣ್ ಮೂಡಿತು. ವಿಧಿ ಅವಳ ಭಾಗಕ್ಕೆ ಎಷ್ಟು ನಿಷ್ಠುರನೊ ಅಷ್ಟೆ ಕರುಣಾಳು. ತಾಯ್ತನದ ಬಯಕೆಯಾದಾಗ

ಕೈಕೆ ಮಗುವಾಗಿ ಅವಳ ತೊಡೆಯೇರುತ್ತಾಳೆ. ಅಜ್ಜಿಯಾದ ವಯಸ್ಸು ಬಂದಾಗ ಮೊಮ್ಮಗನಾಗಿ ಭರತ ಬರುತ್ತಾನೆ. ಹೊಸ ತಳಿರನ್ನು ತರುತ್ತಾನೆ ; ಬದುಕುವ ಬಯಕೆಯನ್ನು ಮರುಕೊಳಿಸುತ್ತಾನೆ. ಇನ್ನವಳ ಆತ್ಮಕ್ಕೆ ಇಜ್ಜೋಡ ರಕ್ಷೆ ದೊರೆಯಿತು. ಅವಳಿಗೆ ಅಷ್ಟೂ ಆ ರಕ್ಷಾಕವಚಗಳ ಮೇಲೆ ಮೋಹ ಹೆಚ್ಚಿತು. ಮುಪ್ಪು ಜಿಪುಣತನವನ್ನು ಹೆಚ್ಚು ಮಾಡುವಂತೆ ತೋರುತ್ತದೆ. ಹಾಗಾಗಿ ಅವಳಿಗೆ ತನ್ನ ಪ್ರೀತಿಯ ವಿಚಾರವಾಗಿ ಮೋಹ – ಭಕ್ತಿ – ಅರ್ಪಣಮನೋಭಾವಗಳಂತೆಯೆ ಜಿಪುಣತನವೂ ಬೆಳೆಯುತ್ತದೆ.

‘ಜಿಪುಣ ಬಡವಂ ಕಡವರವನಪ್ಪಿಕೊಳ್ವಂತೆ,
ಹಗಲಿರುಳ್ ಕೈಕೆಯ ತನೂಜನಂ ಸಲಹಿದಳ್
ಆ ದಸ್ಯುಸತಿ, ಹಡೆದ ತಾಯಿಯೆ ನಾಣ್ಚುವೋಲಂತೆ’.

ಹೀಗೆ ಲೋಕತಿರಸ್ಕಾರಕಷಾಘಾತದಿಂದ ಜರ್ಜರಿತವಾಗಿದ್ದರೂ ಅನನ್ಯಲಭ್ಯ ಪ್ರೀತಿ ಸಂಗೋಪಿತಳಾದ ಮಂಥರೆ ವಿಲಕ್ಷಣ ಅದೃಷ್ಟವಂತೆಯಾಗುತ್ತಾಳೆ.

ಕೋಸಲದೊಳಾ
ಗೂನಿ ಮಂಥರೆಯ ಮೀರಿದ ತಿರಸ್ಕೃತೆಯುಮಂ
ಸಂತೃಪ್ತ ಸುಖಿಯುಮಂ ಕಾಣೆ ! ಭರತಾಭ್ಯುದಯ
ಚಂದ್ರೋದಯಕ್ಕುರ್ಬಿದತ್ತವಳ ಹೃಜ್ಜಲಧಿ,
ಪಾಳು ಕೊರಕಲ್ ಬಂಡೆಯಿಂ ವಕ್ರಮಾಗಿರ್ಪ
ಮೊರಡು ದಡದಂತಿರ್ದವಳ ಮೈಯ್ಯನುಚ್ಛ್ವಸಿತ
ಹರ್ಷೋರ್ಮಿಮಾಲಾ ಸಮೂಹದಿಂದವ್ವಳಿಸಿ
ಮುಚ್ಚಿ. ನರರನ್ಯರಿಲ್ಲಾಯಿತ್ತು ಮಂಥರೆಯ
ಲೋಕಕ್ಕೆ. ಕೈಕೆ ಭರತರ್ ವಿನಾ. ದಶರಥಂ
ಕೈಕೆಭರತರಿಗಾಗಿ ; ಕೈಕೆಭರತರಿಗಾಗಿ
ಕೋಸಲಮಯೋಧ್ಯೆಗಳ್, ಶಶಿಸೂರ್ಯತಾರಾಳಿಗಳ್
ಕೈ ಕೆಭರತರಿಗಾಗಿ ; ಭರತನಾಳ್ವಿಕೆಗಾಗಿ ಈ
ಪೃಥಿವಿ ! ಹಾ, ಮಂಥರೆಯ ಈ ಮಮತೆಯಾವರ್ತದೊಳ್
ಸುಟ್ಟುರೆಗೆ ಧೂಳಿ ತರಗೆಲೆ ತಿರ್‍ರನೆಯೆ ಸುತ್ತುವೋಲ್
ಸಿಲ್ಕಿ ಘೂರ್ಣಿಸದಿಹುದೆ ಪೇಳ್ ತ್ರೇತಾಮಹಾಯುಗಂ !

ಭಕ್ತಿ ಪ್ರಪಂಚದಲ್ಲಿ ಗುಪ್ತ ಭಕ್ತರು ಎಂಬೊಂದು ಭೇದವಿದೆ. ಅವರು ಲೋಕ ಜೀವನದಲ್ಲಿ ಸಾಮಾನ್ಯರಂತೆಯೊ, ಕೆಲವು ವೇಳೆ ವಿಕಾರಿಗಳಂತೆಯೊ



ಕಾಣುತ್ತಿದ್ದು ಅಂತರಂಗದಲ್ಲಿ ಮಹಾ ಭಕ್ತರಾಗಿರುತ್ತಾರೆ. ಒಳಗನ್ನು ಕಾಪಿಟ್ಟುಕೊಳ್ಳಲಾಗಿಯೆ ಹೊರಗೆ ಅವರು ವಕ್ರವಾಗಿರುತ್ತಾರೆ. ಆದರೆ ಮಂಥರೆ ಭಕ್ತಳೇನಲ್ಲ. ಆದರೂ ಒಂದು ಬಗೆಯ ವಿಲಕ್ಷಣ ಮಮತಾ ಭೈರವಿ. ಲೋಕವೆಲ್ಲ ತಾನು ಪ್ರೀತಿಸತಕ್ಕವರಿಗಾಗಿಯೆ ಇದೆ ಎಂಬ ನಿಶ್ಚಿತಭಾವ ಅವಳಲ್ಲಿ ಮೂಡುತ್ತದೆ. ಅದರಲ್ಲೆ ಅವಳ ಸಕಲವೂ ಅರ್ಪಿತವಾಗುತ್ತದೆ. ಇದು ಭಕ್ತಿಯ ಸಾಧನೆಯಲ್ಲಿ ಸಾಧಾರಣ ಮಟ್ಟವೇನೂ ಅಲ್ಲ. ಈ ಸಾಧನೆಗೆ ಲೋಕವೆ ಅವಳಿಗೆ ಭಯಂಕರ ಪ್ರೇರಕವಾಗುತ್ತದೆ, ಪೋಷಕವಾಗುತ್ತದೆ. ಹಾಗಾಗಿ ಅವಳಿಗೆ ಆ ಅನಿವಾರ್ಯತೆಯೆ ಸಾಧನಮಾರ್ಗವಾಗುತ್ತದೆ. ಹೊರಲೋಕವೆಲ್ಲ ಅತ್ಯಂತ ಶೀತಲವಾದಾಗ ಸಮುದ್ರ ಮಧ್ಯೆ ಘನೀಭೂತ ಹಿಮಪರ್ವತಗಳೆ ಉದ್ಭವಿಸುತ್ತವೆ. ಧ್ರುವ ಪ್ರದೇಶಗಳಲ್ಲಿ ಇಂಥ ಮಹಾಪರ್ವತಗಳೆಷ್ಟೊ ಇವೆ. ಆದರೆಂದೊ ಒಮ್ಮೆ ಸೂರ್ಯೋದಯವಾದಾಗ ಆ ಘನರಾಶಿಯೆಲ್ಲ ಜಲಪ್ರವಾಹವಾಗಿ ಸುತ್ತೂ ಹರಿಯುತ್ತದೆ. ಹರಿಯುತ್ತದೇನೊ ಸರಿ. ಆದರದು ಕರಗಿ ಹರಿಯುವ ರಭಸದಲ್ಲಿ ಎಷ್ಟೆಲ್ಲ ಭೂಪ್ರದೇಶಗಳನ್ನು ಕೊಚ್ಚಿ ಮುಚ್ಚಿಬಿಡುವುದಿಲ್ಲ? ಭೂವಾಸಿಗಳನ್ನೂ ವಸತಿಗಳನ್ನೂ ನಂಗಿ ನೊಣೆಯುವುದಿಲ್ಲ ? ಉನ್ನತ ಭೂಪ್ರದೇಶಗಳತ್ತ ಆ ಜೀವರನ್ನು ಬಿಡದಟ್ಟುವುದಿಲ್ಲ?

ಮಹರ್ಷಿ ವಾಲ್ಮೀಕಿ ರಾಮಾಯಣಕ್ಕೂ ಶ್ರೀ ಕುವೆಂಪು ರಾಮಾಯಣದರ್ಶನಕ್ಕೂ ಇಲ್ಲಿಯ ತನಕ ಈ ಕಥೆಯ ವಿಚಾರದಲ್ಲಿ ಸಾಮ್ಯವೇನೂ ಇಲ್ಲ. ವಸ್ತುತಃ ಮಂಥರೆಯ ಪೂರ್ವವೃತ್ತಾಂತವೇ ವಾಲ್ಮೀಕಿಗಳಲ್ಲಿ ಬರುವುದಿಲ್ಲ. ಆದರೂ ಅದು ಅಸ್ಪಷ್ಟವಾಗಿಯಾದರೂ ಸೂಕ್ಷ್ಮವಾಗಿ ಧ್ವನಿತವಾಗುತ್ತದೆ. ಶ್ರೀ ಕುವೆಂಪು ಅವರು ಮಂಥರೆಯ ವರ್ತಮಾನ ಪಾತ್ರ ಶರೀರವನ್ನು ವಾಲ್ಮೀಕಿಗಳಿಂದಲೆ ಯದ್ವತ್ತಾಗಿ ಪಡೆದಿದ್ದಾರೆ. ಅವರ ಸೃಷ್ಟಿಯೇನಿದ್ದರೂ ಬದಲಾವಣೆಯಾಗಿಲ್ಲ ; ಬೆಳವಣಿಗೆಯಾಗಿದೆ* ಪೂರ್ವೋತ್ತರಗಳ ವಿಸ್ತರಣೆಯಾಗಿದೆ.

ಮಂಥರೆಯನ್ನು ಮಹರ್ಷಿ ನಮಗೆ ಮೊದಲು ತೋರುವುದಾದರೂ

---

* ಈ ಮಾತು ಅವರ ಇಡೀ ಮಹಾಕಾವ್ಯಕ್ಕೂ ಒಪ್ಪತಕ್ಕದ್ದು. ಎರಡು–ಎರಡೂವರೆಸಾವಿರ ವರ್ಷಕಾಲ ವಾಲ್ಮೀಕಿರಾಮಾಯಣ ಬೆಳೆದಿದೆ – ಜನಸಮಷ್ಟಿ ಮನಸ್ಸಿನಲ್ಲಿ. ಜನಮನೋಧರ್ಮ ಬೆಳೆದಿದೆ. ಆಧುನಿಕ ವಿಜ್ಞಾನ ಅಧ್ಯಾತ್ಮ ವಿಚಾರದೃಷ್ಟಿಗಳೆಲ್ಲ ಉದಯಿಸಿವೆ. ಇವೆಲ್ಲ ಆ ಬೆಳವಣಿಗೆಯ ಮೇಲೆ ಅಗಾಧ ಪರಿಣಾಮ ಮಾಡಿವೆ. ಅದರ ಜೀವಂತ ಅಭಿವ್ಯಕ್ತಿಯೆ ಈ ಮಹಾಕಾವ್ಯ. ಇದು ವಾಲ್ಮೀಕಿರಾಮಾಯಣದ ಬದಲಾವಣೆಯಲ್ಲ, ಬೆಳವಣಿಗೆ; ಮರುವುಟ್ಟು.

ಬದಲಾವಣೆಯೆಂಬ ಮಾತು ಹಿಂದನದಕ್ಕೂ ಮುಂದೆ ಬಂದುದಕ್ಕೂ ವಿಕಾರದ ಆರೋಪ ಮಾಡುವುದರಿಂದ, ಆ ಮಾತು ಇಲ್ಲಿ ಅಸಾಧು.

ನಾಟಕೀಯವಾಗಿಯೆ ಇದೆ :

'ಜ್ಞಾತಿ ದಾಸೀ ಯತೋ ಜಾತಾ ಕೈಕೇಯ್ಯಾಸ್ತು ಸಹೋಷಿತಾ
ಪ್ರಾಸಾದಂ ಚಂದ್ರಸಂಕಾಶಮಾರುರೋಹ ಯದೃಚ್ಛಯಾ ॥

ವಾಲ್ಮೀಕಿರಾಮಾಯಣ – ಅಯೋಧ್ಯಾಕಾಂಡ
(ಸರ್ಗ : ೭ ; ಶ್ಲೋಕ : ೧)

ರಾಮಪಟ್ಟಾಭಿಷೇಕ ಸಿದ್ಧವಾಗಿದೆ. ನಗರವೆಲ್ಲ ಸರ್ವಾಲಂಕೃತವಾಗಿದೆ. ಜಾನಪದ, ನಾಗರಿಕ, ಮಹರ್ಷಿಪದವೆಲ್ಲಕ್ಕೂ ಸುದ್ದಿ ಮಟ್ಟಿದೆ. ಆದರೆ ಅರಮನೆಯ ಯಾವುದೊ ಒಂದು ಭಾಗಕ್ಕದು ಸುಳಿದೂ ಇಲ್ಲ. 'ಕೈಕೇಯಿಯ ಜೊತೆಯಲ್ಲೆ ಇರುತ್ತಿದ್ದ (ಸಹೋಷಿತಾ) ಎಲ್ಲೊ ಹುಟ್ಟಿದ (ಯತೋ ಜಾತಾ) ದಾಯಾದಿ ದಾಸಿಯು (ಜ್ಞಾತಿ ದಾಸೀ) ಅಕಸ್ಮಾತ್ತಾಗಿ ಆ ಚಂದ್ರಸಂಕಾಶವಾದ ಪ್ರಾಸಾದವನ್ನೇರುತ್ತಾಳೆ'. ಇಲ್ಲಿ ಒಂದಂಶ ಧ್ವನಿತವಾಗಿದೆ. ಮಂಥರೆ ಬರಿಯ ದಾಸಿಯಲ್ಲ, ಜ್ಞಾತಿ ದಾಸಿ ಎಂದು ಹಾಗೂ, ಅವಳು ಎಲ್ಲೊ ಹುಟ್ಟಿದವಳು ಎಂದು. ಈ ಮಾತನ್ನು ಬರಿದೇ ಬಳಸಿದ್ದಾರೆಯೆ ಋಷಿ ಕವಿ? ಎರಡೆ ಮಾತಿನಲ್ಲಿ ಅವಳ ಪೂರ್ವವನ್ನು ಸೂಚಿಸಿದ್ದಾರೆ. ಕುವೆಂಪು ಆ ರೇಖೆಯ ಮೇಲೇ ಮಹಾಮಂದಿರ ನಿರ್ಮಾಣಮಾಡಿದ್ದಾರೆ. ಅಲ್ಲಿ ಋಷಿಕವಿ ಮಂಥರೆಯನ್ನು ಅವಳು ಬೆಳುದಿಂಗಳಂಥ ಉಪ್ಪರಿಗೆಯನ್ನೇರುವಾಗ ಪರಿಚಯ ಮಾಡಿಕೊಡತ್ತಾರೆ. ಇಲ್ಲಿ ಈ ಶ್ರೀ ಕವಿ ಅವಳನ್ನು ಆ ಬೆಳುದಿಂಗಳ ರಾತ್ರಿಯಲ್ಲಿ ಸುಳಿಸಿ ಮರೆಮಾಡುತ್ತಾರೆ. ಮುಂದಿನ ಕಥೆ ವಾಲ್ಮೀಕಿಗಳಲ್ಲಿ ಹೀಗೆ ಬರುತ್ತದೆ: "ರಾಜಪಥಗಳನ್ನು ಸಾರಿಸಿ ಹೂ ಚೆಲ್ಲಿದ ಅಯೋಧ್ಯೆಯನ್ನು ಮಂಥರೆಯು ಆ ಉಪ್ಪರಿಗೆಯಿಂದ ನೋಡಿದಳು. ಶ್ರೇಷ್ಠ ಧ್ವಜಪತಾಕೆಗಳಿಂದ ಸಮಲಂಕೃತವಾದ, ಮುಡಿಮಿಂದ ಜನರಿಂದ ತುಂಬಿದ ಅಡ್ಡದಾರಿಗಳುಳ್ಳ, ಮಾಲ್ಯಮೋದಕಗಳನ್ನು ಕೈಯಲ್ಲಿ ಹಿಡಿದ ದ್ವಿಜೇಂದ್ರರಿಂದ ನಾದಗೊಂಡ... ಸಂತೋಷದಿಂದ ಕೆಲೆಯುವ ಹಸು ಗೂಳಿಗಳಿಂದ ಕೂಡಿದ, ಹರ್ಷಮುದಿತವಾದ ಪೌರರಿಂದ ಧ್ವಜಮಾಲಿನಿಯಾದ ಅಯೋಧ್ಯೆಯನ್ನು ಕಂಡು ಮಂಥರೆ ವಿಸ್ಮಯ ಪಡುತ್ತಾಳೆ. ಹತ್ತಿರದಲ್ಲೆ ಇದ್ದ ದಾದಿಯನ್ನು – ಅತಿಸಂತೋಷದಿಂದ ಕಣ್ಣರಳಿದ, ಬೆಳ್ಮಡಿಯುಟ್ಟಿದ್ದ ದಾದಿಯನ್ನು – ಕೇಳುತ್ತಾಳೆ: ಆ ರಾಮನ ತಾಯಿ, ಆ ಅರ್ಥಪರಳಾದ ಸತಿ ಏಕೆ ಹೀಗೆ ಅತಿಸಂತಸದಿಂದ ಜನರಿಗೆ ಹಣ ನೀಡುತ್ತಾಳೆ ? ಜನರಿಗೆ ಈ ಅತಿಹರ್ಷವಾದರೂ ಏಕೆ ? ಹೇಳು ನನಗೆ. ಸಂತೋಷಗೊಂಡ ರಾಜ ಏನನ್ನಾದರೂ ಮಾಡಿಸುತ್ತಾನೇನು?"



ಈ ಮೇಲಿನ ಕಥೆಯಲ್ಲೆ ತಿಳಿಯುತ್ತದೆ ರಾಮಪಟ್ಟಾಭಿಷೇಕ ಕೈಕೆ ಮಂಥರೆಯರಿಗೂ ತಿಳಿದಿರಲಿಲ್ಲ – ನಾಡೆಲ್ಲಕ್ಕೂ ತಿಳಿದಿದ್ದಾಗಲೂ ಕೂಡ, ಎಂಬುದು. ತನ್ನನ್ನು ಕೇಳದೆಯೆ ಹಾಗೆ ರಾಜ ಮೋಸ ಮಾಡಿದನಲ್ಲಾ ಎಂದು ಕೈಕೇಯಿಗೆ ಆಕ್ರೋಶವಾಗುವುದು ಸಹಜವೆ. ಅಂತೇ ಅವಳ ದಾಯಾದಿ ದಾಸಿ ಮೊದಲು ಆಶ್ಚರ್ಯಗೊಂಡು ತತ್ಫಲವಾಗಿಯೇ ಮತ್ಸರಗೊಳ್ಳುವುದೂ ಸಹಜ. ಆ ದಾಸಿಗೆ ರಾಮಮಾತೆಯನ್ನು ಕಂಡರೆ ಅಷ್ಟೇನು ಸದ್ಭಾವವಿಲ್ಲವೆಂಬುದನ್ನು ಅವಳಾಡುವ 'ಅರ್ಥಪರಾ ಸತೀ ರಾಮ ಮಾತಾ' ಎಂಬ ಮಾತೆ ಧ್ವನಿಸುತ್ತದೆ.

ಮುಂದೆ ಕಥೆ ಹೀಗಿದೆ : "ಬಳಿಕ, ಹರ್ಷಪುಳಕಿತಳಾದ ಆ ದಾದಿಯ ವಿಶೇಷವಾದ ರಾಮಶ್ರೀಯನ್ನು ಪರಮಸಂತೋಷದಿಂದ ಆ ಕುಬ್ಜೆಗೆ ಹೇಳಿದಳು: 'ನಾಳೆ ಪುಷ್ಯದಲ್ಲಿ ದಶರಥರಾಜ ಜಿತಕ್ರೋಧನಾದ ಅನಘ ರಾಘವ ರಾಮನಿಗೆ ಯವರಾಜ್ಯಾಭಿಷೇಕ ಮಾಡುತ್ತಾನೆ" ದಾದಿಯ ಮಾತನ್ನು ಕೇಳಿ ಕೂಡಲೆ ಅಮರ್ಷಗೊಂಡ ಕುಬ್ಜೆ (ಧಾತ್ರ್ಯಾಸ್ತು ವಚನಂ ಶ್ರುತ್ವಾ ಕುಬ್ಜಾ ಕ್ಷಿಪ್ರಮಮರ್ಷಿತಾ) ಕೈಲಾಸ ಶಿಖರಾಕಾರದ ಆ ಪ್ರಾಸಾದವನ್ನಿಳಿಯುತ್ತಾಳೆ. ಕೋಪದಗ್ಧಳಾದ ಆ ಪಾಪದರ್ಶಿನೀ ಮಂಥರೆ, ಮಲಗಿಯೆ ಇದ್ದ ಕೈಕೇಯಿಗೆ ಈ ಮಾತು ಹೇಳುತ್ತಾಳೆ: 'ಎದ್ದೇಳು ! ಮೂಢೇ ! ಏಕೆ ಮಲಗಿದ್ದೀಯೆ? ಭೀತಿ ನಿನ್ನನ್ನು ಎದುರ್ಗೊಳ್ಳುತ್ತಿದೆ. ದುಃಖಪರಂಪರೆಯಿಂದ ನೀನು ಬಾಡಿ ಹೋಗಿರುವುದು ನಿನಗೆ ತಿಳಿಯುವುದಿಲ್ಲವೆ? ಅನಿಷ್ಟೆ ! ಸುಭಗಾಕಾರೇ ! ಸೌಭಾಗ್ಯದಿಂದ ಬರಿದೇ ಹೊಗಳಿಕೊಳ್ಳುವವಳೆ! ಚಲಿಸಿಹೋಯಿತು ನಿನ್ನ ಸೌಭಾಗ್ಯ– ಬೇಸಿಗೆಯ ಹೊಳೆಯ ಪ್ರವಾಹದಂತೆ !' ಹೀಗೆ ಕೇಣಗೊಂಡ ಆ ಪಾಪದರ್ಶೀ ಕುಬ್ಜೆಯ ಪರುಷವಚನ ಕೇಳಿದ ಕೈಕೇಯಿ ಬಹಳ ವಿಷಾದಗೊಳ್ಳುತ್ತಾಳೆ ; 'ಮಂಥರೆ ! ಕ್ಷೇಮವಿಲ್ಲವೆ? ಏಕಾಗಿ ದುಃಖಗೊಂಡು ವಿಷಣ್ಣವದನಳಾಗಿ ತೋರುತ್ತಿ? ಎಂದು ಕೇಳುತ್ತಾಳೆ.

"ಅದಕ್ಕೆ ಮಂಥರೆಯು ನುಡಿಯಿದು : 'ಅಕ್ಷಯವಾದ ನಿನ್ನ ಮಹದ್‌ವಿನಾಶವಿಂದಾಯಿತು. ದೇವಿ... ನಾನು ಅಗಾಧ ಭಯದಲ್ಲಿ ಮುಳುಗಿ ದುಃಖ ಶೋಕದಿಂದ, ಬೆಂಕಿಯಿಂದ ಸುಟ್ಟಂತಾಗಿ ನಿನ್ನ ಹಿತಕ್ಕೋಸ್ಕರ ಈಗಿಲ್ಲಿಗೆ ಬಂದಿರುವೆ. ನಿನ್ನ ದುಃಖದಿಂದ, ಕೈಕೇಯಿ, ನನಗೆ ಮಹಾದುಃಖವಾಗುತ್ತದೆ, ನಿನ್ನ ಏಳಿಗೆಯಲ್ಲಿ ನನ್ನ ಏಳಿಗೆ ಇದೆ : ಇದರಲ್ಲಿ ಸಂಶಯವಿಲ್ಲ" ಹೀಗೆ ಸಾಗುತ್ತದೆ ಮಂಥರೆಯ ಮಾತು.

ವಾಲ್ಮೀಕಿ ಮಹರ್ಷಿಗಳ ಈ ಮೇಲಣ ಕಥೆಯಲ್ಲಿ ವ್ಯಕ್ತವಾಗುವುದಿಷ್ಟು, ಮಂಥರೆ ಕೈಕೆಯ ಸಾಧಾರಣ ಸೇವಕಿಯಲ್ಲ ; ಅವಳು ಅವಳೊಡನೆ ಬಂದ,

ಯಾವಾಗಲೂ ಜೊತೆಯಲ್ಲೆ ಇದ್ದ ದಾಯಾದಿ ದಾಸಿ. ಅವಳಿಗೆ ಅದರಿಂದಾಗಿ ತನ್ನರಸಿಯ ವಿಷಯದಲ್ಲಿ ಸಲುಗೆ, ಹೊಣೆ ಹೆಚ್ಚು. ಅವಳನ್ನವಳು 'ಮೂಢೆ ! ಮೂರ್ಖೇ !' ಎಂದೆಲ್ಲ ಬೈಯ ಬಲ್ಲಳು. ಅವಳಿಗದು ಬರಿಯ ಸ್ವಾತಂತ್ರ್ಯವಾಗಿ ಬಂದಿಲ್ಲ. ಕೈಕೆಯ ವಿಷಯವಾದ ಅಭ್ಯುದಯದಲ್ಲಿ ಅವಳಿಗೆ ಆಸ್ಥೆಯಿದೆ. ಆದ್ದರಿಂದಲೆ ಅಷ್ಟೆಲ್ಲ ಕೋಪ... ಸರಿ, ಇದೆಲ್ಲ ಹೋಗಲಿ ; ಮಂಥರೆಗೇಕೆ ರಾಮನ ಮೇಲೆ ಸಿಟ್ಟು ? ಇದಷ್ಟೇನೂ ಅನೂಹ್ಯವಲ್ಲ. ಯಾವ ದಾಸಿಗೆ ತಾನೆ ತನ್ನ ಅರಸುಕುಮಾರನೆ ರಾಜನಾಗಲೆಂಬ ಬಯಕೆಯಿರುವುದಿಲ್ಲ! ನಮಗದು ಅಸಹಜವಾಗಿ ತೋರಬಹುದು. ಆದರೆ ಮೋಹದೃಷ್ಟಿಗೆ ರಾಮ–ಭರತರಲ್ಲಿ ಅಷ್ಟೇನೂ ವಯಸ್ಸಿನ, ಗುಣದ ಅಂತರಕಾಣದಿದ್ದಾಗ ಮಂಥರೆಯಂಥವಳು ಹೇಗೆ ತಾನೆ ತನ್ನರಸಿಯ ಮಗನಿಗೇ ರಾಜ್ಯಬೇಕೆಂದಲ್ಲದೆ ಬೇರೆ ಭಾವಿಸಿಯಾಳು? ಜೊತೆಗೆ, ಕೌಸಲ್ಯೆ ಪಟ್ಟದ ರಾಣಿಯೆ ಆಗಿದ್ದರೂ ಕೈಕೆ ಪ್ರೇಯಸಿ. ಬೆಲೆಕೊಟ್ಟು ಅವಳನ್ನು ಮದುವೆಯಾಗಿದ್ದಾನೆ ದಶರಥ ; ಬೆಲೆಕೊಟ್ಟು ಅವಳ ಪ್ರೀತಿಯನ್ನು ಬೆಳೆಸಿಕೊಳ್ಳಬೇಕು ತಾನೆ? ಕೈಕೆಗೆ ರಶರಥ ಎರಡು ಮಾತು ಕೊಟ್ಟಿರುವುದು ಮಂಥರೆಗೆ ಸದಾ ನೆನೆಪಿನಲ್ಲಿದೆ. ಇದೆಲ್ಲಕ್ಕಿಂತ ಮಿಗಿಲಾಗಿ ರಾಮಾಭಿಷೇಕವನ್ನು ಏರ್ಪಡಿಸುವ ಆತುರ ತೋರಿದ ದಶರಥ ಮಂಥರೆಗೂ ಮುಚ್ಚುಮರೆಯನ್ನು ಮಾಡಿದ್ದ ; ಭರತ ಮಾವನ ಮನೆಯಲ್ಲಿದ್ದಾಗ ಕೈಕೆಗೂ ತಿಳಿಯದಂತೆ, ಆದರೆ ಲೋಕಜನಕ್ಕೆಲ್ಲ ತಿಳಿಯುವಂತೆ ರಾಜ್ಯಾಭಿಷೇಕವೇರ್ಪಡಿಸಿರುತ್ತಾನೆ. ಇದು ಮಂಥರೆಯಂಥವಳಿಗೆ ಅಮರ್ಷವನ್ನುಂಟುಮಾಡದೆ ಏನು !

ಸೂಕ್ಷ್ಮವಾಗಿ ವಿವೇಚಿಸಿದಾಗ ವಾಲ್ಮೀಕಿ ರಾಮಾಯಣದ ಮಂಥರೆಯನ್ನೂ ಕೇವಲ ಅಪರಾಧಿಯೆಂದೆ ಖಂಡಿಸುವುದು ಅಸಾಧ್ಯವಾಗುತ್ತದೆ. ಆದರೆ ಶ್ರೀ ಕುವೆಂಪು ಅವರೇಕೆ ಅವಳ ಪೂರ್ವಕಥೆಯನ್ನು ಸೃಜಿಸಬೇಕಿತ್ತು ? ಅದಕ್ಕಾವ 'ಆಧಾರ'ವಿದೆ ? ಎಂದೆಲ್ಲ ಪ್ರಶ್ನೆ ಏಳಬಹುದು. ಒಂದು, ಮಂಥರೆಯ ಪೂರ್ವಕಥೆ ಕೈಕೆಯ ಜೀವದೊಡನೆ ಹೆಣೆದುಕೊಂಡಿತ್ತೆಂಬುದಕ್ಕೆ ವಾಲ್ಮೀಕಿಗಳಲ್ಲೆ ಸ್ಪಷ್ಟವಾದ ಸೂಚನೆಯಿವೆಯೆಂಬುದನ್ನು ಮೇಲೆ ಉದಹರಿಸಿದ ಕಥೆಯಲ್ಲೆ ನೋಡಿದುದಾಯಿತು, ಇಲ್ಲಿಯ ಪೂರ್ವ ಕಥೆಯ ಸೃಜನ ಕಾರ್ಯಕ್ಕೆ ಲ್ಲಿಯೆ ಸೂಚನೆಯಿದೆಯೆಂಬುದನ್ನು ಮರೆಯಲಾಗದು. ಮಂಥರೆಯನ್ನು ಅಷ್ಟು ಮಮತಾಭೀಷಣವನ್ನಾಗಿಯೆ ಏಕೆ ಚಿತ್ರಿಸಬೇಕಿತ್ತು ಎಂಬುದಕ್ಕೂ ಅಲ್ಲೆ ಉತ್ತರವಿದೆ. ಮೇಲಾಗಿ ಈ ಪೂರ್ವಕಥಾ ಸೃಷ್ಟಿ ಕಥಾ ಸ್ವಾರಸ್ಯಕ್ಕಾಗಿ ಮಾತ್ರ ಕವಿ ನಿಯೋಜಿಸಿಕೊಂಡ ತಂತ್ರವಲ್ಲ. ಅದು ಕವಿದರ್ಶನದ ಪ್ರತಿಮಾರೂಪದ ಆವಿರ್ಭಾವಕ್ಕೆ ತಾಯಿ ಬೇರಾಗಿದೆಯಷ್ಟೆ. ಈ ಕವಿ ತನ್ನ ಯಾವ ಪಾತ್ರವನ್ನೂ ತತ್ಸನ್ನಿವೇಶ ಪ್ರಯೋಜನಾರ್ಥವಾಗಿಯೆ ಸೃಜಿಸಿ ನಿಯೋಜಿಸಿಕೊಂಡಿಲ್ಲ. ಎಲ್ಲ ಪಾತ್ರಗಳಿಗೂ ವರ್ತಮಾನವೊಂದಿರುವಂತೆಯೆ ಭೂತವೊಂದು ಭೂತಾಕಾರವಾಗಿಯೆ ಇದೆ. ಅದರಿಂದಲೆ ಭವಿಷ್ಯವೂ ಇದ್ದೆ ಇದೆ. ರಾವಣ ಮಂಥರೆಯಂಥ ವರ್ತಮಾನ ವಿಕಾರಜೀವಿಗಳಿಗೆ ಭೂತಕಾರದ ಭೂತಕಾಲವೂ, ಅಭೂತವಾದ ವಿಭೂತಿರೂಪದ ಭವಿಷ್ಯದ್ ಜೀವನವೂ ಒಂದೊಂದು ಉಂಟು. ವ್ಯಷ್ಟಿಯಂತೆ ತೋರುವ ಇವರೆಲ್ಲ ರಾಮಾಯಣ ಸಮಷ್ಟಿಯಲ್ಲಿ ಬೇರಿನಲ್ಲೂ ಹೆಣೆದುಕೊಂಡಿದ್ದಾರೆ. ವಿಶ್ವಕಾವ್ಯದ ದೃಷ್ಟಿಯಲ್ಲಂತೂ ಅವರೆಲ್ಲ ಬೇರೆಯ ಬೆಲೆಯನ್ನೆ ಪಡೆದುಕೊಳ್ಳುತ್ತಾರೆ ; ಬೇರೆಯ ನೆಲೆಯಲ್ಲೂ ನಿಂತುಕೊಳ್ಳುತ್ತಾರೆ. ಕವಿ ಇಲ್ಲಿ ತನ್ನ ಪಾತ್ರಗಳನ್ನು ದ್ವಿಗಾತ್ರ ಚಿತ್ರಗಳಾಗಿ ಚಿತ್ರಿಸಿಲ್ಲ. ತ್ರಿಗಾತ್ರ ಚತುರ್‌ಗಾತ್ರ ಬಹುಗಾತ್ರ (Multi-dimensional) ಜೀವಂತ ಪಾತ್ರಗಳನ್ನಾಗಿ ಸೃಜಿಸಿದ್ದಾರೆ. ಆದ್ದರಿಂದ ಯಾವ ಪಾತ್ರವೂ ಅಲ್ಲೆ ಪ್ರಾರಂಭಗೊಂಡು ಅಲ್ಲೆ ಮುಗಿಯುವುದಿಲ್ಲ. ಆತ್ಮದ ಅನಂತ ಯಾತ್ರೆಯ ವರ್ತಮಾನಸ್ಥಿತಿಯಾಗಿ ತೋರುತ್ತವೆ. ಈ ದೃಷ್ಟಿಯಿಂದ ಮಂಥರೆಯ ಪ್ರಾರಂಭದ ಕಥೆ ಉಚಿತ.

ಶ್ರೀ ರಾಮಾಯಣದರ್ಶನಂ ಕಾವ್ಯದಲ್ಲಿ, ಮಂಥರೆಗೆ ರಾಮಾಭಿಷೇಕದ ಹಿಂದಿನ ದಿನದ ರಾತ್ರಿಯ ಕಡೆಯಲ್ಲೊಂದು ಸ್ವಪ್ನ ಕಾಣುವಂತೆ ಚಿತ್ರಿತವಾಗಿದೆ. ಇದು ಮೇಲ್ನೋಟಕ್ಕೆ ಅಗತ್ಯವಿಲ್ಲವೆಂಬಂತೆ ಕಂಡರೂ ಈ ಕಾವ್ಯದ ಪಾತ್ರಸೃಷ್ಟಿವಿಧಾನಕ್ಕೆ ಉಚಿತವಾಗಿ, ಮೇಲಾಗಿ ಭಗವದ್ ಸೃಷ್ಟಿಲೀಲಾರೀತಿಗೆ ಸಮೀಪವಾಗಿ ಇರುವುದು ಸತ್ಯ. ಮೊದಲೆ ತಿಳಿಸಿದಂತೆ ಈ ಕವಿ ಯಾವೊಂದು ಪಾತ್ರವನ್ನೂ ಪ್ರತ್ಯೇಕವಾಗಿ ತೆಗೆದಿಟ್ಟು ಕಡೆದಿಲ್ಲ. ಈ ಮಹಾ ಕಾವ್ಯದ ಲೋಕದಲ್ಲಿ ಅದು ವಿಶಿಷ್ಟವಾಗಿ ತೋರುವಂತೆಯೆ ಸಮಷ್ಟಿ ಲೀಲಾ ಸೂತ್ರಕ್ಕೆ ಒಳಗೊಂಡಿರುವುದನ್ನೂ ಕಾಣುತ್ತೇವೆ. 'ವಿಧಿಯ ಸೂತ್ರದ ಜಗಜ್ಜಾಲದೊಳ್ ವ್ಯಕ್ತಿಗಳ್ ಗ್ರಂಥಿಮಾತ್ರಗಳಲ್ತೆ, ವಿಧಿಹಸ್ತ ಕೌಶಲಪ್ರತಿಮೆಗಳ್' ಎಂಬ ಅರಿವು, ಹಳೆಯದೆಂಬಂತೆ ಕಂಡರೂ, ಈ ಕವಿಗೆ ನಿಚ್ಚಳವಾಗಿದೆ. ಆದರೆ ವ್ಯಕ್ತಿ ವ್ಯಕ್ತಿಯನ್ನು ತನ್ನ ಲೀಲಾರ್ಥಕ್ಕಾಗಿ ಬಿಗಿದಾಡಿಸುತ್ತಿದ್ದರೂ ಆ ಜೀವಿಗಳಿಗೆ ಇಚ್ಛಾ ಸ್ವಾತಂತ್ರ್ಯ ಭಾವವನ್ನು ನೀಡಿದೆ ಆ ಹಿಂದಿರುವ ವಿರಾಣ್ಮನ, ಎಂಬ ಚೆಚ್ಚರವೂ ಕವಿಗಿದೆ.

'ನೆಯ್ದಾಳುತಿದೆ ಜಗವನೊಂದತಿವಿರಾಣ್ಮನಂ,
ಸೂಕ್ಷ್ಮಾತಿ ಸೂಕ್ಷ್ಮ ತಂತ್ರದಿಂ ಬಿಗಿದು ಕಟ್ಟಿಯುಂ
ಜೀವಿಗಳ್ಗಿಚ್ಛೆಯಾ ಸ್ವಾತಂತ್ರ್ಯಭಾವಮಂ
ನೀಡಿ'

ಇಂಥ ವಿರಾಟ್ ಚಿತ್ತ, ಮೇಲಾಗಿ ರಾವಣನ ವಿಧಿ ಮಂಥರೆಯ ಅಂತರಾತ್ಮದಲ್ಲಿ ಮಥಿಸುತ್ತದೆ. ತನ್ನ ಮುನ್ನಿನೆಲ್ಲ ಕಾರ್ಯಹೇತುವೂ ಆದ ರಾಮವನವಾಸಭಾವವನ್ನು, ಮಂಥರೆ ಕನಸು ಕಾಣುತ್ತಾಳೆ. ಮುದುಕಿಯಾದ ಕೈಕೆ ಭರತನ ಕೈ ಹಿಡಿದುಕೊಂಡು ಮರುಭೂಮಿಯಲ್ಲಿ ಸಾಗುತ್ತಿದ್ದಾಳೆ, ವಿಧವೆಯಂತೆ. ತಾನು ಕರೆದರೂ ಕಿವಿಗೊಡದೆ ಸಾಗುತ್ತಿರುವಾಗ ಅವರಿಬ್ಬರನ್ನೂ ಸಂಜೆಮಬ್ಬು ನುಂಗಿಕೊಳ್ಳುತ್ತಿರುತ್ತದೆ. ಆ ಮರುಳುಗಾಡನ್ನೆಲ್ಲ ಅಲೆದಲೆದು ಕೆಡೆದು ಬಿದ್ದು ರಾಮನನ್ನು ಮೊರೆಯಿಟ್ಟು ಆಕ್ರಂದಿಸುತ್ತಾಳೆ. ಈ ದುಸ್ಸ್ವಪ್ನಕ್ಕೆ ಹೆದರಿ ಸಿಡಿದೆಚ್ಚರಗೊಳ್ಳುತ್ತಾಳೆ.

ಮೇಲಿನ ಈ ಕನಸು ಕೇವಲ ಅವಳ ವ್ಯಷ್ಟಿ ಮನಸ್ಸಿನ ಸೃಷ್ಟಿಯಾಗಿರದೆ, ಸಮಷ್ಟಿ ಮನಸ್ಸಿನ ವ್ಯೂಹ ರಚನಾರ್ಥವಾದ ಸೃಷ್ಟಿಯು ವ್ಯಷ್ಟಿಮನಸ್ಸಿನ ಜಾಗ್ರದವಸ್ಥೆಗೆ ಗೋಚರವಾಗದಿದ್ದರೂ ಸ್ವಾಪ್ನಿಕ ಮಾತ್ರವಾಗಿ ಸುಳಿದು ತನ್ನ ಸಂಬಂಧವನ್ನಲ್ಲಿ ಸ್ಥಾಪಿಸುವುದೂ ಆಗಿದೆ.

ರಾಮ ಸೀತೆ ಲಕ್ಷ್ಮಣರು ಕಾಡಿಗೆ ತೆರಳುತ್ತಾರೆ. ಇತ್ತ ಅಯೋಧ್ಯೆ ಸ್ಮಶಾನವಾಗಿದೆ. ಆಗ ಸಂತೃಪ್ತ ಪ್ರೇತವಾಗಿ ಅಲೆಯುತ್ತಿದ್ದಳೆಂದರೆ ಮಂಥರೆಯೊಬ್ಬಳೆ. ಆ ಅವಳ ಸಂಭ್ರಮವೆ ಸಂಭ್ರಮ. ಭರತರಾಜ್ಯಾಭಿಷೇಕವನ್ನವಳು ಎದುರು ನೋಡುತ್ತಿದ್ದಾಳೆ. ಅಹುದು ! ಅವಳು ತನ್ನ ಬಾಳಿನ ಪರಿಣಾಮಘಟ್ಟವನ್ನೂ ನಿರೀಕ್ಷಿಸುತ್ತಿದ್ದಾಳೆ. ಮಾವನ ಮನೆಯಿಂದ ಭರತ ಹಿಂತಿರುಗಿದನೆಂಬ ಸುದ್ದಿ ತಿಳಿದೇ ಅವಳ ಮನ ಹೀಲಿಗರಿ ಗೆದರುತ್ತದೆ. 'ತಾಂ ನೆಗಳ್ದುಪಾಯದಿಂ ತನ್ನವಗೆ ದೊರೆತನಂ ದೊರೆವುದೆಂಬುತ್ಸವಕೆ ನಗೆನಿರಿಯ ವಿಕೃತಿಯಿಂ ಮೊಗಗೂಬೆ ವಿಕಟಮಾಗಿರೆ, ಸಂಭ್ರಮಾತುರ'ದಿಂದ ತನ್ನೊಡತಿಯರಮನೆಗೆ ಬರುತ್ತಿರುತ್ತಾಳೆ. ಕಥೆಯೆಲ್ಲವನ್ನೂ ಕೇಳಿ ಶತ್ರುಘ್ನ ಪ್ರಲಯಮುಖಿಯಾಗಿ ಆ ಎಡೆಯೆ ಹರಿಯುತ್ತ ಬರುತ್ತಿರುತ್ತಾನೆ. ದಾವಾನಲವನ್ನು ತನ್ನ ತೊಡೆಯೇರಲಾಹ್ವಾನಿಸುವ ತರಗುಬಳ್ಳಿಯಂತವಳು ಆ ಭೀಷ್ಮನನ್ನು "ಭರತನೆಲ್ಲಿದನಯ್ಯ ?" ಎಂದು ಕೇಳುತ್ತಾಳೆ. ಹಿಂದು ಮುಂದು ನೋಡದೆ ಕೋಪದಾವಾನಲವನ್ನೆ ಮರು ಪ್ರಶ್ನೆಯ ರೂಪದಲ್ಲಿ ಕಾರುತ್ತಾನೆ ಅವನು :

"ರಾಮನೆಲ್ಲಿದನೆಲ್ಲಿ ?
ಲಕ್ಷ್ಮಣಂ ? ಮತ್ತೆ ಪೇಳೆಲ್ಲಿಗಟ್ಟಿದೆ ದೇವಿ
ಸೀತೆಯಂ ? ನೀಚೆ, ಪೆಳೇಕಯ್ಯನಂ ಕೊಂದೆ ?
ಪೇಳ್ ಪೇಳ್, ಏಕೆ ರವಿಕುಲದ ಸುಖಮಂ ತಿಂದೆ,



ಮೃತ್ಯು ಸ್ವರೂಪಿ, ಓ ಶುನಕಿ ? ಭೂಕಂಪಮನೆ
ಮನುನಗರಿಯಂ ಮಣ್ಣುಗೂಡಿಸಿದೆ, ಪಾತಕಿಯೆ ?
ನಿನಗುಮಾ ಗತಿಯಪ್ಪುದೆನ್ನಿಂದಿದೆಕೊ ಕಾಣ್ !"

ಎಂದಷ್ಟಕ್ಕೆ ನಿಲ್ಲದೆ ಅವಳ ಕೇಶ ಮುಖವಿಕಾರವನ್ನೆಲ್ಲ ಕತ್ತರಿಸಿ ಎತ್ತಿ ಕುಕ್ಕರಿಸುತ್ತಾನೆ, ಅವಳ ಕರ್ಕಶ ಚೀತ್ಕೃತಿಕ್ರಕಚ ಭರತ ಜನನಿಯ ಮೌನ ಶಿಲೆಯನ್ನು ಘರ್ಘರಿಸುತ್ತದೆ. ಆ ಆರ್ತಧ್ವಾನ ಭರತನನ್ನೂ ತಟ್ಟುತ್ತದೆ. ಹೆತ್ತಮ್ಮನಿಗೂ ಇಮ್ಮಡಿಯಾಗಿ ಒಲುಮೆ ತೋರಿ ತನ್ನನ್ನು ತನ್ನಕ್ಕರೆಯ ತೊಟ್ಟಿಲಲ್ಲಿಟ್ಟು ಜೋಗುಳದುಲಿಗೆ ತೂಗಿ, ನಿತ್ಯವೂ ಸಾಕಿ ಬೆಚ್ಚಗೆ ಸಲಹಿದಾಕೆಯ, ಆ ಮುದಿ ಮಂಥರೆಯ ನಿಡುಗೋಳ್ದನಿಯನ್ನು ಕೇಳುದುದೆ ತಡ ಕರುಳಿರಿದಂತಾಗಿ ಕರುಣೆಯುಕ್ಕಿ ಅಲ್ಲಿಗೆ ಧಾವಿಸುತ್ತಾನೆ.

ಆದರೆ ಅವಳನ್ನು ಕಂಡುದೆ ತಡ, ಅವನಿಗೆ ನೆನಪು ಮರುಕೊಳಿಸಿ ಕನಲಿಕೆ ಉಕ್ಕುತ್ತದೆ. ಕರುಣೆ ಸೆಡೆದುಕೊಳ್ಳುತ್ತದೆ. ಅವನಿಗೆ ಹಾಗಾದರೆ, ಜರ್ಜರಿತಳಾದ ಮಂಥರೆ ಅಂಗಲಾಚಿ ಕೊಳ್ಳುತ್ತಾಳೆ ಅವನನ್ನು : 'ಅಯ್ಯೋ ದಮ್ಮಯ್ಯ, ಬಾರಣ್ಣಯ್ಯ, ರಕ್ಷಿಸೋ !' ಎಂದು ಕೈನೀಡಿ ಬರುತ್ತಾಳೆ ಆ ಪ್ರೇಮರಾಹು! ಆದರೆ, ಪಾಪ, ಭರತ ಅವಳನ್ನತ್ತ ಸರಿಸುತ್ತಾ 'ತೊಲಗೆಲೆ ಕುರೂಪಿ, ಓ, ತೊಲಗು ಕಣ್ಬೊಲದಿಂದೆ ತೊಲಗಾಚೆ, ಪಾಪಿ ! ಬಳಿಸಾರದಿರ್; ನಿಲ್ಲದಿರ್ !' ಎಂದು ಅವಳ ನಿರೀಕ್ಷೆಗೆ ಅತಿ ವಿರುದ್ಧವಾಗಿ ತನ್ನ ಅಪ್ರೀತಿಯನ್ನು ಓಕರಿಸುತ್ತಾನೆ, ನರಕಸ್ನಾನ ಮಾಡಿಸುತ್ತಾನೆ. ಅವನಿಗೇ ನಂಬಬರುವುದಿಲ್ಲ, ಅಂಥ ಅವಳ ಪ್ರೇಮ ವಲ್ಮೀಕದಲ್ಲಿ ಹೇಗೆ ಅಂಥ ವಿಷೋರಗವಿತ್ತು ಎಂದು. ಅಂದು ತನಕವೂ ತೋರಿಬಂದಿಲ್ಲದ ಅವಳ ಪ್ರತ್ಯಕ್ಷ ವಿಕೃತಿಯಿಂದು ಘೋರ ವಿಕಾರವಾಗಿ ಭಯಂಕರವಾಗಿ ಭಾಸವಾಗುತ್ತದೆ. ಅವಳ ಹೊರಗಿನಂತೆಯೆ ಒಳಗೂ ಭೀಭತ್ಸವಾಗಿ ತೋರುತ್ತದೆ. ಇನ್ನವಳನ್ನು ಸಹಿಸಿಕೊಳ್ಳುವುದು ಅತಿ ಅಸಹ್ಯವಾಗುತ್ತದೆ.

'ಪೆತ್ತವಳನಳುಪುವೋಲ್
ಕಾಣಿಸುತ್ತಳಿಗೆಯ್ತಕದ್ದಿದ ತನ್ನ ಕಣ್ಗಳನೆ
ಕಿಳ್ತೆಸೆವನಂತೆ ನಾಂ, ಮಂಥರೆ, ಬಿಸುಟ್ಟೆನಿದೊ
ನಿನ್ನನೆಂದೆಂದಿಗುಂ.'

ಎಷ್ಟಸಹ್ಯವಾಗಿದೆ ಭರತನಿಗೆ ಮಂಥರೆಯ ಜೀವ ! ಅಬ್ಬ ! ಆದರೆ, ಪಾಪ, ಆ ಆಳಿಗೆಯುತ್ಕಕ್ಕೆ ಕಣ್ಣೇನು ಮಾಡಿತ್ತು ? ಇದು ಘೋರ ಪ್ರಾಯಶ್ಚಿತ್ತವಾಯಿತೆ ಹೊರತು ಉದ್ಧಾರ ಸೂತ್ರವಾಗಲಿಲ್ಲವಲ್ಲ ! ಚೆಲುವನ್ನು ಕಾಣಬೇಕಾದ ಕಣ್ಣು ತಾಯನ್ನೂ ಕಾಮಿಸುವಂತೆ ಕಂಡರೆ ಆ ಅದನ್ನು ಕಿತ್ತೆಸೆಯಬೇಕು ಎನ್ನಿಸುತ್ತದೆ

ಅವನಿಗೆ. ಭರತನಿಗೆ ಮಂಥರೆ ಕಣ್ಣಂತಿದ್ದಳು ಎಂಬುದನ್ನಿಲ್ಲಿ ಕಾಣಬೇಕು. ಆ ಕಣ್ಣಿಗಿನ್ನು ಬಾಳಿಲ್ಲ ; ಈ ಜೀವಿಗಿನ್ನು ಆ ನೋಟವಿಲ್ಲ.

'ಜಲಮಂ ತಿರಸ್ಕರಿಸಿ
ಪೊರಮಟ್ಟ ತಾವರೆಯೆರ್ದೆಗೆ ರವಿಯೆ ಗುರುವೈರಿ
ತಾನೆಂತುಟಂತೆ, ಕೇಳ್, ರಾಮನಂ ಬಿಸುಟೆರ್ದೆಗೆ
ಭರತನಹಿತಂ'

ಎಂದು ಭರತ ಸ್ಪಷ್ಟಪಡಿಸುವಾಗ ಮಂಥರೆಯುದ್ಧಾರದ ಹಾದಿಯನ್ನೂ ಸೂಚಿಸುತ್ತಾನೆ, ತನ್ನಲ್ಲಿ ಗೂಡುಕಟ್ಟಿದ್ದ ಅವಳ ಪ್ರೀತಿಯನ್ನು ರಾಮನತ್ತ ತಿರುಗಿಸುವ ಮೂಲಕ. ಆದರಷ್ಟಕ್ಕೆ ನಿಲ್ಲಿಸದೆ, ಅವಳನ್ನಿನ್ನು ಬಡಿದು ಕೊಲ್ಲಬೇಡೆಂದು ಶತ್ರುಘ್ನನಿಗೆ ತಿಳಿಸುತ್ತಾ ತಾನೆ ಅವಳು ಸಾಯುವಂಥ ಮಾತನಾಡುತ್ತಾನೆ :

'ನಿಲ್, ಪೊಯ್ಯದಿರ್, ಸೋದರನೆ.
ಪೆಣ್ಗೊಲೆಗೆ ಪೇಸುಮಂ ಪಿರಿಯಣ್ಣನದರಿಂದೆಯುಂ
ಬಿಡು ಕೋಪಮಂ. ನಾಯ್ಗೆ ಬಡಿದರದು ಕಚ್ಚಿದಾ
ಗಾಯ ಗುಣಮಪ್ಪುದೇಂ ?'

ಭರತನಾಡುವ ಒಂದೊಂದೂ ಮಾತು ಮಂಥರೆಯ ಮಮತಾಗ್ರಂಥಿಗಳನ್ನೆಲ್ಲ ಕತ್ತರಿಸುವಂಥ ವಿದ್ಯುದಾಘಾತ ಮಾಡುತ್ತದೆ. ಭರತ ಕೈಕೆಯರ ಮಮತೆಯೆ ತನ್ನ ಬಾಳಾಗಿದ್ದ ಅವಳಿಗೆ ಈಗ ಆಘಾತದಿಂದ ಮರಣಸದೃಶವಾದ ಅನುಭವವೇ ಆಗುತ್ತದೆ. ಅವಳ ಮಮತೆಯೆಲ್ಲ ಈಚೀಚೆಗೆ ಕೈಕೆಯತ್ತಣಿಂದ ಭರತನ ಸುತ್ತಣವೇ ಕೇಂದ್ರೀಕೃತವಾಗಿರುತ್ತದೆ : ಮಗನ ಮೇಲಣ ಮೋಹ ಮೊಮ್ಮಗನ ಕಡೆ ಹರಿಯುವಂತೆ. ಆ ಭರತನೆ ತನ್ನ ಪ್ರೀತಿಯನ್ನು ಧಿಕ್ಕರಿಸುತ್ತಾನೆ, ಪಾಪಿ, ಕುರೂಪಿ, ನಾಯಿ ಎಂದೆಲ್ಲ ಪ್ರಪ್ರಥಮ ಬಾರಿಗೆ ಬೈಯುತ್ತಾನೆ. ಮೇಲಾಗಿ ಅವಳನ್ನು ತಾನು ಸಂಪೂರ್ಣವಾಗಿ ಚಿರಶಾಶ್ವತವಾಗಿ ಪರಿತ್ಯಜಿಸಿರುವುದಾಗಿ,

'ಪೆತ್ತವಳನಳುಪುವೊಲ್
ಕಾಣಿಸುತ್ತಳಿಗೆಯ್ತಕದ್ದಿದ ತನ್ನ ಕಣ್ಗಳನೆ
ಕಿಳ್ತೆಸೆವನಂತೆ ನಾಂ, ಮಂಥರೆ, ಬಿಸುಟ್ಟೆನಿದೊ
ನಿನ್ನನೆಂದೆಂದಿಗುಂ'

ಎಂದು ಅಗ್ನಿ ಪರ್ವತದಂತೆ ಆಸ್ಫೋಟಿಸುತ್ತಾನೆ. ಈಗವಳ ನಿಂತನೆಲವೆ ಕುಸಿಯಿತು. ಅವಳಿಗಾದ ಶಾರೀರಿಕ ಮಾನಸಿಕ ಮಹದಾಘಾತಗಳನ್ನು, ಅವಳಲ್ಲಾಗುವ ಆತ್ಮಿಕ ಪರಿವರ್ತನಗಳನ್ನು ಕವಿ ಅದ್ಭುತವಾಗಿ ಪ್ರತಿಮಿಸುತ್ತಾರೆ ಭವ್ಯೋಪಮೆಯೊಂದರಿಂದ;



ಮಂಥರೆ ಗುಂಡು ಬಡಿದಂತೆ
ಕೆಡೆದಳವನಿಯಲಿ : ರವಿಯಾಕರ್ಷಣೆಯನುಳಿಯೆ,
ನಿಚ್ಚನೇಮಂಗೆಟ್ಟು ಬಟ್ಟೆನಿಟ್ಟೆಗೆ ತಪ್ಪಿ,
ತತ್ತರಿಸಿ, ನೀಲ ಶೂನ್ಯಕ್ಕುರುಳುರುಳುವಿಳೆಯಂತೆ,
ಭರತನಕ್ಕರೆಯೊಂದೆ ಪಿರಿಯ ನೆಮ್ಮಾಗಿರ್ದ
ಕುಬ್ಜೆಯಾತ್ಮಂ ತಳಂಗೆಟ್ಟುರುಳ್ದುದು ; ಮತ್ತೆ
ಪುಡಿವುಡಿಯಾಯ್ತು, ಬೂದಿಯಾಯ್ತುಳ್ಕೆಯೋಲುರಿದುರಿದು,
ಭರತನಾಗ್ರಹಗ್ರಹದ ಘಾತಕ್ಕೆ.

ಮೊದಲ ಸಾಧಾರಣ ಸಾದೃಶ್ಯ ಅವಳ ದೇಹ ಕೆಡೆದುಬಿದ್ದ ರೀತಿಯನ್ನು ತಿಳಿಸುತ್ತಿದ್ದರೆ, ಎರಡನೆಯ ಆ ಭವ್ಯ ಚಿತ್ರಣ ಅವಳ ಆತ್ಮವಿಲಯಾನುಭವವನ್ನು ಅದ್ಭುತವಾಗಿ ನಮ್ಮನುಭವಕ್ಕೆ ತರುತ್ತದೆ. ನಾವು ನಿಂತಿರುವ ನೆಲ ಒಂದಿಷ್ಟು ಅದುರಿದರೆ ಸಾಕು, ನಮ್ಮ ಮನೆ ಮಠ ಜೀವನ ಕ್ರಮ ಎಲ್ಲ ತಲ್ಲಣಗೊಳ್ಳುತ್ತದೆ. ಇದು ಬರಿಯ ಭೂಮಿ ನಡುಗುವುದು ಮಾತ್ರವಲ್ಲ ; ನಮ್ಮೆಲ್ಲರನ್ನೂ ಹೊತ್ತ ಭೂಮಿಯೆ ರವಿಯ ಆಕರ್ಷಣೆ ತಪ್ಪಿ ಶೂನ್ಯವಿಲಯದತ್ತ ಧಾವಿಸಿ ಉರುಳಿ ಪುಡಿಗೊಂಡು ಸುಟ್ಟುರೆಯಾಗಿ ನಿರ್ನಾಮವಾಗುವಂಥ ಕ್ರಿಯೆ. ನಮ್ಮ ಭೂಮಿ ಒಮ್ಮೆ ಹಾಗಾಗುತ್ತದೆಂದೆ ಕ್ಷಣ ಭಾವಿಸಿಕೊಳ್ಳಿ! ಆ ಸ್ಥಿತಿ ಮಂಥರೆಯ ಆತ್ಮದ ಸ್ಥಿತಿ.

ಈ ಪ್ರತಿಮೆ ಧ್ವನಿಸುವುದು ಬೇರೆಷ್ಟೊ ಉಂಟು. ರಾಮಾಯಣ ಸೌರವ್ಯೂಹವೆ ಈ ಭೂಗ್ರಹದ ಕುಸಿತದಿಂದ ತಲ್ಲಣಕ್ಕೊಳಗಾಗುತ್ತದೆ. ಆದರೆ ಸುದೈವದಿಂದ ಇತರಗ್ರಹ ಲಯಕಾರಿಯಾಗಬೇಕಾದ ಈ ಭೂಪತನ ಅದೃಶ್ಯ ಸೂಕ್ಷ್ಮ ಮಂಗಲಕಾರಿ ಶಕ್ತಿಪರಿವೇಶವಾಗಿ ಪರಿಣಮಿಸುತ್ತದೆ. ಮಂಥರೆಯ ಮಮತೆಗೆ ಭರತನಿಂದಲ್ಲದೆ ಅನ್ಯರಿಂದ ಆಘಾತವೊದಗಿದ್ದರೆ ಆಗ ಅವಳ ಭಗ್ನ ವಾತ್ಸಲ್ಯ ರಾಹುಗ್ರಹವಾಗಿ ಸೌರ ಮಂಡಲವನ್ನೇ ಆಕ್ರಮಿಸಿ ಬಿಡುತ್ತಿತ್ತು. ಆದರೆ ಆ ಮೋಹ ಭಂಗವಾದದ್ದು ಭರತನಿಂದಲೆ. ಬರಿಯ ಮಮತೆಯ ಭರಿಗವಾಗಿದ್ದರೂ ಅವಳಿಗೆ ಮರಣ ಮಾತ್ರ ಒದಗುತಿತ್ತು. ಆ ಮಿತಮೋಹಕ್ಕೆ ನಿಸ್ಸೀಮ ಪರಿಧಿಯ ದೀಕ್ಷೆ ದೊರೆಯುತ್ತದೆ. ಭರತ ಮಂಥರೆಯ ಪ್ರೀತಿಗೆ ಪ್ರತಿಯಾಗಿ ಮೋಸವನ್ನಲ್ಲ ಮಾಡಿದುದು. ಅವಳ ವ್ಯಕ್ತಿ ಮಿತವಾದ, ಅನ್ಯ ಮಾರಕವಾದ ಮಮತಾಮೋಹವನ್ನು ರಾಮಕೇಂದ್ರದತ್ತ ತಿರುಗಿಸುತ್ತಾನೆ. ಕಾರಣ ಅವನ ನೆಲೆಯೂ ರಾಮಕೇಂದ್ರವೆ ಆಗಿತ್ತು. ಪ್ರಾದೇಶಿಕ ಸರ್ಕಾರದ ಬ್ಯಾಂಕೊಂದು ತನ್ನಲ್ಲಿಟ್ಟ ಹಣವನ್ನೆಲ್ಲ ಕೇಂದ್ರ ಸರ್ಕಾರದ ಬ್ಯಾಂಕಿಗೆ ಒಪ್ಪಿಸುವಂತೆ ಒಪ್ಪಿಸಿಬಿಡುತ್ತಾನೆ.

ಆದರೆ, ಅದರಿಂದ ಮಂಥರೆಗೆ ಆಂತರಿಕವಾಗಿ ಆತ್ಯಂತಿಕವಾಗಿ ಪರಮಲಾಭವೇ ಆದರೂ ಅಂದಿಗೆ, ಸದ್ಯಭವಕ್ಕೆ, ವಿಲಯಾನುಭವವೇ ಆಗುತ್ತದೆ. ತನ್ನೆಲ್ಲ ಗಳಿಕೆ ಉಳಿಕೆಯನ್ನೂ ಭರತನಿಧಿಗೆ ಒಪ್ಪಿಸಿದ್ದಳು ; ಅದೇ ಅವಳಿಗೆ ತವನಿಧಿ. ವಿಶ್ವದಲ್ಲೆ ಅವಳಿಗಿನ್ನಾವ ನಿಧಿಯ ಆಸರೂ ಇರಲಿಲ್ಲ. ಅವಳ ಬದುಕಿಗಿದ್ದುದು ಒಂದೆ ಕೇಂದ್ರ ಬಿಂದು ! ನಮಗೊ ಸಾವಿರ. ಆದ್ದರಿಂದಲೆ ಅವಳ ಉದ್ಧಾರವೂ ಸಾಧ್ಯವಾಯಿತು, ಸದ್ಯ ಪ್ರಲಯದ ಮೂಲಕ.

ಲೌಕಿಕ ಮೋಹತಂತುಗಳನ್ನು ಕತ್ತರಿಸುವ ಮೂಲಕ ಅಲೌಕಿಕದತ್ತ ಸಾಧಕನ ಮನಸ್ಸನ್ನು ಬೀಸೆಸೆಯುವ ಆಧ್ಯಾತ್ಮ ಗುರುವಿನ ಮಾಂತ್ರಿಕ ಶಕ್ತಿಗೆ ಸದೃಶವಾಗಿದೆ, ಮಂಥರೆಯ ಮೋಹ ಜಾಲವನ್ನು ಹರಿದು ಹಾಕಿದ ಭರತನ ಸಹಜ ಅನಿವಾರ್ಯ ವರ್ತನ. ಮಮತೆಯೆ ತನ್ನ ಪ್ರಾಣ ಸರ್ವಸ್ವವಾಗಿದ್ದ ಮಂಥರೆಗೆ ಆ ಭಾವಭಂಗದಿಂದ, ಭಾವ ಪರಿಣಾಮದಿಂದ, ಭವ ಭಂಗವೂ ಆಗಬೇಕಾಗುತ್ತದೆ, ಅನಿವಾರ್ಯವಾಗಿ.

ಅಯೋಧ್ಯೆಯೆಲ್ಲ ಸ್ಮಶಾನಯಾತ್ರೆಗೆ ಹೊರಟು ಅರಮನೆಯೆಲ್ಲ ಹೆಗ್ಗೋರಿಯಾಗಿರುವಾಗ, ಮೂರ್ಛೆಯಿಂದ ಮೈತಿಳಿದೆದ್ದ ಮಂಥರೆಗೆ ಆ ಶೂನ್ಯ ತಾವರಣವೆ ಬಗೆಯುರುಳಾಗುತ್ತದೆ. 'ದೃಢ ಮನದ ಹೆಡೆಯೆತ್ತಿ ತನ್ನ ನಂಜಂ ತಾನೆ ಹೀರಲೆಳಸುವ ಕಾಳಸರ್ಪಣಿ ತೆರದಿ' ಆ ಮಂಥರೆ ತಾನೆಸಗಿದುದನ್ನೆಲ್ಲ ಒಂದೇ ಬಾರಿಗೆ ತಿದ್ದುವ ರಭಸದಿಂದ ಹೊರಡುತ್ತಾಳೆ. ಅದು ಹೇಗೆ ? ಅವಳ ಸ್ಥೂಲ ಚೇತನದ ಸೂಕ್ಷ್ಮ ಮಾನಸಕ್ಕೀಗ ಹೊಳೆದಿದೆ : ರಾಮನನ್ನು ಕರೆತರದೆ ಭರತನೊಲ್ಮೆ ತನಗಿಲ್ಲ, ಮತ್ತವನಿಗೂ ಸುಖವಿಲ್ಲ, ಎಂದು.

'ಹಾ, ತನ್ನ ಕೈಕೆಯ ಮಗುಗೆ,  
ತನ್ನೆ ಜೀವಾನಂದ ಸಾಗರ ಸುಧಾಂಶುವಿಗೆ,  
ಭರತದೇವಗೆ ನೆಲದ ಸಿರಿಯಕ್ಕೆ, ಸೊಗಮಕ್ಕೆ,  
ಮುಡಿಗೆ ನೇಸರ ಬಳಿಯ ಮಕುಟಮಕ್ಕೆಂದಲ್ತೆ  
ರಾಮನನಡವಿಗಟ್ಟಿದೆನ್ ? ಮತ್ತೆ ರಾಮನಂ  
ಮನೆಗೆ ಕರೆತಂದೆನಾದೊಡೆ, ಕಂದ ಭರತಂಗೆ  
ಮುದವಪ್ಪುದಪ್ಪುದಂತೆಯೆ ಕೈಕೆಗುತ್ಸವಂ  
ಮತ್ತೆ ಮರಳುವುದೆನಗೆ ಮೊದಲಿನಂದದೊಳವರ  
ಹಿಂದಣೊಲ್ಮೆಯ ಬಂಡಿನೌತಣಂ'

ಹೀಗೆ ನೆನೆಯುತ್ತಾ 'ಪುಣ್ಯದನ್ವೇಷಣೆಗೆ ಪೋಪ ಪಾಪದ ತೆರದಿ' ಆಕೆ ಅಲ್ಲಿಂದ ಹೊರ ಹೊರಡುತ್ತಾಳೆ. ನಾಗಿಣಿಯಂತೇನೊ ತನ್ನ ವಿಷವನ್ನು ಹೀರಿಕೊಳ್ಳಹೋಗುತ್ತಾಳೆ. ಆದರೆ ಸರ್ಪದಷ್ಟವಾದವನಿಗೆ ಅದರ ವಿಷ ತಾನಿದ್ದಷ್ಟು ವೇಳೆಯೆ ತನ್ನ ಕೆಲಸವನ್ನು ಮಾಡಿಬಿಡುತ್ತದೆ. ವಿಷವನ್ನು ಹಿಂತೆಗೆದುಕೊಂಡ ನಾಗಿಣಿಯೂ ಸಾಯುತ್ತದೆ. ವಿಧಿ ಮಂಥರೆಯ ಮೂಲಕ ಕಾಡಿಗೆ ರಾಮನನ್ನಟ್ಟಿಸಿ, ಅವಳ ಮೂಲಕವೆ ಅವನನ್ನು ಹಿಂದಕ್ಕೆ ಕರೆತರುವ ಯೋಜನೆಯನ್ನು ಸೃಜಿಸುತ್ತಿದ್ದಾನೆ. ಆದರದು ಮಂಥರೆಯ ಆ ಭವದಿಂದ ಸಾಧ್ಯವೆ? ದಶರಥನ ಮರಣ, ಭರತಾದಿಗಳ ಪ್ರಾರ್ಥನೆ ಯಾವುದೂ ರಾಮನನ್ನು ಹಿಮ್ಮರಳಿಸಲಾಗದಿದ್ದಾಗ ಈ ಮುದಿ ಗೂನಿಯಿಂದ ಅದು ಸಾಧ್ಯವೆ? ಸಾಧ್ಯವೆಂದರೆ ಸಾಧ್ಯ ! 'ಲೇಸನೆಸಗುವ ವಿಧಿಗೆ ಬಹುಪಥಗಳುಂಟು ನಡೆಯಲ್', 'ಶಿವಕೃಪೆಗೆ ತೃಣಮೆ ಖಡ್ಗಂ, ಪನಿ ಕಡಲ್, ಕಿಡಿ ಸಿಡಿಲ್' ಹೌದು. ಆದರೆ ಮಂಥರೆ ತಾನೆ ನೇರವಾಗಿ ರಾಮನನ್ನು ಕಾಡಿಗೆ ಕಳಿಸಲೂ ಇಲ್ಲ : ಅದು ಅವಳಿಂದ ಹೇಗೂ ಸಾಧ್ಯವಿರುತ್ತಿರಲಿಲ್ಲ. ಕೈಕೆಯ ಮೂಲಕ ಆ ಕೆಲಸ ಮಾಡಿಸಿದಳು. ಇಲ್ಲೂ ಅವಳ ಆ ಕೆಲಸವನ್ನವಳು, ಬೇರಾರ ಕೈಯಿಂದಲ್ಲದಿದ್ದರೂ, ತಾನೇ ಭೌತ ಶರೀರಿಯಾಗಿಯಲ್ಲದೆ ಆತ್ಮಿಕವಾಗಿ ಸಾಧಿಸಬೇಕಾಗುತ್ತದೆ.

ಈಗವಳು ರಾಮನನ್ನರಸುತ್ತ ಹೊರಟಿದ್ದಾಳೆ. ಅರಮನೆಯ ಯಾರೂ ತಿಳಿಯದಂತೆ ಕಾಡಿನತ್ತ ಹೊರಮಡುತ್ತಾಳೆ. ದಾರಿಯಲ್ಲಿ, ಪ್ರೇತಯಾತ್ರೆ ಹೊರಟಿದ್ದ ಜನ ಅವಳನ್ನು ಕಲ್ಲಿಟ್ಟು ಮತ್ತೆ ಘಾಸಿ ಮಾಡುತ್ತಾರೆ. ಅದಾವುದನ್ನೂ ಗಮನಿಸದೆ ಹೃದಯಾಬ್ಜದಲ್ಲಿ ರಘುರಾಮನನ್ನಿರಿಸಿ ಧಾವಿಸುತ್ತಾಳೆ. ಮೈಯಲ್ಲಿ ಶಕ್ತಿಯಿಲ್ಲ ; ಹಸಿವೆ, ಗಾಯ, ಭಾವಹತ್ಯೆಯೆಲ್ಲದರಿಂದ ಜರ್ಜರಿತವಾಗಿ ಸತ್ತುಹೋಗಿದ್ದರೂ, ತಾನು ತೊಟ್ಟ ನೋಂಪಿಯೊಂದನ್ನೆ ತನ್ನ ಶಕ್ತಿಯನ್ನಾಗಿ ಊರೆಗೋಲನ್ನಾಗಿ ಮಾಡಿಕೊಂಡು, 'ಓ ಭರತನಣ್ಣಯ್ಯ ! ಓ ರಾಮಯ್ಯ' ಎಂದು ಮೊರೆಯಿಡುತ್ತಾ ಮುನ್ನುಗ್ಗುತ್ತಾಳೆ. ಆ ಅಂದಿನ ಅವಳ ಮೊರೆತವನ್ನು ಕವಿಯ ಮಾತಿನಿಂದಲೆ ಕೇಳಬೇಕು.

ಓ ನನ್ನ ಭರತಣ್ಣಯ್ಯ ! ಓ  
ರಾಮಯ್ಯ ! ಹೇಳೆಲ್ಲಿರುವೆಯಯ್ಯ ದಮ್ಮಯ್ಯ !  
ಓ ನನ್ನ ಭರತನಣ್ಣಯ್ಯ ! ಓ ರಾಮಯ್ಯ !  
ಹೇಳೆಲ್ಲಿರುವೆಯಯ್ಯ ! ದಮ್ಮಯ್ಯ ! ಓ ನನ್ನ  
ಭರತನಣ್ಣಯ್ಯ ! ಓ ರಾಮಯ್ಯ ! ದಮ್ಮಯ್ಯ  
ಪೇಳೆಲ್ಲಿರುವೆಯಯ್ಯ ?

ಎಂಬ ಕರುಣಾಕ್ರಂದನದ ಛಂದಸ್ಸಿಗೆ ಚಲಿಸುತ್ತಾಳೆ – 'ತಾರಾಸಹಸ್ರಾಕ್ಷಿಯಾ ವ್ಯೋಮ ದೇವಿಯ ಮನಕೆ ರೋಮೋದ್ಗಮಂ ಪಲ್ಲವಿಸುವಂತೆ.' ಇಲ್ಲವಳ ಮನಸ್ಸಿನ ಪರಿವರ್ತನವನ್ನು ಭೂಮಿ ತಿಳಿದಿಲ್ಲದಿದ್ದರೂ ವ್ಯೋಮ ಅರಿತಿದೆ ; ಅದರಿಂದಲೆ ಹಾಗೆ ಪುಲಕಿತ ಗಾತ್ರಳಾಗಿ ವ್ಯೋಮದೇವಿ ಪ್ರೇಕ್ಷಕಳಾಗಿದ್ದಾಳೆ – 'ತಿಳಿಯದಿರಲೇನ್ ತಿರೆಗೆ, ಬಾನರಿಯದೇನ್ ಎರ್ದೆಯ ಪರಿವರ್ತನೆಯ ಪುಣ್ಯ ಸಂಕ್ರಾಂತಿಯಂ?

ಇಲ್ಲಿ ಗಮನಿಸಲೇಬೇಕಾದ ಒಂದಂಶವಿದೆ. ಮಂಥರೆ ರಾಮವಿಗ್ರಹವನ್ನು ತನ್ನೆದೆಯಲ್ಲಿಟ್ಟುಕೊಂಡು ಬಾಹ್ಯಶೂನ್ಯಳಾಗಿ ತುರೀಯೋಪಾಂತ ಭಾವಸಂದೀಪ್ತಳಾಗಿ ಅವನನ್ನು ಅರಸುತ್ತ ಹೊರಟಿದ್ದಾಳೆ, ಸರಿ. ಆದರವಳಿಗೆ ರಾಮ ರಾಮನಿಗಾಗಿ ರಾಮನಾಗಿ ಅಲ್ಲದೆ, ಭರತನಣ್ಣಯ್ಯನಾಗಿ ಭರತನಿಗಾಗಿ ಮಾತ್ರವೇ ಬೇಕಾಗಿದೆ. ಹಾಗೂ, ಆ ರಾಮ ಅವಳ ಭರತನ ಅಣ್ಣಯ್ಯ. ಅದರಿಂದಾಗಿ ಅವನು ಅವಳಿಗೆ ಮುಖ್ಯ. ಪೂರ್ಣತೆಯನ್ನಪ್ಪಿದರೂ ವಿಶಿಷ್ಟತೆಯನ್ನು ಬಿಡದ ರೀತಿಯನ್ನಿಲ್ಲಿ ಕಾಣುತ್ತೇವೆ. ಇದು ಬಹು ದರ್ಶನಪೂರ್ಣ ಸಂಗತಿ ; ಮನೋವೈಜ್ಞಾನಿಕ, ತರ್ಕಬದ್ಧ.

ಹೀಗೆ ರಾಮಭಾವದೀಪ್ತವಾಗಿ ತೆರಳುತ್ತಿರುವ ಬಾಹ್ಯಸಂಜ್ಞಾಶಕ್ತಿ ಶೂನ್ಯತೆಯ ನೇಮಿಯುಯ್ಯಾಲೆಯನ್ನು ತೂಗುತ್ತಿರಬೇಕಾದರೆ, ಮಂಥರೆಯ ಕುಂಟು ದಿಟ್ಟಿಯ ಗೂನುಗಣ್ಣಿಗೆ ದೂರದಲ್ಲೊಂದು ಜ್ಯೋತಿ ಕಾಣಿಸುತ್ತದೆ. ಪಾಪ, ಅದು ದಾವಾನಲ! ಅದು ಜ್ಯೋತಿಯಾಗಿ ಕಾಣಿಸುತ್ತದೆ ! ಅದರೆಡೆಗೆ ಧಾವಿಸುತ್ತಾಳೆ, ಅದು ರಾಮನಂತೆ ಕಂಡದ್ದರಿಂದ. 'ಓ ಭರತನಣ್ಣಯ್ಯ, ಓ ನನ್ನ ರಾಮಯ್ಯ, ಬಾರಯ್ಯ, ದಮ್ಮಯ್ಯ!' ಎಂದು, ತನ್ನ ಎದೆ ನವಿಲು ಕೇಗಿ ಗರಿಗೆದರಿ ಕುಣಿಯುತ್ತಿರಲು, ಹಾರಿ ಮುಂದಕ್ಕೆ ನುಗ್ಗಿ ನಡೆದೋಡುತ್ತಾಳೆ – ದಾವಾಗ್ನಿಯನ್ನೆ ರಾಮನೆಂದು ಭಾವಿಸಿ*. ದಾವಾಗ್ನಿಯ ಯಜ್ಞ ಜ್ವಾಲೆಯಲ್ಲಿ ಆಜ್ಯಾಹುತಿಯಾಗುತ್ತಾಳೆ ; ಅಲ್ಲ, ವಕ್ರ ಶ್ರೀಗಂಧಕಾಷ್ಠದ ಆಹುತಿಯಾಗುತ್ತಾಳೆ.

* ಆನಂದೋನ್ಮಾದದಲ್ಲಿ ನೀಲಾಂಬೋಧಿಯನ್ನು ಕೃಷ್ಣನೆಂದೆ ಭಾವಿಸಿ ಅದರೊಳಕ್ಕೆ ನಡೆದು ಹೋದ ಶ್ರೀ ಕೃಷ್ಣ ಚೈತನ್ಯನ ಕಥೆ ಕೇಳಿದ್ದೇವೆ. ಇಲ್ಲಿ ಆನಂದೋನ್ಮಾದವಿಲ್ಲದಿದ್ದರೂ, ಮೋಹ ಪ್ರೇಮವಾಗಿ ವಿಸ್ತಾರಗೊಂಡು ಆ ಭಾವವೇ ಉನ್ಮಾದವಾಗಿರುತ್ತದೆ. ಫಲ ಎರಡರಲ್ಲೂ ಹೆಚ್ಚು ಕಡಿಮೆ ಒಂದೇ – ವ್ಯಕ್ತಿಲಯ.



ಇಲ್ಲಿ ಬರುವ ದಾವಾನಲದ ವರ್ಣನೆಯನ್ನು, ಅದು ಪ್ರತಿಮೆಯಾಗಿರುವ ಕಾರಣ, ಇಲ್ಲಿ ಕವಿಯ ಮಾತಿನಿಂದಲೆ ಕೇಳಬಹುದು :

ಆ ದಾವಾಗ್ನಿ
ಘನ ನಿಬಿಡ ಘೋರಾಂಧಕಾರ ತೀರದ ಮಧ್ಯೆ
ಪ್ರವಹಿಪಾ ವಿದ್ಯುತ್ಪ್ರವಾಹ ದೈತ್ಯಾಕೃತಿಯವೋಲ್
ಕೆದರಿದುದು ದಿಕ್ಕು ದಿಕ್ಕಿಗೆ ತನ್ನ ಕೇಸುರಿಯ
ಕೇಶಪಾಶದ ರಾಶಿರಾಶಿ ವಿನ್ಯಾಸಮಂ,
ಬೆಂಕೆಗಣ್ಗಳೆನೆ ಸಿಡಿದೇಳ್ತ ಕೆಂಗಿಡಿಗಳಿಂ
ಸೂಸಿದುದು ತೋರ ತಾರೆಯ ಕೆಂಡ ಧಾರೆಯಂ
ಶಿಖಿಬಕಾಸುರ ಬಾಹುಭೀಮರಿಂದೆಂಬಂತೆ
ತಿರುಪ್ಪಿದುದು ದೈತ್ಯ ದೇಹದ ತರುಹಿಡಿಂಬರಂ
ನಿರಿ ನಿರಿ ನಿಟಿಲ್ಲೆಂದು ಮುರಿದರೆದು, ಬೂದಿಯಂ
ಬುತ್ತಿಗೂಳ್ ಮಾಡಿ ಮುಕ್ಕಿದುದು, ಕಾಡೆಲ್ಲಮಂ
ನುಂಗಿ ನೊಣೆಯುತ್ತೆ, ನಾಡೆಲ್ಲಮಂ ನೆಕ್ಕುತ್ತೆ,
ನಗಜಗದ ಖಗಮೃಗದ ಬನಸೊಗದ ಜೀವಮಂ
ಪಾರಿಸುತೆ, ಚೀರಿಸುತೆ, ಕೊಲ್ಲುತ್ತೆ, ಮೆಲ್ಲುತ್ತೆ,
ಪ್ರಳಯ ಪಣಿಯಗ್ನಿತನು ತಾಂ ಲಯಭೋಜನಕೆ ನೀಳ್ದ
ಶತಕೋಟಿಯೋಜನದ ಮಿಂಚಿನ ಮಹಾಜಿಹ್ವೆ
ನುಗ್ಗಿ ಮುಂಬರಿವಂತೆ, ಮೇಲ್ವಾದು ಬೀಳ್ವಂತೆ,
ಬಂದಪ್ಪಳಿಸಿದಗ್ನಿಗಾ ಮಂಥರೆಯ ಮೂರ್ತಿ ಹಾ
ಸುಟ್ಟು ಸೀದುದೊ ಚಿಟ್ಟೆ ಸೀವಂತೆ !

ಇದು ಕಾಡುಗಿಚ್ಚಿನ ವರ್ಣನೆಯೆ ಆದರೂ, ಅದರಲ್ಲಿ ಮಂಥರೆ ಸುಟ್ಟು ಹೋದುದು ದಿಟವೆ ಆಗಿದ್ದರೂ ವಾಸ್ತವವಾಗಿ ಇದೆಲ್ಲ ಪ್ರತಿಮೆ. ಇದು ತನಕ ಇದ್ದ ಮಂಥರೆಯ ಮಮತೆ ಈ ಕಾಡುಗಿಚ್ಚಿಗಿಂತ ಏನೂ ಕಡಿಮೆಯಾಗಿರಲಿಲ್ಲ. ಅವಳು ಮಮತೆಯ ಸುಳಿ, ಪ್ರೇಮ ಭೈರವಿ. ಆ ಅವಳ ಪ್ರೀತಿದಾವಾನಲಕ್ಕೆ ಎಷ್ಟೆಲ್ಲ ಆಹುತಿಯಾಗಲಿಲ್ಲ. ಅವಳೂ ಸೇರಿ, ಆದರದೇ ಬರಿಯ ಸುಡುವಾಟವಾಗದೆ ದಾವಾನಲ ಯಜ್ಞವಾಯಿತು.

ಈ ದಾವಾನಲ ಚಿತ್ರಕೂಟದಲ್ಲಿ, ಒಂದು ದಿನ ಸೀತಾದೇವಿ ಹೇಳುತ್ತಿದ್ದ ಕಥೆಯನ್ನು ರಾಮ ಲಕ್ಷ್ಮಣರು ಕೇಳುತ್ತಿರುವಾಗ, ಕಿಟಕಿಯಾಚೆ ಕವಿದಿದ್ದ ಕಗ್ಗತ್ತಲಲ್ಲಿ

ಮನೋಹರವಾಗಿ ಮೆರೆಯುತ್ತದೆ, ಶಿಖರೇಶ್ವರನ ಶಿರದಲ್ಲಿ.

ರಾತ್ರಿಯಾಕಾಶದಾ
ತಾರಾ ಸಹಸ್ರಾಕ್ಷನೋಲಗದಿ ನರ್ತಿಸುವ
ಉರಿಯ ಉರ್ವಶಿಯೆನಲ್ಕಾ ಕಾಡುಗಿರ್ಚ್ಚೆಸೆಯೆ,
ನಿಟ್ಟಿಸಿದರಾ ಚೆಲ್ವನೆಳಮಕ್ಕಳೋಲಂತೆ
ಬಾಯ್ದೆರೆದ ಬೆಳ್ಳಚ್ಚರಿಗೆ ಮನಂ ಮಾರ್ಪೋದವೋಲ್ !

ಈ ಕಾಡುಗಿಚ್ಚಿನ ವರ್ಣನೆಯ ಅಗತ್ಯವೇನಿತ್ತು, ಕಾಡೆಂದ ಮೇಲೆ ಕಾಡುಗಿಚ್ಚಿನ ವರ್ಣನೆಯೂ ಬರಬೇಕೆಂದೆ ? ಅಲ್ಲವೆ ಅಲ್ಲ ; ಈ ಕಿಚ್ಚು ಅಂದು ಮಂಥರೆಯ ಆಹುತಿಯನ್ನು ಸ್ವೀಕರಿಸಿಕೊಂಡ ಕಾಡುಗಿಚ್ಚೆ. ರಾಮನನ್ನು ಮಂಥರೆ ಸಾರುವುದು ಸೇರುವುದು, ಈ ಜ್ವಾಲಾನಲ ಸೇತು ನಾವೆಯನ್ನೇರಿ; ಈ ದಾವಾನಲ ಹೋಮಯಾನವನ್ನೇರಿ, ಮುಂದೆ, ರಾವಣಾಪಹೃತ ಸೀತಾದೇವಿ ತನ್ನ ಆ ಪ್ರಿಯರಾಮಚಂದ್ರನನ್ನು ಸೇರುವುದೂ ; ಸ್ವಯಂ ರಾಮಚಂದ್ರನೆ ತನ್ನನ್ನು ತಾನು ತೋರಿ ಕೊಳ್ಳುವುದೂ ಈ ಅಗ್ನಿ ರಥವೇರಿಕೊಂಡೆ ಅಲ್ಲವೆ? ಶ್ರೀ ಸೀತಾ ರಾಮಲಕ್ಷ್ಮಣರನ್ನು ಹಿಂದಕ್ಕೆ ಕರೆದೊಯ್ಯಲು ಸಂಕ್ಷಿಪ್ತ ಅಯೋಧ್ಯೆಯೊಡನೆ ಕಾಡಿಗೆ ಬರುವ ಭರತನಿಗೆ, ಆ ಕಾಣದ ಘೋರಾರಣ್ಯದಲ್ಲಿ ಅವರಿದ್ದೆಡೆಯ ದಾರಿ ತೋರುವರಾರು? ನಡು ಹಗಲ ಬೇಸಿಗೆಯಲ್ಲಿ ಮರಗೊಡೆಯ ತಣ್ಣೆಳಲಿನಲ್ಲಿ ನಡೆದಿದ್ದ ಅವರಿಗೆ ಆಕಾಶದಲ್ಲೊಂದು ಧೂಮ ಮೇಘವೊಂದು ಬಿಳಿಮುಗಿಲಿಗಿದಿರಾಗಿ ಗಿರಿತಟದ ಅಡವಿಯಿಂದ ಮೇಲೆದ್ದು ಹೋಗುತ್ತಿರುವುದು ಕಾಣುತ್ತದೆ. ಬಯಕೆ ಬಾವುಟವೆತ್ತಿ ಕರೆಯುತ್ತಿದೆಯೊ? ಪಿತೃಕೃಪೆ ಹರಸಲೆಂದು ಕೈಬೀಸುತ್ತಿತ್ತೊ? ರಾಮನನ್ನರಸುತ್ತ ಬಂದು ದಾವಾನಲಾಹುತಿಯಾದ ಮಂಥರೆಯ ಪುಣ್ಯಾಂತರಾತ್ಮದ ಪ್ರಣಯಲಕ್ಷ್ಮಿ ಭರತನಿಗೆ ಕೌಸಲ್ಯಾರಾಮನ ಎಡೆಯನ್ನು ಹೊಗೆಬೆರಳು ನೀಡಿ ತೋರುತ್ತಿದ್ದಾಳೊ ಎನ್ನುವಂತದು ಕಾಣುತ್ತಿತ್ತೆಂದು ಕವಿ ವರ್ಣಿಸುತ್ತಾರೆ. ಆಗ ಹೊಗೆಯಾಗಿದ್ದ ಕಾಡುಬೆಂಕಿ ಉಜ್ಜ್ವಲಿಸಿ ಉರಿಯುತ್ತಿದ್ದಾಗ ಅಲ್ಲೆ ಮಂಥರೆಯಾದರೂ ಆಹುತಿಯಾಗಿದ್ದುದು. ಆ ಉರಿಯ ಊರ್ವಶಿಯ ಚಂಡ ನರ್ತನವನ್ನೆ ಸೀತಾ ರಾಮಲಕ್ಷ್ಮಣರಾದರೂ ಆ ಹಿಂದೆ ಕಂಡು 'ಬೆಳ್ಳಚ್ಚರಿ' ಗೊಂಡಿದ್ದುದು. ಅದರಿಂದಲೆ ಆ ಮಂಥರಾತ್ಮ ಅಲ್ಲಿ ನಿರ್ದೇಹ ಧೂಮವಾಗಿ ಭರತರಾಮ ಸೇತುವಾಗುತ್ತದೆ. ಮುಂದೆ ಅವಳು ಅದೇ ಶ್ರೀರಾಮ ಭರತರ ನಡುವೆ ಯಜ್ಞಾಗ್ನಿಮೂರ್ತಿ ಸೇತುವಾಗಿ ಬರುತ್ತಾಳೆ. ಶ್ರೀರಾಮಚಂದ್ರನನ್ನವಳು ಈಗಲೆ ಹಿಂದಕ್ಕೆ ಕೊಂಡೊಯ್ಯಲಾಗದಿದ್ದರೂ,



ವನವಾಸಯಾತ್ರೆ ಪೂರೈಸಿ ರಾವಣನಿಂದಲೂ ಅಕ್ಷತನಾಗಿ ಸುಕ್ಷೇಮವಾಗಿ ಅವನು ಮರಳಲು ಸದಾ ಕಾಪಿರುತ್ತಾಳೆ. ನೂರಾರು ಶಕ್ತಿಗಳು, ಪ್ರಧಾನವಾಗಿ ಭರತ ಕೈಕೆ ಕೌಸಲ್ಯಾ ಊರ್ಮಿಳಾ ಶಕ್ತಿಗಳು ರಾಮಾಗಮನವನ್ನು ಪ್ರಾರ್ಥಿಸುತ್ತಿರುತ್ತವೆ : ರಕ್ಷಿಸುತ್ತಿರುತ್ತವೆ. ಅಲ್ಲಿ ಮಂಥರೆ ಯಾರ ಗಮನಕ್ಕೆ ಬಾರದಿದ್ದರೂ ಶ್ರೀ ರಾಮ ಕ್ಷೇಮ ಚಿಂತನದಲ್ಲಿ ಅವಳ ಪಾತ್ರ ದ್ವಿತೀಯವೇನೂ ಆಗಿರುವುದಿಲ್ಲ.

ಇನ್ನೀ ಮಂಥರೆಯನ್ನು ನಾವು ಸಂದರ್ಶಿಸುವುದು ಶ್ರೀ ರಾಮಾಯಣದರ್ಶನದ ಅಂಚಿನಲ್ಲೆ. ಭರತದೇವ ಇನ್ನೂ ರಾಮಾಗಮನವಾಗದಿದ್ದುದಕ್ಕೆ ಚಡಪಡಿಸುತ್ತ, ಯಜ್ಞವೇದಿಯ ಮುಂದೆ ಉಪವಾಸವ್ರತ ಕೈಗೊಂಡು ದೀಕ್ಷೆಗೊಂಡು ಕುಳಿತಿರುವಾಗ ಒಂದು ಸಕರುಣ ರಮ್ಯಾದ್ಭುತ ಘಟನೆ ನಡೆಯುತ್ತದೆ.

ಕೊನೆಯಿರುಳ್ ಕಳೆಯುತಿರೆ, ಮರುವಗಲೆ
ಮಾಂಡವಿಯ ಮನದನ್ನನಗ್ನಿಪ್ರವೇಶಮಂ
ಮನದಿ ನಿಚ್ಚಯ್ಸುತಿರೆ, ಯಜ್ಞಕುಂಡಾಗ್ನಿಯಿಂ
ಜ್ವಾಲೆಯೇಳ್ವಂದದಿಂ ಜ್ವಾಲಾವಿಲೀನಮೆನೆ
ಮೈದೋರ್ದುದೊಂದಮರ ಸುಂದರ ಸೂಕ್ಷ್ಮತೇಜದ
ಸುರಾಂಗನಾ ಮೂರ್ತಿ ;

ಆ ದೈವಾಂಗನಾ ಮೂರ್ತಿ ಯಾರು ? ಆಕೆ ಆಡಿದುದೇನು ?

"ಕಂದ ನಿನ್ನಗ್ರಜಂ
ಇಂದೊ ನಾಳೆಯೊ ದಿಟಂ ಪಿಂತಿರುಗಿ ಬಂದಪನ್
ಮಾಣ್ ಮನದ ತರಿಸಲ್ಕೆಯಂ,"

ಯಾರೀಕೆ ? ಭರತನಂತೆಯೆ ನಾವೂ ಕೂಡ :

"ದೇವಿ, ನೀನಾರ್ ?
ಸುಧಾಸುಖವನೆರೆಯುತಿಹೆ ಬೆಂದೆದೆಗೆ ?"

ಎಂದು ಕೇಳುತ್ತೇವೆ. ಯಾರಾಕೆ ? ಮತ್ತೆ ಯಾರಿರುತ್ತಾರೆ !

"ಮತ್ತಾರ್
ಸದಾ ನಿನ್ನ ಸುಕ್ಷೇಮ ಚಿಂತನೆಯೊಳಿರ್ಪರಾ
ಮಂಥರೆ ವಿನಾ ?

ಕೇವಲ ಮಂಥರೆಯ ಬಾಹ್ಯರೂಪವನ್ನೆ, ಅವಳೆಸಗಿದ ಕರ್ಮದ ಮೇಲ್ಮೈಯನ್ನೆ ನೋಡಿದವರಿಗೆಲ್ಲ ಇದು ಆಶ್ಚರ್ಯವೆ. ಭರತನಿಗೂ ಆಶ್ಚರ್ಯ. ಕಾರಣ ಅವನು

ಪ್ರೇಕ್ಷಕನಲ್ಲ, ಪಾತ್ರ – ಎಷ್ಟೆ ಮಹಾತ್ಮನಾಗಿದ್ದರೂ. ಆದ್ದರಿಂದಲೆ ಅವನು:

"ಬೇಡಮಾ ಪೆಸರನೊರೆಯದಿರ್.
ಪೂಜ್ಯೆ. ಆ ಗೂನಿ ಕಾರಣಮಾಗೆ ನಾನಿಂತು.
ಇಂದಿಲ್ಲಿ, ಕೈಕೊಂಡೆನೈಸೆ ಕಡುಗಜ್ಜಮಂ."

ಭರತನಿಗಿನ್ನೂ ಅವಳ ವಿಚಾರವಾದ ಅಸದ್‌ಭಾವ ಹೋಗಿಲ್ಲ. ಹದಿನಾಲ್ಕು ವರ್ಷ ಮಾಗಿದ್ದರೂ ಕೊಂಚವೂ ಕಹಿ ಮುರಿದಿಲ್ಲ, ಹುಳಿ ಮುರಿದಿಲ್ಲ. ಕಾರಣ, ಅವಳಿಂದ ಅವನಿಗಾಗಿರುವಂತೆ ತೋರುತ್ತಿರುವುದು ವ್ಯಕ್ತಿ ಮಿತವಲ್ಲದ ಸಾಮೂಹಿಕ ವಿನಾಶ. ತನಗವಳು ಬಾಲ್ಯದಿಂದ ತೋರಿದ್ದ ಪ್ರೀತಿವ್ಯಾಮೋಹವನ್ನೆಲ್ಲ ನುಂಗುವಷ್ಟು ಅಸಹನೆಯುಂಟಾಗಿದೆ ಅವಳ ವಿಚಾರವಾಗಿ ಅವನಿಗೆ. ಅವಳಿಂದವನಿಗೆ ಅವಮಾನ. ಆ ಬಾಲರ್ಷಿಗೂ ಹಾಗಾದರೆ ಉಳಿದವರ ಪಾಡೇನು? ಇಡೀ ರಾಮಾಯಣದಲ್ಲಿ ಅವಳ ನಿಷ್ಕಾಮ ಮೋಹವನ್ನು ಮತ್ತೆ ಅದರಿಂದಾಗುವ ಸತ್‌ಫಲವನ್ನು ಹಾಗೂ ಅದಕ್ಕೊದಗಿದ ಪರಮ ಪರಿಣಾಮವನ್ನು ಮತ್ತಾರು ಕಾಣಬಲ್ಲರು ಭರತನ ವಿನಾ? ಅವನ ಕಣ್ಣಿಗೇ ಹೊಗೆಸುತ್ತಿದ್ದರೆ? ಅಲ್ಲಿ ರಾವಣನಿಗಾದ ಮಹಾಶಿವ ಭಯಂಕರ ಭಾವಪರಿವರ್ತನ ಪರಿಣಾಮಗಳನ್ನು ಯಾರೂ ಅರಿಯದಾದರು, ಮಂಡೋದರಿ ವಿನಾ. ಅಂತರಂಗದ ಮಹಾ ಘಟನೆಗಳೆಲ್ಲ ಹೀಗೆಯೆ ಅಜ್ಞಾತವಾಗಿಯೆ ಉಳಿಯುತ್ತವೆಯೆ? ಉಳಿಯಬೇಕೆ? ಮಹಾಶಿವದ ಹೃದಂಶ ಮರೆಯಾಗಿದ್ದು ಬರಿಯ ಭೀಷಣ ರುದ್ರಂಶವೊಂದೇ ಕಾಣುತ್ತಿರಬೇಕೆ? ಎಂಥ ದಿವ್ಯ ಸಂಕಟವಾಗುತ್ತದೆ!

ಮಂಥರೆ ಪಾಪ, ಹತಾಶ ಪ್ರಯತ್ನ ಮಾಡುತ್ತಾಳೆ, ಅದುತನಕವೂ ಧೂಮಾವ ಕುಂಠಿತವಾಗಿದ್ದ ತನ್ನಂತರಂಗದ ಪರಮ ಪ್ರೀತಿಯ ಯಜ್ಞಾಗ್ನಿ ಪ್ರತಿಮೆಯನ್ನವನಿಗೆ ತೋರಲು.

"ವತ್ಸ, ಕಾರಣಳಲ್ತು ; ಬರಿ ಕರಣಮಾ ಕುಬ್ಜೆ.
ಮಂಥರಾಪ್ರೇಮದಂತಃಕರಣಮಂ ಕಾಣೆ
ನೀಂ. ರಾಮನಂ ಮತ್ತೆ, ನಿನ್ನಭ್ಯುದಯಕಾಗಿ
ಪಿಂ ಮರಳ್ಚುವುದ್ಯೋಗದೊಳ್ ತೊಡಗಿರಲ್ಕವಳ್
ದವಾಗ್ನಿಗಾಹುತಿಯಾದಳಲ್ತೆ? ಬಹಿರಂಗದೊಳ್
ಆ ಕುಬ್ಜೆ ವಿಕೃತಿಯೆಂತಂತೆ ಹೊರನೋಟಕಾ
ಗೂನಿ ಗೆಯ್ದುದು ಪಾಪವೇಷಿ ; ನಾನೆಯೆ, ನೋಡು.
ನಿನ್ನ ಮಂಥರೆಯಂತರಾತ್ಮದ ಪುಣ್ಯಲಕ್ಷ್ಮಿ !"



ಭರತನಿಗೆ ಅರ್ಥವೆ ಆಗದು. ಆ ಹಿಂದಿನ ಆ ಮಂಥರೆಯೆಲ್ಲಿ, ಅಂದಿನ ಭೈರವಿಯಲ್ಲಿ, ಇಂದಿನ ಶಿವಶಂಕರಿಯೆಲ್ಲಿ! ಯಾವುದು ಸತ್? ಯಾವುದಸತ್? ತನ್ನನ್ನೆ ಕೇಳಿಕೊಳ್ಳುವಂತೆ ಅವಳನ್ನು ಕೇಳುತ್ತಾನೆ :

"ದಿಟಮೊ? ಮೇಣೆನ್ನ ನಿರಶನದನ್ನರಸ ರಹಿತ
ಪಿತ್ತ ಚಿತ್ತದ ವಿಕಾರಮೊ?"

ಅದಕ್ಕೆ ಅತ್ಯಂತ ಧ್ವನಿಪೂರ್ವಕವಾದ, ಸರ್ವರಿಗೂ ಸವಾಲಿನಂತಿರುವ ಮಾತನಾಡುತ್ತಾಳೆ ಮಂಥರೆ.

"ನಿರ್ಧರಿಸು ನೀನೆ!"

ಹೀಗೆಂದು ಅವಳು ಆ ಯಜ್ಞಾಗ್ನಿಯಲ್ಲೆ ಐಕ್ಯವಾಗುತ್ತಾಳೆ.

"ಕಿಡಿಯೊ? ಕಿರುನಗೆ ಮಿನುಗೊ? ಲಗ್ನವಾದುದು ಮೂರ್ತಿ
ಅಗ್ನಿಯುರಿಯಾಗಿ ತಲೆದೂಗಿ ! ನಿಬ್ಬೆರಗಾಗಿ
ಕೈ ಮುಗಿದನಾ ಕೈಕೆಯಣುಗಂ ಹುತಾಶನಗೆ.
ರಾಮಾಗಮನದಾಶ್ವಾಸನದ ಕೃತಜ್ಞತೆಗೆ."

ಭರತನಿಗೆ ಕೃತಜ್ಞತಾಭಾವ ಮೂಡಿದುದಾದರೂ ಮಂಥರೆಯ ಮೇಲಲ್ಲ; ರಾಮಾಗಮನದಾಶ್ವಾನವನ್ನಿತ್ತ ಆ ಹುತಾಶನನ ಕೃಪೆಗಾಗಿ. ಹೀಗೆ, ಪಾತ್ರನಾದ ಮಹಾ ವಿಭೂತಿಯ ಕಣ್ಣಿಗೂ ಬೀಳದೆ ಹೋಗುತ್ತಾಳೆ ಮಂಥರಾ ಲಕ್ಷ್ಮಿ.

ಇಲ್ಲೀಗ ವಿವೇಚಿಸಬಹುದು, ಅವಳು ಹೇಳಿದ 'ವತ್ಸ ಕಾರಣಳಲ್ತು ; ಬರಿ ಕರಣಮಾ ಕುಬ್ಜೆ' ಎಂಬ ಮಾತನ್ನು, ಪ್ರಾರಂಭದಲ್ಲಿ ಬಂದ ಕನ್ನಡಿಯ ಪ್ರತಿಮೆಯನ್ನು ಕೂಡ. ಈಕೆ ಹೇಳಿದ ಮಾತು ಸತ್ಯವೆ ಅಲ್ಲವೆ? ಹೇಗೆ ಸತ್ಯ, ಹೇಗೆ ಅಲ್ಲ? ನಾವಿಲ್ಲಿ ಗಮನಿಸಬೇಕಾದದ್ದು, ಆ ಮಾತಾಡುವವಳು ಕುಬ್ಜೆ ಮಂಥರೆಯಲ್ಲ, ಯಜ್ಞಾಗ್ನಿಯಲ್ಲಿ ಆತ್ಮ ರೂಪದಿಂದಾವಿರ್ಭವಿಸಿದ ಮಂಥರಾಲಕ್ಷ್ಮಿ ಎಂಬುದನ್ನು ಇದು ಬರುಮಾಯಾಟವಲ್ಲ, ಆ ರೂಪು ಯಜ್ಞಜ್ವಾಲೆಯಲ್ಲಿ ಕಂಡು ಬಂದದ್ದಾದರೂ ಭರತನಿಗೆ ; ಅದೂ ಅವನು ಉಪವಾಸ ದೀಕ್ಷೆಗೊಂಡು ರಾಮಾಗಮನ ಪ್ರತೀಕ್ಷೆಯಲ್ಲಿ ತನ್ನ ಚಿತ್ತವನ್ನು ಕೇಂದ್ರಿಕರಿಸಿರುವಾಗ ; ಚಿತ್ತದ ಉತ್ತುಂಗ ಸ್ಥಿತಿಯಲ್ಲಿ. ಆದ್ದರಿಂದ ಅವನು ಕಂಡದ್ದು ಉಪವಾಸಜನ್ಯಭ್ರಮೆಯಲ್ಲ; ಕೇಳಿದ ಮಾತು ಸುಳ್ಳಲ್ಲ. ಇದೆಲ್ಲ ಒಂದು ವಿವರಣೆ. ಮತ್ತೊಂದು, ನಾವೆ ವಿವೇಚಿಸಬಹುದಾದ ಅಂಶ. ಮಂಥರೆ ನಿಜಕ್ಕೂ ಕಾರಣಳೆ. ಅಥವಾ ಕರಣಳೆ? ಕಾರಣ ಹೇಗಾದಾಳು? ಅವಳೇನೂ ರಾಮನನ್ನು ಕಾಡಿಗಟ್ಟುವಂತೆ ದಶರಥನಿಗೆ ತಿಳಿಸಲಿಲ್ಲ. ಅವಳ ಮಾತಿಗೆ ಬೆಲೆಯೂ ಇರುತ್ತಿರಲಿಲ್ಲ. ಕೈಕೆಯ ಮೂಲಕ ಆಯಿತಷ್ಟೆ. ಆದರೆ

ಅದಾದರೂ ಸ್ವಾರ್ಥ ಕಾರಣದಿಂದಾಯಿತೆ? ರಾಮಾಯಣ ಪರಿಪೂರ್ಣತೆಗೆ ಇವಳನ್ನು ಕರಣವಾಗಿ ಮಾಡಿಕೊಂಡಿತು ವಿಶ್ವಕವಿಯ ಚಿತ್ತ. ಅವಳು ಕನ್ನಡಿಯನ್ನ ತಂದುಕೊಡದಿದ್ದರೆಲ್ಲಿ ಶಿಶು ರಾಮ ಗಗನಚಂದ್ರನನ್ನು ಪಡೆಯುತ್ತಿದ್ದ? ಶ್ರೀರಾಮಚಂದ್ರನಾಗುತ್ತಿದ್ದ? ಲೋಕದ ಮಕ್ಕಳಂತೆಯೆ ಅವನೂ ಅಂಗಡಿಯ ಪೆಪ್ಪರಮೆಂಟಿನಿಂದಲೆ ತೃಪ್ತನಾಗಬೇಕಿತ್ತು, ಅವಳೇನಾದರೂ ಕನ್ನಡಿಯಲ್ಲಿ ದೇವರ ಪೆಪ್ಪರಮೆಂಟಾದ ಚಂದ್ರನನ್ನು ಹಿಡಿದು ತಾರದಿದ್ದರೆ. ಕೈಕೆಯ ಮೂಲಕವೆ ಕನ್ನಡಿ ಕಳಿಸಿಕೊಟ್ಟಳು. ರಾಮನಲ್ಲಿಗೆ ಹೋಗಲು ಅವಳಿಗೆ ಯಾವ ದಾರಿಯೂ ಇರಲಿಲ್ಲ. ಕೈಕೆಯ ಮೂಲಕವೆ ರಾಮನನ್ನು ಕಾಡಿಗೆ ಕಳಿಸುವಂತೆ ಏರ್ಪಡಿಸುತ್ತಾಳೆ. ಅದರಿಂದ ಅನಾಹುತವಾಯಿತು, ಸತ್ಯ. ಆದರೆ ರಾಮಚಂದ್ರ ಹಾಗಲ್ಲದೆ ಮತ್ತಾವ ಬಗೆಯಲ್ಲಿ ಕಾಡಿಗೆ ಹೋಗುವುದು ಸಾಧ್ಯವಿತ್ತು? ರಾವಣ ಸಂಹಾರವಾದರೂ ಆಗುತ್ತಿತ್ತು? ವಿಹಾರಾರ್ಥವಾಗಿಯಾಗಲಿ, ಜೈತ್ರಯಾತ್ರೆಯಿಂದಾಗಲಿ ಕಾಡಿಗೆ ಹೋಗಿ ರಾವಣನನ್ನು ಕೊಲ್ಲುವುದು ಸಾಧ್ಯವೆ ಇರಲಿಲ್ಲ. ಅವನು ಮಹಾ ಅಪರಾಧಿಸ್ಥಾನದಲ್ಲಿರುವಾಗಲೆ ಹಾಗೂ ತನ್ನ ಪಾಲಿಗೆ ಲೋಕಶಕ್ತಿಗಳ ನೆರವಿದ್ದಾಗಲೆ ರಾವಣನನ್ನು ಕೊಲ್ಲುವುದು ರಾಮನಿಗೆ ಕಷ್ಟವಾಯಿತೆಂಬುದನ್ನು ಮರೆಯಬಾರದು. ಹಾಗೂ ರಾವಣವಧೆಯೆ ರಾಮಾಗಮನದ ಉದ್ದೇಶವಲ್ಲ. ಎಷ್ಟೆಲ್ಲ ಜೀವರ ಸಂಸ್ಕಾರವಾಗಬೇಕಿರಲಿಲ್ಲ! ರಾಮ ಸೀತೆಯರ ಮಹತ್ತು ಲೋಕಕ್ಕೆ ತಿಳಿದು ಬಂದುದಾಗಲಿ, ಲಕ್ಷ್ಮಣ ಊರ್ಮಿಳಾ ಭರತಾದಿಗಳ ಮಹಾತ್ಯಾಗ ವ್ಯಕ್ತವಾದುದಾಗಲಿ, ಆಂಜನೇಯ ಸುಗ್ರೀವ ಜಟಾಯು ಶಬರಿಯರ ಅರ್ಪಣವೈಶಿಷ್ಟ್ಯ ಸ್ಪಷ್ಟವಾದುದಾಗಲಿ ಮತ್ತಾವ ವಿಧಾನದಿಂದ ಸಾಧ್ಯವಾಗುತ್ತಿತ್ತು? ಮಂಥರೆಯ ಮೂಲವಿಧಿ ರಾಮವನವಾಸವನ್ನು ನೆರವೇರಿಸುತ್ತದೆ. ವಿಕಾರದಂತೆ ತೋರಿದುದರ ಮೂಲಕವೆ ಮಹಾ ಪ್ರಕಾರವನ್ನು ಸಾಧಿಸುತ್ತದೆ.

ಇಷ್ಟೆಲ್ಲವನ್ನೂ ಮಂಥರೆಯಿಂದ ಸಾಧಿಸಿದ ವಿಧಿ ಅವಳನ್ನು ಬಹುಹಿಂದೆಯೆ ಸೃಷ್ಟಿಸಿಟ್ಟುಕೊಂಡಿರುತ್ತಾನೆ ; ಅತ್ಯಂತ ದೂಷಿತವಾದವಳನ್ನಾಗಿಯೆ ಬೆಳೆಸುತ್ತಾನೆ. ರಾಮನನ್ನವಳು ಕಾಡಿಗೆ ಕಳಿಸಲು ಯಾವ ಸ್ವಾರ್ಥವೂ ಕಾರಣವಾಗಿರದೆ ಕೇವಲ ಪರಾರ್ಥವೆ ಪ್ರೇರಣೆಯಾಗಿರುವಂತೆ ಅತ್ಯಂತ ಸಹಜವಾಗಿ ಅವಳ ಪಾತ್ರವನ್ನು ನಡೆಸಿಕೊಂಡು ಬಂದಿದ್ದಾರೆ, ಶ್ರೀಕವಿ. ಅವಳು ರಾಮನನ್ನು ಕಾಡಿಗೆ ಕಳುಹಿಸಿದುದಕ್ಕೆ ಭರತ ವ್ಯಾಮೋಹ ಕಾರಣವಾಗಿರುವಂತೆಯೆ ರಾಮನನ್ನು ಹಿಂತರಲೂ ಅದೇ ಕಾರಣವಾಗಿರುವಂತೆ ಅದ್ಭುತವಾಗಿ ಚಿತ್ರಿಸಿ ಅವಳ ಪಾತ್ರಕ್ಕೊಂದು ತಿರುವು ಕೊಟ್ಟಿದ್ದಾರೆ. ಆದರೆ ಮತ್ತಾವ ಕವಿಯಾಗಿದ್ದರೂ ಅವಳ ಪಾತ್ರವನ್ನು ಎಷ್ಟೆಲ್ಲಾ



ಮನೋವೈಜ್ಞಾನಿಕವಾಗಿಯೆ ಚಿತ್ರಿಸಿದ್ದೂ ಎಲ್ಲಿ ಕೈಬಿಡುತ್ತಿದ್ದನೊ ಅಲ್ಲಿಯೇ ಈ ಕವಿ ಅವಳ ಪರಿವರ್ತನವನ್ನು ಸಾಧಿಸಿದ್ದಾರೆ. ಕವಿ ಇಲ್ಲಿ ಅವಳು ಮಾಡಿದುದನ್ನು ವಾದಿಸುತ್ತಿರುವ ವಾಗ್ಮಿಲಾಯರಲ್ಲ, ಕಡೆಗೆ ನೀತಿವಾದಿಯೂ ಅಲ್ಲ. ನೀತಿಯ, ನ್ಯಾಯದ ನೆಲಗಟ್ಟಿನಲ್ಲೆ ಇಟ್ಟು ಪಾತ್ರಗಳನ್ನು ಬೆಳೆಸುವುದು ಲೋಕರಮ್ಯವೇ ಹೊರತು, ಆಧ್ಯಾತ್ಮಿಕಕ್ಷಮ್ಯವಲ್ಲ, ಆದ್ದರಿಂದಲೆ ಮಂಥರೆಯ ಪಾತ್ರದ ಪ್ರಾರಂಭಸಹಜತೆಯನ್ನಷ್ಟೆ ಪ್ರತಿಪಾದಿಸದೆ, ಅವಳ ಮಧ್ಯದ ಪರಿವರ್ತನೆಯನ್ನೂ ಆತ್ಯಂತಿಕವಾದ ಮಂಗಳಪರಿಣಾಮಶ್ರೀಯನ್ನೂ ಕವಿ ಪತ್ರಿಮಿಸಿದ್ದಾರೆ.

ಮಂಥರೆ ಸಹಜವಾಗಿಯೆ ಮಮತೆಯ ಸುಳಿಯಾಗಿದ್ದಳು. ಪ್ರೇಮಭೈರವಿಯಾಗಿದ್ದಳು; ಆದರೆ ಮಂಥರಾ ಲಕ್ಷ್ಮಿಯೂ ಆಗುತ್ತಾಳೆ – ಅದೂ ಅಸಹಜವಾಗಿಯಲ್ಲ ಆಧ್ಯಾತ್ಮಿಕ ಸಹಜವಾಗಿ. ಭೈರವ ಮಮತೆ ಮಹಾಮಂಗಲ ಶಿವಕರ ಪ್ರೇಮವಾಯಿತು. ಭಾವ ಪರಿವರ್ತನದಂತೆಯೆ ಭವವೂ – ಅವಳ ವಕ್ರಗೂನುದೇಹ ಯಜ್ಞಾಗ್ನಿ ಸುಂದರ ಶರೀರವಾಗುವ ಮೂಲಕ – ಪರಿವರ್ತನಗೊಳ್ಳುತ್ತದೆ. ಅಂದು ಅವಳು ಕಾಡುಗಿಚ್ಚಿನಲ್ಲಿ ಲಯವಾದಳು. ಇಂದು ಹುತಾಶನ ಶರೀರಿಯಾಗಿ ಮೈದೋರುತ್ತಾಳೆ. ಈ ಎರಡು ಅಗ್ನಿಗಳ ಮಧ್ಯೆ ಅವಳ ಪಾತ್ರ ವಿಹರಿಸುತ್ತದೆ. ಕಾಡುಗಿಚ್ಚು ಮಂಗಲ ಹುತಾಶನವಾಗಿ ಪರಿಣಾಮಗೊಳ್ಳುವ ಮಹಾದರ್ಶನ ಮಂಥರೆಯ ಪಾತ್ರದಲ್ಲಿ ಪ್ರತಿಮಿತವಾಗಿದೆ. ರಾಮಾಯಣದರ್ಶನದ ಪ್ರಧಾನ ಪತಿತ ಪಾತ್ರಗಳೆಲ್ಲವೂ ಹೀಗೆಯೆ ಪರಿಣಾಮಗೊಂಡಿವೆ. ಈ ಪರಿಣಾಮ ಏಕ ಕವಿಕೃತ ಮಾತ್ರವಲ್ಲ ; ಯುಗಕೃತ. ಬಹುಶಃ ಈ ಪಾತ್ರಪರಿಣಾಮ ನೂರು ವರ್ಷದ ಹಿಂದಿನತನಕವೂ ಸಾಧ್ಯವಾಗುತ್ತಿರಲಿಲ್ಲ. ನೀತಿಯ ದೃಷ್ಟಿಯಿಂದ ಪಾತ್ರಪ್ರತಿಷ್ಠಾಪನ ನಡೆಯಬಹುದಿತ್ತೇ ವಿನಾ ಹೀಗೆ ಸರ್ವಗ್ರಾಹ್ಯವಾದ ಆಧ್ಯಾತ್ಮಿಕ ಮೂಲವಾದ ದರ್ಶನ ದೃಷ್ಟಿಯಿಂದಾದ ಪರಿಣಾಮ ಸೃಷ್ಟಿಯಾಗುತ್ತಿರಲಿಲ್ಲ. ಮನೋವಿಜ್ಞಾನ, ಸಮಾಜವಿಜ್ಞಾನ, ಸಮಾಜವಾದ – ಪ್ರಜಾಪ್ರಭುತ್ವ ಹಾಗೂ ವ್ಯಾಪಕವಿಜ್ಞಾನಗಳೆಲ್ಲವೂ ಮಾನವ ಅಪರಾಧದ ಬಗೆಗೆ ಕ್ರಾಂತಿಕಾರಕದೃಷ್ಟಿ ಪರಿವರ್ತನ ಮಾಡಿವೆ. ಕೊಲೆಗೆ ಕೊಲೆ ಮದ್ದಲ್ಲವೆಂಬುದು ಧಾರ್ಮಿಕಾನುಭವವಾಗಿರದೆ, ಕೊಲೆಗಡುಕರಿಗೆ ಮರಣದಂಡನೆಯೂ ಅಸಾಧು ಎಂದು ಯೋಚಿಸುರುತ್ತಿವ ಈ ಯುಗಚಿಂತನ ಎತ್ತ ಹರಿಯುತ್ತಿದೆ ಎಂಬುದನ್ನು ತಿಳಿಯಬಹುದು. ಮನೋವಿಜ್ಞಾನವೇ ಮೊದಲಾದ ವಿಶೇಷ ಜ್ಞಾನಗಳ ಪ್ರಭಾವದ ಈ ಯುಗದಲ್ಲಿ ಹಳೆಯ ಮಂಥರೆ ಹೀಗಿಲ್ಲದೆ ಬೇರೆಂತು ಪರಿಣಾಮಗೊಳ್ಳದೆ ಉಳಿಯುವುದು? ಮಂಥರೆಯ ಪಾತ್ರ ಜಗತ್ತಿನ ಪತಿತ ಪಾತ್ರವನ್ನಷ್ಟೆ ಅಲ್ಲದೆ

ಪರಿತ್ಯಕ್ತವಾದ ನಿಕೃಷ್ಟವಾದ 'ದಸ್ಯು' ಜನಾಂಗವನ್ನೆ ಪ್ರತಿನಿಧಿಸುತ್ತದೆ.* ಯುಗಮನೋಧರ್ಮ ಈ ವಿಷಯದಲ್ಲಿ ವಾಲ್ಮೀಕಿಗಳ ಕಾಲಕ್ಕಿಂತ ಬೇರಾಗಿದೆ. ಅದು ಈ ಕಾವ್ಯದ ಈ ಪಾತ್ರ ಪ್ರತಿಮೆಯಲ್ಲೂ ಧ್ವನಿತವಾಗುತ್ತದೆ. ಆದರಿಷ್ಟೆ ಅಲ್ಲ ; ಅನಾಗತವಾದ ಭವಿಷ್ಯತ್ ಸ್ಥಿತಿ ಇಲ್ಲಿ ಅತ್ಯಂತ ಪ್ರಮುಖವಾಗಿ ಪ್ರತಿಮಿತವಾಗಿದೆ, ಆದ್ದರಿಂದ ಈ ಕಾವ್ಯದಲ್ಲಿ ವರ್ತಮಾನವನ್ನೆ ಅಲ್ಲ, ಭೂತವನ್ನೂ, ಎಲ್ಲಕ್ಕೂ ಉತ್ತಮಾಂಗ ಸ್ವರೂಪವಾದ 'ಅಭೂತ ವಿಭೂತಿ' ಭವಿಷ್ಯವನ್ನೂ ಕವಿ ನಮಗೆ ದರ್ಶಿಸುತ್ತಾರೆ.

"ವಾಲ್ಮೀಕಿ
ತಮಸೆಯಿಂ ತನ್ನೆಲೆವನೆಗೆ ಮರಳ್ದು, ಧ್ಯಾನದೊಳ್
ಮುಳುಗಿರಲ್, ಮಿಂಚಿತಯ್ ಕಾವ್ಯದಿವ್ಯಪ್ರಜ್ಞೆ,
ನವನವೋನ್ಮೇಷ ಶಾಲಿನಿ, ನಿತ್ಯತಾ ಪ್ರತಿಭೆ,
ಹೊಮ್ಮಿತಾ ದರ್ಶನಂ ಬಗೆಗಣ್ಗೆ ; ಚಿಮ್ಮಿದತ್ತೀ
ವರ್ಣನಂ ನಾಲಗೆಗೆ : ಪಿಡಿವೊಲಲ್ತಾದುದಕೆ
ಕನ್ನಡಿಯನಪ್ಪುದಕೆ ಮುನ್ನುಡಿಯನುಲಿವಂತೆಯುಂ,
ಕಂಡ ರಾಮಾಯಣವನೆಲ್ಲಮಂ ಕಂಡಂತೆ
ಹಾಡಿದನೊ, ಕೇಳ್ದ ಲೋಕಂಗಳೆಲ್ಲಂ ತಣಿವವೋಲ್,"

* * * *

---

* ಈ ಅರ್ಥ ಬರುವಂತಹ ಮಾತನ್ನು ಪ್ರೊ. ಜವರೇಗೌಡರು ಆಡಿದ್ದರು. ಅವರಿಗೆ ಈ ಅಂಶಕ್ಕಾಗಿ ಕೃತಜ್ಞ. (ಕುವೆಂಪು ಅವರಿಗೆ ಅರವತ್ತನೆಯ ಹುಟ್ಟು ಹಬ್ಬದ ಸಮಯದಲ್ಲಿ –೧೯೬೪ ಫೆಬ್ರವರಿಯಲ್ಲಿ ಮಹಾರಾಜಾಕಾಲೇಜಿನ ಕನ್ನಡ ಸಂಘದವರು ಒಪ್ಪಿಸಿದ 'ಕವಿಶೈಲ' ಸಂಭಾವನ ಗ್ರಂಥದಲ್ಲಿ ಪ್ರಕಟವಾದ ಲೇಖನವಿದು.)



## ಇಪ್ಪತ್ತನೆಯ ಶತಮಾನದಲ್ಲಿ 'ಶ್ರೀ ರಾಮಾಯಣದರ್ಶನಂ'

ಇಪ್ಪತ್ತನೆಯ ಶತಮಾನದ ಮಹಾ ವಿಕ್ಷುಬ್ಧ ಜೀವನವನ್ನು ಕಂಡು ಕೆಲವು ಕಾವ್ಯ ತತ್ವ ಚಿಂತನ ಶೀಲರು ಈ ಶತಮಾನದಲ್ಲಿ ಮಹಾಕಾವ್ಯ ಹುಟ್ಟಲಾರದು ಎಂದು ಭಾವಿಸುತ್ತಾರೆ. ಹೀಗಿದ್ದರೂ ಶ್ರೀ ಅರವಿಂದರ 'ಸಾಮಿತ್ರಿ', ಶ್ರೀ ಕುವೆಂಪು ಅವರ 'ಶ್ರೀ ರಾಮಾಯಣ ದರ್ಶನಂ', ಜಯಶಂಕರ ಪ್ರಸಾದರ 'ಕಾಮಾಯನಿ'ಗಳಂತಹ ಒಂದೆರಡು ಮಹಾಕಾವ್ಯಗಳು ಮೂಡಿಬಂದಿರುವುದನ್ನು ನಾವು ಕಾಣುತ್ತಿದ್ದೇವೆ. ಮೇಲಿನ ಭಾವನೆಯನ್ನೆ ಪ್ರತಿಪಾದಿಸುತ್ತಿದ್ದವರಿಗೆ ಈ ಕಾವ್ಯಗಳ ಹುಟ್ಟಿನಿಂದ ಒಂದು ರೀತಿಯ ದಿಗ್ಭ್ರಮೆಯಾಗಿ, ಅವರು ಆ ತಮ್ಮ ಹಳೆಯ ಭಾವನೆಯನ್ನೆ ಮತ್ತಷ್ಟೂ ಬಿಗಿಯಪ್ಪುವಂತೆ ಆಗಿದೆ. ಏನಾದರೊಂದು ವಾದ ಹೂಡಿ ಅವುಗಳನ್ನು ಮಹಾಕಾವ್ಯವೆಂದಾಗಲಿ, ಕಾವ್ಯಗಳೆಂದಾಗಲಿ ಒಪ್ಪುವುದೇ ಬೇಡವೆಂದು ಹಠಹಿಡಿದಿರುವಂತೆ ಕಾಣುತ್ತದೆ. ಅಂತು ಇಂಥ ಅಸ್ತವ್ಯಸ್ತ ಭಾವನೆಗಳ ನಡುವೆಯೂ ಈ ಕಾವ್ಯಗಳ ಅಭ್ಯಾಸ ಸಾಗುತ್ತಿದೆ.

ಮೇಲಿನ ಆ ಭಾವನೆಗೆ ನಾಲ್ಕಾರು ಕಾರಣಗಳಿರುವುದನ್ನು ಗಮನಿಸಬೇಕು. ಮೊದಲನೆಯ ಕಾರಣ ಮಹಾಕಾವ್ಯದ ಮೂಲಕ್ಕೆ ಸಂಬಂಧಿಸಿದುದು. ಮಹಾಕಾವ್ಯ ಒಂದು ಜನಾಂಗದ ವೀರಜೀವನದ ಇತಿಹಾಸ; ವೀರರ ಕಥೆ. ಹೀಗಿರಬೇಕಾದರೆ ನಮ್ಮಕಾಲದಲ್ಲಿ ರಾಮ ಕೃಷ್ಣರ ಕಾಲದ ವೀರಜೀವನವನ್ನಾಗಲಿ, ಅಗಮೆಮ್ನಾನ್, ಯೂಲಿಸಿಸ್ಸರ ಕಾಲದ ವೀರಜೀವನವನ್ನಾಗಲಿ ಎಲ್ಲಿ ಕಾಣುವುದು ? ಅಂತೆಯೆ ಈ ನಮ್ಮ ವಿಜ್ಞಾನ ಯುಗದಲ್ಲಿ ಅಂಥ ಮಹಾಕಾವ್ಯವನ್ನಾದರೂ ಎಲ್ಲಿ ತರುವುದು? ಈ ದೃಷ್ಟಿಯಿಂದ ಇಂದು ಹುಟ್ಟಿರುವ ಕಾವ್ಯಗಳು ನಮ್ಮ ಯುಗದ ಜೀವನಕ್ಕೆ sincere ಆಗಿಲ್ಲ ; ಅವು ಕೃತಕ ; ಇತ್ಯಾದಿ ವಾದ ಒಂದು. ಎರಡನೆಯ ವಾದ ಈ ವಾದಕ್ಕೂ ಒಂದಂಗುಲ ಮುಂದೆ ಹೋಗುತ್ತದೆ : ಜನಜೀವನದ ಸಂಸ್ಕಾರದ

---

ಈ ಲೇಖನ ೧೯೫೬ರಲ್ಲಿ ಮುದ್ರಣಗೊಂಡು ಪ್ರಕಾಶನ ಕಾಣದ ಪುಸ್ತಕವಂದರಲ್ಲೆ ಉಸಿರು ಕಟ್ಟಿಕೊಂಡಿದ್ದು ೧೯೭೮ರಲ್ಲಿ ಯದ್ವತ್ತಾಗಿ ಪುನರ್ ಮುದ್ರಣಗೊಂಡಿತು.

ಸಂಕೇತವಾದ ಸಂಸ್ಕೃತಿ ಕೆನೆಗಟ್ಟಿದಾಗ ಒಂದು ಮಹಾಕಾವ್ಯ ಹುಟ್ಟೀತು. ಆದರೆ ಈ ವೈಜ್ಞಾನಿಕ ಯುಗದ ಅಲ್ಲೋಲಕಲ್ಲೋಲಗಳ ನಡುವೆ, ಹಳತು ಹೊಸತುಗಳ ವಿಶ್ವಾಸಾವಿಶ್ವಾಸಗಳ ಸಂಘರ್ಷಣೆಗಳ ನಡುವೆ, ಜೀವನ ಹೆಪ್ಪುಗಟ್ಟುವುದಾದರೂ ಹೇಗೆ ? ಇಂತಹ ಒಂದು ಸ್ಥಿತಿಯಲ್ಲಿ ಮಹಾಕಾವ್ಯ ಹುಟ್ಟಿಕೊಂಡರೂ ಅದು ಸಹಜಕೃತಿಯಾಗದು. ಮತ್ತೆ ಈ ಯುಗ ಜೀವನದ ಪ್ರಧಾನ ಲಕ್ಷಣ ವಿಚ್ಛಿದ್ರತೆ, ಅಶಾಂತಿ. ಇದನ್ನು ಪ್ರತಿಮಿಸಬೇಕಾದರೆ ಛಿದ್ರರೂಪಕಗಳೆ ಬೇಕು. ರಾಮಾಯಣ ಭಾರತಗಳ ಪುರಾಣ ಪ್ರತಿಮೆಗಳು ಇಂತಹ ಕೆಲಸವನ್ನು ಮಾಡುವುದಿಲ್ಲ, ಎಂದು ಈ ವಾದ ತನ್ನ ಅಭಿಪ್ರಾಯವನ್ನು ಮಂಡಿಸುತ್ತದೆ. ಮತ್ತೊಂದು ವಾದವೆಂದರೆ ಎಂದೊ ನಡೆದ ರಾಮಾಯಣ ಮಹಾಭಾರತಗಳನ್ನೆ ಇಂದೂ ಬರೆಯಹೊರಡುವುದು ವರ್ತಮಾನದೂರರಾದ ಜೀವಿಗಳು ಒಪ್ಪಬಹುದಾದ ಕೆಲಸ. ನಮ್ಮ ಕಾಲದ ಜೀವನವನ್ನೆ, ಇಲ್ಲವೆ ನಮ್ಮ ಹಿಂದಿನ ಚಾರಿತ್ರಿಕ ಘಟನೆಗಳನ್ನೆ ಕಾವ್ಯವಸ್ತುವನ್ನಾಗಿ ಏಕೆ ತೆಗೆದುಕೊಳ್ಳಬಾರದು? ಹಳತನ್ನು ಬರೆಯುವುದರಲ್ಲಿ ಹೊಸತನ್ನು ಸೃಷ್ಟಿಸಿದಂತಾಯಿತೆ ?

ಇವುಗಳಿಗೆ ಒಂದೊಂದಕ್ಕೆ ಸಮರ್ಪಕವಾಗುವಂತೆ ಹೀಗೆ ಉತ್ತರ ಕೊಡಬಹುದೇನೊ : ವೀರಜೀವನ ಮತ್ತು ವೀರಪಾತ್ರವನ್ನು ಚಿತ್ರಿಸುವ ಕಾವ್ಯ ಮಹಾಕಾವ್ಯ ಎಂದು ಒಪ್ಪಿದ ಮನಸ್ಸು ಇತ್ತೀಚಿನ ಜೀವನದಲ್ಲಿ ಮತ್ತು ಕಾವ್ಯಗಳಲ್ಲಿ ಅಂತಹದೇ ಜೀವನವನ್ನು ಕಾಣಲೆಳಸುವುದು ಸಹಜವೇ ಆಗಿದೆ. ಆದರೆ ವೀರಜೀವನವೆಂದರೆ ಯಾವುದು ? ಅದು ಕಾಲಕಾಲಕ್ಕೆ ವ್ಯತ್ಯಾಸವಾಗುವುದಿರಲಿ, ದೇಶದೇಶಕ್ಕೆ ವ್ಯತ್ಯಾಸವಾಗುವುದನ್ನೂ ನಾವು ಕಾಣುತ್ತೇವೆ. 'ಇಲಿಯಡ್' ಕಾವ್ಯದ ದೈತ್ಯ ವೀರರಿಗೂ ಮಹಾಭಾರತದ, ಅದಕ್ಕಿಂತ ಮಿಗಿಲಾದ ರಾಮಾಯಣದ ವೀರರಿಗೂ ಬಹಳ ವ್ಯತ್ಯಾಸವಿರುವಂತೆ ತೋರುತ್ತದೆ. ಪ್ಯಾರಿಸ್ ಕದ್ದೊಯ್ದ ಜಾರಸತಿಯನ್ನು ಪುನರಪಿ ಪಡೆಯುವುದಕ್ಕಾಗಿ ಪಟ್ಟ ಪಾಡು, ಸುಟ್ಟ ನಾಡು, ಪಡೆದ ಪ್ರತಿಫಲ ಎಲ್ಲವನ್ನೂ ಒಂದು ಕಡೆ ಇಲಿಯಡ್ ಮಹಾಕಾವ್ಯದಲ್ಲಿ ಹೋಮರನು ಕಂಡರೆ, ಬಾಹ್ಯರೂಪದಲ್ಲಿ ಇದನ್ನೆ ಹೋಲಬಹುದಾದರೂ ತೀವ್ರ ಭಿನ್ನವಾದ ಕಥೆಯೊಂದನ್ನು ರಾಮಾಯಣದಲ್ಲಿ ಕಾಣುತ್ತೇವೆ. ರಾವಣ ಕುಂಭಕರ್ಣರು ಮಾತ್ರವೇ ವೀರರಲ್ಲ, ರಾಮ ಲಕ್ಷ್ಮಣ ಸೀತೆಯರೂ ವೀರರೆ. ಎಲ್ಲರಿಗಿಂತಲೂ ಮಿಗಿಲಾಗಿ ಎಲ್ಲರ ಕಣ್ಣನ್ನೂ ಮೀರಿ ಬೆಳೆಯುವ ಸೀತಾ ಮಂಡೋದರಿಯರು ವೀರತಮವ್ಯಕ್ತಿಗಳೇ ಆಗಿದ್ದಾರೆ. ಈ ವ್ಯಕ್ತಿಗಳಿಗೆ ಹೊಯ್ ಕಯ್ಯಾಗುವ, ಕೊನೆಗೆ ಅವರ ನೆನಪಿಗೆ ಧಕ್ಕೆ ತರದಿರುವ ವೀರರನ್ನು ಅಥವಾ



ವೀರ ರಮಣಿಯರನ್ನು ಕಾಣುವುದೂ ಕಷ್ಟವಾಗುತ್ತದೆ.

ಇದೇ ವೀರಜೀವನ ಡಾಂಟೆಯ 'ಡಿವೈನ್ ಕಾಮೆಡಿ'ಯಲ್ಲಿ ಆತ್ಮನ, ಸ್ವರ್ಗಾರೋಹಣಶೀಲ ಯಾತ್ರಿಕನ ಜೀವನವಾಗುತ್ತದೆ. ಹೀಗಿರುವಲ್ಲಿ ವೀರಜೀವನ, ವೀರ ಯೋಧ ಎಂದರೆ ಒಂದೇ ಅರ್ಥವೇನು? ಸ್ವಾತಂತ್ರ್ಯಕ್ಕಾಗಿ ಅರೆನಗ್ನನಾಗಿ ಸೆಟೆದೆದ್ದು ನಿಂತು ಅಖಂಡ ರಾಷ್ಟ್ರಶಕ್ತಿಯನ್ನೆ ತನ್ನ ಹಿಂದೆ ಕೊಂಡೊಯ್ದ ಮಹಾಬಲ – ದುರ್ಬಲ ಶರೀರನಾದ ಗಾಂಧಿಯ ಜೀವನ ವೀರಜೀವನವಲ್ಲವೇನು? ಭಿನ್ನ ಭಿನ್ನವಾದ ಋಜು ಜಟಿಲ ಕುಟಿಲ ಮಾರ್ಗಗಳಲ್ಲೆಲ್ಲ ಭಗವಂತನನ್ನು ಸಾಕ್ಷಾತ್ಕರಿಸಿಕೊಂಡು ಸರ್ವಸಮನ್ವಯ ದರ್ಶನದ ಮಹಾಸಂಗಮಸ್ಥಾನವಾಗಿ ಪರಿಣಮಿಸಿದ ಶ್ರೀ ರಾಮಕೃಷ್ಣರು ವೀರರಲ್ಲವೆ? ಅಷ್ಟೆ ಏಕೆ? ಪ್ರಕೃತಿಯ ನಿಗೂಢತಮ ಶಕ್ತಿಗಳೆಲ್ಲವನ್ನು ನಿದ್ದೆಗೆಡಿಸಿ ಬಡಿದೆಬ್ಬಿಸಿ ಹೊರ ತೆಗೆದು ಕಾಣುತ್ತಿರುವ, ಅಣು ಅಣುವನ್ನು ಸಿಡಿಸಿ ಸೃಷ್ಟಿಯ ಪೂರ್ಣ ವಿರಾಮದೆಡೆಗೆ ನಾವೆಲ್ಲ ಬಂದಿರುವೆವೇನೋ ಎಂಬ ಭೀತಿಯನ್ನೂ ಉಂಟುಮಾಡುತ್ತಿರುವ ವಿಜ್ಞಾನಿ ವೀರನಲ್ಲವೇನು? ಅಷ್ಟೂ ಬೇಡ; ಅಸ್ತ್ರ ಶಸ್ತ್ರಗಳ ಬಲ ಅಷ್ಟಾಗಿಲ್ಲದಿದ್ದರೂ ಬಲವದ್ರಾಷ್ಟ್ರಗಳ ಘರ್ಷಣೆಗಳೆಲ್ಲವನ್ನೂ ತನ್ನ ವೀರ ಶಾಂತಿಮಂತ್ರದಿಂದಲೆ ತಡೆಗಟ್ಟಿ ಎಲ್ಲರಿಗೂ ವಿಸ್ಮಯಾನುಭವವನ್ನು ಮಾಡುತ್ತಿರುವ ಭಾರತವಾಗಲಿ ಅದರ ಶ್ರೇಷ್ಠ ನಾಯಕರಾಗಲಿ ವೀರರಲ್ಲವೇನು? ವೀರ ಜೀವನವೆಂದರೆ ಡಾನ್‌ಜೊ ಜೀವನ ಯಾತ್ರೆ ಮಾತ್ರವಲ್ಲ ಎಂಬುದನ್ನು ನಾವು ಅರಿಯಬೇಕಾಗಿದೆ. ಇಂತಹ ವೀರಜೀವನವನ್ನು ಭೌತ ಮತ್ತು ಅಭೌತ ಪ್ರಪಂಚಗಳಲ್ಲಿ ಯಾದೃಚ್ಛಿಕವಾಗಿ ಕಾಣುತ್ತಿರುವ ಈ ಯುಗವಾಗಲಿ, ದೇಶವಾಗಲಿ ವೀರಸಂಪನ್ನವಲ್ಲವೆನ್ನಲಾಗುವುದಿಲ್ಲ; ಅದು ಮಹಾಕಾವ್ಯ ವಸ್ತುವಾಗದು ಎನ್ನಲಾಗುವುದಿಲ್ಲ.

ಎರಡನೆಯ ಪ್ರಶ್ನೆಗೆ ಕೊಡಬೇಕಾದ ಉತ್ತರ ಸ್ವಲ್ಪ ಕಷ್ಟತರವಾಗಿದೆ. ಮಹಾಕಾವ್ಯ ಒಂದು ಜನಾಂಗದ ಸಾರಸರ್ವಸ್ವವಾದ ಸಂಸ್ಕೃತಿಯು ಕೆನೆಗಟ್ಟಿದಾಗ ಹುಟ್ಟಿ ಬರುತ್ತದೆ ಎಂಬ ಮಾತು ಒಪ್ಪಬೇಕಾದ್ದೆ. ಮಹಾಭಾರತ ರಾಮಾಯಣಗಳು ಈ ದೃಷ್ಟಿಯಲ್ಲಿ ಮಹಾಕಾವ್ಯಗಳೆ. ಅಂದಿನ ಆ ಕಾಲ ಆದದ್ದು, ಕಂಡದ್ದು ಎಲ್ಲವೂ ಆ ಮೇರು ಕೃತಿಗಳಲ್ಲಿ ಮೈದಾಳಿದುವು. ಹೀಗೆ ನೋಡುವಾಗ ಪ್ರತಿಯೊಂದು ಯುಗವೂ ತನ್ನದೇ ಆದ ರೀತಿಯಲ್ಲಿ ಒಂದು ಸಂಸ್ಕೃತಿಯ ಮಟ್ಟ ಮುಟ್ಟುವುದನ್ನು ಕಾಣುತ್ತೇವೆ. ಅದನ್ನು ಅದು ಅಂದಿನ ಇಲ್ಲವೆ ತನ್ನ ಹಿಂದಿನ ಮಾಧ್ಯಮಗಳಲ್ಲಿ ಅಭಿವ್ಯಕ್ತಗೊಳಿಸುವುದನ್ನು ನೋಡಬಹುದು. ಆದರೆ ಇಂದು ಬರುವ ಕೃತಿಗಳು ಆ ಮೇರುಕೃತಿಗನ್ನು ಮರೆಸುವಂತಾಗಲಾರವಲ್ಲ ಎಂದು ಮನಸ್ಸು ತುಡಿಯುತ್ತಲೆ

ಇರುತ್ತದೆ. ಇದಕ್ಕೆ ಕಾರಣವಿಲ್ಲದಿಲ್ಲ. ಆದಿಕಾಲದಲ್ಲಿ ಮೂಡಿಬಂದ ಆ ಕಾವ್ಯಗಳು ಆ ಕಾಲ ಮುಟ್ಟಿದ ಎತ್ತರವನ್ನು ಸಾರುತ್ತಿವೆ. ಜೀವನ ಆ ಕಾಲದ ಎತ್ತರಕ್ಕೆ ಬರಬೇಕಾದರೆ ಎಷ್ಟು ಸಹಸ್ರವರ್ಷಗಳು ಉರುಳಿಹೋದುವೆಂದು ನಾವು ಯೋಚಿಸುವುದೇ ಇಲ್ಲ. ವೇದವೇದಾಂತಗಳೂ ಆ ಕಾಲಕ್ಕೆ ಹಿಂದೆಯೇ ಉರುಳಿಹೋಗಿದ್ದುವು. ಅಷ್ಟೆಲ್ಲ ಯುಗದ ಜೀವನಪರಿಪಾಕವೂ ಆ ಕಾವ್ಯಗಳ ಕಾಲಕ್ಕೆ ಮೈದಾಳಿಕೊಳ್ಳಲು ಸಾಧ್ಯವಾಯಿತು. ಇಂದು ನಾವು ಅಂದಿನಿಂದೀಚೆ ಎರಡು ಮೂರು ಸಾವಿರ ವರ್ಷ ಬಂದಿದ್ದರೂ ಎಷ್ಟು ಬೆಳೆದಿದ್ದೇವೆ ? ಆದಿಕಾಲದಲ್ಲಿ ಬೆಳೆದದ್ದೆ ಬೆಳವಣಿಗೆಯಾಗಿದ್ದಿತು. ಇಂದಿನ ಎಂತಹ ಬೆಳೆಯೂ ಆ ಎತ್ತರವನ್ನು ಮುಟ್ಟಲಾರದೆಂಬಂತೆ ತೋರಬಹುದು. ಆದರೂ ಅಂತರಂಗದಲ್ಲಿ ಊರ್ಧ್ವಗಾಮಿಯಾಗಿರುವ ಮಾನವಚೇತನ ಎಷ್ಟು ಬೆಳೆದಿದೆ ಎಂಬುದು ಇಂದು ನೋಡಿದೊಡನೆಯೆ ನಮಗೆ ಕಾಣದಿದ್ದರೂ ದ್ರಷ್ಟಾರರಿಗೆ ಅದು ಗೋಚರವಾಗದಿರದು. ಇಪ್ಪತ್ತನೆಯ ಶತಮಾನದ ಬಾಹ್ಯ ವಿಕ್ಷುಬ್ಧ ಜೀವನವನ್ನು ಕಂಡಾಗ ಜಗತ್ತು ವಿನಾಶದ ಸಮೀಪವರ್ತಿಯಾಗಿದೆ ಎನಿಸಿದರೂ ಅರವಿಂದ ದೃಷ್ಟಿಗೆ ಅದು ತಪ್ಪಾಗಿ ತೋರುತ್ತದೆ. ರಾಮಕೃಷ್ಣ, ವಿವೇಕಾನಂದರನ್ನು, ಗಾಂಧಿ, ಅರವಿಂದ, ರಮಣರನ್ನು ಪಡೆದ ಈ ಯುಗ ದಿಟಕ್ಕೂ ಬಂಜೆಯಲ್ಲ. ದೊಂಬಿಯಿಂದ ತಲೆ ಕೆಡುವಂತಾಗಿಯಾದರೂ ಶಾಂತಿ ಮಂತ್ರವನ್ನು ಎಲ್ಲರೂ ಪಠಿಸುವಂತಾಗಿರುವುದನ್ನು ನೋಡುತ್ತಿದ್ದೇವೆ. ಇಪ್ಪತ್ತನೆಯ ಶತಮಾನ ವೈಜ್ಞಾನಿಕವಾಗಿ ಹೇಗೆ ಉಚ್ಛ್ರಾಯಸ್ಥಿತಿಯನ್ನೈದಿದೆಯೋ ಹಾಗೆಯೆ ಆಧ್ಯಾತ್ಮಿಕವಾಗಿ ಪುನರುಜ್ಜೀವನಗೊಂಡು ತನ್ನ ಅಖಂಡ ಶಕ್ತಿಯನ್ನು ಸಮಗ್ರವಾಗಿ ಸಂಚಯನಗೊಳಿಸಿಕೊಳ್ಳುತ್ತಿರುವುದನ್ನು ಕಾಣುತ್ತೇವೆ. ಸರ್ವಸಮನ್ವಯ ದರ್ಶನವನ್ನು, ಪೂರ್ಣದೃಷ್ಟಿಯ ದೃಷ್ಟಿಯನ್ನು ಪಡೆದ ಈ ಯುಗ ಆ ಹಳೆಯ ಯುಗವನ್ನು ಮರೆಸಿಲ್ಲ ಮರೆತಿಲ್ಲ, ಇಂತಹ ಯುಗ ತನ್ನ ನಾಲಗೆಯನ್ನು ಮಹಾಕಾವ್ಯಗಳಲ್ಲಿ ಕಂಡುಕೊಳ್ಳುವುದು ಸಹಜವೇ ಸರಿ.

ಸಾಮಾನ್ಯವಾಗಿ ಗಡಿಬಿಡಿಯ ಶತಮಾನವೆಂದು ನಮ್ಮ ಯುಗವನ್ನು ಕರೆಯುವ ಜನರಿಗೆ ಮೇಲಿನ ಮಾತುಗಳು ಸಹ್ಯವಾಗಿ ತೋರುವುದು ಕಷ್ಟ. ಒಬ್ಬ ವ್ಯಕ್ತಿಯ ಮನಸ್ಸಿಗೆ ಹೇಗೆ ಹಲವಾರು ಸ್ತರಗಳುಂಟೊ ಹಾಗೆಯೆ ರಾಷ್ಟ್ರಕ್ಕೂ, ಯುಗಕ್ಕೂ ಹಲವಾರು ಸ್ತರಗಳುಂಟು. ಒಬ್ಬನಿಗೆ ಜಗತ್ತು ಹಾಳಾಯಿತು ಎಂದು ತೋರಿದ್ದರೆ, ಮತ್ತೊಬ್ಬನಿಗೆ ಹಾಗೇನಿಲ್ಲ ಎಂದೆನಿಸಿರಬಹುದು. ಮುಳುಗುವ ನರಿ ಜಗತ್ತೇ ಮುಳುಗಿತೆನ್ನುವುದು ನಿಜವಾಗಿಯೂ ಸತ್ಯ. ಕಕ್ಕೆಯ ಕಾಯಿ ತಿಂದ



ನರಿ ಜಗತ್ತೆಲ್ಲ ಅವ್ಯವಸ್ಥಿತವಾಗಿ ತಿರುಗುತ್ತಿದೆ ಎನ್ನುವುದೂ ಸತ್ಯವೆ. ನೆಳಲಿನಲ್ಲಿ ಮಲಗಿ ಅರೆಗಣ್ಣು ಮುಚ್ಚಿಕೊಂಡು ಮಗುವಿಗೆ ಹಾಲೂಡಿರುವ ತಾಯಿನರಿಗೆ ಜಗತ್ತು ವಾತ್ಸಲ್ಯದ ಹಾಲು ಹಿಳಿದಂತೆ ಕಾಣುತ್ತಿದ್ದರೆ ತಪ್ಪೇನಿಲ್ಲ. ಇಪ್ಪತ್ತನೆಯ ಶತಮಾನವನ್ನು ವರ್ಣಿಸು ಎಂದು ಶೆಟ್ಟರ ಅಂಗಡಿಗೆ ಹೋಗಿ ಕೇಳಿದರೆ ಅವರು ತಮ್ಮ ಅಳತೆ, ತೂಕ, ಧಾರಣೆಗಳ ಬೆಲೆಯಲ್ಲಿ ಅದರ ಮೌಲ್ಯ ನಿರ್ಧಾರ ಮಾಡುತ್ತಾರೆ. ಬಟ್ಟೆ ಹೊಲಿಯುವವನ ಹತ್ತಿರ ಹೋದರೆ ಡಬ್ಬಲ್ ಕಫ್ ಯುಗ, ಬುಷ್‌ಕೋಟ್ ಯುಗ, ಜುಬ್ಬಾಯುಗ ಇತ್ಯಾದಿಯಾಗಿ ಹೇಳಬಹುದು. ಯುದ್ಧದಗ್ಧರಾದ ನಾಗಸಾಕಿಯ ಜನ ಬೇರೆಯ ಘೋರವನ್ನು ತಿಳಿಸುತ್ತಾರೆ. ಆದರೆ ಪಾಂಡಿಚೆರಿಯ ಋಷಿ ಈ ಎಲ್ಲಕ್ಕೂ ಬೇರೆ ಹೇಳುತ್ತಾರೆ. ಒಬ್ಬೊಬ್ಬರೂ ಒಂದೊಂದು ಬಗೆಯಿಂದ ಹೇಳಿದರೂ ಮುಗಿಯದ ಯುಗಜೀವನವು ತನ್ನ ಜೀವನಾಡಿಯನ್ನು ಮತ್ತೆಲ್ಲೊ ಮಿಡಿಸುತ್ತಿರುತ್ತದೆ. ಎಲ್ಲರ ಹೇಳಿಕೆಯಲ್ಲೂ ಮೇಲು ನೋಟಕ್ಕೆ ಗಡಿಬಿಡಿ, ಅಶಾಂತಿ ಕಂಡುಬಂದರೂ ಒಳಬಗೆದು ನೋಡಿದಾಗ ಅಲ್ಲಿ ಯಾವುದೊ ಕಾಣದುದರ ಅನ್ವೇಷಣೆ, ಶಾಶ್ವತತರವಾದುದರ ಹಂಬಲ ಇರುವಂತೆ ಕಾಣುತ್ತದೆ. ಮೇಲೆ ಉಂಟಾಗುವ ಬಿರುಗಾಳಿ ಭೂಮಿಯ ಒಳಗನ್ನೂ ಅಲುಗಾಡಿಸಿರಬಹುದೆಂದು ಬಗೆಯುವುದು ಸಹಜ. ಆಯಾ ಸ್ತರ ತರಂಗಗಳಿಗೆ ಶ್ರುತಿ ಇಟ್ಟುಕೊಂಡ ಮತಿಯಂತ್ರ ಆಯಾ ಗೀತಗಳನ್ನು ಮಾತ್ರ ಕೇಳಬಲ್ಲದು. ಭೂಮಿಯ ಯಾವ ಬಾಹ್ಯಾಂತರ ಕ್ಷೋಭೆಗೂ ಒಳಗಾಗದ ಕೆಲವು ಭೂಮ್ಯಂತರಂಗ ಪ್ರದೇಶಗಳುಂಟು. ಇಂತಹ ಪ್ರದೇಶಗಳು ಸೂಕ್ಷ್ಮತಮ ಯಂತ್ರಗಳಿಗೆ ಮಾತ್ರ ಗೋಚರಿಸುತ್ತವೆ. ನೆಲದೊಳಗಿರುವ ರೇಡಿಯಂ ಅದಿರು “ರೆಡಿಯಂ ಡಿಟೆಕ್ಟರಿ”ಗೆ ಗೋಚರಿಸಿದರೂ ಭೂಮಿಯಮೇಲಿರುವ ಮತ್ತಾವ ವಸ್ತುವೂ ಆ ಶೋಧನ ಯಂತ್ರಕ್ಕೆ ಗೋಚರಿಸುವುದೆ ಇಲ್ಲ. ಕಾವ್ಯದಲ್ಲೂ ಹಲವಾರು ಸ್ತರಗಳಿರುವುದರಿಂದ ಆಯಾ ಸ್ತರದ ಸಮಷ್ಟಿ ಚೇತನ ಆಯಾಸ್ತರದ ಕಾವ್ಯಗಳ ಮೂಲಕ ತಮ್ಮ ಹೊರಮೂಡಿಕೆಯನ್ನು ಕಂಡುಕೊಳ್ಳತ್ತದೆ. ಆದ್ದರಿಂದ ‘ಶ್ರೀರಾಮಾಯಣ ದರ್ಶನ’ದಲ್ಲಾಗಲಿ ‘ಸಾವಿತ್ರಿ’ ಯಲ್ಲಾಗಲಿ ಅಭಿವ್ಯಕ್ತಿ ಪಡೆದಿರುವ ಯುಗ ಚೇತನ ನಮಗೆ ಗೋಚರವಾಗದಿರುವಂತೆ ಭ್ರಮೆಯನ್ನುಂಟುಮಾಡುತ್ತಿದ್ದರೂ ಮಿಥ್ಯವಲ್ಲ. ರಾಮಕೃಷ್ಮಪರಮಹಂಸರ, ಗಾಂಧೀಜಿ ಅರವಿಂದರ ದರ್ಶನ ಲೋಕದ ಕಣ್ಣಿಗೆ ಅವಾಸ್ತವವಾಗಿ ಕಂಡಂತೆ ಆ ದರ್ಶವನ್ನು ಪ್ರತಿಮಿಸುವ ಕಾವ್ಯಗಳೂ ಅವಾಸ್ತವವಾಗಿ ತೋರಬಹುದು. ಆಶ್ಚರ್ಯವೇನಿಲ್ಲ. ಆದ್ದರಿಂದಲೆ ನಮ್ಮ ಶತಮಾನದ ಜೀವನದ ಇತಿಮಿತಿ ಹೀಗೇ

ಇದೆಯೆಂದು ಹೇಳಹೊರಡುವುದು ವಿವೇಕವಲ್ಲ.

ಆದರೆ ಈ ಯುಗದ ಗಡಿಬಿಡಿ ಅಸತ್ಯವೆ ? ಇದಕ್ಕೆ ಕುರುಡಾಗಿರುವುದೇ? ಎಂಬ ಪ್ರಶ್ನೆ ಬರುತ್ತದೆ. ಇದು ಕೆಲವರ ಅನುಭವಸತ್ಯ. ವಿಕಾಸವಾದವನ್ನೂ ಪರಿಣಾಮವಾದವನ್ನೂ ತಾರ್ಕಿಕವಾಗಿಯಾದರೂ ಒಪ್ಪಿಕೊಂಡ ಮತಿಯೂ ಇದೇ ನಿತ್ಯವೆಂದು ಒಪ್ಪಲಾರದು. ಮಹಾಕವಿ ಇವುಗಳಿಗೆ ಕಿವುಡಾಗಿರುತ್ತಾನೆಂದಲ್ಲ. ಆದರೆ ಅವನು ಗಡಿಬಿಡಿಯಲ್ಲೆ ತಲೆಕೆಡಸಿಕೊಳ್ಳಬೇಕಾಗಿಲ್ಲ. ಇದೆಲ್ಲ ನಿತ್ಯವರ್ಧನ ಶೀಲವಾದ ಸೃಷ್ಟಿ ಚೇತನದ ತೊಗಟೆ ಮಾತ್ರ. ಕವಿಯ ಕಣ್ಣು ಅನುಭವಸತ್ಯಗಳ ಆಚೆಗಿರುವ ಪರಮ ಸತ್ಯದತ್ತ. ಅವನು ತ್ರಿವಿಕ್ರಮ ಈ ದೃಷ್ಟಿಯಲ್ಲಿ. ವಾಲ್ಮೀಕಿ ವ್ಯಾಸರ ಕೃತಿಗಳಲ್ಲೂ ಆಕಾಲದ ಡೈರಿಯನ್ನು ಕಾಣುವುದಿಲ್ಲ. ಅದು ಅಲ್ಲಿ ಎಷ್ಟೋ ಪರಿಣಾಮಗೊಂಡಿರುವುದನ್ನು ಕಾಣುತ್ತೇವೆ.

ಇನ್ನು ಒಂದು ಪ್ರಶ್ನೆ ; ಅದು ಪುರಾಣವನ್ನೆ ಕಾವ್ಯವಸ್ತುವನ್ನಾಗಿ ತೆಗೆದುಕೊಳ್ಳುವುದಕ್ಕೆ ಸಂಬಂಧಿಸಿದ ಆಕ್ಷೇಪಣೆ. ನಮ್ಮ ಯುಗದಲ್ಲಿ ಇದ್ದುಕೊಂಡೂ ಅನ್ಯಯುಗದ, ಪುರಾಣದ ಕಥೆಯನ್ನು ಕಾವ್ಯವಸ್ತುವಿಗೆಂದು ಆಶ್ರಯಿಸುವುದು ಕಂದಾಚಾರ ; ಅದರಲ್ಲಿ ಸೃಷ್ಟಿಯೇನೂ ಇಲ್ಲ ; ಹೊಸತನವೂ ಇಲ್ಲ. ಇದಕ್ಕೆ ಉತ್ತರ ಹೀಗೆ ಹೇಳಬಹುದು ; ನಾವು ಇಂದು ಬದುಕುತ್ತಿದ್ದರೂ ಭೂಮ್ಯೋಪಮವಾದ ಹಿಂದಿನ ಮೇಲೆ ನಿಂತಿದ್ದೇವೆ. ಇಂದಿನ ನಮ್ಮ ಜೀವನ ಅದರಿಂದ ಎಷ್ಟರಮಟ್ಟಿಗೆ ನಿರ್ದೇಶಿತವಾಗುತ್ತಿದೆ ಎಂಬುದನ್ನು ಕೂಡಿ ಕಳೆದು ಲೆಕ್ಕಹಾಕುವ ಲೆಕ್ಕಿಗರಿನ್ನೂ ಹುಟ್ಟಿಲ್ಲ. ನಾನು ನಾನೆಷ್ಟೊ ಅದಕ್ಕೂ ಮಿಗಿಲು ಹಿಂದಿನವನು. ಹೀಗಿರುವಾಗ ಹಳತನ್ನು ದೂಷಿಸುವುದಾದರೂ ಏಕೆ? ಮಾನವಮತಿ ಎಷ್ಟು ತಳಮಳಗೊಂಡಿದೆ, ಎಷ್ಟು ಪರಿವರ್ತನೆಗೊಳ್ಳುತ್ತಿದೆ ಎಂದು ಇಂದು ತೋರುತ್ತಿದ್ದರೂ ಅದು ಲೆಕ್ಕಹಾಕಿದರೆ ಮೂಲತಃ ಮಹತ್ತರವಾಗಿಲ್ಲ. ವ್ಯಾಸ ವಾಲ್ಮೀಕಿಯರ ಕಾಲದ ಜನರ ಸಂತಾನವೆ ನಾವೆಲ್ಲ. ಅಂದು ದುರ್ಯೋಧನ, ರಾವಣ, ಶಕುನಿ, ಶೂರ್ಪನಖಿ, ರಾಮ, ಕೃಷ್ಣ, ಲಕ್ಷ್ಮಣ, ಧರ್ಮರಾಯ, ಭೀಮ, ಸೀತೆ, ದ್ರೌಪದಿ ಇತ್ಯಾದಿ ವ್ಯಕ್ತಿಗಳಿದ್ದಂತೆಯೆ ಇಂದೂ ಅವರ ಅಂಶಜರು ಇದ್ದೇ ಇದ್ದಾರೆ. ಬುದ್ಧಿ ಪ್ರಪಂಚದಲ್ಲಿ ನಮ್ಮ ಸಾಧನೆ ಎದ್ದು ಕಾಣುವಂತಿದ್ದರೂ ಮಾನವತ್ವದ ಲೋಕದಲ್ಲಿ ಏನನ್ನು ತಾನೆ ಸಾಧಿಸಿದ್ದೇವೆ? ಎಷ್ಟು ಪರಿವರ್ತನೆ ಆಗಿದ್ದೇವೆ? ಹಾಗೆ ಮಾನವ ಹೃದಯ ಕಾಲಕಾಲಕ್ಕೂ ಪರಿವರ್ತನಗೊಳ್ಳುತ್ತಿದ್ದಿದ್ದರೆ ಒಂದು ಕಾಲದ ಕಾವ್ಯ ಮತ್ತೊಂದು ಕಾಲಕ್ಕೆ ಅವೇದ್ಯವಾಗಿ ಅಕ್ಷಮ್ಯ ಅಪರಾಧವಾಗಿ ಪರಿಣಮಿಸುತ್ತಿತ್ತು.

ಹೀಗಿರುವಲ್ಲಿ ನಾವು ಆ ಹಳತಾಗದ ಹಳತನ್ನು ಬಿಡುವುದು ತಪ್ಪಾಗುತ್ತದೆ.



ಮತ್ತಷ್ಟೆ ಅಲ್ಲ ; ಆ ಹಳೆಯ ಕಾವ್ಯಗಳ ಕಾವ್ಯಪುರುಷರು ಪುರಾಣಪುರುಷರಾಗಿದ್ದಾರೆ. ಇದಕ್ಕೆ ಹಳಬರು ಎಂದರ್ಥವಲ್ಲ ; ಕಾಲದ ನೆಲದಿಂದ ಮೇಲೆ ಎದ್ದು ನಿಂತಿದ್ದಾರೆ ಎಂದು ; ಸಾರ್ವಕಾಲಿಕವಾದ ಶಕ್ತಿಯ ಪ್ರತೀಕರಾಗಿದ್ದಾರೆ ಎಂದು. ಕವಿ ಕಾವ್ಯವನ್ನು ಬರೆಯುವಾಗ ಎಲ್ಲವನ್ನೂ ಸೃಷ್ಟಿಸಿಕೊಳ್ಳುತ್ತಾನೆ ಎಂದೇನಲ್ಲ. ಹಾಗೆ ನೋಡುವುದಾದರೆ ಅವನು ಮಾಡುವುದು ಸೃಷ್ಟಿಯೆ ಅಲ್ಲ. ಅವನು ಮಾನವ ಭಾವಗಳನ್ನೇನೂ ಸೃಷ್ಟಿಸದಿದ್ದರೂ ಅವುಗಳನ್ನು ತನ್ನ ಕಾವ್ಯದ ಜೀವನ ಪ್ರತೀಕ ಶಕ್ತಿಯನ್ನಾಗಿ ಮಾಡಿಕೊಳ್ಳುತ್ತಾನೆ. ಅಂತೆಯೆ ಅದರ ಅಭಿವ್ಯಕ್ತಿಗೆ ಹೊಸದೆನ್ನಬಹುದಾದ ಇಲ್ಲವೆ ಹಳೆಯದೆಂದು ದೂಷಿಸುವ ಮಾಧ್ಯಮಗಳನ್ನು ಆಶ್ರಯಿಸುವುದುಂಟು. ರೂಪದಲ್ಲಿ ಹೊಸತಿದ್ದ ಮಾತ್ರದಿಂದಲೇ ಶಕ್ತಿಯುತವಾದುದೆಂದು ಭ್ರಮಿಸಬೇಕಾದುದೇನೂ ಇಲ್ಲ. ಅದು ಬೇಸರಕ್ಕೆಂದು ಕೆಲವರು ಮಾಡಿಕೊಳ್ಳುವ ಉಡುಪಿನ ಬದಲಾವಣೆಯಂತಾಗುತ್ತದೆ. ಪುರಾಣ ಪ್ರಪಂಚವನ್ನು ನಿರ್ಮೂಲ ಮಾಡುವಂತಹ ಇತಿಹಾಸಸೃಷ್ಟಿ ಆದ ಕಾಲದಲ್ಲಿ ಮಾತ್ರ ನಾವು ಅವುಗಳನ್ನು ಬಿಟ್ಟು ಇತಿಹಾಸವನ್ನೆ ಕಾವ್ಯವಸ್ತುವನ್ನಾಗಿ ಮಾಡಿಕೊಳ್ಳಬಹುದು. ಆದರೆ ಪುರಾಣಗಳು ಇತಿಹಾಸವಲ್ಲ. ಅವು, ಸಮಷ್ಟಿ ಜನಮನಸ್ಸಿನಲ್ಲಿ ಪುನಸ್ಸೃಷ್ಟಿಗೊಂಡ, ಪುಷ್ಟಿಗೊಂಡ ಇತಿಹಾಸಗಳು.

ಇತಿಹಾಸಕ್ಕೆ ಎರಡು ಮೌಲ್ಯವುಂಟು : ಒಂದು ಇತಿವೃತ್ತದ ಮೌಲ್ಯ ; ಮತ್ತೊಂದು ಭಾವಮೌಲ್ಯ, ಅಂದರೆ 'ಅನಿತಿವೃತ್ತ'ದ ಮೌಲ್ಯ. ಕಾವ್ಯದ ಮೌಲ್ಯ ಯಾವಾಗಲೂ ಭಾವಮೌಲ್ಯವಾದುದರಿಂದ ಅದು ಇತಿಹಾಸವನ್ನೆ, ನಾವು ತಿಳಿದಿರುವ ಇತಿಹಾಸದ ಇತಿವೃತ್ತಮೌಲ್ಯವನ್ನೆ ತನ್ನ ಕಾವ್ಯವಸ್ತುವನ್ನಾಗಿ ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ. ಸೀತಾದೇವಿಯನ್ನು ಕಾಣಲು ಹೊರಟ ಆಂಜನೇಯ ಸಮುದ್ರವನ್ನು ಇಲ್ಲವೆ ಆ ದ್ವೀಪದ ಸುತ್ತಲೂ ಇದ್ದ ಒಂದು ಸಣ್ಣ ಹೊಳೆಯನ್ನು ದೋಣಿಯೇರಿ ಹೋದನೋ ಅಥವಾ ಈಜಿಹೋದನೋ ಏನಾದರೂ ಆಗಿರಬಹುದು. ಹೀಗೆಂದು ಹೇಳುವುದು ನಮಗೆ ಇಂದು ಪಾಪವಾಗಿ ತೋರುತ್ತದೆ. ಆದರೆ ಇತಿಹಾಸ ಸಂಶೋಧಕರು ಕೆಲವರು ಲಂಕೆ ನದಿಯ ನುಡುವೆ ಇದ್ದೊಂದು ಸಣ್ಣ ದ್ವೀಪವೆಂದು ಹೇಳಿರುವುದೂ ಉಂಟು. ಆ ಇತಿಹಾಸಾಂಶ ಹೇಗಾದರೂ ಇರಲಿ. ಕಾಲ ಕಾಲದ ಜನದ ಮನಸ್ಸಿನಲ್ಲಿ ಆಂಜನೇಯನ ಏಕಾಂಗಿಯಾದ ಆ ಅಜೇಯ ಸಾಹಸ ಸಾಗರೋಲ್ಲಂಘನದ ಭಾವಮೌಲ್ಯವನ್ನು ಪಡೆದುಕೊಂಡು ಬಂದಿತು. ಇಲ್ಲಿ ಆಂಜನೇಯನ ಸಾಹಸದ ಇತಿಹಾಸಕ್ಕೆ ಎರಡು ಮೌಲ್ಯಗಳಿವೆ ಎಂಬುದನ್ನು ಕಾಣಬಹುದು :

ಒಂದು ಅವನು ಇತಿಹಾಸದಲ್ಲಿ ತೋರಿದ ಸಾಹಸ ; ಇದೇ ಇತಿವೃತ್ತದ ಮೌಲ್ಯ; ಸಾಗರೋಲ್ಲಂಘನ ಸಾಹಸ ಅದರ ಭಾವಮೌಲ್ಯ, "ಅನಿತಿಹಾಸ ಮೌಲ್ಯ". ಮತ್ತೊಂದು ನಿದರ್ಶನವನ್ನು ಹೇಳಿ ಇದ್ನು ಸ್ಪಷ್ಟೀಕರಿಸಿ ಪುಷ್ಟೀಕರಿಸುವುದು ಅನುಚಿತವಾಗದು. ಬುದ್ಧದೇವನ ಚರಿತ್ರೆಯನ್ನು ನಾವೆಲ್ಲ ತಿಳಿದುಕೊಂಡಿದ್ದೇವೆ ಎಂದು ನಾವಿಂದು ಸಾಧಾರಣವಾಗಿ ಭಾವಿಸಿದ್ದೇವೆ. ಮಹಾರಾಜಕುಮಾರನಾಗಿದ್ದವನು, ಸುಂದರ ಸತಿಯನ್ನು ಕೈ ಹಿಡಿದು ಸುಖಿಯಾಗಿದ್ದವನು, ಬಾಳಿನಲ್ಲಿ ಮೊಟ್ಟಮೊದಲಿಗೆ ದುಃಖವನ್ನು ಕಂಡಾಗ ತಲ್ಲಣಗೊಂಡು ಅದಕ್ಕೆ ಉತ್ತರ ಕಾಣಲೆಂದು ಮಧ್ಯ ರಾತ್ರಿಯ ವೇಳೆಯಲ್ಲಿ ತಂದೆ ತಾಯಿ ರಾಜ್ಯ ಕೋಶ ಮನೆ ಮಠಗಳನ್ನೂ, ಚೊಚ್ಚಲು ತಾಯಿಯನ್ನೂ, ಎದೆಹಾಲುಣ್ಣುವ ಹವಳದುಟಿಯ ಮಗುವನ್ನೂ – ಎಲ್ಲರನ್ನೂ ಬಿಟ್ಟು ಕಾಷಾಯ ವಸ್ತ್ರಧಾರಿಯಾಗಿ ಹೊರಟೆ ಹೋದನೆಂದು ನಾವೆಲ್ಲ ಕೇಳಿದ್ದೇವೆ. ಆದರೆ ಇತ್ತೀಚಿನ ಇತಿಹಾಸಜ್ಞರು ಹೇಳುತ್ತಾರೆ: ಬುದ್ಧದೇವ ನಾವು ತಿಳಿದಿರುವಂತೆ ಮಹಾ ರಾಜಕುಮಾರನೇನಲ್ಲ ; ಅವನೊಬ್ಬ ಮಾಂಡಳಿಕ : ಅವನು ಕಾಡಿಗೆ ಹೋದದ್ದು ಮಧ್ಯರಾತ್ರಿಯಲ್ಲಲ್ಲ ; ಮಧ್ಯಾಹ್ನದ ವೇಳೆಯಲ್ಲಿ ; ಅವನು ಮದುವೆ ಆಗಿರಲೂ ಇಲ್ಲ, ತಂದೆಯಾಗಿರಲೂ ಇಲ್ಲ ಎಂದು. ಹಾಗೂ ಜೀವನ ವಿಷಾದದಿಂದಾಗಲಿ ಸತ್ಯ ಶೋಧನಾತುರದಿಂದಾಗಲಿ ಅವನು ಮನೆ ಬಿಡಲಿಲ್ಲವಂತೆ, ತನ್ನ ರಾಜ್ಯ ದಾಯಾದಿ ಕಲಹದ ಕಿಚ್ಚಿನಲ್ಲೆ ಬೇಯುತ್ತಿದ್ದುದನ್ನು ಕಾಣಲಾರದೆ ವನವಾಸ ಬಯಸಿದನಂತೆ. ಈ ಮಾತನ್ನು ಇಂದು ನಂಬುವುದೂ ಕಷ್ಟಕರವಾಗಿದೆ. ಅಷ್ಟೇ ಏಕೆ, ಅಶ್ವಘೋಷನ ಕಾಲಕ್ಕೆ ನಾವು ಇಂದು ಸತ್ಯವೆಂದು ತಿಳಿದಿರುವ ಇತಿಹಾಸ ಪ್ರಚಲಿತವಾಗಿತ್ತು. ಹೀಗಿರುವಾಗ ಇಲ್ಲಿ ಎರಡು ಪ್ರಶ್ನೆ ಉಳಿಯುತ್ತವೆ. ಇತಿಹಾಸ ಎಲ್ಲ ಕಾಲಕ್ಕೂ ಇತಿಹಾಸವಾಗಿಯೆ ಉಳಿಯುತ್ತದೆಯೆ, ಇಲ್ಲವೆ ಬೆಳೆಯುತ್ತದೆಯೆ? ಬೆಳೆಯುವುದಾದರೆ ಅದು ಇತಿಹಾಸದೂರವಾಗುವುದಿಲ್ಲವೆ? ಬುದ್ಧದೇವನ ವೈರಾಗ್ಯ ಇತಿಹಾಸವಾದರೂ ಅದರ ಮಹತ್ವ ವ್ಯಕ್ತವಾಗಲು ಭಾವಮೌಲ್ಯವಾಗಲೇಬೇಕಾಯಿತು ; ಅನಿತಿಹಾಸಮೌಲ್ಯವನ್ನೆ ಪಡೆಯಬೇಕಾಯಿತು. ಮದುವೆಯಾಗಿಲ್ಲದ, ಮಕ್ಕಳಿಲ್ಲದ ಸಾಮಂತರಾಜನೊಬ್ಬ ವೈರಾಗ್ಯದಿಂದ ಕಾಡಿಗೆ ಹೋದ ಎಂಬ ಇತಿಹಾಸಾಂಶ ಇಂದಿನ ನಮ್ಮನ್ನು ಮುಗ್ಧರನ್ನಾಗಿಸುವ ಮಹತ್ವದ ಸಂಗತಿಯೇನೂ ಅಲ್ಲದಿರಬಹುದು. ಅಂದಿನ ಜನಕ್ಕೆ ಅದು ಸಾವಿರ ಪಾಲು ಮಹತ್ತರವಾಗಿತ್ತು. ಅದು ಕಾಲ ಕಾಲದ ಸಮಷ್ಟಿ ಜನಮನಸ್ಸಿನಲ್ಲಿ ಬೆಳೆದು ಬಂದು ಇಂದಿನ ಈ ರೂಪಕ್ಕೆ ಬಂದಿದೆ, ಅಂದರೆ ಸುಳ್ಳು ಬೆರೆತುಕೊಂಡು



ಬಂದಿತೆಂದು ಭಾವಿಸಬಾರದು. ಹೀಗಿದ್ದರೂ, ಬುದ್ಧದೇವನಾಗಿ ಹೋಗಿ ೨೫೦೦ ವರ್ಷಗಳುರುಳಿಹೋಗಿದ್ದರೂ, ಮಹಾಕಾವ್ಯವೆ ಆದ ಅವನ ಮಹಾಜೀವನವು ಇಂದಿಗೂ ಮಹಾಕಾವ್ಯವಾಗಿ ಮೈದಾಳಿಲ್ಲದಿರುವುದನ್ನು ನೋಡಿದರೆ ಸೋಜಿಗವಾಗುತ್ತದೆ. ಇದಕ್ಕೆ ಕಾರಣವನ್ನು ಹುಡುಕುವುದು ಕಷ್ಟವಾಗುತ್ತದೆ. ಆದರೂ ಇದಕ್ಕೆ ಹಲವು ಕಾರಣಗಳಿರುವುದನ್ನು ಊಹಿಸಬಹುದು. ಜನರಲ್ಲಿದ್ದ ಪುರಾಣ ಪ್ರಿಯತೆ, ಭರತವರ್ಷದಲ್ಲಿ ಬೌದ್ಧಮತ ಮೆಲ್ಲಮೆಲ್ಲಗೆ ಮಾಯವಾದದ್ದು ಎಲ್ಲವೂ ಬುದ್ಧದೇವನ ಜೀವನವನ್ನು ವಸ್ತುವನ್ನಾಗುಳ್ಳ ಮಹಾಕಾವ್ಯಸೃಷ್ಟಿಗೆ ಎಡರಾಗಿದ್ದಿರಬಹುದು. ಮತ್ತೊಂದು ಕಾರಣವೆಂದರೆ ಅದಕ್ಕೆ ಇನ್ನೂ ಅಂಟಿ ನಿಂತಿದ್ದ ಇತಿಹಾಸಾಂಶ. ಅಶ್ವಘೋಷಕವಿ ಬುದ್ಧದೇವನ ಜನ್ಮಾಭಿಷೇಕವನ್ನು ನಮ್ಮ ಜೈನಕವಿಗಳು ತೀರ್ಥಂಕರರ ಜನ್ಮಾಭಿಷೇಕವನ್ನು ಚಿತ್ರಿಸುವಂತೆಯೆ ಚಿತ್ರಿಸಿದ್ದಾನೆ. ಇದು ಬುದ್ಧನ ಮಹಾಮಹಿಮೆಯನ್ನು ಪ್ರತಿಮಿಸಲು ಬಂದ ಪ್ರತಿಮೆ; ಅದು ಅನುಭವಗೊಂಡಾಗ ಮೂಡಿಬಂದ ಭಾವಮೌಲ್ಯ. ಇತಿಹಾಸಮತಿಗೆ ಅದನ್ನೂ ಸುಲಭವಾಗಿ ಸ್ವೀಕರಿಸಕೊಳ್ಳಲು ಕಷ್ಟವಾಗುವುದು ಅಸಹಜವೇನಲ್ಲ.

ಇಪ್ಪತ್ತನೆಯ ಶತಮಾನದಲ್ಲಿ ಬದುಕಿರುವ ನಾವು ನಮ್ಮ ಕಾವ್ಯಕ್ಕೆ ನಮ್ಮ ಸದ್ಯದ ಇತಿಹಾಸವನ್ನೆ ತೆಗೆದುಕೊಂಡರೆ ಉಂಟಾಗುವ ಕಷ್ಟವಾದರೂ ಇಷ್ಟೆ. ಗಾಂಧೀಜಿಯವರ ಜೀವನವೆ ಇರುವಾಗ ಕವಿಯೇಕೆ ರಾಮಾಯಣಕ್ಕೆ ಕೈ ಹಾಕಬೇಕು ಎಂದು ಭಾವಿಸುವವರಿಗೂ ಅದೇ ಉತ್ತರ. ಗಾಂಧೀಜಿಯವರ ಜೀವನದ ಇತಿಹಾಸಕ್ಕೂ ಎರಡೂ ಮೌಲ್ಯಗಳುಂಟು. ನಮಗೆಲ್ಲರಿಗೂ ಕಂಡಂತೆ ಅವರು ಪಡೆದುಕೊಟ್ಟ ಸ್ವಾತಂತ್ರ್ಯ; ಅದಕ್ಕಾಗಿ ಅವರು ಮಾಡಿದ ಅಹಿಂಸಾಯಜ್ಞ; ಕೊನೆಗೆ ಅದಕ್ಕೆ ಅವರೆ ಯಜ್ಞಪಶುವಾದದ್ದು – ಎಲ್ಲವೂ ಇತಿಹಾಸದಲ್ಲಿ ಕಂಡರೂ ಅವುಗಳ ನಿಜಮೌಲ್ಯ ಅಲ್ಲಿ ವ್ಯಕ್ತವಾಗಿರುವುದಿಲ್ಲ. ಗಾಂಧೀಜಿಯವರು ತಂದ ಸ್ವಾತಂತ್ರ್ಯಕ್ಕಿಂತಲೂ ಅವರು ಅದನ್ನು ಸಾಧಿಸಿದ ದಾರಿ ಮಹತ್ತರವಾದದ್ದು : ಅಪೂರ್ವವಾದದ್ದು. ಇಡೀ ವಿಶ್ವಜೀವನದ ಜೀವಮೌಲ್ಯವನ್ನೇ ವ್ಯತ್ಯಾಸಗೊಳಿಸಿದ, ಏರುಪೇರು ಮಾಡಿದ ಮಹಾಜೀವಮೌಲ್ಯವದು. ಹಾಗೆಯೆ ಗಾಂಧೀಜಿಯವರು ತಂದ ರಾಜ್ಯಕ್ಕಿಂತಲೂ ಕಂಡ ರಾಜ್ಯ ಮತ್ತೂ ದೊಡ್ಡದು ಹಾಗೂ ಅದನ್ನು ಕಾಣಲಾಗದಾದ ಹತಾಶೆಯಾದರೂ ಮತ್ತು ಅರ್ಥಪೂರ್ಣವಾದುದು. ಈ ಎಲ್ಲವನ್ನೂ ಇತಿಹಾಸ ಭಾವವಾಗಿ ಗಮನಿಸದೆ, ಗಮನಿಸಿದರೂ ಪ್ರತಿಮಿಸಲಾರದೆ ಬಿಟ್ಟುಬಿಡಬಹುದು. ನಾವು ಇಂದು ಗಾಂಧೀಜಿಯವರನ್ನು ಪೂಜಿಸುತ್ತೇವೆ ; ಸ್ವಾತಂತ್ರ್ಯ ತಂದುಕೊಟ್ಟರೆಂದಾಗಿ. ಆದರೆ ಮರೆಯುತ್ತೇವೆ ; ಗಾಂಧೀಜಿಯವರ

ಉತ್ತಮಾಂಗವನ್ನು ; ಹಾಗೂ ನಮ್ಮ ಸ್ವಾತಂತ್ರ್ಯ ಸಾಧನೆ ಸಾವಿರಾರು ವರ್ಷದ ಆಚೆಯ ಜನಕ್ಕೆ, ಅಷ್ಟೇಕೆ ಇತ್ತೀಚಿನ ತರುಣರಿಗೂ ಸರ್ವಸಾಧಾರಣವಾಗಿ ಬಿಟ್ಟಿರುತ್ತದೆ ಎಂದು. ಎಷ್ಟೋರಾಜ್ಯಗಳು ಬಂದುವು, ಹೋದವು ; ಹಾಗೆಯೇ ಇದೂ ಒಂದು. ಆದರೆ ನಾವು ಇಂದು ಪಡೆದ ಆನಂದವನ್ನು – ಭೂಗೋಲವೆಲ್ಲವನ್ನೂ ತನ್ನ ಸರ್ಪದಂಷ್ಟ್ರದಲ್ಲಿಟ್ಟುಕೊಂಡಿದ್ದ ರಾಷ್ಟ್ರವೊಂದರ ಬಾಯಿಂದ ಅರೆ ನಗ್ನನಾದವನೊಬ್ಬನು ತನ್ನ ನಾಡನ್ನು ಉಳಿಸಿತಂದ ಗಾರುಡಿಗತನದಿಂದಾದ ಆನಂದವನ್ನು, ನಾವು ಬದುಕಿದೆವಲ್ಲ ಎಂಬ ಆನಂದವನ್ನು – ಮುಂದಿನವರು ಅರಿಯುವುದಾದರೂ ಹೇಗೆ ? ಆದರೆ ಅದಕ್ಕೊಂದು ಭಾವ ಮೌಲ್ಯ ಮೂಡಬೇಕಾಗುತ್ತದೆ. ಆಂಜನೇಯ ಸಾಹಸಕ್ಕೆ ಬಂದ ಸಾಗರೋಲ್ಲಂಘನದಂಹ, ಸೀತಾಪಾವಿತ್ರ್ಯ ಪರೀಕ್ಷೆಗೆ ಬಂದ ಅಗ್ನಿ ಪರೀಕ್ಷೆಯಂತಹ ಭಾವಮೌಲ್ಯವೊಂದು ಮೂಡಬೇಕಾಗುತ್ತದೆ. ಭಾವಮೌಲ್ಯ ಹೃದ್ಯವೇ ಹೊರತು ಇತಿವೃತ್ತದ ಮೌಲ್ಯವಲ್ಲ. ಆದ್ದರಿಂದ ಗಾಂಧೀಜಿಯವರ ಸ್ವಾತಂತ್ರ್ಯಸಾಧನೆ, ಅಹಿಂಸಾದರ್ಶನ, ಸರ್ವೋದಯ ದೃಷ್ಟಿ, ರಾಮರಾಜ್ಯದ ಕನಸು, ಸತ್ಯ ಸಾಕ್ಷಾತ್ಕಾರ ಎಲ್ಲವನ್ನೂ ಪ್ರತಿಮಿಸಬಲ್ಲ ಒಂದು ಅಖಂಡ ಮೌಲ್ಯವು ಬೇಕಾಗಿದೆ : ಅದು ಇನ್ನೂ ಮೂಡಬೇಕಾಗಿದೆ. ಇತಿಹಾಸಕಾಲದಲ್ಲಿರುವ ನಾವಿನ್ನೂ ಕಂಡಿಲ್ಲ. ಅದನ್ನು ಕಾಣುವ ಕಣ್ಣನ್ನು ಕವಿ ಕೊಡಬೇಕಾಗಿದೆ. ಹೀಗೆ ಕವಿಸೃಷ್ಟಿಯಾಗಬೇಕಾದರೆ ಅದಕ್ಕೂ ಮುನ್ನ ಸಮಷ್ಟಿ ಜನಮನಃಸೃಷ್ಟಿ ಆಗಬೇಕಾಗಿದೆ. ಅದಕ್ಕೆ ಕಾಲಬೇಕು. ಅಂದು ಅದು ಇತಿಹಾಸದ ಇತಿವೃತ್ತ ಮೌಲ್ಯದ ಮೃತ್‌ಕಳೇವರವನ್ನು ಕಳಚಿ ಬಿಟ್ಟಿರುತ್ತದೆ. ಇತಿಹಾಸ ಬಲೀಂದ್ರನ ಉತ್ತಮಾಂಗವು "ಅನಿತಿಹಾಸ ಮೌಲ್ಯ"ದ ತ್ರಿವಿಕ್ರಮ ಪಾದಕ್ಕೆ ಅರ್ಪಿತವಾಗದಿದ್ದರೆ ಪೂರ್ಣಭಾವದ ಸಾಕ್ಷಾತ್ಕಾರವೇ ಆಗುವುದಿಲ್ಲ.

ಆದ್ದರಿಂದ ಕವಿಗಳು ಯಾವಾಗಲೂ ತಮ್ಮ ಮಹಾಕಾವ್ಯಗಳಿಗೆ ಪುರಾಣವನ್ನೇ ಆಶ್ರಯಿಸಿ ಹೋಗಿರುವುದನ್ನು ಕಾಣುತ್ತೇವೆ.* ಪುರಾಣವೆಂದ ಮಾತ್ರದಿಂದಲೆ ಅಸತ್ಯವೆಂಬ ಭಾವನೆ ಬರಬಹುದು. ಅದು ತಪ್ಪು. ಅವು ಇತಿಹಾಸದ ಮೃದಂಶವಲ್ಲ, ; ಚಿದಂಶಗಳು. ಅವು ಏಕ ಕವಿಕೃತವಲ್ಲ ; ಸಮಷ್ಟಿ ಜನ ಪಾಲಿತ,

* It is therefore to be expected of the poet that he will resort to mythology in order to give his experience its most fitting expression. It would be a serious mistake to suppose that he works with materials received at second-hand. The primordial experience is the source of his creativeness; it cannot be fathomed and therefore requires mythological imagery to give it form.

C. G. Jung: *Psychology and Literature*, pp. 189



ಸಮಷ್ಟಿಜನ ಲಾಲಿತವಾದ ಜನಾರ್ದನ ಮನಸ್ ಸೃಷ್ಟಿಗಳು. ಅವುಗಳು ಯಾವ ಕಾಲಕ್ಕೂ ಪ್ರತಿಮೆಯಾಗಬಲ್ಲಂತಹ ಶಕ್ತಿಯುಳ್ಳವು. ಶ್ರೀ ಕುವೆಂಪು ಅವರ ಮಾತಿನಲ್ಲಿ ಹೇಳುವುದಾದರೆ "ಅವು ನಮ್ಮ ಅತೀಂದ್ರಿಯಾನುಭವದ ನಿಘಂಟು". ಅವುಗಳನ್ನು ಬಿಟ್ಟು ಇತಿವೃತ್ತವನ್ನೆ ಕೈಹಿಡಿದ ಕವಿಗಳು ಸಾಹಿತ್ಯ ಪ್ರಪಂಚದಲ್ಲಿ ವಿರಳ. ವ್ಯಾಸವಾಲ್ಮೀಕಿ ಹೋಮರರ ಕಾಲಕ್ಕಾಗಲೆ ಅವರ ಕಾವ್ಯವಸ್ತು ಸಿದ್ಧವಾಗಿತ್ತು; ಇತಿಹಾಸ ದೂರವಾಗಿತ್ತು. ಅವರನ್ನೆ ಇತಿಹಾಸಕಾರರೆಂದು ಹೇಳುವ ವಾದ ನಮಗಿಂದು ಅಪ್ರಸ್ತುತ. ಮಿಲ್ಟನ್ ಕವಿಯೂ ತನ್ನ ಮಹಾಕಾವ್ಯ ರಚನೆಗೆ ಮುನ್ನ ಕಾವ್ಯವಸ್ತುವಿನ ವಿಷಯವಾಗಿ ಯೋಚಿಸಿದನಂತೆ. King Arthur ನ ಜೀವನವನ್ನು ಕಾವ್ಯವಸ್ತುವಾಗಿ ತೆಗೆದುಕೊಳ್ಳಬೇಕೆಂದು ಚಿಂತಿಸಿ ಅದು ಸಾಧ್ಯವಿಲ್ಲವೆಂದು ತಿಳಿದು ಬೈಬಲ್ಲಿನ ಕಥೆಯೊಂದಕ್ಕೆ ಶರಣುಹೋದನಂತೆ. ಇದಕ್ಕೆ ಕಾರಣವೇನೆ ಇದ್ದರೂ ಇರಬಹುದು. ಆದರೆ ಮುಖ್ಯ ಕಾರಣ ಪುರಾಣವಸ್ತುವಿಗೆ ಇರುವ ಭಾವಾಕಾಶ ವೈಶಾಲ್ಯ. ಮಿಲ್ಟನ್ನನ ದೈತ್ಯ ಕಲ್ಪನೆಯ ವಿಹಾರಕ್ಕೆ ಇತಿಹಾಸಾಕಾಶ ಕಿರಿದಾಯಿತು. ಅವನ ದೇವದಾನವರ ಸುರತಾಂಡವನೃತ್ಯಕ್ಕೆ ಇತಿಹಾಸವೇದಿಕೆ ದುರ್ಬಲವಾಗಿ ತೋರಿತು.

ಪುರಾಣ ಕಥೆಗೆ ಮತ್ತೊಂದು ಸೌಲಭ್ಯವುಂಟು. ಅದು ಜನಮನೋಲಾಲಿತ – ಪಾಲಿತವಾದುದರಿಂದ ಕಾವ್ಯಸೃಷ್ಟಿಯಲ್ಲಿ ಕವಿಗೆ ಎರಡು ಸೌಲಭ್ಯಗಳು ತಾವಾಗಿಯೇ ದೊರೆತಿರುತ್ತವೆ. ಹೊಸಕೃತಿಯ ರಚನೆಗೆ ಪೂರ್ವಭಾವಿಯಾಗಿ ಕವಿ ಕಥಾಬಿತ್ತಿಯ ರಚನೆಗೇ ಅಪಾರ ಶಕ್ತಿಯನ್ನು ವ್ಯಯಮಾಡಬೇಕಾಗುತ್ತದೆ. ಇದೇನೂ ನಷ್ಟವಲ್ಲ. ಆದರೆ ಇದರ ಪ್ರತಿಫಲ ಎಷ್ಟೋ ವೇಳೆ ನಿರೀಕ್ಷಿಸಿದಂತೆ ಬಾರದು. ಅದಕ್ಕೂ ಚಿಂತಿಸಬೇಕಿಲ್ಲ. ಆದರೆ ಕವಿಯ ಹೊಸಸೃಷ್ಟಿ ಎಷ್ಟರಮಟ್ಟಿಗೆ ಸರ್ವವೇದ್ಯವಾಗಬಲ್ಲದು, ಹೃದ್ಯವಾಗಬಲ್ಲದು, ಎಂಬುದು ಮುಖ್ಯ*. ಪುರಾಣ ಕಥೆಗಳಲ್ಲಿ ಏನಿದ್ದರೂ ಏನಿಲ್ಲದಿದ್ದರೂ ಅವು ಎಲ್ಲರ ಹೃದಯದಲ್ಲೂ ಚಲಾವಣೆ

* "Nor do I deny that the poetic faculty can and does manifest itself in treating the most trifling action, the most hopeless subject. But it is a pity that power should be wasted : and that tbe poet should be compelled to impart interest and force to his subject, instead of receiving them from it, and thereby doubling his impressiveness. There is, it has been excellently said, an immortal strength in the stories of great actions. The most gifted poet, then, may well be glad to supplement with it that mortal weakness, whicb, in presence of the vast spectacle of life and the world, he must for ever feel to be his individual portion".

ಹೊಂದಬಲ್ಲವು. ಶ್ರೇಷ್ಠತರವಾದ ಡಾಂಟೆಯ ‘ಡಿವೈನ್ ಕಾಮೆಡಿ’ ಕಾವ್ಯ ‘ಪ್ಯಾರಡೈಸ್ ಲಾಸ್ಟ್’ ಕಾವ್ಯಕ್ಕಿಂತ ಹೆಚ್ಚಾಗಿ ಹೃದ್ಯವಾಗಲಿಲ್ಲ. ಇದಕ್ಕೆ ಕಾರಣ ಇಲ್ಲಿಯ ಪುರಾಣ ನೂತನ ವಸ್ತುವೂ ಆಗಿದೆ.

ಜನಪ್ರಿಯತೆಯನ್ನೂ ಜನಮನ್ನಣೆಯನ್ನೂ ಗಳಿಸುವುದು ಸುಲಭ ಎಂದೆ ಪುರಾಣ ಕಾವ್ಯಗಳ ಸೃಷ್ಟಿ ಸುಲಭ ಎಂದು ಭಾವಿಸಬಾರದು. ಎಲ್ಲವೂ ಗೊತ್ತಿದೆ ಎಂಬೆಡೆಯಲ್ಲಿ ಗೊತ್ತಾಗಬೇಕಾದುದಿದೆ ಎಂದು ಮಾಡುವ ಚಾತುರಿ ಕಷ್ಟಸಾಧ್ಯವಾಗುತ್ತದೆ. ಕವಿ ಇಲ್ಲಿ ಹಳೆಯದರ ಮಹತ್ತಿಗೆ ಭಂಗ ತರದ ರೀತಿಯಲ್ಲಿ ತನ್ನದನ್ನು ಸೃಷ್ಟಿಸಬೇಕಾಗುತ್ತದೆ. ಹೀಗೆ ಮಾಡುವಾಗ ಪ್ರತಿಸೃಷ್ಟಿ, ನವಸೃಷ್ಟಿ ಕಾರ್ಯಗಳೆರಡೂ ಆಗಬೇಕಾಗುತ್ತದೆ.

ಇತಿಹಾಸದ ವಿಚಾರವಾಗಿ ಮತ್ತೊಂದು ಮಾತು. ಇತಿಹಾಸ ವಸ್ತು ತನ್ನ ಇತಿವೃತ್ತ ಮೌಲ್ಯಗಳನ್ನು “ಅನಿತಿವೃತ್ತ ಮೌಲ್ಯ”ಕ್ಕೆ ಸಮರ್ಪಿಸಿಕೊಳ್ಳುವ ವೇಳೆಗೆ ಇತಿಹಾಸ ಪ್ರಂಪಚದಲ್ಲೆ ಮತ್ತೊಂದು ಘಟನೆ – ಹಿಂದಿನ ಘಟನೆಯನ್ನು ಮರೆಸುವಂತಹ ಘಟನೆ – ಉಂಟಾಗುತ್ತದೆ. ಬುದ್ಧನಾದ ನಂತರದಲ್ಲಿ ಹೀಗೆ ಕೆಲವು ಮಹಾನುಭಾವರು ಬಂದಿರುವಾಗ ಬುದ್ಧನ ಕಥೆಯನ್ನು ಕಾವ್ಯವಸ್ತುವನ್ನಾಗಿ ಮಾಡಿಕೊಳ್ಳುವುದೂ, ಒಂದು ರೀತಿಯಲ್ಲಿ ಆದ್ಯತನ ಇತಿಹಾಸ ಪ್ರಿಯಕವಿಗಳಿಗೆ ಹಳೆಯ ವಸ್ತುವೇ ಆಗುತ್ತದೆ. ಈ ಕಷ್ಟವನ್ನು ನಿವಾರಿಸಲೆಂದೆ ಕವಿ ಪುರಾಣಕ್ಕೆ ಶರಣು ಹೋಗುತ್ತಾನೆ. ಅಂದರೆ ಪುರಾಣ, ಸ್ಥವಿರವಾದುದೆಂದೇನೂ ಭಾವಿಸಬಾರದು. ಅದು ಹಿಂದೆಯೆ ಹೇಳಿದಂತೆ, ಸಮಷ್ಟಿ ಜನ ಮನಸ್‌ಸೃಷ್ಟವಾದುದು. ಅಂತೆಯೆ ಅದು ನಿತ್ಯ ಸೃಷ್ಟಿವಶವಾದುದು. ರಾಮ ಕೃಷ್ಣರು ನಮ್ಮ ಬಾಳಿನಲ್ಲಿ ಇನ್ನೂ ಬೆಳೆಯುತ್ತಲೆ ಇದ್ದಾರೆ. ಗಾಂಧೀಜಿಯವರು ಕಂಡ ರಾಮನಿಗೂ, ರಾಮಕೃಷ್ಣ ಪರಮಹಂಸರು ಕಂಡ ಕೃಷ್ಣನಿಗೂ, ವಾಲ್ಮೀಕಿ ವ್ಯಾಸ ಶುಕರು ಕಂಡ ರಾಮ ಕೃಷ್ಣರಿಗೂ ಮಧ್ಯೆ ಅಗಾಧ ಬೆಳವಣಿಗೆ ನಡೆದಿದೆ.* ರಾಮಸ್ವಾಮಿ ನಾಯಕರ್ ರಾಮನ ಪಟವನ್ನು ಸುಟ್ಟಾಗ ಇಪ್ಪತ್ತನೆಯ ಶತಮಾನದಲ್ಲಿ

---

* ತುಲಸಿದಾಸರು ಕಂಡ ರಾಮ ಮಹರ್ಷಿ ವಾಲ್ಮೀಕಿಯ ರಾಮನ ಪ್ರತಿಬಿಂಬ ಮಾತ್ರವೆ ಅಲ್ಲ. ಹಾಗೆಯೆ ತ್ಯಾಗರಾಜರು ಕಂಡ ರಾಮನೂ ಆ ಮಹಾಕಾವ್ಯದಲ್ಲಿ ಚಿತ್ರಿತವಾದ ರಾಮನ ಪ್ರತಿಚಿತ್ರವಲ್ಲ. ಆದರೂ ಇವರ ಕೃತಿಗಳನ್ನು ಅಪಾರವಾಗಿ ಮೆಚ್ಚುತ್ತೇವೆ. ಇದಕ್ಕೆ ಕಾರಣವೆಂದರೆ ಅಂದಿನ ಮಹಾಪುರುಷನೊಬ್ಬ ಕಾಲದ ಜತೆಯಲ್ಲಿ ನಡೆದು ಬಂದು, ಬೆಳೆದುಬಂದು, ನಮ್ಮವನಾಗಿದ್ದಾನೆ. ಬೆಳವಣಿಗೆ ಬದಲಾವಣೆಯಲ್ಲ. ಕೊಡಗಿನಲ್ಲಿ ಹರಿಯುವ ಕಾವೇರಿಯಂತೆಯೆ ಶ್ರೀರಂಗದಲ್ಲಿ ಹರಿಯುವ ಕಾವೇರಿ ಇರದಿದ್ದರೂ ಅವರಿಬ್ಬರೂ ಒಬ್ಬಳೆ.



ರಾಮನಿನ್ನೂ ಸತ್ತಿಲ್ಲವೆಂದೂ, ಅಂತೆಯೇ ರಾವಣನೂ ಸತ್ತಿಲ್ಲವೆಂದು ತಿಳಿಯುತ್ತದೆ. ರಾಮನ ನಿತ್ಯತೆ ಈ ವಿಕೃತ್ಯದಲ್ಲಿ Negative ಆಗಿ ಮೂಡಿಬಂದಿದೆ. ಮತ್ತೆ ರಾವಣನ ಇರುವಿಕೆ ಎದ್ದೇ ತೋರಿದೆ. ಆದ್ದರಿಂದ ಪುರಾಣಕ್ಕೆ, ಪುರಾಣ ಪುರುಷರಿಗೆ, ಪುರಾಣ ಸತ್ಯಕ್ಕೆ ಸಾವಿಲ್ಲ.

ಕೃಷ್ಣನ ಜೀವನವನ್ನೆ ನೋಡುವುದಾದರೆ ಒಂದೊಂದು ಪುರಾಣವೂ ಅವನನ್ನು ಒಂದೊಂದು ಬಗೆಯಾಗಿ ಕಂಡಿದೆ. ಇಲ್ಲಿ ಅವನ ಜೀವನದ ಇತಿಹಾಸವೆಲ್ಲಿದೆ ? ವಾಸುದೇವ ಕೃಷ್ಣನೊಬ್ಬ ; ಗೋಪಾಲ ಕೃಷ್ಣನೊಬ್ಬ ; ಪಾಂಡವ ಸ್ನೇಹಿತ ಕೃಷ್ಣನೊಬ್ಬ ಎಂದೆಲ್ಲ ವಾದವುಂಟು. ಇದು ಹೇಗಾದರೂ, ಇತಿಹಾಸಾನಂತರದ ಪುರಾಣಲೋಕದಲ್ಲಿ ಕೃಷ್ಣಾವತಾರವಾದ ಮೇಲೂ ಆ ಕೃಷ್ಣನ ವಿಷಯವಾಗಿ ಹಿರಿಯದಾದ ಬೆಳವಣಿಗೆ ಆಗಿದೆ. ರಾಧಾಪ್ರಿಯ ಎಂದು ನಾವಿಂದು ಕರೆಯುವ ಕೃಷ್ಣ ಪ್ರಾಚೀನ ಪುರಾಣದಲ್ಲಿ ರಾಧಾಸ್ವಪ್ನವನ್ನೂ ಕಂಡಿಲ್ಲ. ಈ ರಾಧಾಪ್ರವೇಶ ಸುಮಾರು ಕ್ರಿ.ಶ. ೮–೯ನೆ ಶತಮಾನದ ವೇಳೆಯಲ್ಲಾಯಿತೆಂದು ಇತಿಹಾಸಕಾರರು ಅಭಿಪ್ರಾಯ ಪಡುತ್ತಾರೆ. ಹೀಗಿದ್ದೂ ಯಾರು ತಾನೆ ಇವಳ ಆಗಮನವನ್ನು ಪ್ರಶ್ನಿಸಿದರು ? ಇಂದು ಈಕೆಯ ಪ್ರಾಮುಖ್ಯವೆಷ್ಟಿದೆಯೆಂದರೆ ರಾಧೆಯಿಲ್ಲದ ಕೃಷ್ಣನೆ ಇಲ್ಲ ! ರಾಧಾಕೃಷ್ಣರು ನಿಷ್ಕಾಮ ಪ್ರೇಮದ ಅಪೂರ್ವ ನಿದರ್ಶನವಾಗಿದ್ದಾರೆ ; ಜೀವ ಪರಮಾತ್ಮನ ಸಂಬಂಧವೂ ಆಗಿದ್ದಾರೆ.

ಮೇಲಿನ ವಿವೇಚನೆಯಲ್ಲಿ ತಿಳಿಯುವುದಿಷ್ಟೆ : ಪುರಾಣಗಳು ಸುಳ್ಳು ಕಥೆಯಲ್ಲ. ಅವು ಭಾವ ಸತ್ಯ ಪ್ರತೀಕಗಳು ; ಇತಿಹಾಸಬಲೀಂದ್ರನ ಉತ್ತಮಾಂಗದ ಮೇಲೆ ನಿಂತು ಬೆಳೆದಿರುವ ಅನಿತಿಹಾಸ ತ್ರಿವಿಕ್ರಮರು. ಒಂದು ಕಾಲದ ಇತಿಹಾಸವು, ಕಾಲಕ್ರಮೇಣವಾಗಿ ಜನಮನಸ್ ಸರೋವರ ಜಲಸ್ನಾತವಾಗಿ, ಸುರಲೋಕವಾಸಿಯಾಗಿ, ಕಾಲಸ್ಪರ್ಶದೂರವಾಗುತ್ತದೆ. ಈ ಪುರಾಣ ಕಾಲಕಾಲಕ್ಕೆ ಪ್ರತಿಮೆಯಾಗಿ ಬೆಳೆದುಕೊಂಡೂ ಹೋಗುತ್ತದೆ – ರಾಧಾಕೃಷ್ಣರು ಪವಿತ್ರಪ್ರೇಮದ ಪ್ರತಿಮೆಯಾಗಿ ಬೆಳೆದು ಬಂದಿರುವಂತೆ.

ಹೀಗೆ ನಿತ್ಯವೂ ಬೆಳೆಯುತ್ತಲೆ ಇರುವ ಪುರಾಣಕಥೆಯು ಆಯಾ ಕಾಲದ ಮುದ್ರೆಯನ್ನೂ ಪಡೆದುಕೊಂಡು ಮುನ್ನಡೆದಿರುತ್ತದೆ. ಊರೂರಿನ ಮುಂದೆ

---

ಬೇರೆಯೆಂಬಂತೆ ಕಾಣುವುದು ಗಾತ್ರದಲ್ಲಿಯೇ ಹೊರತು ಪಾತ್ರದಲ್ಲೇನೂ ಅಲ್ಲ. ಈ ತೋರಿಕೆಯ ವ್ಯತ್ಯಾಸ ಬೆಳವಣಿಗೆಯಿಂದ ಬಂದುದೇ ಹೊರತು ಬದಲಾವಣೆಯಿಂದ, ಪಾತ್ರದ ಬದಲಾವಣೆಯಿಂದ ಬಂದುದಲ್ಲ.

ಹರಿಯುವ ನದಿಯಲ್ಲಿ ಊರೂರಿನ ನೀರೂ ಸೇರುವಂತೆ ಈ ಪುರಾಣಕಥೆಯಲ್ಲಿ ಕಾಲದ ಭಾವಗಳು, ವಿಚಾರಗಳು ಸೇರಿಕೊಂಡು ಹೊಸರೂಪಗಳು ಮೂಡಿಬರುತ್ತಲೇ ಇರುತ್ತವೆ. ಆದ್ದರಿಂದಲೆ ಪುರಾಣಕಥೆಯು ಹಳೆಯದಾದರೂ ಹೊಸದೆ. ನಮ್ಮ ಊರಿನ ಪಕ್ಕದಲ್ಲಿ ಹರಿಯುವ ನದಿಯ ನೀರು ಬೇರೊಂದು ಊರಿನಿಂದ ಹರಿದುಬಂದ ನೀರಾದರೂ ಅದು ನಮ್ಮ ಊರಿನ ನದಿಯೇ ಆಗುತ್ತದೆ. ಅದರಲ್ಲಿ ನಮ್ಮ ಊರಿನ ನೀರೂ ಸೇರಿ ನದಿಯ ಬೆಳವಣಿಗೆಯೂ ನಡೆದಿರುತ್ತದೆ. ಇಂತಹ ಪುರಾಣ ಪ್ರವಾಹ ಸರ್ವ ವರ್ತಮಾನಗಳಲ್ಲಿ ಹರಿದರೂ ಭವಿಷ್ಯವೇ ಅದರ ಗಮ್ಯಸ್ಥಾನವಾಗಿರುತ್ತದೆ.

ಅಂದು ತಾನೆ ಹುಟ್ಟಿಕೊಂಡ ಇತಿಹಾಸಕ್ಕೆ ಈ ಬೆಳವಣಿಗೆ ದೊರೆಯುವುದಿಲ್ಲ. ಅದಕ್ಕೆ ಭಾವಮೌಲ್ಯವಿನ್ನೂ ಮೂಡಿಬಂದಿಲ್ಲವೆಂಬುದು ಮಾತ್ರವೆ ಅಲ್ಲ, ಇನ್ನೂ ಜನ ಮನೋಗತವಾದುದಾಗಿ, ಜನಮನೋವೇದ್ಯವಾದುದಾಗಿ ಆಗಿರುವುದಿಲ್ಲ. ಅದಕ್ಕೆ ರಾಗದ್ವೇಷಗಳ ಮಣ್ಣಿನ ಅಂಟು ಇದ್ದೇ ಇರುತ್ತದೆ. ಆದ್ದರಿಂದಲೆ ನಾವಲ್ಲಿ ರಸಾನುಭವವನ್ನು ಪಡೆಯುವುದೂ ಕಷ್ಟವಾದೀತು. ಉತ್ತಮ ಕಾದಂಬರಿಯಲ್ಲಿ ಚಿತ್ರಿತವಾಗುವ ಜೀವನವು ಸದ್ಯಸಮಾಜದ ಜೀವನವಾದರೂ ಅದು ಯಾರೊಬ್ಬರ ವೈಯಕ್ತಿಕ ಜೀವನವಲ್ಲವಾಗಿರುವುದರಿಂದ ಅದನ್ನು ಓದಿದಾಗ ಯಾರಿಗಾಗಲಿ ಲೌಕಿಕವಾದ ಅಸಮಾಧಾನವಾಗುವುದಿಲ್ಲ. ಇತಿಹಾಸದ ಕಥೆಯನ್ನು, ಅದರಲ್ಲೂ ವರ್ತಮಾನದ ಇತಿಹಾಸಕಥೆಯನ್ನು ಚಿತ್ರಿಸುವುದು ಇಷ್ಟು ಸುಲಭವಲ್ಲ. ಆ ಕೃತಿಯನ್ನು ಎಷ್ಟೇ ರಾಗದ್ವೇಷ ದೂರವನ್ನಾಗಿ ಮಾಡಿದರೂ ಅದು ಕಾಲದ ಅಂಟನ್ನು ಕಳೆದುಕೊಂಡಿರುವುದಿಲ್ಲ. ಹಾಗೆ ಮಾಡಹೊರಟರೆ ಇತಿಹಾಸತ್ವಕ್ಕೆ ಭಂಗವಾದೀತು. ಹಾಗೆ ಮಾಡದಿದ್ದರೆ ಅದು ಶ್ರೇಷ್ಠ ಕಲಾಕೃತಿ ಆಗುವುದೇ ಇಲ್ಲ. ಇತಿಹಾಸವೇ ಆಗಲಿ, ಪುರಾಣವೇ ಆಗಲಿ, ಕಾಲ್ಪನಿಕ ಕಥೆಯೇ ಆಗಲಿ ನಮಗೆ ಬೇಕಾದುದು ವಸ್ತು ಸತ್ಯವಲ್ಲ ; ಇತಿವೃತ್ತ ಸತ್ಯವಲ್ಲ ; ಜೀವನ ಮೌಲ್ಯ, ಮಾನವೀಯ ಮೌಲ್ಯ. ಈ ಮೌಲ್ಯವನ್ನು ಸಂಗದೂರವಾದ, ಸದ್ಯಜೀವನ ದೂರವಾದ, ವೈಯಕ್ತಿಕವಲ್ಲದ ಪುರಾಣಗಳು ಅಧಿಕತರವಾಗಿ ನೀಡಬಲ್ಲವು. ಆದುದರಿಂದಲೆ ಕವಿ ಪುರಾಣಕಥೆಗೆ ಶರುಣುಹೋಗುತ್ತಾನೆ. ಇಲ್ಲಿ ಮಾಥ್ಯೂ ಆರ್ನಾಲ್ಡ್ ಹೇಳುವ ಈ ಮಾತನ್ನು ನೆನೆಯಬಹುದು :

We do not find that 'Parsee' (ಇದು ಈಸ್ಕಿಲಸ್ ಮಹಾಕವಿಯ ಐತಿಹಾಸಿಕ ನಾಟಕ. ಇದರ ಕನ್ನಡ ಭಾಷಾಂತರವನ್ನು ಶ್ರೀ ಅವರು ಮಾಡಿದ್ದಾರೆ) occupied a particularly high rank among the dramas of Aeschylus, because it represented a matter of contemporary interest ; this was not what a cultivated Athenian required ; he required that the permanent elements of his nature should be moved ; and the dramas of which the action, though taken from a long distant mythic time, yet was calculated to accomplish this in a higher degree than that of the Parsae, stood higher in his estimation accordingly. The Greek felt, no doubt, with their exquisite sagacity of taste, that an action of persent time was too near them, too much mixed up with what was accidental and passing, to form a sufficiently grand, detached, and self subsistent object for a tragic poem : such ojects belonged to the domain of comic poetry, and of lighter kind of poetry."

"The Choice of Subject in Poetry."



ಈ ದೃಷ್ಟಿಯಿಂದ ಶ್ರೀ ಕುವೆಂಪು ಅವರ 'ಶ್ರೀ ರಾಮಾಯಣ ದರ್ಶನಂ' ಕಾವ್ಯವನ್ನು ನೋಡಿದಾಗ ಅದರ ವಸ್ತು ಪುರಾಣವಾದರೂ ಹೇಗೆ ನೂತನವಾಗಿ ಚಿರಸತ್ಯದ ನವೀನ ಆವಿರ್ಭಾವವಾಗಿದೆ ಎಂಬುದು ಹೊಳೆಯುತ್ತದೆ. ಕವಿ ತಾನು ಕಾವ್ಯ ಶರೀರವನ್ನು ಸೃಷ್ಟಿಸ ಹೊರಟಿರುವ ಬ್ರಹ್ಮನಲ್ಲವೆಂದು ಮೊದಲೆ ವಿನಮ್ರವಾಗಿ ಹೇಳಿದ್ದಾರೆ :

ಕಲೆಯನ್ನಲ್ಲದೆ ಶಿಲ್ಪಿ ಶಿಲೆಯನೇಂ ಸೃಷ್ಟಿಪನೆ ?
ತನು ನಿನ್ನದಾದೊಡಂ ಚೈತನ್ಯಮೆನ್ನದೆನೆ,
ಕಥೆ ನಿನ್ನದಾದೊಡಂ, ನೀನೆ ಮೇಣಾಶೀರ್ವದಿಸಿ
ಮತಿಗೆ ಬೋಧವನಿತ್ತೊಡಂ, ಕೃತಿ ನನ್ನ ದರ್ಶನಂ
ಮೂರ್ತಿವೆತ್ತೊಂದಮರ ಕಾವ್ಯದಾಕೃತಿಯಲ್ತೆ ?

(ಶ್ರೀ ರಾ. ದ : ಕವಿಕ್ರತು ದರ್ಶನಂ ; ಪಂಕ್ತಿ ೧೦೦–೧೦೪)

ಯಾವ ಶಿಲ್ಪಿಯೂ ಶಿಲಾ ಸೃಷ್ಟಿಯನ್ನು ಮಾಡುವುದಿಲ್ಲ. ಶಿಲೆ ಬ್ರಹ್ಮಸೃಷ್ಟಿ. ಅಂತೆಯೆ ವಾಲ್ಮೀಕಿಯವರ ಕಾವ್ಯವೆ ಬ್ರಹ್ಮಸೃಷ್ಟಿ ಸದೃಶವಾದುದಾಗಿದೆ ಈ ಕವಿಗೆ. ಅಂತಹ ರಾಮಾಯಣ ಈ ಕವಿಯ ದೃಷ್ಟಿಯಲ್ಲಿ ಸತ್ತವರ ಕಥೆಯಲ್ಲ. ಯುಗಯುಗದಲ್ಲೂ ಲೋಕೋದ್ಧರಣಾರ್ಥವಾಗಿ ಅವತರಿಸಿ ಬರುವೆನೆಂದು ಹೇಳಿದ ಆ ಭಗವದ್ ದಿವ್ಯವಾಣಿ ನರರೂಪ ಮಾತ್ರವಾದ ಅವತಾರಕ್ಕೆ ಮಾತ್ರವೆ ಅನ್ವಯಿಸುವುದಲ್ಲ : ಕೃತಿರೂಪದ ಅವತಾರಕ್ಕೂ ಅನ್ವಯಿಸುತ್ತದೆ :

ಯುಗ ಯುಗದಿ ಸಂಭವಿಪೆನೆಂಬ ಭಗವದ್ದಿವ್ಯಮಾ
ವಚನಮೇಂ ನರರೂಪಮಾತ್ರಕ್ಕೆ ಮುಡಿಪೆ, ಪೇಳ್ ?
ನರಸಿಂಹ ಮತ್ಸ್ಯ ಕೂರ್ಮಾದಿ ಚರಮಾ ಲೀಲೆಗೇಂ
ಪೊರತೆ ಈ ಕೃತಿರೂಪಮಾ ಭಗವದಾವಿರ್ಭಾವ
ಬಹುರೂಪ ಸೂತ್ರತೆಗೆ ?

(ಶ್ರೀ ರಾ. ದ : ಅಭಿಷೇಕವಿರಾಡ್‌ದರ್ಶನಂ ; ಪಂಕ್ತಿ ೨೨೨-೨೬)

ಎಲ್ಲ ಅವತಾರಗಳ ಉದ್ದೇಶವಾದರೂ ಉದ್ಧಾರವೆ. ಆದರೂ ಆ ಅವತಾರ ಕಾಲಕ್ಕೆ ತಕ್ಕನಾಗಿ ಆಗಿ ಬರುತ್ತಿರುತ್ತದೆ. ಜಲಪ್ರಳಯಕಾಲದಲ್ಲಿ ಮೀನಾವತಾರವಲ್ಲದೆ ಮತ್ತಾವ ಅವತಾರವೂ ಉಚಿತವಲ್ಲ. ಭೂಮಿಯನ್ನು ರಸಾತಳದಲ್ಲಿ ರಾಕ್ಷಸನು ಮುಳುಗಿಸಿದ್ದಾಗ ವರಾಹಾವತಾರವೆ ಅನಿವಾರ್ಯವಾಯಿತು. ಹಾಗೆಯೆ ಒಂದೊಂದು ಅವತಾರವೂ ಔಚಿತ್ಯ ಪೂರ್ಣವಾದುದಾಗಿಯೆ ಇದೆ. ರಾಮಾಯಣ ಕಾವ್ಯದ ಅವತಾರವೂ ಹೀಗೆಯೆ ನಡೆದಿದೆ. ವಾಲ್ಮೀಕಿಯವರ ಅನಂತರದಲ್ಲಿ ಎಷ್ಟು ಬಾರಿ ಈ ಕಾವ್ಯ ಹುಟ್ಟಿ ಬಂದಿತೊ ಲೆಕ್ಕ ಹೇಳಲೂ ಆಗುವುದಿಲ್ಲ. ಹೀಗೆ ಹುಟ್ಟಿದ ಎಲ್ಲ ಕಾವ್ಯಗಳೂ ಮೂಲ ಮಹಾಕೃತಿಗೆ ಹೆಸರು ತರುವಂತಹವಾಗಿವೆ ಎಂದಲ್ಲ. ಕುಮಾರವ್ಯಾಸ ಅದಕ್ಕಾಗಿಯೆ "ತಿಣಿಕಿದನು ಫಣಿರಾಯ ರಾಮಾಯಣದ ಕವಿಗಳ ಭಾರದಲಿ" ಎನ್ನಬೇಕಾಯಿತು. ಆದರೆ ಒಂದು ವಿಷಯ ಇದರಿಂದ ವ್ಯಕ್ತವಾಗುತ್ತದೆ : ರಾಮಾಯಣ ಕಥೆ ಇನ್ನೂ ಸತ್ತಿಲ್ಲವೆಂದು. ಇಪ್ಪತ್ತನೆಯ ಶತಮಾನದಲ್ಲಿಯೆ ಹೇಳುವುದಾದರೆ ರಾಮಾಯಣ ಕಾವ್ಯ ನಾಲ್ಕಾರು ಪ್ರಾಂತೀಯ ಭಾಷೆಗಳಲ್ಲಿ ಹುಟ್ಟಿಕೊಂಡಿರುವುದನ್ನು ಕಾಣುತ್ತೇವೆ.

ಮಲೆಯಾಳದ ಕವಿಯಾದ ವಲ್ಲತ್ತೋಳ್ ಅವರು ವಾಲ್ಮೀಕಿ ರಾಮಾಯಣವನ್ನು ಭಾಷಾಂತರಿಸಿದ್ದಾರೆ. ಹಿಂದಿಯ ಕವಿಗಳಾದ ಮೈಥಿಲೀ ಶರಣಗುಪ್ತರು 'ಸಾಕೇತ' ಎಂಬ ರಾಮಾಯಣ ಕಾವ್ಯವನ್ನು ಬರೆದಿದ್ದಾರೆ. ತೆಲುಗಿನಲ್ಲಿ 'ಶ್ರೀಮದ್ ರಾಮಾಯಣ ಕಲ್ಪತರು' ಎಂಬ ಹೊಸ ಮಹಾ ಕಾವ್ಯ ಹೊರಬಂದಿದೆಯಂತೆ. ನಮ್ಮ ಕನ್ನಡದಲ್ಲೆ ಹೇಳುವುದಾದರೆ 'ಶ್ರೀರಾಮಾಯಣದರ್ಶನಂ' ಕಾವ್ಯ ಉದ್ಭವಿಸಿ ಬಂದಿದೆ. ಖಂಡವಾಗಿ 'ಶೂದ್ರತಪಸ್ವಿ,' 'ಅಹಲ್ಯೆ', 'ಶಬರಿ', ಎಂಬ ನಾಟಕಗಳಲ್ಲಿ ರಾಮಾಯಣ ಮೂಡಿ ಬಂದಿದೆ. ಇದೆಲ್ಲಕ್ಕಿಂತಲೂ ಹೆಚ್ಚಾಗಿ ಗಾಂಧೀಜಿಯವರೆ ರಾಮಾಯಣ ಕಥೆಯ ಅಸ್ತಿತ್ವಕ್ಕೆ ಸಾಕ್ಷಿಯಾಗಿ ಬಾಳಿದರು. ಇಂತಾಗಿ ರಾಮಾಯಣ ಕಾವ್ಯ ನಮ್ಮ ನಾಡಿನಲ್ಲಿ ಇನ್ನೂ ಬದುಕುತ್ತಿದೆ ಎಂಬ ಅಂಶ ವ್ಯಕ್ತವಾಗುತ್ತಿದೆ. ತೆಲುಗಿನ ಕವಿಗಳಾದ



ವಿಶ್ವನಾಥ ಸತ್ಯನಾರಾಯಣರು ತಮ್ಮ ರಾಮಾಯಣ ಕಾವ್ಯ ರಚನೆಯ ಆದಿಯಲ್ಲಿ ಹೀಗೆ ಹೇಳುತ್ತಾರೆ : ಅನ್ನವನ್ನು ಹಿಂದಿನ ಕಾಲದಿಂದಲೂ ಮನುಷ್ಯ ತಿನ್ನುತ್ತಲೆ ಬಂದಿದ್ದರೂ ಅದರ ರುಚಿಯಾಗಲಿ, ಆವಶ್ಯಕತೆಯಾಗಲಿ ಅಳಿದಿಲ್ಲ, ಹಾಗೆ ಈ ಕಾವ್ಯವೂ ಕೂಡ, ಎಂದು ಸ್ಪಷ್ಟಪಡಿಸಿದ್ದಾರೆ. ಇದನ್ನು ಕೇಳಿದಾಗ ನಮ್ಮ ಕವಿಗಳು ಹೇಳಿರುವ – ಮೇಲೆ ಉದ್ಧರಿಸಿರುವ ಮಾತೇ ನೆನಪಿಗೆ ಬರುತ್ತದೆ. ಹೀಗೆ ಹಿರಿಯ ಕವಿಗಳಿಬ್ಬರು ಒಂದೇ ಸತ್ಯದ ವಿಚಾರವಾಗಿ ಸಮಾನ ಅನುಭವವನ್ನು ಕಂಡಿದ್ದಾರೆ ಎಂಬುದು ಇದರಿಂದ ವ್ಯಕ್ತವಾಗುತ್ತದೆ. ಶ್ರೀ ವಿನೋಬಾ ಭಾವೆಯವರಂತಹ ಮಹಾ ಕವಿಜೀವಿಗಳೂ ರಾಮಾಯಣದ ವಿಷಯವಾಗಿ ಇದೇ ಅರ್ಥ ಬರುವ ಮಾತನ್ನು ಹೇಳಿದ್ದಾರೆ.

ಮಹಾಪುರುಷರಾದ ಅನಂತರದಲ್ಲಿ ಮಹಾಕವಿಗಳು ಹುಟ್ಟುತ್ತಾರೆ. ರಾಮ ಕೃಷ್ಣರಾದ ಮೇಲೆ ವಾಲ್ಮೀಕಿ ವ್ಯಾಸರು ಬಂದರು. ಹಾಗೆಯೆ ಇತ್ತೀಚೆಗೂ ಮಹಾಪುರುಷರು ಹುಟ್ಟಿ ಬರುತ್ತಿರುವಂತೆಯೆ ಅಂದೊಮ್ಮೆ ಇಂದೊಮ್ಮೆ ಮಹಾಕವಿಗಳೂ ಮೂಡಿ ಬಂದಿರುತ್ತಾರೆ – ಅವರ ದರ್ಶನವನ್ನು ಲೋಕಕ್ಕೆ ಪ್ರತಿಮಿಸಲು. ಹಿಂದಿನ ಆ ಕವಿಗಳು ರಾಮಕೃಷ್ಣರ ದರ್ಶನದ ಅಭಿವ್ಯಕ್ತಿಗೆ ಅವರನ್ನೆ ವಸ್ತುವನ್ನಾಗಿ ಮಾಡಿಕೊಂಡರು. ಇತ್ತೀಚಿನ ಕವಿಗಳು ತಮ್ಮ ಹಿಂದಿನ ಹಾಗೂ ಸಮಕಾಲೀನ ಮಹಾತ್ಮರ ದರ್ಶನವನ್ನು ಪಡಿಮೂಡಿಸುವಾಗ ಅವರ ಜೀವನವನ್ನೆ ನೇರವಾಗಿ ಕಾವ್ಯವಸ್ತುವನ್ನಾಗಿ ತೆಗೆದುಕೊಳ್ಳದೆ ಆ ಪೂರ್ವದ ಮಹಾತ್ಮರ ಜೀವನವನ್ನೆ ಕಾವ್ಯವಸ್ತುವನ್ನಾಗಿ ಮಾಡಿ ಕೊಂಡಿದ್ದಾರೆ. ಇದಕ್ಕೆ ಕಾರಣಗಳನ್ನು ಹಿಂದೆಯೇ ಹೇಳಿದೆ. ಇದರಿಂದ ಅವರ ಕಾವ್ಯವೇನೂ ಕುಬ್ಜವಾಗಿಲ್ಲ.

ಶ್ರೀ ರಾಮಕೃಷ್ಣರ ಸರ್ವಸಮನ್ವಯ ದರ್ಶನ, ಗಾಂಧೀಜಿಯವರ ಅಹಿಂಸಾತ್ಮಕ ಸರ್ವೋದಯ ದರ್ಶನ, ಶ್ರೀ ಅರವಿಂದರ ಪೂರ್ಣದೃಷ್ಟಿ – ಇವುಗಳು ಈ ಕಾಲದ ಮಹಾಕಾವ್ಯವೊಂದರಲ್ಲಿ ಮೂಡಬೇಕಾಯಿತು. ಆ ಮೂಡಿಕೆ ಈ ಮಹಾಕಾವ್ಯದಲ್ಲಿ ನಡೆದಿದೆ ಎಂದು ಹೇಳಿದಾಗ ಯಾರೂ ಬೆಬ್ಬಳಿಸಬೇಕಿಲ್ಲ. ಕಥೆಯೇನೊ ಹಳೆಯದೆ, ಆದರೂ ಅದು, ಅಂದಿನ ದೇವದೇವತೆಗಳು ಇಂದಿನ ನಮ್ಮ ಭಾವನೆಗಳಿಗೆ ಮೆಯ್ಯಾಗಿ ಬೆಳೆದು ಬಂದಿರುವಂತೆ ನಮ್ಮ ಕಾಲದ ಮಹಾಪುರುಷರ ದರ್ಶನಕ್ಕೆ ಮೈಯ್ಯಾಗಿ ಬಂದಿದೆ. ಇಲ್ಲಿ ಕಥೆಯ ಹಂದರ ವ್ಯತ್ಯಾಸವಾಗಿಯೆ ಇಲ್ಲ. ಮಾಡಿಕೊಂಡಿರಬಹುದಾದ ವ್ಯತ್ಯಾಸಗಳು ಮಾಡಿಕೊಂಡ ವ್ಯತ್ಯಾಸಗಳೇನೂ ಅಲ್ಲ ; ಮೂಡಿ ಬಂದ ಬೆಳವಣಿಗೆ, ಪರಿಣಾಮ ವಶಿಯಾದ ಕಾವ್ಯಕಥೆ ಹೇಗೆ ಬೆಳೆಯಬಹುದೊ ಹಾಗೆ ಬೆಳೆದಿದೆ.

ರಾಮನಾಗಲಿ ರಾವಣನಾಗಲಿ, ಸೀತೆಯಾಗಲಿ ಮಂಡೋದರಿಯಾಗಲಿ ತಮ್ಮ ತಮ್ಮ ಪಾತ್ರವನ್ನು ತಾವು ಚಾಚೂ ತಪ್ಪದಂತೆ ನೆರವೇರಿಸುತ್ತಾರೆ. ಆದರೆ ಅವರು ತಮ್ಮನ್ನೂ ಅರಿತುಕೊಳ್ಳುತ್ತಾರೆ. ಇಪ್ಪತ್ತನೆಯ ಶತಮಾನದ ವಿಜ್ಞಾನ ಇಜ್ಜಲೂ ಕೂಡ ವಜ್ರವಾಗುತ್ತದೆಂಬುದನ್ನು ಸಾಧಿಸಿ ತೋರಿಸಿತು. 'ಪಾಪಿಗುದ್ಧಾರಮಿಹುದೌ ಸೃಷ್ಟಿಯ ಮಹದ್‌ವ್ಯೂಹ ರಚನೆಯಲಿ' ಎಂದು ಹೇಳಿದಾಗ ಕವಿ ಹಳೆಯ ಮಾತನ್ನು ಮಾತ್ರವೆ ಹೇಳಿಲ್ಲ. ಯುಗದ ವಾಣಿಯನ್ನೂ ಸಾರಿದ್ದಾರೆ ; ತೋರಿದ್ದಾರೆ. ಸಾರಿರುವುದಕ್ಕಿಂತ ತೋರಿರುವುದು, ಕಂಡದ್ದನ್ನೇ ಕಂಡರಿಸಿರುವುದು ಅತಿ ಮುಖ್ಯವಾದುದು. ರಾವಣ ರಾವಣನಾಗಿಯೆ ಉಳಿದಿದ್ದರೆ, ಎಲ್ಲ ಪಾತ್ರಗಳೂ ತಮ್ಮ ತಮ್ಮ ಪಾತ್ರದಲ್ಲೆ ಹರಿದೂ ಪೂರ್ಣತೆಯ ಸಾಗರವನ್ನು ಮುಟ್ಟದಿದ್ದರೆ ಹೊಸದಾಗಿ ಮೂಡಿಬಂದ ಈ ಕಾವ್ಯವನ್ನು ಓದಲೂ ಬೇಕಾಗಿರಲಿಲ್ಲ. ಸರ್ವೋದಯ ದರ್ಶನವನ್ನು ಕಂಡ ಯುಗ ಅನ್ನಮಯದಲ್ಲಿ ಮಾತ್ರ ಸರ್ವೋದಯವಾಗಲಿ ಎಂದು ಕಾಣಲಿಲ್ಲ. ಸರ್ವರ ಉದ್ಧಾರ, ಹಾಗೂ ಸರ್ವಸ್ತರಗಳ ಉದ್ಧಾರ ಎಂಬುದು ಮುಖ್ಯ. ಎಲ್ಲರ ಉದ್ಧಾರವಾಗಬೇಕೆನ್ನುವಾಗ ಎಲ್ಲ ಕೋಶಗಳ ಉದ್ಧಾರವನ್ನು ಲಕ್ಷಿಸದಿರುವುದು ಸಹಜ. ಆದರೆ ಅದು ತಪ್ಪು. ರಾವಣ, ಮಂಡೋದರಿ, ಕೈಕೆ, ಮಂಥರೆ ಮುಂತಾದ ಹಲವಾರು ಪಾತ್ರಗಳೆಲ್ಲ ಉದ್ಧಾರವಾಗಬೇಕೆನ್ನುವ ಪುಸ್ತಕಾಭ್ಯಾಸಜನ್ಯವಾದ ಆದರ್ಶದ ರಭಸದಲ್ಲಿ ಅವರ ಉದ್ಧಾರದ ಪಾತ್ರವನ್ನು ಮರೆಯುವುದುಂಟು.[೧] ಆದರಿಲ್ಲಿ ಅವರು ತಾವು ಮಾಡಬೇಕಾದ ಕೆಲಸವನ್ನೂ ಮಾಡಿಯೇ ಮಾಡುತ್ತಾರೆ. ಹಾಗಾದರೂ ಅದರಾಚೆಗೆ ನಿಲ್ಲುತ್ತಾರೆ. ಈ ದರ್ಶನವನ್ನು ಕವಿ ಕಂಡಿದ್ದಾರೆ, ಕಂಡರಿಸಿದ್ದಾರೆ. 'ಶ್ರೀ ರಾಮಾಯಣ ದರ್ಶನಂ' ಕಾವ್ಯದ ತುದಿಯಲ್ಲಿ ಯಾವೊಬ್ಬ ವ್ಯಕ್ತಿಯನ್ನು ವ್ಯಕ್ತಿಯನ್ನಾಗಿ ಗುರುತಿಸುವುದೂ ಸಾಧ್ಯವಾಗುವುದಿಲ್ಲ. ಯಾವೊಬ್ಬ ವ್ಯಕ್ತಿಯೂ ಹಸಿಯ ವ್ಯಕ್ತಿಯಾಗಿಯೂ ತೋರುವುದಿಲ್ಲ. ಒಬ್ಬೊಬ್ಬನೂ ವಿಶಿಷ್ಟವಾದ ವ್ಯಕ್ತಿಯಾಗಿಯೆ ಪೂರ್ಣವಾಗುತ್ತಾನೆ. ಇಲ್ಲಿ ಸರ್ವರ ಉದ್ಧಾರವಿದೆ, ಸರ್ವಸ್ತರಗಳ ಉದ್ಧಾರವಿದೆ. ಅದರ ಜತೆಗೆ ಸರ್ವರಿಂದ ಸರ್ವರ ಉದ್ಧಾರವಾಗಿದೆ.[೨] ಇದು ಎಲ್ಲಕ್ಕಿಂತ

---

೧. ಪತಿತ ಪಾತ್ರಗಳನ್ನು ಮೇಲೆತ್ತುವ ಭರದಲ್ಲಿ ಕೆಲವು ಕವಿಗಳು ಪತನವನ್ನೆ, ಪಾಪವನ್ನೆ ಪುಷ್ಟೀಕರಿಸಹೊರಡುವುದನ್ನು, ಕೆಟ್ಟದನ್ನೆ ಒಳ್ಳೆಯದೆಂದು ಸಾಧಿಸುವುದನ್ನು ಕಾಣುತ್ತೇವೆ. ಆದರೆ ಈ ಕವಿ ಎಂಥ ಅದ್ಭುತ ಪವಾಡವನ್ನು ಇಲ್ಲಿ ತೋರಿದ್ದಾರೆಂಬುದು ಆಶ್ಚರ್ಯಕರವಾದ ಸಿದ್ಧಿಯೆ ಸರಿ.



ಶ್ರೇಷ್ಠವಾದ ಆದರ್ಶ. ನಾವು ನಮ್ಮ ಉದ್ಧಾರ ನಮ್ಮಿಂದಲೇ ಸಾಧ್ಯ ಎಂದೆನ್ನುವಾಗ ಒಂದು ತಪ್ಪು ಮಾಡುತ್ತೇವೆ. ಅದು ನಾವು ಸಂಪೂರ್ಣ, ಸರ್ವಸ್ವತಂತ್ರ ಎಂಬ ಭಾವನೆಯ ತಪ್ಪು. ಹೀಗೆ ಭಾವಿಸದಾಗಲೇ ಅಹಂಕಾರ, ಸ್ಪರ್ಧೆ, ದ್ವೇಷ ಹುಟ್ಟಿಕೊಳ್ಳುವುದನ್ನೂ ಕಾಣುತ್ತೇವೆ. ಒಬ್ಬ ಮೇಲೇಳ ಬೇಕಾದರೆ ಮತ್ತೊಬ್ಬ ಬೀಳಲೇಬೇಕು ಎಂಬ ಸಿದ್ಧಾಂತ ಮೂಡಿಬರುತ್ತದೆ. ಇಂತಾಗಿ ಉದ್ಧಾರ ಶಾಂತಿಗಳಿಗಿಂತ ಪತನವೇ ಹೆಚ್ಚಾದೀತು. 'ಶ್ರೀ ರಾಮಾಯಣದರ್ಶನ'ದಲ್ಲಿ ಯಾರು ಯಾರೊಬ್ಬರ ಉದ್ಧಾರಕ್ಕಾಗಿ ತಪಿಸುತ್ತಾರೆಯೋ ತಿಳಿಯುವುದೇ ಇಲ್ಲ. ಯಾರೊಬ್ಬರೂ ತಾವು ಮತ್ತೊಬ್ಬರಿಗಾಗಿ, ಅಂತಹವರೊಬ್ಬರಿಗಾಗಿ, ತಪಸ್ಸನ್ನು ಮಾಡುತ್ತಿರುವುದಾಗಿ ಎಲ್ಲೂ ಹೇಳುವುದಿಲ್ಲ. ಹಾಗೆ ಹೇಳಿದರೆ ಅದು ಶುದ್ಧ ಕಪಟವಾದೀತು. ಅಪ್ರಜ್ಞಾಪೂರ್ವಕವಾಗಿ, ಸ್ವಾತ್ಮೋದ್ಧಾರಕ್ಕಾಗಿ ತಪಸ್ಸು ಮಾಡುವಾಗಲೆ ಪರರ ಉದ್ಧಾರವನ್ನು ಸಾಧಿಸುತ್ತಿರುವುದನ್ನು ಕಾಣುತ್ತೇವೆ. ಸೀತಾದೇವಿ ರಾವಣೋದ್ಧಾರಕ್ಕೆ ಮಾಡುವ ಅಪ್ರಜ್ಞಾಪೂರ್ವಕ, ಹಾಗೂ ಅತೀಂದ್ರಿಯಪ್ರಜ್ಞಾ ಪೂರ್ವಕ ತಪಸ್ಸೆ ಶ್ರೇಷ್ಠ ಸಾಕ್ಷಿ ಇದಕ್ಕೆ :

ಸೂರ್ಯನಾತಪಕೆ ಕಾಲದ ತಪಂ ನೆರವಾಗಲಾ
ಬಜ್ಜರತನಂ ಬರ್ಪುದೊಯ್ಯನಿದ್ದಲಿಗೆನಲ್
ಸೀತೆ ಮಂಡೋದರಿಯರಿರ್ವರ್ ತಪಂಬಡಲ್
ರಾವಣನ ಮನದ ಪೊನ್ ಹೃತ್ತಾಪ ಮೂಷೆಯೊಳ್,
ಕುದಿಕುದಿದು ಕರಕರಗಿ ಕಾಳಿಕೆಯನುಳಿಯದೇನ್ ?
ತಿಳಿಯದೇನ್ ? ಪೊಳೆಯದೇನ್ ? ಪೊಚ್ಚಪೊಸ ಪೊನ್ನಾಗಿ
ತಳತಳಿಸದೇನ್ ?

("ಶ್ರೀ ರಾ. ದ : ನಾನಕ್ಕನೆನ್ ನಿನಗೆ, ತಂಗೆ" – ಪಂಕ್ತಿ : ೧೮೫–೯೧)

ತನಗೆ ಮಹಾ ಘೋರ ಸ್ವಪ್ನರೂಪಿಯಾದೊಬ್ಬನ ಉದ್ಧಾರದ ವಿಷಯದಲ್ಲಿ ಒಬ್ಬ ಜೀವಿ ಮಾಡುವ ತಪಸ್ಸು ನಮ್ಮ ಕಾವ್ಯಲೋಕದಲ್ಲಿ ಅತ್ಯಪೂರ್ವ ನಿದರ್ಶನ. ಅಷ್ಟೆ ಏಕೆ, ರಾವಣನ ಉದ್ಧಾರಕ್ಕೆ ರಾಮನೂ ಅತೀಂದ್ರಿಯ ಸ್ತರದಲ್ಲಿ ಕೈ ನೀಡಿರುವುದನ್ನು ಕಾಣುತ್ತೇವೆ.* ರಾವಣನೊಬ್ಬನ ಉದ್ಧಾರಕ್ಕೆ ಎಷ್ಟು ಮಹಾಶಕ್ತಿಗಳು

---

೨. ಭಾರತದ ರಾಷ್ಟ್ರಧ್ವಜವನ್ನು ಕಂಡು ಹಾಡಿದ ಕವಿ ಈ ಮಾತನ್ನೆ ಹಾಡಿದರು :
ಸಾರಿಬಾ ಸರ್ವರಿಗು ಸ್ವಾತಂತ್ರ್ಯಮಂ,
ಸಾರಿಬಾ ಸರ್ವರಿಗು ಸಾಮ್ಯತ್ವಮಂ
ಸರ್ವರಿಂ ಸರ್ವರಾ ಉದ್ಧಾರಮಂ

ತಮ್ಮ ತಪಸ್ಸನ್ನು ಧಾರೆ ಎರೆಯುತ್ತವೆ ; ಹಾಗೆ ಮಾಡುವಂದು ಎಷ್ಟು ಹೃದಯಗಳು ತಮ್ಮ ಉದ್ಧಾರವನ್ನು ಕಂಡುಕೊಳ್ಳುತ್ತವೆ ಎಂಬುದು ಸೋಜಿಗದ ಸಂಗತಿ. ಇಲ್ಲಿ ಒಬ್ಬರ ಉದ್ಧಾರ ಮತ್ತೊಬ್ಬರ ಉದ್ಧಾರವಾಗುತ್ತದೆ. ಹೀಗೆ ಸರ್ವಸ್ತರಗಳ ಉದ್ಧಾರವನ್ನು, ಸರ್ವರ ಉದ್ಧಾರವನ್ನು ಕಾಣುತ್ತೇವೆ. ಹೀಗೆ ಕಾಣಲು ಸಮನ್ವಯ ದರ್ಶನವೆ ಬೇಕಾಯಿತು. ಒಬ್ಬೊಬ್ಬ ಜೀವಿಯ ಬದುಕೂ ಒಂದೊಂದು ಬಗೆ. ಎಲ್ಲರೂ ಉದ್ಧಾರವಾಗಬೇಕೆಂಬ ಮಾತನ್ನು ಕೇಳಿ, ಯಾವೊಬ್ಬನೂ ತನ್ನ "ಸ್ವಧರ್ಮ" ನಿರ್ದೇಶಿಸಿದ ದಾರಿಯನ್ನು ಬಿಟ್ಟು ತನಗಲ್ಲದ ಅನ್ಯಪಥದಲ್ಲಿ ಆ ತನ್ನ ಉದ್ಧಾರದ ಸಾಧನೆಯನ್ನು ಮಾಡಿಕೊಳ್ಳಹೊರಡುವುದಿಲ್ಲ. ಇಲ್ಲಿ ಸಾಮ್ಯವಾದುವೆಂದರೆ ಎಲ್ಲರಿಗೂ ಒಂದೆ ವೃತ್ತಿ ; ಎಲ್ಲರಿಗೂ ಒಂದೆ ಮಿದುಳು ; ಎಲ್ಲರಿಗೂ ಒಂದೆ ದಾರಿ, ಎಂದಲ್ಲ. ಎಲ್ಲರ ಸುಖವೇ ಗುರಿಯಾಗಿರುವಂತೆ ದಾರಿಯು ಎಲ್ಲರೂ ಹೋಗಬಹುದಾದ, ಅವರವರ ಸ್ವಧರ್ಮಕ್ಕೆ ವಿರುದ್ಧವಲ್ಲದ ಸಹಜವಾದ ದಾರಿ ಆಗಿರಬೇಕಾಗುತ್ತದೆ. ಇಂತಹ ಸಾಮ್ಯವಾದವನ್ನು ಕಾಣುತ್ತೇವೆ ಇಲ್ಲಿ. 'ಶ್ರೀ ರಾಮಾಯಣದರ್ಶನ'ದಲ್ಲಿ ಪ್ರತಿ ವ್ಯಕ್ತಿಯೂ ಪೂರ್ಣತೆಯೆಡೆ ಹೋಗುವಾಗ ತನ್ನ ಸ್ವಧರ್ಮ ನಿರ್ದೇಶಿತವಾದ ದಾರಿಯಲ್ಲೆ ಹೋಗುವುದನ್ನು ಕಾಣುತ್ತೇವೆ. ಹೀಗಾಗಿ ಸರ್ವಧರ್ಮ ಸಮನ್ವಯವನ್ನು ಕಾಣುತ್ತೇವೆ. ಹಾಗಿಲ್ಲದೆ ಎಲ್ಲರೂ ಒಂದೇ ಹಾದಿಯಲ್ಲೆ ಗುರಿಯೆಡೆ ಹೋಗಿದ್ದರೆ ಮಹಾ ಕಾವ್ಯವಾಗುತ್ತಲೆ ಇರಲಿಲ್ಲ, ವೈವಿಧ್ಯವಿಲ್ಲದೆ ಜೀವವಿರುತ್ತಿರಲಿಲ್ಲ. ಎಲ್ಲ ಪಾತ್ರಗಳೂ ಅಂದು ನಿರ್ಜೀವಿಗಳಾಗುತ್ತಿದ್ದುವು. ಈ ಕಾವ್ಯ ಸರ್ವಧರ್ಮ ಸಮನ್ವಯವನ್ನು ಅನ್ಯಾದೃಶ್ಯವಾದ ರೀತಿಯಲ್ಲಿ ಇಲ್ಲಿ ಕಂಡರಿಸಿ ತೋರಿದೆ.

ವ್ಯಕ್ತಿಯ ಹಾಗೂ ಸಮಷ್ಟಿಯ, ಅಪೂರ್ಣತೆಯ ಹಾಗೂ ಪೂರ್ಣತೆಯ ವಿವಿಧ ಸ್ತರಗಳನ್ನೂ ಕಂಡು ಕಂಡರಿಸುವ ಕವಿ ಧನ್ಯರೆ ಸರಿ. ಅಂತಾಗಿ ಈ ಕವಿ

---

*ಮುಂದೆ, ಮುಂಭವದಿ, ಮಗನಾಗಿ ಸಂಭವಿಪಂಗೆ
ತಂದೆಯಾಗುವನಿಂದೆ ಸಂಸ್ಕಾರವೆಸಗುವೊಲ್,
ನೀನಿಂದು ರಾವಣಂಗೆಸಪ ಸತ್‌ಕ್ರಿಯೆಯೊಳಾಂ
ಸುಪ್ರೀತನೆಂ ! ವೈರಿಯಾದೊಡಮೆನಗೆ ಸಮಂ
ಆ ದಿವಂಗತ ದೈತ್ಯನತುಳ ವೀರ್ಯದೊಳಾತ್ಮ
ಸತ್ವದೊಳ್ ನಿರ್ಭೀತಿಯೊಳ್, ತೇಜದೊಳ್, ಮತ್ತೆ
ಚಿತ್ತಶುದ್ಧಿಯೊಳಂತೆ ಚಿತ್‌ತಪಸ್ ಶಕ್ತಿಯಲಿ !
(ಶ್ರೀ ರಾ. ದ. : ದೈತ್ಯನೇರ್ದನ್ ಚೈತ್ಯ ಮಂಚಮಂ : ಪಂಕ್ತಿ ; ೧೬೩–೧೬೯)



ನಮ್ಮ ಕಾಲದ ಮಹಾನುಭಾವಿಗಳ ಮಹಾದರ್ಶನವನ್ನು ಕಂಡು ಕಂಡರಿಸಿದ್ದಾರೆ, ನಮ್ಮ ಕಾಲದ ಇತಿಹಾಸವನ್ನಲ್ಲ ; ಇವರು ಇಲ್ಲಿ ತೋರಿರುವ ಲೋಕ ಇರುವ ಲೋಕಮಾತ್ರವೇ ಅಲ್ಲ ; ಇರಬೇಕಾದ ಲೋಕ ಮಾತ್ರವೇ ಅಲ್ಲ ; ಇರುವ ಲೋಕ, ಮುನ್ನಡೆಯುತ್ತಿರುವ ಲೋಕ, ಮತ್ತು ಇರಬೇಕಾದ ಲೋಕ – ಅದೇ ಪೂರ್ಣತೆಯ ಲೋಕ. ಆದ್ದರಿಂದಲೆ ಗಡಿಬಿಡಿಯ ಲೋಕದಲ್ಲಿರುವ ನಮಗೆ ಅದು ನಮ್ಮ ಶತಮಾನದ ಕೃತಿಯಲ್ಲವೆಂದು ತೋರುತ್ತದೆ. ಎಲೆಯೆ ಮರವಲ್ಲ; ತೊಗಟೆಯೂ ಮರವಲ್ಲ ; ಈ ಗಡಿಬಿಡಿ, ಕಲ್ಲೋಲವೆ ನಮ್ಮ ಜೀವನವಲ್ಲ. ಮುಂದೆ ಬಹುಕಾಲವಾದ ಮೇಲೆ ಶತಶತಮಾನಗಳಾಚೆಯಲ್ಲಿ ನಿಂತ ಕಾಲಪುರುಷ ಯಾವುದು ಈ ಶತಮಾನವೆಂಬುದನ್ನು ನಿರ್ಧರಿಸಬಲ್ಲ. ನಮ್ಮ ಕವಿ, ನಾವು ಇರುವ ಲೋಕವನ್ನು ಮಾತ್ರವೇ ಚಿತ್ರಿಸಿಲ್ಲ. ಇರಬೇಕಾದ, ನಾವು ಹೋಗುತ್ತಿರುವ, ನಮ್ಮ ಯುಗದ ಮಹಾಚೇತನ ಕಂಡೂ ನಾವು ಕಾಣದಿರುವ ಲೋಕವನ್ನು ದರ್ಶಿಸಿ ಚಿತ್ರಿಸಿದ್ದಾರೆ. ಇಂತಹ ಈ ಕವಿಪ್ರತಿಭೆ ಇಪ್ಪತ್ತನೆಯ ಶತಮಾನದಲ್ಲಿ ತನ್ನೊಂದು ಪಾದವನ್ನು ಮಾತ್ರ ಊರಿದೆ ; ಉಳಿದೊಂದು ಪಾದ ಭೂತದಲ್ಲಿ; ಮತ್ತೊಂದು ಅನಾಗತದಲ್ಲಿ.

೧೯೫೬ ಡಿಸೆಂಬರ್

# ಶ್ರೀ ಕುವೆಂಪು ಕೃತಿಗಳ ತಾತ್ತ್ವಿಕ ಹಿನ್ನೆಲೆ

## ೧

ತೀವ್ರ ವಿಚಾರವಾದಿಯಾದರೂ ಅಧ್ಯಾತ್ಮವಾದಿಯೂ ಅಧ್ಯಾತ್ಮ ಜೀವಿಯೂ ಆದ ಕವಿ ಕುವೆಂಪು ಅವರ ನಾನಾ ಪ್ರಕಾರದ ಕಾವ್ಯಗಳನ್ನು ಸರಳ ತತ್ತ್ವಕ್ಕೆ ಒಳಪಡಿಸುವುದು ಕಷ್ಟ. ಕೇವಲ ವಿಚಾರವಾದಿಯಂತೆ ಭೌತವಾದಿಯಲ್ಲದ, ಆತ್ಮವಾದಿಯಾದ ಈ ಕವಿ ನಿರಂಕುಶಮತಿಯಾಗುವ ಕರೆ ನೀಡುವುದು ಆತ್ಮ ಶ್ರೀಗಾಗಿಯೆ ವಿನಾ ಭೌತ ರುಚಿಗಳ ಪೂರೈಕೆಗಾಗಿಯಲ್ಲ. ಸಂಪ್ರದಾಯಗಳ ಮೇಲೆ ಗದಾ ಪ್ರಹಾರ ಮಾಡುವಂತಹ ಕವಿ ಸನಾತನತೆಯ ಶಾಶ್ವತಾಂಶವನ್ನು ವಿನೂತನವಾಗಿಸುವಲ್ಲಿ ಶ್ರದ್ಧೆಯನ್ನೂ ತೋರುತ್ತಾರೆ. ಸಕಾಲಿಕ ಆವೇಶಗಳಿಗೆ ಮಿಡಿದರೂ ಅವರ ತುಡಿತವೆಲ್ಲ ಅಕಾಲಿಕ – ಚಿರಕಾಲಿಕವಾದುದರ ಬಗೆಗೆ. ಒಂದು ಹಿಡಿತಕ್ಕೆ, ತೆಕ್ಕೆಗೆ ಒದಗಿ ಬಾರದ ಭಾರತೀಯ ತತ್ತ್ವ ಲೋಕದಂತೆಯೆ ಕವಿ ಕುವೆಂಪು ಕಾವ್ಯದ ತಾತ್ತ್ವಿಕ ಹಿನ್ನೆಲೆ ಕೂಡ ವಿಲಕ್ಷಣವಾಗಿಯೂ ಮೋಹಕವಾಗಿಯೂ ದಿಗ್ಭ್ರಾಮಕವಾಗಿ ಕಂಡುಬರುತ್ತದೆ.

ಭಾರತೀಯ ತತ್ತ್ವಪ್ರಕಾರಗಳಂತೆಯೆ ಪಾಶ್ಚಾತ್ಯ ತತ್ತ್ವವಿಚಾರಗಳ, ಮನೋವಿಜ್ಞಾನ–ಕಾವ್ಯತತ್ತ್ವಗಳ ವಿಶದ ಪರಿಚಯವುಳ್ಳ ಕುವೆಂಪು ತಮ್ಮ ಅನುಭವದಲ್ಲಿ ಅವೆಲ್ಲಕ್ಕೂ ಒಂದು ಸಾಂಗತ್ಯ ನೀಡಲು ತೊಡಗಿದ್ದಾರೆ. ಒಮ್ಮೊಮ್ಮೆ ಆ ತತ್ತ್ವ ವಿಚಾರಗಳು ಕವಿಯ ಅನುಭವ ಪಾಕದಲ್ಲಿ ಕರಗಿಲ್ಲದಂತೆ ತೋರಬಹುದಾದರೂ, ಒಟ್ಟಾರೆಯಾಗಿ ಅವು ಅವರ ಅನುಭವಗಳನ್ನು ವಿಪುಲಗೊಳಿಸಿರುವಂತೆಯೆ ಅವುಗಳಿಗೂ ಪುನರರ್ಥ ಲಭಿಸಿದೆ, ಅವರದೇ ಆದ ವಿಶಿಷ್ಟಾನುಭವಗಳಿಂದಾಗಿ. ಅವರ ಕೃತಿಗಳನ್ನೆಲ್ಲ ಸಮಗ್ರವಾಗಿ ವಿವೇಚಿಸದೆಯೆ ಕೆಲಕೆಲವೊಂದು ಕೃತಿಗಳಷ್ಟನ್ನೆ ಗಮನಕ್ಕೆ ತೆಗೆದುಕೊಂಡು ಅವರ ತಾತ್ತ್ವಿಕ ನಿಲುವನ್ನು, ಅನುಭವದ ಹರಹನ್ನು ಗಾಢತೆಯನ್ನು ನಿರ್ಧರಿಸ ಹೊರಡುವುದು ಸಾಧುವಾಗಿ ತೋರದು. ಮೇಲುನೋಟಕ್ಕೆ ವಿಸಂಗತವಾಗಿ ಕಂಡು ಬರಬಹುದಾದ ಅಂಶಗಳು ತೋರಿಬರಬಹುದಾದರೂ, ಅವೆಲ್ಲಕ್ಕೂ ಸಾಂಗತ್ಯವೊಂದು ಇದ್ದೆ ಇರುವುದು ಕಂಡುಬರುತ್ತದೆ. ಆದದ್ದರಿಂದಲೆ ಇವರನ್ನು ರೊಮ್ಯಾಂಟಿಕ್ ಎಂದೊ, ತೀವ್ರ



ವಿಚಾರವಾದಿಯೆಂದೊ, ವಿಚಾರಶೀಲ ಸಂಪ್ರದಾಯವಾದಿಯೆಂದೂ, ರಿಯಲಿಸ್ಟ್ ಎಂದೊ, ಅಧ್ಯಾತ್ಮವಾದಿಯೆಂದೊ ಮಾತ್ರವೆ ಕರೆಯುವುದರಿಂದ ಪ್ರಯೋಜನಕ್ಕಿಂತ ನಷ್ಟವೇ ಹೆಚ್ಚು.

ಭಾರತೀಯ ಸಮಾಜಕ್ಕೆ ಅಂಟಿಬಂದ ಜಾತಿ ಪದ್ಧತಿಯನ್ನೂ ವರ್ಣಾಶ್ರಮ ಧರ್ಮವನ್ನೂ ಉಗ್ರವಾಗಿ ಖಂಡಿಸುವಾಗ ತೋರುವ ಕಳಕಳಿಯಂತೆಯೆ ಸನಾತನ ಧರ್ಮದ ನಿತ್ಯಾಂಶಗಳನ್ನು ಒಪ್ಪಿಕೊಂಡು ಸ್ವಾನುಭವವನ್ನಾಗಿ ಮಾಡಿಕೊಳ್ಳುವ ಶ್ರದ್ಧೆಯೂ ಇದೆ. ಭೌತ ವಿಚಾರವಾದಿ ಇವರನ್ನು ಮೆಚ್ಚಿಕೊಂಡೂ ಬಹುವಾಗಿ ಒಪ್ಪದಿರಬಹುದು. ಅಂತೆಯೆ ಶ್ರದ್ಧಾವಂತ ಇವರನ್ನು ಮೊದಲು ಖಂಡಿಸಿ ಆಮೇಲಾ ಮೇಲೆ ತೀವ್ರವಾಗಿ ಆರಾಧಿಸತೊಡಗಬಹುದು. ಸಂಪ್ರದಾಯಸ್ಥ ಭಾವುಕನಿಗೆ ಇವರು ನುಂಗಲಾರದ ಬಿಸಿಯ ತುಪ್ಪವಾಗಿಯೂ ತೋರಬಹುದು. ಇದಕ್ಕೆಲ್ಲ ಕಾರಣ, ಕುವೆಂಪು ಸಿದ್ಧತತ್ತ್ವದ ಸಂಪ್ರದಾಯಸ್ಥ ವರ್ಗಕ್ಕೆ ಸೇರಿದವರಲ್ಲ. ದ್ವೈತಾದ್ವೈತಾದಿ ಯಾವುದೇ ಸಂಪ್ರದಾಯದಲ್ಲಿ ಹುಟ್ಟಿದ್ದರೆ ಅವರಿಗೆ ಈ ಹಲಪಂಥದ ತಾತ್ತ್ವಿಕ ಅನುಭವಗಳಾಗಲಿ ಒದಗಿ ಬರುತ್ತಿದ್ದುವೆ ಹೇಳಬರುವುದಿಲ್ಲ. ಹಾಗೂ, ಪಿತ್ರಾರ್ಜಿತ ಆಸ್ತಿಯ ವಾರಸುದಾರನಿಗೆ ತನ್ನ ಸಂಪತ್ತಿನ ಬಗೆಗೆ ಹೆಮ್ಮೆ ಇರಬಹುದೇ ವಿನಾ, ಅದು ತನ್ನ ಋಜು ಶ್ರಮದ ಫಲವಾಗಿ ಬಂದಾಗ ಬರುವ ಆತ್ಮೀಯಾನುಭವ ಇರುವುದಿಲ್ಲ. ಕುವೆಂಪು ಅವರಿಗೆ ಬಂದ ತಾತ್ತ್ವಿಕ ಹಿನ್ನೆಲೆ ಪಿತ್ರಾರ್ಜಿತವೇನಲ್ಲ ; ಬಹುಪಾಲು ಸ್ವಯಾರ್ಜಿತ. ಎಂತಲೇ ಸ್ವಾನುಭವೈಕತೆ ಇದೆ. ಅವರ ಬುದ್ಧಿಗೆ ಶ್ರೀ ರಾಮಕೃಷ್ಣರ ಸಿದ್ಧಿ ಸೌಭಾಗ್ಯವೂ ಶ್ರೀ ವಿವೇಕಾನಂದರ ಬುದ್ಧಿ – ಶ್ರದ್ಧೆಗಳೂ ಲಭಿಸಿ ಬಂದು ಒಂದು ರೀತಿಯಲ್ಲಿ ಸನಾತನ–ನಿರಂತರಗಳ ಸ್ವಾನುಭವ ಸುಲಭವಾಯಿತು. ಇದು ಕೇವಲ ಅಂಧಶ್ರದ್ಧೆಯಾಗಿದ್ದರೆ ಕವಿಯ ಸ್ವಂತಿಕೆಯೆ ಊನಗೊಳ್ಳುತ್ತಿತ್ತು. ಶ್ರೀರಾಮಕೃಷ್ಣರ ಸರ್ವಗ್ರಾಹಿಯಾದ ಪ್ರಚಂಡ ಪ್ರಭಾವಕ್ಕೂ ಶಕ್ತಿ ಕೃಪೆಗೂ ಪಾತ್ರರಾದರೂ ಶ್ರೀ ವಿವೇಕಾನಂದರು ತಮ್ಮದೆ ಕ್ಷಾತ್ರ ವೈಶಿಷ್ಟ್ಯವನ್ನೂ, ಶ್ರದ್ಧಾ–ಬುದ್ಧಿಗಳ ಸಂಘರ್ಷವನ್ನೂ ಕಳೆದುಕೊಂಡಿಲ್ಲದಿರುವಂತೆ ಶ್ರೀ ಕುವೆಂಪು ಅವರು ಕೂಡ ತಮ್ಮ ಪ್ರಾಕೃತಿಕ ಸಂಕೀರ್ಣತೆಯನ್ನೂ ಉಳಿಸಿಕೊಂಡಿದ್ದಾರೆ ; ಹಾಗೂ ತಾತ್ತ್ವಿಕ ದಾಹವನ್ನೂ ಕಳೆದುಕೊಂಡಿಲ್ಲ. ಅದರಿಂದಾಗಿಯೆ, ಶ್ರೀ ರಾಮಕೃಷ್ಣರ ಸರ್ವಧರ್ಮಸಮನ್ವಯಾನುಭವ ತತ್ತ್ವಕ್ಕೆ ಶ್ರೀ ಅರವಿಂದರ ಪೂರ್ಣಯೋಗ – ಜಗದ್ ಪರಿಣಾಮ ಯೋಗ–ತತ್ತ್ವವನ್ನೂ ಗಾಂಧೀಜಿಯವರ ಸರ್ವೋದಯ ಭಾವವನ್ನೂ ಮೇಳೈಸಿಕೊಳ್ಳುವುದು ಸಾಧ್ಯವಾಗಿದೆ. ಈ ಎಲ್ಲ

ತಾತ್ತ್ವಿಕಾನುಭವಗಳನ್ನೂ ಪಾಶ್ಚಾತ್ಯ ತತ್ತ್ವ ವಿಚಾರಗಳ ಮನೋ ವಿಜ್ಞಾನಾದಿ ವಿಶ್ಲೇಷಣಗಳ ಕೂಡೆ ಅರ್ಥೈಸುವ, ಸಂಪನ್ನಗೊಳಿಸುವ ಕಾವ್ಯ ಪ್ರಕಾರಗಳನ್ನೂ ಅವರು ಕಂಡುಕೊಳ್ಳುವುದು ಸುಲಭವಾಗಿದೆ.

ಕವಿಯ ದರ್ಶನಾನುಭವ ಎಲ್ಲ ಪ್ರಕಾರದ ಕೃತಿಗಳಲ್ಲೂ ಪಡಿಮೆಗೊಂಡಿರುತ್ತದಾದರೂ ಅಲ್ಲೆಲ್ಲ ಒಂದೆ ಹದದಲ್ಲಿ ಮೈಗೊಂಡಿರುತ್ತದೆಂದು ಹೇಳಬರುವುದಿಲ್ಲ. ಅಷ್ಟೆ ಅಲ್ಲ, ಎಲ್ಲ ಕೃತಿಗಳಲ್ಲೂ ಕವಿಯ ಸಂಕೀರ್ಣ ತತ್ತ್ವವೆ ಒಡಮೂಡಿರುತ್ತೆನ್ನುವಂತೆಯೂ ಇಲ್ಲ. ಒಂದೊಂದು ಕೃತಿಯೂ ಕವಿಯ ಒಂದೊಂದು ಅನುಭವದ ಹೊಸಮೈಯಾಗಿರುವಂತೆಯೆ ಅವನ ಒಂದೊಂದು ತತ್ತ್ವಮುಖದ ಹೊರಚಾಚಾಗಿರುತ್ತದೆ. ಸಾಮಾಜಿಕ ಕವನಗಳಲ್ಲಿ ಕಂಡುಬರುವ ಕವಿಯ ತತ್ತ್ವಮುಖವೇ ಬೇರೆ ; ಆಧ್ಯಾತ್ಮಿಕ ಗೀತೆಗಳಲ್ಲಿ ಮೈಗಂಡಿರುವ ಅವರ ದರ್ಶನದ ಭಂಗಿಯೇ ಬೇರೆ. ಕಥನ ಕವನಗಳಲ್ಲಿ ಆದರ್ಶೀಕೃತ ಮಾನವ ಚಿತ್ರಣವಿರುವಂತೆಯೆ ಕಾದಂಬರಿಗಳಲ್ಲಿ – ಕಥೆಗಳಲ್ಲಲ್ಲ – ಮಾನವಾನುಭವದ ಪದರಗಳಷ್ಟೆ ಅಲ್ಲ, ಹಲವಂದದ ಸ್ವಭಾವಗಳ ನಿಷ್ಠುರ ಸತ್ಯ ಚಿತ್ರಣವೂ ಬಂದಿದೆ. ಕುವೆಂಪು ರೊಮ್ಯಾಂಟಿಕ್ ಪಂಥಕ್ಕೆ ಸೇರಿದಂತೆ ತೋರಿಯೂ ಅದರಾಚೆಗೆ ಬೆಳೆದಿರುವುದನ್ನಲ್ಲಿ ಮನಗಾಣಬೇಕು. ವರ್ಡ್ಸ್‌ವರ್ತ್ ಕವಿಯು ಕಾಣಲಾಶಿಸದ ಮಾನವ್ಯದ ನಗ್ನತೆಯನ್ನೆಲ್ಲ, ವಿಕಾರ ಪ್ರಕಾರಗಳನ್ನೆಲ್ಲ ಅವರ ಕಾದಂಬರಿಗಳು ಕಾಣಿಸುವುದನ್ನು ಕಂಡಾಗ ಈ ಕವಿಯ ವ್ಯಕ್ತಿತ್ವದ ಬಹುಮುಖತೆಯನ್ನು ಕಂಡುಕೊಳ್ಳಬಹುದು. ಮಾನುಷಾನುಭವಗಳ ವಿಶೇಷ ಸತ್ವಗಳನ್ನೂ, ವಾಸ್ತವಾತಿಗ ವರ್ತನಗಳನ್ನೂ, ದೈವೀಮಾನುಷ ವ್ಯಾಪಾರಗಳನ್ನೂ ಪ್ರತಿಮಿಸಲು ಕವಿ ಪೌರಾಣಿಕ ಕಥಾ ಪ್ರಮಾಣಕ್ಕೆ – ಪ್ರತಿಮೆಗೆ ತೊಡಗುತ್ತಾರೆ. ಹೀಗೆ, ಕವಿಯ ವಿಪುಲಾನುಭವ, ತತ್ತ್ವವೈಪುಲ್ಯ ಹಲವು ಪ್ರಕಾರದ, ಹಲವು ಚಂದದ – ಛಂದದ ಕೃತಿಗಳನ್ನು ಸೃಷ್ಟಿಸಿಕೊಳ್ಳುತ್ತದೆ. ಆದ್ದರಿಂದಲೆ ಇಂಥ ಕವಿಯ ತಾತ್ವಿಕ ಹಿನ್ನೆಲೆಯನ್ನು ಸರಳರೇಖೆಗೆ ತರಲೆಳಸುವುದು, ಸಾಧು ಸಾಹಸವಾಗಿ ತೋರುವುದಿಲ್ಲ.

ಮಲೆನಾಡಿನ ಕವಿಯಾಗಿ ಪ್ರಾರಂಭಿಸಿದ ಕುವೆಂಪು ಪ್ರಕೃತಿಕವಿಯಾಗಿ ಪ್ರಸಿದ್ಧವಾದುದು ಸಹಜವೆ, ಇವರ ಪ್ರಕೃತಿ ಗೀತಗಳು ರೊಮ್ಯಾಂಟಿಕ್ ಕವಿಗಳ ಪ್ರಭಾವದಲ್ಲಿ ಬೆಳೆದುದು ಸರಿಯೆ. ಅದರಲ್ಲೂ ವರ್ಡ್ಸ್‌ವರ್ತನ ಪ್ರಭಾವ ಅತಿಶಯವಾಗಿಯೆ ಆಯಿತು. ಪ್ರಕೃತಿ ಪ್ರಿಯವಾಗಿ, ಸುಂದರವಾಗಿ, ಬೋಧಕನಾಗಿ ಕಂಡದ್ದುಂಟು. ಕವಿಗೆ ಕವಿಯನ್ನು ತೋರಿಸಿ ಕೊಟ್ಟದ್ದೂ ಉಂಟು. ಪ್ರಕೃತಿ ಜಡವಾಗಿ ತೋರದೆ ಚೈತನ್ಯದಗ್ನಿ ನದಿಯಾಗಿ ಕಂಡದ್ದುಂಟು. 'ಜಡವೆಂಬುದೆಲ್ಲ



ಚೇತನದ ನಟನೆಯ ಲೀಲೆ' ಎಂಬ ನಿರ್ಧಾರಕ್ಕೂ ನಿಸರ್ಗಾನುಭವ ತಂದುದುಂಟು. ಈ ಅರಿವನ್ನುಂಟುಮಾಡುವ ಪ್ರಕೃತಿ ದರ್ಶನದಿಂದ ಒದಗುವ ರಸಾನುಭವ ಶಿವಾನುಭವಕ್ಕಿಂತ ಬೇರೆಂಬಂತೆ ತೋರುವುದಿಲ್ಲ. 'ರಸಾನುಭೂತಿಯ ರಸಪಥವಲ್ಲದೆ ಸತ್ಯಕ್ಕೆ ಗತಿಯಿಲ್ಲ, ಎಂಬ ಅರಿವನ್ನದು ತರುವುದರಿಂದ ಪ್ರಕೃತಿ ಪಲಾಯನ ಭೂಮಿಕೆಯಾಗುವುದಿಲ್ಲ. ಸುಂದರ ಪ್ರಾತಃಕಾಲ ಅರಿವಾಸೆಯನ್ನೂ ಮಾಯಾ ಬಂಧವೆಂದೆನಿಸಿ, ಇರುವಾಸೆಯನ್ನೆ ಮುಕ್ತಿಯ ಆನಂದವೆಂದೆನಿಸುತ್ತದೆ.

ಷೆಲ್ಲಿ ಕೀಟ್ಸ್‌ರಂಥ ರೊಮ್ಯಾಂಟಿಕ್ ಕವಿಗಳಿಗೆ ಪ್ರಕೃತಿ ಬದುಕಿನ ಬವಣೆಯಿಂದ ಕರಗಿಸುವ ಮೋಹಕ ಧಾತುವಾಗುತ್ತದೆ. ಈ ಕವಿ ಪ್ರಾರಂಭದಲ್ಲಿ ಆ ಕವಿಗಳ ಮಾರ್ಗದಲ್ಲೆ ಅವರು ಬರೆದ ವಸ್ತುಗಳನ್ನು ಕುರಿತೇ ಕವನ ಬರೆದರೂ ಕೂಡ, ಬದುಕಿನಿಂದ ಪಲಾಯನಗೊಳ್ಳುವುದನ್ನು, ಈ ನೆಲವನ್ನು ಒದೆದು ಬಾನೊಳಗೆ ತೇಲಿಹೋಗುವುದನ್ನು ಬಯಸುವುದಿಲ್ಲ. 'Skylark', 'Nightingale' ಕವನಗಳ ಧಾಟಿಯಲ್ಲೆ ಹೋಗುವ (–ಆದರೆ, ಕವನವಾಗಿ ಯಶಸ್ವಿಯಾಗಿಲ್ಲದಿರಬಹುದಾದ–) 'ತೇನೆಹಕ್ಕಿ' ಕವನ ಇವರದೇ ಆದ ತಾತ್ತ್ವಿಕ ನಿಲುವನ್ನು ಪ್ರಕಟಿಸುತ್ತದೆ*.

ಪ್ರಕೃತಿಯನ್ನೆಂತೊ ಜೀವನವನ್ನೂ, ಮಾನವ ಪ್ರಕೃತಿಯನ್ನೂ ಸೂಕ್ಷ್ಮವಾಗಿ ಕಂಡಿರುವ ಕವಿ ಕಂಡ ಅನುಭವವಿದು : ಕಾಡು ಹಾಗೂ ಜೀವನ ಎರಡೂ ಒಂದೆ ; ಭೀರುವಿಗೆ ಯಮ ಭಯಂಕರ ; ಧೀರನಿಗೆ ಕಲಾಶಂಕರ. ಶ್ರೀರಾಮಾಯಣ ದರ್ಶನದಲ್ಲಿ ವಿರಾಧಭೀಕರನು ಶ್ರೀರಾಮ ಲಕ್ಷಣರಿಂದ ಹತನಾಗಿ ಸುಂದರ ತುಂಬರನಾಗಿ ಮೂಡಿ ಬಂದಾಗ ಆ ಶಾಪವಿಮೋಚಿತ ಕುಬೇರಾನುಚರನು ಸಾಂಕೇತಿಕವಾಗಿ ಹೇಳುವ ಮಾತಿನಲ್ಲಿ ಅದು ಮಂತ್ರ ಸತ್ಯವಾಗಿ ವೇದ್ಯವಾಗುತ್ತದೆ: "ದಂಡಕಾರಣ್ಯಮಿದು ಭೀರುಗೆ ಭಯಂಕರಂ ರಸಿಕ ಧೀರಗೆ ಕಲಾಶಂಕರಂ ನನ್ನಂತೆವೋಲ್" ಈ ಮಾತು ಜೀವನಾರಣ್ಯಕ್ಕೂ ಹೇಳಿದ ಮಾತು. ಅನಪಾಯಿಯಾದ ರಕ್ಷಿತಕೋಮಲ ಸೌಂದರ್ಯವನ್ನಲ್ಲದೆ ಮಹಾರಣ್ಯಗಳ ಭೀಷಣ

---

* 'ತ್ಯಾಗಿಯಂತೆ ನೆಲವನುಳಿಯೆ,
ಮಮತೆ ಮರಿಯಗೂಡಿದು ;
ಭೋಗಿಯಂತೆ ನಭವ ಹಳಿಯೆ,
ಸಿರಿಯ ತವರು ಬೀಡದು !
ಹಗಲಿನಲ್ಲಿ ನೆಲಕೆ ಸೇರಿ,
ಇರುಳಿನಲ್ಲಿ ಬಾನ್ಗೆ ಹಾರಿ

ರೂಕ್ಷ ಸೌಂದರ್ಯವನ್ನು ಅನುಭವಿಸಿರುವ ಕವಿ ಮೂಲತಃ ಎಲ್ಲ ಅರ್ಥದಲ್ಲೂ ಧೀರ.* ಆದ್ದರಿಂದಲೆ ಮಾನವ ಮನಸ್ಸಿನ ವಿಕಾರ ಪ್ರಕಾರಗಳನ್ನು ಅಪೀಡಿತ ಮನಸ್ಸಿನಿಂದ ಕಂಡು ಚಿತ್ರಿಸಿ ಯಶಸ್ವಿಯಾಗಿದ್ದಾರೆ.

ಶ್ರೀ ವಿವೇಕಾನಂದರು "ದೇವರಾದರೂ ನಮ್ಮನ್ನು ಹೇಡಿಗಳನ್ನಾಗಿ ಮಾಡಿದರೆ ಆ ದೇವರನ್ನೆ ತಿರಸ್ಕರಿಸಿ. ದೇವರಿಗೆ ಅಭೀತಿ, ಅಭಯ ಎಂಬ ವಿಶೇಷಣಗಳಿವೆ," ಎಂದು ಮೊಳಗಿದ್ದರು. ಕುವೆಂಪು ಅವರ ಕಾವ್ಯದಲ್ಲೆಲ್ಲೂ ಹೇಡಿತನ ಗೆದ್ದಿಲ್ಲ. ಅವರು ಭಕ್ತರಾದರೂ ಅಭೀತಿಯನ್ನೆ ಉಸಿರಾಡುತ್ತಾರೆ, "ರವಿಗಿಲ್ಲದ ಭಯ, ಶಶಿಗಿಲ್ಲದ ಭಯ ತಾರಾನಿವಹಕೆ ಇರದ ಭಯ, ನಿನಗೇತಕೆ ಅಣು, ಭಯವನು ಮಾಣು ! ನಿನ್ನನೆ ನೀ ನೈವೇದ್ಯವ ನೀಡು" – ಎಂಬುದಾಗಿ. ವಿಚಾರವಾದಿಯಾದರೂ ಅಷ್ಟೆ, ಅದೇ ಅಭಯ ಮಂತ್ರ ಜಪಿಸುತ್ತಾರೆ. ಈ ನಿಟ್ಟಿನಿಂದ ನೋಡಿದಾಗ ಕುವೆಂಪು ಸ್ವೀಕರಿಸಿರುವ ಯಾವ ತತ್ತ್ವವೂ ಅವರಿಂದ ಹೊಸ ಅನುಭವವನ್ನು ಪಡೆದುಕೊಳ್ಳುತ್ತದೆ.

೨

ಇತ್ತೀಚಿನ ದಿನಗಳಲ್ಲಿ ವಿಚಾರವಾದಿ ಕುವೆಂಪು ಅವರ ಮುಖವನ್ನಷ್ಟೇ ಕಾಣುತ್ತಿರುವ ಬುದ್ಧಿ ಜೀವಿಗಳು ಅವರ ಸಮಗ್ರ ವ್ಯಕ್ತಿತ್ವದ ಧಾತುವಾಗಿರುವ ಸಂಕೀರ್ಣವಾದ, ಹಾಗೂ ಒಮ್ಮೊಮ್ಮೆ ಪರಸ್ಪರ ವಿರೋಧವೆನ್ನಬಹುದಾದ ತತ್ತ್ವಗಳನ್ನು, ಅವರು ಗಾಢವಾಗಿ ಒಲಿದಿರುವ ಆ ಸತ್ತ್ವಗಳನ್ನು, ಕಾಣದೆ ಹೋಗುತ್ತಾರೆ. ಕುವೆಂಪು ಎಷ್ಟೆ ವಿಚಾರವಾದಿಗಳಾದರೂ ಆಧ್ಯಾತ್ಮಿಕ ಶ್ರದ್ಧಾಳು,

---

ಬಿಸಿಲು ತಂಪುಗಳನು ಮೀರಿ
ಸಮತೆಯಿಂದ ನಡೆವುದಂ
ಕಲಿಸು ನನಗೆ ಮೊದಲು ; ಕೊನೆಗೆ
ನೆಲ ಬಾನ್ಗಳ ಪಡೆವುದಂ !"

– 'ನವಿಲು' ಕವನ ಸಂಕಲನ.

* ೧೯೫೦ರ ವೇಳೆಯಲ್ಲಿ ವಿದ್ಯಾರ್ಥಿಯಾಗಿದ್ದ ನಮಗೆ ಬೋಧಿಸುತ್ತಾ ಒಂದು ಬಾರಿ ಶ್ರೀ ಕುವೆಂಪು, 'ಅತ್ತ ಪುಲಿ ಇತ್ತ ದರಿ' ಎಂಬ ಮಾತನ್ನು ಪ್ರಸ್ತಾಪಿಸುವಾಗ ಹೀಗೆ ಪ್ರತಿಕ್ರಿಯೆ ತೋರಿಸಿದರು : "ಹುಲಿಯ ಬಾಯಿಗೆ ಆಹಾರವಾಗಿ ಸಾಯಿ ; ಇಲ್ಲ, ದರಿ ಹಾರಿ ಸಾಯಿ, ಎಂಬರ್ಥ ಸ್ಪಷ್ಟ ; ಆದರದಕ್ಕೆ ಪರಿಹಾರವುಂಟು : 'ಹುಲಿಯನೇರಿ ದರಿಯ ಹಾರು' ಎಂದು" – ಹೀಗೆಂದಾಗ ನನಗೆ ; Shock ಆಯಿತು. ಆಮೇಲಾಮೇಲೆ ಅರ್ಥವಾಯಿತು: "ಧೀರರಿಗೆ ಆ ಸಾಹಸ ಸಹಜ. ಹೇಡಿಗಳು ಹಾಗೂ ಸಾಯುತ್ತಾರೆ, ಹೀಗೂ ಸಾಯುತ್ತಾರೆ. ಕುವೆಂಪು ಅಂಥ ಧೀರ ಮನೋಧರ್ಮದ ವ್ಯಕ್ತಿ" ಎಂದು, ಅದೇ ದಿಟ್ಟನಿಲವು ಅವರ ಕಾವ್ಯದಲ್ಲೂ ವ್ಯಕ್ತಗೊಂಡಿದೆ.



ಭಕ್ತ – ಅನುಭಾವಿ. ಹಳೆಯ ಪದ್ಧತಿಯ ಬಗ್ಗೆ ಬಂಡೆದ್ದವರಾದರೂ ಚಿರನೂತನ ಸನಾತನದ ಕೆಚ್ಚಲಿನ ಸೊರವು ಬಿಡಿಸಿದ ಘಟ್ಟಿಗವತ್ಸ. ಸಂಪ್ರದಾಯವನ್ನು ಖಂಡಿಸಿ ಅವಿನಾಶಿ ಪರಂಪರೆಯನ್ನು ಕಂಡುಕೊಂಡವರು. ಭಗವದ್ಗೀತೆಯನ್ನು ನೀಡಿದ ಶ್ರೀಕೃಷ್ಣ ವೇದದೇವತೆಯ ಹಿರಿಯನಾದ ಇಂದ್ರನ ಮೇಲೇ ಬಂಡೆದ್ದು ತನ್ನ ಜನರನ್ನು ಅವನತ್ತಣಿಂದ ಘನತರದ ಕಡೆಗೆ ತಿರುಗಿಸಿ ಗೆದ್ದ. ತನ್ನ ತಂದೆ ವಸುದೇವ ಇಂದ್ರ ಪೂಜೆಗೆಂದು ಅಣಿ ಮಾಡಿದ್ದ ಸಕಲಪದಾರ್ಥಗಳನ್ನೂ, ತನ್ನವರ ಗೋಸಮೂಹಕ್ಕೆಲ್ಲ ಹುಲ್ಲು ಮೇವನ್ನು ನೀಡುತ್ತಿದ್ದ ಗೋವರ್ಧನಗಿರಿಯ ಪೂಜೆಗಾಗಿ ವಿನಿಯೋಗಿಸಿಸುತ್ತಾನೆ. "ಕಾಣದ ಇಂದ್ರನ ಪೂಜೆಗಿಂತ ಕಾಣುವ ನಮ್ಮ ಹಸುಕರುಗಳಿಗೆಲ್ಲ ಆಹಾರ ನೀಡುವ ಈ ಬೆಟ್ಟದ ಪೂಜೆಯೆ ಅರ್ಥಪೂರ್ಣ" ಎಂದು ಅವರಿಗೆ ಅರ್ಥವಾಗುವ ತರ್ಕದ ಮೂಲಕ ಅವರ ಗಮನವನ್ನು ಅದೃಶ್ಯದಿಂದ ದೃಶ್ಯದ ಕಡೆಗೆ, ಭೀತಿಯಿಂದ ಪ್ರೀತಿಯ ಕಡೆಗೆ ತಿರುಗಿಸುತ್ತಾನೆ. ಆದರೆ ಅದಕ್ಕೆಲ್ಲ ಅವನ ಜನ ಆಮೇಲೆ ಬೆಲೆ ತೆರಬೇಕಾಗುತ್ತದೆ. ಕುಪಿತ ಇಂದ್ರ ಕೃಷ್ಣ ಬಲವನ್ನು ಚಿವುಟಲೆಂದು ಭಯಂಕರ ಮಳೆಗರೆಸುತ್ತಾನೆ ; ಗೋವೃಂದವನ್ನೆ ಕೊಚ್ಚಿ ಹಾಕುತ್ತಾನೆ. ಹೆದರಿದ ತನ್ನೆಲ್ಲ ಗೋ ಜನರನ್ನು ಕೃಷ್ಣ ಗೋವರ್ಧನದ ಕೊಡೆ ಹಿಡಿದು ರಕ್ಷಿಸುತ್ತಾನೆ. ಬಲಿಷ್ಠರನ್ನು, ಬಲಿಷ್ಠ ಸಂಪ್ರದಾಯವನ್ನು ಎದುರಿಸ ಬಯಸುವವರು ಬೆಟ್ಟ ಎತ್ತಬಲ್ಲರಾದರೆ ಸರಿ. ಗೋವರ್ಧನ ಧರಿಸಬಲ್ಲವರು ಮಾತ್ರವೇ ಇಂದ್ರ ಸ್ಪರ್ಧಿಗಳಾಗಬಲ್ಲರು. ಪರ್ವತಗಳ ರೆಕ್ಕೆಯನ್ನು ಸೀಳುವ ವಜ್ರಾಯುಧಧಾರಿಯಾದ ಇಂದ್ರನ ಸಿಡಿಲೇನಾಗಿತ್ತು? ಅದು ಆ ವೇಳೆಗೆ ಆರ್ಪುಳಿದು ಕೂರ್ಪಳಿದು ಬರಿಮಿಂಚಾಗಿತ್ತೆ? ಅಥವಾ ಹಿಂದೆ ರೆಕ್ಕೆ ಕತ್ತರಿಸಿಕೊಂಡಿದ್ದ ಪರ್ವತಗಳೆಲ್ಲ ಗೋವರ್ಧನಗಿರಿಯ ಮೂಲಕ ಉದ್ಧಾರಗೊಂಡುವೇನು, ಶ್ರೀ ಕೃಷ್ಣನ ಮೂಲಕ? ಈ ಪ್ರಸಂಗ ಶ್ರೇಷ್ಠರಾದ ಎಲ್ಲ ಸಂಪ್ರದಾಯ ಪ್ರತಿರೋಧಕಶೋಧಕರಲ್ಲೂ ಕಾಣುತ್ತದೆ. ಸಂಪ್ರದಾಯದ ವಿರುದ್ಧ ಬಂಡಾಯ ಏಳುವ ಆ ಯಾರೂ ಅದನ್ನು ನಿರ್ನಾಮಗೊಳಿಸಲು ಬಯಸುವುದಿಲ್ಲ. ಮೇಲಾಗಿ ಅದನ್ನು ತಮ್ಮ ಕಾಲಕ್ಕೆ ಬಗ್ಗಿಸಿ ಒಗ್ಗಿಸಿ ಚಿರಂಜೀವಿಯಾಗಿಸುತ್ತಾರೆ. ಬಯಕೆಗಳ ಪೂರೈಕೆಗಾಗಿ ಮಾಡುತ್ತಿದ್ದ ಯಜ್ಞವನ್ನು ಕರ್ಮಯಜ್ಞ, ಜ್ಞಾನಯಜ್ಞವಾಗಿ ಮಹತ್ತರಗೊಳಿಸಿದ ಕೃಷ್ಣನ ಕೃಷಿಯಲ್ಲಿ ಇದು ಕಂಡುಬರುತ್ತದೆ. ಅವನೇನೂ ಯಜ್ಞವನ್ನೇ ಮೂಲೋತ್ಪಾಟನ ಮಾಡಲಿಲ್ಲ.

ಭಗವದ್ ವಿಭೂತಿಯಾದ ಕೃಷ್ಣನ ಈ ಮಹತ್ ಸಾಧನೆ ಇತರರಲ್ಲಿ ಇತರ ಪ್ರಮಾಣದಲ್ಲಿ ಕಾಣಬಲ್ಲದು. ಶ್ರೇಷ್ಠ ಕವಿಯಾದ ಕುವೆಂಪು ಅವರಲ್ಲಿ ಕವಿ

ಪ್ರಮಾಣದಲ್ಲಿ ಅದರೊಂದಂಶ ಕಂಡುಬರುತ್ತದೆ. ಭಾರತೀಯತೆ ಸನಾತನಧರ್ಮ ಎಂದೆಲ್ಲ ಕಿರುಚುತ್ತಾ ಜಾತಿ–ಸಂಪ್ರದಾಯಗಳನ್ನೇ ಭಾರತೀಯತೆ ಎಂದೂ ಸನಾತನರ್ಧವೆಂದೂ ಭ್ರಮಿಸಿರುವ ಜನಕ್ಕೆ ಕುವೆಂಪು ಎಷ್ಟುಮಟ್ಟಿಗೆ ನಿಜಸನಾತನಿಗಳೆಂದು, ಭಾರತೀಯರೆಂದು ತಿಳಿಯದು. ಶ್ರೀ ರಾಮಾಯಣ ದರ್ಶನಂ ಕಾವ್ಯದ ಮೂಲಕ, ಶ್ಮಶಾನ ಕುರುಕ್ಷೇತ್ರ, ಬೆರಳ್ಗೆ ಕೊರಳ್ ನಾಟಕ ಕೃತಿಗಳ ಮೂಲಕ, ಅಧ್ಯಾತ್ಮಗೀತೆಗಳ ಮೂಲಕ, ದರ್ಶನ ವಿಮರ್ಶೆಯ ಮೂಲಕ, ಅದ್ಭುತ ಕಾದಂಬರಿಗಳ ಮೂಲಕ ಭಾರತೀಯ ಋಷಿಕವಿ ಸತ್ವವನ್ನು ನಿರಂತರಗೊಳಿಸುವ ಕವಿಯನ್ನು ಸನಾತನ ದ್ವೇಷಿಗಳೆಂದು ಭ್ರಮಿಸುವುದು ಪಾಷಂಡಿತನವಾಗುತ್ತದೆ. ಪ್ರಾಯಃ ಕೆಲವು ದಶಕಾನಂತರ ಅವರು ನಿಜವಾದ ಪರಂಪರೆಯ ವಕ್ತಾರವಾಗಿ, ಪರಂಪರೆಯೆ ಆಗಿ ಬೆಳಗುತ್ತಾರೆಂಬುದರಲ್ಲಿ ನನಗೆ ಸಂದೇಹವಿಲ್ಲ.

ಪ್ರಾಚೀನವಾದ ಶಿವಾಂಶಗಳನ್ನು ತಪ್ಪಾಗಿ ಗ್ರಹಿಸಿ, ಅಶಿವಾಂಶಗಳನ್ನು ಅಪ್ಪಿಕೊಳ್ಳುತ್ತಿರುವ ನಾವು ಅವರ ಕೃತಿವಿಸ್ತಾರದಲ್ಲಿ ಅವುಗಳಿಗೆಲ್ಲ ಯಾವ ಅರ್ಥ ಒದಗಿದೆ ಎಂಬುದನ್ನು ಕಂಡುಕೊಳ್ಳಬೇಕು. ಪುರೋಹಿತಷಾಹಿಯಾಗಿ ಹೋದ ನಮ್ಮ ಧರ್ಮದ ಜಾತಿ ಪದ್ಧತಿಯ, ಹಾಗೂ ಅದನ್ನು ಪುಷ್ಟೀಕರಿಸಲು, ನಿರಂತರಗೊಳಿಸಲು ಹೆಣೆದುಕೊಂಡ ಕಂದಾಚಾರಗಳ ವಿರುದ್ಧವಾಗಿ ಸಿಡಿದೆದ್ದ ಕುವೆಂಪು ಅವರನ್ನು – ದೇವಾಲಯದ ಒಳಸೌಂದರ್ಯವನ್ನೆಲ್ಲ ಮರೆಸಿದ ಇತ್ತೀಚಿನ ಹೊರ ಪ್ರಾಕಾರಗಳನ್ನೇ ಮೂಲ ಸೌಂದರ್ಯವೆಂದು ಭ್ರಮಿಸಿದ ಜನರು, ಸ್ವಹಿತ ಕಂಪನಗೊಂಡುದರಿಂದಾಗಿ ಸಿಡಿದೆದ್ದು ಪ್ರತಿಭಟಿಸಿದರು. ಅಷ್ಟಾಗಿದ್ದರೆ ನಷ್ಟವಿರಲಿಲ್ಲ. ಇವರ ಕೃತಿಸತ್ತ್ವಕ್ಕೆ, ನಾನಾ ಬುದ್ಧಿ ವಿಚಾರ ಕಾರಣಗಳಿಂದಾಗಿ, ಮಂದಾಕ್ಷಿಗಳಾದರು; ಇಲ್ಲವೇ ಅಡ್ಡನೋಟ ಬೀರಿದರು. ಇದರಿಂದಾಗಿ ನಷ್ಟ ಒಂದು ತಲೆಮಾರಿನ ಕಾವ್ಯ ಸೃಷ್ಟಿಯನ್ನೇ ಅಡ್ಡದಾರಿಗೆ ದೂಡುವುದರಲ್ಲಿ ಸಾರ್ಥಕವಾಯಿತು.

ವಿಚಾರದ ರಭಸದಲ್ಲಿ ಕುವೆಂಪು ಪ್ರಾಚೀನ ದುಷ್ಕರ್ಮಗಳ ಬಗೆಗೆ ಒಂದಷ್ಟು ಅತಿಯಾಗಿ ನಿಷ್ಠುರವಾಗಿರಬಹುದು. ಒಮ್ಮೊಮ್ಮೆ ಸಾವಧಾನದ ಅರಿವಿಗೆ ಅರ್ಥ ಬಿಟ್ಟುಕೊಡಬಹುದಾದವುಗಳನ್ನೂ ಅವರು ಉಗ್ರವಾಗಿ ತಿರಸ್ಕರಿಸಿರುವುದಿರಬಹುದು. ಆದರೆ ಅದಾದರೂ ಅನಾದರ ಜನ್ಯವಾದದ್ದಲ್ಲ. ಹಿಂದೂ ಸನಾತನಧರ್ಮದ ಉಗ್ರಪ್ರತಿಪಾದಕರಾದ ಶ್ರೀ ಸ್ವಾಮಿವಿವೇಕಾನಂದರು ಅದೇ ಹಿಂದೂ ಧರ್ಮದ ವಿಪನ್ನಾಂಶಗಳನ್ನು, ಕಡೆಗೆ ಪುರೋಹಿತಷಾಹಿಯನ್ನು ಎಷ್ಟು ಉಗ್ರವಾಗಿ ಖಂಡಿಸುತ್ತಾರೆ ಎಂಬುದನ್ನು ಹಲವು ಜನ ಕೇಳಿಲ್ಲದಿರಬಹುದು:



"Those, Who lay the fault of attempting to bring down the supremacy of the priestly class at the door of any particular person, or body of persons, other than themselves, ought to know that, in obedience to the inevitable law' of Nature, the Brahmin caste is erecting. with its own hands, its own sepulchure; and this is what ought to be. It is good and appropriate, that every caste of high birth and privileged nobility should make it its principle duty to raise its own funeral pyre with its own hands. Accumulation of power was necessary as its diffusion, or rather more so. The accumulation of blood in the heart is an indispensable condition for life: its non-circulation throughout the body means death."[1]

ಈ ಉಗ್ರಕಷಾಘಾತನೀಡಿದ ವೀರಸಂನ್ಯಾಸಿಗೆ ಭಾರತೀಯ ಸನಾತನತೆಯ ಅರಿವು, ಪ್ರೀತಿ ಇದ್ದಷ್ಟು ಮತ್ತಾರಿಗುಂಟು? ಆದ್ದರಿಂದ, ಕುವೆಂಪು ಹಲವೊಮ್ಮೆ ವಿವೇಕಾನಂದರ ವಾಣಿಯನ್ನು ಪುನರುಜ್ಜೀವಿಸುತ್ತಾರೆಂದಷ್ಟೇ ತಿಳಿಯಬೇಕು. ಅದು ತಿಳಿಯದೆ ಖಂಡನದ ಹಾದಿಹಿಡಿದವರಿಗೆ, ಇಲ್ಲವೇ ಶ್ರೀಮಂತ ತಿರಸ್ಕಾರ ತಾಳಿದವರಿಗೆ, ಅಥವಾ ಯಾವುದೋ ಕಾವ್ಯತತ್ತ್ವದ ನೆಪಹೂಡಿ ಅವರ ಕಾವ್ಯಗಳನ್ನೆಲ್ಲ ತಮ್ಮದೇ ಅಖಾಡದಲ್ಲಿ ಬಡಿದುರುಳಿಸಿಬಿಟ್ಟು ತೃಪ್ತಿಪಡೆದವರಿಗೆ ಉತ್ತರವಿಷ್ಟೆ : "ಅಮೆರಿಕದಿಂದ ವಿಜೇತರಾಗಿ ಹಿಂತಿರುಗಿದ ವಿವೇಕಾನಂದರನ್ನೆ, 'ಉತ್ತಮ ವರ್ಗದವನಲ್ಲದ ಅನಧಿಕಾರಿಯಾದ ಆತ ಸಂನ್ಯಾಸಿಯಾಗಲಾರದೂ ಎಲ್ಲಿ ಸಾಧ್ಯತೆಯದೆ? ಹಾಗಿರೋವಾಗ ಹಿಂದೂ ಧರ್ಮದ ವಕ್ತಾರ ಆಗೋದು ಎಂದರೆ ಏನಾಯಿತು?' ಎಂದು ಧಿಕ್ಕರಿಸಿದವರು ಮತ್ತಾರಿಗೆ ಮತ್ತೇನನ್ನು ಮಾಡಲಾರರು?'' ಹಾಗೂ ವಿಚಾರವಾದಿ ಕುವೆಂಪು ಅವರನ್ನಷ್ಟೇ ಸ್ವಕೀಯಕಾರಣಗಳಿಗಾಗಿ ಮೆಚ್ಚಿರುವವರು ಅವರ ಸುದೀರ್ಘ ಜೀವಿಗಳಾದ ಪ್ರಧಾನ ಕೃತಿ ಶರೀರದಲ್ಲಿ ವ್ಯಕ್ತಿಮೆ ಪಡೆದಿರುವ ತತ್ತ್ವ ನಿಷ್ಠವಾದ ದರ್ಶನವನ್ನು ಕಾಣುವುದೂ ಇಲ್ಲ ; ಅನುಭವಕ್ಕೆ ತಂದುಕೊಳ್ಳುವುದೂ ದುರ್ಲಭ. ಇವರು ಹಳೆಯ ಭಾರತೀಯ ತತ್ತ್ವಗಳ ಚಿದಂಶವನ್ನು ಹೇಗೆ ನವೀಕರಿಸುತ್ತಾರೆ ; ಹಳೆಯ ಕಾವ್ಯಗಳ ಸದಂಶವನ್ನು ಹೇಗೆ ನೈರಂತರ್ಯದಲ್ಲಿ ಬೆಳೆಸುತ್ತಾರೆ ಎಂಬುದನ್ನು

1. Swami Vivekananda : The Complete Works-Modern India, Vol. IV, pp. 458

ಅಂಥವರು ಕಾಣಹೋಗುವುದೂ ಇಲ್ಲ. ಈ ಎರಡು ಅತಿಗಳೂ, ತಾವು ವೈಯಕ್ತಿಕ ನಷ್ಟಕ್ಕೆ ಈಡಾಗಿರುವುದಲ್ಲದೆಯೆ ಜನವನ್ನು ಅಡ್ಡದಾರಿಗೆಳೆದು, ಕವಿಗೆ ಅಸಡ್ಡೆ ತೋರಿವೆ.

೩

ಕುವೆಂಪು ಅವರ ಪ್ರಧಾನ ಕೃತಿಗಳ ಹಿನ್ನೆಲೆಯಲ್ಲಿ ಕೆಲಸ ಮಾಡಿರುವ ತತ್ತ್ವ ಚೈತನ್ಯವನ್ನೀಗ ವಿವರಿಸಬಹುದು. ಈ ವಿವೇಚನೆಗಾಗಿ ಅವರ ನಾಲ್ಕು ಕೃತಿಗಳಷ್ಟನ್ನೆ ಶ್ರೀರಾಮಾಯಣ ದರ್ಶನಂ, ಬೆರಳ್ಗೆಕೊರಳ್, ಶ್ಮಶಾನ ಕುರುಕ್ಷೇತ್ರ, ಮಲೆಗಳಲ್ಲಿ ಮದುಮಗಳನ್ನಷ್ಟೆ ಪ್ರಾತಿನಿಧಿಕವಾಗಿ ಗಮನಿಸಬಹುದು.

ಕಾಲದ ದೃಷ್ಟಿಯಿಂದ ಈ ನಾಲ್ಕು ಕೃತಿಗಳಲ್ಲಿ ಮೊದಲನೆಯದಾದ ಶ್ಮಶಾನ ಕುರುಕ್ಷೇತ್ರ ಸುಮಾರು ಐವತ್ತು ವರ್ಷದಷ್ಟು ಹಿಂದೆಯೆ ಹುಟ್ಟಿಕೊಂಡ ನಾಟಕವಾದರೂ ಪರಿಣತ ಮನಸ್ಸಿನ ಸೃಷ್ಟಿಯೆ ಆಗಿದೆ. ಕುವೆಂಪು ತಮ್ಮ ತತ್ತ್ವವನ್ನು ಮೈಗೊಳಿಸುವುದಕ್ಕೆ ಎಂದೂ ಹಳೆಯ ಕೃತಿಗಳನ್ನು ಪೀಡಿಸುವುದಿಲ್ಲ . ಹಳೆಯ ಕೃತಿ ಈ ಯುಗದಲ್ಲಿ ರೂಢಿಗೊಳ್ಳುವಂತಿರುವಷ್ಟು ಸಹಜವಾಗಿ ಆ ಕಾವ್ಯಗಳನ್ನು – ಕಾವ್ಯ ಪ್ರಸಂಗಗಳನ್ನು ಆಡಿಸುತ್ತಾರೆ. ಹಳೆಯ ಕೃತಿ ಈ ಯುಗಕ್ಕೆ ಬೆಳೆದು ಬಂದಂತೆ ಪಾರಿಣಾಮಿಕವಾಗಿ ವಿಭವಿಸಿದಂತೆ ಆ ವಸ್ತುಗಳನ್ನು ನುಡಿಸುತ್ತಾರೆ – ನಡೆಸುತ್ತಾರೆ. ಶ್ಮಶಾನ ಕುರುಕ್ಷೇತ್ರವೂ ಈ ಅರ್ಥದಲ್ಲಿ ಸತ್ತ್ವಸಂಪನ್ನ ಪಕ್ವಕೃತಿಯಾಗಿದೆ.

ವ್ಯಾಸಭಾರತವನ್ನು ಶಕ್ತಿವತ್ತಾಗಿ ಸಮರ್ಥವಾಗಿ ಕನ್ನಡಕ್ಕೆ ತಂದ ಪಂಪ ಕುಮಾರವ್ಯಾಸರು ಮಹಾಭಾರತವನ್ನು ಕೇವಲ 'ಜಯ'ವಾಗಿ ಕಂಡು ಯುದ್ಧ ವಿಜಯದಲ್ಲಿ ಮುಕ್ತಾಯಗೊಳಿಸಿದರು. ಅಂತೆಯೆ ಮಹಾಭಾರತ ಕರ್ತೃ ವ್ಯಾಸರ ಸಮಗ್ರ ದರ್ಶನವನ್ನು ಪೂರ್ಣಾಂಶದಲ್ಲಿ ಕನ್ನಡಿಸಲಾಗಲಿ, ಕಂಡರಿಸಲಾಗಲಿ ಆಗಲಿಲ್ಲ. ಮಹಾಭಾರತ ಯುದ್ಧಾನಂತರದ ಕಥೆ ಮಹಾನುಭವಗಳ ಪರಂಪರೆಯಾಗುವುದನ್ನು ವ್ಯಾಸ ಭಾರತ ತೋರಿಸಿದೆ. ಕುವೆಂಪು ನಾಟಕವಾದರೂ ಭಾರತ ಯುದ್ಧಾನಂತರದ ಘೋರ ವಿನಾಶ ಚಿತ್ರವನ್ನಷ್ಟನ್ನೆ ನೀಡದೆ ಹೇಗೆ ಹೃದಯವಿದ್ರಾವಕ ವಿಲಯದ ನಡುವೆಯೆ ಮತ್ತೊಂದು ಕೀಳಲ್ಲದ ಸೃಷ್ಟಿ ಆವಿರ್ಭವಿಸುತ್ತದೆಂಬುದನ್ನು ಧೀರವಾಣಿಯಿಂದ ಚಿತ್ರಿಸುತ್ತದೆ.* ಅಷ್ಟೇ ಅಲ್ಲ,



ನಾಟಕದ ಕಡೆಯಲ್ಲಿ ಕೃಷ್ಣ ರುದ್ರನಿಗೆ ತೋರಿಸುವ ಕಲಿಯುಗ ದರ್ಶನದಲ್ಲಿ ಕುವೆಂಪು ಅವರ ಈ ಯುಗದ ಬಗೆಗಿನ ತೀವ್ರ ವಿಶ್ವಾಸವೂ ಮುಂಗಾಣ್ಕೆಯ ಸಾಮರ್ಥ್ಯವೂ ಧ್ವನಿತವಾಗಿರುವುದನ್ನು ಕಾಣಬಹುದು. ಬೃಹತ್ತು ಮಹತ್ತುಗಳ ಬಗೆಗೆ ವಿಶೇಷ ಆಕರ್ಷಣೆಯಿರುವ ಕವಿಗೆ ವಿಲಕ್ಷಣವಾಗಿಯೆ ಸಾಮಾನ್ಯ ಮಾನವ ಸಂಸಾರದ ಸದ್ದುಗದ್ದಲಿಲ್ಲದ ಪತ್ರಿಕಾ ವಾರ್ತೆಯಾಗದ ಚೆಲುವಿನ ಬಗೆಗೂ ವಿಚಲಿತ ಪ್ರೀತಿ. ಅದರ ದ್ಯೋತಕವಾಗಿ ಈ ನಾಟಕ – ದ್ವಾಪರ ಕಲಿಗಳಂತಹ ಯುಗ ಪುರುಷರ ಸಮಾಗಮದಿಂದ ಮೊದಲುಗೊಂಡು ಧರ್ಮರಾಯಾದಿ ಕೃಷ್ಣರಿಂದ ಮೈದುಂಬಿಕೊಂಡು ಬೆಳೆಯುವ ಈ ನಾಟಕ – ಸಾಮಾನ್ಯ ಸತಿಪತಿಗಳ ಆನಂದದಲ್ಲಿ ಮುಕ್ತಾಯವಾಗುತ್ತದೆ. ಹಳತೆಲ್ಲ ಹೊನ್ನು ಹೊಸತೆಲ್ಲ ಮಣ್ಣು ಎಂಬ ವಿಷಣ್ಣ ದೃಷ್ಟಿ ಕುವೆಂಪು ಅವರಿಗೆ ಹಿಂದಿನಿಂದಲೂ ಇಲ್ಲ. (ಅದು ಬರಿಯ ನಂಬಿಕೆಯಾಗದೆ ತಾತ್ತ್ವಿಕಾನುಭವವಾಗಿಯೆ ಇರುವುದನ್ನು ಮುಂದೆ ವಿವೇಚಿಸಲಾಗುತ್ತದೆ.) ಅದರಿಂದಲೆ ಈ ನಾಟಕ ಪ್ರಲಯಗೊಂಡ ದ್ವಾಪರ ಮಹಾಯುಗದ ರುದ್ರಭೂಮಿಯ ಮೇಲೆಯೆ ಕಲಿಯುಗ ಮಹಾಕಾವ್ಯ ಶಿಲ್ಪವನ್ನು ನಿರ್ಮಿಸುತ್ತದೆ.

ಈ ನಾಟಕದಲ್ಲಿ ಪ್ರಾಸಂಗಿಕವಾಗಿಯಾದರೂ ದೃಢವಾಗಿ ಮಿಂಚಿರುವ ಮತ್ತೊಂದು ಕಾಣ್ಕೆ, ಕ್ರಾಂತಿ ಹಾಗೂ ವಿಕಾಸ ಮಾರ್ಗಗಳೆರಡರ ಸಾಧನಾ

---

* ನಿವೃತ್ತನಾಗುತ್ತಲಿರುವ ದ್ವಾಪರನಿಗೆ ಕಲಿ ನೀಡುವ ಆಶ್ವಾಸನೆಯಲ್ಲಿ ಇದು ವ್ಯಕ್ತವಾಗುತ್ತದೆ. ತನ್ನ ಯುಗದ ಮಹಾಪುರುಷರಾದ ಭೀಷ್ಮ ದ್ರೋಣ ಕರ್ಣಾದಿಗಳಂತಹವರು ಇನ್ನೊ ಮೂಡಿ ಬರುವರೇ, ಎಂದು ಸಸಂದೇಹವಾಗಿ ಪ್ರಶ್ನಿಸುವ ದ್ವಾಪರನಿಗೆ ಕಲಿ ಇತ್ಯಾತ್ಮಕವಾಗಿ ಸ್ಪಷ್ಟವಾಗಿ ಆಶ್ವಾಸನೆ ನೀಡುತ್ತಾನೆ. ತನ್ನ ಯುಗದವರು ಕುಬ್ಜರಾದರೂ ದೀರ್ಘ ದೇಹಿಗಳಾದ ಹಿಂದಿನವರ ಹೆಗಲೇರಿ ಬರಲಿರುವ ಅವರು ಪೂರ್ವ ಯುಗಗಳವರಿಗಿಂತ ಉನ್ನತರೂ, ವಿಶಾಲ ದೃಷ್ಟಿಯುಳ್ಳವರೂ ಆಗಿರುತ್ತಾರೆ ಎಂದು ನಂಬುಗೆ ನೀಡುತ್ತಾನೆ. ನಾಟಕದ ಆರಂಭದಲ್ಲಿ ಹೀಗೆ ವ್ಯಕ್ತಗೊಂಡದ್ದೆ ಕಡೆಯಲ್ಲಿ ದರ್ಶನವಾಗಿ ಕಣ್ಣಿಗೆ ಕಟ್ಟಿ ಕಾಣುತ್ತದೆ.

ಈ ಕಥಾ ಪ್ರಸಂಗದ ನಿರ್ವಹಣದಲ್ಲಿ ಕುವೆಂಪು ಹೇಗೆ ವ್ಯಾಸ ಪರಂಪರೆಯ ವಾಹಕರಾಗಿದ್ದಾರೆ ಎಂಬುದನ್ನು 'ಪರಂಪರೆ ಮತ್ತು ಕುವೆಂಪು' ಲೇಖನದಲ್ಲಿ ವಿವರಿಸಿರುವೆ.

* "ವಿಕಾಸಮಾಗುವುದರೊಳೆ ವಿನಾಶವೈತಂದ
ಬೋಧನೆಯ ಮಾರ್ಗಕ್ಕೆ ಶತಮಾನಗಳೆ ವೇಳ್ಕುಂ ;
ವಿಪ್ಲವದ ಪಥವಿಡಿಯೆ ದಿನಮೆರಡೆ ಸಾಲ್ಗುಂ.
ಯುಗ ಯುಗಗಳೆರ್ದಗೆ, ಒರ್ದಿನಂ ಗದೆಗೆ !
ಪದಿನೆಂಟೆ ದಿನಗಳೊಳ್ ಮುಗಿದಿರ್ಪುದೊಂದು
ಕಲ್ಪದ ಕಜ್ಜಂ, ಸಿದ್ಧಿಯಿಂ ಬಹ ಪುಣ್ಯಮೇ ಗಂಗೆ,
ಸಾಧನೆಯ ಪಾಪಕ್ಕೆ !'

– ದೃಶ್ಯ ೫, ಶ್ಮಶಾನ ಕುರುಕ್ಷೇತ್ರಂ

ವಿಧಾನದ ಚಿತ್ರದಲ್ಲಿದೆ. ಕ್ರಾಂತಿಮಾರ್ಗ ಪ್ರತಿಪಾದಕನಾದ ಭೀಮನನ್ನೂ ಕ್ರಮಕ್ರಮೇಣ ಹತಾಶೆಗೆ ಹೇಗೆ ಆ ವಿನಾಶದ ಅನುಭವ ದೂಡುತ್ತದೆಂಬುದರ ಸ್ವರಸ ಚಿತ್ರಣ ಬರುತ್ತದೆ. ತನ್ನ ಯುದ್ಧಮಾರ್ಗವನ್ನೆ ಪ್ರತಿಪಾದಿಸುತ್ತಿದ್ದ ಭೀಮನು ದ್ರೌಪದಿಯ ಕೂಡೆ ಧರ್ಮರಾಯ ಅರ್ಜುನರನ್ನು ಚೇಡಿಸುತ್ತಾನೆ. ಐದನೆಯ ದೃಶ್ಯದ ಈ ಸಂದರ್ಭದಲ್ಲಿ ಯುದ್ಧ ಭೂಮಿಯಲ್ಲಿ ನೀರಿಗಾಗಿ ಕೂಗುತ್ತಿರುವ ಮರಣೋನ್ಮುಖ ಸಾಮಾನ್ಯ ಸೈನಿಕನ ಧ್ವನಿ ಕೇಳಿಬರುತ್ತದೆ. ಅವನಿಗೆ ನೀರನ್ನು ನೀಡಲು ಅರ್ಜುನನಿಗೆ ಧರ್ಮಜ ತಿಳಿಸಿದರೆ, ಮೊದಲು ಅವನಾರವನು ಎಂಬುದನ್ನು ತಿಳಿದುಕೊಂಡು ಆಮೇಲೆ ನೀರನ್ನು ನೀಡೆಂದು ಭೀಮ ಒರಟಾಗಿಯೆ ಸಲಹೆನೀಡುತ್ತಾನೆ. ಅರ್ಜುನನ ಕೈಯಿಂದ ನೀರು ಕುಡಿದು ಚೇತರಿಸಿಕೊಂಡ ಸೈನಿಕ ತಾನು ಮಾಡಿದ ಸ್ವಾಮಿದ್ರೋಹದ ಅರಿವಾಗಿ ಎದೆಯೊಡೆದು :

"ಆರಿವರ್ ? ಪಾಂಡವರೇ ? ಅಯ್ಯೋ
ಕೌರವ ಸ್ವಾಮಿಯೊಳ್ ಅಪರಾಧಮೆಸಗಿದನೆ
ತುತ್ತ ತುದಿಯೊಳ್ ಪಾಂಡವರ ಕೈ ನೀರನೀಂಟಿ ?
ಮನ್ನಿಸೆನ್ನನ್, ಪ್ರಭೂ ! ಮನ್ನಿಸಯ್ ! ಮನ್ನಿಸಯ್ !"

ಎಂದು ಹಲುಬಿ ಸಾಯುವ ಚಿತ್ರವಂತೂ ಭೀಮನಿಗೆ ಮೆಚ್ಚುಗೆಯಾಗಿ ತೋರಿದರೂ ಅದು ಅವನು ಹೇಳಿಕೊಳ್ಳಲಾಗದಷ್ಟು ಮರ್ಮಾಘಾತ ಮಾಡುತ್ತದೆ. ಹಾಗೆಯೆ, ತನ್ನ ಮಗ ಘಟೋತ್ಕಚನ ಚಿತೆಗೆ ಬೆಂಕಿಯಿಡಲು ಗೋಳಿಡುವ ಭೀಮನನ್ನು ನೋಡಿ ತನ್ನೊಳಗೆ ಧರ್ಮಜ ಹೇಳುವ ಮಾತು ಕ್ರಾಂತಿ ಮಾರ್ಗಿಗಳ ಪೌರುಷ ಪಾರಮ್ಯ ಮಿತಿಗಳನ್ನು ವ್ಯಂಗಿಸುತ್ತದೆ.

"ಬೀರರಾದೊಡಮೇನ್ ? ಸ್ಥಿತಪ್ರಜ್ಞರಲ್ಲದೀ
ಮಾನವರ್ ಕೋಪಮನೆ ಕೆಚ್ಚೆಂದು ಭ್ರಮಿಸುವರ್
ಕೋಪಂ ಬತ್ತಲೊಡನೆ ಕೆಚ್ಚುಂ ಕರಗುವುದು.
ಕೋಪಮೆಂಬಾ ಮದ್ಯಪಾನಮಿಲ್ಲದೆ ಇವರ್
ಕೊಲೆಗೆ ಕೈಯಿಡಲರಿದು !"

ಹೀಗೆಂದು ಹೇಳಿ ಧರ್ಮಜನೆ ಘಟೋತ್ಕಚನ ಚಿತೆಗೆ ಬೆಂಕಿಯಿಡುವುದಂತೂ ಮತ್ತೂ ಮಾರ್ಮಿಕ. ಈ ದೃಶ್ಯದ ಕಡೆಗೆ ಕರ್ಣವೃತ್ತಾಂತ ತಿಳಿದಮೇಲೆ ಭೀಮ ತೋರುವ ಪ್ರತಿಕ್ರಿಯೆ "ಕಡೆಗುಂ ಪೊಲಸಾದುದೀ ಭಾರತ ಸಂಗ್ರಾಮಂ" ಎಂಬ ಮಾತು ಅವನ ಕ್ರಾಂತಿಮಾರ್ಗಕ್ಕೆ ಅವನೇ ಮಾಡಿಕೊಂಡ ವ್ಯಾಖ್ಯಾನದಂತಿದೆ. ನಾಟಕದಲ್ಲಿ ಇದಂತೂ ಅತ್ಯಂತ ಸಹಜ ರೀತಿಯಲ್ಲಿ ಸಾಧಿತವಾಗಿದೆ.



ಮೂರನೆಯ ತಾತ್ತ್ವಿಕಾಂಶ, ಕವಿ ಕಂಡಿರುವ ಕಾಣಿಸಿರುವ ದರ್ಶನಾಂಶ, ಕೃಷ್ಣನ ಪಾತ್ರದ ಕೇಂದ್ರದಲ್ಲಿ ವ್ಯಕ್ತವಾಗುತ್ತದೆ. ಜಗತ್ತೆಲ್ಲ ನಾಟಕ, ಭಗವಂತ ಅದರ ಸೂತ್ರಧಾರಿ ಎಂಬ ಹಳೆಯ ತತ್ತ್ವವನ್ನು ಮೂರ್ತೀಕರಿಸುವ ವಿಧಾನ ಮನಮೋಹಕವಾಗಿದೆ. ಯುದ್ಧ ಭೂಮಿಯಲ್ಲಿ ಯಾವುದಾದರೂ ಪರ್ಯಾಯ ನಾಮದಿಂದ ತನ್ನನ್ನು ತಿಳಿದೊ ತಿಳಿಯದೆಯೊ ಕೂಗಿ ಕರೆಯುವ ಎಲ್ಲ ಮರಣ ಸನ್ನಿಹಿತ ಜೀವರಿಗೂ ಮುಕ್ತಿದ್ವಾರ ತೆರೆಯುವ ಕೃಷ್ಣನ ಮಾರ್ಗ ವಿಲಕ್ಷಣ ಸುಂದರವಾಗಿದೆ ; ಸೊಗಸಾಗಿ ಚಿತ್ರಿತವಾಗಿದೆ. ತನ್ನ ನಾರಾಯಣನನ್ನು ಯುದ್ಧ ಭೂಮಿಯಲ್ಲರಸುತ್ತ ಕೂಗುತ್ತಾ ಬರುವ ಮುದುಕಿಯ ಕರೆಗೆ ಪ್ರತ್ಯಕ್ಷನಾಗುವ ಕೃಷ್ಣ ನಡೆದುಕೊಳ್ಳುವ ರೀತಿ–ಮಾಯಾಮಂತ್ರದ ಸರಳ ತರಳರೀತಿಯೆಂದೂ ಅಲ್ಲ – ಹಾಗೂ, ವಿದುರನಿಗೆ ಆಮೇಲೆ ತನ್ನ ರೀತಿಯನ್ನು ಸ್ಪಷ್ಟಪಡಿಸುವ ಅವನ ಮಾತುಗಳು ಕವಿಯ ದಿಟ್ಟ ತಾತ್ತ್ವಿಕತೆಯನ್ನು ಸ್ಪಷ್ಟಪಡಿಸುತ್ತದೆ.

"ಭಕ್ತಿಯೋಗಿಯೆ, ವಿದುರ, ವೇದಶಾಸ್ತ್ರಗಳೆಲ್ಲ
ಎನ್ನೊಂದಂಶದ ವಾಣಿ ; ಪೂರ್ಣವಾಣಿಯಲ್ತು.
ವೇದಗಳಿಗಿಂತಲುಂ, ಶಾಸ್ತ್ರಗಳಿಗಿಂತಲುಂ,
ಯೋಗಿ ಮುನಿಗಳಿಗಿಂತಲುಂ ಪಿರಿದು ಎನ್ನೆದೆಯ
ಬಿತ್ತರಂ. ವೇದಂಗಳೆಡೆಗೊಡದ, ಶಾಸ್ತ್ರಗಳ್
ಬಳಿ ಸೇರಿಸದ, ಸಿದ್ಧಯೋಗಿಗಳ್ ಕೊಳ್ಳದಾ
ಪಾಪಿಗಳಿಗೆನ್ನೆದೆಯೊಳೆಡೆಯಿಹುದು : ಸೊಗಮಿಹುದು.
ಎನಗೆ ಬೇಡದವರಾರಿಲ್ಲ ; ತಾವಿಹುದು
ಎನ್ನೊಡಲೊಳೆಲ್ಲರ್ಗೆ : ರಹಸ್ಯಮಿದನಾಲಿಸಯ್.
ಎನ್ನೊಳ್ ನಿಷೇಧಮೆಂಬುದೆ ಇಲ್ಲ ; ನೀತಿಯುಂ
ಸತ್ಯಮಂ, ಧರ್ಮಮುಂ ಮೆಯ್ಯೊಡವೆಗಳೆನಗೆ ;
ಎನ್ನಂ ಬಿಗಿವ ಶೃಂಖಲೆಗಳಲ್ಲ. ಭಕ್ತವರ,
ಆನ್ ಬರಿಯ ತತ್ತ್ವಗಳ ಗುಂಪಲ್ಲ ; ಮೇಣಾನ್
ಬರಿಯ ವ್ಯಕ್ತಿಯುಮಲ್ಲ ; ರಸಪೂರ್ಣಮಾಗಿರ್ಪ
ಜಗದಾದಿ ಚೈತನ್ಯ ವ್ಯಕ್ತಿತ್ವಮೆಂದರಿ !
ಕ್ಷುದ್ರಮಹ ನಿಯಮಗಳಿಗಿಂತಲುಂ ದೊಡ್ಡವನ್ ;
ಶುಷ್ಕಮಹ ತತ್ತ್ವಗಳಿಗಿಂತಲುಂ ರಸಮಯನ್ ;
ನೆರೆತಿರ್ಪ ನೀತಿಗಿಂತಲುಮಾನ್ ಮೊದಲವನ್ !

ನಾಟಕದ ರಂಗದಲಿ ರಾಜ ಮಂತ್ರಿಗಳೆಂಬ,
ಸೈನಿಕರ್ ಸೇನಾನಿ ಪ್ರಜೆಗಳೆಂದೆಂಬ
ಸಜ್ಜನರ್ ದುರ್ಜನರ್ ಪಾಪಿಗಳೆಂದೆಂಬ,
ಭೇದಮಂ ಲೀಲೆಗೋಸುಗಮಾಗಿ ನಾನಲಿವೆನ್.
ಲೀಲೆ ಮುಗಿಯಲ್ಕೆಲ್ಲರೊಂದಾಗಿ ಪೋದಪರ್ !
ನಾಟಕದ ಕಳ್ಳನನ್ ಪಿಡಿದು ಸೆರೆಮನೆಗುಯ್ಯೆ
ಏನಾಟಮಾದಪುದು ! ಕೇಳದೋ. ಭಕ್ತವರ !
ಚಿತ್ರ ಸ್ವಪ್ನವನೊಡೆಯುವಂ ಬಾ, ಪೋಗುಮಂ"

ಈ ಮೇಲಿನ ಕೃಷ್ಣವಾಣಿಯಲ್ಲಿ ಎರಡು ಅಂಶಗಳಿವೆ. ಒಂದು, ಭಕ್ತರು ಭಗವಂತನನ್ನು ವರ್ಣಿಸುವ ರೀತಿ. ಅಂದರೆ, ಭಗವಂತ ವೇದ ವೇದಾಂತಗಳಿಗಿಂತಲೂ ದೊಡ್ಡವನು, ಎಂಬ ಶ್ರದ್ಧೆ. ಮತ್ತೊಂದು, ಆತ ಜಗನ್ನಾಟಕ ಕರ್ತೃ ಸೂತ್ರಧಾರ ಎಂಬುದು. ಈ ಹಳೆಯ ತತ್ತ್ವಗಳ ಮುಂದುವರಿಕೆಯಾಗಿ ನಾಟಕದಲ್ಲಿ ಈ ತಾತ್ಪರ್ಯ ಒದಗುತ್ತದೆ. ಅದೆಂದರೆ, ಅಂಥ ಭಗವಂತನಿಗೆ ಪ್ರಿಯಾಪ್ರಿಯವೆಂಬುದಿಲ್ಲ ; ಎಲ್ಲಕ್ಕೂ ಅವನಲ್ಲಿ ಸಮಾನ ತೆರವುಂಟು ; ಹಾಗೂ, ಅದರಿಂದಾಗಿ ಲೋಕದಲ್ಲಿ ವಿರಸಕ್ಕೀಡಾಗಿದ್ದ ಪಾತ್ರಗಳು ಸದಸತ್‌ದೂರವಾದ ಅಲ್ಲಿ, ಆ ಭಗವಂತನ ನೆಲೆಯಲ್ಲಿ – ನೇಪಥ್ಯದಲ್ಲಿ–ಸಮರಸವಾಗಿರುತ್ತಾರೆ, ಎಂಬುದಾಗಿ ಅರಿವಾಗುತ್ತದೆ.

ಈ ತತ್ತ್ವದ ಧಾಟಿ ನಾಟಕೀಯವಾದ ಸುಂದರ ಪ್ರಕರಣದೆಡೆಗೆ ಒಯ್ಯುತ್ತದೆ. ದ್ವಾಪರನನ್ನು ಬೀಳ್ಕೊಟ್ಟ ಕೌರವ ತನ್ನವರನ್ನು ಬಿಡದೆ ವಂಚಿಸಿದ ಕೃಷ್ಣನನ್ನು ಅದರಲ್ಲೂ ಕರ್ಣನನ್ನು ಕುಹಕದಿಂದ ಕೊಲ್ಲಿಸಿದವನನ್ನು ನೆನೆದು "ಎಲವೋ ಕೃಷ್ಣಾ ! ಕೃಷ್ಣಾ ! ಕೃಷ್ಣಾ" ಎಂದು ಕಿರಿಚಿಕೊಳ್ಳುತ್ತಾನೆ. ಮೊದಲೆ ತಿಳಿದಂತೆ, ಯಾರಾಗಲಿ, ತಪ್ಪಿಯಾಗಲಿ ತನ್ನನ್ನು ಕರೆದವರಿಗೆ ತನ್ನನ್ನು ತೆರೆದುಕೊಳ್ಳುವೆನೆಂದು ಹೇಳಿಕೊಂಡ ಕೃಷ್ಣ ಅಲ್ಲಿಗೆ ಒಡನೆಯೆ ಬರುತ್ತಾನೆ. ಆಗ ಕೃಷ್ಣ ಕೌರವರಿಗೆ ನಡೆವ ಸಂಭಾಷಣೆ ನಾಟಕಕ್ಕೆ ಹೊಸತಿರುವು ತಂದು ಕೊಡುತ್ತದೆ. ಜಗನ್ನಾಟಕ ತತ್ತ್ವ ಅಲ್ಲಿ ಸುಂದರವಾಗಿ ಸಾರ್ಥಕವಾಗುತ್ತದೆ. ನಾಟಕದ ರಂಗಸ್ಥಲದಲ್ಲಿ ತನ್ಮಯಗೊಂಡು ಅಭಿನಯ ಮಾಡುವ ಕೌರವ ನೇಪಥ್ಯದಲ್ಲಿ ಸ್ವರ್ಣಸ್ವಪ್ನ ಒಡೆದು ಕೃಷ್ಣನೊಡನೆ ನಡೆದು ಕೊಳ್ಳುವ ರೀತಿಯು, ಎಲ್ಲಾ ಪಾತ್ರಗಳ ತೋರಿಕೆಯ ಹಾಗೂ ಆಂತರಿಕವಾದ ಸತ್ತ್ವವನ್ನೂ ಒರೆಹಚ್ಚಿ ತೋರಿಸುತ್ತದೆ. ಹೀಗೆ ಈ ಹಳೆಯ ತತ್ತ್ವದ ಹೊಸ ಸಾಕ್ಷಾತ್ಕಾರ ಇಲ್ಲಿ ನಡೆಯುತ್ತದೆ.



೪

ಇದೇ ರೀತಿಯಲ್ಲಿ ಬೆರಳ್‌ಗೆ ಕೊರಳ್ ನಾಟಕದಲ್ಲಿ ಹಳೆಯ ಗುರುತತ್ತ್ವ ಕರ್ಮತತ್ತ್ವ ಯಜ್ಞತತ್ತ್ವಗಳೆ ಹೇಗೆ ಹೊಸ ಅರ್ಥಗಳನ್ನು ಕಂಡುಕೊಳ್ಳುತ್ತವೆಂಬುದನ್ನು, ವ್ಯಾಸರನ್ನು ಹೇಗೆ ವರ್ತಮಾನದ ಮೂಲಕ ನೈರಂತರ್ಯಕ್ಕೆ ಕರೆದೊಯ್ಯುತ್ತವೆಂಬುದನ್ನೂ ವಿವೇಚಿಸಬಹುದು.

ವ್ಯಾಸ ಭಾರತದಲ್ಲಿ ಸಂಗ್ರಹವಾಗಿ ಚಿತ್ರಿತವಾಗಿರುವ ಏಕಲವ್ಯಕಥೆ ಜನ ಮನಸ್ಸಿನಲ್ಲಿ ಹೇಗೋ ಬೆಳೆದು ಬಂದಿದೆ – ಪಂಪ ಕುಮಾರವ್ಯಾಸರ ಗಮನವನ್ನೂ ಈ ಕಥಾಸಮಸ್ಯೆ ಏಕೊ ಏನೊ ಸೆಳೆದಿಲ್ಲದಿರುವುದೆ ಆಶ್ಚರ್ಯವಾದರೂ, ಏಕಲವ್ಯನ ಗುರುಭಕ್ತಿ ಗಾದೆಮಾತಾಗಿಯೂ ಬೆಳೆದುಬಂದಿದೆ. ಹೀಗಾಗಿ ಕನ್ನಡದ ಮೂವರು ಪ್ರಸಿದ್ಧ ಬರೆಹಗಾರರ – ಕೈಲಾಸಂ, ಗೋವಿಂದ ಪೈ, ಕುವೆಂಪು ಅವರ ಗಮನ ಸೆಳೆದಿದೆ. ಮೇಲಾಗಿ ಮೂವರಲ್ಲೂ ನಾಟಕವಾಗಿ ಮೂಡಿದೆ. ಅಂದರೆ, ಈ ವಸ್ತುವಿನಲ್ಲಿ ನಾಟಕೀಯತೆ ಅಧಿಕವಾಗಿರಬೇಕೆಂದು ಭಾವಿಸಬಹುದು. ಈ ಮೂವರೂ ಕೃತಿಕಾರರಲ್ಲಿ ಈ ವಸ್ತು ಹೇಗೆ ಮೂಡಿಬಂದಿದೆಯೆಂಬುದರ ವಿವೇಚನೆಗೆ ತೊಡಗದೆಯೆ, ಪ್ರಸ್ತುತ ಕವಿಗಳಲ್ಲಿ ಇದು ಎಷ್ಟರಮಟ್ಟಿಗೆ ತಾತ್ತ್ವಿಕವಾಗಿ ಮೂಡಿದೆ ಎಂಬುದಷ್ಟನ್ನೆ ಗಮನಿಸಬಹುದು.

ಏಕಲವ್ಯನ ಕಥೆಯನ್ನು ವ್ಯಾಸರು ನಿರೂಪಿಸುವಾಗ ಅವರಿಗೆ ಅದು ಯಾವ ಸಮಸ್ಯೆಯನ್ನು ತಂದೊಡ್ಡಿತೊ ತಿಳಿಯದಾದರೂ ನಮ್ಮಯುಗಕ್ಕೆ ಆ ವಸ್ತು ಕೆಲವೊಂದು ಘನ ಸಮಸ್ಯೆಗಳನ್ನು ಒಡ್ಡುತ್ತದೆ ಎಂಬುದರಲ್ಲಿ ಸಂದೇಹವಿಲ್ಲ. ಗುರು ದ್ರೋಣರು ಅರ್ಜುನನಿಗೆ ಮತ್ತು ಅವನಂತಹ ಕ್ಷತ್ರಿಯರಿಗೆ ಮಾತ್ರ ಶಾಸ್ತ್ರಾಭ್ಯಾಸ ಮಾಡಿಸುವುದು ಹಾಗೂ ಏಕಲವ್ಯನನ್ನು ಒಪ್ಪಿಕೊಳ್ಳದಿರುವುದು, ಅದಕ್ಕೆ ಕೋಪಗೊಳ್ಳದ ಏಕಲವ್ಯ ಏಕನಿಷ್ಠ ಗುರುಭಕ್ತಿಯಿಂದ ಮಹಾ ನಿಷ್ಣಾತ ಧ್ವನಿಯಾಗುವುದು, ಕಾಡಬೇಟೆಗೆ ಹೋಗಿದ್ದಾಗ ಅದನ್ನು ತಿಳಿದ ಅರ್ಜುನನಿಗೆ ಅದರಿಂದ ಬಂದ ಈರ್ಷೆಯನ್ನು ನಿವಾರಿಸಲೋಸುಗ ಏಕಲವ್ಯನ ಹೆಬ್ಬೆರಳನ್ನು ದ್ರೋಣಗುರುಗಳು ಕಾಣಿಕೆಯಾಗಿ ಪಡೆದುಕೊಂಡು ಸಮಸ್ಯೆಯನ್ನು ಪರಿಹಾರಮಾಡುವುದನ್ನು – ಇದಿಷ್ಟೂ ಈ ಕಥಾವಸ್ತುವಿನಲ್ಲಿರುವ ಘಟನೆಗಳು. ನಮ್ಮ ಆಧುನಿಕ ವಿಚಾರವಂತ ಮನಸ್ಸು ಇದನ್ನು ನೋಡುವ ಬಗೆ ಹೇಗೆ ? ವರ್ಗಕಲಹವನ್ನು ದೀರ್ಘಶೋಷಣೆಯನ್ನು ಖಂಡಿಸುವ ಪ್ರಗತಿಪರರು ಇದನ್ನು ನೋಡುವ ಬಗೆ ಹೇಗೆ? ಹಳೆಯದೇನನ್ನೂ ಒಳಹೊಕ್ಕು ನೋಡದೆಯೆ, ಅದನ್ನು ಅದರ ಹೊರ ರೂಪದಲ್ಲೆ ಸ್ವೀಕರಿಸಿ ಪೂಜಿಸುವ ಮನಸ್ಸು ನೋಡುವ ಬಗೆ

ಹೇಗೆ? ಒಂದು ಮಹಾ ಪರಂಪರೆಯ ವಕ್ತಾರರಾಗಬೇಕಾದ ಸಂವರ್ಧಕರಾಗಬೇಕಾದ ಒಬ್ಬ ಕವಿ ನೋಡುವ ರೀತಿ ಹೇಗೆ ?

ಅಂತೂ ಕುವೆಂಪು ಕಂಡಿರುವ ರೀತಿ ಬೆರಳ್‌ಗೆ ಕೊರಳ್ ನಾಟಕದಲ್ಲಿ ಹೀಗೆ ಮೂಡಿದೆ : ದ್ರೋಣರನ್ನು ಕುವೆಂಪು ಕೇವಲ ವಿಚಾರವಾದಿಯಾಗಿ ಇಲ್ಲವೆ ಬಂಡಾಯಗಾರರಾಗಿ ತುಳಿಯಬಹುದಿತ್ತು. ಏಕಲವ್ಯನನ್ನು ಶೋಷಿತವರ್ಗದ ವೀರನನ್ನಾಗಿ ಮಾಡಬಹುದಿತ್ತು. ಅಥವಾ ಗುರುಭಕ್ತಿಯ ಪ್ರತಿಪಾದನ ರಭಸದಲ್ಲಿ ಏಕಲವ್ಯನನ್ನು ಬೋಳೆಯ ವ್ಯಕ್ತಿಯನ್ನಾಗಿ ಸರಳಗೊಳಿಸಬಹುದಾಗಿತ್ತು, ಮೂಢಭಕ್ತನನ್ನಾಗಿ ಉಳಿಸಬಹುದಾಗಿತ್ತು. ಆದರೆ, ಕವಿ ತಾನು ನಿರ್ವಹಿಸಹೊರಟಿರುವುದು ಬರಿಯ ಸಾಮಾಜಿಕ ವಿಷಯವನ್ನಲ್ಲ – ಅದರ ಸಮಸ್ಯೆಗೆ ಸಾಮಾಜಿಕ reference ಇದ್ದರೂ ಕೂಡ – ಎಂಬ ಅರಿವಿದೆ. ಮಹಾಭಾರತ ಕಾವ್ಯ ಶರೀರದಲ್ಲಿ ಆ ಕಥಾಸಮಸ್ಯೆಗೆ ಏನೊಂದು ಅರ್ಥವುಂಟು? ಅದನ್ನು ಕಂಡುಕೊಳ್ಳುವ ಮೂಲಕ ಇಡೀ ಮಹಾಕಾವ್ಯಕ್ಕೇ ಒಂದು ಅರ್ಥವನ್ನು ಹೇಗೆ ಕಂಡು ಕೊಳ್ಳಬಹುದು – ಎಂಬ ಸಮಸ್ಯೆ ಕುವೆಂಪು ಎದುರಿಸುತ್ತಾರೆ. ಈ ನಾಟಕವನ್ನು ಕವಿ ಶ್ರೀರಾಮಾಯಣದರ್ಶನಂ ಕೃತಿ ರಚಿಸುವಂದೆ ರಚಿಸುತ್ತಾರೆಂಬುದನ್ನೂ ಮರೆಯುವಂತಿಲ್ಲ. ಆಗ ಇದ್ದ ಸಾಮಾಜಿಕ ಪರಿಸರ ಈಗಿನಂತೆ ನಮ್ಮ ರೀತಿಯ ಬಂಡಾಯ ವಿಚಾರಗಳಿಂದ ಉದ್ದೀಪ್ತವಾಗಿರಲಿಲ್ಲ. ಒಂದು ವೇಳೆ ಈಗಿನ ನೆಲೆಯಲ್ಲೆ ನಿಂತು ಏಕಲವ್ಯ ಕಥೆಯನ್ನು ನಿರ್ವಹಿಸಿದ್ದರೆ ಏನಾಗುತ್ತಿತ್ತೆಂದು ಹೇಳಬರುವುದಿಲ್ಲ. ಸಾಮಾಜಿಕಾರ್ಥ ಮಾತ್ರವಾಗಿ ಅರ್ಥೈಕೆಗೊಂಡು ಬಿಡುತ್ತಿದ್ದ ಒಂದು ಮಹಾಕಾವ್ಯ ಘಟನೆಯನ್ನು ಅದಕ್ಕೆ ಆ ಕಾವ್ಯದ ಆ ಕಾಲದಲ್ಲಿ ಸಾಮಾಜಿಕಾರ್ಥ ಮಾತ್ರವೆ ಇದ್ದಿರಬಹುದಾಗಿದ್ದರೂ – ಹಾಗೆ ಮಾಡದೆ, ಸಮಗ್ರ ಕೃತಿಯ ಅರ್ಥ ಶೋಧನಕ್ಕೆ ಕೇಂದ್ರ ದ್ವಾರವನ್ನಾಗಿ ಪರಿವರ್ತಿಸುವ ಮೂಲಕ ಕುವೆಂಪು ಕೇವಲ ಸಕಾಲಿಕ ಕೃತಿಕಾರರಾಗದೆ ತ್ರಿಕಾಲಿಕ ಕೃತಿಕಾರರಾಗತೊಡಗಿದ್ದಾರೆ.

ಇಲ್ಲಿ ಬರುವ ಏಕಲವ್ಯ ತೀವ್ರ ಗುರುಭಕ್ತ, ಆದರೆ ಮೂಢನಲ್ಲ. ಗುರುಭಕ್ತಿಯ ಏಕಾಗ್ರತೆ ಅವನ ವೃತ್ತಿ–ಪ್ರವೃತ್ತಿಗಳಲ್ಲಿ ಸಮಾನವಾಗಿ ಹರಿದಿದೆ. ಹಾಗೂ ಅವನನ್ನು ಉನ್ನತ ಆಧ್ಯಾತ್ಮಿಕಸ್ತರಕ್ಕೆ ಎತ್ತರಿಸಿದೆ. "ಜನುಮ ಜನುಮ ಶತಕೋಟಿ ಸಂಸ್ಕಾರ, ಪರಮ ಚರಮ ಸಂಸ್ಕಾರಿ" ಯೆಂದು ಅವನು ಕಲ್ಪಿಸಿ ಆರಾಧಿಸಿದ್ದ ಗುರು ಕೂಡ ಪರಿಣಾಮಗೊಳ್ಳುತ್ತಾನೆ. ಗುರುವಿಗೇ ಗುರುಮಹತ್ತನ್ನೂ ವ್ಯಂಜಿಸಿದಂತಿರುತ್ತದೆ ಅವನ ನಿಷ್ಠೆ. ಶಿಷ್ಯತ್ವದ ಎರಡು ಮುಖವನ್ನು



ಏಕಲವ್ಯ – ಅರ್ಜುನರು ಪ್ರತಿನಿಧಿಸುತ್ತಾರೆ. ಒಬ್ಬನಿಗೆ ಗುರು ಆತ್ಮಸಾಕ್ಷಾತ್ಕಾರ ಹೇತುವಾದರೆ, ಮತ್ತೊಬ್ಬನಿಗೆ ಲೌಕಿಕ ಸಾಮರ್ಥ್ಯವರ್ಧನದ – ಪ್ರಸಿದ್ಧಿಲಾಭದ ಮಾಧ್ಯಮವಾಗುತ್ತಾನೆ. ಒಬ್ಬ ತನ್ನನ್ನು ಗುರು ಮೂಲಕವಾಗಿ ಬೆಳೆಸಿಕೊಂಡಂತೆಯೆ ಗುರುಮೂಲಕವಾಗಿಯೇ ಅರ್ಪಿಸಿಕೊಂಡು ಸಚ್ಚಿದಾನಂದ ಗುರುವಿನಲ್ಲಿ ಲೀನವಾಗುತ್ತಾನೆ. ಮತ್ತೊಬ್ಬ, ತನ್ನ ಲೌಕಿಕ ಈರ್ಷಾಸೂಯೆಗಳನ್ನು ಸಾಧಿಸಿಕೊಡಲು ಗುರುವನ್ನು ಹತಾರವಾಗಿ ಮಾಡಿಕೊಳ್ಳುತ್ತಾನೆ. ಗುರುಕಾಣಿಕೆಯಾಗಿ ತನ್ನ ಹೆಬ್ಬೆರಳನ್ನು ಕತ್ತರಿಸಿಕೊಡುವ ಏಕಲವ್ಯನಿಗೆ ತಾನು ಸಾಮಾಜಿಕವಾಗಿ ಬಲಿಯಾಗುತ್ತಿರುವೆನೆಂಬ, ಸಾಮ್ರಾಟ ತೃಷ್ಣೆಗೆ ಆಹುತಿಯಾಗುತ್ತಿರುವೆನೆಂಬ ಈಷತ್‌ಭಾವನೆಯೂ ಬರುವುದಿಲ್ಲ. ಮೂಲ ಭಾರತದ ಏಕಲವ್ಯನಾದರೂ ತುಟಿಪಿಟಿಕ್ಕೆನ್ನದೆ ಹೆಬ್ಬೆರಳು ಕತ್ತರಿಸಿರುತ್ತಾನೆ. ಇಲ್ಲಿಯೂ ಹಾಗೇ ನಡೆಯುತ್ತದೆ. ಆದರಿವನಿಗೆ ತಾನು ತನ್ನನ್ನು ಪರಮ ಪುರುಷಾರ್ಥಕ್ಕೆ ಗುರು ಮೂಲಕ ಅರ್ಪಿಸಿಕೊಳ್ಳುತ್ತಿರುವ ಅರಿವಿದೆ. ಅದರಿಂದಲೆ ಅವನ ಕರ್ಮ ಯಜ್ಞವಾಗುತ್ತದೆ, ಬಲಿಯಾಗಿ ಉಳಿಯದೆ. ಹಾಗಾದರೆ ಇಲ್ಲಿ ನಡೆಯುವ ಯಜ್ಞವಾವುದು? ಮಹಾಭಾರತ ಯಜ್ಞಕ್ಕೆ ಕೃಷ್ಣಸತ್ತ್ವ ಎಲ್ಲರನ್ನೂ ಹೇಗೆ ಹವಿಸ್ಸಾಗಿ ತೆಗೆದುಕೊಳ್ಳುತ್ತದೆ ಎಂಬುದನ್ನಿಲ್ಲಿ ನೋಡಬಹುದು. ನಾಳೆ ಆಗಲಿರುವ ಕೌರವ ಪಾಂಡವರ ಯುದ್ಧದಲ್ಲಿ ಪಾಂಡವರಿಗೆ ಗೆಲವಾಗಬೇಕಾದರೆ ಬಾಲ್ಯದಿಂದಲೆ ಕರ್ಣನ ಸುಲಿಗೆಯಾಗುತ್ತದೆ. ಭೀಷ್ಮದ್ರೋಣರ ಸಾವು ರೀತಿಯ ವಧೆಯಾಗುತ್ತದೆ. ಶಲ್ಯಾದಿಗಳ ಭೀಮವಧೆಯಾಗುತ್ತದೆ. ಈ ಇಡೀ ವ್ಯಾಪಾರದ ಹಿಂದೆ ಋತಶಕ್ತಿಯೊಂದು ನಿಂತಿದೆಯೆಂದು ಒಪ್ಪಿದಾಗ ಅದು ಹೇಗೆ ಯಾವಾಗ ಇದನ್ನೆಲ್ಲ ನಡೆಸಿಕೊಳ್ಳುತ್ತದೆಂಬುದನ್ನು ಅರಿಯಬಹುದು. ಕುವೆಂಪು ಅವರು ಆ ಋತಶಕ್ತಿಯನ್ನು ಕೃಷ್ಣಪಾತ್ರವಾಗಿ ಸ್ವಾಪ್ನಿಕ ಚಿತ್ರದ ಮೂಲಕ ಧ್ವನಿಸುತ್ತಾರೆ.

ಕನಸಿನಲ್ಲಿ ಏಕಲವ್ಯ ಜಿಂಕೆಯೊಂದರ ಅಳಲು ಕೇಳುವುದು ; ಅದನ್ನರಸಿ ಹೋದಾಗ ಕಂಡ, ಜಿಂಕೆಯ ಕೊರಳನ್ನು ಕಚ್ಚಿದ್ದ ಹುಲಿಯ ಎದೆಗೆ ಕತ್ತಿ ಚುಚ್ಚುವುದು ; ರಕ್ತದ ಬುಗ್ಗೆ ಮರೆಯಾಗಿ ನೀಲದೇಹಿಯೊಬ್ಬನು ಕಾಣಿಸಿಕೊಳ್ಳುವುದು ; ತಲೆಯ ಮೇಲೆ ನವಿಲು ಕುಣಿಯುತ್ತಿದ್ದ ಅವನು ತನ್ನ ಹಾವುದೋಳುಗಳಿಂದ ಏಕಲವ್ಯನನ್ನು ಅಪ್ಪಿಕೊಳ್ಳಲೆಳಸುವುದು ; ಆ ವಿಲಕ್ಷಣನನ್ನು ಕಂಡು ಪೂಜ್ಯಭಾವ ತಾಳಿದ ಏಕಲವ್ಯನು ತನ್ನನ್ನು ಅವನಪ್ಪುಗೆಗೆ ಒಪ್ಪಿಸಿಕೊಂಡು ಅವನೆದೆಯೊಳಕ್ಕೆ ನುಗ್ಗಿ ಆನಂದಚಕಿತನಾಗುವುದು – ಈ ಎಲ್ಲ ಸ್ವಾಪ್ನಿಕ ಪ್ರತಿಮೆ ಏಕಲವ್ಯನು ತನ್ನನ್ನು ಮಹಾಭಾರತ ಕ್ರತುಶಕ್ತಿಗೆ ಒಪ್ಪಿಕೊಳ್ಳುವ, ಹಾಗೂ ಅದು

ಇವನನ್ನು ಅರ್ಪಿಸಿಕೊಳ್ಳುವ ದರ್ಶನವನ್ನು ಪ್ರತಿಮಿಸುತ್ತದೆ. ಅದರಿಂದಾಗಿ, ಏಕಲವ್ಯನ ಬೆರಳು ನೀಡಿಕೆ ಅವನನ್ನು ಯುಗಘಟನೆಯ ಅನಿವಾರ್ಯ ಅಂಗವಾಗಿ ಮಾಡುತ್ತದೆ. ಒಂದು ವೇಳೆ ಏಕಲವ್ಯ ಬೆರಳು ಕಳೆದುಕೊಂಡು ಹಿನ್ನೆಲೆಗೆ ಬೀಳದಿದ್ದರೆ, ಅರ್ಜುನನಿಗೂ ನುಂಗಲಾರದ ತುತ್ತಾಗುತ್ತಿದ್ದ. ಅವನು ತನ್ನ ಗುರುಪಕ್ಷದಲ್ಲೆ ಇರುತ್ತಿದ್ದಾಗ, ಹೇಗೆ ತಾನೆ ದ್ರೋಣವಧೆ – ಕೌರವವಧೆ – ಪಾಂಡವ ವಿಜಯ ಘಟಿಸುತ್ತಿತ್ತು? ಯುಗಾಂತ್ಯದಲ್ಲಿ ಸ್ಪಷ್ಟವಾಗುವ ಒಂದು ಘಟನೆಗೆ ಬಿತ್ತನೆಯ ಕಾರ್ಯ ಯುಗಾರಂಭದಲ್ಲೆ ನಡೆದಿರುತ್ತದೆ. ಕುವೆಂಪು ಇವನ್ನು ನಿಚ್ಚಲವಾಗಿ ಕಂಡಿದ್ದಾರೆ. ತಮ್ಮ ಪ್ರಧಾನ ಕೃತಿಗಳಲ್ಲೆಲ್ಲ ಮೂಡಿಸಿದ್ದಾರೆ. ಅಲ್ಲಿ ಅವರ ದರ್ಶನ ತಾತ್ತ್ವಿಕ ಶ್ರದ್ಧೆ ಇದೆ. ಆದ್ದರಿಂದಲೆ ಇಲ್ಲಿ ಯುಗಘಟನೆಗೆ ತನ್ನನ್ನು ಅರ್ಪಿಸಿಕೊಂಡ ಏಕಲವ್ಯ ಉಳಿದಾವ ವೀರರಿಗಿಂತಲೂ ವಿಶಿಷ್ಟನಾಗುತ್ತಾನೆ. ಉಳಿದವರು ಯುಗಘಟನೆಯ ಸಾಧನೆಗೆ ಆಹಾರ – ಬಲಿಯಾಗುತ್ತಾರೆ. ಇವನು ಮಾತ್ರ ಈ ನಾಟಕದಲ್ಲಿ ಪ್ರಜ್ಞಾನುಭೂತಿಯ ಕಾರಣದಿಂದಾಗಿ, ಆ ಮೂಲಕದ ಅರ್ಪಣದಿಂದಾಗಿ ಯಜ್ಞಕರ್ಮನಾಗುತ್ತಾನೆ. ಭಗವಂತನ ಬತ್ತಳಿಕೆಯಲ್ಲಿ ತನ್ನ ಸರದಿಗಾಗಿ ಕಾಯುತ್ತ ಎಚ್ಚರಿರುವ ಮಹಾಬಾಣವಾಗುತ್ತಾನೆ. ಕಾಯುವುದು ಇವನಿಂದಾಗಿ ದಿವ್ಯಯೋಗವಾಗುತ್ತದೆ. ಮಹಾಭಾರತದಲ್ಲಿ ಯಾರೂ ಕಾಯಲಿಲ್ಲ. ಅದರಿಂದಲೆ ಮಹಾಸತ್ತ್ವಪಾತ ಆಗುತ್ತದೆ. ಇವನೊಬ್ಬ ಮಾತ್ರ ಕಾದು ಮಹಾಘಟನೆಯಾದ.

ದ್ರೋಣ ಪಾತ್ರವಾದರೂ ಈ ನಾಟಕದಲ್ಲಿ ಶೋಧನಕ್ಕೊಳಗಾಗಿ ಸತ್ತ್ವಸಂಪನ್ನವಾಗಿದೆ. ಆಧುನಿಕ ನೆಲಗಟ್ಟಿನಿಂದ ತೀರ್ಪಿಗೆ ಒಳಗು ಮಾಡಿದ್ದರೆ ಘೋರ ಶಿಕ್ಷೆಗೆ ಒಳಗಾಗಬಹುದಾಗಿದ್ದ ಈ ಮಹಾ ಗುರು ಇಲ್ಲಿ ಅಂತರ್ಯುದ್ಧಕ್ಕೆ ಒಳಗಾಗಿ, ತನ್ನ ವ್ಯಕ್ತ್ಯಹಂಕಾರದ ಎಳೆಗಳನ್ನೂ, ಆಮೂಲಕವೇ ತನ್ನ ಅಂತ್ಯೋದ್ದೇಶವನ್ನು ನಡೆಸಿಕೊಳ್ಳುವ ಸಚ್ಚಿದಾನಂದದ ಮಹತ್ತಂತ್ರವನ್ನೂ ಕಂಡುಕೊಳ್ಳುತ್ತಾನೆ. ಏಕಲವ್ಯನಿಗೆ ಅಸೂಯೆಪಡುವ ಅರ್ಜುನನಿಗೆ ತಾನು ಬಲಿಯಾಗುತ್ತಿರುವುದಕ್ಕಾಗಿ ರಾಜವರ್ಗವನ್ನೆ ಬೈದು ತನ್ನನ್ನು ಶುದ್ಧನನ್ನಾಗಿ ಮಾಡಿಕೊಳ್ಳುವ ಸುಲಭ ಮಾರ್ಗಕ್ಕೆ ಅಡಿಯಿಡದೆ, ತನ್ನದೇ ಆದ ಕಾಣಿಕೆಯೆಷ್ಟು ಎಂಬುದನ್ನು ಶೋಧಿಸುತ್ತಾ ಹೋಗಿ ತನ್ನನ್ನೂ ನಗ್ನಗೊಳಿಸಿಕೊಳ್ಳುತ್ತಾನೆ ! ಹಾಗೂ ಅಹಂಕಾರಮೂಲವಾದ ತನ್ನ ವ್ಯಕ್ತಿ ಕರ್ಮದ ಜಟಿಲಮಾರ್ಗದ ಮೂಲಕವಾಗಿಯೆ, ಕುಟಿಲ ಕಾರ್ಯಗಳ ಮೂಲಕವಾಗಿಯೆ, ಭಗವದಿಚ್ಛೆಯ ದಿವ್ಯಲೀಲಾ ಪ್ರಯೋಜನಕಾರ್ಯವೊಂದು ನಡೆದಿರುವುದನ್ನೂ ಕಂಡುಕೊಳ್ಳುತ್ತಾನೆ. ಅಂದರೆ, ಕಾಡಿನಲ್ಲಿ ತನ್ನ ಮಗು ಅಶ್ವತ್ಥಾಮನಿಗೆ ಹಾಲೂಡಲೂ



ಆಗದ ಬಡತನದಲ್ಲಿದ್ದ ದ್ರೋಣಾಚಾರ್ಯ ಆ ಹಿಂದೆ ವೃತ್ತಿಗಾಗಿ ಅರಸುತ್ತ ತನ್ನ ಸಹಪಾಠಿ ದ್ರುಪದನ ಬಳಿಹೋಗಿ ಅವಮಾನಿತನಾಗುವುದು; ಹಸಿವೆಯ ತೀರ್ಕೆಗೆ ಹೋದ ದ್ರೋಣ ಮನಸ್ಸಿನ ಹಸಿವೆಯಾದ ಅವಮಾನ–ಸೇಡುಗಳಿಗೆ ತುತ್ತಾಗಿ, ಮತ್ತೆ ಆಶ್ರಯಕ್ಕಾಗಿ ಅಲೆಮಾರಿಯಾಗುವುದು ತನ್ನ ಸಂಸಾರದ ಹಸಿವೆಯನ್ನು ತೀರಿಸುವಂತಹ ರಾಜಾಶ್ರಯಕ್ಕಿಂತ ಹೆಚ್ಚಾಗಿ ತನ್ನ ; ಶಪಥವನ್ನು ಈಡೇರಿಸುವ ಶಿಷ್ಯವೃಂದವನ್ನು – ಶಿಷ್ಯನನ್ನು – ಮಸೆಯುವುದರ ಕಡೆಗೆ ಅವನ ಗಮನ ಹರಿಯುವುದು ; ಪ್ರಾರಂಭದಲ್ಲಿ ತನ್ನ ಭಾಗ್ಯವಾಗಿ ಕಂಡುಬಂದ ಕೌರವ ಪಾಂಡವರ ಗುರುವೃತ್ತಿ ತನ್ನನ್ನು ಸಿಡಿಮದ್ದು ಅರೆಯುವ ಕರ್ಮಕ್ಕೆ ತೊಡಗಿಸಿದೆಯೆಂಬ ಅರಿವಿಗೆ ಬರುವುದು ; ಆದರೂ ತನ್ನ ಸೇಡನ್ನು ತೀರಿಸಿಕೊಳ್ಳಲಾಗಿ ಅದನ್ನೆಲ್ಲ ಸಹಿಸಿಕೊಂಡು ಅವರನ್ನು ತರಪೇತು ಮಾಡಿ ದ್ರುಪದಾವಮಾನಕ್ಕೆ ಹೂಡಿ, ಗೆದ್ದದ್ದು ; ಆ ಗೆಲುವಿನ ಘಳಿಗೆಯಲ್ಲಿ ತನ್ನ ಶಪಥ ಪೂರೈಸಿದ ಅರ್ಜುನನಿಗೆ ವರವಿತ್ತದ್ದು – ಈ ಎಲ್ಲವೂ ದ್ರೋಣನನ್ನು ಶೋಧನಕ್ಕೊಡ್ಡುತ್ತದೆ. ಈ ಎಲ್ಲಕ್ಕೂ ಯಾರನ್ನು ಬೈಯುವುದು? ಬಡತನವನ್ನೆ? ಸಮಾಜವನ್ನೆ? ದ್ರುಪದ–ಅರ್ಜುನರು ಪ್ರತಿನಿಧಿಸುವ ಆಳುವ ವರ್ಗವನ್ನೆ? ತನ್ನ ದೌರ್ಬಲ್ಯವನ್ನೆ? ಈ ಎಲ್ಲದರ ಹಿಂದೆ ಕೆಲಸಮಾಡುತ್ತಿರುವ ಮಹತ್ತರ ಶಕ್ತಿಯನ್ನೆ? ಮೊದಮೊದಲು ಶೋಧನಕ್ಕೆ, ತನ್ನ ಅಹಂಕಾರವೆ ಅಷ್ಟಕ್ಕೂ ಮೂಲವಾಗಿರುವಂತೆ ಭಾಸವಾಗುತ್ತದೆ. ತನ್ನ ಅಹಂಕಾರವರ್ಧನಕ್ಕಾಗಿ ಅರ್ಜುನನ ಅಹಂಕಾರವನ್ನು ವಿದ್ಯೆಯೆಂಬ ಹೆಸರಿನಲ್ಲಿ ಬೆಳಸಿ ತಾನು ಅವಿದ್ಯಾಪೋಷಕನಾದಂತೆ ಅನಿಸುತ್ತದೆ. ಆ ಅಹಂಕಾರಪ್ರೇರಿತ ಕರ್ಮ ಹೇಗೆ ಅದಮ್ಯವಾಗಿ ಬೆಳೆಯುತ್ತ ಹೋಗಿ ತನ್ನನ್ನೂ ಆಹುತಿಗೊಳ್ಳುತ್ತಿದೆ ಎಂದೂ ಭೀತಿಯಾಗುತ್ತದೆ. ಅರ್ಜುನನ ಈರ್ಷಾಗ್ನಿಗೆ ಆಹುತಿಮಾಡಲು ಏಕಲವ್ಯನನ್ನು ಬಲಿಯಾಗಿ ಮಾಡದಂತೆ ನೋಡಿಕೊಳ್ಳಲೆಳಸುವ ಅಶ್ವತ್ಥಾಮನಿಗೆ ದ್ರೋಣನ ಮಾತು ಈ ಕಾರಣದಿಂದ ಅರ್ಥಪೂರ್ಣವಾಗಿದೆ. "ತಡೆವೆನನ್ಯಾಯಮಂ" ಎಂದ ಅಶ್ವತ್ಥಾಮನಿಗೆ ದ್ರೋಣರ ಮಾತಿದು: ''ದ್ರೋಣನ್ ತಾನೆ ತಡೆಯಲಾರದುದನ್ ಎಂತು ತಡೆವನ್, ಪೇಳ್, ದ್ರೋಣಾತ್ಮಜನ್?" ಈ ಮಾತು ಮೇಲುನೋಟಕ್ಕೆ ಮಾತುಗಾರಿಕೆಯಾಗಿ ಅಷ್ಟೆ ತೋರೀತು. ಆದರೆ ಕರ್ಮಾರಂಭದಲ್ಲೆ ತಡೆಯಲಾಗದ ಮೇಲೆ, ಕರ್ಮಶ್ರೇಣಿಯಲ್ಲಿ ಉದ್ಭವಿಸುವ ಯಾವುದೋ ಒಂದು ಕರ್ಮವನ್ನು ಹೇಗೆ ತಾನೆ ಯಾರು ತಡೆಯ ಬರುತ್ತದೆ. ಕಾಡಿನಲ್ಲಿದ್ದಾಗ ತನಗಾದ ಹಸಿವೆಯನ್ನು ತಡೆದುಕೊಳ್ಳಬರಲಿಲ್ಲ. ತನ್ನ ಮಗುವಿಗೆ ಹಾಲಿಲ್ಲದ ಚಿತ್ರವನ್ನು ಆಗ ತಾನೆ ಸಹಿಸಿಕೊಳ್ಳಲಾಗಲಿಲ್ಲ. ಅದರ ಫಲವಾಗಿ

ದ್ರುಪದನ ಬಳಿ ಹೋಗಬೇಕಾಯಿತು. ತಮ್ಮ ತಂದೆಯಲ್ಲೆ ತನ್ನ ಸಹಪಾಠಿಯಾಗಿ ಕಲಿತ ದ್ರುಪದ ರಾಜನಾದ ಮೇಲೆ ಸೊಕ್ಕಿ ತನ್ನನ್ನು ಮರೆಯುತ್ತಾನೆ. ಏಕೆ? ಒಂದು ವೇಳೆ ಆ ರಾಜನಿಗೆ ಅದರ ನೆನಪಾದರೆ ದ್ರೋಣರಿಗೆ ಸವಲತ್ತು ಒದಗಿಸಬೇಕಿತ್ತು ; ಅದರಿಂದಲೆ, ಅವನು ಸಹಜ ಅಹಂಕಾರದಿಂದ ಮರೆತ. ಅನ್ನ ಪೂರೈಕೆಯಷ್ಟೆ ತನಗೆ ಬೇಕಾಗಿದ್ದರೆ ದ್ರೋಣನಾದರೂ ಅದನ್ನು ಸಹಿಸಿಕೊಳ್ಳುತ್ತಿದ್ದ. ಆದರೆ ಸ್ವಭಾವ ಸಿದ್ಧ ಅಭಿಮಾನ ಕೆರಳಿ ಪ್ರತೀಕಾರಕ್ಕೆಳಸುತ್ತಾನೆ. ಹಸಿವೆಗಳು ಎರಡಾಗುತ್ತವೆ. ರಾಜಕುಮಾರರಿಗೆ ಪಾಠ ಕಲಿಸುವಾಗಲೂ ದ್ರೋಣನಿಗೆ ತನ್ನ ಶಪಥವನ್ನು ಪೂರೈಸುವ ಶಿಷ್ಯನ ತರಪೇತಿನ ಕಡೆಯೆ ಕಣ್ಣು ; ಅದರಿಂದಾಗಿ ಅರ್ಜುನನ್ನು ಬೆಳೆಸುತ್ತಾರೆ. ಅದಕ್ಕವನಿಗೆ ಅರ್ಹತೆಯಿತ್ತೆಂದು ಒಪ್ಪಿಕೊಂಡರೂ ಉಳಿದ ಶಿಷ್ಯರಲ್ಲಿ, ಅದರಲ್ಲೂ ಕೌರವ ಪಕ್ಷದವರಲ್ಲಿ ಮಾತ್ಸರ್ಯಮಸೆಯಲು ಅದು ಎಡೆಕೊಡುತ್ತದೆ. ಕರ್ಣನನ್ನು ಅರ್ಜುನನಿಗಾಗಿ ನಿವಾರಿಸಬೇಕಾಯಿತು. ಆ ಅರ್ಜುನವ್ಯಸನದಿಂದಾಗಿ ಮಗನಕಡೆಯೂ ಆಸಕ್ತಿವಹಿಸದಂತೆ ಆಯಿತೇನೊ. ಈ ಯಾವ ಕರ್ಮ ಘಟನೆಯನ್ನೂ ಅವನು ತಡೆಯಲಾಗಲೇ ಇಲ್ಲ. ಇದೊಂದು ರೀತಿಯಲ್ಲಿನ Snowballing ರೀತಿಯದು. ಆದ್ದರಿಂದಲೆ "ಕರ್ಮದ ಪಾಂಗು ಮರಿಗೆ ಮರಿ, ಮರಿಗೆ ಮರಿ, ಬೆರಳ್‌ಗೆ ಕೊರಳ್" ಎಂಬ ಅರಿವಿಗೆ ಬರುತ್ತಾನೆ ದ್ರೋಣ. ಈ ಅರಿವಿಗೆ ಬರುವ ದಾರಿಯಲ್ಲಿ ದ್ರೋಣನ ತೊಳಲಾಟ ಒಂದು ತತ್ತ್ವವನ್ನು ಅರಿತಿರುತ್ತದೆ. "ಕೂಳ್ ಮಿಣಿಯ ಪಿಡದಿರ್ಪುದಾ ಬಿದಿಯ ಕಯ್! ನೂಂಕುತಿಹುದನಿಬರಂ ತನ್ನ ಲೀಲಾರ್ಥಂ. ಅಂತಲ್ಲದಿರೆ, ನಮ್ಮನೆತ್ತಣಿಂದಲೊ ಕರೆದು ಒಯ್ದುತಂದೀ ನೃಪಾಲರೂಳಿಗಕೆ ತಳ್ಳುತಿರ್ದುದೆ ಈಶ್ವರೇಚ್ಛಾರೂಪದೆಮ್ಮ ಕರ್ಮ ಪಾಶಂ ?" ಅಂದರೆ ತಮ್ಮ ವೈಯಕ್ತಿಕ ಜೀವನದ ತೊಳಲಾಟದಲ್ಲೂ ಯಾವುದೊ ಕೈಯ ಕೈವಾಡವಿದೆ ; ಅದು ಅದಮ್ಯ ಹಸ್ತ, ಅದು ತನ್ನ ಲೀಲಾರ್ಥವನ್ನು ನಮ್ಮ ಸ್ವಭಾವ ಸಿದ್ಧವಾದ ನಮ್ಮ ಅನಿವಾರ್ಯ ಕರ್ಮಗಳ ಮೂಲಕವೆ ನೆರವೇರಿಸಿಕೊಳ್ಳುತ್ತದೆ. ನಮ್ಮ ನಮ್ಮ ಕರ್ಮಗಳ ಹಗ್ಗದ ಮೂಲಕವೆ ನೆರವೇರಿಸಿಕೊಳ್ಳುತ್ತದೆ. ನಮ್ಮ ನಮ್ಮ ಕರ್ಮಗಳ ಹಗ್ಗದ ಮೂಲಕವೆ ನಮ್ಮನ್ನು ಬಿಗಿದಾಳುತ್ತದೆ ಆ ಈಶ್ವರೇಚ್ಛೆ. ಕಾಣದ ಭಗವದಿಚ್ಛೆಯ ದೃಗಭಿವ್ಯಕ್ತಿಯೆಂದರೆ ನಮ್ಮ ಕರ್ಮಗಳು. ಅಂಧವಿಧಿಯಿಚ್ಛೆ ಎಂಬುದಲ್ಲ ಇದು. ಹಾಗಿಲ್ಲದೆಯೆ ಅದು ತನ್ನ ಕೆಲಸ ಮಾಡಿಕೊಳ್ಳುತ್ತದೆ : "ಜೀವಿಗಳ ಕರ್ಮ ಜಟಿಲತೆ, ಏಕಲವ್ಯ, ಈ ಕುಟಿಲ ಕಾರ್ಯಂಗಳಿಗೆ ನಮ್ಮನ್ ನಿಯೋಜಿಪುದು, ದೇವ ನಿಚ್ಛೆಯ ದಿವ್ಯಲೀಲಾ ಪ್ರಯೋಜನಕೆ". ಹೀಗಿರುವಾಗ, ನಾವು ಒಪ್ಪಲಿ ಬಿಡಲಿ ನಮ್ಮ ಅನಿವಾರ್ಯ



ಕರ್ಮಗಳ ಮೂಲಕವೆ ತನ್ನ ಲೀಲೋದ್ದೇಶವನ್ನು ಆ ಋತಚಿತ್ ನೆರವೇರಿಸಿಕೊಳ್ಳುತ್ತಿರುವಾಗ, ನಾವಾದರೂ ಅದರ ಅರ್ಥವನ್ನು ನಿಚ್ಚಳ ಕಂಡು – ನಮ್ಮ ರಾಗೋದ್ವೇಗ ಇಚ್ಛಾನಿಚ್ಛೆಗಳ ಸೆಳೆತಗಳಿಂದ ಕೊಂಚಕೊಂಚವೆ ಪಾರಾಗಿ ನಿಂತುಕೊಂಡು ಅದರ ಲೀಲಾರ್ಥಕ್ಕೆ ಒಪ್ಪಿಸಿಕೊಳ್ಳುವುದಷ್ಟೆ, ಕರ್ಮವನ್ನು ಅಕರ್ಮವಾಗಿ ಮಾಡುವ ಯಜ್ಞಮಾರ್ಗ. ಏಕಲವ್ಯ ತೊಳಲಾಟವಿಲ್ಲದೆ ಆ ಸಿದ್ಧಿಯನ್ನು ಪಡೆಯುತ್ತಾನೆ, ದ್ರೋಣರು ತೊಳಲಾಡಿ ಆ ಕಡೆಗೆ ಸಾಗುತ್ತಾರೆ.

ಅದರಿಂದಲೆ ದ್ರೋಣ ಅರ್ಜುನನ ತೃಪ್ತ್ಯರ್ಥವಾಗಿ ಏಕಲವ್ಯನನ್ನು ಬಲಿದೆಗೆದುಕೊಳ್ಳಬೇಕಾದರೆ ತೊಳಲಾಡುತ್ತಾನೆ. 'ಆ ದೈವವಂ ನೆಮ್ಮಿ ಕೆಲಸಮಾಳ್ಪೆನ್, ತಣಿಯುವಂತರ್ಜುನಂ, ಸಲ್ವಂತೆ ನಾನಿತ್ತ ವಚನಂ, ಮೇಣ್ ಏಕಲವ್ಯಂಗೊದಗದೊಲ್ ಆವುದುಂ ಪೆರ್ಕೇಡು' ಎಂದು ದಾರಿಕಾಣುತ್ತಾನೆ. ನಮ್ಮನ್ನು ಪ್ರತಿನಿಧಿಸುವ ಅಶ್ವತ್ಥಾಮ 'ಕರ್ಣಂಗೆ ಪರಶುರಾಮಂ ಗೆಯ್ದವೋಲ್...' ಎಂದು ಪಟಾರನೆ ಉತ್ತರಿಸುತ್ತಾನೆ. ಎಲ್ಲದರಲ್ಲೂ ಭಗವದರ್ಥವನ್ನು ಸನ್ನಿವೇಶ ಕಾರಣದಿಂದಾಗಿಯೂ ಕಾಣುತ್ತಿರುವ ದ್ರೋಣ 'ಆದೊಡಂ ನೀಂ ಪರಶುರಾಮನಂ ತೆಗಳದಿರ್.... ಮುಂದಪ್ಪುದಂ ಯೋಗದೃಷ್ಟಿಯೊಳರಿತು ಚರಿಸುವಾತನ್ ಮಹಾಪ್ರಾಜ್ಞನೆ ವಲಂ" ಎಂಬ ಅರಿವಿಗೆ ಬರುತ್ತಾನೆ. ಆ ಅರಿವಿನಿಂದಾಗಿಯೆ ಮುಂದಿನ ನಿರ್ಧಾರಕ್ಕೆ ಬರುತ್ತಾನೆ.

"ವತ್ಸ, ಕಲಿ ಕೈದುವಂ ಸಮೆಯವೇಳ್ಕುಂ ದಿಟಂ.
ಸಮೆದ ಮಾತ್ರದಿ ಸಮೆದ ಕೈದುಗಳನ್ನೆಲ್ಲಮಂ,
ಸಮಯದೌಚಿತ್ಯಮಂ ಪಾತ್ರದೌಚಿತ್ಯಮಂ
ಹಿತಾಹಿತೌಚಿತ್ಯಮಂ ಮತ್ತೆ ದೈವೇಚ್ಛೆಯಂ
ತಿಳಿಯದೆಯೆ, ತೂಗದೆಯೆ, ಬಗೆಗೊಳ್ಳದೆಯೆ
ಪೊಳೆವ ಕೈದುವ ನಿಶಿತಕಾಂತಿಗೆ ಮನಂಸೋಲ್ತು
ಪ್ರಯೋಗಿಸಲ್‌ವೇಳ್ಕುಮೆಂಬುದು ಮರುಳ್‌ತನಂ...
ಕೈದುವಂ ಸಮೆಯುವಾತಂಗೆ ಅದನ್ ಮುರಿಯಲುಂ,
ಸಮಯಕ್ಕೆ ತಗುವೊಲದರ ತೀಕ್ಷ್ಣತೆಯನಿನಿತು
ಸಂಯಮಿಸಿ ದಿವ್ಯಲೀಲಾ ನಿಯಮಕನುಗೊಳಿಸಲುಂ,
ಅನಿವಾರ್ಯಮಾದೊಡಾ ಕೈದುವಂ
ಮುಂದೆ ಬರ್ಪೊಂದನ್ಯರಣಲೀಲೆಗೋಸುಗಂ
ಒರೆಗಿಕ್ಕಿ ಬದಿಗಿರಿಸಲುಂ, ತಿಳಿಯವೇಳ್ಕುಂ !"

ಇದರಿಂದಾಗಿ, ದ್ರೋಣನಿಗೆ ಏಕಲವ್ಯನನ್ನು ಹೇಗೆ ಬಳಸಿಕೊಳ್ಳಬೇಕೆಂಬ ಬಗೆಗೆ ಸ್ಪಷ್ಟದಾರಿ ಕಂಡಿರುತ್ತದೆ ಎಂದು ಭಾವಿಸಬಹುದು. ಆದರೂ, ಹಾಗೆ ಅವನನ್ನು ಭಗವದರ್ಥವಾಗಿ ನಿಯಂತ್ರಿಸುವ – ನಿವಾರಿಸುವ ಚಿತ್ರ ಕಂಡಿದ್ದರೂ, ಹಾಗೆ ಮಾಡುವುದರಿಂದ ತಾನು ಮತ್ತಾವ ಕರ್ಮ ಸರಣಿಗೆ ಮಿಣಿಯಾಗುವೆನೊ ಎಂಬ ಅಳುಕಿರುತ್ತದೆ ಆ ಗುರುವಿಗೆ. ಇನ್ನಾದರೂ ಕರ್ಮಗರ್ತದಿಂದ ದೂರ ಉಳಿಯಬೇಕೆಂದು ಬಯಸುತ್ತಾನೆ. ಆದ್ದರಿಂದಲೇ ತಾನು ಬೇಡಲಿದ್ದ ಏಕಲವ್ಯನ ಹೆಬ್ಬೆರಳಿಗೆ ಏಕಲವ್ಯನ ಪ್ರಮಾದವೇ ಕಾರಣವಾಗಲೆಂದು ಒಂದರೆಕ್ಷಣ ಬಯಸುತ್ತಾನೆ. ಅದರಿಂದಾಗಿಯೆ, ಬಾನೆತ್ತರದಲ್ಲಿ ಕಾಣಿಸದೆ ಶಬ್ದಮಾತ್ರನಾಗಿ ಹಾರುತ್ತಿದ್ದ ಹಕ್ಕಿಯನ್ನು ಗುರಿಯಿಟ್ಟು ಬೀಳಿಸುವಂತೆ ಏಕಲವ್ಯನಿಗೆ ತಿಳಿಸುತ್ತಾನೆ. ಶಬ್ದವೇಧಿ ವಿದ್ಯೆಯ ಹಮ್ಮಿನಿಂದ ಎಲ್ಲಿಯಾದರೂ ಆತ ಕೊಂದಿದ್ದರೆ ದ್ರೋಣನ ತೊಳಲಾಟ ಕಡಿಮೆಯಾಗುತ್ತಿತ್ತು. ಆಗ ನಿರಪರಾಧಿ ಪ್ರಾಣಿ ಪಕ್ಷಿಗಳನ್ನೆಲ್ಲ ಕೊಲ್ಲಲು ಮಹಾವಿದ್ಯೆಯನ್ನು ಬಳಸಿಕೊಂಡ ದುರಹಂಕಾರದ ತಪ್ಪಿಗೆ ಏಕಲವ್ಯನನ್ನು ಶಿಕ್ಷಿಸುವುದು ಸುಲಭವಾಗುತ್ತಿತ್ತು. ಆದರೆ ಆತ್ಮಜ್ಞಾನಿಯಾಗಿಯೂ ಮುಗ್ಧನಾದ ಏಕಲವ್ಯ "ಅಪರಾಧಮಿಲ್ಲದಾ ಸಾಧುವಂ ಕೊಲಲ್ಕಲ್ತು, ಆಚಾರ್ಯ, ಆ ವಿದ್ಯೆಯಂ ನೀನಿತ್ತುದೆನಗೆ. ಮುನಿಗುಂ ಮಂತ್ರಾಧಿದೇವತೆ : ಮೇಣ್, ದಿವ್ಯವಿದ್ಯಾ ಬಲದಿ ಪಾಪಕಾರ್ಯವನೆಸಗೆ ಧರ್ಮಂ ಋತಚ್ಯುತನೆನಗೆ ತಾನುಗ್ರಮಕ್ಕುಂ... ತಾಮದ ನೆಲ್ಲಮಂ ಬಲ್ಲಿರಾದೊಡಂ, ನನಗಿದು ಪರೀಕ್ಷೆಯಲ್ತೆ, ಈ ಪೊಳ್ತು !" ಎನ್ನುತ್ತಾನೆ. ಅವನು ಬದುಕಿ, ತನ್ನನ್ನೂ ಬದುಕಿಸಿದನೆಂಬ ಆನಂದ ದ್ರೋಣನಿಗೆ. ಏಕಲವ್ಯನೇನಾದರೂ ಆ ನಿರಪರಾಧಿ ಪಕ್ಷಿಯನ್ನು ಕೊಂದಿದ್ದರೆ ಅವನನ್ನು ಇಕ್ಕಟ್ಟಿಗೆ ಸಿಕ್ಕಿಸುವುದು ಸುಲಭವಿತ್ತು. ಆದರೆ ಅವನು ಜಾಣತನದಿಂದಲ್ಲ ಆತ್ಮಜ್ಞಾನದಿಂದ, ಆ ಅಪರಾಧದಿಂದ ಪಾರಾಗುತ್ತಾನೆ. ಅದರಿಂದ ತನ್ನ ಇಕ್ಕಟ್ಟು ಹೇಗೂ ಪರಿಹಾರವಾಗದಿದ್ದರೂ ದ್ರೋಣನಿಗೆ ಆನಂದವಾಗುತ್ತದೆ, ತನ್ನ ಶಿಷ್ಯ ಆತ್ಮಸ್ತರದಲ್ಲಿ ಪ್ರಮಾದರಹಿತನಾಗಿ ಬೆಳೆದಿದ್ದಾನೆಂದು. ಅದರಿಂದ ತಾನೇ ಬೆಳೆದಂತೆ ಹಿಗ್ಗುತ್ತಾನೆ.

ಏಕಲವ್ಯನ ಹೆಬ್ಬೆರಳು ರಕ್ತದ ಮಡುವಿನಲ್ಲಿರುವುದನ್ನು ಕಂಡಾಗ ದ್ರೋಣನಿಗೆ ಕಾಣಿಸಿದುದು ಅವನ ಮನಸ್ಸಿನಲ್ಲೆ ಮಸೆದಾಡುತ್ತಿದ್ದ ಕರ್ಮಭೀತಿ – ತನ್ಮೂಲಕವಾದ ಭವಿಷ್ಯದ್ದರ್ಶನ ; ತಾನೇ ಮಾಡಿದ ಕರ್ಮದ ಸರಣಿಯಲ್ಲಿ ಬೆಳೆದು ಮರಿಯಿಕ್ಕುತ್ತ ಹೋದ ಅನಿವಾರ್ಯಕರ್ಮದ ಫಲವನ್ನು ಅವನು ಊಹಿಸಿದ್ದರೂ, ಮುಂಗಂಡಾಗ ಭೀತಿಯಾಗುತ್ತದೆ. ತನ್ನನ್ನು ವಂಚಿಸಿ ವಿದ್ಯೆ ಕಲಿತ ಕರ್ಣನಿಗೆ ಮುನಿದು ಶಾಪವಿತ್ತ ಪರಶುರಾಮ ಪ್ರಾಜ್ಞನಾಗಿ ಯೋಗ ದೃಷ್ಟಿಯಿಂದ



ಮುಂದಾಗುವುದನ್ನರಿತವನಾಗಿದ್ದುದರಿಂದ, ಹಾಗೂ ಅವನು ನಿರಪರಾಧಿಯನ್ನೇನೂ ಶಿಕ್ಷಿಸುತ್ತಿಲ್ಲವಾದ್ದರಿಂದ ಅವನ ಕರ್ಮಕ್ಕೆ ಅಂತಹ ಯಾವ ಭೀಷಣ ಫಲವೂ ಇದ್ದಿರಬೇಕಾಗಿಲ್ಲ. ಏಕಲವ್ಯನನ್ನು ಸುಲಿಯುವುದು ವಿಧಿಲೀಲಾಕರ್ಮಕ್ಕೆ ಪೋಷಕವಾಗಿಯೇ ಬರುತ್ತದಾದರೂ ಆ ಕರ್ಮಕ್ಕೆ ಪಾತ್ರವಾಗುವ ತಾನು ಮಾಡುವ ಹೇಯ ಕರ್ಮಕ್ಕೆ ಸುಲಭ ನಿಷ್ಕೃತಿಯಿಲ್ಲವೇ ಇಲ್ಲ. ಏಕಲವ್ಯನ ತಾಯಿಯ ಶಾಪವಾಗಿ ಬರುವ ಮಾತು ವಿಧಿಯ ನಿರ್ಧಾರವೇ, ಅಥವಾ ಅವನ ಕರ್ಮನಿಷ್ಕೃತಿರೂಪದ ಕರ್ಮಫಲವೇ ಆಗಿರುತ್ತದೆ.

ಕುವೆಂಪು ಕಂಡಂತೆ ಕಥೆ ಅಲ್ಲೇ ನಿಲ್ಲುವುದಿಲ್ಲ. ದ್ರೋಣವಧೆಯಿಂದ, ಉಳಿದ ಘಟನೆಗಳ ಸರಣಿಯ ಮೇಲಾಗುವ ಪರಿಣಾಮ ತಪ್ಪಲಿಲ್ಲ. ತಂದೆಯ ಸಾವಿನಿಂದ ಮುನಿದೆದ್ದ ಅಶ್ವತ್ಥಾಮ ನಿಷ್ಪಾಂಡವ ದೀಕ್ಷೆ ತೊಡುವುದು, ಈ ಎಲ್ಲ ಘಟನೆಗಳೂ ಗಾಂಧಾರಿಯ ಶಾಪವೂ ಸೇರಿ ಕೃಷ್ಣವಂಶವೇ ಲಯವಾಗುವುದು – ಮಹಾಭಾರತದಲ್ಲಿ ವರ್ಣಿತವಾಗಿರುವುದನ್ನು ಕವಿ ಕಂಡಿದ್ದಾರೆ. ಅದರಲ್ಲೆಲ್ಲ ಈ ಕರ್ಮಮಂತ್ರವನ್ನವರು ಕಂಡಿದ್ದಾರೆ. ಅದರಿಂದಲೆ ಅವರು ಬರೆಯಬೇಕೆಂದುಕೊಂಡ ದ್ರೌಣಿಯೆಂಬ ನಾಟಕದಲ್ಲಿ ಪ್ರಾಯಃ, ಈ ಬೆರಳ್‌ಗೆಕೊರಳ್ ಸೂಕ್ತಿಯನ್ನು 'ಕೊರಳ್ಗೆಕರುಳ್', 'ಕರುಳ್ಗೆಕುರುಳ್' ಎಂದು ಆಗ ಮುಂದುವರಿಸಬೇಕೆಂದುಕೊಂಡಿದ್ದರೆಂದು ತಿಳಿಯುತ್ತದೆ. ಅಭಿಮನ್ಯುಸತಿ ಉತ್ತರೆಯ ಗರ್ಭಕ್ಕೆ ಅಶ್ವತ್ಥಾಮ ಅಭಿಮಂತ್ರಿತ ಅಸ್ತ್ರಪ್ರಯೋಗಿಸುವುದರಿಂದ ಇಡೀ ಪಾಂಡವ ಸಂತತಿಯೇ ಊನಗೊಳ್ಳುತ್ತದೆ. ಅವನೇ ದ್ರೌಪದಿಯಲ್ಲಿ ಹುಟ್ಟಿದ್ದ ಪಂಚಪಾಂಡವರನ್ನು ಆಹುತಿಗೊಂಡ ; ಉಳಿದಿದ್ದ ಏಕೈಕ ಸಂತಾನವಾಗಲಿದ್ದ ಉತ್ತರೆಯ ಗರ್ಭಶಿಶುವನ್ನು ಭಗ್ನಗೊಳಿಸಿದುದರ ಜೊತೆಗೆ ಕಡೆಯಲ್ಲಿ ಮಹಾಭಾರತದ ಮೌಸಲ ಪರ್ವದಲ್ಲಿ ಯದುವಂಶವೆಲ್ಲ – ಶತ್ರುವಿನಿಂದಲ್ಲ, ಬಡತನದಿಂದಲ್ಲ, ರೋಗಾದಿಗಳಿಂದಲ್ಲ – ಕುಡಿದು ತಮ್ಮನ್ನು ತಾವೇ ವಧಿಸಿಕೊಳ್ಳುವ ಮಹಾದುರಂತಕ್ಕೆ ದೂಡಿಕೊಳ್ಳುತ್ತಾರೆ. ಅದನ್ನು ತಡೆಯಲಾಗದ, ಅಥವಾ ವಿಪರೀತ ಬೆಳೆದದ್ದು ಸಾಯಲೇಬೇಕೆಂದೊ, ಬೇಗನೆ ಸಾಯಲೆಂದೊ ತಾನೂ ಅವರಲ್ಲಿ ಅನೇಕರನ್ನು ಕೊಂದುಹಾಕುತ್ತಾನೆ, ಕೃಷ್ಣ. ಆಗೆಲ್ಲ ಅವನು ಗಾಂಧಾರಿಯ ಶಾಪವನ್ನು ನೆನೆದುಕೊಳ್ಳುತ್ತಾನೆ, ಆದದ್ದೆಲ್ಲ ಆಗತಕ್ಕದ್ದು ತಾನೆ ಎಂದು ಉದಾಸೀನನಾಗುತ್ತಾನೆ. ಬಲರಾಮನೂ ಯೋಗಸ್ಥನಾಗಿ ಸಾವಿರ ಹೆಡೆಯ ಹಾವಾಗಿ ಪ್ರಾಣಬಿಡುತ್ತಾನೆ. ಇಂದ್ರಿಯಮನೋವಾಕ್ಕಾಯಗಳನ್ನು ನಿರೋಧಿಸಿ ಯೋಗಾರೂಢನಾಗಿ ಮಲಗಿದ್ದ ಶ್ರೀಕೃಷ್ಣನನ್ನು ನವಿಲೆಂದು ಭ್ರಮಿಸಿ ಬೇಡನೊಬ್ಬ

ಅವನ ಅಂಗಾಲಿಗೆ ಬಾಣಬಿಡುತ್ತಾನೆ. ಹತ್ತಿರಹೋಗಿ ತನ್ನ ಮಿಕವನ್ನು ಹಿಡಿದುಕೊಳ್ಳೋಣವೆಂದು ಅವನು ಹೋದಾಗ ಕಂಡದ್ದು ಯೋಗಸ್ಥಕೃಷ್ಣ ಕಳೇವರ.

ಇದನ್ನು ತಿಳಿದ ಕುವೆಂಪು ಕರುಳ್‌ಗೆ ಕುರುಳ್ ಎಂದು ಸೂಕ್ತಿಸುತ್ತಾರೆ. ಶ್ರೀಕೃಷ್ಣನು ಭಗವಲ್ಲೀಲೆಯ ಪ್ರತೀಕವಾಗಿದ್ದರೂ ಅವನೂ ಆ ಕರ್ಮಲೀಲೆಯಿಂದ ಅಥವಾ ಲೀಲಾ ಕರ್ಮದಿಂದ ಹೊರತಲ್ಲ. ಆದ್ದರಿಂದಲೆ, 'ಆಗುವುದು ತಾನೆ ಅದೆಲ್ಲ' ಎಂದು ಆಗುವ ಘಟನೆಗೆಲ್ಲಾ ಉದಾಸೀನನಾಗಿರುತ್ತಾನೆ. ಹಾಗೆಂದು ವಸುದೇವನೂ ಭಾವಿಸುತ್ತಾನೆ, ವ್ಯಾಸಭಾರತದಲ್ಲಿ.

ಆದ್ದರಿಂದ, 'ಬೆರಳ್‌ಗೆ ಕೊರಳ್' ಸೂಕ್ತಿ ಉಳಿದ ಸೂಕ್ತಿಗಳಾಗಿ ಮುಂದುವರಿಯದಿದ್ದರೂ, "ಕರ್ಮದ ಪಾಂಗು ಮರಿಗೆ ಮರಿ, ಮರಿಗೆ ಮರಿ ಬೆರಳ್ಗೆಕೊರಳ್" ಎಂಬ ಸೂಕ್ತಿಯ ಒಳ ಅರ್ಥ ಮಾತ್ರ ಮೌಸಲ ಪರ್ವದ ಆ ಘಟನೆಯ ತನಕ ಹಬ್ಬುತ್ತದೆ. ಕರ್ಮಸಾಕ್ಷಿಯಾದರೂ ಕೃಷ್ಣ ಕರ್ಮಫಲದಿಂದ ಅತೀತನಾಗಲಿಲ್ಲ. ಆದರೆ ಕರ್ಮಫಲವನ್ನೂ ಸಾಕ್ಷಿಯಾಗಿಯೆ ಕಾಣುವ ಯೋಗಿಯಾಗಿದ್ದುದರಿಂದ ಅವನು ಕರ್ಮನಿರ್ಲಿಪ್ತನಾಗಿ ಕರ್ಮಾತೀತನಂತೆ ತೋರುತ್ತಾನೆ. ಹೀಗೆ, 'ಕರ್ಮತತ್ತ್ವ'ವನ್ನೇ ಹಿಡಿದು ಇಡೀ ಮಹಾಭಾರತವನ್ನು ಪುನರ್‌ದರ್ಶಿಸಿ ಅರ್ಥೈಸಿರುವ ದೊಡ್ಡ ಕಾಣ್ಕೆಯನ್ನು ಈ ನಾಟಕದಲ್ಲಿ ಕವಿ ಮೆರೆಯುತ್ತಾರೆ.

ಕಡೆಯದಾಗಿ ಮತ್ತೊಂದು ಸೂಕ್ಷ್ಮ ತಾತ್ತ್ವಿಕಾಂಶವನ್ನಿಲ್ಲಿ ಗುರುತಿಸಬಹುದು. ಈ ನಾಟಕದಲ್ಲಿ ಮೂರು ನಾಲ್ಕು ಸ್ತರವನ್ನು – ವರ್ಗಗಳನ್ನು ಕಾಣುತ್ತೇವೆ. ಮುಗ್ಧ ಜಾನಪದವಾದ ಅಬ್ಬೆ ; ನಾಗರಿಕ ಅರ್ಜುನ ; ನಾಗರಿಕರ ಮಧ್ಯೆ ಸಿಕ್ಕಿರುವ ಸಂಸ್ಕೃತ ವರ್ಗವಾದ ದ್ರೋಣ ; ನಾಗರಿಕವನ್ನು ಪುರಸ್ಕರಿಸದ, ಜಾನಪದವಾಗಿ ಉಳಿದುಕೊಂಡೆ–ಸಂಸ್ಕೃತ ವರ್ಗವೂ ಅಭಿನಂದಿಸುವಷ್ಟು ಸಂಸ್ಕೃತವಾದ, ನಾಗರಿಕವರ್ಗವೂ ಅಸೂಯೆ ಪಡುವಷ್ಟು ಕ್ಷಾತ್ರತೇಜಸ್ಸಿದ್ಧ, ಆಧ್ಯಾತ್ಮಿಯಾಗಿಯೂ ಮುಗ್ಧನಾದ ಏಕಲವ್ಯ – ಈ ಸ್ತರಗಳನ್ನು ಕಾಣುತ್ತೇವೆ. ಜಾನಪದಕ್ಕೆ ನಾಗರಿಕವಾಗಬೇಕೆಂಬ ಆಸೆಯಿರುವುದು ಸಹಜವಾಗಿರುವಂತೆಯೆ ನಾಗರಿಕಕ್ಕೆ ಜಾನಪದವನ್ನು ಕಂಡರೆ ಅಷ್ಟೇ ತಿರಸ್ಕಾರವಿರುವುದೂ ಸಹಜ ! ವ್ಯಾಸಭಾರತದ ಕಥೆಯಲ್ಲಿ ಪಾಂಡವರ ಬೇಟೆಯ ನಾಯಿ ಏಕಲವ್ಯನ ಗಂಧ ವೇಷಗಳನ್ನು ಕಂಡು ಬೊಗಳುತ್ತದೆ.* ಅದು ನಾಗರಿಕರ ತಿರಸ್ಕಾರವನ್ನೇ

* ಈ ಕಥೆಯನ್ನು "ಪರಂಪರೆ ಮತ್ತು ಕುವೆಂಪು" ಲೇಖನದಲ್ಲಿ ಕೊಟ್ಟಿದೆ,



ಪ್ರತೀಕಿಸುತ್ತದೆ. ಈ ನಾಟಕದಲ್ಲಿ ಅರ್ಜುನ ಏಕಲವ್ಯವನ್ನು ಕಂಡಾಗ ಅದೇ ತಿರಸ್ಕಾರವನ್ನು ತೋರಿಸುತ್ತಾನೆ. ಅವರಿಬ್ಬರಿಗೂ ಆಗುವ ಮಾತು ಮಸೆದುಕೊಳ್ಳುತ್ತ ಹೋಗುತ್ತದೆ. ನಾಗರಿಕರ ಮರ್ಮಭೇದನ ಮಾಡುವಂತಹ ಮಾತನ್ನಾಡುವ ಏಕಲವ್ಯ ಅಲಗುನುಡಿಯಾಡುತ್ತಾನೆ. ಅರ್ಜುನ ಇವನನ್ನು "ವನಚರ, ಆರ್ ಎಚ್ಚರೀ ವರಾಹಮನ್?" ಎಂದು ಕೇಳಿದರೆ, ಏಕಲವ್ಯ ಅಷ್ಟೇ ಸ್ಪಷ್ಟವಾಗಿ: "ನಾಗರಿಕ, ಓದಿ ತಿಳಿ; ಕಲಿಪುದಾ ಬಾಣಾಕ್ಷರಂ!" ಎನ್ನುತ್ತಾನೆ. ಅರ್ಜುನ "ಆರೋ ನೀನ್?" ಎಂದರೆ, ಇವನು "ನೀನೆ ಸಂಬೋಧಿಸಿದವೊಲ್ ವನಚರನ್!" ಎಂದು ತಿರುಗಿ ನುಡಿಯುತ್ತಾನೆ. ಬಾಣಾಕ್ಷರವನ್ನು ಕಂಡಮೇಲೂ ತಿಳಿವು ಮೂಡಿಲ್ಲದ ಅರ್ಜುನ ನಸುಕೆರಳಿ, "ನಾಲಗೆಯ ನೆರಂ ಬೇಕೆ? ನಿನ್ನಿರ್ಕೆಯೆ ಪೇಳ್ದಪುದದನ್, ನಿನ್ನ ಕೈರಾತ್ಯಮಂ! ನಾನ್ ಕೇಳ್ದುದು ನಿನ್ನ ಪೆಸರನ್; ಅನಾಮನೇನ್ ನೀನ್?" ಎಂದು ಝುಂಕಿಸುತ್ತಾನೆ. ಅದಕ್ಕೆ ಏಕಲವ್ಯನ ನಿಶಿತಖಚಿತ ಉತ್ತರವಿದು: "ವನಚರರ್ ಅನಸೂಯಾಶೀಲರ್, ಅರಿಯರ್ ಪೆಸರಂ ಮೆರೆವ ಅಹಂಕಾರಮಂ. ಪೆಸರಾಸೆ, ಅದೊಂದು ನಾಗರಿಕರ್ಗೆ ಮೀಸಲಾಗಿರ್ಪ ಮನೋಜಾಡ್ಯಂ ಕಣಾ!"

ಇಲ್ಲೆಲ್ಲ, ಹಾಗೂ ದ್ರೋಣರು ತಮ್ಮ ಒಳತೋಟಿಯನ್ನು ಹೇಳಿಕೊಳ್ಳುವಾಗ ಆಡುವ ಮಾತಿನಲ್ಲಿ, ಈ ನಾಗರಿಕ – ಜಾನಪದ ಘರ್ಷಣದ ಚಿತ್ರಣ ನಡೆದಿದೆ. ನಾಗರಿಕ ಅರ್ಜುನನಿಗೆ ಏಕಲವ್ಯನೊಳಗಿನ ಸಂಸ್ಕೃತ ಸಂಪತ್ತೂ ತಿಳಿಯುವುದಿಲ್ಲ. ಜಾನಪದ ನಿರ್ಮತ್ಸರ ಭಾವವೂ ಗಮನಕ್ಕೆ ಬರುವುದಿಲ್ಲ. ಅಶ್ವತ್ಥಾಮ ಏಕಲವ್ಯನನ್ನು ಪರಿಚಯಿಸಿದ ಮೇಲೆ ಅವನ ಬಗ್ಗೆ ಅರ್ಜುನನಿಗೆ ಅಭಿನಂದನ ಭಾವ ಮೂಡಿ ಮುಗುಳ್ನಗೆಯ ಸೌಹಾರ್ದ ಮೂಡುತ್ತದೆ. ಆದರೂ ಆ ನಗೆಯ ಮುಂಚೆ ಕಹಿಘಟನೆಯೆಲ್ಲ ನಡೆದು ಬಿಟ್ಟಿರುವುದರಿಂದಲೊ, ತಾನಿನ್ನೂ ಆ ವನೇಚರನಿಗಿಂತ ಹಿಂದಿರುವೆನಲ್ಲ ಎಂದೊ, ತನ್ನನ್ನು ದ್ರೋಣರು ವಿವಂಚಿಸಿರಬಹುದೆಂದೊ ಅರ್ಜುನನ ಒಳಗೊಳಗೇ ಯಾವುದೊ ಹೊಗೆಯಾಡುತ್ತದೆ. ನಾಗರಿಕರ ದ್ವಂದ್ವವನ್ನು ಹೆಸರಾಸೆಯನ್ನು, ಅನ್ಯ ಸ್ಪರ್ಧೆಯ ಬಗೆಗಿನ ಅಸಹನೆಯನ್ನು ಅರ್ಜುನ ಪ್ರತಿಮಿಸುತ್ತಾನೆ. ನಾಗರಿಕರ ನಡುವೆ ಆಹುತಿಗೊಂಡಿರುವ ಸಂಸ್ಕೃತವನ್ನು ದ್ರೋಣ ಪ್ರತಿಮಿಸುತ್ತಾನೆ ; ಆದ್ದರಿಂದ ಅವನಲ್ಲಿ ಘರ್ಷಣೆಯಿದೆ ; ತನ್ನ ಮೂಲ ಪ್ರಮಾದದ ಅರಿವಿದೆ ; ಆತ್ಮ ಶೋಧವಿದೆ. ಹೀಗೆ ಈ ನಾಟಕದಲ್ಲಿ ಜಾನಪದ– ನಾಗರಿಕ – ಸಂಸ್ಕೃತಗಳ ಸಂಘರ್ಷಣದ ಚಿತ್ರವೂ ಇದೆ.

ಒಂದು ವೇಳೆ ಈ ನಾಟಕದ ಸಮಸ್ಯೆಯನ್ನು ಕೇವಲ ಸಾಮಾಜಿಕ ಸಮಸ್ಯೆಯಾಗಿಯಷ್ಟೆ ಗಮನಿಸಿದ್ದರೆ ಏಕಲವ್ಯ ಪ್ರಸಂಗ ಮಹಾಭಾರತದಿಂದ

ಪ್ರತ್ಯೇಕವಾಗಿ ಸಿಡಿದು ನಿಲ್ಲುತ್ತಿತ್ತು. ಆಗ ದ್ರೋಣ ಈ ಸಂಘರ್ಷದ ಪಾತ್ರವಾಗುತ್ತಿರಲಿಲ್ಲ. ಮಹಾಭಾರತಕ್ಕೆ ಯಾವ ಅರ್ಥವನ್ನೂ ಈ ಕಥಾನಕ ನೀಡಲಾಗುತ್ತಿರಲಿಲ್ಲ. ಕುವೆಂಪು ಯಾವ ಪಾತ್ರವನ್ನೂ ಯಾರಿಗಾಗಿಯೂ ಕೀಳುಮಾಡದೆ (ತಾರುಣ್ಯದ ಅರ್ಜುನನನ್ನು ಅದಕ್ಕಿಂತ ಬೇರಾಗಿ ಚಿತ್ರಿಸುವುದು ಸಾಧುವಾಗುತ್ತಿರಲಿಲ್ಲವಾದ್ದರಿಂದ ಅವನ ಪಾತ್ರ ಚಿತ್ರದಲ್ಲಿ ಕೂಡ ಕಂದುಕಲೆ ಇಡದೆ–) ಆ ಎಲ್ಲ ಪಾತ್ರವನ್ನೂ ಆಳವಾಗಿಸಿದ್ದಾರೆ, ಶೋಧನದ ಮೂಲಕ ; ಉನ್ನತಗೊಳಿಸಿದ್ದಾರೆ, ಸಾಧನದ ಮೂಲಕ ; ವಿಶಾಲಗೊಳಿಸಿ ಬೇರೆ ಮಗ್ಗುಲನ್ನು ನೀಡಿದ್ದಾರೆ, ಸಂವೇದನೆಯ ಮೂಲಕ.

೫

'ಬೆರಳ್‌ಗೆ ಕೊರಳ್' 'ಶ್ಮಶಾನ ಕುರುಕ್ಷೇತ್ರ' ನಾಟಕಗಳ ಮೂಲಕ ವ್ಯಾಸ ಭಾರತದ ಅದೃಶ್ಯ ಆಯಾಮಗಳನ್ನು ಕಾಣಿಸಿದ ಕುವೆಂಪು ಶ್ರೀ ರಾಮಾಯಣ ದರ್ಶನದಲ್ಲಿ ವಾಲ್ಮೀಕಿ ರಾಮಾಯಣದ ಹೊಸ ಸಾಧ್ಯತೆಗಳನ್ನು ಸಾಧಿಸಿ ತೋರಿಸಿದ್ದಾರೆ. ಶುದ್ಧಕಾವ್ಯವಾಗಿ ವಾಲ್ಮೀಕಿ ರಾಮಾಯಣಕ್ಕಿಂತಲೂ ಏಕಾಖಂಡವಾಗಿ ಮಹದತಿಶಯವಾಗಿದೆಯೆಂದು ಹೇಳುವುದು ಆಗದಿರಬಹುದು. ಆದರೆ ಆ ಮಹಾಕಥೆ ಆಧುನಿಕ ಯುಗಕ್ಕೂ ವೈಚಾರಿಕ ತೃಪ್ತಿಯನ್ನೂ ದಾರ್ಶನಿಕ ತುಷ್ಟಿಯನ್ನೂ ಸಮಗ್ರ ರೂಪದಲ್ಲಿ ನೀಡಬಲ್ಲಂತಹ ರೀತಿಯಲ್ಲಿ ಮಹಾಶಿಲ್ಪ ವೈಭವದ ಈ ಕೃತಿಯನ್ನು ಸೃಜಿಸಿದ್ದಾರೆ. ಕಂಡ ರಾಮಾಯಣವನೆಲ್ಲವನ್ನೂ ಲೋಕಂಗಳು ತಣಿವಂತೆ ಹಾಡಿದ ವಾಲ್ಮೀಕಿ ಋಷಿ. ಆದುದಕ್ಕೆ ಕನ್ನಡಿಯನ್ನು ಹಿಡಿಯುವ ಕೆಲಸ ಮಾಡದೆ ಅಪ್ಪುದಕ್ಕೆ ಮುನ್ನುಡಿಯನ್ನುಲಿಯುತ್ತಾನೆ ಎನ್ನುವ ಕುವೆಂಪು ತಮ್ಮ ಕೃತಿ ದರ್ಶಬಾಂಶದ ಬಗೆಗೂ ಹೇಳುತ್ತಿರುವಂತೆ ಕಾಣುತ್ತದೆ. ಅಂದರೆ ಈಕೃತಿ ಆದದ್ದರ ಪ್ರತಿಬಿಂಬವಲ್ಲ, ಆಗಿಹೋದ ಕಾವ್ಯದ ಅನುವಾದವೂ ಅಲ್ಲ, ಎರಡೂ ; ಆಗಲಿರುವುದಕ್ಕೆ ಮುಂಗೋಳಿಯಾಗಿ ಅರುಣೋದಯವಾಗಿ ಈ ಕಾವ್ಯಲೋಕ ಚಿತ್ರ ತೋರುತ್ತದೆ, ಎಂದೂ ಕವಿಯ ಇಂಗಿತವಿರುವಂತೆ ಕಾಣುತ್ತದೆ. ಅಂದರೆ ಈ ಕಾವ್ಯ ವಾಸ್ತವ ಪ್ರಪಂಚದ ವಸ್ತು ಚಿತ್ರವೂ ಅಲ್ಲ, ಐತಿಹಾಸಿಕ ವಸ್ತುನಿರೂಪಣ ಚರಿತ್ರೆಯೂ ಅಲ್ಲ ; ಬರಲಿರುವ ಯುಗದ ಚಿತ್ರವಾಗಿದೆ ಎಂಬ ಇಂಗಿತವೂ ಇರಬಹುದು. ಆಗ ನಮ್ಮ ಈ ಯುಗ ಕಾವ್ಯ ಏನಾಗಿದೆ ? ಅದಕ್ಕೇನರ್ಥವಿದೆ ? ಹಾಗೂ ಈ ಕೃತಿ ನಮ್ಮ ಯುಗದ ತಾತ್ತ್ವಿಕ ಹಿನ್ನೆಲೆಯಲ್ಲಿ ನಮ್ಮ ಅನುಭವದ ನೆಲೆಗಟ್ಟಿನಲ್ಲಿ ನಿಂತಿದೆಯೆ ? ಎಂದೆಲ್ಲ ಪ್ರಶ್ನೆ ಬರುತ್ತದೆ.



ಈ ವಿಚಾರಲಹರಿಯ ಬಗೆಗೆ ದೀರ್ಘ ವಿವೇಚನೆ ಮಾಡಲು ಇಲ್ಲಿ ಅವಕಾಶವಿಲ್ಲದಿದ್ದರೂ ಕೆಲವೊಂದು ವಿವರಣೆಗಳಷ್ಟನ್ನೆ ನೀಡಬಹುದು. ನಾವು ನಮ್ಮ ಯುಗ ಎಂದು ಹೇಳುವುದು ಯಾವುದನ್ನು ? ಯಾರು ಕಂಡ ಬದುಕನ್ನು? ಯಾರಿಗಾದ ಬೇಸರವನ್ನು? ಎಲ್ಲರೂ ಯಾವುದನ್ನು ತಮ್ಮ ಮೇಲ್ಮನಸ್ಸಿನಲ್ಲಿ ವಾದಿಸಿ ಯುಗವೆನ್ನುತ್ತಾರೆ ? ಯಾವುದನ್ನು ಒಳಮನಸ್ಸಿನಲ್ಲಿ ಸಂವೇದಿಸುತ್ತಾರೆ? ಪ್ರತಿಕೆಗಳಲ್ಲಿ ನಿತ್ಯವಾರ್ತೆಯಾಗುವಷ್ಟನ್ನೆ ಗಮನಿಸುವುದಾದರೆ ಬಿದ್ದ ರೈಲು, ಗಂಡನನ್ನು ಕೊಂದ ಹೆಂಡತಿ, ತಂದೆಯನ್ನು ಹೊಡೆದು ತೀರಿಸಿದ ಮಕ್ಕಳು, ಅಪಹರಣಗೊಂಡ ಮಕ್ಕಳು, ಪಕ್ಷಾಂತರ ಮಾಡಿ ಸರ್ಕಾರ ಉರುಳಿಸಿದ ರಾಜಕಾರಣಿಗಳು– ಇತ್ಯಾದಿ ಅಷ್ಟೆ ನಮ್ಮ ಯುಗವಾಗುತ್ತದೆ. ಉಳಿದಾವೂ ಆಕರ್ಷಕ ವಾರ್ತೆಗಳಾಗಿರದುದರಿಂದ ಅವಿದ್ದರೂ ಕಾಣುವುದಿಲ್ಲ. ಸುದ್ದಿಗಾರರಿಗೂ ಆಕರ್ಷಕವಾಗದೆ ಅವು ಸುದ್ದಿಯಾಗಿ ಎಲ್ಲೂ ಕಾಣಿಸಿಕೊಳ್ಳದೆಯೂ ಇರಬಹುದು. ಹಾಗಾದರೆ ಬೀಳದ ಸಾವಿರಾರು ರೈಲುಗಳ ಸುದ್ದಿ ಎಲ್ಲಿ ಬರುತ್ತದೆ ? ಹಾಗೆಯೆ ಒಡೆಯದ ಶಾಂತ ಸಂಸಾರಗಳ, ಸಾಮಾನ್ಯ ತ್ಯಾಗಗಳ ಸುದ್ದಿ ಎಲ್ಲಿ ಬರುತ್ತದೆ?

ಒಂದು ನೂರೈವತ್ತು ವರ್ಷದ ಅವಧಿಯಲ್ಲಿ ಶ್ರೀರಾಮಕೃಷ್ಣ – ವಿವೇಕಾನಂದ – ಗಾಂಧೀಜಿ – ಅರವಿಂದ – ರಮಣಾದಿಗಳಂತಹ ಮಹಾ ವಿಭೂತಿಗಳನ್ನು ಕಂಡ ಯುಗ ದರಿದ್ರವೆಂದು ಹೇಳುವುದು ಹೇಗೆ ? ಈ ಸಂಪತ್‌ಭರಿತ ಅವಧಿ ತನ್ನ ಆತ್ಮಕಥೆಯನ್ನು ಒಳಗಿನ ಅನುಭವವನ್ನು ದೊಡ್ಡಕಾವ್ಯವೊಂದರಲ್ಲಿ ಹೇಳಿಕೊಳ್ಳ ಬಯಸುವುದಿಲ್ಲವೆ ? ತಮ್ಮ ಕಾವ್ಯದಲ್ಲಿ ಕುವೆಂಪು ಈ ಎಲ್ಲ ಒಳತುಡಿತಗಳಿಗೂ ಮಾತು ನೀಡುವ ಯತ್ನ ಮಾಡಿದ್ದಾರೆ. ಈ ಅರ್ಥದಲ್ಲಿ ರಾಮಾಯಣದರ್ಶನ ಕೃತಿರೂಪದ ಭಗವದಾವಿರ್ಭಾವವಾಗಿದೆಯೆಂದು ಕವಿಗಳ ಶ್ರದ್ಧೆ.

ಶ್ರೀರಾಮಾಯಣದರ್ಶನದ ಆರಂಭದಲ್ಲಿ ಬರುವ ವಾಲ್ಮೀಕಿ–ವ್ಯಾಧ ಪ್ರಸಂಗದಲ್ಲಿ ಕುವೆಂಪು ಅವರು ಒಂದು ಸೂಕ್ಷ್ಮ ಪರಿವರ್ತನ ಮಾಡಿಕೊಂಡಿದ್ದಾರೆ. ವಾಲ್ಮೀಕಿ ರಾಮಾಯಣದಲ್ಲಿ ಬರುವ ಇದೇ ಪ್ರಸಂಗ ತುಂಬಾ ಪ್ರಸಿದ್ಧವಾಗಿದೆ. ನಿರ್ಮಲ ತಮಸಾನದೀ ತೀರದಲ್ಲಿ ಸುಂದರ ಪ್ರಶಾಂತ ಪ್ರಾತಃಕಾಲದಲ್ಲಿ ಋಷಿ ವಾಲ್ಮೀಕಿ ತನ್ಮಯನಾಗಿದ್ದಾಗ, ಆಕಾಶರತಿಯಲ್ಲಿದ್ದ ಜೋಡಿ ನೀರಕ್ಕಿಗಳಲ್ಲೊಂದನ್ನು – ಗಂಡನ್ನು ಬೇಡನೊಬ್ಬ ಕೊಲ್ಲುವುದು, ಅದಕ್ಕೆ ನೊಂದ ಆ ಋಷಿ ಶಪಿಸುವುದು ಎಲ್ಲ ಎಲ್ಲರಿಗೂ ತಿಳಿದಿದೆ.

"ಮಾ ನಿಷಾದ ಪ್ರತಿಷ್ಠಾ ತ್ವಮಗಮಃಶಾಶ್ವತೀಃ ಸಮಾಃ ।
ಯತ್ ಕ್ರೌಂಚಮಿಥುನಾದೇಕಮವಧೀಃ ಕಾಮಮೋಹಿತಂ ।"

ಈ ಕಾವ್ಯದಲ್ಲಿ ವಾಲ್ಮೀಕಿಯವರ್ತನ ಬೇರಾಗುತ್ತದೆ.

“ಮಾಣ್, ನಿಷಾದನೆ, ಮಾಣ್ ! ಕೊಲೆ ಸಾಲ್ಗುಮಯ್ಯೊ ಮಾಣ್ !
ನಲಿಯುತಿರೆ ಬಾನ್ ಬನದ ತೊರೆ ಮಲೆಯ ಭುವನಕವನಂ
ಸುಖದ ಸಂಗೀತಕ್ಕೆ ವಿಷಾದಮಂ ಶ್ರುತಿಯೊಡ್ಡಿ
ಕೆಡಿಸುವಯ್? ನಾನುಮೊರ್ ಕಾಲದೊಳ್ ನಿನ್ನವೊಲೆ
ಕೊಲೆಯ ಕಲೆಯಲ್ಲಿ ಕೋವಿದನಾಗಿ ಮಲೆತಿರ್ದೆನಯ್.
ನಾರದ ಋಷಿಯ ದಯೆ ಕಣಾ ಕರುಣೆಯಂ
ಕಲಿತೆನ್ !”

ಎಂದು ತನ್ನ ಆತ್ಮಕಥೆಯ ಆತ್ಮತತ್ತ್ವವನ್ನು ತಿಳಿಸಿ ಆ ಬೇಡನಿಗೆ ಅರಿವೆಚ್ಚರವನ್ನಿತ್ತು, ಘಾಸಿಗೊಂಡಿದ್ದ ಹಕ್ಕಿಯ ಮೈಯಿಂದ ಬಾಣ ತೆಗೆದು ಅದನ್ನು ಬದುಕಿಸುತ್ತಾನೆ. ತಪ್ಪು ಮಾಡಿದ ಬೇಡ ಅಲ್ಲಿ ಶಾಶ್ವತ ವಿಪನ್ನಾವಸ್ಥೆಗೆ ಶಪಿತನಾಗುತ್ತಾನಾದರೆ, ಇಲ್ಲಿ ಕರುಣೆಗೆ ಪಾತ್ರನಾಗಿ ಉದ್ಧಾರಯೋಗ್ಯನಾಗುತ್ತಾನೆ. ವಾಲ್ಮೀಕಿ ಋಷಿ ಹಿಂದೆ ಬೇಡನಾಗಿದ್ದ ಕಥೆಯಾದರೂ ವಾಲ್ಮೀಕಿ ರಾಮಾಯಣ ಕಾಲಕ್ಕಿತ್ತೊ ಇಲ್ಲವೊ ತಿಳಿಯದು. ಅದರಿಂದ ಅಲ್ಲಿ ಆ ಋಷಿ ಬೇಡನಿಗೆ ಶಾಪ ಕರೆಯುವಾಗ ಆತ್ಮವೃತ್ತಾಂತ ನೆನಪಿಗೆ ಬರದಿರುವುದು ಸಾಧ್ಯ. ನಮ್ಮ ಕಾಲದಲ್ಲಿ ವಾಲ್ಮೀಕಿ ಋಷಿಯ ಪೂರ್ವದ ವ್ಯಾಧ ಜೀವನ ತುಂಬ ಪ್ರಸಿದ್ಧವಾಗಿದೆ. ಅದರಿಂದ ಈ ಯುಗದ ಕವಿ ಈ ವಾಲ್ಮೀಕಿಯನ್ನು ಆ ರೀತಿಯಲ್ಲಿ ನಡೆಸುವುದು ಕಷ್ಟ ಹಾಗೂ ಅಸಹಜ. ಮೇಲೇರಿದವರು ತಮ್ಮ ಹಿಂದಣ ಸ್ಥಿತಿಯನ್ನು ಮರೆತಂತೆ ವರ್ತಿಸುವುದು ಸಾಧ್ಯವಾದರೂ ವಾಲ್ಮೀಕಿ ಋಷಿಕವಿಯ ವರ್ತನ ಈಗ ಅದಾಗಬರದು. ಎಚ್ಚತ್ತ ಚೇತನಗಳು ಮಲಗಿರುವ, ಬಿದ್ದಿರುವ ಜೀವಿಗಳನ್ನು ಎಚ್ಚರಿಸುವ ಹೊಣೆಹೊತ್ತಿರುತ್ತಾರೆ. ಆದರೆ ಅವರು, ಆ ಕಾರ್ಯದಲ್ಲಿ ಎಷ್ಟು ದೂರ ಹೋಗಬಹುದು? ಎಚ್ಚರಿಸುವಷ್ಟರ ಮಟ್ಟಿನ ತನಕ. ಇಲ್ಲಿ, ವಾಲ್ಮಿಕಿ ಋಷಿ ಘಾತಗೊಂಡ ಹಕ್ಕಿಯನ್ನೂ ಬದುಕಿಸುವ ಪವಾಡ ಮೆರೆಯುವತ್ತ ಕೊಂಚ ಹೆಚ್ಚು ನಡೆದಂತೆ ತೋರಬಹುದು. ಗಾಂಧೀಜಿಯ ಪ್ರಭಾವ ನಿಚ್ಚಳವಾಗಿದ್ದ ೧೯೩೬ ಅವಧಿಯಲ್ಲಿ ಬರೆಯುತ್ತಿದ್ದ ಶ್ರೀ ರಾಮಾಯಣ ದರ್ಶನದ ಭಾಗದ ಕಾವ್ಯಕಥೆಯಲ್ಲಿ ಅಹಿಂಸಾತತ್ತ್ವ ಕೊಂಚ ತೀವ್ರವಾಗಿ ಪ್ರವೇಶಿಸಿದಂತೆಯೂ ತೋರಬಹುದು. ಆದರೆ ಈ ಕವಿಯ ವಿಶಿಷ್ಟಕಾಣ್ಕೆಯೊಂದೂ ಇಲ್ಲಿ ಮೈದಾಳಿರುವುದನ್ನು ಗಮನಿಸಬೇಕು. ಬೇಡನಿಗೆ ಶಾಶ್ವತ ವಿಯೋಗವನ್ನು ಶಾಪವಾಗಿತ್ತ ವಾಲ್ಮೀಕಿಗಳಂತೆ ನಾವೀಗ ಬಿದ್ದ ಜನಾಂಗಗಳ ಬಗೆಗೆ ಧೋರಣೆ



ತಾಳಬರುವುದಿಲ್ಲ. ಬೇಟಗೊಂಡಿದ್ದ ಹಕ್ಕಿಗಳಲ್ಲಿ ಒಂದನ್ನು ಕೊಂದು ಪಾಪವೆಸಗಿದನಾದರೂ ತನ್ನ ವೃತ್ತಿಯ ಕೆಲಸ ಮಾಡಿದ ಆ ಬೇಡನಿಗದು ಘೋರ ಶಿಕ್ಷೆಯೆ ಆಗಬಹುದು. ಈ ಬೇಡನಿಗೆ ವಾಲ್ಮೀಕಿ ವಿಧಿಸಿದ ಶಿಕ್ಷೆ ರಾವಣನಿಗೆ ವಿಧಿಸಿದುದೇ ಆಗಿದೆ ಎಂದೂ ವ್ಯಾಖ್ಯಾನವುಂಟು. ರಾವಣನನ್ನು ವಾಲ್ಮೀಕಿ ಋಷಿಯೂ ಈ ಕವಿಯೂ ಕಾಣುವ ದೃಷ್ಟಿ ಇಲ್ಲೆ ಸ್ಪಷ್ಟವಾಗುತ್ತದೆ. ನಲಿಯುತ್ತಿರುವ ಬಾನ್‌ಬನದ ಮಲೆ ತೊರೆಯ ಭುವನ ಕವನದ ಸಂಗೀತವನ್ನು ಹುಳಿಯಾಗಿ ಮಾಡುವುದು ಈ ಕಾಲದ ಕವಿಗೆ ಇಷ್ಟವಿಲ್ಲ. ಎಷ್ಟೊ ಸಂಸಾರಗೀತವನ್ನು ಕೆಡಿಸಿ ಹಾಳೆಸಗಿದ್ದ ರಾವಣನನ್ನೂ ಎಚ್ಚರಿಸಿ ತಿದ್ದಿ ಮೇಲೆತ್ತುವ, ಭುವನಗೀತ ಶ್ರುತಿಯಲ್ಲಿ ಕೂಡಿಸುವ, ಷಡ್ಯಂತ್ರವನ್ನು ಸಮೆಯುತ್ತಾರೆ ಕುವೆಂಪು ಈ ತಮ್ಮ ಕಾವ್ಯದಲ್ಲಿ. ಹೀಗಾಗಿ ಕುವೆಂಪು ಈ ಪ್ರಸಂಗ ಚಿತ್ರಣದಲ್ಲೆ ತಮ್ಮ ಕಾವ್ಯಮಾರ್ಗದ ದಿಕ್ಕನ್ನು ಕಂಡುಕೊಳ್ಳುತ್ತಾರೆ. ಆಗ ‘‘ಪಿಡಿವೊಲಲ್ತಾದುದಕೆ ಕನ್ನಡಿಯನಪ್ಪುದಕೆ ಮುನ್ನಡಿಯನುಲಿವಂತೆಯುಂ –” ಎಂಬ ಮಾತು ಅರ್ಥಪೂರ್ಣವಾಗುತ್ತದೆ. ಆಗಾಮಿ ಜಗತ್ತು, ಪತಿತೋದ್ಧಾರವನ್ನು ಆಧ್ಯಾತ್ಮಿಕ ಅರಿವಿನಿಂದಲ್ಲದಿದ್ದರೂ ಭೌತಿಕ ಪರಿಣಾಮಗಳ ಕಾರಣಗಳಿಂದಲಾದರೂ, ಒಪ್ಪಿಕೊಳ್ಳಬೇಕಾಗುತ್ತದೆ.

ವಾಲ್ಮೀಕಿ ಪ್ರಸಂಗವನ್ನು ಕುವೆಂಪು ಹೀಗೆ ಮಾರ್ಪಾಟು ಮಾಡಿಕೊಂಡದ್ದರಿಂದ ಈ ಅರ್ಥಗಳು ಹೊಳೆದಿದ್ದರೂ, ಬೇರೊಂದು ರೀತಿಯಲ್ಲಿ ಮೂಲ ವಾಲ್ಮೀಕಿ ರಾಮಾಯಣದ ಅದೇ ಪ್ರಸಂಗ ಮನನೀಯವಾಗುಳಿಯುತ್ತದೆ. ಅಲ್ಲಿ ವಾಲ್ಮೀಕಿ ಋಷಿ ಶಾಪವಿತ್ತು ಮರುಗುತ್ತಾನೆ : “ಅಲಾ, ಹಕ್ಕಿಯನ್ನು ಕಂಡು ಶೋಕಾರ್ತನಾಗಿ ಎಂಥ ಮಾತಾಡಿಬಿಟ್ಟೆ !” ಎಂದು. ಆದರೆ ಋಷಿಯಾಡಿದ ಮಾತು ಛಂದೋಬದ್ಧವಾಗಿತ್ತು. ಅವನಿಗೆ ಆದ ಸಮಾಧಾನ ಅದು. ದುಃಖ – ಸಮಾಧಾನಗಳಲ್ಲಿರುವಾಗ ಋಷಿಗೆ ಬ್ರಹ್ಮ ಪ್ರತ್ಯಕ್ಷವಾಗುತ್ತಾನೆ. ಅವನ ಮುಂದೆಯೂ ವಾಲ್ಮೀಕಿ ಋಷಿಯದು ಅದೇ ಮಾತು: “ಪಾಪಾತ್ಮನಾದ ಅವನು ವೈರಗ್ರಹಣಬುದ್ಧಿಯಿಂದ ಎಂಥ ಕಷ್ಟವನ್ನು ಮಾಡಿಬಿಟ್ಟ! ಇಂಪಾದ ದನಿಯೊಸರುತ್ತಿದ್ದ ಆ ಕ್ರೌಂಚ ಪಕ್ಷಿಯನ್ನು ಅಕಾರಣವಾಗಿ ಕೊಂದುಬಿಟ್ಟನಲ್ಲ!” ಎಂದು ಶೋಕಿಸುತ್ತಲೆ ಆ ಶ್ಲೋಕವನ್ನು ಗೊಣಗಿಕೊಳ್ಳುತ್ತಾನೆ. ಅದಕ್ಕೆ ಬ್ರಹ್ಮ, “ನೀನಾಡಿದ ಮಾತು ಛಂದೋಬದ್ಧವಾಗಿ ಶ್ಲೋಕವೆ ಆಗಿದೆ. ನನ್ನಿಚ್ಛೆಯಂತೆ ಸರಸ್ವತಿ ನಿನ್ನ ಮಾತಿನಿಂದ ಬಂದಳು. ಶ್ರೀರಾಮ ಕಥೆಯನ್ನು ಬರೆ. ಶ್ರೀರಾಮ ಸೀತೆ ಲಕ್ಷ್ಮಣ ರಾವಣಾದಿಗಳೆಲ್ಲರ ಒಳ ಹೊರ ಕಥೆಯೂ ನಿನಗೆ ಗೋಚರಿಸಲಿ” ಎಂದು ಹರಸುತ್ತಾನೆ. ಈ ಕಥೆಯಲ್ಲಿ ಪ್ರಾಕೃತಿಕ ಸಹಜವಾದೊಂದು ಚೆಲುವಿದೆ.

ಇಲ್ಲಿನ ವಾಲ್ಮೀಕಿ ಋಷಿಗೆ ಕ್ರೌಂಚ ಸಂಬಂಧವಾದ ದುಃಖ ಒಂದು ಕಡೆ ; ಶಾಪದ ಮಾತೇ ಶ್ಲೋಕವಾಯಿತಲ್ಲ ಎಂಬ ಬೆರಗೊಂದುಕಡೆ. ಈ ಒತ್ತಡದಲ್ಲಿದ್ದಾಗ ಕಾವ್ಯಬ್ರಹ್ಮದ ಕಾಣ್ಕೆ ಲಭಿಸುತ್ತದೆ. ಕುವೆಂಪು ಅವರ ವಾಲ್ಮೀಕಿ ಸತ್ತಕ್ರೌಂಚವನ್ನು ಬದುಕಿಸುವುದರಿಂದ ಅದರ ಸಾವಿನ ಬಗೆಗೆ ಆ ಕವಿ ಋಷಿಯಲ್ಲಿ ನೋವುಳಿದಿರಲಾರದು. ಆ ಋಷಿ ಶಾಪವನ್ನೂ ಕೊಡದಿರುವುದರಿಂದ ಆ ಮಾತೇ ಛಂದೋಬದ್ಧವಾಯಿತೆಂಬ ಗೆಲುವಿರಲಾರದು. ಇದರಿಂದಾಗಿ ಕಾವ್ಯಸೃಷ್ಟಿಗೆ ದೊರೆತ ಒತ್ತಡ ಭಿನ್ನವಾಗುತ್ತದೆ. ಹಾಗೂ ಕುವೆಂಪು ಕಾವ್ಯದ ಪರಿಣಾಮಗೊಂಡ ಪಾತ್ರಗಳು ವಾಲ್ಮೀಕಿ ರಾಮಾಯಣದ ಪ್ರಾಕೃತಿಕವಾಗಿಯೇ ಉಳಿದುಕೊಳ್ಳುವ ಪಾತ್ರಗಳಷ್ಟು ಸಹಜರುಚಿಯಿಂದ ಕೂಡಿರುವಂತೆ ಕೆಲವರಿಗೆ ತೋರದಿರಬಹುದು. ಕಾವ್ಯ ಮುನ್ನಡೆದಂತೆಲ್ಲ ಕುವೆಂಪು ಬಹುತೇಕವಾಗಿ ತತ್ತ್ವ ನಿರ್ದೇಶಿತರಾಗದೆ ಕೇವಲ ದರ್ಶನ ದೀಪ್ತರಾಗಿ ನಡೆಯುವುದರಿಂದ ಅವರ ಪಾತ್ರಗಳಿಗೆ ದೈವೀ ಪ್ರಾಕೃತಿಕ ಸಹಜತೆಯೊಂದು ಲಭಿಸುತ್ತದೆ. ನಷ್ಟವಾಗಬಹುದಿದ್ದುದೆ ಸುಕೃತ ಲಾಭವಾಗಿ ಪರಿಣಮಿಸುತ್ತದೆ.

ರಾಮಾಯಣದ ಚೌಕಟ್ಟಿನಮೇಲೆ ನಿರ್ಮಿಸಹೊರಟಿರುವ ಈ ಕಾವ್ಯ ಶಿಲ್ಪ, ಮೊದ ಮೊದಲು ಆ ಕಾವ್ಯನುವಾದವಾಗಿ ಸಂಗ್ರಹಾನುವಾದವಾಗಿ ತೋರುತ್ತದೆ. ಆದರೂ ಮೊದಲೆ ಬರುವ ಮಂಥರೆ ಪಾತ್ರದ ಕಂಡರಣೆಯಲ್ಲಿ ಒಂದು ವಿಶಿಷ್ಟವಾದ – ಇಡೀ ಕಾವ್ಯದರ್ಶನಕ್ಕೆ ಸಾಂಗತ್ಯವಾಗಿರುವಂತಹ, ದರ್ಶನವನ್ನು ಪ್ರತಿಮಿಸಿದ್ದಾರೆ. ತನ್ನ ಮಹದ್ ವ್ಯಾಪಾರವನ್ನು ನಡೆಸಿಕೊಳ್ಳಲು ತೀರಾ ಸಾಮಾನ್ಯವಾದುದನ್ನು ವಿಶ್ವಶಕ್ತಿಕರಣವಾಗಿ ಬಳಸಿಕೊಳ್ಳುತ್ತದೆಂಬ ತಾತ್ತ್ವಿಕ ತಿಳಿವಳಿಕೆ ಕುವೆಂಪು ಅವರದು. ಹಾಗೂ, ಶತಮಾನಗಳಾಚೆಯ ಘಟನೆಗೆ ಹಿಂದೆಯೆ ಪೂರ್ವಸಿದ್ಧತೆಯು ಅಗಣ್ಯ ವಿಧಾನದಿಂದ ನಡೆದಿರುತ್ತದೆ ಎಂಬ ಅರಿವೂ ಈ ಕವಿಯದು. ಬೆರಳ್ಗೆಕೊರಳ್ ನಾಟಕದಲ್ಲೂ ಇದು ಸ್ಪಷ್ಟವಾಗಿದೆ. ಇಲ್ಲಿ, ಕಾಡಿನ ಮಧ್ಯದಲ್ಲಿ ಸಿಕ್ಕಿ ಗೆದ್ದಲು ತಿನ್ನುತ್ತಿದ್ದ ದಸ್ಯು ಶಿಶುವೊಂದರ ಬಗೆಗೆ ಮಕ್ಕಳಿಲ್ಲದ ಕೇಕೆ ರಾಜನಲ್ಲಿ ಮೂಡಿದ ಮರುಕ, ವಿಧಿ ತನ್ನ ಕಾವ್ಯದದಿ ಪೂಜೆಯನ್ನು ಮಾಡುವಂತಿತ್ತು. "ಕೂರ್ಗೆಲಸದಿಂ ಪಿಂತಿರುಗುತಿರ್ದ ಪಾರ್ಥಿವನೊಳುದಿಸಿತು ಕರುಣೆ, ಕಟ್ಟಲಿಹ ಕಬ್ಬಕೆ ಮೊದಲ್ ಗುದ್ದಲಿಯ ಪೂಜೆಪೋಲ್." ಇದೇ ದರ್ಶನ ಈ ಕಾವ್ಯದಲ್ಲಿ ನಿಚ್ಚಳವಾಗಿ ತುಂಬಿಕೊಂಡಿದೆ. ಸಂಪಾತಿಯ ಪ್ರಸಂಗವೂ ಇದಕ್ಕೊಂದು ಸ್ಪಷ್ಟ ನಿದರ್ಶನ. ತನ್ನಿಂದ ಮಹತ್ ಕಾರ್ಯವಾಗುತ್ತದೆಂದು ಮುನಿ ಹೇಳಿದ ಮಾತಿನಂತೆಯೆ ತನ್ನ ಸಂಕಟಪರಿಹಾರಕ್ಕಾಗಿ ಕಾಯ್ದು ಕುಳಿತಿರುವ



ಸಂಪಾತಿ ಹತಾಶನಾಗುತ್ತಾನೆ. "ದೈವಕೃಪೆಗೇಂ ಕ್ಲೇಶಮುಂ ರೆಂಕೆಯಪ್ಪುದು !... ಶಿವಕೃಪೆಗೆ ತೃಣಮೆ ಖಡ್ಗಂ ; ಪನಿಕಡಲ್ ; ಕಿಡಿ ಸಿಡಿಲ್ ! ಶ್ರದ್ಧೆ ತಾಂ ಸಾಣೆಯಿರೆ, ತಾಳ್ಮೆಯೆ ತಪಂ ! ಧರ್ಮಶಕ್ತಿಯುಂ ಯೋಗಗೊಂಡಿರೆ ಕರ್ಮಿಯ್ ಕಾಯ್ವಾತನುಂ !.... ನಿಶ್ಶಬ್ದಿಯೈ ಈಶ್ವರ ಕೃಪಾಬ್ಧಿ ಬರ್ಪುದನರಿಯಲಾರೆವಂತೆಯೆ ಮಹತ್‌ಕೃತಿ ತಾಂ ಮಹನ್ ಮೌನಿ !...." ಎಂದು ಸಾಮಾನ್ಯ ವೀರನಾದ ಶರಗುಲ್ಮ ಸಂಪಾತಿಗೆ ಸಮಾಧಾನ ಹೇಳುತ್ತಾನೆ. ಸೀತಾಪಹರಣ ವಿಷಯವಾಗಿ ವಿವರ ನೀಡಿದೊಡನೆಯೆ ಸಂಪಾತಿಗೆ ವರ್ಣರಂಜಿತ ರೆಕ್ಕೆ ಮೂಡುತ್ತದೆ. ಈ ಪ್ರಸಂಗವಾದರೂ ಕವಿಯ ಸಂಕೀರ್ಣ ದರ್ಶನವನ್ನು ಪ್ರತಿಮಿಸುವಂತಹದೇ ಆಗಿದೆ. ಸಂಪಾತಿಯ ಸಾಹಸಕ್ಕೆ ಬಲಿಯಾದ ಮುನಿ ನಿಶಾಕರನು ತನ್ನ ಕಾಲು ಬಿಗಿಹಿಡಿದು ಬೇಡುತ್ತಿದ್ದ ಆ ಪಕ್ಷಿವರನನ್ನು ಶಪಿಸದೆ, ನಿಡುಹೊತ್ತು ಜಾನಿಸಿ, "ಶಪಿಸೆನಾಂ... ನಿನ್ನಿಂ ಜಗತ್ ಕ್ಷೇಮಕರಮಪ್ಪ ಗುರುಮಹತ್ಕಾರ್ಯಮಕ್ಕುಂ.... ಅಪ್ಪುದಾದೊಡಂ, ತಪ್ಪದಂಯ್ ನಿನ್ನ ಕರ್ಮಕೆ ತಕ್ಕ ಶಿಕ್ಷಾಫಲಂ. ನಿನಗೊದಗಿದಪುದೊಂದು ಪೆರ್ಬೇನೆ. ಆ ಸಂಕಟಮೆ ಪಾಪ ಪರಿಹಾರಕ್ಕೆ ನಿನಗೆ ಸಾಧನಮಾಗೆ, ಕೊನೆಗೆ ನಿನ್ನಿಂದಾಗುವಾ ಮಹತ್ಕಾರ್ಯದಿಂ ಸಿದ್ಧಿಪುದು ನಿನಗುಮಂತೆಯೆ ನಿಖಿಲ ಲೋಕಕ್ಕೆ ಕೇಳ್ ಶೋಕಮೋಕ್ಷಂ", ಎನ್ನುತ್ತಾನೆ. ಇಲ್ಲೂ ಬೆರಳ್‌ಗೆ ಕೊರಳ್ ನಾಟಕದಲ್ಲಿ ವ್ಯಕ್ತವಾಗಿರುವಂತೆಯೇ ಕರ್ಮಕ್ಕೆ, ಶಾಪವಿಲ್ಲದಿದ್ದರೂ, ವಿಪಾಕರೂಪದ ಶಿಕ್ಷಾಫಲ ಉಂಟೇ ಉಂಟು. ಆದರೆ ಆ ಶಿಕ್ಷಾಫಲ, 'ಏನೋ ತಪ್ಪು, ಏನೋ ಶಿಕ್ಷೆ ಎಂಬಂತಾಗಿರುವುದಿಲ್ಲ. ಇಂದು, ವ್ಯಕ್ತಿಯ ಕರ್ಮನಿಷ್ಕೃತಿಯ ಮಾರ್ಗವಾದ ಶಿಕ್ಷೆಯೆ ಮುಂದಾಗಲಿರುವ ಮಹದ್‌ಕಾರ್ಯದ 'ಆಗಿಗೆ,' ಹಾಗೂ ನಾನಾ ಜೀವರ ಸಂಕಟಪರಿಹಾರಕ್ಕೆ ಅತ್ಯನಿವಾರ್ಯ ಮಾರ್ಗವಾಗಿ ತೆಕ್ಕೆಗೊಂಡಿರುತ್ತದೆ. ಮಹತ್ಕಾರ್ಯ ತಂಬಟೆ ಸದ್ದಿನಿಂದ ಬರುವುದಿಲ್ಲ. ಅದು ಮಹನ್‌ಮೌನಿ. ಈಶ್ವರಕೃಪೆಯ ಸಾಗರವೂ ನಮ್ಮ ಸಾಗರದಂತೆ ಭೋರ್ಗರೆಯುವುದಿಲ್ಲ. ಕಾಯುವಾತನೂ – ಈ ರೀತಿಯಲ್ಲಿ ಮಹತ್ತಿಗಾಗಿ ಸಂಕಟ ಮಾರ್ಗದಿಂದ ಕಾಯುವಾತನೂ – ಮಹಾಕರ್ಮ ಶೀಲವಾಗುತ್ತಾನೆ.

ಹೀಗೆ ಇಲ್ಲಿ ವ್ಯಕ್ತವಾಗಿರುವ ದರ್ಶನವೆಲ್ಲ ಈ ಆದ್ಯಂತ ಅವಿನಾಸಂಬಂಧವನ್ನು, ವಿಶ್ವಾಖಂಡ ಸತ್ತ್ವವನ್ನು ಧ್ವನಿಸುತ್ತದೆ. ರಾಮಪಟ್ಟಾಭಿಷೇಕದ ಹಿಂದಿನ ದಿನ ಮಂಥರೆಯ ಮನಸ್ಸಿನಲ್ಲಿ ಮೂಡಿದ ಕನಸು ಕೂಡ ರಾವಣನ ವಿಧಿ ಮಥಿಸಿದುದೇ ಆಗಿರುತ್ತದೆ. ಹೀಗಾಗಿ ಇಲ್ಲಿ ಯಾವುದೂ ಪ್ರತ್ಯೇಕ ಘಟನೆ, ಪ್ರತ್ಯೇಕ ವ್ಯಕ್ತಿ ಎಂಬುದೇ ಇಲ್ಲ. ಇದು ಅಲ್ಪ, ಇದು ಪತಿತ, ಅದು ಮಹತ್,

ಅದು ಪುಣ್ಯ – ಆದ್ದರಿಂದಲೆ ಅವು ಸಂಬಂಧಗೊಂಡಿಲ್ಲ ಎಂಬ ಭ್ರಾಂತಿಯಿಲ್ಲ.

ನೆಯ್ದಾಳುತಿದೆ ಜಗವನೊಂದತಿ ವಿರಾಣ್ಮನಂ,
ಸೂಕ್ಷ್ಮಾತಿಸೂಕ್ಷ್ಮತಂತ್ರದಿ ಬಿಗಿದು ಕಟ್ಟಿಯುಂ
ಜೀವಿಗಳ್ಗಿಚ್ಛೆಯಾ ಸ್ವಾತಂತ್ರ್ಯ ಭಾವಮಂ
ನೀಡಿ. ಮಂಥರೆ ಸೀತೆ ರಾಮ ರಾವಣರೆಲ್ಲರುಂ
ಸೂತ್ರಗೊಂಬೆಗಳಲ್ತೆ ಆ ವಿಧಿಯ ಹಸ್ತದಲಿ ?"

ಅಣುತಾರಾಗ್ರಹ ವಲಯವನ್ನೆಲ್ಲ ಬಿಗಿದಿಟ್ಟಿರುವ ಯಾವುದೋ ಆ ಮಹದ್ಕಾಂತ ಸತ್ತ್ವ ವಿರಾಣ್ಮನವೂ ಆಗಿದೆ. ಅದು ಜೀವಿಗಳನ್ನೆಲ್ಲ ಬಿಗಿದಿದ್ದರೂ ಅವರಿಗೆಲ್ಲ ಇಚ್ಛೆಯ ಸ್ವಾತಂತ್ರ್ಯಭಾವವನ್ನು ನೀಡಿದೆ. ಅಂದರೆ ಜೀವಿಗಳಿಗೆ ಇಚ್ಛೆಪಡುವ ಸ್ವಾತಂತ್ರ್ಯವನ್ನು ಇಚ್ಛಾಭಾವದ ಸ್ವಾತಂತ್ರ್ಯವನ್ನು ಕೊಟ್ಟಿದೆ. ಅದರಿಂದಲೆ ನಾವೆಲ್ಲ ಇಚ್ಛಿಸುತ್ತೇವೆ. ಹೀಗೆಂದರೆ ವ್ಯಕ್ತಿಗೆ ಏನೂ ಸ್ವಾತಂತ್ರ್ಯವಿಲ್ಲವೆ ? ಉಂಟು; ಅವನು ಜಗದ್‌ವ್ಯೂಹಕ್ಕೆ ಸೇರಿರುವಷ್ಟುಮಟ್ಟಿಗೆ ಮಾತ್ರ ಉಂಟು. ಆ ವಿರಾಣ್ಮನವೇ ಆದ್ಯಂತ ಘಟನೆಗಳನ್ನೆಲ್ಲ– ಅಲ್ಪಮಹದ್ವ್ಯಕ್ತಿಗಳನ್ನೆಲ್ಲ – ಸ್ವಕರ್ಮ ಮೂಲವಾದ ಕಟ್ಟಿನಿಂದ ಬಿಗಿದಿದೆ. ಹೀಗೆ ಒಪ್ಪಿದಾಗ ಯಾರೊಬ್ಬರಿಗೂ ಸ್ವಾತಂತ್ರ್ಯವಿಲ್ಲದಂತೆ ತೋರಿದರೂ, ಯಾರೊಬ್ಬರ ಉದ್ಧಾರವೂ ಉಳಿದೆಲ್ಲರ ಉದ್ಧಾರದ ಜೊತೆಯೆ ತೆಕ್ಕೆಗೊಂಡಿರುತ್ತದೆ, ಎಂದೇ ಭಾವವಾಗುತ್ತದೆ.

ಈ ತಾತ್ತ್ವಿಕ ಅರಿವಿನಿಂದಲೆ ಕುವೆಂಪು ರಾಮಾಯಣ ದರ್ಶನದ ಪಾತ್ರಗಳೆಲ್ಲವನ್ನೂ ಅವಿಭಾಜ್ಯವ್ಯೂಹವಾಗಿ ಕಂಡಿದ್ದಾರೆ. ಶ್ರೀರಾಮನನ್ನು ಕಾಡಿಗೆ ಕಳಿಸಲು ಕಾರಣವಾದ ಮಂಥರೆ ಅದೇ ಶ್ರೀರಾಮಾಗಮನಕ್ಕೂ ಪ್ರೇರಕವಾದ ಶಕ್ತಿಗಳಲ್ಲಿ ಒಬ್ಬಳಾಗುತ್ತಾಳೆ. ವಿಧಿ ಮಂಥರೆಯನ್ನೂ ಬಳಸಿಕೊಂಡು ಮಹತ್ಕಾರ್ಯ ಮಾಡಬಲ್ಲದು. ಆದರೆ ಸಾಮಾನ್ಯ ಲೋಕದ ಕಣ್ಣು ಅದನ್ನು ಕುರುಡುಗಾಣುತ್ತದೆ. ಭರತ ಪ್ರೇಮಾಧಿಕ್ಯದಿಂದ ರಾಮ ವನವಾಸವನ್ನು ಯೋಜಿಸಿದ ಮಂಥರೆ, ಅದೇ ಭರತ ಪ್ರೇಮದ ಪುನರ್ ಲಾಭಕ್ಕಾಗಿ ಅವನ ಪ್ರೀತಿಯ ನಿಧಿಯಾದ ರಾಮನನ್ನು ಹಿಂತಿರುಗಿಸಲು ಹುಚ್ಚಿಯಂತೆ ಕಾಡಿನತ್ತ ಧಾವಿಸುತ್ತಾಳೆ.* ಆದರೆ ಬಿಟ್ಟ ಪಿರಂಗಿಯ ಗುಂಡನ್ನು ಗುಂಡಿ ಒತ್ತಿದ ಕೈಯಾದರೂ ತಡೆ ಹಿಡಿಯಬಲ್ಲುದೆ? ಹಿಡಿಯಲಾಗದಿದ್ದರೂ ಹಿಂದಕ್ಕೆ ಕರೆತರಬಲ್ಲುದೆ? ದೂರಕಾಲದಲ್ಲಾದರೂ ಸಾಧಿಸೀತು. ರಾಮ ಕ್ಷೇಮಕಾತರವಾಗಿರುವವರಲ್ಲಿ ಮಂಥರೆ ಅಲ್ಪಳೇನೂ ಅಲ್ಲ.

---

* 'ಶ್ರೀ ರಾಮಾಯಣ ದರ್ಶನದಲ್ಲಿ ಮಂಥರೆ' – ಲೇಖನ ನೋಡಬಹುದು.



ಹೀಗೆಯೆ ರಾವಣನ ಮನಃಪರಿಣಾಮವೂ ಸೀತಾರಾಮರ ಕ್ಷೇಮದೊಡನೆಯೆ ತೆಕ್ಕೆಗೊಂಡಿದೆ. ರಾಮಾಯಣ ದರ್ಶನದ ರಾವಣ ರಾಕ್ಷಸನೆ ಆದರೂ ಹತ್ತು ತಲೆಯವನಲ್ಲ. ಆದರೆ ಅಷ್ಟೆಕಾಮಿ, ಅಷ್ಟೆ ಅಹಂಕಾರಿ. ಇಲ್ಲಿ ರಾವಣನ ಕಾಮ ಅಹಂಕಾರಗಳು ಪರಸ್ಪರ ಗುಣಿತವಾಗಿ ಅವನ ಪಾತ್ರ ಸಂಕೀರ್ಣವಾಗುತ್ತದೆ. ಪರಮ ಪರಿಣಾಮಗೊಂಡ ರಾವಣನ ಸತ್ತ್ವ ರಾಮನ ಹೃದಯದಲ್ಲೆ ಸಂಗಮಗೊಳ್ಳುತ್ತದೆ. ಅದು 'ಸೆರೆಸಿಲ್ಕಿದನೊ ವೈರಿ' ಪ್ರಸಂಗದಲ್ಲಿ ವ್ಯಕ್ತವಾಗುತ್ತದೆ. ರಾವಣತ್ವ ಪರಿಣಾಮಗೊಂಡು ರಾಮತ್ವದಲ್ಲಿ ಐಕ್ಯವಾಗುವುದನ್ನು ಗೇಲಿ ಮಾಡುವ ದ್ವೈತವೂ ಉಂಟು. ಆದರೆ ರಾಮ ರಾವಣರು ಇಂಗಾಲವಂಶದ ಎರಡು ತುದಿಗಳಾದ ವಜ್ರ ಇದ್ದಿಲಿದ್ದಂತೆ, ಎಂಬ ಅರಿವು ಕವಿಯದು.

ರಾಮ ರಾವಣರಲ್ಲಿ ರಾವಣನಾದರೂ ರಾಮಸತ್ತ್ವದ ಪಾತ್ರವೇ ಆಗಿದ್ದಾನೆ. ಆದ್ದರಿಂದಲೇ ಅವನಿಗೆ ಸ್ವಸ್ಥಾನ ಸಾಧನೆ ಸ್ವತಃ ಸಿದ್ಧ, ಇದ್ದಿಲಿಗೆ ಇರುವಂತೆ. ಈ ಕಾರಣದಿಂದಾಗಿ ಕವಿ ರಾಮರಾವಣರ ಪಾತ್ರವನ್ನು ಸರಳಗೊಳಿಸಹೋಗುವುದಿಲ್ಲ. ಹೆಲಿಕಾಪ್ಟರ್ ಏರಿಸಿ ಸ್ವರ್ಗಸೇರಿಸಿಲ್ಲ. ಅವನಾದರೂ ಹಿಮಾಲಯ ಕಂದರಗಳ ಮೂಲಕವೆ ಜಾರುದಾರಿಯ ಏರುವೆಯನ್ನೇರುತ್ತಲೆ ಗೌರೀಶಂಕರ ಶಿಖರವೇರುತ್ತಾನೆ. ಇಬ್ಬರೂ ತಮ್ಮ ತಮ್ಮ ಪ್ರಕೃತಿಯಲ್ಲಿ ಉತ್ಕಟವಾಗಿ ಬದುಕುತ್ತಾರೆ. ಆದರೂ ರಾಮತ್ವದ ಆಕರ್ಷಣಕ್ಕೆ ಸಿಕ್ಕಿದ ರಾವಣಪಾತ್ರ ಎಷ್ಟೇ ಪ್ರತಿರೋಧಿಸಿದರೂ ಅತ್ತಕಡೆಯೇ ಧಾವಿಸುತ್ತದೆ. ಅವನ ಉದ್ಧಾರದಲ್ಲಿ ಮಂಡೋದರಿಗಿರುವ ಉತ್ಕಂಠತೆಯಿಂದಾಗಿ ಸೀತೆಯಲ್ಲಿ ಅವನ ಬಗೆಗೆ ಮರುಕ ಬರುತ್ತದೆನ್ನುವುದರಿಂದ, ಈ ಕಾವ್ಯದಲ್ಲಿ ಪರಸ್ಪರ ವಿರುದ್ಧವಾದ ಪಾತ್ರಗಳೂ ತಮಗೆ ಇಚ್ಛೆಯಿರಲಿ, ಇಲ್ಲದಿರಲಿ, ಇತರರ ಏಳಿಗೆಗಾಗಿ ಕಾಳಜಿವಹಿಸುವುದನ್ನು ಕಾಣುತ್ತೇವೆ. ಜೈನಕಾವ್ಯಗಳ ಭವಾವಳಿ ಕಥೆಗಳಲ್ಲಿ ಯಾವ ಯಾವುದೋ ಜೀವ ಯಾವ ಯಾವುದೋ ಜೀವದ ಉದ್ಧಾರಕಾರ್ಯದಲ್ಲಿ ತೊಡಗಿರುವ ಚಿತ್ರಣ ಬರುತ್ತದೆ. ಅಗ್ನಿಭೂತಿ ವಾಯುಭೂತಿಯರ ಕತೆಯನ್ನೇ ಗಮನಿಸಿದರೂ ತಿಳಿಯುತ್ತದೆ, ಹೇಗೆ ಅತಿವಿಕಾರಿಯಾದ ಪಾತ್ರವೂ ತಪಸ್ಸು, ಕರ್ಮನಿರ್ಜರೆಗಳಿಂದಾಗಿ, ಸಂತ ಜೀವರಿಗಿಂತಲೂ ಬೇಗ ಮುಕ್ತಜೀವ – ಅಥವಾ ಸಿದ್ಧಜೀವ – ಆಗುತ್ತದೆಂಬುದು. ಯಾವುದೋ ಜನ್ಮದ ಬಂಧು ತನ್ನ ಪತಿತ ಬಂಧುವಿನ ಉದ್ಧಾರವನ್ನು ಆ ಪತಿತ ಜೀವ ಬೇರೆಬೇರೆಯ ಪತಿತ ಜನ್ಮದಲ್ಲಿದ್ದರೂ – ಬಿಡದೆ ಸಾಧಿಸಲು ನೆರವಾಗುತ್ತದೆ ಎಂಬುದನ್ನು ಆ ಭವಾವಳಿ ಕಥೆಗಳಲ್ಲಿ ಕಾಣಬಹುದು. ತನ್ನುದ್ಧಾರ ತನ್ನಿಂದಲೆ ಎಂದು ಜೈನಧರ್ಮದ ಕಲ್ಪನೆಯಿದ್ದರೂ, ಯಾರೊಬ್ಬನ ಉದ್ಧಾರಕ್ಕೂ

ಹಲವೊಂದು ಜನ್ಮಾಂತರದ ಬಂಧು ಜೀವಿಗಳ ಸಹಾಯವೂ ಒದಗಬೇಕಾಗುತ್ತದೆ ಎಂಬ ಮತ್ತೊಂದು ಸತ್ಯ ದರ್ಶನವೂ ಅಲ್ಲಿದೆ. ಭಾರತೀಯ ಪರಂಪರೆಯ ವಾಣಿಯಾಗುತ್ತಿರುವ ಕವಿ, ಕನ್ನಡ ಜೈನ ಕಾವ್ಯಗಳ ಅಧ್ಯಯನದಿಂದ ಈ ಜೈನ ದರ್ಶನವನ್ನೂ ಮೈಗೂಡಿಸಿ ಕೊಂಡಿದ್ದಾರೆ.

ಶ್ರೀ ಕುವೆಂಪು ಬರೆಯುವಾಗ ಶ್ರೀ ಅರವಿಂದರು, ಮಹಾತ್ಮ ಗಾಂಧಿಯವರು ಇದ್ದರು. ಅವರ ತತ್ತ್ವಪ್ರಭಾವ ಜೀವಂತವಾಗಿತ್ತು ; ಇಲ್ಲವೆ, ಸಂವೇದನಾ ಶೀಲನಿಗೆ ವಾಸ್ತವವಾಗಿತ್ತು. ಹಾಗೂ ಶ್ರೀ ರಾಮಕೃಷ್ಣ ವಿವೇಕಾನಂದರ ದರ್ಶನವೂ ತನ್ನ ಮಸುಕಾಗದ ಪ್ರಭೆಯನ್ನು ಹರಡಿದ್ದಿತ್ತು. ಆದ್ದರಿಂದಲೆ ಈ ಮೂವರು ಮಹಾ ಮಹಿಮರ ದರ್ಶನ ಪ್ರಭಾವವನ್ನೂ ಈ ಕವಿ ಮೈಗೂಡಿಸಿಕೊಳ್ಳಲು, ಅರಗಿಸಿಕೊಳ್ಳಲು ಹಾಗೂ ತಮ್ಮ ಕೃತಿಯಲ್ಲಿ ಮೈದಾಳಿಸಲೂ ತೊಡಗಿದ್ದಾರೆ. ಸರ್ವಧರ್ಮ ಸಮನ್ವಯವನ್ನು ಸಾಧಿಸಿ ತೋರಿದ ರಾಮಕೃಷ್ಣರ ಆದರ್ಶದಂತೆಯೆ, ಅರವಿಂದರ ಪೂರ್ಣಯೋಗ – ಪೂರ್ಣದೃಷ್ಟಿ – ಪರಿಣಾಮವಾದಗಳೂ, ಗಾಂಧೀಜಿಯವರ ಸರ್ವೋದಯ ಆದರ್ಶಗಳೂ ಗಾಢವಾಗಿ ಶ್ರೀ ರಾಮಾಯಣ ದರ್ಶನದಲ್ಲಿ ಕೆಲಸ ಮಾಡಿವೆ. ಎಲ್ಲ ಧರ್ಮದ ಸಮನ್ವಯವನ್ನೂ ಮಾತ್ರವಲ್ಲದೆ, ಎಲ್ಲ ಸ್ವಧರ್ಮಗಳ ಸಮನ್ವಯವನ್ನೂ ಈ ಕಾವ್ಯದಲ್ಲಿ ಕಾಣ ತಿಳಿಸಿದ್ದಾರೆ ಕವಿ. ಆದ್ದರಿಂದಲೆ ಪ್ರತಿಯೊಂದು ಪಾತ್ರವೂ ತನ್ನ ಸ್ವಧರ್ಮದಲ್ಲಿ ಉತ್ಕಟವಾಗಿ ಬಾಳುತ್ತಲೆ ಪರಮಧರ್ಮದತ್ತ ಧಾವಿಸುತ್ತದೆ. ಸ್ವಾಮಿ ವಿವೇಕಾನಂದರಂತಹ ದ್ರಷ್ಟಾರ ಸಂನ್ಯಾಸಿ, 'ಆಚಾರ್ಯದೇವೋ ಭವ' ಇತ್ಯಾದಿ ಮಂತ್ರಗಳ ಪಂಕ್ತಿಗೆ 'ಮೂರ್ಖದೇವೋ ಭವ', 'ಪತಿತದೇವೋಭವ', 'ದರಿದ್ರದೇವೋ ಭವ', ಎಂಬ ಹೊಸ ಮಂತ್ರ ಸೇರಿಸಿ ಇಪ್ಪತ್ತನೆಯ ಶತಮಾನದ ಕುಂಡಲಿಯನ್ನು ಬರೆದು ರಾಷ್ಟ್ರದ ಕುಂಡಲಿನೀ ಶಕ್ತಿಯನ್ನೆ ತಿದ್ದಿದರು. ಗಾಂಧೀಜಿಯವರ ಸರ್ವೋದಯ ಈ ಯುಗದ ರಾಜಕೀಯ ತತ್ತ್ವವೂ ಆಯಿತು – ಕಮ್ಯುನಿಸಂ ಆಗಿ, ಉದಾರ ಪ್ರಜಾಪ್ರಭುತ್ವವಾಗಿ. ಎಲ್ಲರ ಉದಯ ಎಂದರೆ, ಎಲ್ಲ ಸ್ತರದ ಉದಯವೂ ಆಗಬೇಕು. ಈ ಅರಿವಿನಿಂದ ಕೂಡಿದ ಕವಿ ಈ ಕಾವ್ಯದಲ್ಲಿ ಪಾತ್ರಗಳ ಹಲವುಸ್ತರದ ಜೀವನವನ್ನು ಚಿತ್ರಿಸಹೋಗಿದ್ದಾರೆ. ಮೇಲಾಗಿ ಎಲ್ಲ ಪಾತ್ರಗಳೂ ಎಲ್ಲರ ಉದಯದತ್ತ ಸಾಧನೆ ನಡೆಸುತ್ತವೆ. ತಮಗೆ ಇಷ್ಟವಿರಲಿ, ಇಲ್ಲದಿರಲಿ, "ಸಾರಿ ಬಾ ಸರ್ವರಿಗು ಸ್ವಾತಂತ್ರ್ಯಮಂ, ಸಾರಿ ಬಾ ಸರ್ವರಿಗು ಸಾಮ್ಯತ್ವಮಂ, ಸರ್ವರಿಂ ಸರ್ವರಾ ಉದ್ಧಾರಮಂ" ಎಂದು ಕವಿ, ಭಾರತಕ್ಕೆ ಸ್ವಾತಂತ್ರ್ಯ ಬಂದ ದಿನ ರಾಷ್ಟ್ರ ಧ್ವಜವನ್ನುದ್ದೇಶಿಸಿ ಹಾಡಿದ್ದರು. ಸ್ವಾತಂತ್ರ್ಯ ಸಾಮ್ಯತ್ವಗಳನ್ನು ಬಿಡಿಸಿ ಪಡೆಯ



ಬರದು ; ಹಾಗೂ ಯಾರೋ ಒಬ್ಬರ ಉದ್ಧಾರವನ್ನಾಗಲಿ, ಯಾರೋ ಒಬ್ಬರು ನಮ್ಮ ಉದ್ಧಾರಕ್ಕೆ ದುಡಿಯುತ್ತಾರೆಂಬುದನ್ನಾಗಲಿ ಬಯಸಬೇಕಾಗಿಲ್ಲ. ಎಲ್ಲರೂ ದುಡಿಯುತ್ತಲೆ ಅವರವರ ಹಾದಿಯಲ್ಲೆ ನಡೆದೇ – ಎಲ್ಲರ ಉದ್ಧಾರದ ಹಾದಿಕಾಣಬೇಕೆಂಬುದು ಧ್ಯೇಯ. ಶ್ರೀ ರಾಮಾಯಣ ದರ್ಶನದ ಸಕಲ ಪಾತ್ರವೂ ಈ ಹಾದಿಯತ್ತ ಸಾಗಿವೆ.... ಶ್ರೀ ಅರವಿಂದರ ತತ್ತ್ವ ಕುವೆಂಪು ಕಾವ್ಯದ ಮೇಲೆ ತಡವಾಗಿ ಪ್ರಭಾವ ಬೀರಿದ್ದರೂ, ವಾಸ್ತವವಾಗಿ ಅಖಂಡವಾಗಿಯೇ ಇದೆ. ಪೂರ್ಣ ದೃಷ್ಟಿಗೆ ಯಾವುದೂ ಹೊರತಲ್ಲ ; ಯಾವುದನ್ನೂ ಆಂಶಿಕವಾಗಿ ನೋಡದೆ ಸರ್ವಾಖಂಡವಾಗಿ ನೋಡುವುದು ಅಗತ್ಯ. ಹಾಗೆ ನೋಡಿದಾಗ ಜೀವನವೆಲ್ಲ ಯೋಗವಾಗುತ್ತದೆ. "All life is yoga" ಎಂಬುದು ಅರವಿಂದರ ಪ್ರಸಿದ್ಧ ಮಂತ್ರ. ಈ ದೃಷ್ಟಿಯಿಂದ ಕುವೆಂಪು ಅರವಿಂದರ ದರ್ಶನವನ್ನು ಅರಗಿಸಿಕೊಂಡಿದ್ದಾರೆ. ತನ್ನಿಂದ ಯಾವ ಮಹಾಕಾರ್ಯವಾದೀತು ಎಂಬ ನಿರಾಶೆಯ ಸಂಪಾತಿ ತನ್ನ ಅಕರ್ಮದ ಮೂಲಕವೆ ಕರ್ಮಶೀಲನಾಗಿರುತ್ತಾನೆ. ಅದರಿಂದ ಅವನ ಕಾಯುವಿಕೆಯೆ ತಪಸ್ಸಾಗುತ್ತದೆ. ಏಕಲವ್ಯನ ಅಕರ್ಮವೂ, ಕಾಯುವಿಕೆಯೂ, ತಪಸ್ಸಾಗುತ್ತದೆ. ತನ್ನ ಸರದಿಗಾಗಿ ಕಾಯುತ್ತಿರುವ ಬತ್ತಳಿಕೆಯ ಬಾಣದ ಅಕರ್ಮವಾಗಿರುತ್ತದೆ, ಕಾಯುವ ಕರ್ಮವಾಗಿರುತ್ತದೆ. ಹಾಗೂ ಯಾವುದೇ ಘಟನೆಯನ್ನೂ, ವ್ಯಕ್ತಿ ವರ್ತನವನ್ನೂ ಸ್ವತಂತ್ರ ಘಟಕವಾಗಿ ಗಮನಿಸಬರುವುದಿಲ್ಲ. ಅದೆಲ್ಲವೂ ಅಖಂಡವಾಗಿ ಪೂರ್ಣದ ಕೂಡೆ ಹೆಣೆದುಕೊಂಡಿರುತ್ತದೆ. ಯಾವುದೊ ಯಃಕಶ್ಚಿತ್ ಘಟನೆ ಮತ್ತಾವುದೊ ಮಹದ್ ಘಟನೆಯೊಡನೆ ಹೆಣೆದುಕೊಂಡಿರುತ್ತದೆ; ಅದರ ಪ್ರೇರಕವಾಗಿರುತ್ತದೆ. ಹಾಗೆಯೆ ಸಾಮಾನ್ಯ ವ್ಯಕ್ತಿಯ ವಿಷಮ ವರ್ತನೆ ಅಸಾಮಾನ್ಯವಾಗಿಯೆ ಉಳಿದೆಲ್ಲ ವ್ಯಕ್ತಿಗಳ ನಡತೆಯೊಡನೆ ನುಲಿದುಕೊಂಡಿರುತ್ತದೆ. ಈ ತಾತ್ತ್ವಿಕ ಅರಿವು ಕುವೆಂಪು ಅವರಿಗೆ ನಿಚ್ಚಳವಾಗಿದೆ, ಅವರ ಎಲ್ಲ ಕೃತಿಗಳಲ್ಲೂ

---

* ಪ್ರಕೃತಿಯಲ್ಲಿರುವ ಸಮತೋಲನದ ಅರಿವು ಇತ್ತೀಚೆಗೆ ಹೆಚ್ಚುತ್ತಿದೆ. ಹೇಗೆ ಒಂದೊಂದೂ ಕೊಂಡಿಗೊಂಡು ಸರಪಳಿಯಾಗಿದೆಯೆಂಬ ಬಗ್ಗೆ ಹೊಸ ಹೊಸ ತಿಳಿವಳಿಕೆ ಮೂಡುತ್ತಿದೆ. ಯಾವುದೆ ಕೊಂಡಿಯನ್ನು ಮುಟ್ಟಿದರೂ ದೀರ್ಘ ಸರಪಳಿಯನ್ನೇ ಅಸ್ತವ್ಯಸ್ತಗೊಳಿಸಿದಂತಾಗುತ್ತದೆಂಬ ಜ್ಞಾನ ಮೂಡುತ್ತಿದೆ. ಎಲ್ಲೊ ಕಪ್ಪೆಗಳನ್ನು ಹಣಕ್ಕಾಗಿ ಸುಲಿದರೆ ಮತ್ತೆಲ್ಲೋ ಆಹಾರ ನಾಶ ; ಎಲ್ಲೋ ಮರ ಕಡಿದು ಕಾಡನ್ನು ಬೆತ್ತಲು ಮಾಡಿದರೆ ಮತ್ತೆಲ್ಲೋ ಹವಾಮಾನ, ಮಳೆ, ಆರ್ಥಿಕತೆ ಎಲ್ಲ ವ್ಯಸ್ತವಾಗುತ್ತದೆ – ಇತ್ಯಾದಿ ಅನುಭವವಾಗುತ್ತಿದೆ. ಮಾನವ ಜೀವನವ್ಯಾಪಾರದ ಮಟ್ಟದಲ್ಲೂ ಇದು ಮತ್ತೂ ನಿಕಟವಾಗಿ ಸಂಬಂಧಗೊಂಡಿದೆಯೆಂಬ ಅರಿವು ಅನೇಕರಲ್ಲಿಲ್ಲ. ಕುವೆಂಪು ಈ ಅರಿವನ್ನು ಮೈಗೂಡಿಸಿಕೊಂಡಿದ್ದಾರೆ.

ಕ್ರಿಯಾಶೀಲವಾಗಿದೆ.* ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಂತೂ ವಾಸ್ತವ ಕಥಾಸ್ತರದಲ್ಲೂ ಅದು ಕಾರ್ಯ ಪ್ರವೃತ್ತವಾಗಿದೆ.

ಶ್ರೀ ಅರವಿಂದರ ಮತ್ತೊಂದು ತತ್ತ್ವ ಸಿದ್ಧಾಂತವೆಂದರೆ ಜೀವಪರಿಣಾಮವಾದ. ಅವರ ಪ್ರಕಾರ ಇಡೀ ಜಗತ್ತು ಪರಿಣಾಮಪಥದಲ್ಲಿ ನಡೆದಿದೆ. "The animal is a living laboratory in which Nature has, it is said, worked out man. Man himself may well be a thinking living laboratory in whom and with whose conscious co-operation she wills to work out the superman, the god. Or shall we not say, rather to manifest God? For if evolution is the progressive manifestation by Nature of that which slept or worked in her, involved, it is also the overt realisation of that which she secretly is". ['The Life Divine', pp. 4] ಪ್ರಾಣಿ ಪ್ರಯೋಗಮಂದಿರದಲ್ಲಿ ಪ್ರಕೃತಿ ಮಾನವನನ್ನು ಸಮೆದಂತೆ, ಮಾನವ ಪ್ರಯೋಗಮಂದಿರದಲ್ಲಿ ಅತಿ ಮಾನವನನ್ನು, ದೇವತೆಯನ್ನು ಸಮೆಯಲು, ಭಗವದಭಿವ್ಯಕ್ತಿ ಮಾಡಿಸಲು ತೊಡಗಿದ್ದಾಳೆ, ಆ ಆದಿಶಕ್ತಿ.

ಈ ಅತಿಮಾನವನ ಅಭಿವ್ಯಕ್ತಿಯತ್ತ ಎಲ್ಲ ವ್ಯಕ್ತಿಯ ಸಾಧನೆ ನಡೆದಿದೆ. ಆದರೆ ಈ ಸಾಧನೆ ಎಲ್ಲರಲ್ಲೂ ಜಾಗೃತವಾಗಿಯೆ ಇರುವುದಿಲ್ಲ. "ವಿಭೂತಿ ಪೂಜೆ" ಪ್ರಬಂಧದಲ್ಲಿ ಕುವೆಂಪು ಈ ಊರ್ಧ್ವಗಮನ ಯಾತ್ರೆಯ ಕ್ರಮವನ್ನು ಸೊಗಸಾಗಿ ವಿವರಿಸುತ್ತಾರೆ. "ಸಚ್ಚಿದಾನಂದ ಲೀಲಾರ್ಥವಾಗಿ ಮಾಯೆಗವತರಿಸಿದ ಜೀವ ತನ್ನ ಸ್ವಸ್ಥಾನ ಸಂಸ್ಥಾಪನ ಸಾಧನೆಯಲ್ಲಿ ತೊಡಗುತ್ತದೆ – ಸ್ವಾಭಾವಿಕವಾಗಿ, ಪ್ರಕೃತಿ ಸಿದ್ಧವಾಗಿ ಆ ಸಾಧನೆ ಬೇರೆ ಬೇರೆಯ ಕೋಶಗಳಲ್ಲಿ ಆಯಾ ಕೋಶಗಳಿಗೆ ಅನುಗುಣವಾದ ರೀತಿಗಳಲ್ಲಿ ರೂಪಗಳಲ್ಲಿ ಸಾಗುತ್ತದೆ : ಅದು ಅನ್ನಮಯದಲ್ಲಿ ವಿಕಾಸಗೊಳ್ಳುವಾಗ ನಿದ್ರಿತವೆಂಬಂತೆ ಸಾಗುತ್ತದೆ. ಪ್ರಾಣಮಯದಲ್ಲಿ ಸ್ವಪ್ನಮಯವೆಂಬಂತೆ, ಮನೋಮಯದಲ್ಲಿ ಜಾಗ್ರತವಾಗಿ, ಪ್ರಜ್ಞಾಪೂರ್ವಕವಾಗಿ,

ಮಳೆಯ ಯೋಗವನ್ನು ಪಂಚಾಂಗ ನೋಡಿ ತಿಳಿಯಬೇಕಿದ್ದಿತು. ಆದರೆ ವೈಜ್ಞಾನಿಕವಾಗಿ ಹವಾ ಮುನ್‌ಸೂಚನೆಗಳ ಅರಿವೀಗ ಲಭಿಸುತ್ತಿದೆ, ಪರಿಮಿತವಾಗಿ. ಈಚೀಚೆಗಂತೂ ಉಪಗ್ರಹಗಳ ಸಹಾಯದಿಂದ ಖಂಡ ಖಂಡಗಳ ಮಳೆ ಮೋಡಗಳ ಚಿತ್ರವನ್ನೆ ಪಡೆಯಬಹುದಾಗಿದೆ. ಪ್ರಾಯಃ ಮರ್ತ್ಯ ಚರವಲ್ಲದ, ಗಗನ ವಿಹಾರಿಯಾದ ಉಪಗ್ರಹ ದೃಷ್ಟಿಯಿರುವವರಿಗೆಲ್ಲ ಮಾನುಷ ಮರ್ತ್ಯ ವ್ಯಾಪಾರದ ವಿಸ್ತೃತ ಚಿತ್ರದ ಮುನ್ನರಿವು ಲಭಿಸೀತು. ನೆಲದ ಸೆಳೆತವನ್ನು ಮೀರಿದರೆ ಸಾಧ್ಯವದು. ಕುವೆಂಪು ಅದರ ಸಾಧನೆಯನ್ನು ಕಾಣತೊಡಗಿದ್ದಾರೆ.



ಸ್ವಪ್ರಯ್ನ ಶೀಲವಾಗಿ ತನ್ನರಿವಿಗೆ ತಾನೆ ವಿಷಯವಾಗಿ, ಆರಾಧ್ಯವಾಗಿ, ಆದರ್ಶವಾಗಿ, ಕರೆಯಾಗಿ, ಕೋರಿಕೆಯಾಗಿ, ಪ್ರಿಯವಾಗಿ, ಪೂಜ್ಯವಾಗಿ ಗೋಚರವಾಗುತ್ತದೆ. ಹಾಗೆಯೆ ತಾನಿರುವ ಮಟ್ಟಕ್ಕೆ ಆ ಮೇಲಿರುವ ಮಟ್ಟ ವಿಭೂತಿ ಸ್ಥಾನವಾಗಿ ಪರಿಣಮಿಸುತ್ತದೆ." – "ವಿಭೂತಿ ಪೂಜೆ". ಪುಟ ೨.

ಶ್ರೀರಾಮಾಯಣದರ್ಶನದ ಪಾತ್ರಗಳೆಲ್ಲವೂ ಆಗುವುದರತ್ತ ಧಾವಿಸಿವೆ. ಆ ಪುರೋಭಿಗಮನ ಒಂದೊಂದು ಪಾತ್ರದಲ್ಲಿ ಒಂದೊಂದು ರೀತಿಯಾಗಿ ನಡೆದಿದೆ. ಮಂಥರೆಯಂಥವಳಲ್ಲಿ ಹಾಗೆಂದು ತಿಳಿಯದೆಯೇ ಆ ಸಾಧನೆ ನಡೆಯುತ್ತದೆ. ಧಾನ್ಯಮಾಲಿಯಂಥವರಲ್ಲಿ ಮೊದಲು ಮಲಗಿದ್ದ ಯಾತ್ರೆ ಆಮೇಲೆ, ಸೀತೆಯಲ್ಲಿ ಊರ್ಧ್ವ ಚೇತನವನ್ನು ಕಂಡ ಮೇಲೆ, ಮತ್ತೆ ಜಾಗ್ರತವಾಗಿ ಸಾಗತೊಡಗುತ್ತದೆ. ರಾವಣನಲ್ಲಿ ಆ ಮುನ್ನಡೆ ಚಕ್ರವ್ಯೂಹ ಸುತ್ತುತ್ತಾ ನಡೆಯುತ್ತದೆ. ಒಂದರ್ಥದಲ್ಲಿ ಈ ಕೃತಿಯಲ್ಲಿ ಎಲ್ಲ ಪಾತ್ರಗಳೂ ಆಗುವುದರತ್ತ ದಬ್ಬಲ್ಪಟ್ಟಿವೆಯೊ ಎಂಬಂತೆ ಸಾಗಿವೆ. ಹಾಗೂ ಕವಿಯಾದರೂ ಒಮ್ಮೊಮ್ಮೆ ಕೊಂಚ ಎಚ್ಚತ್ತೆ ಈ ಕೆಲಸ ಮಾಡಿಸಿದ್ದಾರೆ ಎನ್ನಿಸುತ್ತದೆ.

ಜಗತ್ತಿನ ಪರಿಣಾಮವನ್ನು ಪ್ರಕೃತಿಗೇ ಬಿಟ್ಟರೆ ದೀರ್ಘವೂ ಮಂದಗತಿಯದೂ ಆದ ಕ್ರಿಯೆ ಆಗುತ್ತದೆ. ಆದ್ದರಿಂದ ಅತೀತ ಪ್ರಜ್ಞೆಯನ್ನು ಕೆಳಕ್ಕೆ ಇಳಿಸಿ ತಂದು ಈ ಕೆಲಸವನ್ನು ತ್ವರೆಗೊಳಿಸಬೇಕೆಂದು ಅರವಿಂದರ ಕಾಣ್ಕೆ. ಅಲ್ಲೆ ಅವತಾರಗಳ ಅಗತ್ಯ ಒದಗಿ ಬರುತ್ತದೆ. ಶ್ರೀರಾಮಾಯಣದರ್ಶನದ ರಾಮಚಂದ್ರ ಅವತಾರ ಪುರುಷ. ಧರಾತ್ಮಜೆಯನ್ನು ವರಿಸುವ – ಪಡೆವ ನೆವದಲ್ಲಿ ಅವನು ಮೃತ್‌ಶಕ್ತಿಯನ್ನು ಮರ್ದಿಸುತ್ತ ಚಿತ್‌ಶಕ್ತಿಯನ್ನು ವರ್ಧಿಸಿ, ನಮ್ಮ ರಾವಣಾವಿದ್ಯೆಯ ನಮ್ಮ ಮರ್ತ್ಯ ಪ್ರಜ್ಞೆಯು ತನ್ನ ಕತ್ತಲಿನಿಂದ ಮುಕ್ತವಾಗುವಂತೆ ಮಾಡುತ್ತಾನೆ. ಅವತಾರಿ ರಾಮಚಂದ್ರ ಸೀತಾದೇವಿಯರಲ್ಲೂ ಅವರ ದೈವೀಸತ್ತ್ವ ಜಾಗ್ರತಗೊಂಡು ಅವರಿಗೇ ವೇದ್ಯವಾಗುವುದು ನಿಧಾನವಾಗಿ. ಅದರಲ್ಲೂ ಸೀತಾದೇವಿ ತ್ರಿಜಟೆಗೆ ಹೇಳುವ ಮಾತು ಹೀಗಿದೆ:

"ಆವುದಾಗಲಿ ನೆಪಂ,
ಫಲದಾಯಕಂ ತಪಂ. ನನಗೆ, ರಘುನಾಥಂಗೆ,
ಮೇಣ್ ರಾಕ್ಷಸೇಂದ್ರಂಗೆ ಮೂವರ್ಗುಮವರವರ
ಕರ್ಮಾನುಸಾರಿ ಜನ್ಮೋದ್ದೇಶ ಸಾಧನೆಗೆ
ಮೇಣಾತ್ಮ ವಿಕಸನದ ಪರಿಣಾಮ ಸಿದ್ಧಿಗೆ
ಸಹಾಯಮಾದುದು ಮಂಥರೆಯ ಮೂಲದೀ ಬೃಹದ್

ದುರ್ಘಟನೆ. ಇನ್ನೆನಿತು ಜೀವರಿಗೆ ತಂತಮ್ಮ
ಕರ್ಮಕ್ಷಯಕೆ ಮತ್ತೆ ಧರ್ಮಾಭ್ಯುದಯಕಿದು
ನಿಮಿತ್ತಮಾದುದೊ ಪೇಳ್ವರಾರ್ !....
............... ತಿಳಿವುದಂತ್ಯದೊಳ್,
ತ್ರಿಜಟೆ, ಆ ಪರಮ ಸತ್ಯಂ. ನನಗುಮಂದದು
ಅಗೋಚರಂ ; ಇಂದಾತ್ಮಗೋಚರಂ, ನಾನಿಂದು
ಅಂದಿನವಳಲ್ಲ. ರಾಮಧ್ಯಾನ ಮಹಿಮೆಯ
ನಿರಂತರ ತಪಸ್ಯೆಯಿಂ ನನಗಲೌಕಿಕಸಿದ್ಧಿ
ತನಗೆ ತಾನಾಯ್ತು. ರಾಮನನರಿತೆನಾತ್ಮದಿಂ.
ತನ್ನ ನಿತ್ಯ ವಿಭೂತಿಯಿಂ ಪರಬ್ರಹ್ಮನೆಯೆ
ತಾನ್ ; ರಾಮಮಯಮೀ ಸಮಸ್ತ ಲೋಕಂ, ಸಖೀ,
ನಿನ್ನಂತೆ ನಾನುಮಾ ಮಯನ ಮಗಳಾಣ್ಮಂಗೆ
ಕೃತಜ್ಞೆ ದಲ್ ! ರಾವಣಂಗೊಳ್ಳಿತಕ್ಕುಂ, ಋತದ
ರೀತಿಯಂ ! ...........

ಶ್ರೀ. ರಾ. ದ. ಶ್ರೀರಾಮರಾವಣ ಚಿತ್‌ತಪಸ್‌ಶ್ರೀ : ಪಂಕ್ತಿ

ಇಲ್ಲಿ ಗಮನಿಸಬೇಕಾದ ಒಂದಂಶವುಂಟು. ಸೀತಾದೇವಿಗೂ ಮಂಥರಾಮೂಲವಾದ ದುರ್ಘಟನೆ ಮಂಗಲಕಾರಕವೆಂಬಂತೆ ಅನುಭೂತವಾಗುತ್ತದೆ. ಅವಳೊಬ್ಬಳ ಮಾತ್ರವಲ್ಲದೆ ರಾಮರಾವಣಾದಿಗಳೆಲ್ಲರ – ಕಡೆಗೆ ಅವಳ ಮುಂದಿದ್ದ ರಾಕ್ಷಸ ಸೇವಕಿ ತ್ರಿಜಟೆಯ – ಕರ್ಮಕ್ಷಯ ಮೂಲಕವಾದ ಜೀವಿತೋದ್ದೇಶ ಸಾಧನೆ ಹಾಗೂ ಲೋಕ ಧರ್ಮಾಭ್ಯುದಯ ಆ ದುಃಖಕರ ಘಟನೆಯಿಂದಲೆ ನಾಂದಿಗೊಳ್ಳುತ್ತದೆಂಬುದು ಆಕೆಗೂ ನಿಚ್ಚಳವಾಗಿ ತೋರುತ್ತದೆ. ಮೇಲಾಗಿ ಸೀತಾದೇವಿಗೇ ರಾಮಸಾಕ್ಷಾತ್ಕಾರ ಸಾಧ್ಯವಾಗುವುದು ವನವಾಸದ ಕಡೆಯಲ್ಲಿ ಎರಗಿ ಬಂದ ರಾವಣಕೇತುಗ್ರಹಣದಿಂದಾಗಿ. ಆದ್ದರಿಂದ ಕೇವಲ ರಾವಣವಧೆಯೆ ರಾಮಾವತಾರದ ಉದ್ದೇಶವಲ್ಲವೆಂಬುದು ತಿಳಿಯುತ್ತದೆ. ಖಂಡದೃಷ್ಟಿಗೆ ಮಂಥರಾಘಟನೆ ಕಾಣುವ ರೀತಿಬೇರೆ. ಪೂರ್ಣದೃಷ್ಟಿ ಗೋಚರವಾಗುವ ಬಗೆ ಬೇರೆ. (ಇಲ್ಲಿಯೂ ವ್ಯಕ್ತಿಯ ಜೀವಿತೋದ್ದೇಶ ಸಾಧನೆಯಾಗುವುದು ಅವನ ಕರ್ಮಾನುಸಾರಿ ಮಾರ್ಗದಿಂದ ಎಂಬ ಭಾವನೆಯಿದೆ. ಆ ಮಾರ್ಗವಾಗಿಯೆ ಕರ್ಮ ಕ್ಷಯವಾಗಿ ಧರ್ಮವರ್ಧನೆ ಆಗುವುದು. ಒಬ್ಬೊಬ್ಬರ ಹಾದಿ, ಜೀವಿತೋದ್ದೇಶ ಬೇರೆಯಾದರು ಪರಮಗಂತವ್ಯ ಕರ್ಮಕ್ಷಯ ಮೂಲವಾದ ಧರ್ಮವರ್ಧನೆಯಾದ್ದರಿಂದ ಒಬ್ಬೊಬ್ಬರ ಸಾಧನೆಗೆ ತೊಡರಿರುವುದಿಲ್ಲ.)



ಅವತಾರಿಗೂ ತನ್ನ ಆ ಅವತಾರತ್ವದ ಎಚ್ಚರ ಕ್ರಮಕ್ರಮೇಣವೆ ಬರುವುದನ್ನು ಇಲ್ಲಿ ಸೀತಾರಾಮರ ಜೀವನ ಘಟನೆಯಲ್ಲಿ ಕವಿ ಧ್ವನಿಸುತ್ತಾರೆ. ತನಗೆ ಬಹುರೂಪಿ ರಾವಣನಾಗುವ ವರವಿದ್ದುದನ್ನು ಬಳಸಿಕೊಳ್ಳಲು ದಶಾನನ ನಿರ್ಧರಿಸಿ, ಅಂತೆಯೆ ತನ್ನ ರುಂದ್ರಸೈನ್ಯವನ್ನು ಕಂಡು ಸ್ಫೂರ್ತನಾಗಿ ಅವರಿಗೂ ತನ್ನ ವರಬಲದ ವಿಚಾರವನ್ನರಹುತ್ತಾನೆ. ಅದ್ಭುತವಾದ ಈ ಸನ್ನಿವೇಶದಲ್ಲಿ ರಾವಣನಿಗೆ ಸೀತೆಯ ನೆನಪು ಬಂದು ಸುಪ್ತ ತೃಷೆ ಭುಗಿಲೆದ್ದು ಕಡೆಯ ಬಾರಿಗೆ ಅವಳನ್ನು ಕಂಡು ಪರೀಕ್ಷಿಸಬೇಕೆಂದು ತರ್ಕವಂಚನೆ ಮಾಡಿಕೊಂಡು ಅವನು ಅಶೋಕವನದತ್ತ ನಡೆಯುತ್ತಾನೆ, ಸ್ವಾತಂತ್ರ್ಯ ವಿಭ್ರಮೆಯ ವಿಧಿತಂತ್ರ ಪಶುವಿನಂತೆ. ಅಲ್ಲಿ ಕಂಡ ಸಾಗರದ ನೀಲಿ, ಹಾಗೂ ಅವನ ಕದಡು ಬಗೆಯನ್ನು ತೊಳೆಯುವಂತಿದ್ದ ಬಾನ್ ನೀಲಿ ಮನಶ್ಶಾಂತಿ ತರುತ್ತದೆ. ಹಾಗೆ ಅವನು ಸೀತಾದೇವಿಯನ್ನು ತಾನು ಸೆರೆಯಿಟ್ಟಿದ್ದ ಕೋಡುಗಲ್ ಹತ್ತಿರಹೋದರೆ ಅವನ ಕಣ್ಣಿಗೆ ಕಾಣುವುದು ಎಲೆಮನೆಗೆ ಬಿದ್ದಿರುವ ಬೆಂಕಿ ಚಿತ್ರ. ತನ್ನ ಮಹತ್ಕಾರ್ಯವೆ ಸುಟ್ಟುಹೋದಂತಾಗಿ ಅವನು ತನ್ನ ಸಹಾನುಚರನಿಗೆ ಬೆಂಕಿಯತ್ತ ಓಡುವಂತೆ ಕೂಗಿಕೊಳ್ಳುತ್ತಾನೆ. ಆದರಾ ಕಂಚುಕಿಗೆ ಬರಿಯ ಗುಡಿಸಲಷ್ಟೆ ಕಾಣುತ್ತದೆ. ತನ್ನ ದೃಷ್ಟಿ ದೌರ್ಬಲ್ಯವಿರಬೇಕು, ಬೇರೇನೂ ಕಾಣದು, ಎನ್ನುವ ಅವನ ಆ ದೌರ್ಬಲ್ಯ ತನಗಿಲ್ಲವಾಯಿತೆಂದು ಮರುಗುತ್ತಾನೆ. ಅಂದರೆ ಕಂಚುಕಿಗೆ ಕಾಣದೆ ಅವನಿಗೇ ಕಾಣುತ್ತಿದ್ದ ಬೆಂಕಿ ಭ್ರಮಾಜನ್ಯವಲ್ಲ ಮಾಯಮಂತ್ರವಲ್ಲ. ಆದರದು ಕಾಣಬೇಕಾಗಿದ್ದುದು ಅವನಿಗಷ್ಟೆ. ಆ ಬೆಂಕಿ ಅವನ ಅಳಿದುಳಿದ ಸೀತಾಮೋಹವನ್ನೂ ಸುಡಬೇಕಿತ್ತು. ಆ ಜ್ವಾಲೆಯನ್ನು ಕೆರಳಿಸುವ ಜ್ವಾಲಮಾಲೆಯಾಗುತ್ತಾಳೆ ಸೀತೆ. ಅದರಿಂದಲೆ ರಾವಣನ ಕಣ್ಣಿಗೆ ಶತರುಂಡಮಾಲಾಧರೆಯಾಗಿ, ರಾವಣ ಕುಂಭಕರ್ಣಾದಿಗಳ ಪಂದಲೆಗಳನ್ನೂ ಧರಿಸಿಕೊಂಡವಳಾಗಿ ರಣಚಂಡಿಯಾಗಿ ಕಾಣಿಸುತ್ತಾಳೆ. ತಾನು ಸೆರೆ ತಂದದ್ದು ಸುಂದರೀ ರೂಪದ ಶ್ಮಶಾನಕಾಳಿಯನ್ನೇನು, ಎಂದು ನೊಂದು ಹಿಂದಿರುಗುತ್ತಾನೆ ರಾವಣ. ಅದನ್ನು ಕಂಡ ತ್ರಿಜಟೆಯಿಂದ ವಿಷಯ ತಿಳಿದ ಸೀತಾದೇವಿ ಹೇಳುವ ಮಾತಷ್ಟೆ ಮೇಲೆ ಉದ್ಧರಿಸಿರುವ ಪಂಕ್ತಿಗಳು. ರಾವಣನ ಸೂತ್ರ ಮಾಯೆ ಕಡಿದುದೆಂದೂ, ಅವನಿನ್ನು ಕಾಲವಶಿಯೆಂದೂ ನುಡಿದ ಸೀತಾದೇವಿ ಈ ಸೂಕ್ತಿ ಹೇಳುತ್ತಾಳೆ : "ಮುಕ್ತಿ ಮಾಯೆಯೊಲ್ ಪೀಡಿಸಿ ಮುಮುಕ್ಷುಗಳನೆಳೆಯುವುದು ತನ್ನೆಡೆಗೆ" ಎಂದು. ರಾವಣ ಮುಮುಕ್ಷು ; ಆ ಮೋಕ್ಷಕಾಮಿಯನ್ನು ಮುಕ್ತಿ ಮಾಯೆಯಂತೆ ಪಿಡಿಸಿದೆ ; ಆ ಮೂಲಕ ತನ್ನತ್ತ ಅವನನ್ನು ಸೆಳೆದುಕೊಳ್ಳುತ್ತದೆ.

ರಾವಣನ ಮನಸ್ಸು ತಿಳಿಯಾದಂತೆಲ್ಲ ಅವನಿಗೆ ಸುತ್ತಣ ಸುಂದರ ಪ್ರಕೃತಿ ತನ್ನ ಸ್ವರೂಪದಲ್ಲಿ ಕಾಣತೊಡಗುತ್ತದೆ. ಕಾಮಾರ್ತನಿಗೆ ಪ್ರಕೃತಿಯ ಯಾವ ಚೆಲುವೂ ಸಹಜಕಾಣದು. ಅದು ಮೈದೋರತೊಡಗಿದಾಗ ಚಿತ್ತ ನಿರ್ಮಲವಾಗ ತೊಡಗಿರುತ್ತದೆ ; "ಕೇಳಿದುದು ಕಿವಿಗೆ, ಬಹುಕಾಲದಿಂ ತಾನಾಲಿಸದ ಪಕ್ಷಿಯಿಂಚರಂ! ಕಂಡುದು ಕಡಲ್ ನೀಲಿ! ತನ್ನ ತಿಳಿಯಾಳದಿಂ ಕದಡುಬಗೆ ತಿಳಿವಂತೆ ; ಬಾನ್‌ತೊಳೆದುದಾತ್ಮಮಂ ! ಸಾಹಸಕೆ ಬೇರೆ ದಾರಿಗಳಿರುವುದನು ತೋರುವೋಲಂತೆ ಮೆರೆದುದು ದಿಗಂತ ವಿಶ್ರಾಂತ, ಗಿರಿಕಂದರ ತರಂಗಿತ ವನಶ್ರೇಣಿ ! ನಿಡುಪೊಳ್ತನಿಮಿಷಾರಿ ತನ್ನ ಸಿರಿಯಂ ನಗುವಲೋಕಸೌಂದರ್ಯಮಂ ನೋಡಿದನು ನಿರ್ನಿಮೇಷಂ"..... ಹೊರಗಿನ ಪ್ರಕೃತಿ ಅಂತಃ ಪ್ರಕೃತಿಗಳ ಸಂಬಂಧವಿಲ್ಲಿದೆ. ಅನಿಮಿಷಾರಿಯಾಗಿದ್ದವನು ನಿರ್ನಿಮೇಷನಾಗುವ ದಾರಿಯನ್ನು ಪ್ರಕೃತಿಯೂ ದ್ಯೋತಿಸುತ್ತದೆ. ಪ್ರಕೃತಿಯಾದರೂ ಬದ್ಧಚೇತನರಿಗೆ ಮೈದೋರುವುದಿಲ್ಲವೆಂಬಂತೆಯೆ ಆ ಅಶುದ್ಧರನ್ನು ಪರಿಶುದ್ಧಗೊಳಿಸುವುದಕ್ಕೂ ಅದೇ ನೆರವಾಗುತ್ತದೆಂಬ ಕಾಣ್ಕೆ ಇಲ್ಲಿದೆ. ಯಾವುದು ಮೊದಲು ಯಾವುದನಂತರ? ಒಂದೊಂದಕ್ಕೆ ತೆಕ್ಕೆ ಬಿಗಿದಿದೆ. ಆದರೂ ರಾವಣನ ಅರಿವು ಬೇರೆ : ಶುದ್ಧಸುಂದರ ಪ್ರಕೃತಿ ಯಾರನ್ನೂ ಪರಿಶುದ್ಧವಾಗಿಡಬಲ್ಲದು ಎಂದು.

ನಿಚ್ಚಮುಂ ಕಣ್ಗೀ ಸಮುದ್ರ ಸಾನ್ನಿಧ್ಯಮಿರೆ ;
ನಿತ್ಯಂ ನಭೋಶುಭಾಶೀರ್ವಾದ ಹಸ್ತಮಿರೆ
ನೆತ್ತಿಯೊಳ್ ; ಸುತ್ತುಂ ವನಾದ್ರಿಗಳ್ ಸ್ನೇಹಮಂ
ಧೈರ್ಯಮಂ ನೀಡುತಿರೆ, ಧೃತಿಗಮೃತ ದೀಕ್ಷೆಯೋಲ್ ;
ರಾಮಸತಿ ತಾನಿರ್ಕೆ, ಸಾಮಾನ್ಯೆಯಾದೊಡಂ
ಪತಿತೆಯಪ್ಪಳೆ ಪೇಳ್ ಪತಿವ್ರತಾನಿಷ್ಠೆಯಿಂ,
ಜಾಣ್ಮರುಳೆ ಓ ಕೋಣಪ ಕಿರೀಟಿ ?"

ಎಂದು ತನ್ನನ್ನು ತಾನೆ ಪರಿಹಾಸಮಾಡಿಕೊಂಡು ನುಡಿದುಕೊಳ್ಳುವ ರಾವಣ ತಿಳಿಕೊಂಡ ಘಳಿಗೆಯಲ್ಲಿ ತನ್ನ ಸುತ್ತೂ ತಿಳಿಕಾಣುತ್ತಾನೆ ; ಸುತ್ತಣ ತಿಳಿಯೆ ಒಳಗಿನ ತಿಳಿಗೆ ಕಾರಣವೆಂದೂ ಭಾವಿಸುತ್ತಾನೆ, ಭೌತವಾದಿಯಂತೆ ! ಹೇಗಾದರಾಗಲಿ ಒಳ ಹೊರಗಿನ ತಿಳಿ ಒಂದನ್ನೊಂದು ತಿಳಿದುಕೊಳ್ಳುತ್ತವೆ ; ಹಸೆಗೊಳ್ಳುತ್ತವೆ.

ಆದರೂ, ಸೀತಾರಣಚಂಡಿಕಾ ದರ್ಶನವಾದ ಮೇಲೂ ರಾವಣ ತನ್ನ ಬಹು ರೂಪೀಬಲದಿಂದ ಚಂಡಯಮನಾಗುತ್ತಾನೆ. ಯಾರೆಲ್ಲ ಹತರಾದದ್ದಿರಲಿ.



ಸಾಕ್ಷಾತ್ ಆಂಜನೇಯನೇ ಗದೆಮುರಿದು, ಭಗ್ನ ಶರೀರನಾಗಿ ರಾಮನನ್ನು ಅರಸಿ ಬರುತ್ತಾನೆ. ಅದೇ ವೇಳೆಯಲ್ಲಿ ರಾಮಕ್ಷೇಮಕಾತರನಾದ ದೇವೇಂದ್ರ ಪಿತಾಮಹ ಬ್ರಹ್ಮನ ಬಳಿಗೆ ಹೋಗಿ, ಅವನ ವರಬಲದಿಂದಲೆ ರಾವಣನೆಸಗಿದ ವಿನಾಶವನ್ನು ತಿಳಿಸಿ ಬೇಡಿಕೊಳುತ್ತಾನೆ. ಅದಕ್ಕೆ ಪಿತಾಮಹನ ಉತ್ತರ ದರ್ಶನಪೂರ್ಣವಾಗಿದೆ.

"ನಡೆವುದನಿತುಂ ನಡೆಯಬೇಕಾದುದೆ
ವಲಂ, ತಿಳಿಯದೆಯೆ ಕೊಟ್ಟುದಲ್ತಾ ವರಂ ; ತಪ್ಪಿ
ಕೊಟ್ಟುದಂ ತಾನಲ್ತು, ಪರಮ ಪ್ರಯೋಜನಂ
ಪೂರ್ಣಚಿದ್ಗೋಚರಂ. ನನ್ನಿಚ್ಛೆಯೊಪ್ಪದೆ
ತೃಣಂ ಚಲಿಸದಾಂ ತಂತ್ರಮಖಿಲ ಲೋಕಕೆ, ತಂತ್ರಿ
ಮೇಣಾ ಸರ್ವತಂತ್ರ ಸ್ವತಂತ್ರಿ, ಪರಮೇಚ್ಛೆ ನಾಂ ;
ಮೇಣಖಿಳ ಜೀವರಾಶಿಗಳಿಚ್ಛೆಗಾನಿಚ್ಛೆ,
ರಾವಣೇಚ್ಛೆಗಮಂತೆ ರಾಮೇಚ್ಛೆಗುಂ ! ತಿಳಿ,
ಸಹಸ್ರಾಕ್ಷ, ಲೀಲಾರಹಸ್ಯಮಂ : ರಾವಣಗೆ
ರಾವಣತ್ವಂ ತವಿಸದೆಯೆ ಸಮನಿಪುದದೆಂತು
ರಾಮತತ್ತ್ವಂ ? ತನ್ನ ಲೀಲಾವತಾರಮಂ
ಅವಿದ್ಯೆಯಿಂದೆಚ್ಚರಿಸಲೋಸುಗಂ, ಕೇಳ್ ಜಿಷ್ಣು,
ತನ್ನ ವಿದ್ಯಾಶಕ್ತಿ ಯೋಗಮಾಯೆಗೆ ಬೆಸಸಿ
ರಾಮನೆಡೆಗಾಗಳೆ ಕಳುಹಿದನ್ ಮಹಾವಿಷ್ಣು"

– ಶ್ರೀ. ರಾ. ದ : ಶ್ರೀರಾಮ ರಾವಣ ಚಿತ್ ತಪಸ್ ಶ್ರೀ

ಒಂದೇ ಪರಬ್ರಹ್ಮಶಕ್ತಿ ರಾಮ ರಾವಣರಲ್ಲಿ ಸದಸತ್ ಆಗಿ ಹಂಚಿಕೊಂಡಿದೆ. ರಾವಣತ್ವ ಕರಗಿದರೆ ರಾಮತ್ವ ದೊರಕುತ್ತದೆ. ಆ ರಾಮತ್ವಕ್ಕೂ ಅವಿದ್ಯಾನಿದ್ರೆ ಹರಿದರೇ ಪೂರ್ಣ ಜಾಗರ ಲಭಿಸುತ್ತದೆ. ಅದನ್ನು ಎಚ್ಚರಿಸುವಂತೆ ರಾಮಲೀಲಾವತಾರದ ಮೂಲಸತ್ತ್ವವಾದ ವಿಷ್ಣು ತತ್ತ್ವ ತನ್ನ ಯೋಗಮಾಯೆಯನ್ನು ಕಳಿಸುವುದಿರಲಿ; ಹಾಗಾಗಲೆಂದು ಬೇಡುವ ಇಂದ್ರನಿಗಾದರೂ ಪ್ರೇರಣೆ ಒದಗುವುದು ಬಹುರೂಪೀ ರಾವಣನ ವರಬಲ ಎಸಗಿದ ಪೃಥುಲನಾಶದಿಂದ. ಅದಿಲ್ಲದಿದ್ದರೆ ರಾಮತ್ವದ ಜಾಗರ ನಿಧಾನಿಸುತಿತ್ತು. ಇದನ್ನು ಜಾಗ್ರತ ಸೀತಾದೇವಿ ಕಂಡು ಪೂಜಾ ತಪಸ್ಸಿಗೆ ತೊಡಗುತ್ತಾಳೆ, ರಾವಣ ತನ್ನನ್ನು ನೋಡಲು ಬಂದು ಹೋದಮೇಲೆ ಹಾಗೂ ತ್ರಿಜಟೆಗೆ ತನ್ನ ಪ್ರಸ್ಫುರಿತಾತ್ಮ

ತೇಜಸ್ಸನ್ನು ತಿಳಿಸಿದಮೇಲೆ. "ಪೂಜೆ ತಾಂ ಶಕ್ತಿ, ನಾಥಂಗೆ ನೆರಮಪ್ಪೆನಾತನಂ ಪೂಜಿಸಿ ನಿವೇದಿಸುವೆನಾತ್ಮ ಬಲಮಂ" ಎಂದು ತ್ರಿಜಟೆಗೆ ಹೇಳಿ ಪೂಜೆಗೆ ತೊಡಗುತ್ತಿರುವಂತೆಯೆ, ದೇವೇಂದ್ರ ಅಲ್ಲಿ ಪರಬ್ರಹ್ಮನನ್ನು ಬೇಡಿಕೊಳ್ಳ ಹೊರಡುತ್ತಾನೆ.

ಹೀಗೆ, ಇಲ್ಲಿ ಒಂದು ಘಟನೆಯಿಂದ ಮತ್ತೊಂದರಂತೆ, ಭೌಮದಿಂದ ಹಿಡಿದು ಭೂಮದ ತನಕ, ವಿನಾಶದಿಂದ ತಾರಕಶಕ್ತಿಯ ತನಕ ಎಲ್ಲವೂ, ಚೋದಿತಾನುಚೋದಿತವಾಗಿ ತೆಕ್ಕೆಗೊಳ್ಳುತ್ತದೆ. ಇಲ್ಲಿ ಗಮನಿಸಬೇಕಾದಂಶವುಂಟು. ಪರಶಿವ ಬರಿದೆ ಕುರುಡಾಗಿ ವರಕೊಡುವವನಲ್ಲ. ಪರಮಪ್ರಯೋಜನಾರ್ಥವೆ ಅವನು ಎಲ್ಲ ಸುಖದುಃಖ ರೂಪದ ಶಕ್ತಿಗಳನ್ನೂ ನಿರ್ವಹಿಸುತ್ತಿರುತ್ತಾನೆ. ವಿಧಿಯಿಚ್ಛೆ ಅರಿತ ವ್ಯಕ್ತಿ ಸಮಚಿತ್ತನಾಗಿ ಶಿವಪ್ರಣಾಳನಾಗಿ ವರ್ತಿಸುತ್ತಾನೆ. ಬೆರಳ್ಗೆಕೊರಳ್ ತನ್ನ ಮಿತಿಯಲ್ಲಿ ಇದನ್ನು ಪ್ರತಿಮಿಸುತ್ತದೆ.

ಬಹುರೂಪಿ ರಾವಣಸತ್ತ್ವದಿಂದ ಭಂಗಗೊಂಡ ಆಂಜನೇಯ ಅರಸಿ ಬಂದು ಕಂಡ ಶ್ರೀರಾಮನಾದರೂ ಅವನ ದಂಡಪ್ರಾಣಾಮವನ್ನೂ ಪ್ರೇರಿಸುವಂತಿದ್ದ. ತನ್ನಿಂದ ಅದುತನಕ ಮರೆ ಮಾಡಿಕೊಂಡಿದ್ದ ತುರೀಯ ಸತ್ವದ ಶ್ರೀರಾಮನನ್ನು ಕಂಡು ಗದ್ಗದಿತನಾದ ಹನುಮಂತ ಕೇಳುತ್ತಾನೆ,

"ಇದೇನಿದೇನ್, ದಾಶರಥಿ? ನೀನೆನ್ನನಿನ್ನೆಗಂ
ವಂಚಿಸಿದೆಯೇಕೆ? ನೀನಾರೆಂಬ ನನ್ನಿಯಂ
ಮರೆಮಾಡಿ, ನರನವೋಲತ್ತು, ಗೋಳಾಡಿ ಮೇಣ್
ಬೇಡಿ, ನಾಟಕವಾಡಿದಯ್, ಸರ್ವಶಕ್ತನುಂ
ಸಕಲವೇತ್ತನುಮಾಗಿ ನಮ್ಮಭ್ಯುದಯಕೆಮ್ಮ
ಬಲದ ಭಿಕ್ಷೆಯ ಬೇಡಿದಯ್ ! ವೀತ ವಿಘ್ನಂ
ಮಹಾ ವಿಘ್ನಗಳನೊಡ್ಡಿಕೊಂಡಯ್, ಪ್ರಚೋದಿಸಲ್
ಬದ್ಧಾತ್ಮರೊಳ್ ಭಗ್ನಾವರಣ ಚಿದ್ಯೋಗಮಂ"

ಪುಟ ೭೬೮–೯

ಆಂಜನೇಯನಿಗಷ್ಟೆ ಅಲ್ಲ, ತನಗೇ ತನ್ನ ದಿವ್ಯ ಗುಹ್ಯ ಸ್ವರೂಪ ಪ್ರಸ್ಫುಟವಾಗಿದ್ದಿರಲಿಲ್ಲವೆಂದ ರಾಮಚಂದ್ರನ ಮಾತಿದು :

"ಏಳ್, ಮಹಾವೀರ, ನೀನಲ್ಲದನ್ಯರ್ಗಿದು
ಅಗೋಚರಂ. ನಿನಗೊರ್ವನಿಗೆ ಮಾತ್ರಮಲ್ಲಯ್
ಪ್ರಸುಪ್ತಮಾಗಿರ್ದುದಿನ್ನೆಗಮೆನಗುಮೀ ನನ್ನ



ದಿವ್ಯಗುಹ್ಯಸ್ವರೂಪಂ ! ನಿನ್ನ ವೋಲಾನುಂ
ಸುವಿಸ್ಮಿತನೆ ದಲ್ ! ಸಿದ್ಧಿ ಕಾಲಾನುವಶಿ ಕಣಾ
ಲೀಲಾಜಗದೊಳಾರ್ಗಾದೊಡಂ. ನನಗಿದೆ
ತಪಸ್ಯೆಯಾದುದು. ಮಂಥರೆಯೊ ? ರಾವಣನೊ ? ಬರಿ
ನಿಮಿತ್ತ ಮಾತ್ರರ್ ! ನನಗವರ್ ಮೇಣವರ್ಗೆ ನಾಂ !"

ಪುಟ ೭೬೯

ಅವತಾರಿಯ ಪ್ರಸುಪ್ತ ದಿವ್ಯ ಗುಹ್ಯ ಸ್ವರೂಪ ಜಾಗ್ರತವಾಗಬೇಕಾದರೆ ಕಾಲ ಒದಗಿ ಬರಬೇಕು. (ಕಾಲಲಬ್ಧಿಯೆಂದು ಜೈನರು ಕರೆಯುತ್ತಾರೆ). ಅದಕ್ಕೆ, ಘಟನೆಗಳೂ ಕೂಡಿ ಬರಬೇಕು. ಎಲ್ಲ ಕಡೆಯಿಂದಲೂ ಚೋದನೆ ಪ್ರೇರಣೆ ತುಂಬಿ ಬರಬೇಕು. ಇದನ್ನೆಲ್ಲ ಸಂಕಲ್ಪಿಸಿರುವ ಪರಮವಿಧಿ ಪಾತ್ರಗಳನ್ನು ನಿಮಿತ್ತವಾಗಿಟ್ಟುಕೊಂಡು ತನ್ನ ಇಚ್ಛಾಲೀಲೆಯನ್ನು ನೆರವೇರಿಸಿಕೊಳ್ಳುತ್ತದೆ.

ಬದ್ಧಜೀವರನ್ನು ಬಿಡಿಸಲು ಬರುವ ಅವತಾರಸತ್ತ್ವ – 'ಬದ್ಧಾತ್ಮರೊಳ್ ಭಗ್ನಾವರಣ ಚಿದ್ಯೋಗಮಂ ಪ್ರಚೋದಿಸಲ್' – ತಾನೇ ಬದ್ಧವಾಗುತ್ತದೆ, ಬದ್ಧನಂತೆ ನಟಿಸುತ್ತದೆ, ಎಂಬುದು ಆಂಜನೇಯನ ಅರಿವಾದರೆ ; ತನ್ನ ದಿವ್ಯ ತನಗೇ ಸುಪ್ತವಾಗಿತ್ತು ಎಂದು ಶ್ರೀರಾಮನ ಅನುಭಾವ. ಮಂಥರೆ ರಾವಣರಷ್ಟೇಯಲ್ಲ ತಾನೂ ನಿಮಿತ್ತ ಎಂಬರಿವಾತನದು. ಹಾಗೆನ್ನುತ್ತಲೆ, ತಾನೇ ಆ ಪರಮೇಚ್ಛೆಯೆಂಬ ಅರಿವಿಗೆ ಚಿಗಿಯುತ್ತಾನೆ.

ಶ್ರೀರಾಮನ ಈ ಗುಹ್ಯದಿವ್ಯ ಸತ್ವದ ಪ್ರಕಾಶನವನ್ನು ಗ್ರಹಿಸಿದ ಆಂಜನೇಯನೂ ಬಹುರೂಪೀ ರಾವಣನಿಂದ ತನಗೆ ಮೊದಲ ಬಾರಿಗೆ ಆದ ಅಭಿಮಾನಭಂಗದ ಕಾರಣದಿಂದಾಗಿ ಮೊದಲಿಗಿಂತ ಹೆಚ್ಚು ದಿವ್ಯದರ್ಶಿಯಾಗಿದ್ದ. ಅದನ್ನು ಶ್ರೀರಾಮನೆ ಗುರುತಿಸುತ್ತಾನೆ :

"ಈ ಆಗುತಿಹ ಸೋಲ್ಗೆ ಗದಗದಿಸದಿರ್ ; ಕೊಲೆಗೆ
ಕರಗದಿರ್. ನಾಣ್ಚದಿರ್ ನಿನಗಾದ ಭಂಗಕ್ಕೆ,
ಮಾನನಿಧಿ, ಇಂದು ನಿನಗೀ ಭಂಗವಾಗದಿರೆ,
ಅತ್ಯಂತ ಅಂತರಾತ್ಮನ ಅಹಂ ಮುರಿಯದಿರೆ,
ನಿನಗಾಗುತಿರ್ದುದೇನೀ ಮಹದ್ದರ್ಶನಂ ?
ನೆನೆ ಇದನ್, ಮರೆ ಅದನ್ ! ಅಧಿಕಾರಿ ನೀನದಕೆ
ವಿಧಿ ತಂದುದಾ ನೆವದೊಳೀಯೆಡೆಗೆ ನಿನ್ನೊರ್ವನಂ.
ನರಚೇತನಕ್ಕೆ ಮೇಣ್ ನಾರಾಯಣತ್ವಕ್ಕೆ, ಕೇಳ್,

ಚಿತ್ ಸೇತುವುಂ ಪ್ರಾಣಪ್ರಣಾಲಮುಂ ನೀನಲ್ತೆ,
ಪಾರಿಣಾಮಕ ನಾಮರೂಪ ನಿಸರ್ಗ ಸಹಯೋಗಿ ?
ಮತ್ತಮಾ ನಿಮಿತ್ತಮೆ ವಿರಾಟ್ ಚಿರ ಚಿರಂಜೀವಿ ?"

ಪುಟ ೭೬೯

ದಿವ್ಯಚೇತನಕ್ಕೂ ಒಳಗಿನ ಅಹಂಕಾರ ಮುರಿದಾಗಲೆ ಪರಮಾರ್ಥ ದರ್ಶನವಾಗುವುದು. ಆಂಜನೇಯನಿಗಾದರೂ ಶ್ರೀರಾಮ ದಿವ್ಯಗುಹ್ಯ ಹಾಗೆ ಮೈದೋರುತ್ತದೆ. ಈ ರಾಮಾಂಜನೇಯಸತ್ತ್ವರು ರಾಮಾಯಣ ಮಿತವಲ್ಲ. ಸೃಷ್ಟಿಯೊಡನೇ ಬೆರೆತಿರುವವರು. ನರನಾರಾಯಣ ಚಿತ್‌ಸೇತು ಆಂಜನೇಯ. ಅದರಿಂದಲೇ ಚಿರಂಜೀವಿ ; ಪರಿಣಾಮಕ್ಕೆ ತೊಡಗಿರುವ ಸೃಷ್ಟಿಯ ಸಹಯೋಗಿಯಾದ ಆತ ವಿರಾಟ್‌ಚಿರ ಚಿರಂಜೀವಿ.

ಹೀಗೆ ಶ್ರೀರಾಮಾಯಣದರ್ಶನ ಆಂಜನೇಯನನ್ನು ಈ ಅದ್ಭುತ ಸೂಕ್ತಿಗಳಿಂದ ರಾಮನ ಬಾಯಿಂದಲೆ ವರ್ಣಿಸುತ್ತದೆ. ಅಂಥವನಿಗೆ ಶ್ರೀರಾಮ ತನ್ನ ರಹಸ್ಯವನ್ನು ಮತ್ತೂ ಹೇಳಿಕೊಳ್ಳುತ್ತಾನೆ :

"ನಾನೆ
ಆ ರಾವಣನ ಮೂಲ ಬಲಶಕ್ತಿ ! ನನ್ನ ಅಸತ್
ಶಕ್ತಿಯಂ ಗೆಲಲರಿದು ನನಗಲ್ಲದಿತರರಿಗೆ,
ಕಾಣು, ಬಾ, ಚಿತ್ ತಪಸ್ ಶಕ್ತಿಯ ಅಲೌಕಿಕ
ವಿಧಾನಮಂ, ನಿನಗುಮನುಭವಮಿರ್ಪುದದರಿಂದೆ
ಆ ಉದ್ಯಮದೊಳೆನಗೆ ಸಹೋದ್ಯೋಗಿಯಾಗು, ಬಾ !
ನಾನೆ ಅವನಲ್ಲದಿರೆ ಆ ದಶಗ್ರೀವಂಗದೇನ್
ಸೀತೆಯನ್ನೊಲಿವುದುಂ ಮೇಣವಳನುಯ್ವುದುಂ,
ಕೇಳ್, ಮೊರ್ಗ್ಗೆ ?"

ಈ ರಾಮ ವಾಣಿ, ಮತ್ತೆ ರಾಮ ರಾವಣ ಸಂಬಂಧವನ್ನು ಮತ್ತೂ ಸ್ಫುಟವಾಗಿ ತಿಳಿಸುತ್ತದೆ – ವಜ್ರ ಇದ್ದಿಲು ಚಿತ್ರ ಒಂದು ರೀತಿಯಿಂದ ಸಂಕೇತಿಸಿದುದನ್ನೆ. ಬಹು ರೂಪೀ ರಾಮ ರಾವಣರ ಸಂಗ್ರಾಮವನ್ನು ಕಂಡು, "ಧುಮುಕಿದುದು ಹನುಮತನುವಿನ ಧಮನಿ ಧಮನಿಯಲಿ ರೋಮ ರೋಮ ರಸಾಸ್ವಾದನಾ ವಿದ್ಯುತ್ತಪೋ ನಿರ್ಝರಿಣಿ !"

ಈ ಶ್ರೀರಾಮಾವತಾರದ ಜಾಗ್ರತಿ ಆದಮೇಲೆ, ಇಡೀ ಸೃಷ್ಟಿಯಲ್ಲಿ ಆ ಸತ್ವ ನೈವೇದ್ಯಗೊಳ್ಳುವುದನ್ನು ಸೀತಾಗ್ನಿಪ್ರವೇಶ ಸನ್ನಿವೇಶದಲ್ಲಿ ಕಾಣುತ್ತೇವೆ. ಅಗ್ನಿ



ಕುಂಡ ಪ್ರವೇಶಿಸಿದ ಸೀತೆಯ ಹಿಂದೆಯೆ ಶ್ರೀರಾಮನೂ ಆ ಅಗ್ನಿಯೊಳಕ್ಕೆ ನಡೆಯುತ್ತಾನೆ. ಭೂಮಿಯಿಂದ ಮೂಡಿ ಬಂದ ಸೀತಾದೇವಿ ತನ್ನ ಮೃತ ಶರೀರವನ್ನು ಕಳೆದು ಅಗ್ನಿ ಮೂಲಕ ಸಕಲಾಂತರ್ಗತ ಶಕ್ತಿಯಾಗುತ್ತಾಳೆ. ಯಜ್ಞಾಗ್ನೀ ಸತ್ವದಿಂದ ಮೂಡಿಬಂದ ಶ್ರೀರಾಮಸತ್ತ್ವವಾದರೂ ಸೀತಾರಕ್ಷಿತ ಅಗ್ನಿಯನ್ನು ಪ್ರವೇಶಿಸಿ ತನ್ನ ಲೋಕಲೀಲಾ ಶರೀರವನ್ನು ಕಳಚಿ ಶಾಶ್ವತ ಲೀಲಾ ಶರೀರವನ್ನು ಪಡೆಯುತ್ತದೆ. ಅಯೋಧ್ಯೆಯಲ್ಲಿ ಹುಟ್ಟಿದ ಲೀಲಾವತಾರ ತರು ಲಂಕೆಯಲ್ಲಿ ಫಲಿತವಾಯಿತು ಎನ್ನುವ ವರ್ಣನೆಯಲ್ಲೂ ಅವತಾರಸತ್ತ್ವದ 'ಪರಿಣಾಮ'ದ ಅರ್ಥವೆ ಧ್ವನಿತವಾಗಿದೆ.

ಶ್ರೀ ರಾಮಚಂದ್ರ ಲೀಲಾವತಾರಿಯಾದರೂ ಅವನ ಆಗುವಿಕೆಗೆ ಅಥವಾ ಪೂರ್ಣ ವಿಕಸನಕ್ಕೆ ಹಲವು ಚೇತನಗಳು ಪ್ರಾರ್ಥನೆಯ ಮೂಲಕ ಅರ್ಪಣದ ಮೂಲಕ ವೈರದ ಮೂಲಕ ಪ್ರಶಂಸೆಯ ಆಶೀರ್ವಾದದ ಮೂಲಕ ತಮ್ಮ ತಮ್ಮ ಕಾಣಿಕೆಯನ್ನು ಸಲ್ಲಿಸುತ್ತವೆ. ಅಂದರೆ ಆ ಎಲ್ಲವನ್ನು ಸೆಳೆದುಕೊಳ್ಳುವ ಮಹಾಪಾತ್ರವಾಗುತ್ತಾನೆ, ಮಹಾ ಸಮುದ್ರವಾಗುತ್ತಾನೆ ಶ್ರೀರಾಮಚಂದ್ರ. ಈ ಅರ್ಥದಿಂದ ಶಬರಿಯ ಪ್ರಸಂಗವನ್ನು ನೋಡುತ್ತಾರೆ ಕವಿ. ಭಕ್ತನ ನಿರೀಕ್ಷೆಗೆ ವಿರುದ್ಧವಾಗಿಯೂ ಬರುವ ಭಗವಂತ ತನ್ನ ಭಕ್ತನನಿತನ್ನೂ ಸುಲಿದು ನೈವೇದ್ಯಗೊಂಡು, ಅವನಹಂಕೃತಿಯನ್ನೆಲ್ಲ ದಿವ್ಯಶೂನ್ಯಕ್ಕೆ ಅದ್ದುವ ಪೂರ್ಣತಾಸಿದ್ಧಿಯೂ ಆಗುತ್ತಾನೆ, ಎಂಬ ದರ್ಶನದ ಪ್ರತಿಮೆಯಾಗಿ ಕಾಣುತ್ತಾರೆ ಕವಿ, ಈ ಪ್ರಸಂಗವನ್ನು.

ಹೀಗೆ, ಈ ಮಹಾಕಾವ್ಯದಲ್ಲಿ ಆಗುವ–ಮಾಗುವ ಹಲವು ವಿಧಾನವನ್ನು ಕಾಣಿಸುತ್ತಾರೆ ಕವಿ. ಇದರ ಉಪಾಂಗವಾಗಿ ಪ್ರಾರ್ಥನಾ ಶಕ್ತಿ, ಕಾಯುವ ತಪಸ್ಸುಗಳು ತತ್ತ್ವಗಳಾಗಿ ಕೆಲಸ ಮಾಡುತ್ತವೆ. ಊರ್ಮಿಳಾ, ಶಬರಿ, ಸಂಪಾತಿಗಳು ಇಲ್ಲಿ, ಅಲ್ಲಿ ಬೆರಳ್‌ಗೆ ಕೊರಳ್ ನಾಟಕದಲ್ಲಿ ಏಕಲವ್ಯ ಕಾಯುವ ಹಲವು ಬಗೆಯ ತಪಸ್ಸಿಗೆ ಸಂಕೇತವಾಗುತ್ತಾರೆ. ಊರ್ಮಿಳಾ, ಸೀತಾ, ಮಂಡೋದರಿ – ಎಲ್ಲರೂ ಪ್ರಾರ್ಥನಾ ತಪೋನಿರತರೇ ಆಗಿರುತ್ತಾರೆ. 'ಪೂಜೆ ತಾಂ ಶಕ್ತಿ', 'ಆವುದಾಗಲಿ ನೆಪಂ ಫಲದಾಯಕಂ ತಪಂ' ಎನ್ನುವ ಅರಿವಿನ ಮಹಾಚೇತನರವರು. ಈ ತಪಸ್ಸಾಧನೆಯಲ್ಲಿ 'ತನ್ನ ತಾನಿಲ್ಲಗೈವುದೆ ಎಲ್ಲ ಸಾಧನೆಯ ಗುರಿ' ಎಂಬ ಸಿದ್ಧಿ ಊರ್ಮಿಳೆಯದಾಗುತ್ತದೆ. ಪ್ರಾರ್ಥನೆ, ಕಾಯುವಿಕೆಗಳಿಗೆ ಕ್ರಿಶ್ಚಿಯನ್ ಬಣ್ಣ ಬಂದಿದ್ದರೂ ಅದು ಪೂರ್ಣ ಭಾರತೀಯವಾಗಿ ಇಲ್ಲಿ ಮೇಳಗೊಂಡಿದೆ. (ಒಮ್ಮೊಮ್ಮೆ ಹೆದ್ದನಿಯಾಗಿ, ಎದ್ದನಿಯಾಗಿ ಬರುವುದೂ ಉಂಟು...)

ವ್ಯಕ್ತಿ ತನ್ನ ಮುಕ್ತಿಯನ್ನು ತನ್ನ ಜೀವಿತೋದ್ದೇಶ ಸಾಧನೆಯ ಮೂಲಕವೆ ಸಾಧಿಸಿಕೊಳ್ಳಬೇಕು ಎಂಬ ಕಾಣ್ಕೆಯನ್ನು, ಸಂಜೀವಿನೀ ಪರ್ವತ ಯಾತ್ರೆಗೆ ಹೊರಟಿರುವ ಆಂಜನೇಯನ ಮಾರ್ಗಮಧ್ಯದಲ್ಲಿ ಅವನಿಗಾದ ಅತೀಂದ್ರಿಯಾನುಭವವನ್ನು ಚಿತ್ರಿಸುವಾಗ ಪ್ರತಿಮಿಸುತ್ತಾರೆ. ಅಗ್ನಿ ಚಕ್ರದ ನೇಮಿ ಮಧ್ಯದಲ್ಲಿ ನಿಕುಂಭಿಲಾ ಯಾಗವನ್ನು ಮಾಡುತ್ತಿದ್ದ ಇಂದ್ರಜಿತುವನ್ನು ಭೇದಿಸಲು ಲಕ್ಷ್ಮಣನನ್ನು ಮುಂದಿಟ್ಟುಕೊಂಡು ಆಂಜನೇಯ ವಿಭೀಷಣರು ಮುನ್ನಡೆಯುತ್ತಾರೆ. ಅಗ್ನಿ ನೇಮಿಯೊಳಕ್ಕೆ ಕಾಲಿಟ್ಟೊಡನೆಯೆ ಅಣುಸ್ಫೋಟಕ್ಕೊಳಗಾದ ಲಕ್ಷ್ಮಣನನ್ನು ರಕ್ಷಿಸಲು ಕೈಲಾಸ ಋಷಭಾದ್ರಿ ಮಧ್ಯದ ಓಷಧೀಪರ್ವತದಲ್ಲಿ ಮಾತ್ರ ಲಭಿಸುವ ಮೃತಸಂಜೀವಿನೀ ಲತೆಯನ್ನು ತರಲು ಆಂಜನೇಯ ಮನೋಮಯ ಮಾರ್ಗದಲ್ಲಿ ಯೌಗಿಕ ವಿಧಾನದಿಂದ ಸಂಚರಿಸ ತೊಡಗುತ್ತಾನೆ. (ಈ ಚಿತ್ರಣ ಈ ಕಾವ್ಯದ ಅತಿಮಾನಸ ಶಿಖರಗಳಲ್ಲೊಂದಾಗಿದೆ. ಅದರ ವಿವರ ಇಲ್ಲಿಗೆ ಅಪ್ರಸ್ತುತ) ಪ್ರಾಣಮಯಕೋಶವನ್ನು ಕಳೆದೊಗೆದು ದಾಟುತ್ತಾ ಮನೋಮಯವಾದ ಸಾತ್ತ್ವಿಕಾಕಾಶಕ್ಕೆ ನೆಗೆದ ಆಂಜನೇಯ ಆ ನಿಸ್ತೀರದಲ್ಲಿ ತಾನೆ ಲಯವಾಗುವ ಅಪಾಯದಲ್ಲಿರುತ್ತಾನೆ. ಎಲ್ಲವೂ ತಾನೇ ಆದಂತೆ, ಎಲ್ಲದರೊಳಗೂ ತಾನಿದ್ದಂತೆ ಆಗುತ್ತ ಅವನ ಅಹಂಕಾರವೆ ಕರಗಿ ಪ್ರಲಯಗೊಳ್ಳತೊಡಗುತ್ತದೆ. ಆ ಪ್ರಪಾತದ ಅಪಾಯದಿಂದ ಪಾರಾಗಲು ಅವನು ತನ್ನನ್ನು ಆ ನಿರಾಕಾರದಲ್ಲಿ ಬೆರೆದು ಹೋಗದಂತೆ ಇಟ್ಟುಕೊಳ್ಳತೊಡಗುತ್ತಾನೆ. ತನ್ನ ವಿಶಿಷ್ಟ ಅಹಂಕಾರ ಪೋಷಕವಾದ ಗುಣಗಳನ್ನು ತಾನೇ ಜಪಿಸಿಕೊಳ್ಳುತ್ತಾನೆ. ರಾವಣ ದ್ವೇಷವನ್ನು ನೆನೆದು ಕೊಳ್ಳುತ್ತಾನೆ. ಕರಗಲಿದ್ದ ಅಹಂಗೋಲವನ್ನು ಬಿಗಿಪಡಿಸಿಕೊಳ್ಳುತ್ತಾನೆ. ಆದರೆ ಮುಂದೆ ಮತ್ತೊಂದು ಮಹತ್ತರ ಪಾತಾಳಪಾತ ಕಾದಿರುತ್ತದೆ. ಜೀವನಾದರ್ಶಗಳ ಗೊಂಡಾರಣ್ಯದಲ್ಲಿ ಸಿಕ್ಕಿಕೊಳ್ಳುತ್ತಾನೆ. ತಾನೂ ಅಂತೆ ಮಹೋದ್ದೇಶ ಚೋದಿತನಾಗದೆ ವೃಥಾ ಅಲ್ಪ ಕಾರ್ಯಾರ್ಥ ವ್ಯರ್ಥಸಾಹಸ ಕೈಗೊಂಡಿರುವೆನಲ್ಲ ಎಂಬ ವಿಷಾದವಾಗುತ್ತದೆ. ಆ ಸ್ವಾತ್ಮ ಸಿದ್ಧಿಯ ಪ್ರಲೋಭನದಿಂದ ಅವನನ್ನು ಪಾರುಮಾಡಲು ಆತ್ಮ ಬುದ್ಧಿಯ ವಿವೇಕ ಹೀಗೆ ಎಚ್ಚರಿಸುತ್ತದೆ.

"ಲೋಕಲೀಲೆಗೊಪ್ಪಿಗೆಯಿತ್ತು
ಆ ಲೋಕಕ್ಕೈತರಲ್ ಲೀಲೆ ಕೊನೆಗೊಳ್ಳುವಾ
ಮುನ್ನಮಲ್ಲಿಂದನ್ಯ ಲೋಕಕಾಶಿಸುವವನೆ
ನಿತ್ಯ ಬದ್ಧಂ. ಲೋಕಮಾವುದಾದೊಡಮೇನ್?
ಪೆರ್ಚುg ಕಡಮೆಗಳೊಳವೆ ಸಚ್ಚಿದಾನಂದದೀ
ಲೀಲಾವಿನೋದದೊಳ್?"



ಎಂದು ಅವನ ಜನ್ಮಧರ್ಮದ ಕರ್ಮ ಕರ್ತವ್ಯವನ್ನು ಎಚ್ಚರಿಸುವ ಆತ್ಮವಾಣಿ ಅವನನ್ನು ಸರಿದಾರಿಗಟ್ಟುತ್ತದೆ.

ಇಲ್ಲಿ ಗಮನಿಸಬೇಕಾದಂಶವಿದು. ಜೀವಿ ಜೀವಿಗೂ ಸ್ವಕರ್ಮ ನಿರ್ದೇಶಿತವಾದ ಜೀವಿತೋದ್ದೇಶವಿದೆ ಎಂದೂ, ಆ ಮೂಲಕವೇ ಸರ್ವಧರ್ಮಸಾಧನೆಯನ್ನು ನೆರವೇರಿಸುತ್ತ ಕರ್ಮಕ್ಷಯವನ್ನೂ ಸಾಧಿಸಿಕೊಳ್ಳಬೇಕೆಂದೂ ಈ ಸನ್ನಿವೇಶ ಧ್ವನಿಸುತ್ತದೆ. ಸೀತಾದೇವಿ ಹೇಳಿದ ಜೀವಿತೋದ್ದೇಶ ಮಾತು ಇಲ್ಲಿ ವಿವರಣೆ ಪಡೆದುಕೊಳ್ಳುತ್ತದೆ. ಆದರಿಲ್ಲೊಂದು ಎಚ್ಚರವಿರಬೇಕು. ಜಾತಿಬದ್ಧ ಸಮಾಜ ಪ್ರತಿಷ್ಠಾಪನೆ ಮಾಡಿದ ಧಾರ್ಮಿಕರು ಈ ದರ್ಶನದ ಇಂಗಿತವನ್ನು ದುರುಪಯೋಗಪಡಿಸಿ ಕೊಳ್ಳಲೂಬಹುದು, ಎಲ್ಲರನ್ನೂ ಅವರವರ ಜಾತಿಕರ್ಮದ ಮಿತಿಯೊಳಗೇ ಬಿಗಿದು ಮಿಸುಕಾಡದಂತೆಯೂ ಇಡಬಹುದು. ಈ ಅಪಾಯ ಕವಿಗೂ ತಿಳಿದಿದೆ.

ಪರಮಹಂಸರಿಂದ ನಿರ್ವಿಕಲ್ಪ ಸಮಾಧಿಯ ರುಚಿಯನ್ನು ಕಂಡ ವಿವೇಕಾನಂದರು ಅದೇ ಸ್ಥಿತಿಯಲ್ಲುಳಿಯಬೇಕೆಂದು ಆಶಿಸಿದಾಗ ಶ್ರೀ ಗುರು ಆ ವೀರ ಬ್ರಹ್ಮಚಾರಿಯನ್ನು ಚೇಡಿಸುತ್ತಾರೆ. "ನೀನಿಷ್ಟು ಸ್ವಾರ್ಥಿಯೆಂದು ತಿಳಿದಿರಲಿಲ್ಲ. ನಿನಗಾ ನಿಧಿ ಸಿಗದ ಹಾಗೆ ಬೀಗ ಹಾಕಿರುವೆ. ಲೋಕೋದ್ಧಾರಕಾರ್ಯ ನಿನ್ನಿಂದಾಗಬೇಕಾಗಿದೆ. ನೀನು ಮಾಡದೆ ಹೋದರೆ ನಿನ್ನ ಎಲುಬುಗಳೆ ಆ ಕೆಲಸ ಮಾಡುತ್ತವೆ," ಎಂದು ಆ ಮಹಾ ಗುರು ಧೀರ ಶಿಷ್ಯನನ್ನು ಸ್ವಾತ್ಮೋದ್ಧಾರಕಾರಿಯಾದ ನಿರ್ವಿಕಲ್ಪ ಸಮಾಧಿಯಿಂದ ದೂರವೆ ಬಿಗಿ ಹಿಡಿದಿಟ್ಟಿರುತ್ತಾರೆ. ಶ್ರೀ ರಾಮಕೃಷ್ಣರು ಮಹಾನಿರ್ವಾಣಗೊಂಡ ಮೇಲೂ ಆ ಪರಮಸ್ಥಿತಿಯನ್ನು ಪಡೆಯಲು ಪವಾಹಾರಿಬಾಬಾ ಅವರ ಗವಿಯ ಬಳಿ ಹದಿನೆಂಟು ದಿನ ಪ್ರಯತ್ನಿಸುತ್ತಾರೆ. ಆದರೆ ಆ ದಾರಿಯಿಂದ ಶ್ರೀರಾಮಕೃಷ್ಣಜ್ಯೋತಿ ಅವರನ್ನು ಹಿಂದಟ್ಟುತ್ತದೆಯಂತೆ. ಒಂದು ವೇಳೆ ವಿವೇಕಾನಂದರು ಆ ಮಾರ್ಗದಲ್ಲಿ ಹೋಗಿದ್ದರೆ ಈಗಿನ ಸಾಧನೆ ದೂರಗನಸಾಗಿಯೇ ಉಳಿಯುತ್ತಿತ್ತು. ಸಂಜೀವಿನೀ ಲತೆಯ ಹಾದಿಯಲ್ಲಿದ್ದ ಆಂಜನೇಯ ನಿರ್ವಿಕಲ್ಪ ಸಮಾಧಿಯಲ್ಲಾಗಲಿ, ಮಹಾದರ್ಶಗಳ ಗೊಂಡಾರಣ್ಯದಲ್ಲಾಗಲಿ, ಮೈಮರೆತಿದ್ದರೆ ಸುಟ್ಟಿದ್ದ ಲಕ್ಷ್ಮಣನೇನಾಗುತ್ತಿದ್ದ. ಶ್ರೀ ಸೀತಾರಾಮರೇನಾಗುತ್ತಿದ್ದರು? ಶ್ರೀ ರಾಮಕಥೆಯೇನಾಗುತ್ತಿತ್ತು?

ಈ ಸೃಷ್ಟಿಯ ಮಹದ್ ವ್ಯೂಹರಚನೆಯಲ್ಲಿರುವಂತೆ ಮಹದ್ ವ್ಯಾಪಾರ ವ್ಯವಹಾರದಲ್ಲೂ ನಿಷ್ಠುರ ನಿಯಮವಿರುತ್ತದೆ. ಯಾವೊಂದಂಗವೂ ಮಿತಿ ಮೀರಿ

ಬೆಳೆಯುವ ಬಯಕೆಯಿಂದ ವಾಸ್ತುಶಿಲ್ಪರಚನೆಯನ್ನು ಊನಗೊಳಿಸಬಾರದು. ಮಹಾ ವಾಸ್ತು ವಿನ್ಯಾಸಕ್ಕೆ ತನ್ನನ್ನು ನಿವೇದಿಸಿಕೊಳ್ಳುವ ಮೂಲಕ ಪ್ರತಿಯೊಂದೂ ಅಂಗ ತನ್ನ ಸಾರ್ಥಕ್ಯ ಪಡೆಯ ಬೇಕಾಗುತ್ತದೆ. ಈ ದರ್ಶನವೊಂದು ಕಪಿವೀರ ಮೇರು ಎಂಬುವನ ಪ್ರಸಂಗದಲ್ಲಿ ಧ್ವನಿತವಾಗುತ್ತದೆ. (ಈ ಪ್ರಸಂಗದ ವಿವರಕ್ಕೆ, ನೋಡಿ : 'ಶ್ರೀ ರಾಮಾಯಣ ದರ್ಶನದಲ್ಲಿ ಸಮಕಾಲೀನ ಪ್ರಜ್ಞೆ' ಎಂಬ ಲೇಖನ.) ಯಾರಿಗೆ ತಾನೆ ಜೀವನದಲ್ಲಿ ದೊಡ್ಡ ಕೆಲಸ ಮಾಡಬೇಕೆನ್ನಿಸುವುದಿಲ್ಲ. ಕಪಿವೀರ ಮೇರುವಿಗೂ ಅದೇ ಆಶೆ. ಆದರದೆಷ್ಟು ವಿಷಾದಪೂರ್ಣವಾಗಿ ನಿರಾಶೆಗೊಳ್ಳುತ್ತದೆ. ಮಹತ್ಕರ್ಮದಲ್ಲಿ ಭಾಗಿಯಾದ ಯಾರೂ ಬೃಹತ್ ಕರ್ಮದಿಂದಲೆ ತಮ್ಮನ್ನು ಸಂಸ್ಥಾಪಿಸಿಕೊಳ್ಳಬೇಕಿಲ್ಲ. ತಮ್ಮ ಶಕ್ತಿಯನ್ನೆಲ್ಲ ಮಹತ್ಕರ್ಮಶಿಲ್ಪದ ತೋಲ ಕೆಡದಂತೆ ಮಿತಿಯಲ್ಲಿಟ್ಟುಕೊಂಡಿರುವುದೂ ಮಹತ್ಕರ್ಮವೇ ಆಗುತ್ತದೆ. ಬೆರಳ್‌ಗೆ ಕೊರಳ್ ನಾಟಕದ ಏಕಲವ್ಯ ಬೇರಳೊಪ್ಪಿಸುವ ಮೂಲಕ ಮಹಾಭಾರತ ಮಹಾವಾಸ್ತು ವಿನ್ಯಾಸಕ್ಕೆ ಮಿತಗೊಳಿಸುವ ಮೂಲಕ ತನ್ನ ವಿಶಿಷ್ಟ ಮೋಕ್ಷಕಂಡುಕೊಳ್ಳುತ್ತಾನೆ.

ಕರ್ಮತತ್ತ್ವವನ್ನೂ ಅದರ ವಿಸ್ತರಣವಾದ ಈ ಕರ್ಮಮೋಚನವನ್ನೂ ಅದರೊಡನೆ ತೆಕ್ಕೆ ಬಿಗಿದಿರುವ ಜೀವಿತೋದ್ದೇಶ – ಲೋಕಹಿತ – ಈಶ್ವರೇಚ್ಛೆಗಳನ್ನು ಕುವೆಂಪು ಹೀಗೆ ಬಿಡಿಸುತ್ತ ಹೋಗುವಾಗ ಅದರ ಬೇರುಗಳಾದ ಜನ್ಮಾಂತರವನ್ನೂ ಒಪ್ಪಿಕೊಳ್ಳುತ್ತಾರೆ. ಬೆರಳ್‌ಗೆ ಕೊರಳ್ ನಾಟಕದ ದ್ರೋಣರು ಅರ್ಜುನನ ಹೆಸರಾಸೆಯನ್ನು ಹೆಕ್ಕುತ್ತಾ ಈ ಜನ್ಮಾಂತರ ಸುರಂಗ ಮಾರ್ಗದಲ್ಲಿ ಸಾಗುತ್ತಾರೆ; "ಈ ಜನ್ಮದೊಳ್ ಈ ಪೆಸರ್ ; ಮರವುಟ್ಟೊಳಿನ್ನೊಂದು ಪೆಸರ್. ಭರತ ಖಂಡದೊಳಿಂದು ದ್ರೋಣನ್ ! ಬರ್ಪ ಜನ್ಮದೊಳಾವ ದೇಶದೊಳ್ ಅದಾವ ಪೆಸರೊ" ಹೀಗೆಯೆ ರಾಮಾಯಣ ದರ್ಶನದಲ್ಲಿ ಸೀತಾ ವಿಷಯವಾದ ಕಾಮಾಹಂಕಾರ ಪರಿಣಾಮಗೊಂಡ ರಾವಣ ಆಕೆಯ ತಾಯಿತನದ ಪ್ರೀತಿಯನ್ನು ಮರು ಹುಟ್ಟಿನಲ್ಲಿ ಮಗುವಾಗಿ ಪಡೆಯುತ್ತಾನೆ. ರಾವಣ ಕುಂಭಕರ್ಣರು ಲವಕುಶರಾಗುತ್ತಾರೆ. ಈ ಜನ್ಮದಲ್ಲಿ ಗೆಲ್ಲಲಾಗದ ರಾಮನನ್ನು ಆಗ ಗೆಲ್ಲುತ್ತಾರೆ. ಹೀಗೆ ಕಾಣ್ಕೆಗೊಳ್ಳುವ ಕವಿ ಜೈನ ಭವಾವಳಿ ಕಲ್ಪನೆಯ ಬೆನ್ನೆಲುಬಾದ ಕರ್ಮ ತತ್ತ್ವವನ್ನೂ ಗ್ರಹಿಸಿದ್ದಾರೆ. ಈ ಜನ್ಮಾಂತರ ತತ್ತ್ವ ಮಲೆಗಳಲ್ಲಿ ಮದು ಮಗಳು ಕಾದಂಬರಿಯಲ್ಲೂ ಹೊಳಲಿಟ್ಟಿದೆ. ಅವರ ಜೀವನದ ಶ್ರದ್ಧೆಯಾಗಿಯೂ ಉಳಿದಿದೆ. ಆದ್ದರಿಂದ ಕುವೆಂಪು ಅವರ ವೈಚಾರಿಕತೆಯನ್ನು ಗ್ರಹಿಸುವಾಗ ಈ ಎಲ್ಲ ತಾತ್ತ್ವಿಕ ಶ್ರದ್ಧೆಯನ್ನೂ ಪರಿಗ್ರಹಿಸಿ ಪರಿಶೀಲಿಸಬೇಕಾಗುತ್ತದೆ.



ಒಟ್ಟಿನಲ್ಲಿ ಶ್ರೀರಾಮಾಯಣ ದರ್ಶನಂ ಶ್ರೀರಾಮ ಕಥೆಯನ್ನು ನಿತ್ಯ ನೂತನ ಕಾವ್ಯವನ್ನಾಗಿ ಮಾಡುವ ; ಸನಾತನ ಪರಂಪರೆಯನ್ನು ಮುನ್ ಹರಿಸಿರುವಂತೆಯೆ ಅದ್ಯತನ ಯುಗವನ್ನು ತಾತ್ತ್ವಿಕವಾಗಿ ಮೈಗೂಡಿಕೊಂಡಿರುವ ; ಅತಿಶಯವನ್ನು ಆಶ್ಚರ್ಯವನ್ನು ಉಂಟುಮಾಡುತ್ತದೆ. ಹೀಗೆ ಮಾಡುವಾಗ ಇಲ್ಲಿ ವಿವರಿಸಿರುವ ತಾತ್ತ್ವಿಕಾಂಶಗಳೆಲ್ಲ ಪೂರಕಾಂಶಗಳಾಗಿ ಪೋಷಕಾಂಶಗಳಾಗಿ ಒದಗಿ ಬಂದಿವೆ. (ಕೆಲವೊಮ್ಮೆ ಈ ತತ್ತ್ವಗಳು ಕೊಂಚ ಬೌದ್ಧಿಕ ಸ್ತರದಲ್ಲೆ ನಿಲ್ಲುವುದೂ ಉಂಟು. ಅದರ ವಿವೇಚನೆ ಇಲ್ಲಿನ ವಸ್ತುವಿಗೆ ಸಂಬಂಧಿಸಿಲ್ಲ)

೫

ಶ್ರೀರಾಮಯಣ ದರ್ಶನಂ ಕಾವ್ಯವನ್ನು ಬರೆಯುವತನಕ ಏಕಾಂತ ವಲ್ಮೀಕದಲ್ಲಿದ್ದ ಕುವೆಂಪು ಆಮೇಲೆ ಕ್ರಮೇಣ ಬಹಿರಂಗ ಜೀವನದ ಕಡೆ ಕಣ್ಣಾಡಿಸಬೇಕಾಗುತ್ತದೆ. ಮಹಾಕಾವ್ಯವನ್ನು ಪೌರಾಣಿಕ ಗಾತ್ರದಲ್ಲೂ ಯಶಸ್ವಿಯಾಗಿ ರಚಿಸಿದ ಸುಮಾರು ಇಪ್ಪತ್ತು ವರ್ಷದ ಮೇಲೆ ಮಲೆಗಳಲ್ಲಿ ಮದುಮಗಳು ಕಾದಂಬರಿಯನ್ನು ಬರೆದದ್ದು ಅತ್ಯಾಶ್ಚರ್ಯ ಸಂಗತಿ. ಶ್ರೀರಾಮಾಯಣ ದರ್ಶನಂ ಬರೆದು ಕವಿಯಾಗಿ ಎಲ್ಲ ಬಸಿದುಕೊಂಡಿದ್ದಾರೆ, ಇನ್ನೇನೂ ಕವಿಯಲ್ಲಿ ಉಳಿದಿಲ್ಲ ಎಂಬ ಭಾವನೆಯಿದ್ದ ಜನಕ್ಕೆ ಸವಾಲಾಗುವಂತಹ, ಯಾರಿಗೂ ವಿಸ್ಮಯವಾಗುವಂತಹ ಕಾದಂಬರಿಯನ್ನು ರಚಿಸಿದುದು ವಿಶೇಷ ಗಮನಕ್ಕೆ ಯೋಗ್ಯವಾದ ವಿಚಾರ. ವಾಸ್ತವ ಕಥೆಯನ್ನು ಸ್ವಲ್ಪ ಮಾತ್ರವೇ ಆಧರಿಸುವ ಕಾವ್ಯ ಬರೆದು ಸಂತೃಪ್ತರಾದ ಜನದೂರ ಕವಿ, ಹೇಗೆ ತಾನೆ ವಾಸ್ತವ ಶ್ರೀಮಂತ ಕಾದಂಬರಿಯನ್ನು ಬರೆಯಬಲ್ಲರು? ಅಲ್ಲಿ ಮಹದ್ ಘಟನೆ, ಮಹದ್ ವಿಷಯ, ಮಹಾಛಂದಸ್ಸುಗಳನ್ನು ನಿರ್ವಹಿಸಿದವರು. ಇಲ್ಲಿ ಹಂದಿಹಟ್ಟಿ, ನಾಯ್‌ಗುತ್ತಿ ತಿಮ್ಮಿಯ ಪ್ರಣಯ ಮುಂತಾದುವುಗಳನ್ನು ಸಚಿತ್ರವಾಗಿ ನಿರೂಪಿಸಿ ಗೆದ್ದಿದ್ದಾರಲ್ಲ? ತಾತ್ತ್ವಿಕ ಭಿತ್ತಿಯಾಗಿ ಈ ಕಾದಂಬರಿ ರಾಮಾಯಣ ದರ್ಶನಕ್ಕಿಂತ ವ್ಯಕ್ತ ರೀತಿಯಲ್ಲಿ ಭಿನ್ನ. ಈ ವಾಸ್ತವ ಕಥೆ – ಕಾನೂರು ಹೆಗ್ಗಡತಿಗೂ ಹಿಂದಿನದು. ಕವಿ ಯಾವ ಪರಿಣಾಮ ಪಥದಲ್ಲೂ ಇಲ್ಲಿ ತನ್ನ ಪಾತ್ರಗಳನ್ನು ನಡೆಸಿಕೊಂಡು ಹೋಗುವುದಿಲ್ಲ. ಇಲ್ಲಿ ಯಾರೂ ಏನೂ ಆಗುವಾಸೆ ತೋರುವುದಿಲ್ಲ. ಎಲ್ಲ ಹಾಗೆ ಹಾಗೆಯೆ ಬದುಕುತ್ತಾರೆ. ಅಲ್ಲಿ, ರಾಮಾಯಣ ದರ್ಶನದಲ್ಲಿ ಆಗಲೆ ತಿಳಿಸಿರುವಂತೆ ಎಲ್ಲ ಪಾತ್ರಗಳೂ ನಿಂತಲ್ಲಿ ನಿಲ್ಲಲಾಗದೆ ಓಡುತ್ತವೆ, ಆಗುವತ್ತ ಧಾವಿಸುತ್ತವೆ. ಬ್ರಹ್ಮಾಂಡ ವ್ಯವಸ್ಥೆಯಲ್ಲಿ ಸಿಕ್ಕಿಕೊಂಡಿರುವಂತೆ ತೋರುತ್ತವೆ.

ಅಂದಮಾತ್ರದಿಂದಲೆ ಈ ಪಾತ್ರಗಳ ಜೀವನ ಅಲ್ಪವೆಂದೆಂದೂ ಕವಿ ಭಾವಿಸಿಲ್ಲ. ಅದನ್ನು ಸ್ಪಷ್ಟವಾಗಿ, 'ಓದುಗರಿಗೆ' ಎಂಬ ತಮ್ಮ ಮೊದಲ ದಿಕ್ಸೂಚೀ ವಾಕ್ಯಗಳಲ್ಲೆ ಸೂಚಿಸಿದ್ದಾರೆ: "ಯಾರೂ ಮುಖ್ಯರಲ್ಲ ; ಯಾವುದೂ ಅಮುಖ್ಯವಲ್ಲ!" "ಎಲ್ಲಕ್ಕೂ ಇದೆ ಅರ್ಥ; ಯಾವುದೂ ಅಲ್ಲ ವ್ಯರ್ಥ ; ನೀರೆಲ್ಲವೂ ತೀರ್ಥ !" ಶ್ಮಶಾನ ಕುರುಕ್ಷೇತ್ರದ ಕಡೆಯಲ್ಲಿ ಮುಂಗಂಡಿದ್ದ ಸಾಮಾನ್ಯ ಸತಿಪತಿಯರ ಶೃಂಗಾರ ಮಕ್ಕಳಾಟ ಇಲ್ಲಿ ನಿಚ್ಚಳಲವಾಗಿ ಕಂಡರಣೆಗೊಂಡಿದೆ. ಸಾಮಾನ್ಯತಾ ಪ್ರೀತಿ ಗೌರವವನ್ನು ಮತ್ತೆ ಮತ್ತೆ ಪ್ರತಿಪಾದಿಸುತ್ತಲೆ ಇದ್ದರೂ – ಇನ್ನು ಶ್ರೀಸಾಮಾನ್ಯನ ಕಾಲ ಬಂದಿತು ಎಂದು ಘೋಷಿಸಿದ್ದರೂ – ಮಹದ್ ಘಟನೆ, ಮಹದ್ವಸ್ತು, ಮಹಾ ಛಂದಸ್ಸು, ಮಹದ್ ವ್ಯಕ್ತಿಗಳ ಬಗ್ಗೆ ಕುವೆಂಪು ಅವರಿಗೆ ಹಿಂದೆ ಒಲವರವಿದ್ದೆ ಇತ್ತು ಎನ್ನಬಹುದು. ಹಾಗಿದ್ದೂ ಸಾಮಾನ್ಯತಾ ಗೌರವವನ್ನು ಪ್ರತಿಪಾದಿಸುತ್ತಲೆ ಇರುತ್ತಾರೆ. ಈ ಕಾದಂಬರಿಯಲ್ಲಂತೂ ಸಾಮಾನ್ಯತಾ ಗೌರವ ಮುಗಿಲು ಮುಟ್ಟಿದೆ. ಸಾಮಾನ್ಯರನ್ನು ದೂರದಿಂದಷ್ಟೇ ನೋಡಿದ್ದಾರೆ, ತನ್ಮಯಗೊಂಡಿಲ್ಲ – ಎನ್ನುವ ಬೇಸರ ವಿಮರ್ಶೆಗೆ ಸಾವಧಾನ ವಿವೇಕವಿಲ್ಲವೆನಿಸುತ್ತದೆ.

ತನ್ನ ಮಗಳು ತಿಮ್ಮಿಯನ್ನು ನಾಯಿಗುತ್ತಿಗೇ ಕೊಡಬೇಕೆಂದು ತೀವ್ರಾಶೆಯ ಸೇಸಿ ಜೀತದಾಳಾಗಿ ಅಸ್ವತಂತ್ರಳಾದರೂ ಮನುಷ್ಯ ಜೀವಿಯಾಗಿ ಸ್ವಾತಂತ್ರ್ಯೇಚ್ಛೆಯುಳ್ಳವಳು ಎಂಬುದನ್ನು ಕೃತಿಕಾರ, ವಾಸ್ತವ ಪರಿಸರ – ಮಾನವ ಮನಸ್ಸ್ಪಂದನಗಳ ನಿಜ ಅರಿವಿನಿಂದ ಚಿತ್ರಿಸುತ್ತಾರೆ. "ಒಡೆಯರ ಆಸ್ತಿಯಾಗಿದ್ದ ಅವರನ್ನು ಯಾರಿಗೆ ಕೊಡಬೇಕು? ಎಲ್ಲಿಗೆ ಕೊಡಬೇಕು? ಎಂಬುದನ್ನು ತಾಯಿ ತಂದೆಗಳು ನಿರ್ಧರಿಸಲು ಸಾಧ್ಯವೆ? ತಮ್ಮ ಜಾನುವಾರುಗಳನ್ನು ಬಿಕರಿ ಮಾಡುವ ಹಕ್ಕು ಎಂತೋ ಅಂತೆ ಬೇಲರು ಹೊಲೆಯರು ಮಾದಿಗರು ಮೊದಲಾದ ತಮ್ಮ ಹೆಣ್ಣು ಗಂಡು ಜೀತದಾಳುಗಳನ್ನೂ ಇಡುವ ಕೊಡುವ ಬಿಡುವ ಹಕ್ಕು ಅವರದ್ದೆ ತಾನೆ? ವಸ್ತುತಃ ಹಾಗಿದ್ದರೂ, ಸೇಸಿ ಎಷ್ಟಾದರೂ ಮನುಷ್ಯ ವರ್ಗಕ್ಕೆ ಸೇರಿದವಳಲ್ಲವೆ ? ಅವಳೇನು ದನ ಅಲ್ಲವಲ್ಲ ! ಮಾನವ ವರ್ಗಕ್ಕೇ ಸಹಜವಾದ ಸ್ವಾತಂತ್ರ್ಯ ಇಚ್ಛೆ, ಆಶೆ, ಅಪೇಕ್ಷೆ, ಪ್ರಯತ್ನ ಶೀಲತೆ ಇವುಗಳಿಂದ ಅವಳು ತಪ್ಪಿಸಿಕೊಳ್ಳಲು ಸಾಧ್ಯವೆ? ಆ ಆಶೆ ಅಪೇಕ್ಷೆಗಳು ಕೈಗೂಡಲಿ ಬಿಡಲಿ, ಪ್ರಯತ್ನ ಮಾಡುವುದರಿಂದ ತಪ್ಪಿಸಿಕೊಳ್ಳಲಾದೀತೆ? ಅದರಿಂದ ಎಂತಹ ಹಾನಿಯೆ ಒದಗಲಿ ಸರ್ವನಾಶವೆ ಬೇಕಾದರೂ ಆಗಲಿ, ಮಾನವತ್ವವನ್ನು ತಲುಪಿದ ಚೇತನ ಕಲ್ಲು ಮಣ್ಣುಗಳಂತೆ ತಟಸ್ಥವಾಗಿ ಬಿದ್ದಿರಲು ಸಾಧ್ಯವಿಲ್ಲ" – 'ಮಲೆಗಳಲ್ಲಿ ಮದುಮಗಳು', ಪುಟ ೩೩೪.



ಕಳೆದ ಶತಮಾನದ ಮಲೆನಾಡಿನ ಜಾತಿ ವರ್ಗಬದ್ಧವಾದ ಜೀವನಕ್ರಮದ ಹಿನ್ನೆಲೆಯಲ್ಲಿ ಕೆಳಜಾತಿ ವರ್ಗದವರ ಅಸಹಾಯಕತೆಯನ್ನು ಚಿತ್ರಿಸುವಂತೆಯೇ, ಎಲ್ಲ ಕಾಲದಲ್ಲೂ ಜೀವಂತವಾಗಿರುವ ಮಾನುಷ ಆಶೆ ಆಕಾಂಕ್ಷೆಗಳನ್ನೂ ಸ್ವಾತಂತ್ರ್ಯದ ಇಚ್ಛೆಯನ್ನೂ ಕವಿ ಪ್ರತಿಪಾದಿಸಿ ಸಮರ್ಥಿಸಿದ್ದಾರೆ. ಒಂದು ವೇಳೆ ಆ ಪಾತ್ರಗಳಿಂದ ಬಂಡಾಯ ಮಾಡಿಸಬೇಕಾಗಿತ್ತು ಎಂದು ಬಯಸುವುದಾದರೆ, ಆಗ ಕಾದಂಬರಿ ಕಥೆಯನ್ನು ಕಾಲ ಪರಿಸರದಿಂದ ಕಿತ್ತು ಎಸೆದಂತಾಗುತ್ತದೆ.

ಇದೇ ತಿಮ್ಮಿ ಮದುವೆಯ ವಿಚಾರದಲ್ಲೆ ಸಣ್ಣಬೀರನಿಗೆ ಆಗುವ ಉಗ್ರ ಶಿಕ್ಷೆಯನ್ನು ಚಿತ್ರಿಸಿರುವ ಕಾದಂಬರಿಕಾರ ಕೆಲವೊಂದು ಮಹತ್ವದ ಅಂಶಗಳನ್ನು ಸ್ಪಷ್ಟಪಡಿಸಿದ್ದಾರೆ. ಇಜಾರದ ಸಾಬರಿಂದ ಹುಣಿಸೆ ಬರಲಿನ ಹೊಡೆತ ತಿನ್ನಲಾರದೆ ಸಣ್ಣ ಬೀರ ಚೀತ್ಕಾರ ಮಾಡುತ್ತಾನೆ. ಅಷ್ಟರಲ್ಲಿ ತನ್ನ ಗಂಡನಿಗೂ ಮಗನಿಗೂ ಏನು ವಿಪತ್ ಸಂಭವಿಸಿದೆಯೊ ಎಂದು ಅಲ್ಲಿಗೆ ಓಡಿಬರುವ ಸೇಸಿ ಇಜಾರದ ಸಾಬಿಯನ್ನು ನೂಕಿ, ಕಟ್ಟಿದ್ದ ಕಂಬದಿಂದ ತಲೆಜೋಲುತ್ತಿದ್ದ ತನ್ನ ಮಗನನ್ನು ಆತು ಕೊಳ್ಳುತ್ತಾಳೆ.

"ದಾಂಡಿಗನೂ, ಬಲಿಷ್ಠನೂ, ಕ್ರೂರಿಯೂ ಆಗಿ, ಇಂತಹ ಧೂರ್ತ ಕರ್ಮಗಳಲ್ಲಿ ನುರಿತು ನಿಷ್ಠುರನಾಗಿದ್ದ ಇಜಾರದ ಸಾಬುಗೆ ಅದೇನಾಯಿತೋ ಏನೋ? ಇದ್ದಕ್ಕಿದ್ದಂತೆ ಸತ್ವಹೀನನಾದವನಂತೆ ನಿರ್ಬಲನಾಗಿ, ಸೇಸಿ ದುಃಖಾರ್ತೆಯಾಗಿ ಓಡಿ ಬಂದು ಎಳೆದೊಡನೆ ಅವನ ಕೈಲಿದ್ದ ಹುಣಿಸೆ ಬರಲು ತನಗೆ ತಾನೆ ಎಂಬಂತೆ ಕೈಬಿಟ್ಟು ಹೋಗಿತ್ತು ! ಅವಳು ತಳ್ಳಿದೊಡನೆ ಒಂದಲ್ಲ, ಎರಡು ಮಾರು, ಹಿಂಜರಿದು ಸ್ತಂಭೀಭೂತನಾದಂತೆ ನಿಂತುಬಿಟ್ಟನು ! ಹೊಲೆಯಳಾದರೂ, ಬಡವಳಾದರೂ, ಯಾವ ವಿಧವಾದ ವ್ಯಕ್ತಿ ವಿಶೇಷವೂ ಲವಲೇಶವೂ ಇಲ್ಲದವಳಾದರೂ, ಸಂಕಟತಪ್ತ ತಾಯ್ತನ ಎಂತಹ ಅಲ್ಪ ಸ್ತ್ರೀಯನ್ನಾದರೂ ಭೂಮಪಟ್ಟಕ್ಕೇರಿಸಿಬಿಡತ್ತದೆಯೋ ಏನೋ ಎಂಬಂತೆ, ಅವಳ ಮಾತೃ ದುಃಖಜನ್ಯ ಕ್ರೋಧದ ಸಾನ್ನಿಧ್ಯ ಭೀಷಣೆಗೆ ಕ್ಷಣಮಾತ್ರ ಭೀತಚೇತಸನಾದನು ಇಜಾರದ ಸಾಬಿ ! ಗೌಡರ ಆಜ್ಞೆಯನ್ನು ಮರೆತು ಸೇಸಿಯ ಮಾತಿಲ್ಲದ ಅಣತಿಗೆ ಒಳಗಾದವನಂತೆ, ಬೇಗ ಬೇಗನೆ ಸಣ್ಣ ಬೀರನನ್ನು ಬಿಗಿದಿದ್ದ ಹಗ್ಗದ ಕಟ್ಟುಗಳನ್ನೆಲ್ಲಾ ಬಿಚ್ಚಿ ಹಾಕಿದನು. ಪ್ರಜ್ಞೆ ತಪ್ಪಿದ ಪ್ರಾಯದ ಮಗನ ಭಾರವನ್ನು ಆತೂ ಆನಲಾರದೆ ನೆಲದ ಮೇಲೆ ಮಲಗಿಸಿದಳು ಸೇಸಿ.

"ಮೈ ಮೇಲೆ ಜಕಣಿ ಬಂದಿತೋ ಎಂಬಂತೆ, ಗೌಡರನ್ನು ಕಂಡರೆ ನೂರು ಮಾರು ದೂರದಲ್ಲಿಯೆ ಕುಗ್ಗಿ ಹೆದರಿ ಹುದುಗಿಕೊಳ್ಳುವ ಸ್ವಭಾವದ

ಸಹಜಭೀರು, ಆ ಹೊಲತಿ, ಏದುತ್ತಾ ನಿಡಿದಾಗಿ ಉಸಿರೆಳೆದುಬಿಡುತ್ತಾ ಗೌಡರ ಕಡೆ ತಿರುಗಿ ರೋದನ ಮಿಶ್ರವಾದ ತಾರಸ್ವರದಲ್ಲಿ, 'ಸ್ವಾಮಿ, ನನ್ನ ಬೇಕಾದ್ರೆ ಹೊಡೆದು ಹಾಕಿಸಿ ! ನನ್ನ ಗಂಡು ಮಕ್ಕಳನ್ನು ಕೊನ್ನಬ್ಯಾಡಿ, ದಮ್ಮಯ್ಯ ನನ್ನ ತಂದೇ .... ತಪ್ಪಾಯ್ತು ಕಾಲಿಗೆ ಬಿದ್ದೇ' ಎಂದು ಮೂರ್ಛಿತನಾಗಿ ಬಿದ್ದಿದ್ದ ಮಗನ ಪಕ್ಕದಲ್ಲಿಯೇ, ಗೌಡರು ಕೂತಿದ್ದ ಕಲ್ಲು ಮಂಚದ ದಿಕ್ಕಿಗೆ ಉದ್ದುದ್ದವಾಗಿ ಅಡ್ಡಬಿದ್ದಳು."

'ಮಲೆಗಳಲ್ಲಿ ಮದುಮಗಳು', ಪುಟ ೩೨೬–೭

ಈ ಚಿತ್ರಣದಲ್ಲಿ ಸೇಸಿಯ ತಾಯ್ತನ ತೋರಿದ ಸಾಹಸವನ್ನೂ ಕವಿ ಗಂಭೀರವಾಗಿ ಗಮನಿಸಿದ್ದಾರೆ. ತಾಯ್ತನ ಅಂತಹ ಸನ್ನಿವೇಶದಲ್ಲಿ ಯಾವ ಹೆಣ್ಣನ್ನೂ ಭೂಮಪಟ್ಟಕ್ಕೇರಿಸುತ್ತದೆ ಎಂಬುದು ಕಾದಂಬರಿಕಾರರ ಭಾವನೆ. ಕಾರಣ, ತನಗೆ ಅಪಾಯವಾಗುವುದು ಖಚಿತವಾಗಿದ್ದರೂ ಅದರ ಬಗ್ಗೆ ಅಲಕ್ಷೆ ತೋರಿ ಮಗನನ್ನು ಉಳಿಸಿಕೊಳ್ಳುವತ್ತ ಧಾವಿಸುವುದು, ದೈತ್ಯ ಸಾಹೇಬರ ಕೈಯಿಂದ ಬರಲನ್ನು ಕಿತ್ತೆಸೆದು ದಿಙ್ಮೂಢಗೊಳಿಸುವುದು, ಯಾರಲ್ಲೂ ವಿಶೇಷಾನುಭವ ಉಂಟುಮಾಡಬಲ್ಲಂಥ ವರ್ತನ, ಮರದಿಂದ ಕೆಳಬಿದ್ದ ತನ್ನ ಮರಿಯ ಮೇಲೆರಗುವ ಹುಲಿ ನಾಯನ್ನೂ ಕ್ಷಣ ಹೊತ್ತು ಮೂಕವಾಗಿಸುವಂತೆ ಗುಬ್ಬಚ್ಚಿಯೂ ಸಾಹಸಗೈಯಲು ತೊಡಗುವಂತೆ ಮಾಡುವ ತಾಯ್ತನದ ಚಿತ್ರವನ್ನು ಎ.ಸಿ. ಬ್ರಾಡ್ಲೆ sublimeಗೆ ನಿದರ್ಶನವಾಗಿ ಉದ್ಧರಿಸುತ್ತಾರೆ. ಭೂಮವಾಗಲು ಇಂದ್ರ ಚಂದ್ರಾದಿ ಕಥನಗಳೇ ಬೇಕಾಗಿಲ್ಲ. ಸಾಮಾನ್ಯರ ಅಸಾಮಾನ್ಯ ನಡೆ ಸಾಕು. ಭವ್ಯತೆಯನ್ನು ಕುರಿತು ಹಿಂದೆ, 'ಪಂಪನಲ್ಲಿ ಭವ್ಯತೆ' ಎಂಬ ಲೇಖನ ಬರೆದ ಕವಿ, ಹೀಗೆ ನುಡಿದಿದ್ದರು : "ಮಹೋಪಮೆ ಎಂದರೆ ದೀರ್ಘ ಎಂದಷ್ಟೆ ಅರ್ಥವಾಗದಿದ್ದರೂ, ದೀರ್ಘತೆಯೂ ಅದಕ್ಕೊಂದು ಅನಿವಾರ್ಯ ಲಕ್ಷಣ. ಬರಿಯ ದೀರ್ಘತೆಯಲ್ಲಿ ಏನಿದೆ? ಎಂದು ನಿರ್ಲಕ್ಷಿಸುವುದು ಅಲ್ಪಾನುಭವಕ್ಕೆ ಅಥವಾ ಅನುಭವದ ಅಲ್ಪತೆಗೆ ಕುರುಹಾಗುತ್ತದೆ. ಇನ್ನೇನಿಲ್ಲದಿದ್ದರೂ ಬರಿಯ 'ಮಹಾಗಾತ್ರ' ಮಾತ್ರದಿಂದಲೆ ಮಹತ್ತು ಸ್ಫುರಿಸುವುದನ್ನು ದಿನದಿನದ ಬಾಳಿನಲ್ಲಿ ಅನುಭವಿಸುತ್ತಿದ್ದೇವೆ. ಬಹುಶಃ ಮಹತ್ತಲ್ಲದುದಕ್ಕೆ ಬೃಹತ್ ಸಂಘಟಿಸುವುದಿಲ್ಲ ಎಂಬುದು ಸೃಷ್ಟಿರಹಸ್ಯವೋ ಏನೋ ! ಅಂತೂ ಬೃಹತ್ತಾದುದೆಲ್ಲವೂ ಮಹತ್ತಾಗಿ ತೋರುತ್ತದೆಂಬುದು ನಿರ್ವಿವಾದ. ನಾಲ್ಕರು ಅಡಿಗಳೆತ್ತರದಿಂದ ಬೀಳುವ ನಲ್ಲಿಯ ಕಿರುಧಾರೆಗೂ, ಮಹತ್ತಾದ ಮಲೆನಾಡುಗಳ ಹಿನ್ನೆಲೆಯಲ್ಲಿ ಒಂಭೈನೂರಡಿಗಳೆತ್ತರದಿಂದ ಧುಮುಧುಮುಧುಮುಕುವ ಭೀಷ್ಮ ಸುಂದರವಾದ



ಜೋಗದ ಜಲಪಾತಕ್ಕೂ ವ್ಯತ್ಯಾಸವಿರುವುದು ಗಾತ್ರದಲ್ಲಿ ತಾನೆ ! ಆದರೂ ಅವೆರಡೂ ಬೇರೆ ಬೇರೆ ಅನಂತ ದೂರಾಂತರದ ಪ್ರಪಂಚಗಳಿಗೆ ಸೇರುತ್ತವೆ: ಒಂದು ಸ್ವಲ್ಪ ಮತ್ತು ಅಲ್ಪ ; ಮತ್ತೊಂದು ದಿವ್ಯ ಮತ್ತು ಭವ್ಯ."

– "ತಪೋನಂದನ" 'ಪಂಪನಲ್ಲಿ ಭವ್ಯತೆ', ಪುಟ ೬೪

ಭವ್ಯತೆಯಾಗಲು ಗಾತ್ರ ಭವ್ಯತೆ ಅನಗತ್ಯ ಎನ್ನುವ ಕವಿಯ ಈ ಕವನಗಳನ್ನೇ ನೋಡಿ:

"ಹಸುರು ಬಿಸಿಲು, ಇಬ್ಬನಿ :
    ಅಲ್ಪ ಇಷ್ಟೆ ಸಾಕು ನನಗೆ
    ಭೂಮದ ಅನುಭೂತಿಗೆ :
ಸಮಸ್ತವೂ ಚೇತನವೂ
    ಶಕ್ತಿಯಾಗೆ ಸ್ವಾತಿಗೆ ! – ಮಂತ್ರಾಕ್ಷತೆ
.........
ಹೂದೋಂಟದಿ ಬೇಂಟೆಯಾಡಿ
    ಹಳುನುಗ್ಗುತೆ ಹುಳುವ ಹಿಡಿದು
ಟುವ್ವಿ ಹಕ್ಕಿ ತನ್ನ ಮರಿಯ
    ಕೊಕ್ಕಿನೊಳಗೆ ಕೊಕ್ಕನಿಟ್ಟು
    ಗುಟುಕು ಕೊಡುತಿದೆ !
ಗುಣಿಸು ಗುಣಿಸು ಗುಣಿಸು, ಗುಣಿಸನಂತ್ಯದಿ
ಭೂಮಮಕ್ಕುಮೀ ಅಲ್ಪಂ, ಋಷಿ ಸ್ವಾಂತದಿ ! – ಮಂತ್ರಾಕ್ಷತೆ
...............................
ಅಲ್ಪ ನಾನು ಎಂದು ಕುಗ್ಗಿ
    ಮುದುಗ ಬೇಡವೂ
ಓ ಅಲ್ಪವೆ,
    ಅನಂತದಿಂದ ಗುಣಿಸಿಕೊ
    ನೀನ್ ಅನಂತವಾಗುವೆ ! – ಮಂತ್ರಾಕ್ಷತೆ
..............................
"ಅವತಾರಗಳಲಿ ಇದೂ ಒಂದು ಹಿಮಮಣಿ !

– ಇಬ್ಬನಿಯವತಾರ

ಇದರ ಜೊತೆಗೆ ಕುವೆಂಪು ಅವರೇ ಮಾಡಿರುವ ಭೂಮತಾ ವ್ಯಾಖ್ಯಾನವನ್ನೂ ನೋಡಿ :

"ಈ ಲೋಕದ 'ಅಲ್ಪ'ದಲ್ಲಿಯೂ 'ಭೂಮ'ದ ಅನುಭೂತಿ ಸಾಧ್ಯವಾಗುತ್ತದೆ. ನಾನಾ ರೂಪಗಳಲ್ಲಿ ನಾನಾ ಪ್ರಕಾರಗಳಲ್ಲಿ ನಾನಾ ಅಂತರಗಳಲ್ಲಿ ಅದು ಅನುಭವಕ್ಕೆ ಮಿಂಚುತ್ತದೆ.... ಬಹುಶಃ ಅದಕ್ಕೆ ಪಕ್ಷಪಾತವಿಲ್ಲ. ನೀತಿ ಅನೀತಿ. ಒಳ್ಳೆಯದು ಕೆಟ್ಟದು, ಮಂಗಳ ಮಂಗಳ, ಶಿವ ಅಶಿವ ಎಂಬ ಮಾನವ ನಿರ್ಮಿತ ಶಿಷ್ಟಾಶಿಷ್ಟ ವಲಯ ಭೇದವಿಲ್ಲದೆ ಎಲ್ಲಿ ಬೇಕಾದರೂ ಅಲ್ಲಿ ಅದನ್ನು ಪಡೆಯಲು ಅರ್ಹವಾದ ಪ್ರಜ್ಞೆಗೆ, –ಅದರೆ ಸಕೃದ್ದರ್ಶನವಾಗುತ್ತದೆ. ಆಫ್ರಿಕದ ಕಾಡುಮನುಷ್ಯನ ತಾಮಸದ ರಕ್ತ ಭಯಂಕರವಾದ ದೆವ್ವಂಗುಣಿತದಲ್ಲಿ ಎಂತೊ ಅಂತೆ ಐರೋಪ್ಯ ನಾಗರಿಕ ಚರ್ಚಿನ ನವುರಾದ ಆರಾಧನೆಯಲ್ಲೂ ಅದು ಮೈದೋರುತ್ತದೆ. ದಿನ ದಿನದ ಸಂಗತಿಯಾಗಿ ಅದು ವಿಶೇಷದಂತೆ ತೋರದೆ ಸಾಮಾನ್ಯತೆಯಲ್ಲಿ ಹುದುಗಿಕೊಂಡಿದೆ. ಈ ಸಾಮಾನ್ಯತೆಯಲ್ಲಿಯೂ ಅದನ್ನು ಗುರುತಿಸುವ ಸಾಮರ್ಥ್ಯ ಕೆಲವು ವಿಶೇಷ ವ್ಯಕ್ತಿಗಳಿಗೆ ಮಾತ್ರ ಇರುತ್ತದೆ."

"ರಸೋವೈಸಃ" – 'ಭೂಮಾನುಭೂತಿ' ಪುಟ. ೭೯–೮೧

"ಭವ್ಯತಾ ಅನುಭವಕ್ಕೆ ಬಾಹ್ಯಕವಾದ ಬೃಹತ್ತು ಅನಿವಾರ್ಯವಾಗಿ ಆವಶ್ಯಕವಾದುದೇನಲ್ಲ. ವಸ್ತು ಅನಂತತೆಯ ಭಾವೋದಯಕ್ಕೆ ಕಾರಣವಾದರೆ ಸಾಕು, ತಾನೆ ಅಪಾರವಾಗಿರಬೇಕಾಗಿಲ್ಲ" – ಅದೇ ಪುಟ ೧೧೪.

ಭವ್ಯತೆ – ಭೂಮಾನುಭೂತಿಗಳ ಬಗೆಗೆ ಕುವೆಂಪು ಆಲೋಚನೆ ಆನುಭವಿಕವಾಗಿ ವ್ಯತ್ಯಾಸವಾಗಿಲ್ಲವಾದರೂ, ಗಾತ್ರ ವಿಷಯವಾಗಿ ತುಂಬಾ ಮಾರ್ಪಾಟಾಗಿದೆ. ಭೂಮಾನು ಭೂತಿ ಲೇಖನ ಬರೆದ ಮೇಲೆ "ಮಲೆಗಳಲ್ಲಿ ಮದುಮಗಳು" ಕಾದಂಬರಿ ಬರೆದದ್ದರಿಂದಲೆ, ಕವಿ ಈ ಕಾದಂಬರಿಯ ಮೊದಲಲ್ಲಿ 'ಓದುಗರಿಗೆ' ಎಂಬ ತಲೆಯ ಬರಹದಲ್ಲಿ ಈ ಹಿಂದೆ ಉದ್ಧರಿಸಿದ ಪಂಕ್ತಿಗಳನ್ನು ಬರೆದರು. "ಪಂಪನಲ್ಲಿ ಭವ್ಯತೆ" ಲೇಖನ, "ಮಹೋಪಮೆ' ಲೇಖನಗಳನ್ನು ಬರೆದಾಗಿ ಶ್ರೀರಾಮಾಯಣ ದರ್ಶನ ಕಾವ್ಯ ಬರೆಯುತ್ತಿದ್ದರು. ಪೌರಾಣಿಕ ಪ್ರಮಾಣದ ಘಟನೆಗಳಾದ್ದರಿಂದ ಅಲ್ಲಿ ಸಮಸ್ಯೆ ಬೇರೆಯರೀತಿಯದಾಗಿತ್ತು. ಸಾಮಾನ್ಯತಾ ಜೀವನದ ಬಗೆಗೆ ಹೆಚ್ಚು ಘನೀಭೂತವಾದ ಆದರ ಮೂಡಿರುವುದರಿಂದಲೆ ಈ ಕಾದಂಬರಿಯಲ್ಲಿ ಸಾಧಾರಣ ಪಾತ್ರ – ವಿಷಯ – ಘಟನೆಗಳ ಚಿತ್ರಣದಲ್ಲೂ ಅಸಾಧಾರಣ ವಿಶೇಷತೆಯನ್ನು ಕಾಣುವ ಅತಿಶಯತೆಯನ್ನು ತೋರಿದ್ದಾರೆ. ಮಹಾಕಾವ್ಯವಸ್ತು ನಿರ್ವಹಣೆಯಲ್ಲಿ ಮೂಡಿದ ಕಷ್ಟಗಳಿಗಿಂತ ಬೇರಾದುವು ಈ ಸಾಮಾನ್ಯ ಜೀವನ ಚಿತ್ರಣದಲ್ಲಿ ಮೂಡಿಕೊಳ್ಳುತ್ತವೆ, ಕವಿಗೆ. ಅಲ್ಲಿನ ಸಮಸ್ಯೆಗಳನ್ನೆಂತೊ ಇಲ್ಲಿನ ಸಮಸ್ಯೆಗಳನ್ನೂ ತಾತ್ತ್ವಿಕ



ಪರಿಪಕ್ವತೆಯಿಂದಾಗಿ ಕುವೆಂಪು ಪರಿಹರಿಸಿಕೊಂಡಿದ್ದಾರೆ. ಅದರಿಂದಲೆ ಸೇಸೆಯ ವರ್ತನದಲ್ಲಿ ಭೂಮಾನುಭೂತಿ ಸತ್ತ್ವವನ್ನು ಕಾಣುತ್ತಾರೆ.

ಆದರೆ, ತನ್ನ ಮಗನಿಗೆ ಆ ರೀತಿಯ ಯಮ ಶಿಕ್ಷೆಯಾಗುತ್ತಿರುವಾಗ ಆಗಬೇಕಾದದ್ದು ಭೂಮಾನುಭೂತಿ ಲಾಭವೊ ಅಥವಾ ಅದರ ಬಗೆಗೆ ಉಗ್ರಪ್ರತಿಭಟನ ಪ್ರತೀಕಾರವೊ ? ಆಗಬೇಕಾಗಿದ್ದುದು ಇದೇ ಹೊರತು ಅದಲ್ಲ, ಎಂದು ಪ್ರತಿಕ್ರಿಯೆ ತೋರುವ ನಾವು ಕಳೆದ ಶತಮಾನದ ಆವರಣದಲ್ಲಿ ದೃಢವಾಗಿ ಬದುಕಿರುವ ಪಾತ್ರಗಳಲ್ಲಿ ನಮ್ಮ ಯುಗದ ಬಂಡಾಯ ತತ್ತ್ವವನ್ನು ಊಡಿದರೆ ಹೇಗೆ? ಮುಖ್ಯವಾದದ್ದೆಂದರೆ ಪುತ್ರಹಿಂಸೆಯನ್ನು ಪ್ರಾಣಭೀತಿಯಿಂದಲೂ ಸಹಿಸಿಕೊಳ್ಳದೆ ತಡೆಯುವ ವಾತ್ಸಲ್ಯಜನಿತ ಧೈರ್ಯ. ಆ ಧೈರ್ಯ, ನಮ್ಮ ಕಾಲವದರಿಗೆ ಬಂಡಾಯ ತತ್ತ್ವದಿಂದಾಗಿ ಸುಲಭವಾಗಿ ಉದ್ಭವಿಸಬಹುದು. ಆದರೆ ಆ ತತ್ತ್ವ ರಕ್ಷೆಯಿಲ್ಲದಾಗ ನಾವು ನಾವೇ ಧೀರರಾಗಿ ವರ್ತಿಸಬೇಕಾದರೆ ಯಾವುದರ ಸಹಾಯ ನಮಗಿದ್ದೀತು. ತತ್ತ್ವ ನಿಷ್ಠೆಯಿಂದ ಬರುವ ಧೈರ್ಯ, ಅಧಿಕಾರಾದಿ ಮದಗಳಿಂದ ಬರುವ ಧೈರ್ಯ, ಸತ್ಯ ಸತ್ತ್ವದಿಂದ ಬರುವ ಧೈರ್ಯ, ವಾತ್ಸಲ್ಯ ಪ್ರೀತಿಯಿಂದಾಗಿ ಬರುವ ಧೈರ್ಯ, ರಾಗ ವಿಕಾರಗಳಿಂದಾಗಿ ಬರುವ ಧೈರ್ಯ– ಹೀಗೆ ನೂರು ಕಾರಣಗಳಿಂದಾಗಿ ಬರುವ ಧೈರ್ಯವುಂಟು. ಆದರೆ ಯಾವ ಧೈರ್ಯ ಮೂಲಭೂತವಾದದ್ದೋ, ವಿಶ್ವ ಸಾಮಾನ್ಯವಾದದ್ದೊ ಅದು ಶಕ್ತಿಯುತವಾದದ್ದು. ಊಳಿಗದ ಆಳಾಗಿ ತನ್ನತನವನ್ನು ಉಳಿಸಿಕೊಳ್ಳಲಾಗದೆ ಬಾಳಬೇಕಾದ ಆ ಹೆಣ್ಣಿಗೆ ಬರುವ ಧೈರ್ಯ ಯಾವುದೇ ತತ್ತ್ವ ನಿಷ್ಠೆಯಿಂದಲೊ, ರಾಜಕೀಯ ಒಲವರದಿಂದಲೊ, ಬಂದುದಾಗಿರುತ್ತದೆಂದು ಹೇಗೆ ಭಾವಿಸುವುದು? ಹಾಗೆ ತತ್ತ್ವಕ್ಕಾಗಿ ಪಾತ್ರ ಸ್ವರೂಪವನ್ನು ಸ್ವಭಾವವನ್ನು ತಿರುಚಿಹಾಕುವುದು ಸಾಹಿತ್ಯಕ ಕರ್ಮವಾಗಲಾರದು. ಮತ್ತೆ ತತ್ತ್ವದ, ರಾಜಕೀಯಾದಿ ಬೆಂಬಲದ, ಬಲವಿಲ್ಲದ ಸಾಮಾನ್ಯ ಜೀವಿಗಳಿಗೂ ಹಿಂಸೆಯನ್ನು ತಡೆಯುವ, ಪ್ರತಿಭಟಿಸುವ ಧೈರ್ಯಶಕ್ತಿಯನ್ನು ಪ್ರಕೃತಿ ಕೃಪೆಮಾಡಿರುವುದಾದರೂ ಆ ಜೀವಿಗಳ ಮೂಲಪ್ರವೃತ್ತಿಯ ಪ್ರೇರಣೆಗಳಾದ ವಾತ್ಸಲ್ಯಾದಿ ಗುಣಗಳ ಪ್ರತಿಕ್ರಿಯೆಯ ಮೂಲಕವಾಗಿಯೆ ಆಗಿದೆ.

ಹಾಗೂ, ಕಾದಂಬರಿಕಾರ ಈ ಅನಾಕರಿಕ ಶಿಕ್ಷಾ ಚಿತ್ರಣವನ್ನು ನೀಡಿರುವುದಾದರೂ ವರ್ಗವನ್ನು ಪ್ರತಿಪಾದಿಸುವುದಕ್ಕಲ್ಲ. ಹಾಗೆ ನೋಡಿದರೆ ಕೃತಿಕಾರ ತನ್ನ ಜನರನ್ನೆ expose ಮಾಡಿ ತೋರಿಸಿದ್ದಾರೆ. ಯಾವ ವರ್ಗಕವಿ ಹಾಗೆ ಮಾಡುವ ಧೈರ್ಯ ತೋರಬಲ್ಲ? ನನಗೆ ತಿಳಿದಮಟ್ಟಿಗೆ ೧೯೩೫ರ ವೇಳೆಗೇ ತನ್ನ ಜನಾಂಗದ ಎಲ್ಲ ಸಣ್ಣತನವನ್ನೂ – ಹಾದರ ಕುಡಿತ ವಂಚನೆಗಳನ್ನೂ

ಕಾನೂರು ಹೆಗ್ಗಡತಿಯಲ್ಲಿ ಕುವೆಂಪು ಬೆತ್ತಲಾಗಿ ತೋರಿಸಿದಂತೆ ಮತ್ತಾವೊಬ್ಬ ಪ್ರಮುಖ ಲೇಖಕನೂ ತನ್ನ ಜನಾಂಗದ ಬಗೆಗೆ ಮಾಡಲಾಗಿಲ್ಲ. ಹಾದರವನ್ನು ಚಿತ್ರಿಸಿದರೂ, ಅದು ತನ್ನವರಲ್ಲಲ್ಲ, ಬೇರಾರಲ್ಲೋ ಇದೆ ಎಂಬಂತೆ ಚಿತ್ರಿಸುವ ಧೈರ್ಯ–ಔದಾರ್ಯವೆ ಅಧಿಕವಾಗಿದೆ. ಕುವೆಂಪು ಕಾನೂರು ಹೆಗ್ಗಡತಿಯ ಪ್ರಧಾನ ಪಾತ್ರವೊಂದನ್ನು ತಮಗೆ ಸಾಮ್ಯವೆನ್ನುವಷ್ಟು ಮಟ್ಟಿನ ರೀತಿಯಲ್ಲಿ ಚಿತ್ರಿಸಿರುವುದರಿಂದ ಅಲ್ಲಿನ ಸಾಂಸಾರಿಕ ಚಿತ್ರವೂ ಅವರ ಕುಟುಂಬದ, ಹಾಗೂ ಆ ಸುತ್ತವೇ ಹೆಣೆದುಕೊಂಡ ಸಂಸಾರಗಳ ಚಿತ್ರವಾಗಿದೆ. ಹಾಗೂ ಕಾನೂರು ಹೆಗ್ಗಡತಿಗೂ ಹೂವಯ್ಯನಿಗೂ ಜನ ಏನೊ ಎಳೆಗಂಟು ಹಾಕಿದ ಸಮಯದಲ್ಲಿ ಬರುವ ಚಿತ್ರಣವಾದರೂ ಎಂತಹುದು. ಹೂವಯ್ಯನ ಮನಸ್ಸೂ ಆ ಘಳಿಗೆಯಲ್ಲಿ ಹೀಗೆಲ್ಲ ವರ್ತಿಸಿತು. ಈ ಎಲ್ಲ ಚಿತ್ರಕೊಡುವ ಕೃತಿಕಾರ ಅನ್ಯ ಕುಟುಂಬಗಳನ್ನು ಹೆಚ್ಚು ಔದಾರ್ಯದಿಂದ ಕಂಡಿದ್ದಾರೆ. ಇತ್ತೀಚಿನ ನಮ್ಮ ಕವಿತೆ ಕಾದಂಬರಿಗಳಲ್ಲಿ ನಾವೇನೊ ಅಂಥ ಧೈರ್ಯವನ್ನು ವಿಪರೀತವಾಗಿ ತೋರಿಸ ಹೊರಟಿದ್ದೇವೆ. ಆದರೆ ನಲವತ್ತೈದು ವರ್ಷಗಳ ಹಿಂದೆಯೆ – ಇಂದೂ ಅದ್ವಿತೀಯವಾದ ರೀತಿಯಲ್ಲಿ ಆ ಧೈರ್ಯಸ್ಥೈರಗಳನ್ನು ಕುವೆಂಪು ತೋರಿದರೆಂಬುದನ್ನು ಮರೆಯಬಾರದು. ಆದ್ದರಿಂದ ಮಲೆಗಳಲ್ಲಿ ಮದುಮಗಳಲ್ಲಿ ಆ ಶಕ್ತಿ ಇನ್ನೂ ಪರಿಣತವಾಗಿ ಮೂಡಿದೆಯೆಂಬುದನ್ನು ಕಾಣದಿದ್ದರೆ ಪ್ರಮಾದವಾಗುತ್ತದೆ.*

ವರ್ಗ ಪ್ರಜ್ಞೆ ಬೆಳೆಯುತ್ತಿರುವ ನಮ್ಮ ಕಾಲದಲ್ಲಿ ಯಾವೊಬ್ಬ ಕೃತಿಕಾರನನ್ನೂ, ಅವನು ತನ್ನದಲ್ಲದ ವರ್ಗದ ಬಗ್ಗೆ ಸಂವೇದನೆಯುಳ್ಳವನಾಗಿಲ್ಲ, ಎಂದು ಟೀಕಿಸುವುದು ಸುಲಭವಾಗಿದೆ. ಒಂದು ರೀತಿಯಲ್ಲಿ, ಯಾವೊಬ್ಬ

* "ಸ್ವಭಾವತಃ ಕಲ್ಲೆದೆಯವರಾಗಿಲ್ಲದ" ಕಲ್ಲಯ್ಯನವರು, ತಮ್ಮ ಮೆಲ್ಲೆದೆಯನ್ನು ಜನ ದುರುಪಯೋಗ ಪಡಿಸಿಕೊಳ್ಳುವುದರಿಂದ ರಕ್ಷಿಸಿಕೊಳ್ಳಲು, ಆ ಕಾಠಿಣ್ಯವನ್ನು ಆರೋಪಿಸಿಕೊಂಡುದಾಗಿ ತಿಳಿಸುತ್ತಾರೆ. ಆ ಕೌರ್ಯಕ್ಕೆ ಪ್ರತಿಫಲವಾಗಿ – ಪ್ರತೀಕಾರವಾಗಿ ಹೊಟ್ಟೆನೋವು, ತಲೆನೋವು, ಹಲ್ಲು ನೋವು, ವಾಂತಿ, ಭೇದಿ ; ದುಃಸ್ವಪ್ನಗಳಿಂದ ನಿದ್ದೆಗೇಡು, ವಿಕಾರಗಳನ್ನು ಕಂಡು ಬೆದರುವ ಮಾನಸಿಕ ಭ್ರಾಂತಿ, ಏನೋ ಅಚಿಂತ್ಯ ಅಧೈರ್ಯ... ಮನಃಕ್ಲೇಶ – ಇತ್ಯಾದಿ ತೊಂದರೆಗಳಿಂದ ಕಲ್ಲಯ್ಯನವರು ನರಳುವುದನ್ನೂ ಕಾದಂಬರಿಕಾರ ಚಿತ್ರಿಸುತ್ತಾರೆ. ಇದೆಲ್ಲ ಏನನ್ನು ಪ್ರತಿಪಾದಿಸುತ್ತದೆ ? ಸೇಸಿಯಂತಹ ದಲಿತವರ್ಗಕ್ಕೆ – ಅವಳೊಬ್ಬಳಿಗೆ ಮಾತ್ರವೇ ಅಲ್ಲ – ಮಾಡುವ ಶಿಕ್ಷೆಗೂ ಪ್ರತಿಶಿಕ್ಷಾ ರೂಪದಲ್ಲಿ ಅವರಿಗೂ ಶಾರೀರಿಕ ತೊಂದರೆಯಾಗುತ್ತಿದ್ದಿತೆಂಬು ಯಾವ ಮನೋಧರ್ಮವನ್ನು ಸೂಚಿಸುತ್ತದೆ ?



ಮಹಾಲೇಖಕನಿಗೂ ಎಲ್ಲ ವರ್ಗವನ್ನೂ ಮೆಚ್ಚಿಸುವಂತೆ ಕೃತಿರಚಿಸ ಬರುವುದಿಲ್ಲ – ಭಾರತೀಯವಾದ ಜಾತಿ ವರ್ಗಗಳ ಪರಿಸರದಲ್ಲಿ. ಎಲ್ಲ ವರ್ಗಗಳ ಜೀವನ ವಿಧಾನಗಳನ್ನು ಆಚರಣೆಗಳನ್ನು ಸಮಸ್ಯೆಗಳನ್ನು ಅಭ್ಯಾಸ ಮಾಡುವುದೆ ಕಷ್ಟದ ಮಾತಾಗುತ್ತದೆ. ಹಾಗಿದ್ದು ಅತಿಶಯ ಸಹಾನುಭೂತಿಯಿಂದಲೂ ಕಲ್ಪನಾ ಸಾಮರ್ಥ್ಯದಿಂದಲೂ ಕೃತಿಕಾರನೊಬ್ಬ ಇಂಥ ಒಂದು ಕೃತಿ ರಚಿಸಿದಾಗಲೂ, ಕೃತಿ ಮೂಲದ ದೋಷದಿಂದಲ್ಲದಿದ್ದರೂ ಸಹಜ ಕಾರಣ ಪ್ರೇರಣೆಗಳಿಂದಾಗಿ ಕೃತಿಯನ್ನು ಗುಮಾನಿಯಿಂದಲೇ ನೋಡುವ ಸಾಧ್ಯತೆ ಇರುತ್ತದೆ. ಕೃತಿಕಾರನಿಗೆ ಇದ್ದಿಲ್ಲದ ಅಥವಾ ಇದ್ದಿರಬಹುದಾದ inhibition ಓದುಗರಲ್ಲಿ ಇದ್ದಿರಲಾರವೆಂದು ಹೇಗೆ ಭಾವಿಸಿಕೊಳ್ಳುವುದು. ತಮ್ಮ ಎರಡೂ ಕಾದಂಬರಿಗಳಲ್ಲಿ ಉಳಿದೆಲ್ಲ ವರ್ಗವನ್ನು ಸಹಾನುಭೂತಿಯಿಂದ ನೋಡಿರುವ ಕುವೆಂಪು ಹಾಗೆ ನೋಡುವುದಾದರೆ ತಮ್ಮ ವರ್ಗವನ್ನೆ ಹೆಚ್ಚು expose ಮಾಡಿದ್ದಾರೆ ಎಂಬುದಾಗಿ ಈ ಹಿಂದೆಯೇ ಸ್ಪಷ್ಟಪಡಿಸಿರುವೆ. ತಮ್ಮ ವಂಶದ ಕಥೆಯನ್ನೆ ವಸ್ತುನಿಷ್ಠವಾಗಿ ವ್ಯಾಸರು ಹೇಳುವುದು ನೆನಪಿಗೆ ಬರುತ್ತದೆ. ಇಷ್ಟಾದರೂ, ಕುವೆಂಪು ಬೆರಳ್‌ಗೆಕೊರಳ್ ಮುಂತಾದ ಕೃತಿಗಳಲ್ಲಿ ದ್ರೋಣವರ್ಗವನ್ನು ಸಹಾನುಭೂತಿಯಿಂದ ಕಂಡಿದ್ದರೂ ಕಾದಂಬರಿಗಳಲ್ಲಿ ಮಾತ್ರ ಏಕೊ ಆ ವರ್ಗದ ಬಗೆಗೆ ಒಂದು ಬಗೆಯ ಅಸಹನೆಯನ್ನು ತೋರಿರುವಂತೆ ಅನುಭವಕ್ಕೆ ಬರುತ್ತದೆ. ಆ ವರ್ಗದ ಇನ್ನೂ ಹೆಚ್ಚು ಸಂಕೀರ್ಣ ಚಿತ್ರಗಳನ್ನು ನೀಡಿ ಹಾಗೆ ಮಾಡಬಹುದಿತ್ತೆನಿಸುತ್ತದೆ. ಕೃತಿಕಾರನ ಸಾಮಾಜಿಕ ಪರಿಸರ, ಬಾಲ್ಯಾನುಭವಗಳು ಇಂಥ ಕೃತಿಗಳಲ್ಲಿ – ಕೃತಿಕಾರರ ಬಾಲ್ಯಾನುಭವದ ಮೇಲೆ ನಿಂತಿರುವ ಇಂಥ ಕೃತಿಗಳಲ್ಲಿ – ಹೀಗೆಯೆ ಕೆಲಸ ಮಾಡುವುದು ಸಹಜವಿರಬೇಕು. ಆದ್ದರಿಂದ, ಯಾವ ಭಾರತೀಯ ಮಹಾಲೇಖಕನಿಗೂ ತನ್ನ ನಾಡಿನ ಸಮಸ್ತ ವರ್ಗಗಳ ಸಂವೇದನೆಗಳನ್ನು ಸಾಮಾಜಿಕ ಸಂದರ್ಭದಲ್ಲಿ ಎಲ್ಲರೂ ತನ್ಮಯತೆಯಿಂದ ಓದುವಂತೆ ಚಿತ್ರಿಸುವುದು ಕಷ್ಟವಾಗುತ್ತದೆಂದೆ ಹೇಳಬೇಕು. ಹೀಗಿದ್ದು, ಆ ಹಾದಿಯಲ್ಲಿ ಶಕ್ತ ಸಾಧನೆಯಾಗಿದೆಯೆಂದು ಈ ಎರಡೂ ಕಾದಂಬರಿಗಳಿಗೆ ವಿಶೇಷ ಬೆಲೆ.

ಕಾದಂಬರಿ, ಕವನ ಮತ್ತು ಪೌರಾಣಿಕ ವಸ್ತುನಿಷ್ಠವಾದ ನಾಟಕ ಮಹಾಕಾವ್ಯಗಳಲ್ಲಿ ಕ್ರಿಯಾಶೀಲವಾಗಿರುವ ಕುವೆಂಪು ಪ್ರತಿಭೆ ಯಾವೊಬ್ಬ ವಿಮರ್ಶಕನಿಗೂ ಸವಾಲಾಗಿಯೆ ಉಳಿದೀತು, ಯಾವೊಂದು ಕಾವ್ಯಪ್ರಕಾರದಲ್ಲಿ ಸಂಪೂರ್ಣವಾಗಿ ವ್ಯಕ್ತವಾಗಿ ಪೂರೈಸಿ ಹೋದ ಪ್ರತಿಭೆಯಲ್ಲ ಅದು. ಆದ್ದರಿಂದಲೇ ತಮ್ಮ ಚೇತನವು ಅನಿಕೇತನವಾಗುವಂತೆ ಅದನ್ನು ಸದಾ invoke ಮಾಡುತ್ತಾರೆ

ಕುವೆಂಪು. 'ಓ ನನ್ನ ಚೇತನ ಆಗು ನೀ ಅನಿಕೇತನ' ಎಂಬ ಮಂತ್ರೋಪಾಸನೆಯ ಮಾರ್ಗದಲ್ಲಿರುವುದರಿಂದಲೇ ಮಹಾಕಾವ್ಯ ಕಾದಂಬರಿಗಳನ್ನೂ ಅಧ್ಯಾತ್ಮ ಶ್ರದ್ಧೆ ಹಾಗೂ ವಿಚಾರವಾದದವನ್ನೂ ಒಟ್ಟಿಗೆ ಬರೆಯಲು ಸಾಧ್ಯವಾಗಿದೆ. ತಾತ್ವಿಕವಾಗಿ ಆನುಭಾವಿಕವಾಗಿ "ಮನೆಯನೆಂದೂ ಕಟ್ಟದ", "ಕೊನೆಯನೆಂದೂ ಮುಟ್ಟದ" ಚೇತನ ಆಗಿರುವುದರಿಂದಲೇ ಈ ಕವಿಯ ತಾತ್ವಿಕ ಶ್ರದ್ಧೆಯನ್ನು ಇಷ್ಟಕ್ಕೆ ಮಿತಗೊಳಿಸಬರುವುದಿಲ್ಲ – ತಾನೇ ಮೋಹಿಸಿ ಮುದ್ದಿಸಿ ಬೆಳೆಸಿದುದನ್ನೂ ನಿಷ್ಠುರ ನಿರ್ವೈರ ವಿರಕ್ತಿಯಿಂದ ಕಳಚಿ ಹಾಕುವ ಶಕ್ತಿಯನ್ನೂ ಪ್ರದರ್ಶಿಸುವ ಸಾಧ್ಯತೆಯೆ ಹೆಚ್ಚಾಗಿರುವುದರಿಂದ.

(೨೧–೧–೭೯ರಂದು ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಕೇಂದ್ರದವರು ಏರ್ಪಡಿಸಿದ್ದ ಶ್ರೀ ಕುವೆಂಪು ವಿಚಾರ ಗೋಷ್ಠಿಯಲ್ಲಿ ಮಾಡಿದ ಉಪನ್ಯಾಸದ ಆಧಾರದ ಮೇಲೆ ಬರೆದ ಈ ಲೇಖನ, ಅವರೆ ಪ್ರಕಟಿಸಿದ 'ಶ್ರೀ ಕುವೆಂಪು' ಎಂಬ ಗ್ರಂಥದಲ್ಲಿ ಪ್ರಕಟವಾಗಿದೆ)

* * * *



# ಕವಿ ಕಂಡ ಕಾಣ್ಕೆ

ಕಾವ್ಯಕ್ಕೆ ಹೆಸರಿಡುವಾಗಲೆ ಶ್ರೀ ಕುವೆಂಪು ಅವರು ಅತಿಮುಖ್ಯವಾದ ಒಂದಂಶವನ್ನ ಸೂಚ್ಯವಾಗಿ ಸ್ಪಷ್ಟೀಕರಿಸಿದ್ದಾರೆ. ಅದಾವುದು ಎಂಬುದರ ಅರಿವು ಕಾವ್ಯವನ್ನು ಓದಿ ಪೂರೈಸಿದ ಮೇಲೆ ಸಹೃದಯನಾದ ಯಾರಿಗಾದರೂ ಆಗದೆ ಇರಲಾರದು. ಈ ಅಂಶವೇ ಈ ದಿನದ ಭಾಷಣದ ವಿಷಯ. ಕವಿ ಕಾವ್ಯದಲ್ಲಿ ಕಂಡ ಕಾಣ್ಕೆ ಏನು ಎಂಬುದನ್ನು ವಿವೇಚಿಸುವ ಸಾಮರ್ಥ್ಯವಾಗಲಿ, ಎಲ್ಲಕ್ಕಿಂತ ಮೊದಲಾಗಿ ಅದನ್ನು ಗ್ರಹಿಸಿಕೊಳ್ಳುವ ಶಕ್ತಿಯಾಗಲಿ ಸದ್ಯಸ್ಥಿತಿಯಲ್ಲಿ ನನಗೆ ಇಲ್ಲದಿದ್ದರೂ ತಮಗೆ ಅದರ ಪರಿಚಯ ಮಾಡಿ ಕೊಡಲು ಹೊರಟಿದ್ದೇನೆ – ನನಗೆ ತಿಳಿದ ರೀತಿಯಲ್ಲಿ. ಇದು ಬಾಲ ಆಂಜನೇಯನ ಸಾಹಸವಾಗುವುದೋ ಏನೋ ಎಂಬ ಭೀತಿ ಬೇರೆ ನನ್ನನ್ನು ಕಾಡುತ್ತಿರುವುದರಿಂದ, ಆದಷ್ಟು ನನ್ನ ಅತಿಮಿತ ಪರಿಮಿತಿಯಲ್ಲೇ ಇದ್ದುಕೊಂಡು ಈ ಕೆಲಸವನ್ನು ನಿರ್ವಹಿಸುವುದಕ್ಕೆ ಪ್ರಯತ್ನಿಸುತ್ತೇನೆ.

ಕಾಣ್ಕೆ ಎಂಬ ಪದಕ್ಕೆ ಯಾವ ಅರ್ಥವ್ಯಾಪ್ತಿ ಇದೆ ಎಂಬುದನ್ನು ಮೊದಲು ಸ್ವಲ್ಪ ತಿಳಿದುಕೊಂಡು ಮುಂದುವರಿದರೆ ವಾಸಿ ಎಂದು ತೋರುತ್ತದೆ. ದರ್ಶನ ಎಂಬ ಸಂಸ್ಕೃತ ಪದಕ್ಕೆ ಸಮಾನಾರ್ಥಪದವಾಗಿ, ಕಾಣ್ಕೆ ಎಂಬ ಮಾತನ್ನು ಕನ್ನಡದಲ್ಲಿ ಬಳಸುತ್ತಾರೆ. ಈ ಕಾಣ್ಕೆ, ದರ್ಶನ ಎಂಬ ಪದಗಳು ಕಾಣು ಎಂಬರ್ಥವುಳ್ಳ ಮೂಲಧಾತುಗಳಿಂದಲೆ ಮೂಡಿಬಂದಿವೆ. ಅಷ್ಟನ್ನು ಹೇಳಿದರೆ ಕಾಣ್ಕೆ ಎಂಬ ಪದದ ವಿಶಿಷ್ಟಾರ್ಥವನ್ನು ಹೇಳಿದಂತಾಗುವುದಿಲ್ಲ. ಅದಕ್ಕೆ ಒಂದು ನಿದರ್ಶನವನ್ನು ಹೇಳಬಯಸುತ್ತೇನೆ. ಶ್ರೀ ಗೌಡಪಾದರು, ಒಮ್ಮೆ ತಮ್ಮ ಶಿಷ್ಯರಿಗೆ ಪ್ರತಿಭಾ ಎಂಬುದನ್ನು ವಿವರಿಸುತ್ತ, ಅದಕ್ಕೆ ನಿದರ್ಶನವೊಂದನ್ನು ಕೊಡುತ್ತಾರೆ : "ದೂರದಾವುದೋ ಊರಿಗೆ ಹೋಗಿರುವ ತನ್ನ ಪತಿ ನಾಳೆಯ ದಿನ ಹಿಂತಿರುಗುತ್ತಾನೆ" ಎಂದು ತನ್ನ ಅತ್ತೆಯೊಡನೆ ಹಣ್ಣೊಬ್ಬಳು ಹೇಳುತ್ತಾಳೆ. ಇಲ್ಲಿ, ಅವಳು ತನ್ನ ಪತಿಯು ನಾಳೆ ಬರುತ್ತಾನೆ ಎಂದು ಯಾವ ಬಾಹ್ಯ ಘಟನೆಯಿಂದಲೂ ತಿಳಿಯಲಾಗದಿದ್ದರೂ ಹಾಗೆಂದು ಅನುಭವಿಸುತ್ತಾಳೆ. ಅವಳ ಅನುಭವಕ್ಕೆ ಬರುವ ಆ ಅನ್ನಿಸಿಕೆಯಲ್ಲಿ ನಾವು ಪ್ರತಿಭೆಯ ಮೊದಲ ಸುಳುಹನ್ನು ಕಾಣುತ್ತೇವೆ.

ಪ್ರತಿಭೆಯನ್ನು ವಿವರಿಸಲು ಅವರು ಹೇಳಿದ ಈ ಕಥೆಯೇ, ನಮ್ಮ ಕಾಣ್ಕೆಯನ್ನು ಕೂಡ ಸ್ವಲ್ಪ ಮಟ್ಟಿಗೆ ವ್ಯಾವರ್ಣಿಸಬಲ್ಲುದು. ಆ ಹೆಣ್ಣಿಗಾಗುವ ಅನ್ನಿಸಿಕೆಯಲ್ಲಿ ನಾನು ಕಾಣ್ಕೆಯ ಮೊದಲ ಹೊಳಹನ್ನು ಗುರುತಿಸಬಹುದು. ಆ ಅನ್ನಿಸಿಕೆಗೆ ಕ್ರಿಯಾ ಶಕ್ತಿ ರೂಪದಿಂದ ಹಿಂದೆ ಇರುವುದೇ ಪ್ರತಿಭಾ. ಆದರೆ ಈ ಅನ್ನಿಸಿಕೆ ಬರಿಯ ಭ್ರಮೆಯಾಗಲಿ, ಊಹೆಯಾಗಲಿ ಅಲ್ಲ. ಅವಾವೂ ಆಗಿರದ ಹೃದಯಾನುಭವವೇದ್ಯಮಾತ್ರವಾದ ಒಂದು ಮಿಂಚು ಯಾವುದೊ ತರಂಗಮಾನಕ್ಕೆ ತನ್ನ ಹೃದ್ಯಂತ್ರವನ್ನು ಶ್ರುತಿಗೊಳಿಸಿದಾಗ ಸಂವೇದ್ಯವಾದ, ಮಿಂಚಿನಂತೆ ಹೊಳೆದು ಅನುಭವಗೋಚರವಾಗಿ ಮಾಯವಾದ ಸತ್ಯ – ಈ ಕಾಣ್ಕೆ. ಇದು ಭ್ರಮೆಯಲ್ಲ, ಊಹೆಯಲ್ಲ ; ಆದರೆ ನನ್ನಿಯ ಮೊದಲ ಹೊಳಹು ಮಾತ್ರ.

ಇದೇ ಮಿಂಚು ತೀಕ್ಷ್ಣವೂ ಸತ್ಯತರವೂ ಆದಾಗ ಕಾಣ್ಕೆಯನ್ನು ಸ್ಪಷ್ಟವಾಗಿ ಗುರುತಿಸಬಹುದು. ಜ್ಯೋತೀಶ್ಶರೀರಿ ಪರಬ್ರಹ್ಮನನ್ನು ಎದುರಿಗೇ ಕಂಡೆವೆಂದು ಉದ್ಘೋಷಿಸಿದ ಉಪನಿಷತ್ತಿನ ಋಷಿವರೇಣ್ಯರ ಅನುಭವದಲ್ಲಿ ಈ ದರ್ಶನದ ಉನ್ನತಾವಸ್ಥೆಯನ್ನು ಕಾಣಬಹುದು. ಹಾಗೆಯೆ ಇದು ನಾನಾ ಭೂಮಿಕೆಗಳಲ್ಲಿ, ನಾನಾ ಅವಸ್ಥೆಯಲ್ಲಿ ಸಂಚರಿಸಬಲ್ಲುದು, ಎಂಬುದನ್ನು ಮರೆಯಬಾರದು. ಋಷಿಗಳೆಂತೊ ಅಂತೆ ಮಹಾಕವಿಯೂ ಶ್ರೇಷ್ಠ ವಿಜ್ಞಾನಿಯೂ ಒಂದೊಂದು ರೀತಿಯಲ್ಲಿ ದ್ರಷ್ಟಾರರೆ ಆಗಿರುತ್ತಾರೆ. ವಿಜ್ಞಾನಿ ಯಾವುದೊ ಸತ್ಯವನ್ನು ಕಾಣಬೇಕೆಂದು, ಯಾವ ಯಾವುವೊ ಸೂತ್ರಗಳನ್ನು ಪ್ರಯೋಗಿಸಿ, ಎಂಥೆಂಥ ಪ್ರಯೋಗಗಳನ್ನು ನಡೆಸಿದರೂ ಕೊನೆಗೆ ಯಾವುದೊ ಒಂದು ಮಟ್ಟದಲ್ಲಿ ಸತ್ಯವನ್ನು, ಸಿದ್ಧಿಯನ್ನು ಕಾಣದಾಗುತ್ತಾನೆ. ಆಗ ಯಾವುದೊ ಸುಮುಹೂರ್ತದಲ್ಲಿ ಅವನಿಗೆ ಒಂದು ಮಿಂಚಿನ ಹೊಳಹಿನ ಅನುಭವವಾಗಿ ಆವಿಷ್ಕಾರ ರೂಪವಾದ ಸತ್ಯ ಸಂಶೋಧನವಾಗುತ್ತದೆ. ಎಷ್ಟೋ ವೇಳೆ ಅವನು ಕಾಣುವ ಸತ್ಯ ಅವನ ಪ್ರಯೋಗ ಸೂತ್ರಗಳೊಂದಕ್ಕೂ ಸಂಬಂಧಪಡೆಯದುದಾಗಿರುತ್ತದೆ. ಇದು ದರ್ಶನದ ರೀತಿ. ಈ ದರ್ಶನವನ್ನು ಸಾಕಾರಗೊಳಿಸಲು, ಬುದ್ಧಿಗ್ರಾಹ್ಯವಾದುದನ್ನಾಗಿ ಸಿದ್ಧಾಂತವನ್ನಾಗಿಸಲು ಅನಂತರ ಬುದ್ಧಿ ಬರುತ್ತದೆ. ಆದ್ದರಿಂದಲೆ ದರ್ಶನ, ಶ್ರೀ ಕುವೆಂಪು ಅವರೇ ಹೇಳಿದಂತೆ, ಬುದ್ಧಿಪೂರ್ವಕವಾದುದಲ್ಲ ; ಬುದ್ಧಿ ಪೂರ್ವವಾದುದು. ಬುದ್ಧಿಯನ್ನೂ ನಡೆಸಿ ನುಡಿಸುವಂತಹುದು.

ಕಾವ್ಯ, ದರ್ಶನವನ್ನು ಸಹೃದಯವೇದ್ಯವಾಗಿಸಲು ಪ್ರಧಾನವಾಗಿ ಪ್ರತಿಮಾ ವಿಧಾನವನ್ನು ಕೈಗೊಳ್ಳುತ್ತದೆ. ಆದರೆ ತತ್ವಶಾಸ್ತ್ರ ಅದನ್ನು ಸೂತ್ರ ಬದ್ಧವನ್ನಾಗಿಸಲು ಪ್ರಯತ್ನಿಸುತ್ತದೆ. ಅಂತೆಯೆ ವಿಜ್ಞಾನವೂ ಕೂಡ. ಆದರೆ ಕಾವ್ಯದಲ್ಲಿ ನಾವು



ಕಾಣುವುದು ಈ ಸೂತ್ರಗಳನಲ್ಲ ; ತತ್ವಜಿಜ್ಞಾಸೆಯನ್ನಲ್ಲ. ಅಂದಮಾತ್ರಕ್ಕೆ ಕಾವ್ಯದ ದರ್ಶನ ತತ್ವಬಾಹಿರವಾದುದೆಂದು ಅರ್ಥವಲ್ಲ. ಹಾಗಾದಲ್ಲಿ ಆ ದರ್ಶನ ಬರಿಯ ಭ್ರಮೆಯಾಗಿದ್ದಿರಬಹುದು. ಹಾಗೆಯೆ ತತ್ವದ ಹಿಡಿತಕ್ಕೆ ಸಿಲುಕದ ದರ್ಶನ ಸತ್ಯವಲ್ಲವೇ ಅಲ್ಲವೆಂದೂ ಹೇಳಲಾಗುವುದಿಲ್ಲ. ಅನೂಚಾನವಾಗಿ ಹರಿದು ಬಂದಿರುವ, ಸಿದ್ಧಾಂತಗೊಂಡಿರುವ ತತ್ವದ ಹಿಡಿತಕ್ಕೆ ಸಿಗದಂತೆ, ನೂತನದರ್ಶನ ಮೊದಮೊದಲು ಕಾಣಬಹುದು. ಹಾಗಾಗಿ, ಅದು ತನ್ನದೇ ಆದ ನಿಯಮಗಳನ್ನು ಸೃಜಿಸಿಕೊಳ್ಳಬೇಕಾಗುವ ಸಂದರ್ಭ ಬರಲೂಬಹುದು.

ಇಷ್ಟು ಹೇಳಿದಮೇಲೆ, ಈ ವಿಷಯವಾಗಿ ಇನ್ನೂ ಒಂದೆರಡು ಮಾತುಗಳನ್ನು ಹೇಳಿ ವಿಷಯದತ್ತಸಾಗುತ್ತೇನೆ. ಮೊನ್ನೆಯ ದಿವಸ ಅಧ್ಯಕ್ಷ ಪೀಠದಲ್ಲಿದ್ದ ಆಚಾರ್ಯ ಶ್ರೀ ಡಿ. ಎಲ್. ನರಸಿಂಹಾಚಾರ್ಯರು, ಕಾವ್ಯದಲ್ಲಿ ತತ್ವ ಹೇಗಿರುತ್ತದೆ, ಎಂಬುದನ್ನು ಹೇಳುವಾಗ ಒಂದು ಸುಂದರವೂ ಧ್ವನಿಪೂರ್ಣವೂ ಆದೊಂದು ಉಪಮಾನವನ್ನು ಕೊಟ್ಟರು : ಹೂವಿನೊಡನೆ ಪರಿಮಳ ಬರುವಂತೆ ಕಾವ್ಯದಲ್ಲಿ ತತ್ವ ಮೂಡಿಬರುತ್ತದೆ. ಎಂದು ಅವರು ಹೇಳಿದ ಮಾತು ಅಲಂಕಾರ ಮಾತ್ರವಲ್ಲ. ಹೂವಿನ ಯಾವೊಂದು ಮೂಲೆಯಲ್ಲೂ ಪರಿಮಳ ಘನೀಭೂತವಾಗಿರದೆಂತೊ ಕಾವ್ಯದಲ್ಲಿ ತತ್ವವೂ ಕೂಡ ಅಂತೆಯೆ ಸರ್ವವ್ಯಾಪಿಯಾಗಿರುತ್ತದೆ. ಹಾಗೆಯೆ ಅದು ಕಾವ್ಯದೊಡನೆಯೆ ಮೂಡಿ ಬಂದುದಾಗಿರುತ್ತದೆ. ಇದನ್ನೆ ಮತ್ತೊಂದು ಉದಾಹರಣೆಯಿಂದ ಪುಷ್ಟೀಕರಿಸಲು, ಶ್ರೀ ಮಾಸ್ತಿ ಅವರ ಒಂದು ಮಾತನ್ನು ಹೇಳಬಯಸುತ್ತೇನೆ. ಶ್ರೀ ರವೀಂದ್ರರ ಸನ್ಯಾಸಿ ಎಂಬೊಂದು ನಾಟಕವನ್ನು ವಿಮರ್ಶಿಸುತ್ತ ಮಾಸ್ತಿಯವರು, ಆ ನಾಟಕದ ನಾಯಕನಾದ ಸನ್ಯಾಸಿಯ ವಿಷಯವಾಗಿ ಒಂದು ಮಾತನ್ನು ಹೇಳುತ್ತಾರೆ. "ಅಮ್ಮ, ನಾನು ಮಲಗಿದ್ದೇನಮ್ಮ" ಎನ್ನುವ ಮಗು ಮಲಗಿರಲಾರದು. ಹಾಗೆಯೆ ನಾನು ತಿಳಿದಿರುವೆನೆಂದುಕೊಂಡಿದ್ದ ಈ ಸನ್ಯಾಸಿಯೂ ಕೂಡ – ಎಂದು ಅವರು ಹೇಳಿದ ಅಮೋಘವಾದ ಮಾತು ಕಾವ್ಯ ತತ್ವಕ್ಕೂ ಒಪ್ಪುವಂತಹ ಸತ್ಯವೇ ಆಗಿದೆ. ಯಾವ ಕಾವ್ಯದಲ್ಲಿ ತತ್ವ, ನಾನು ಇದ್ದೇನೆ ಎಂದುಕೊಳ್ಳುತ್ತದೆಯೋ ಆ ಕಾವ್ಯ ದರ್ಶನಕಾವ್ಯವಾಗಿರಲಾರದು. ಮಹಾಕಾವ್ಯದರ್ಶನ ಜ್ಯೋತ್ಸ್ನಾ ಸೌರಭದಂತೆ.

ಒಂದೊಂದು ಹೂವಿಗೂ ಒಂದೊಂದು ವಿಶಿಷ್ಟವಾದ ಸೌರಭಸಂಪತ್ತಿರುತ್ತದೆ. ಆದರೆ ಹಾಗೆಯೆ ಮಹಾಕಾವ್ಯದ ದರ್ಶನ ಒಂದೇ ಆಗಿರಲಾರದು. ಅನೇಕ ಫಲ ಮಾಧುರ್ಯವನ್ನು ಸೂಸುವ 'ಮದನ ಮಸ್ತಿ' ಎಂಬ ಹಸುರು ಹೂವಿನಂತೆ – ಮಹಾ ಕಾವ್ಯದಲ್ಲಿ ದರ್ಶನವಿರುತ್ತದೆ. ಯಾವ ಭಾವದಿಂದ ಆಘ್ರಾಣಿಸಿದರೂ

ಆಯಾ ಫಲ ಮಾಧುರ್ಯವಾಗಿ ಅನುಭವಿತವಾಗುತ್ತದೆ. ಒಬ್ಬರಿಗಾದ ಅನುಭವ ಮತ್ತೊಬ್ಬರಿಗಾಗದೆ ಇರಬಹುದು. ಹಾಗೆಂದು ಅವರ ಕಾಣ್ಕೆಯ ಸತ್ಯ ಮತ್ತೊಬ್ಬರ ಅನುಭವ ಅಲ್ಲ, ಎಂದು ಭಾವಿಸುವುದು ತಪ್ಪು. ಶ್ರೀರಾಮಾಯಣದರ್ಶನಂ ಕಾವ್ಯದಲ್ಲಿ ನಾನು ಯಾವುದನ್ನು ದರ್ಶನವೆಂದು ಅಂದುಕೊಂಡೆನೊ ಅದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಆದರೆ ಅದು ಹಾಗೆ ತೋರದಿದ್ದರೆ ಆಶ್ಚರ್ಯವೇನೂ ಇಲ್ಲ. ಅದರಿಂದ ನನ್ನ ನಿಮ್ಮ ಅನುಭವ ಭಿನ್ನತೆಯನ್ನು ಹೇಳಿದಂತಾಗುವುದು ಮಾತ್ರವಲ್ಲದೆಯೆ, ಕಾವ್ಯದರ್ಶನದ ಮಹತ್ವವನ್ನು ಒಪ್ಪಿಕೊಂಡಂತಾಗುತ್ತದೆ.

ಶ್ರೀರಾಮಾಯಣ ದರ್ಶನಂ ಕಾವ್ಯವನ್ನು ಓದಿ ಮುಗಿಸಿದಮೇಲೆ ನನ್ನ ಅನುಭವಕ್ಕೆ ಬಂದ ಇಡೀ ಕಾವ್ಯವನ್ನೆ ವ್ಯಾಪಿಸಿಕೊಂಡಿರುವ ದರ್ಶನವೆಂದರೆ 'ಪಾಪಿಗುಂ ಉದ್ಧಾರಕೆಡೆಯಿಹುದೌ ಸೃಷ್ಟಿಯ ಮಹದ್ ವ್ಯೂಹರಚನೆಯಲಿ' ಎಂಬುದು. ಸಮಗ್ರ ಕಾವ್ಯವೆ ಈ ದರ್ಶನವನ್ನು ಧ್ವನಿಗೈಯುತ್ತಿರುವಂತೆ ನನಗೆ ಒಮ್ಮೆ ಅನ್ನಿಸಿತು. ರಾವಣನಾಗಲಿ, ವಾಲಿಯಾಗಲಿ, ಮಂಥರೆಯಾಗಲಿ, ಕೈಕೆಯಾಗಲಿ, ಶೂರ್ಪನಖಿಯಾಗಲಿ ಧಾನ್ಯಮಾಲಿನಿಯಾಗಲಿ – ಎಲ್ಲರೂ ಮಹಾತ್ಮರಾಗಲು, ಪೂಜ್ಯರಾಗಲು ಸಾಧ್ಯ. ಸಾಧ್ಯ ಎಂಬುದು ಮಾತ್ರವೆ ಏನು ; ಆಗಿಯೇ ಇದ್ದಾರೆ. 'ನೀನು ಪಾಪಿಯಲ್ಲ, ಪ್ರೇಮ ಭೈರವಿ, ಮಂಥರಾ ಮಹಾಲಕ್ಷ್ಮಿ', ಎಂದು ಭರತನೊಡನೆ ನಾವೂ ಕೂಡ ಮಂಥರೆಗೆ ನಮಸ್ಕರಿಸುತ್ತೇವೆ. 'ನಿನ್ನಾತ್ಮಮಂ ಪೆತ್ತ ತಾಯ್', ಎಂಬಂತೆ ಮೂಕ ಮೌನಿಯಾಗಿ, ಅವನತ ಮುಖಿಯಾಗಿ, ನಿಂತ ಕೈಕೆಯ ಅಡಿಗೆ, ಶ್ರೀರಾಮಚಂದ್ರನೊಡನೆ ನಾವೂ ಕೂಡ ಮುಡಿ ಚಾಚುತ್ತೇವೆ. ತನ್ನ ಪಾಪದ ಭಾರವನ್ನು ಅರಿತು ದುಃಖಿತನಾಗಿದ್ದ ರಾವಣ, ಗೌರವ ಭಕ್ತಿಯಿಂದ ಧಾನ್ಯಮಾಲಿನಿಯ ಪದತಲಕ್ಕೆರಗಿದಾಗ, ಅವರಿಬ್ಬರಿಗೂ ನಾವು ಭಕ್ತಿಪೂರ್ವಕವಾಗಿ ನಮಸ್ಕರಿಸುತ್ತೇವೆ. ಹೀಗೆಯೆ ಇತರರಿಗೂ ಕೂಡ.

ಪಾಪಿಗೂ ಕೂಡ ಉದ್ಧಾರಕ್ಕೆಡೆಯಿದೆ ಎಂಬ ಕಾಣ್ಕೆ ಶ್ರೀ ಕುವೆಂಪು ಅವರು ಮೊಟ್ಟಮೊದಲು ಕಂಡುದೆಂದು ನಾನು ಹೇಳುತ್ತಿಲ್ಲ. ಅದು ಅತಿ ಪ್ರಾಚೀನವೆಂಬುದನ್ನು ಬಲ್ಲೆ. ಆದರೆ ಕಾವ್ಯದಲ್ಲಿ ಅದು ಮೈವೆತ್ತಿರುವ ರೀತಿ, ಅಪೂರ್ವವಾಗಿದೆ ಎಂದು ಅನ್ನಿಸದಿರದು.

ಇಂಗ್ಲಿಷ್ ಕಾವ್ಯವಿಮರ್ಶೆಯಲ್ಲಿ Poetic Justice ಎಂಬೊಂದು ಮಾತನ್ನು ವಿಶೇಷವಾಗಿ ಬಳಸುವುದುಂಟು. ಈ ಸೂತ್ರದ ಹಾದಿ ಹಿಡಿದು ರಚಿತವಾಗುವ ಕಾವ್ಯಗಳಲ್ಲಿ ನಾವು ಒಂದಂಶವನ್ನು ಸ್ಪಷ್ಟವಾಗಿ ಕಾಣಬಹುದು. ಪಾಪಿಯಾದವನು ತನ್ನ ಪಾಪಕ್ಕೆ ಪ್ರಾಯಶ್ಚಿತ್ತರೂಪವಾದ ಶಿಕ್ಷೆಯನ್ನೂ, ಮಹಾತ್ಮನಾದವನು ತನಗೆ



ತಕ್ಕವಾದ ಫಲವನ್ನೂ ಪಡೆಯಲೇಬೇಕು. ಇದು ಈ ಸೂತ್ರವನ್ನು ನಂಬಿದ ಕವಿಯ ನಂಬಿಕೆ. ಇಲ್ಲಿ ಕವಿ ಪಾತ್ರಗಳ ಹಣೆಯ ಬರಹವನ್ನು ಬರೆಯುವ ವಿಧಿಯಾಗಿರುವಂತೆಯೆ ಅವರವರ ಪಾಪಪುಣ್ಯಗಳನ್ನು ತೂಗಿ ನ್ಯಾಯವನ್ನು ದಯಪಾಲಿಸುವಂತಹ ಯಮಧರ್ಮನೂ ಆಗುತ್ತಾನೆ. ಇಷ್ಟು ಪಾಪಕ್ಕೆ ಇಷ್ಟು ಶಿಕ್ಷೆ ; ಇಂಥ ಪುಣ್ಯಕ್ಕೆ ಇಂಥ ಫಲ–ಎಂಬುದು ಅವನಿಗೆ ಮೊದಲೇ ಗೊತ್ತಿರುವ ನಿಗದಿಗೊಂಡಿರುವ ಅಂಶ. ಹೀಗೆ ಮೊದಲೇ ಕೈಯಲ್ಲಿ ಹಣೆಬರಹವನ್ನು ಬರೆಯುವ ಲೇಖಣಿಯನ್ನು, ಪಾಪಪುಣ್ಯಗಳನ್ನು ತೂಗುವ ತಕ್ಕಡಿಯನ್ನು ಹಿಡಿದುಕೊಂಡು ಕಾವ್ಯರಚನೆಗೆ ಹೊರಡುವುದು ಮಹಾಕವಿಗೆ ಸಾಧ್ಯವಾಗದು. ಕಾವ್ಯಸೃಷ್ಟಿಯು ಮಹತ್ತರವಾದುದಾಗಲು ಕವಿದೃಷ್ಟಿಯೂ ಕೂಡ ವಿಶಾಲತರವಾದುದಾಗಿರಬೇಕಾಗುತ್ತದೆ. ಹಾಗಿಲ್ಲದಿದ್ದರೆ ಅದು ಸಿನಿಮಾಸೃಷ್ಟಿಯಾಗುತ್ತದೆ. ಆದರೆ ಮಹಾಕವಿಗೂ ತನ್ನದೆ ಆದ ಒಂದು ಧರ್ಮವಿರುತ್ತದೆಂಬುದನ್ನು ಮರೆಯಬಾರದು. ಆ ಧರ್ಮ Poetic Justice ಅಲ್ಲ ; ಅದು ವಿಶ್ವಧರ್ಮ. ಈ ಮಾತನ್ನು ಹೇಳುವಾಗ ರೋಮನ್ ಸಂತಚಕ್ರವರ್ತಿಯಾದ ಮಾರ್ಕಸ್ ಆರಿಲಿಯಸ್ ಅಂಟೊನಿನಸನು ಹೇಳಿದ ಮುತ್ತಿನಂಥ ಒಂದು ಮಾತು ನೆನಪಿಗೆ ಬರುತ್ತದೆ : "ಹೇ : ಕಮ್ಮಾರ, ನೀನು ಕಬ್ಬಿಣದ ಚೂರನ್ನು ಕತ್ತರಿಸಿ ಬೀದಿಗೆ ಎಸೆಯುತ್ತಿರುವೆ. ಹಾದಿಯಲ್ಲಿ ಹೋಗುವ ಮತ್ತೊಬ್ಬನು ಅದನ್ನು ಬೇರೊಂದೆಡೆಗೆ ಎಸೆಯುತ್ತಾನೆ. ಆದರೆ ಭೂಮಿಯು ಅದನ್ನು ಎಲ್ಲಿಗೆ ತಾನೆ ಎಸೆಯಬಲ್ಲುದು ?" ಎಂದು ಹೇಳುವ ಅವನ ಅಮೃತ ವಾಕ್ಯವೆ ಮಹಾಕವಿಯ ವಿಶ್ವಧರ್ಮವನ್ನೂ ಸ್ಪಷ್ಟಪಡಿಸಬಲ್ಲದು.

ಪಾಪಿಯಾದವನು ಕಷ್ಟಕ್ಕೊಳಗಾಗಬೇಕು; ಪುಣ್ಯವನ್ನು ಧರ್ಮಾತ್ಮ ಅನುಭವಿಸಬೇಕು ಎಂಬುದಷ್ಟೆ ನಿಯತಿನಿಯಮವಲ್ಲ. ಜಗತ್ತು ನಾಟಕ ರಂಗಭೂಮಿಯೆಂದು ಕಂಡವರು ಹೇಳಿದರೂ, ಆ ಅವರ ಕಾಣ್ಕೆಯ ಅರ್ಥ ಇದಲ್ಲ. ಜಗನ್ನಾಟಕ ಕೃತಕ ಸಿನಿಮಾ ಜಗತ್ತಲ್ಲ. ಅಲ್ಲಿಯ ನಟನಟಿಯರಿಗೆ ಇರುವ ಕ್ರೂರ ಕಟ್ಟಪ್ಪಣೆ – ಇಷ್ಟನ್ನೇ ಇಂತೇ ನಟಿಸಬೇಕೆಂಬ ಕಟ್ಟಪ್ಪಣೆ – ಈ ಜಗನ್ನಾಟಕ ಪಾತ್ರಧಾರಿಗೆ ಇಲ್ಲ. ನಮ್ಮೆಲ್ಲರನ್ನೂ ಯಾವುದೊ ವಿರಾಟ್‌ಶಕ್ತಿ ಹಿಡಿದು ನಡೆಸುತ್ತಿದೆ. ಅದನ್ನು ಕವಿಯ ಮಾತಿನಲ್ಲೆ ಹೇಳುವುದಾದರೆ

"ನೆಯ್ದಾಳುತಿದೆ ಜಗವನೊಂದತಿ ವಿರಾಣ್ಮನಂ,
ಸೂಕ್ಷ್ಮಾತಿ ಸೂಕ್ಷ್ಮತಂತ್ರದಿ ಬಿಗಿದು"

ಆದರೆ ಅಷ್ಟೆ ಅಲ್ಲ :

"ಕಟ್ಟಿಯುಂ
ಜೀವಿಗಳ್ಗಿಚ್ಛೆಯಾ ಸ್ವಾತಂತ್ರ್ಯ ಭಾವಮಂ
ನೀಡಿ" –

ನಾವು ಎಷ್ಟು ಪರತಂತ್ರರೊ ಅಷ್ಟೆ ಸ್ವತಂತ್ರರು. ಆದರೆ ಎಂದೂ ಅಂತತ್ರರಲ್ಲ; ಅನನ್ಯಪರತಂತ್ರರು. ಪಾಪಿಯ ಪಾತ್ರವನ್ನು ಅದ್ಭುತವಾಗಿ ಅಭಿನಯಿಸಿ ಗೌರವ ಭಾಜನನಾಗಬಹುದಾದ ಶ್ರೇಷ್ಠ ನಟನಂತೆ, ಪಾಪಿಯಾದವನು ತನ್ನ ಪಾತ್ರವನ್ನು ಅತ್ಯುತ್ತಮವಾಗಿ ಅಭಿನಯಿಸಿ ಮಹಾತ್ಮನಾಗಬಲ್ಲ – * ವೇದಿಕೆಯ ಪರಿಮಿತಿಯಲ್ಲಿ ನರ್ತಿಸುತ್ತಿದ್ದರೂ ಅನಂತಭಾವಾಭಿವ್ಯಕ್ತಿಯನ್ನು ಸಾಧಿಸುವ ನಾಟ್ಯಕಲಾವಿದನಂತೆ.

ತನ್ನ ನಿಯತ ಪಾತ್ರದ ಪರಿಮಿತಿಯಲ್ಲೆ ಅದ್ಭುತವಾಗಿ ಅಭಿನಯಿಸಿ ಮಹತ್ತಿಗೇರಲು ಸಾಧ್ಯ. ಅದು ಸಾಧ್ಯ, ಸತ್ಯ ಎಂಬುದನ್ನು ಶ್ರೀರಾಮಾಯಣದರ್ಶನಂ ತೋರಿದೆ. ಕವಿ ಕಂಡು ಕಡೆದ ಪಾತ್ರಗಳೂ ಅಂಥವರು. ಪಾಪಿಗೆ ಉದ್ಧಾರವುಂಟೆಂದು ಹೇಳಿದವರು ಬಹುಮಂದಿ. ಆದರೆ ಅದನ್ನು ಕಂಡವರು ಸ್ವಲ್ಪ ; ಕಂಡಂತೆ ಕಡೆದವರು ಮತ್ತೂ ಸ್ವಲ್ಪ.

ಮಂಥರೆಯ ಪಾತ್ರವನ್ನು ಕಡೆಯುವಾಗ ಕವಿ ಅಪಾರ ಅನುಕಂಪೆ ತೋರುವುದು ಮಾತ್ರವೇ ಆಗಿದ್ದಿದ್ದರೆ ಈ ಮೇಲೆಹೇಳಿದ ಕವಿಯ ಕಾಣ್ಕೆ ಹೊರಮೂಡಿ ಬರಲಾಗುತ್ತಿರಲಿಲ್ಲ. ಮನೋವಿಶ್ಲೇಷಣಾತ್ಮಕವಾಗಿ ಅವಳ ವ್ಯಕ್ತಿ ಚಿತ್ರಣವನ್ನು ಮಾಡಿ ಅವಳು ನಿರಪರಾಧಿಯೆಂದಷ್ಟನ್ನು ಸಾಧಿಸಿ ಅಲ್ಲಿಗೆ ಕೈಬಿಟ್ಟಿದ್ದರೆ ನಾವು ಆ ಪಾತ್ರವನ್ನು ಪೂಜಿಸಬೇಕಾಗಿರಲಿಲ್ಲ. ಮಂಥರೆ ವಿಶ್ವೇಶ್ವರನ ಕೈಯೊಳಗಣ ಕೈದುವೆಂಬುದನ್ನು ತೋರಿಸಿ ಅಲ್ಲಿಗೆ ನಿಲ್ಲಿಸಿದ್ದರೂ ಆಕೆಯ ಮಹತ್ತನ್ನು ಸಾಧಿಸಿದಂತಾಗುತ್ತಿರಲಿಲ್ಲ. ಹಾಗಾದ್ದರೂ, ಇಲ್ಲವೆ ಮೇಲೆ ಹೇಳಿದ ಮತ್ತಾವ ರೀತಿಯಿಂದಾಗಿದ್ದರೂ ಅವಳು ಕೊನೆಯತನಕ ಉಳಿದು ಬರಬೇಕಾಗಿರಲಿಲ್ಲ. ಶ್ರೀ ರಾಮನನ್ನು ಕಾಡಿಗೆ ಕಳುಹಿಸುವ ಕಾರ್ಯವನ್ನು ಅವಳ ಪಾತ್ರ ನಿರ್ವಹಿಸಬೇಕಾಗಿದ್ದಿತೆಂದು ಮಾತ್ರ ಒಪ್ಪಿಕೊಂಡರೆ, ಅವಳು ಆ ಕಾರ್ಯಭಾರವನ್ನು ನಿರ್ವಹಿಸಿದಮೇಲೆ ರಂಗಭೂಮಿಯಿಂದ ಹೊರಟುಹೋಗಬೇಕಾಗಿದ್ದಿತು ಎನ್ನಬೇಕಾಗುತ್ತದೆ. ಆದರೆ ಹಾಗಾಗುವುದಿಲ್ಲ. ಯಾವ ಶಕ್ತಿ ವ್ಯಕ್ತಿರೂಪಾಗಿ ಮೊದಲಿದ್ದಿತೊ ಅದು ಕೊನೆಕೊನೆಗೆ ಸರ್ವವ್ಯಾಪಿಯಾದ ಪ್ರಚಂಡಶಕ್ತಿಯಾಗುತ್ತದೆ.

* ಈ ಕಾಣ್ಕೆಯನ್ನು ಶ್ಮಶಾನ ಕುರುಕ್ಷೇತ್ರದಲ್ಲಿಯೆ ಕಂಡರೂ, ಅದರ ಪೂರ್ಣಫಲವನ್ನು ಶ್ರೀರಾಮಾಯಣದರ್ಶನಂ ಕಾವ್ಯದಲ್ಲಿ ಮಾತ್ರ ಕಾಣುತ್ತೇವೆ.



ಮೊದಲು ಯಾವುದು ವಿಲಯಶಕ್ತಿಯಾಗಿ ಮೈದೋರಿತೊ, ಅದೆ ಕೊನೆಗೆ ಕೃಪಾಶಕ್ತಿಯಾಗಿ ಪ್ರಸನ್ನವಾಗುತ್ತದೆ. ಯಾವ ಮಂಥರೆಯ ಮಮತೆ ಭರತ ಕೈಕೆಯರ ಕೇಂದ್ರಬಿಂದುವಿನ ಸುತ್ತಲೂ ತಿರುಗುತ್ತ ಉಳಿದೆಲ್ಲ ಜಗತ್ತನ್ನೂ ಮರೆತಿದ್ದಿತೊ ಅದು, ಭರತನಾಗ್ರಹ ಗ್ರಹದಘಾತಕ್ಕೆ, ಅವನ ತಿರಸ್ಕಾರ ವಿಕರ್ಷಣೆಗೆ ಗುರಿಯಾದಾಗ, ರವಿಯಾಕರ್ಷಣೆಯುಳಿದ ಭೂಮಿ, ಸೂರ್ಯವ್ಯೂಹವನ್ನೂ ಮಾತ್ರವಲ್ಲದೆ ಇತರ ತಾರಾವ್ಯೂಹವನ್ನೂ ನಡುಗಿಸುತ್ತ ನೀಲಿಮಾಶೂನ್ಯಕ್ಕುರುಳುವಂತೆ, ಅದು ಪ್ರಲಯಗೊಂಡು ಇಡೀ ರಾಮಾಯಣ ಲೋಕವನ್ನೆ ವ್ಯಾಪಿಸಿಕೊಳ್ಳುವ ಪ್ರೇಮ ಭೈರವೀಶಕ್ತಿಯಾಗುತ್ತದೆ. ರಾಮನನ್ನು ಕಾಡಿಗಟ್ಟಿದವಳೆ ಅವನನ್ನು ಹಿಂದಕ್ಕೆ ಕರೆತರಲು ಹೋಗುತ್ತಾಳೆ. ಕೊನೆಗೆ ತಾನು ಹೊತ್ತಿಸಿದ ಬೆಂಕಿ ತನ್ನಳವನ್ನು ಮೀರಿದ ಮೇಲೆ, ಅದರಲ್ಲೆ ತನ್ನನ್ನೂ ಅರ್ಪಿಸಿಕೊಂಡು, ಆತ್ಮಶಕ್ತಿಯಾಗಿ ಅದನ್ನು ಶಮನಗೈವುದಕ್ಕೆ ವ್ರತಗೊಳ್ಳುತ್ತಾಳೆ. ಹಾಗಾಗಿ ಭರತದೇವನ ಪೂಜನಭಾಜನಳಾಗುತ್ತಾಳೆ ; ಸಹೃದಯ ಪೂಜ್ಯಳಾಗುತ್ತಾಳೆ.

ಈ ಮಂಥರೆಯಂತೆಯೆ ಕೈಕೆಯಾದರೂ ಇರುವುದು. ಆದರೆ ಅವಳು ಇವಳ ಹಾಗೆ ದಳ್ಳುರಿಯಂತೆ ಎದ್ದುಕಾಣುವುದಿಲ್ಲ. ರಾವಣ ಮತ್ತೊಂದು ರೀತಿಯಲ್ಲಿ ಅದ್ಭುತನಾಗಿದ್ದಾನೆ. ಅವನ ಪಾತ್ರದಲ್ಲಿ ಇದೇ ದರ್ಶನವನ್ನು ಕಾಣುವುದಕ್ಕಿಂತ ಬೇರೊಂದು ಅತಿಶಯತರವಾದ ದರ್ಶನವನ್ನು ಕಾಣುತ್ತೇವೆ.

ರಾವಣನ ವ್ಯಕ್ತಿತ್ವ, ಮಹಾಪರಿವರ್ತನಾ ಪರಂಪರೆಯಲ್ಲಿ ಹಾಯ್ದು ಹೋಗುವುದನ್ನು ನಾವು ಶ್ರೀರಾಮಾಯಣದರ್ಶನಂ ಕಾವ್ಯದಲ್ಲಿ ಕಾಣಬಹುದು. ಅವನ ಪಾಪಾತ್ಮ ಪಾಪಮುಕ್ತವಾಗುತ್ತ ಹೋಗುವುದನ್ನೂ, ಸೀತೆಯ ವಿಷಯವಾಗಿ ಅವನಿಗಿದ್ದ ವೈಷಯಿಕ ಲಾಲಸೆ ದಗ್ಧೀಭೂತವಾಗಿ ಪವಿತ್ರತಮಪ್ರೇಮವಾಗುತ್ತ ಹೋದುದನ್ನೂ ಕಾಣುತ್ತೇವೆ. ಅದೆಲ್ಲವನ್ನೂ ಶ್ರೀ ಕವಿ ಕುವೆಂಪು ಅವರು ಒಂದೇ ಒಂದು ಉಪಮೆಯಿಂದ ಧ್ವನಿಗೈದಿದ್ದಾರೆ.

"ಸೂರ್ಯನಾತಪಕೆ ಕಾಲದ ತಪಂ ನೆರವಾಗಲಾ
ಬಜ್ಜರತನಂ ಬರ್ಪುದೊಯ್ಯನಿದ್ದಲಿಗೆನಲ್,
ಸೀತೆ ಮಂಡೋದರಿಯರಿರ್ವರ್ ತಪಂಬಡಲ್
ರಾವಣನ ಮನದ ಪೊನ್ ಹೃತ್ತಾಪಮೂಷೆಯೊಳ್
ಕುದಿಕುದಿದು ಕರಗಿ ಕಾಳಿಕೆಯನುಳಿಯದೇನ್ ?" –

ಇದ್ದಿಲು ವಜ್ರಗಳು ಒಂದೇ ಇಂಗಾಲ ವಂಶ ವೃಕ್ಷದಲ್ಲಿ ಬರುತ್ತವೆ. ಒಂದು ಉಚ್ಚ, ಮತ್ತೊಂದು ನೀಚ. ಇದ್ದಿಲನ್ನು ರಾಸಾಯನಿಕ ವಸ್ತು ಸಂಲಗ್ನದಿಂದ

ಅತ್ಯಧಿಕ ಅಗ್ನಿ ಜ್ವಾಲೆಯಲ್ಲಿ ದಗ್ಧಗೊಳಿಸಿದರೆ ವಜ್ರವಾಗುತ್ತದೆ. ವಜ್ರವನ್ನು ಸುಟ್ಟರೆ ಇಜ್ಜಲಾಗುತ್ತದೆ. ರಾಮನಾಗಲಿ, ರಾವಣನಾಗಲಿ ಊರ್ಧ್ವಲೋಕದ ಶಕ್ತಿಗಳೆ. ರಾವಣ ಪತಿತ ಶಕ್ತಿ, ರಾಮ ಅವತಾರಶಕ್ತಿ – ಅಷ್ಟೇ ವ್ಯತ್ಯಾಸ. ಸುಟ್ಟುಹೋಗಿ ಇದ್ದಲಾದ ವಜ್ರ, ರಾವಣ. ಮತ್ತೇ ಅದೂ ವಜ್ರವಾಗಬಲ್ಲುದು. ಆದರೆ, ವಜ್ರ ಇಜ್ಜಲಾದಷ್ಟು ಬೇಗನೆ ಇಜ್ಜಲು ವಜ್ರವಾಗುವುದಿಲ್ಲ. ಅದು ಅಗ್ನಿತಪಸ್ಸನ್ನಾಚರಿಸಲೇಬೇಕು. ನೂರಾರು ಶಕ್ತಿಗಳು ಅದರ ಉದ್ಧಾರಕ್ಕೆ ಕೈನೀಡಿ ಬರಬೇಕು. ಜೊತೆಗೆ ಕಾಲವೂ ಕೂಡಿಬರಬೇಕು. ವಜ್ರತ್ವವನ್ನು ಪಡೆಯುವ ಗುಣ ಅದಕ್ಕೆ ಸಹಜವಾಗಿ ಬಂದಿದ್ದರೂ, ಅದಕ್ಕೆ ತನ್ನೊಂದರ ಶಕ್ತಿಯೆ ಸಾಲದು.

ರಾವಣನ ಬಾಳನ್ನು ನೂರಾರುಶಕ್ತಿಗಳು ಪವಿತ್ರೀಕೃತವನ್ನಾಗಿ ಮಾಡಲು ಮುಂದೆ ಬರುತ್ತದೆ. ಮಹಾಪಾರ್ಶ್ವ, ಕುಂಭಕರ್ಣ, ವಿಭೀಷಣ, ಮಾರೀಚರಂತೆ ಧಾನ್ಯಮಾಲಿನಿ, ಶೂರ್ಪನಖಿ, ಅನಲೆ ಮುಂತಾದವರೆಲ್ಲರೂ ಆ ಶಕ್ತಿಗಳಾಗಿ ಬರುತ್ತಾರೆ. ಆದರೆ ಇವರೆಲ್ಲರಿಗಿಂತಲೂ ಮಿಗಿಲಾಗಿ ಸೀತಾ ಮಂಡೋದರಿಯರ ಸಾತ್ವಿಕ ತಪಸ್ಯೆ ಅವನ ಉದ್ಧಾರಕ್ಕೆ ಕಾರಣವಾಗುತ್ತದೆ. ಅವರಿಬ್ಬರೂ ಸೂರ್ಯನಾತಪವಾಗುತ್ತಾರೆ. ಕಾಲನಾತಪ ಇದ್ದೆ ಇದೆ. ಅವರೆಲ್ಲರ ಕೂಡೆ, ಮಹದಧಿಕವಾಗಿ ಅವನದೇ ಆದ ಅಂತರಂಗದ ಅಭೀಪ್ಸೆ ತಪಸ್ಸುಗಳೂ, ಮತ್ತೆ ಪವಿತ್ರನಾಗಲು ಅವನಿಗಿರುವ ನಿಯತಿ ಸಹಜವಾದ ಸೌಲಭ್ಯವೂ (ಇಜ್ಜಲಿಗೆ ವಜ್ರವಾಗಲು ಇರುವ ಅಧಿಕಾರದಂತೆ –) ಇವೆ. ಹೀಗಾಗಿ ಅವನು ರಾವಣತ್ವದಿಂದ ಶ್ರೀರಾವಣತ್ವಕ್ಕೆ ಏರುತ್ತಾನೆ ; ಕೊನೆಗೆ ಶ್ರೀರಾಮ ಸಮನಾದ ಶಕ್ತಿಯಾಗುತ್ತಾನೆ.

ರಾವಣನ ಈ ಮಹಾ ಪರಿವರ್ತನೆಗಿಂತಲೂ ಮಹತ್ತರವಾದುದೆಂದರೆ ಸೀತಾದೇವಿಯ ವಿಷಯವಾಗಿದ್ದ ಅವನ ವೈಷಯಿಕ ಮೋಹವು ದಗ್ಧೀಭೂತವಾಗಿ ಶಿಶುಪ್ರೇಮವಾಗುವುದೇ ಆಗಿದೆ. ಇಜ್ಜಲು ವಜ್ರವಾದಂತೆ ಈ ವೈಷಯಿಕ ಮೋಹವೂ ಪವಿತ್ರೀ ಕೃತವಾಗಿ ತಾಯಿ ಮಕ್ಕಳ ಅಮಲಪ್ರೇಮವಾಗಿದೆ, ನಿಜವಾಗಿ ನೋಡುವುದಾದರೆ, ಅವನ ಆ ಬಾಹ್ಯಪರಿವರ್ತನೆಗೆ ಅಂತರಂಗದ ಆಳದಲ್ಲಾದ ಈ ಮಹಾ ಸಂಕ್ರಾಂತಿಯೇ ಕಾರಣ ಶಕ್ತಿಯಾಯಿತು ಎನ್ನಬಹುದು. ಸೀತೆಯನ್ನು ವಿಷಯೇಂದ್ರಿಯ ಭೋಗ್ಯವಸ್ತುವೆಂದು ಕದ್ದು ತಂದವನೆಲ್ಲಿ ? ಆ ಮಹಾಮಾತೆಯನ್ನು ತನ್ನ ತಾಯಾಗಿ ಅಂತರಂಗದಲ್ಲಿ ಒಪ್ಪಿಕೊಂಡು, ಬಯಸಿ, ಬೇಡಿದ ಮಹಾನುಭಾವನೆಲ್ಲಿ ? ಕವಿಯ ಈ ಕಾಣ್ಕೆ ದಿವ್ಯತಮವಾದ ಅಪೂರ್ವ ದರ್ಶನವೆಂದು ನನಗೆ ಅನ್ನಿಸುತ್ತದೆ.

ಈ ಮಹಾದರ್ಶನವನ್ನು ಕವಿ ಒಂದು ಅದ್ಭುತ ಪ್ರತಿಮೆಯಿಂದ



ಧ್ವನಿಗೈದಿದ್ದಾರೆ. 'ದಶಾನನ ಸ್ವಪ್ನಸಿದ್ಧಿ' ಎಂಬ ಸಂಚಿಕೆಯೆ ಆ ಒಂದು ಪ್ರತಿಮೆಯಾಗಿದೆ, ಅದನ್ನು ಇಲ್ಲಿ ಪರಿಚಯ ರೂಪವಾಗಿ ತಿಳಿಯಬಯಸುತ್ತೇನೆ.

ಕುಂಭಕರ್ಣ, ಮಹಾಪಾರ್ಶ್ವ, ಇಂದ್ರಜಿತು ಮುಂತಾದ ಮಹಾತ್ಮರೂ ಮಹಾ ಶೂರರೂ ಯುದ್ಧದಲ್ಲಿ ಮಡಿದುಹೋದ ಮೇಲೆ, ರಣಕೇಳಿಯಲ್ಲಿ ಆಸಕ್ತನಾದ ರಾವಣ ತಾನೆ ಸೇನಾಧಿಪತ್ಯವನ್ನು ವಹಿಸಿಕೊಂಡು ಯುದ್ಧ ಭೂಮಿಗೆ ಹೋಗುತ್ತಾನೆ. ಬಹುರೂಪಿ ರಾವಣನಾಗಿ ರಾಮ ಸೇನಾವಾರ್ಧಿಯೆಲ್ಲವನ್ನೂ ಕಲಕುತ್ತ ಉನ್ಮತ್ತನಾಗಿರುವಾಗ, ಬಹುರೂಪಿ ರಾಮನಿಂದ ಪ್ರತ್ಯಭಿಘಾತಿತನಾಗಿ, ಸಿಗ್ಗುಗೊಂಡು ಹಿಂತಿರುಗಿ, ಆ ದಿನ ರಾತ್ರಿ ಕಠಿಣ ತಪಸ್ಸನ್ನು ಆಚರಿಸಲು ಶರ್ವರೀ ಮಂದಿರಕ್ಕೆ ನಡೆಯುತ್ತಾನೆ. ವರಲೋಭಿ ರಾವಣ ಅಲ್ಲಿ ದೇವಿ ಮಹಾರುದ್ರೆಯನ್ನು ಧ್ಯಾನಿಸುತ್ತಿರುವಾಗ ಸಮಸ್ತಸೃಷ್ಟಿ ರಾಕ್ಷಸ ದೃಷ್ಟಿಗ್ರಹ ಬಡಿದಂತಾಗಿರುತ್ತದೆ. ಜಗಜ್ಜನನಿಯು ತನ್ನ ಅಚಿತ್‌ತಾಟಸ್ಥ್ಯವನ್ನು ತೊರೆದು, ದೈತ್ಯ ಭಕ್ತನಿಗೆ ಮೈದೋರಬೇಕೆನ್ನುತ್ತಿರುವಾಗ, "ತಾಳ್, ಮಹಾತಾಯಿ, ತಾಳ್ !" ಎಂದು ಭೀತದೇವ ಗಣವೆಲ್ಲ ಅವಳ ಅಡಿಗೆರಗಿ, ತಾನು ಮೈದೋರಿದರೆ ಭುವನಭೀಕರ ರಾವಣ ಧರ್ಮಕ್ಷಯಾರ್ಥವಾಗಿ ವರಗಳನ್ನು ಬೇಡುತ್ತಾನೆಂದು ಒರಲಿಕೊಳ್ಳುತ್ತದೆ. ದೇವತೆಗಳ ಇಂಗಿತವರಿತ ತಾಯಿಯು ಅವರಿಗೆ ಅಭಯವೀಯುತ್ತಿರುವಾಗ, ಇನ್ನೂ ಮೈದೋರದೆ ಏಕೆ ತಾಯಿಯು ತಡೆದಳೆಂದು ಅಸಮಾಧಾನಗೊಂಡ ರಾವಣ, ತನ್ನ ತಲೆಯನ್ನು ಬಲಿಯಾಗಿತ್ತು ಅವಳನ್ನು ತೃಪ್ತಿಪಡಿಸುವುದಾಗಿ ಕತ್ತಿಗೆ ಕೈ ಹಾಕುತ್ತಾನೆ. ಆಗ ಶಿಲಾ ಶರೀರವು ವಿಕಂಪಿಸಿ, ಬೆಳಕಿನ ಸಾಗರವೇ ತನ್ನ ಮೈಮೇಲೆ ಹರಿದಂತಾಗಲು, ರಾವಣನು ಅದ್ಭುತ ಸಮಾಧಿಯ ಸ್ವಾಪ್ನಿಕ ಮನೋಮಯಕ್ಕೆ ಬರುತ್ತಾನೆ.

ಆಗ, ಅವನಿಗೆ ಮೊದಲು ಧಾನ್ಯಮಾಲಿನೀರೂಪದ ಹೆಂಗಸೊಬ್ಬಳು ಕಾಣಿಸಿ ಕೊಳ್ಳುತ್ತಾಳೆ. ಅವಳೊಡನೆ ಮಾತನಾಡುವುದಕ್ಕೆ ಹೋಗುತ್ತಾನೆ. ಆದರೆ ಅವಳು ದೆಸ ಗೆಟ್ಟ ಲಂಕಾಲಕ್ಷ್ಮಿ. ಅವಳು ತನ್ನ ದುಃಖವನ್ನು ಅವನಿಗೆ ಹೇಳಿಕೊಳ್ಳುತ್ತಾಳೆ. ಮುಂದಿನ ದಿನದ ಯುದ್ಧದಲ್ಲಿ, ಒಬ್ಬ ಪ್ರಜೆಯ ಪ್ರಾಣಹಾನಿಯೂ ಆಗದಂತೆ ತಾನೊಬ್ಬನೇ ವೈರಿಯನ್ನು ಎದುರಿಸುವುದಾಗಿ ರಾವಣ ಅವಳಿಗೆ ಭಾಷೆಕೊಡುತ್ತಾನೆ. ಹಾಗೆಂದು ಹೇಳಿ ತಾನು ಬಂದ ಕಾರ್ಯಕ್ಕಾಗಿ ಮಹಾರುದ್ರೆಯ ಬಳಿಗೆ ಹೋಗಲೇಬೇಕೆಂದು ಹೊರಡುತ್ತಾನೆ. ಆದರೆ ಆ ಅನಾಥ ಲಂಕಾ ಲಕ್ಷ್ಮಿಯೆ ರುದ್ರೆಯಾಗಿದ್ದಾಳೆ. ಆಗ ಅವಳ ಪಾದಕ್ಕೆರಗಿ, ತ್ರಿಜಗದ್‌ಭಯಂಕರ ರಾವಣ ಕಂಬನಿಗರೆಯುತ್ತಾನೆ. ತಾನು ಲೀಲಾವಶಿಯಾದ ಪಾತ್ರಧಾರಿಯೆಂದು,

ತನ್ನ ದುಃಖವೂ ಕೂಡ ಅವಳ ಲೀಲೆಯೆಂದು ರಾವಣ ತಾಯಿಯ ಮುಂದೆ ಒಪ್ಪಿಕೊಳ್ಳುತ್ತಾನೆ. ತನಗೆ ನಿಯಮಿತವಾಗಿರುವ ಪಾತ್ರವನ್ನು ಶ್ರೇಷ್ಠವಾಗಿ ಅಭಿನಯಿಸುವಂತಹ ಬಲ್ಮೆಯನ್ನು ದಯಪಾಲಿಸಬೇಕೆಂದು ಬೇಡಿಕೊಳ್ಳುತ್ತಾನೆ; ಸೀತೆ ವಶವಾಗುವಂತೆ ಹರಸೆಂದು ಪ್ರಾರ್ಥಿಸುತ್ತಾನೆ. ಜಗದಂಬೆ 'ತಥಾಸ್ತು' ಎಂದು ಮಾರ್ಮಿಕವಾಗಿ ನುಡಿಯುತ್ತಾಳೆ. ಒಡನೆಯೆ ಮಹಾ ಪ್ರತಿಮೆಯ ದರ್ಶನವಾಗುತ್ತದೆ.

ಮುಂದೆಯೆ ಯಾವುದೊ ದೇವಮಂದಿರವೊಂದು ಕಾಣುತ್ತಿದೆ. ಆ ದೇವಾಲಯದ ದೇವ ಪೀಠದ ಮೇಲೆ ಬೃಹದಶ್ವವೊಂದು ತನ್ನ ಮುಂಗಾಲುಗಳನ್ನೂರಿ, ನೆಲವನ್ನು ಒದೆದು ಖುರಪುಟ ಧ್ವನಿಮಾಡುತ್ತ, ತನ್ನ ನಿಮಿರಿದ ಅಂಗದಿಂದ ನರ್ತನಮಾಡುತ್ತಿರುವಂತೆ ಕಾಣುತ್ತದೆ. ಅಷ್ಟರಲ್ಲಿ ಇದ್ದಕ್ಕಿದ್ದಂತೆಯೆ ದೀರ್ಘಖಡ್ಗವನ್ನು ಹಿಡಿದ ಬೃಹನ್ಮುಷ್ಟಿಯೊಂದು ಆಕಾಶದಿಂದೆರಗಿ ಅದರ ಕೊರಳನ್ನು ಕತ್ತರಿಸಿಬಿಡುತ್ತದೆ. ರಕ್ತ ಪ್ರವಾಹವಾಗಿ ಹರಿಯುತ್ತದೆ. ರಾವಣ ಓಡಿಹೋಗಿ ಬಳಿಯ ಹೊಳೆಯ ದಡದಲ್ಲಿದ್ದ ದೋಣಿಯೊಂದನ್ನು ಏರುತ್ತಾನೆ. ಆ ಮುಂಡ ಕುಪ್ಪಳಿಸಿ ಕುಪ್ಪಳಿಸಿ ರಾವಣನ ಹತ್ತಿರಕ್ಕೆ ಉರುಳಿ ಬರುತ್ತದೆ. ದೋಣಿ ವೇಗವಾಗಿ ಮುಂದೆ ಹೋಗುತ್ತಿದ್ದಂತೆಯೆ ಆ ಮುಂಡವು ನದೀ ಜೀವನದಲ್ಲಿ ಬಿದ್ದು ಅದೆಲ್ಲವನ್ನು ರಕ್ತಮಯವನ್ನಾಗಿ ಮಾಡಿಬಿಡುತ್ತದೆ. ಕೆರಳಿದ ತೆರೆಗಳು ರಪ್ಪರಪ್ಪನೆ ದೋಣಿಯನ್ನು ಅಪ್ಪಳಿಸಿ ಮುಳುಗಿಸಿಬಿಡುತ್ತವೆ. ಆ ರಕ್ತ ಪ್ಲಾವಿತ ಪ್ರವಾಹದಲ್ಲಿ ಸಿಕ್ಕಿಕೊಂಡ ರಾವಣ ಈಜಿ ಮುಂದೆ ಹೋಗಲು ಯತ್ನಿಸುತ್ತಾನೆ. ಆದರೆ ಶಕ್ತಿಗುಂದಿ ಮುಳುಗುತ್ತಾನೆ. ಕೆಳಕೆಳಗೆ ಮುಳುಗುತ್ತಿರುವಂತೆಯೆ ತನ್ನ ಸಹೋದರ ಕುಂಭಕರ್ಣನನ್ನು ಕಂಡು, ಅವನನ್ನು ಕೂಗುತ್ತಾನೆ. ಬದುಕುವಾಸೆಯಿಂದ ಇಬ್ಬರೂ ಹೊಳೆಯೊಡನೆ ಹೋರಾಡಿ ದಡವನ್ನು ಸೇರುತ್ತಾರೆ. ಆದರೆ ! ಶಿಶುಗಳಾಗಿದ್ದಾರೆ. ಹತ್ತಿರದಲ್ಲಿಯೆ ಶಾಂತಮಯ ಪ್ರದೇಶದಲ್ಲಿ ರಚಿತವಾದ ಆಶ್ರಮವೊಂದು ಕಾಣುತ್ತದೆ. ವಿಸ್ಮೃತೀ ವೈತರಣಿಜೀವನದಲ್ಲಿ ಮಿಂದು ಬಂದವನಂತೆ. ಹಿಂದಿನದನ್ನು ನೆನೆದರೂ ನೆನೆಸಿಕೊಳ್ಳಲಾರದವನಾಗುತ್ತಾನೆ. ಮಗುವಂತೆ ಆಳುತ್ತಿದ್ದ ತಮ್ಮನನ್ನು ಕಂಡು ತಾನೂ ಅಳುತ್ತಾನೆ. ಅಲ್ಲಿಗೆ ಆಗ ಸೀತೆ ಬರುತ್ತಾಳೆ. ಆ ಮಕ್ಕಳನ್ನೆತ್ತಿಕೊಂಡು ಮುದ್ದಾಡುತ್ತಾಳೆ. ಹಾಲೂಡಿ ಅಪ್ಪಿಕೊಳ್ಳುತ್ತಾಳೆ.

ಆ ಅದ್ಭುತಕ್ಕೆ ಬೆಬ್ಬಳಿಸುತ್ತ ರಾವಣ, ತನ್ನತನವನ್ನು ವಿಸ್ಮರಣ ಮರಣದಿಂದೆತ್ತಿ ಸ್ಮೃತಿಗೆಳೆದು ತರುವಂತೆ 'ಮಂಡೋದರೀ' ಎಂದು ಕಿಟ್ಟನೊರಲುತ್ತಾನೆ.



ಮಂಡೋದರಿದೇವಿಯು ರಾವಣನ ಕೀರಲು ದನಿಯನ್ನು ಕೇಳಿ ಓಡಿಬಂದು ಅವನ ತಲೆಯನ್ನು ತನ್ನ ತೊಡೆಯ ಮೇಲಿರಿಸಿಕೊಂಡು ಆರೈಸಿ ಅವನನ್ನು ಜಾಗ್ರಜ್ಜಗಕ್ಕೆ ಎಳೆದು ತರುತ್ತಾಳೆ. ರಾವಣ ತಾನು ಕಂಡ ದಿವ್ಯಸ್ವಪ್ನವನ್ನು ಹೇಳುತ್ತಾನೆ. ತನಗೆ ಮಂಡೋದರೀ ಸೀತೆಯರಿಬ್ಬರೆ ರಕ್ಷಕರು, ಅದರಲ್ಲಿಯೂ ಸೀತೆಯೆ ಮಿಗಿಲಾದ ರಕ್ಷಾಶಕ್ತಿ ಎಂದು ಹೇಳಿ ತನ್ನ ಮನಸ್ಸಿನಲ್ಲಿ ಮೂಡಿಬಂದ ಆ ದೇವತೆಗೆ ನಮಸ್ಕರಿಸುತ್ತಾನೆ. ತನ್ನ ಪತಿಯ ಉದ್ಧಾರವಾಯಿತೆಂಬುದನ್ನು ಕಂಡ ಮಂಡೋದರಿ, ತನ್ನ ಬಾಳು ಧನ್ಯವಾಯಿತೆಂದುಕೊಳ್ಳುತ್ತಾಳೆ. ತಾನೇ ಸೀತೆಯನ್ನು ರಾಮನಿಗೆ ಒಪ್ಪಿಸಿಬರುವುದಾಗಿ ಹೇಳುತ್ತಾಳೆ. ಆದರೆ ರಾವಣ ತಾನೆ ರಾಮನನ್ನು ಗೆದ್ದು ಅವನನ್ನು ಕಾಣಿಕೆಯಾಗಿ ಸೀತೆಗೆ ಒಪ್ಪಿಸುವುದಾಗಿಯೂ, ಅದಕ್ಕೆ ಜಗದಂಬೆಯ ವರವಿದೆಯೆಂದೂ ಹೇಳಿ, ತನ್ನ ಹೃದಯ ಮಹಾ ಸಂಕ್ರಾಂತಿಯನ್ನು ಯಾರಿಗೂ ಹೇಳಬೇಡವೆಂದು ಬೇಡಿಕೊಳ್ಳುತ್ತಾನೆ. ಆ ವೇಳೆಗೆ ಮೂಡಿಬರುತ್ತಿದ್ದ ಉಷೆ ಅವನಿಗೆ ಎಂದಿಲ್ಲದ ಬಗೆಯಿಂದ ಕಾಣುತ್ತಾಳೆ.

ಒಟ್ಟಿನಲ್ಲಿ ಈ ಪ್ರತಿಮೆಯಿಂದ ಧ್ವನಿತವಾಗಿರುವ ಅಂಶವೆಂದರೆ – ಕುಂಭಕರ್ಣ ರಾವಣರು ಮರುಭವದಲ್ಲಿ ಸೀತಾರಾಮರ ಮಕ್ಕಳಾಗಿ, ಲವಕುಶರಾಗಿ ಹುಟ್ಟುತ್ತಾರೆ ಎಂಬುದೇ ಆಗಿದೆ. ಪುರಾಣ ಕಾವ್ಯಗಳಲ್ಲಿ ಕಲ್ಪಿತವಾಗಿರುವ ಪ್ರಕಾರವಾಗಿ ರಾವಣ ಕುಂಭಕರ್ಣರು ದ್ವಾಪರಯುಗದಲ್ಲಿ ದಂತವಕ್ತ್ರ ಶಿಶುಪಾಲರಾಗಿ ಪುನರ್ಭವಿಸಬೇಕಾಗಿತ್ತು. ಅದೇ ಇಲ್ಲಿ, ಹೀಗೆ ಪುನಸ್ಸೃಷ್ಟಿಯನ್ನು ಹೊಂದಿದೆ. ಅದರಿಂದ ಅದು ಯಾವ ಮಹೋನ್ನತಿಗೆ ಏರಿದೆ ಎಂಬುದನ್ನು ಹೇಳುವುದು ಬೇರೇನೂ ಬೇಕಿಲ್ಲ.

ಸೀತಾ ವಿಷಯವಾಗಿ ರಾವಣನಿಗಿದ್ದ ಮೋಹವೆಲ್ಲವೂ, ತನ್ನ ಇಜ್ಜಲುತನವನ್ನು ಕಳೆದುಕೊಂಡು ವಜ್ರತ್ವಕ್ಕೇರಿದ ನಿಷ್ಕಲಂಕ ಪ್ರೇಮವಾಗಿ ಪರಿವರ್ತಿತವಾಗುತ್ತದೆ. ಆದರೆ ಅದು ಪ್ರಕಟವಾಗಿ ಜಾಗ್ರತ ಮನಸ್ಸಿಗೆ ತಿಳಿದಿರುವುದಿಲ್ಲ, ಅದರ ದರ್ಶನ, ರಾವಣನಿಗೆ ಈ ಪ್ರತಿಮಾ ರೂಪದಿಂದ ಆಗುತ್ತದೆ.* ಈ ಪ್ರತಿಮೆಯನ್ನು ಓದಿದ ಕೆಲವು ಪ್ರಾಯ್ಡನ ಲಿಬಿಡೊ ತತ್ವ ಪ್ರಿಯರು ಒಂದು ಆಕ್ಷೇಪಣೆಯನ್ನು ಎತ್ತಬಹುದು ; ಮಹಾರುದ್ರೆಯು ಹೇಳತಕ್ಕ

* ಈ ಪ್ರತಿಮೆಯಲ್ಲಿ ಬರುವ ಕುದುರೆಯ ವಿಷಯವಾಗಿ, ಇಲ್ಲಿ ಅಪ್ರಕೃತವಾದರೂ ಒಂದೆರಡು ಮಾತನ್ನು ಹೇಳಬಯಸುತ್ತೇನೆ, ಕುದುರೆ ಎಂಬುದಕ್ಕೆ ವೇದ ಪುರಾಣಗಳಲ್ಲಿ ದೊಡ್ಡ ಅರ್ಥವನ್ನೇ ಕೊಟ್ಟಿದ್ದಾರೆ. ಅಶ್ವಮೇಧಯಾಗವನ್ನು ಬಹಳವಾಗಿ ಆಚರಿಸುತ್ತಿದ್ದುದಕ್ಕೂ ಒಂದು ದೊಡ್ಡ ಅರ್ಥ ಇದೆ ; ಇದು ಪ್ರಾಣಶಕ್ತಿಯ ಪ್ರತಿಮೆಯೆಂದು ಶ್ರೀ ಅರವಿಂದರು

ಮಾತುಗಳಿಗೆ ಎರಡರ್ಥವಿದೆ. ಅವಳು ಕೊಟ್ಟ ವರ ಕನಸಿನ ರೂಪಿನಿಂದ ನೆರವೇರುತ್ತದೆ. ಅಷ್ಟೇ ಅಲ್ಲ, ಈ ಎಲ್ಲವೂ ಕೂಡ ರಾವಣನ ಕನಸಿನಲ್ಲಿ ನಡೆದ ಕ್ರಿಯೆ ಮಾತ್ರವೇ ಹೊರತು ಬೇರೆಯೇನೂ ಅಲ್ಲ. ನೋಡುವುದಾದರೆ ಆ ಕನಸು ರಾವಣನ ಅತೃಪ್ತ ಆಸೆಯತೃಪ್ತಿಗಾಗಿ ಹುಟ್ಟಿಕೊಂಡದ್ದೇಹೊರತು ಮತ್ತೇನೂ ಅಲ್ಲ – ಇದು ಅವರ ಆಕ್ಷೇಪಣೆ. ಮೊದಲು ನಾವು ರಾವಣನ ಮನೋಮಯ ವ್ಯಾಪಾರವಾದ ಆ ಸ್ವಪ್ನವನ್ನು (–ಸ್ವಪ್ನವೆಂದು ಅದನ್ನು ಕರೆಯಲಾಗದಿದ್ದರೂ) ಯಾವುದೊ ಮನಶ್ಶಾಸ್ತ್ರದ ಒಂದು ಸೂತ್ರವನ್ನು ಹಿಡಿದು ಅಳೆಯುವುದಕ್ಕೆ ಹೋಗುವುದು ಯೋಗ್ಯವೇ, ಎಂಬುದನ್ನು ನೋಡಬೇಕು. ಮೊದಲು ಅದು ಸ್ವಪ್ನವೇ? ಸ್ವಪ್ನ ಶಾಸ್ತ್ರ ಅದಕ್ಕೆ ಹೇಗೆ ಅನ್ವಿತವಾಗಬಲ್ಲದು ಎಂಬುದನ್ನೂ ವಿಚಾರಿಸಿಕೊಳ್ಳಬೇಕು. ಆದರೂ ಅದನ್ನು ಒಂದು ಬಗೆಯ ಸ್ವಪ್ನವೆಂದೆ ಭಾವಿಸಿಕೊಂಡರೂ ಕೂಡ, ಎಲ್ಲ ಸ್ವಪ್ನಗಳೂ ಒಂದೇಸೂತ್ರಕ್ಕೆ ಹೊಂದುತ್ತವೆಯೇ ಎಂಬುದನ್ನು ವಿಚಾರಿಸಬೇಕು. ಆ ವಿಚಾರವಾಗಿ ಯೂಂಗ್ ಹೇಳುವ ಮಾತುಗಳನ್ನೇ ಕೇಳಿ :

. .“The view that dreams are merely imaginary fulfilments of suppressed wishes has long ago been superseded ........... Dreams may give expression to ineluctable truths. to philosophical pronouncements, illusions, wild fantasies, memories, plans, anticipations, irrational experiences, even telepathic visions,

---

ಹೇಳುತ್ತಾರೆ. ಗ್ರೀಕ್ ಪುರಾಣದಲ್ಲಿ, ದೇವಾಶ್ವದ ಖುರಪುಟದಿಂದ ಸರಸ್ವತಿಯು ಹರಿದು ಬರುತ್ತಾಳೆಂಬ ಕಥೆಯಿದೆ. ಯೂಂಗ್ ಕೂಡ ಈ ವಿಚಾರವಾಗಿ ತನ್ನ ‘ಸ್ವಪ್ನ ವಿಶ್ಲೇಷಣೆ’ ಎಂಬ ಪ್ರಬಂಧದಲ್ಲಿ ಹೇಳುತ್ತಾನೆ :

* “Horse is an archetype that is widely current in mythology and folk-lore. As an animal it represents the non-human - Psyche, the sub human, animal side, and therefore the unconscious. This is why the horse in folklore some-times sees visions, hears voices, and speaks. As a beast of burden it is closely related to the motber archetype; the Valkyries bear tbe dead hero to valhalla and the Trozen horse encloses the Greeks. As an animal lower than man it represents the lower part of the body and the animal drives that take their rise from there. The horse is dynamic power and means of locomotion; it carries one away like a surge of instinct. It is subject to panics like all instinctive creatures who lack higher consciousness. Also it has to do with sorcery and magical spells-especially the black, night horse which heralds death.”



and heaven knows what besides..... Dreams give information about the secrets of the inner life and reveal to the dreamer hidden factors of his personality. As long as these are undiscovered, they disturb his waking, life and betray themselves only in the forms of symptoms.......... The doctor should regard every dream as a new departure. It goes without saying that he should hold no pre-conceived opinions based upon a particular theory, but stand ready in every single case to construct a totally new theory of dreams,”

ಯೂಂಗನ ಈ ಮಾತುಗಳಿಗಿಂತ ಇನ್ನೂ ಹೆಚ್ಚು ಹೇಳುವುದು ಸಾಧ್ಯವಿಲ್ಲ. ಆದರೆ ಒಂದು ಮಾತನ್ನು ಮಾತ್ರ ಹೇಳಬಹುದು. ಅತೃಪ್ತ ಆಸೆಗಳು ತಮ್ಮ ಪೂರೈಕೆಯನ್ನು ಕನಸಿನಲ್ಲಿ ಕಂಡುಕೊಳ್ಳುತ್ತವೆಂದು ಒಪ್ಪುವ ನಾವು, ಅದೇ ಅತೃಪ್ತ ಆಸೆ ಅತಿ ಮಹತ್ತರವಾದುದೂ, ಈ ಭವದಲ್ಲಿ ತೃಪ್ತಿಹೊಂದಲಾಗದುದೂ ಆಗಿ; ಅದೇ ತೀವ್ರವಾಗಿ ಆಗಬೇಕೆಂದು ಬಯಸಿದಾಗ ಮರುಭವದಲ್ಲಿ ತನ್ನ ಆಗುವಿಕೆಯನ್ನ ಕಾಣಬಲ್ಲದು, ಎಂಬುದನ್ನೇಕೆ ಊಹಿಸಿಕೊಳ್ಳಲೂ ಅಸಮರ್ಥರಾಗಿದ್ದೇವೆ? ದುರ್ಬಲ ಬಯಕೆ ತನ್ನ ತೃಪ್ತಿಯನ್ನು ಕನಸಿನಲ್ಲಿ ಕಂಡುಕೊಂಡರೆ ಅದೆ ಸಬಲವಾಗಿದ್ದರೆ ನನಸಿನಲ್ಲೆ ಆ ಪೂರೈಕೆಯನ್ನು ಕಾಣಬಲ್ಲದು. ಅದು ಇಂದು ಸಾಧ್ಯವಾಗದಿದ್ದು, ಅದರ ಇಚ್ಛೆ ತೀವ್ರತರವಾದುದಾಗಿದ್ದ ಪಕ್ಷದಲ್ಲಿ ಅದೇ ಪುನರ್ಜನ್ಮದಲ್ಲಿ ತೃಪ್ತಿಪಡೆಯಬಹುದಲ್ಲ.* ಇದನ್ನು ಒಪ್ಪಬೇಕಾದರೆ ಪುನರ್ಜನ್ಮದ ಕಲ್ಪನೆಯನ್ನು ಒಪ್ಪುವಂತಿರಬೇಕು. ಈ ವಿಷಯದಲ್ಲಿಯೆ ಭಾರತೀಯ ದರ್ಶನಕ್ಕೂ

---

* ಜೀವನದ ಅಭೀಪ್ಸೆ, ಇಚ್ಛೆಗಳೆ ಸೃಷ್ಟಿಯ ವಿಕಾಸಕ್ಕೆ ಕಾರಣ. ತಾನಾಗಬೇಕೆಂದು ಬಯಸಿ ಬಯಸಿ ಅನ್ನ ಪ್ರಾಣವಾದುದು ಮಾತ್ರವಲ್ಲ ; ಜಡ ಚೇತನವಾಗುತ್ತದೆ.

ಯುಗ ಯುಗದತಿ ಕಷ್ಟದಿ
ಜಡವನು ಜಯಿಸಿತು ಜೀವ,
ಬಹುತಪದಿಂದಾ ಜೀವಕೆ
ಬಂದಿತು ಮಾನವ ಭಾವ ;
ಯುಗ ಯುಗ ಬೇಕೀ ಮನುಜತೆ
ಮಾನವತನವನೆ ಮೀರಿ
ದೈವತ್ವವ ಸಂಪಾದಿಸೆ
ಸಂಯಮ ಸ್ವರ್ಗಕ್ಕೇರಿ

ಪಾಶ್ಚಾತ್ಯ ದರ್ಶನಕ್ಕೂ ಭಿನ್ನತೆ ಕಂಡು ಬರುವುದಾದರೂ ಕೂಡ. ಭಾರತೀಯರು ಜೀವನವನ್ನು ಒಂದು ಆಕಸ್ಮಿಕ ಘಟನೆಯೆಂದು, accident ಎಂದು ಭಾವಿಸಲಿಲ್ಲ. ಈ ಬಾಳು ನೂರಾರು ಪೂರ್ವಭವದ ಮೇಲೆ ನಿಂತಿರುವಂತೆಯೆ, ಮುಂದಿನ ಎಷ್ಟೋ ಭವಗಳೂ ಕೂಡ ಇದರ ಮೇಲೆ ನಿಂತಿರುತ್ತವೆ. ಅವುಗಳ ಪ್ರಭಾವ ಪರಿಣಾಮ ಪರಸ್ಪರ ಆಗೇ ಆಗುತ್ತದೆ. ಆದರೆ ಪಾಶ್ಚಾತ್ಯರ ಪ್ರಕಾರ ಪುನರ್ಜನ್ಮವೇ ಇಲ್ಲ. ಗ್ರೀಕರ ಕಲ್ಪನೆಯಾಗಲಿ, ಕ್ರಿಶ್ಚಿಯನ್ ಮತದ ಕಲ್ಪನೆಯಾಗಲಿ, ಕೊನೆಗೆ ಈ ಎರಡರ ಪ್ರಭಾವದಲ್ಲಿಯೇ ಬೆಳೆಯುತ್ತಿರುವ ಆಧುನಿಕ ಪಾಶ್ಚಾತ್ಯ ಶಾಸ್ತ್ರಜ್ಞರ ದೃಷ್ಟಿಯಾಗಲಿ ಈ ಪುನರ್ಜನ್ಮದ ಕಲ್ಪನೆಯನ್ನು ಒಪ್ಪುವುದಿಲ್ಲ, ಅದು ಅವೈಜ್ಞಾನಿಕ ಅವರ ದೃಷ್ಟಿಯಲ್ಲಿ.

ಪುನರ್ಜನ್ಮ ಉಂಟೆಂದು ಭಾವಿಸುವುದು ಅವೈಜ್ಞಾನಿಕ ಎಂದು ಹೇಳುವುದಾದರೆ, ಅಷ್ಟೆ ಧೈರ್ಯವಾಗಿ ನಾವೂ ಕೂಡ, ಅದು ಇಲ್ಲ ಎನ್ನುವವರ ದೃಷ್ಟಿಯ ವಿಷಯವಾಗಿ ಹೇಳಬಹುದಲ್ಲ. ಇದು ಹೇಗಾದರೂ ಆಗಲಿ ; ಈ ವಿಷಯ ಇಲ್ಲಿಗೆ ಅಪ್ರಕೃತ. ಆದರೆ, ಆಯಾ ಸಂಸ್ಕೃತಿಯ ಸಾರವಾದ ಕಾವ್ಯಗಳನ್ನು ಅಭ್ಯಾಸಮಾಡುವಾಗ, ಆಯಾ ಜನ ಮನಸ್‌ಸಮಷ್ಟಿ ಕಲ್ಪನೆಯನ್ನೂ ಸ್ವಲ್ಪ ಅರಿತುಕೊಂಡಿದ್ದರೆ ವಾಸಿ, ಎಂಬುದಷ್ಟನ್ನು ಮಾತ್ರ ಇಲ್ಲಿ ಸೂಚಿಸಬಯಸುತ್ತೇನೆ.

ಮತ್ತೊಂದು ಆಕ್ಷೇಪಣೆಯನ್ನು ರಾವಣನ ಈ ಪರಿವರ್ತನೆಯ ವಿಷಯವಾಗಿ ಹೇಳುವುದುಂಟು. ಸೀತೆಯನ್ನು ರಾವಣ ಮೋಹಿಸುತ್ತಿದ್ದವನು, ತಾಯಿಯೆಂದು ಹೇಗೆ ನಿಷ್ಕಲಂಕಹೃದಯಿಯಾಗಿ ಪ್ರೀತಿಸಲು ಸಾಧ್ಯ ? ಇದೊಂದು ಲಿಬಿಡೊ ವಾಸನೆಗೆ ಸೊಗಸಾದ ಉದಾಹರಣೆ – ಎಂಬುದು ಅವರ ಪ್ರಶ್ನೆ. ಅಂತಹವರಿಗೆ

---

ಈ ಆತ್ಮಾಭೀಪ್ಸೆ, ಇಚ್ಛೆಗಳ ಜತೆಯಲ್ಲಿ ಇತರ ಶಕ್ತಿಗಳ ಹಾರೈಕೆಯೂ ದೈವದ ಆಶೀರ್ವಾದವೂ ಇದ್ದರೆ ಅದು ಬೇಗನೆ ಸಿದ್ಧಿಯನ್ನು ಪಡೆಯಬಲ್ಲುದು. ಇಲ್ಲಿ ರಾವಣನ ಅಭೀಪ್ಸೆ ಇಚ್ಛೆಗಳ ಜತೆಗೆ ಶ್ರೀರಾಮನ ಹಾರೈಕೆಯೂ ಇರುವುದನ್ನು ಕಾಣುತ್ತೇವೆ. ರಾವಣ ಗತಿಸಿಹೋದಮೇಲೆ, ಅವನಿಗೆ ಅಂತಿಮ ಸಂಸ್ಕಾರವನ್ನು ಮಾಡುವ ವಿಷಯವಾಗಿ ವಿಭೀಷಣ ಕೇಳಿದಾಗ, ಶ್ರೀರಾಮಚಂದ್ರ ಕೊಡುವ ಉತ್ತರವಾದರೂ ಇದು :

> “ಮುಂದೆ ಮುಂಭವದಿ ಮಗನಾಗಿ ಸಂಭವಿಪಂಗೆ
> ತಂದೆಯಾಗುವನಿಂದೆ ಸಂಸ್ಕಾರವೆಸಗುವೊಲ್,
> ನೀನಿಂದು ರಾವಣಂಗೆಸೆಪ ಸತ್‌ಕ್ರಿಯೆಯೊಳಾಂ
> ಸುಪ್ರೀತನೆಂ”

ಹೀಗೆಂದು ಹೇಳುವ ಶ್ರೀರಾಮನ ಮಾತುಗಳು ರಾವಣನ ಅಭೀಪ್ಸೆಯ ಆಗನ್ನು ಹಾರೈಸುತ್ತಿರುವಂತೆ ಕಾಣುತ್ತದೆ.



ಪಾಪ ! ಎನ್ನದೆ ವಿಧಿಯಿಲ್ಲ. ಇಜ್ಜಲು, ಸಕ್ಕರೆ, ಬ್ರಾಂದಿ, ಪೆಟ್ರೋಲ್, ತಾರೆಣ್ಣೆ, ವಜ್ರ – ಇವುಗಳೆಲ್ಲವು ಇಂಗಾಲದ ವಿವಿಧ ಆವಿರ್ಭಾವಗಳೆ. ಹಾಗೆಯೇ ಮೂಲದಲ್ಲಿ ಆಕರ್ಷಣೆ ಮಾತ್ರವಾದ ಪ್ರೇಮ, ವಿವಿಧ ರೂಪಿಯಾಗಿ ಕಾಮ (ಪ್ರೀತಿ, ವಿಶ್ವಾಸ, ವಾತ್ಸಲ್ಯ) ಮೋಹ ವ್ಯಾಮೋಹ, ಭಕ್ತಿ ಮುಂತಾದುವುಗಳಾಗಿ – ಆವಿರ್ಭವಿಸುತ್ತದೆ. ಹಾಗೆಂದು ಗಂಡ ಹೆಂಡಿರ ಪ್ರೇಮವೂ ಒಂದೆ, ತಾಯಿಮಕ್ಕಳ ಪ್ರೇಮವೂ ಒಂದೆ, ಎರಡೂ ಕಾಮ ಪ್ರಚೋದಿತವಾದುವು ಎಂದು ಭಾವಿಸುವವರಿಗೆ ಏನೆನ್ನಬೇಕು. ಈಥೈಲ್ ಆಲ್ಕೋಹಾಲ್, ಮೀಥೈಲ್ ಆಲ್ಕೋಹಾಲ್ – ಎರಡೂ ಒಂದೆ ಸೂತ್ರವುಳ್ಳ ರಾಸಾಯನಿಕ, ಆದರೆ ಒಂದು ಮದ್ಯಸಾರ, ಮತ್ತೊಂದು ವಿಷಕಾರಿ, ಎಂಬುದನ್ನು ತಿಳಿಯಬೇಕು. ಎಲ್ಲವೂ ಒಂದೇ ಆದರೂ, ಲೀಲಾಭೂಮಿಕೆಯಲ್ಲಿ ಅವು ಒಂದೆಂದು ಕರೆಯಲಾಗದಷ್ಟು ಬೇರೆಯಾಗಿರುತ್ತವೆ. ಅವೆಲ್ಲ ಒಂದೆಂದು ತಾರೆಣ್ಣೆಯನ್ನು ಸಾರಾಯಿಯೆಂದೇಕೆ ಕುಡಿಯಬಾರದು ? ಮೊದಲೇ ತಿಳಿಸಿದಂತೆ ರಾವಣನ ವೈಷಯಿಕ ಮೋಹ ಅವನ ಹೊರ ಪ್ರಕೃತಿಯಂತೆಯೆ, ತನ್ನ ಇಜ್ಜಲುತನವನ್ನು ಕಳೆದುಕೊಂಡು ವಜ್ರತ್ವಕ್ಕೆ ಏರಿತು.* ಇದು ಹೇಗೆ ಸಾಧ್ಯವಾಯಿತೆಂಬುದನ್ನು ಕೂಡ ಆಗಲೇ ತಿಳಿಸಿದ್ದೇನೆ. ಕಾವ್ಯವನ್ನು ಮತ್ತೆ ಓದಿದರೆ ಅದೇ ನೂರು ವ್ಯಾಖ್ಯಾನಗಳಿಗೂ ಮಿಗಿಲು ತಿಳಿಸಬಲ್ಲುದು ; ರಾವಣನ ಹೃದಯಗಹ್ವರದಲ್ಲಿರುವ ಶ್ರೀಮಂತರಹಸ್ಯ ನಿಧಿಯನ್ನು ತೋರಬಲ್ಲದು.

ಈ ಕನಸು ಒಂದೇ ಒಂದಂಶವನ್ನೆ ಧ್ವನಿಗೊಳಿಸುತ್ತಿಲ್ಲ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ತನ್ನ ಪ್ರಕೃತಿಯಲ್ಲಿಯೆ ಸಹಜವಾಗಿ, ವಾಸನಾರೂಪದಿಂದ ಬಂದ ವಿಷಯಲಾಲಸೆಯಿಂದ ದೂರಹೋಗಲು ರಾವಣನು ಎಷ್ಟು ಪ್ರಯತ್ನಿಸಿದರೂ ಸಾಧ್ಯವಾಗದೆ, ಕೊನೆಗೆ ಅದರ

---

* ಮೂಲಪ್ರವೃತ್ತಿಗಳು ಸಂಸ್ಕಾರಗೊಂಡಂತೆ, ಸಂಸ್ಕೃತವಾದಂತೆ ಮಾನವ ಮೇಲೆ ಮೇಲೇರುತ್ತಾ ಹೋಗುತ್ತಾನೆ. ಮಾನವನ ಪ್ರಗತಿಯಿರುವುದಾದರೂ ಕೂಡ ಈ ಮೂಲಪ್ರವಲ–ತ್ತಿಗಳನ್ನು ಊರ್ಧ್ವಗಾಮಿಗಳನ್ನಾಗಿ ಮಾಡುವುದರಲ್ಲಿ. ಇದನ್ನೆ Sublimation of Energy ಎನ್ನುತ್ತಾರೆ. ಹಾಗೆಯೆ ನಮ್ಮ ಅಲ್ಪಶಕ್ತಿ ಮೇಲೆ ಮೇಲೆ ಹರಿಯತೊಡಗಿದರೆ, ಅದೇ ಅದ್ಭುತಶಕ್ತಿಯಾಗಿ ಪರಿಣಮಿಸಬಲ್ಲದು ; ನಮ್ಮ ಹಸಿಹಸಿಯ ಪ್ರವೃತ್ತಿಗಳು ಲೋಕಪೂಜ್ಯ ಸದ್ಗುಣಗಳಾಗಬಲ್ಲವು. ಆದ್ದರಿಂದಲೆ, ಪ್ರೀತಿಯಲ್ಲಿ ಎಲ್ಲಕ್ಕಿಂತಲೂ ಉತ್ತಮವಾದುದೆಂದರೆ, ಮಾನವನಿಗೆ ದೇವರಲ್ಲಿರುವ ಭಕ್ತಿ, ಎಂದು ಹೇಳುತ್ತಾರೆ. (ಭಕ್ತಿಯೂ ಪ್ರೀತಿಯ ಒಂದು ಆವಿರ್ಭಾವ ಎಂದು ಹಿಂದೆಯೆ ಹೇಳಿದ್ದೇನೆ.) ಹಾಗೆಂದು, ಅದನ್ನು ಪಶುಸಹಜ ಕಾಮವೆಂದು ಯಾರೂ ಭಾವಿಸುವುದಿಲ್ಲ. ಹಾಗೆಯೆ ರಾವಣನ ಪ್ರೇಮವಾದರೂ ಕೂಡ ; ಊರ್ಧ್ವಮುಖಿಯಾದ ಪ್ರೇಮ.

ಮಹಾಪ್ರವಾಹದಲ್ಲಿ ಸಿಲುಕಿಕೊಂಡೂ, ಅದರಿಂದ ಪಾರಾಗಬೇಕೆಂದು ಹೋರಾಡಿ ಅದರಲ್ಲಿ ಮುಳುಗುತ್ತಾನೆ. ಆ ಮಹಾಪ್ರವಾಹದಲ್ಲಿ ಮುಳುಗಿದರೂ ಅದರೊಡನೆ ಮಾಡಿದ ಹೋರಾಟವೇ ಅವನನ್ನು ಆ ದಡಕ್ಕೆ ಕೊಂಡೊಯ್ಯುತ್ತದೆ. ಆದರೆ, ಹಾಗೆಯೆ ಬದುಕಿಸಿ ಕೊಂಡೊಯ್ಯುವುದಿಲ್ಲ. ಮುಳುಗಿಸಿ ಮಕ್ಕಳನ್ನಾಗಿಮಾಡಿಕೊಂಡೊಯ್ಯುತ್ತದೆ. ಈ ಭವದಲ್ಲಿ ಈ ರೂಪದಿಂದ ಅವರು ಆ ಪೂರವನ್ನು ದಾಟಲಾಗುವುದಿಲ್ಲ. ಮರುಭವದಲ್ಲಿ ಮಾತ್ರ ಅದು ಸಾಧ್ಯ. ಇದರ ಜತೆಗೆ, ಆ ದೇವಮಂದಿರ ಪೀಠಸ್ಥ ಬೃಹದ್ ಅಶ್ವವನ್ನು ಮೇಲಿಂದೆರಗಿದ ಬೃಹನ್ಮುಷ್ಟಿ ಕತ್ತರಿಸಿತು ಎಂಬುದರಲ್ಲಿ, ಯಾವುದೊ ಅತೀತಶಕ್ತಿಯ ಹಸ್ತವರ್ತನೆಯಿದೆಯೆಂಬುದನ್ನು ಈ ಸ್ವಪ್ನ ದರ್ಶಿಸುತ್ತದೆ, ಮತ್ತೆ, ಆ ಕುದುರೆಯ ಮೃತ್ಯು ರಾವಣನ ಲೈಂಗಿಕಲಾಲಸೆಯ ಮೃತ್ಯುವನ್ನು ಅವನ ಕಾಮಲಾಲಸೆ ನಿರ್ನಾಮವಾಗುವುದನ್ನು ಸೂಚಿಸುತ್ತದೆ.*

ಇದಿಷ್ಟು ಮಾತ್ರವೇ ಅಲ್ಲದೆ, ರಾವಣನಿಗೆ ತನ್ನ ಅಂತರಂಗದ ಗೂಢಪ್ರವೃತ್ತಿಯನ್ನೂ ನಿವೃತ್ತಿಯನ್ನೂ ಈ ಕನಸು ತಿಳಿಸಿ ತೊಳಲುತ್ತಿದ್ದ ಅವನ ಮನಸ್ಸನ್ನು ನಿರ್ಧಾರಕ್ಕೆ ತರುವ ಕಾರ್ಯವನ್ನು ಮಾಡುತ್ತದೆ.

"Dreams give information about the secrets of the inner life and reveal to the dreamer hidden factor of his personality. As long as these are undiscovered, they disturb his waking life and betray themselves only in the form of symptoms", ಎಂಬ ಯೂಂಗನ ಮಾತನ್ನು ನೆನೆಸಿಕೊಳ್ಳಬಹುದು.

ಇಷ್ಟಾದಮೇಲೆ, ಇಲ್ಲಿಗೆ ಅಪ್ರಕೃತವಾದ ಮತ್ತೊಂದು ವಿಷಯದ ಮೇಲೆ ಒಂದೆರಡು ಮಾತನ್ನು ಹೇಳಿ ಮುಂದೆ ಹೋಗುತ್ತೇನೆ. ಶ್ರೀ ಕುವೆಂಪು ಚಿತ್ರಿಸಿದ ರಾವಣ ಮಹಾದುರಂತವ್ಯಕ್ತಿ ಎಂಬ ಸಾಮಾನ್ಯಭಾವನೆಗೆ ಉತ್ತರವನ್ನು ಹೇಳುವುದೆ ಆ ಉದ್ದೇಶವಾಗಿದೆ. ನಾವು ರಾವಣನನ್ನು ದುರಂತ ನಾಯಕ ಎಂಬ ಪದದಿಂದ ಕರೆಯಲು ಸಾಧ್ಯವೇ ಯೋಚಿಸಬೇಕು. ಅವನು ಉದ್ಧಾರವಾದ ವ್ಯಕ್ತಿಯೇ ಹೊರತು ಪತಿತನಲ್ಲ. ಗ್ರೀಕ್ ದುರಂತನಾಟಕದ ಕಲ್ಪನೆಯ ಪ್ರಕಾರ ಅವನು ದುರಂತ ನಾಯಕನಲ್ಲ. ಷೇಕ್ಸ್ಪಿಯರ್ ಮಹಾಕವಿಯ ದುರಂತ ನಾಟಕ ಕಲ್ಪನೆಯ

* Especially the black, night horse herald & death. .. .. when it is really a question of death, the dream speaks another language.



ದೃಷ್ಟಿಯಲ್ಲೂ ಕೂಡ ಅವನು ದುರಂತ ನಾಯಕನಾಗಲಾರ. ಅವನಲ್ಲಿನ ದೌರ್ಬಲ್ಯವೇ ಅವನನ್ನು ಬಲಿಗೊಳ್ಳುವುದಿಲ್ಲ. ಅದಕ್ಕೆ ಬದಲಾಗಿ ಅವನು ಆ ದೌರ್ಬಲ್ಯದಿಂದ ಮುಕ್ತನಾಗಿ ಮಹಾಮಂಗಳವನ್ನು ಕಂಡ ಮಂಗಳಾಂತನಾಯಕನಾಗುತ್ತಾನೆ. ತಾನು ಮರುಭವದಲ್ಲಿ ಸೀತಾದೇವತೆಯ ಮಗನಾಗುವುದನ್ನು ಕಾಣುವುದಕ್ಕಿಂತ ಮಂಗಳದರ್ಶನವಿನ್ನೇನು ತಾನೇ ಅವನಿಗೆ ಬೇಕು? ಸಾವನ್ನೆ ದುರಂತವೆನ್ನುವುದು ಅವಿವೇಕ. ಅವನನ್ನು ದುರಂತ ವ್ಯಕ್ತಿಯೆಂದು ಭಾವಿಸುವುದರಿಂದ ಕವಿಯ ಕಾಣ್ಕೆಯನ್ನು ಸರಿಯಾಗಿ ಪೂರ್ಣವಾಗಿ ಗ್ರಹಿಸಿದಂತಾಗುವುದಿಲ್ಲ. ಆದ್ದರಿಂದ ಇದನ್ನು ಇಲ್ಲಿ ಹೇಳಬೇಕಾಯಿತು.

ಈಗ ಶ್ರೀ ಕುವೆಂಪು ಅವರು ಶ್ರೀ ಸೀತಾಸಂಬಂಧವಾಗಿ ಯಾವ ದರ್ಶನವನ್ನು ಕಂಡಿದ್ದಾರೆ ಎಂಬುದಕ್ಕೆ ಅಗ್ನಿ ಪರೀಕ್ಷೆಯ ಒಂದು ನಿದರ್ಶನವನ್ನು ತೆಗೆದುಕೊಳ್ಳಬಹುದು. ಶ್ರೀರಾಮಾಯಣದಲ್ಲಿ ಅತಿ ಜಟಿಲವೂ, ಗೊಂದಲಕ್ಕೆ ಕಾರಣವಾದುದೂ ಆದ ಒಂದು ಭಾಗವೆಂದರೆ ಈ ಅಗ್ನಿಪರೀಕ್ಷೆಯ ಘಟನೆ. ಎಷ್ಟೋ ಬಗೆಯ ಖಂಡನೆ ಮಂಡನೆಗಳು ಇದರ ಮೇಲೆ ಬೆಳೆದುಕೊಂಡಿವೆ. ಎಷ್ಟೋ ವ್ಯಾಖ್ಯಾನಗಳು ಹುಟ್ಟುಕೊಂಡಿವೆ. ಆದರೂ ಅದು ಬಗೆಹರಿಯದ ಅಗ್ನಿ ಪರೀಕ್ಷೆಯೇ ಆಗಿತ್ತು. ಹೀಗಿರುವಲ್ಲಿ ಅಲ್ಲಿ ಕವಿ ಕುವೆಂಪು ದಿವ್ಯವಾದ ದರ್ಶನವನ್ನು ಕಂಡಿದ್ದಾರೆ. ಇದು ನಿಜವಾಗಿಯೂ Stroke of a genius ಎಂದು ನನಗನ್ನಿಸುತ್ತದೆ.

ಸೀತಾದೇವಿಯನ್ನು ಕಟುತರ ವಾಕ್ಯಗಳಿಂದ ಚುಚ್ಚಿ ಅವಳ ಪಾವಿತ್ರ್ಯವನ್ನು ಅಗ್ನಿ ಪರೀಕ್ಷೆಗೊಡ್ಡಿದಾಗ, ಶ್ರೀರಾಮಚಂದ್ರನನ್ನು ಎಲ್ಲರೊಡನೆ ನಾವೂ ಖಂಡಿಸುತ್ತಿರುತ್ತೇವೆ. ಆದರೆ ಅಗ್ನಿಕುಂಡಕ್ಕೆ ಸೀತಾ ದೇವಿ ಪ್ರವೇಶಿಸಿದೊಡನೆಯೆ–

"ನಿಷ್ಠುರಂ ಶಿಲಾ ಮೂರ್ತಿಯೆನೆ
ನಿಷ್ಪಂದನಾಗಿ ನಿಂದನಿತುಮ ಸಾಕ್ಷಿಯೊಲ್
ನಿಟ್ಟಿಸುತ್ತಿರ್ದ ರಾಮಾನನಂ ತಾನಾಯ್ತು
ದೀಪ್ಯಮಾನಂ, ಚಲಿಸಿದನು ಚಿತೆಗೆ, ನೋಳ್ಪರಾ
ವಿಸ್ಮಯಂ ಚಿಂತೆಗೆ ತಿರುಗುವಂತೆ. ಓವೊವೋ
ಎಂಬನಿತರೊಳೆ ತಾಂ ಪ್ರವೇಶಿಸುತ್ತುಜ್ಜ್ವಲಿಪ
ಗೋಪುರೋಪಮದಗ್ನಿ ಮಧ್ಯೆ ಮರೆಯಾದನೈ
ಜಮದಗ್ನಿ ಜಾತನಂ ಜಯಿಸಿದಾತಂ !"

ಮುಂದೇನಾಯಿತೆಂಬುದನ್ನು ಕವಿಯ ಮಾತುಗಳಿಂದಲೇ ಕೇಳಬೇಕು

ಸೇಂದ್ರಿಯಕತೀಂದ್ರಿಯಂ ತನ್ನ
ಪೆರ್ಬಾಗಿಲಂ ತೆರೆದುದೆನೆ ಕೇಳ್ದುದನಿಬರಿಗೆ,
ಅಸಂಖ್ಯೇಯ ಗೀರ್ವಾಣ ಕಂಠಸ್ವನಂವೆರಸಿ
ಅಂಬರವೆ ತುಂಬಿಯಾದಶರೀರ ವೀಣಾ
ಸಹಸ್ರ ತಂತ್ರೀ ನಿಕ್ವಣಂ !

ಕಪಿರಾಕ್ಷಸಸಮೂಹವೆಲ್ಲ ಮೂಗುವಟ್ಟಂತೆ ಮೌನದಿಂದ ಅದನ್ನು ಆಲಿಸತೊಡಗುತ್ತದೆ. ಪರಿಚಿತ ನೀರಸಸ್ವರಗಳನ್ನು ಕರ್ಣೇಂದ್ರಿಯ ತೊರೆದಂತೆಯೆ ನಯನೇಂದ್ರಿಯವು ತಾನೂ ಅಲ್ಲಿಯತನಕ ಕಾಣದುದನ್ನು ಕಾಣತೊಡಗಿತು. ಜಡಚೇತನವೆಲ್ಲ ದೀಪ್ತವಾಗಿ ಕಾಂತಿಮಯವಾಯಿತು. ಮುಂದೆ,

ಶ್ರೀ ವಾಣಿಗಳ್
ಪಾಡಿದುವು ಮರ್ತ್ಯಮಲ್ಲದ ದಿವ್ಯ ಭಾಷೆಯೊಳ್
ಸ್ತೋತ್ರಂಗಳಂ, ಮಹಚ್ಛಂದೋ ವಿಧಾನದಿಂ :
ಓಂ ನಮೋ ಸಚ್ಚಿದಾನಂದನೆ ನಮೋ ನಮೋ !
ಓಂ ನಮೋ ಸರ್ವಸ್ವತಂತ್ರನೆ ನಮೋ ನಮೋ !

ಎಂದು ಮುಂತಾಗಿ ಭಗವದ್‌ವಿಭೂತಿಯನ್ನು ಶ್ರೀ ವಾಣಿಗಳು ಕೀರ್ತಿಸುತ್ತಿರುವಾಗ ಆ ಹೋಮಾಗ್ನಿಯುರಿಯು ನವರತ್ನರಾಗರಂಜಿತವಾಗುತ್ತದೆ. ವೈಶ್ವಾನರನು ಬೀಸುವ ಅಗ್ನಿಚಾಮರದಂತೆ ಆ ಬೃಹಜ್ವಾಲೆಗಳು ಅತ್ತ ಇತ್ತ ತೊನೆದಾಡುತ್ತವೆ. ತನ್ನ ಪ್ರಭುವನ್ನೊಲಿಸಲು ಆದಿಶೇಷನೇ ವೇಷಾಂತರಗೊಂಡು ಬಂದಂತೆ ಕಾಣುತ್ತದೆ. ಆಗ ಹವ್ಯವಾಹನ ಪವಿತ್ರತನುವಿನಿಂದ ದಶರಥಾತ್ಮಜ ಶ್ರೀರಾಮಚಂದ್ರನು ಜಾನಕೀ ಪಾಣಿಗ್ರಹಕೃಪಾಲುವಾಗಿ ಹೊರಬರುತ್ತಾನೆ. ಪಾವನಾಗ್ನಿಸ್ನಾತೆ ಸೀತಾಮಾತೆಯನ್ನು ಕಿಚ್ಚಿನುರಿಯಿಂದ ಕಾಯುವ ತೆರೆದಿಂದ, ಹೊರಗೆ ಆ ಹರಿತ ಶಾದ್ವಲಚಾರು ಗಿರಿವೇದಿಕೆಯ ಮೇಲಕ್ಕೆ ಕರೆದು ತರುತ್ತಾನೆ.

ಶ್ರೀಮದ್‌ದಿವ್ಯತೇಜೋಮಯ ಶರೀರಿಯಾದ ಸೀತಾಸಮೇತನಾದ ಶ್ರೀರಾಮಚಂದ್ರನ ಅಡಿಗೆ ಕಪಿರಾಕ್ಷಸ ಸಮೂಹವೆಲ್ಲಾ ಭಕ್ತಿಯಿಂದೆರಗುತ್ತದೆ.

ಇದು ಅಗ್ನಿಪ್ರವೇಶಘಟನೆಯ ನಿರೂಪಣಾ ವಿಧಾನ. ಶ್ರೀ ಕುವೆಂಪು ಅವರು ಇಲ್ಲಿ ಯಾವ ದರ್ಶನವನ್ನು ಕಂಡಿದ್ದಾರೆ ಎಂಬುದನ್ನ ನಾವು ಕಾಣಬಹುದು. ಅದನ್ನು ಅನಲೆಯೆ ಹೀಗೆ ಹೇಳಿದ್ದಾಳೆ :

"ಮನ್ನಿಸೈ, ಸ್ವಾಮಿ ;
ದೇವಿಯಂ ನಿಂದಿಸಿದ ನಿನ್ನನೆನಿತೆನಿತೊ ನಾಂ



ಬಯ್ದೆನಯ್. 'ಹದಿಬದೆಯನಗ್ನಿವುಗಿಸುವುದಿರಲಿ,
ತನ್ನಂ ಪರೀಕ್ಷಿಸುವರಾರೊ ? ತಾನೇಂ ಪೊರತೊ
ದುರಿತ ದೋಷಕೆ' ಎನುತೆ ಶಂಕಿಸಿದೆನಾ ನಿಂದೆ
ಭಸ್ಮವಾಯಿತು, ತಂದೆ, ನೀನೊಡ್ಡಿದೀ ಚಿತೆಯ
ಲೋಕಪಾವಕ ಪವನಸಖನಿಂದೆ : ಪೂಜ್ಯೆಯಂ
ಪಾಲಿಸುವ ನೆವದಿ ನೀನುಂ ಪರೀಕ್ಷಿತನಲಾ !
ಲೋಕತೃಪ್ತಿಗೆ ಲೋಕಮರ್ಯಾದೆಗೊಳಗಾದೆ !
ಸರ್ವಲೋಕಪ್ರಭುವೆ, ಲೋಕಗುರು ನೀಂ ದಿಟಂ !

ಕವಿಕಂಡ ದರ್ಶನವಿದು. ಮಹಾಜಟಿಲತರ ಸಮಸ್ಯೆಯೊಂದಕ್ಕೆ ಅರ್ಥವೊಂದನ್ನು ಕವಿ ಕಂಡ ಬಗೆ ಇದು. ಸೃಷ್ಟಿಯ ಆದ್ಯಂತವೂ ಸತ್ಯವಾಗಿರಬಲ್ಲ ನಿತ್ಯ ಸತ್ಯವೊಂದನ್ನು ಕವಿ ಕಂಡು ಪ್ರತಿಮಿಸಿದ ಬಗೆಯಿದು. ಸೀತಾ ರಾಮಚಂದ್ರಾದಿ ಸುಗ್ರೀವ ಕಪಿಸಮೂಹಕ್ಕೆಲ್ಲ ಮಹತ್‌ಸಂಕಟವನ್ನ ತಂದೊಡ್ಡಿದ ಈ ಲೋಕಮೋಹಕ ಶೋಕದಾರುಣ ಕರುಣಕಥೆಯು, 'ನೂರ್ಮಡಿಯೆನಲ್ ಮುಹುರ್‌ಭವಿಸಿದನುಪಮ ಸುಖದ ಸಂಕಥನ ಮಾ'ದ ಪರಿಯಿದು.

ಸೀತಾರಾಮರ ಸಂಬಂಧ ಪ್ರಕೃತಿಪುರುಷರ ಸಂಬಂಧ. ಅವರು ಕೇವಲ ವ್ಯಕ್ತಿಮಾತ್ರರಲ್ಲದ ಸೃಷ್ಟಿಶಕ್ತಿಯ ಪ್ರತಿಮಾಸ್ವರೂಪಗಳು. ಸೀತಾದೇವಿ ಪವಿತ್ರೆಯೂ ಪತಿವ್ರತೆಯೂ ಆಗಿರಬೇಕೆಂದು ಜಗತ್ತು ಅಪೇಕ್ಷಿಸಿದಂತೆಯೆ ಶ್ರೀರಾಮನ ಪಾವಿತ್ರ್ಯವನ್ನೂ ಸತ್ಯನಿಷ್ಠೆಯನ್ನೂ ನಿರೀಕ್ಷಿಸುತ್ತಿದೆ. ಶತಶತ ಮಾನವ ಸಹೃದಯವರ್ಗ ಈ ಅಗ್ನಿ ಪರೀಕ್ಷೆಯ ವೃತ್ತಾಂತವನ್ನು ಓದುವಾಗಲೆಲ್ಲ ಆತಂಕಗೊಳ್ಳುತ್ತಲಿದ್ದುದಾದರೂ ಕೂಡ ಅದು ಏಕಪಕ್ಷೀಯ. ಅಗ್ನಿಪರೀಕ್ಷೆಯಾದುದಕ್ಕೊ ಏನೊ ಆದಿಮಹಾಕವಿ ಋಷಿಯ ಕಾಲದ ಜಗತ್ತು ಬಹುಶಃ ಹಾಗೆ ಆತಂಕಗೊಳ್ಳಲಿಲ್ಲ. ಆದರೆ ಆ ಮಹಾಕವಿ ಕಂಡ ಶ್ರೀ ರಾಮಚಂದ್ರ ಸೀತೆಗಿಂತ ಯಾವರೀತಿಯೂ ಪಾವಿತ್ರ್ಯಪ್ರೇಮನಿಷ್ಠೆಗಳಲ್ಲಿ ಕಡಿಮೆಯಿಲ್ಲ. ಸೀತಾರಾಮರ ಈ ಸಂಬಂಧಕಲ್ಪನೆಯನ್ನು ಶ್ರೀ ಕುವೆಂಪು ಮೊದಲಾಗಿ ಕಂಡವರೇನಲ್ಲ. ಈ ಸಂದರ್ಭಸೃಷ್ಟಿ ಪುನಸ್ ಸೃಷ್ಟಿಯೂ ಅಲ್ಲ. ಆದರೆ ಅದರ ಪುನರ್‌ದರ್ಶನ ಮಾತ್ರವಾಗಿದೆ. ಯಾವುದು ಮೂಲ ಮಹಾಕಾವ್ಯದಲ್ಲಿಯೆ ಅಂತರ್ಗತವಾಗಿದ್ದಿತೊ ಅದನ್ನು ಕವಿ ಕಂಡು ಗುರುತಿಸಿ ಹೊರಕಾಣಿಸುವುದರಲ್ಲಿ ಆ ದರ್ಶನವಿದೆ.

ಶ್ರೀರಾಮಚಂದ್ರ ಸೀತಾದೇವಿಯನ್ನು ಅಗ್ನಿ ಜ್ವಾಲೆಯಿಂದ

ರಕ್ಷಿಸಿಕೊಂಡುಬರುವುದಕ್ಕೇ ಆಗಿದ್ದರೆ, ತಾನೂ ಅಗ್ನಿಯನ್ನು ಪ್ರವೇಶಿಸಬೇಕಾಗಿಯೆ ಇರಲಿಲ್ಲ. ಸೀತಾದೇವಿಯ ಪಾವಿತ್ರ್ಯ ಯಾರ ರಕ್ಷಣೆಯೂ ಇಲ್ಲದೆಯೆ ಎಂಥ ಕಠೋರ ವಿದ್ಯುತ್ ಪರೀಕ್ಷೆಯನ್ನಾದರು ಜಯಿಸಿಬರಬಲ್ಲದು. ಅದು ಶ್ರೀರಾಮಚಂದ್ರನಿಗೆ ನಮ್ಮೆಲ್ಲರಿಗಿಂತಲೂ ಪೂರ್ಣವಾಗಿ ಕಂಡಿದೆ. ಹಾಗಾದರೂ ಆತಂಕಗೊಂಡು ತಾನೂ ಅಗ್ನಿಪ್ರವೇಶಿಸಿದನೆಂದು ಹೇಳಿ ಸುಮ್ಮನಾಗಲಾಗುವುದಿಲ್ಲ. ಅದಕ್ಕೋಸ್ಕರವೆ, ಹಾಗಾದೀತೆಂದೆ, ಅನಲೆಯೆ ನಡೆದ ಸತ್ಯವನ್ನು ಹೇಳಿಬಿಡುತ್ತಾಳೆ. ಸೀತೆಯ ಪಾವಿತ್ರ್ಯ ಪತಿನಿಷ್ಠೆಗೆ ಅಗ್ನಿಪರೀಕ್ಷೆಬೇಕಾದುದು ರಾಮನಿಗಾಗಿ ಅಲ್ಲ ; ಲೋಕಕ್ಕಾಗಿ. ಅದೇ ಲೋಕಕ್ಕೆ ಶ್ರೀರಾಮನ ಪಾವಿತ್ರ್ಯಪ್ರೇಮನಿಷ್ಠೆಗಳು ಅಗ್ನಿಪರೀಕ್ಷೆಗೊಳಗಾಗಬೇಕಾಯಿತು. ಇದನ್ನು ಈ ಯುಗದ ಮನಸ್ಸು ಅಪೇಕ್ಷಿಸಿತು.

ಹೀಗಾದರೂ, ಈ ವೃತ್ತಾಂತನಿರೂಪಣೆಯ ವಿಷಯದಲ್ಲಿ ಕೆಲವರು ಅಸಮಾಧಾನವನ್ನು ಪಡೆದೇ ಇದ್ದಾರೆ. ಅಂಥವರ ದೃಷ್ಟಿಯಲ್ಲಿ, ಈ ಘಟನೆಯನ್ನು ಇಟ್ಟುಕೊಂಡಿದ್ದೆ ಸರಿಯಾಗಿ ತೋರುವುದಿಲ್ಲ. ಅದರಲ್ಲಿ ಯಾವ ಕ್ರಾಂತಿಯನ್ನೂ ಕೆಚ್ಚನ್ನೂ ಕವಿ ತೋರಿದಂತಾಗಿಲ್ಲ. ಈಗ ಚಿತ್ರಿಸಿರುವ ರೀತಿ ಬರಿಯ ಚಮತ್ಕಾರಮಾತ್ರ – ಹೀಗೆಲ್ಲ ಅಂಥವರು ಪಡುವ ಅಸಮಾಧಾನಕ್ಕೆ ಸಮಾಧನವಾದರೂ ಇಷ್ಟೆ. ಮೊದಲು ಈ ಘಟನೆಯನ್ನೆ ಇಟ್ಟುಕೊಳ್ಳಬಾರದಾಗಿತ್ತೆಂಬುದಕ್ಕೆ ಉತ್ತರವನ್ನು ಹೇಳುತ್ತೇನೆ. ಅಗ್ನಿ ಪರೀಕ್ಷೆ ಮೊದಲೆ ಹೇಳಿದಂತೆ ಶ್ರೀರಾಮಸೀತೆಯರು ತಮ್ಮ ತೃಪ್ತಿಗಾಗಿ ಏರ್ಪಡಿಸಿಕೊಂಡುದಲ್ಲ. ಅದು ಮೊದಲು ಲೋಕದ ತೃಪ್ತಿಗಾಗಿ. ಲೋಕ ನಾವು ತಿಳಿದಿರುವಷ್ಟು ಸಾಧುವಲ್ಲ. ಅದರಲ್ಲಿ ರಜಕನಂಥವರೂ ಇರುತ್ತಾರೆ. ಡೆಸ್ಡಿಮೋನಳಂತಹವಳನ್ನು ಕೊಲ್ಲಿಸುತ್ತದೆ. ಸೀತಾದೇವಿಯಂತಹ ಮಹಾಮಾತೆಯನ್ನು ಕಾಡಿಗೆ ಅಟ್ಟುತ್ತದೆ. ಆದ್ದರಿಂದ ಅದರ ಸಾಧುತ್ವದಲ್ಲಿ ನಂಬಿ ಈ ಅಗ್ನಿಪರೀಕ್ಷೆಯನ್ನು ಇಲ್ಲಗೈಯುವುದು ಕ್ಷೇಮಕಾರಿಯಾಗಿಲ್ಲ. ಸೀತಾರಾಮರು ತಮ್ಮನ್ನು ತಾವು ಅಗ್ನಿಪರೀಕ್ಷೆಗೆ ಗುರುಪಡಿಸಿಕೊಳ್ಳದಿದ್ದರೂ ತಾನು ಯಾವ ಸಂಶಯವನ್ನು ಇಟ್ಟುಕೊಳ್ಳುವುದಿಲ್ಲ ಎದು ಜಗತ್ತು ಹೇಳಬಹುದು. ಆದರೆ ಅದು ಸಾಧುವೇಷದಿಂದ ವಂಚನೆ ಮಾಡುತ್ತಿದೆ ಎನ್ನಬೇಕಾಗುತ್ತದೆ. ಸೀತಾರಾಮರು ತಮ್ಮನ್ನು ತಾವು ಅಗ್ನಿ ಪರೀಕ್ಷೆಗೆ ಗುರುಪಡಿಸಿಕೊಂಡುದು ಲೋಕದ ತೃಪ್ತಿಗಾಗಿ ಎಂದು ಹೇಳುವುದೂ ಕೂಡ ಮಿತದೃಷ್ಟಿಯಾದೀತು. ಅದೆಲ್ಲಕ್ಕಿಂತಲೂ ಅತ್ಯತಿಶಯವಾದುದೆಂದರೆ, ಲೋಕ ಹಾಗೆಯೆ ತನ್ನನ್ನು ತಾನು ಅಗ್ನಿಪರೀಕ್ಷೆಗೆ ಒಳಪಡಿಸಿಕೊಳ್ಳಬೇಕೆಂಬುದೇ ಅವರ ಆಶಯ. ಅವರು ರಚಿಸಿದ ಆ ಅಗ್ನಿಕುಂಡ ಮಾನವನ ಪರೀಕ್ಷೆಗೆ ಒಡ್ಡಿದ ಅಗ್ನಿಪರೀಕ್ಷೆ. ಆ ಪರೀಕ್ಷೆಯಲ್ಲಿ ಅವರು



ತೇರ್ಗಡೆಯಾದರು. ಅವರೆ ಮೊದಲು, ಅವರೇ ಕೊನೆ ಆದರೇನೋ ಎಂಬಂತೆ ಈ ಜಗತ್ತು ವರ್ತಿಸುತ್ತಿದೆ. ತಮ್ಮ ಪರೀಕ್ಷೆಗೆ ಅವರು ಒಡ್ಡಿಕೊಂಡ ಆ ಅಗ್ನಿ ಪರೀಕ್ಷೆಯನ್ನು ನಿವಾರಿಸುವೆನೆಂದು ಹೋಗುವುದರಿಂದ ತನ್ನ ಸೋಲನ್ನು ಜಗತ್ತು ಒಪ್ಪಿಕೊಂಡಂತೆಯೇ ಆಗುತ್ತದೆ. ಇದನ್ನೇ ಮತ್ತೊಂದು ದೃಷ್ಟಿಯಿಂದ ನೋಡಿದರೆ ಹೀಗನ್ನಿಸುತ್ತದೆ. ಮೂಲ ಕವಿಯಿಂದ ಭಿನ್ನವಾಗಿ ಹೋಗುವುದನ್ನೇ ನಾವು ಕ್ರಾಂತಿಯೆನ್ನುವುದಿಲ್ಲ. ಅದನ್ನೆ ಕ್ರಾಂತಿಯೆಂದು ಕರೆಯುವುದಾದರೆ ಮಹಾಕವಿ ಕ್ರಾಂತಿಕಾರನಲ್ಲ ಎನ್ನಬೇಕಾಗುತ್ತದೆ. ಪೂರ್ವ ಮಹಾಕವಿ ತನ್ನ ತಪಸ್ಸಿನಿಂದ ಸೃಷ್ಟಿಸಿದ ಮಹಾಕೃತಿಯನ್ನು ಹಾಗೆ ಲಘುಭಾವನೆಯಿಂದ ಬದಲಿಸುತ್ತೇನೆಂದು ಹೊರಡುವುದು ಮಹಾಕವಿಯ ರೀತಿಯೂ ಅಲ್ಲ. ತನ್ನ ನಾಟ್ಯಕ್ಕೆ ಇರುವ ವೇದಿಕೆಯು ಬಹಳ ಮಿತವಾದುದೆಂದು ಅದನ್ನು ಅಲ್ಲಗಳೆಯುವ ನರ್ತಕರನ್ನು ಒಂದು ನಾಣ್ಣುಡಿಯೇ ವರ್ಣಿಸುತ್ತದೆ. ಯಾವುದು ಮೂಲದಲ್ಲಿ ಬಿಂದು ರೂಪದಿಂದ ಮೈದೋರಿ ಮರೆಯಾಗಿದೆ, ಯಾವ ದರ್ಶನವನ್ನು ಅದರಲ್ಲಿ ಕಾಣಲು ಸಾಧ್ಯ ಎಂಬುದನ್ನು ಕವಿಯಾದವನು ಮೊದಲು ಚಿಂತಿಸುತ್ತಾನೆ. ಹಾಗೆ ಮಾಡುವುದನ್ನು ಬಿಟ್ಟು, ಮೊದಲೆ ಶಸ್ತ್ರ ಚಿಕಿತ್ಸೆಗೆ ಹೊರಡಬಾರದು. ಎಲ್ಲ ರೋಗಗಳಿಗೂ ಶಸ್ತ್ರ ಚಿಕಿತ್ಸೆಯೆ ಪರಿಹಾರ ಎಂದು ಭಾವಿಸುವ ಅಜ್ಞಾನಿವೈದ್ಯನಂತಾಗುತ್ತಾನೆ ಅಂಥ ಕವಿ. ಆದರೆ ಶಸ್ತ್ರ ಚಿಕಿತ್ಸೆ ಅನಿವಾರ್ಯವಾಗುವ ರೋಗಗಳೂ ಉಂಟು. ಮೂಲ ಮಹಾಕೃತಿಗಳ ಮೇಲೆ ಹುಣ್ಣಿನಂತೆ, ಬಂದಿಳಿಕೆಯಂತೆ, ಹುತ್ತದಂತೆ ಬೆಳೆದಿರುವ ವೃತ್ತಾಂತಗಳೂ ಉಂಟು. ಅಲ್ಪ ಕವಿಕೃತವಾದ ಕೃತಿಗಳು, ಹುಟ್ಟುವಾಗಲೇ ರೋಗಪೀಡಿತವಾಗಿ ಬಂದಿರುವುದೂ ಉಂಟು. ಅಂಥವಕ್ಕೆ ಚಿಕಿತ್ಸೆ ಅವಶ್ಯ. ಆದರೆ ಎಲ್ಲ ಕಾಲದಲ್ಲೂ ಶಸ್ತ್ರಚಿಕಿತ್ಸೆಯೆ ಅಲ್ಲ. ಯಾವ ವೈದ್ಯಕೀಯ ಚಿಕಿತ್ಸೆಯೂ ಇಲ್ಲದೆ ಮನಸ್ಸಿನ ಇಚ್ಛಾಶಕ್ತಿಯಿಂದಲೆ ರೋಗ ಗುಣಪಡಬಲ್ಲದು – ಮನೋದೌರ್ಬಲ್ಯದಿಂದಲೆ ಅದು ಹುಟ್ಟಿಬರುವಂತೆ, ಎಂದು ಅರವಿಂದರಂಥ ಮಹಾ ಯೋಗೀಂದ್ರರು ಕಂಡಿದ್ದಾರೆ. ಅಂಥವರಿಗೆ ಪುರಾಣ ಕಥೆಗಳೆಲ್ಲ ವಿವಿಧ ದರ್ಶನಕ್ಕೆ ಒಡ್ಡಿದ ವಿವಿಧ ಪ್ರತಿಮೆಗಳಾಗಿ ಕಾಣುತ್ತವೆ.

ಇಲ್ಲಿ ಶ್ರೀ ಕುವೆಂಪು ಅವರು ಈ ಘಟನೆಯನ್ನು ಇಲ್ಲಗೈದಿದ್ದರೆ ಮೇಲೆ ಹೇಳಿದ ಎರಡು ದೃಷ್ಟಿಯಿಂದಲೂ ಅವಹೇಳನಕ್ಕೆ ಗುರಿಯಾಗ ಬೇಕಾಗುತ್ತಿದ್ದಿತು. ಹಾಗೆ ಮಾಡಿದ್ದರೆ ಸರಿಯಾಗುತ್ತಿದ್ದಿತೆನ್ನುವವರು ಮತ್ತೊಂದಂಶವನ್ನು ಮರೆಯಬಾರದು. ಯಾವ ಕವಿ ಹಾಗೆ ಮಾಡಿದರೂ ಕೂಡ ಮೂಲದ ಸಮಸ್ಯೆಗೆ ಉತ್ತರವನ್ನು ಕಂಡಂತಾಗುವುದಿಲ್ಲ. ಅದು ಅಗ್ನಿಪರೀಕ್ಷೆಯೆ ಆಗಿ ಉಳಿದು ಬಿಡುತ್ತದೆ.

ಇದನ್ನು ನಾವು ತಿಳಿದುಕೊಳ್ಳಬೇಕು. ಕವಿ ಈಗ ನಿರೂಪಿಸಿದ ರೀತಿಯಲ್ಲಲ್ಲದೆ ಮತ್ತಾವ ರೀತಿಯಿಂದಲೂ ಆ ಮೂಲ ಪ್ರಶ್ನೆಗೆ ಉತ್ತರರೂಪದ ದರ್ಶನವನ್ನು ಕಾಣಲಾಗುತ್ತಿರಲಿಲ್ಲ. ಅಷ್ಟೆ ಅಲ್ಲ, ಈಗ ಮೂಡಿರುವ ಮಹದ್‌ದರ್ಶನವನ್ನು ಚಿರಸತ್ಯದರ್ಶನವನ್ನು ಮತ್ತಾವ 'ಕ್ರಾಂತಿಕಾರಿ' ವಿಧಾನದಿಂದಲೂ ಕಾಣಲು ಸಾಧ್ಯವಾಗುತ್ತಲೇ ಇರಲಿಲ್ಲ.

ಆಧುನಿಕ ಜಗತ್ತಿಗೆ ಶ್ರೀ ಕುವೆಂಪುಕೊಟ್ಟ ದರ್ಶನಸಂದೇಶವೆಂಬಂತೆ ಈ ದರ್ಶನ ಇರುವಂತೆ ಕಾಣುತ್ತದೆ. ಪ್ರಾಚೀನ ಕಾಲದಿಂದಲೂ ಹೆಣ್ಣು ಮಾತ್ರ ಪತಿವ್ರತೆಯಾಗಿರಬೇಕೆಂದು ಜಗತ್ತು ಅಪೇಕ್ಷಿಸಿಕೊಂಡು ಬಂದಂತೆ ಕಾಣುತ್ತದೆ. ಅದರಿಂದಾಗಿ ಆಕೆಯ ಸ್ವಾತಂತ್ರ್ಯಕ್ಕೂ ಇತಿಮಿತಿಬಂದಿತೊ ಏನೊ. ಕಾಲ ಬದಲಿಸಿದಂತೆ, ನಾಗರಿಕತೆ ಅಡಿಯಿಟ್ಟು ಮುಂದೆ ಮುಂದೆ ಬಂದಂತೆ ಸ್ತ್ರೀಗೆ ತನ್ನ ಸ್ವಾತಂತ್ರ್ಯ ಸಾಧನೆ ಅವಶ್ಯವೆಂದು ಕಂಡು ಬಂದು ಆ ಹೋರಾಟಕ್ಕೆ ಆಕೆ ಧುಮ್ಮಿಕ್ಕಿದಂತೆ ಈ ಪಾವಿತ್ರ್ಯವೂ ಆಘಾತಕ್ಕೊಳಗಾಗತೊಡಗಿತು. ಪಾವಿತ್ರ್ಯ ಸ್ವಾತಂತ್ರ್ಯಕ್ಕೆ ವಿರುದ್ಧವಾದುದೆನ್ನುವ ಭಾವನೆಯೂ ಬೆಳೆಯ ತೊಡಗಿದಂತೆ ಕಾಣುತ್ತದೆ. ತನ್ನ ಪಾವಿತ್ರ್ಯವನ್ನು ಲೋಕ ನೀರಿಕ್ಷಿಸಿದಂತೆಯೆ ತಾನೂ ತನ್ನ ಪತಿಯ ಪಾವಿತ್ರ್ಯವನ್ನು ಅಪೇಕ್ಷಿಸುತ್ತೇನೆ ಎನ್ನದೆ, ನಾನು ನಿನ್ನಂತೆಯೆ ಇರುತ್ತೇನೆಂದು ಸ್ತ್ರೀ ಹೊರಟಂತೆ ಕಾಣುತ್ತದೆ. 'ನೀನು ಮಾತ್ರ ಮಂಡೋದರಿಯಾಗಿರು ; ನಾನು ರಾವಣನಾಗಿದ್ದರೂ ನೀನು ಪ್ರಶ್ನಿಸಬಾರದು' ಎನ್ನುವ ಆ ಕಾಲ ಹೋದರೆ ನಾನೂ ಕೂಡ 'ರಾವಣಿ'ಯಾಗಿಯೇ ಆಗುತ್ತೇನೆ ಎಂದೆನ್ನುವ ಯುಗ ಬಂದೀತೆಂದು ಕಾಣುತ್ತದೆ. ಈ ಮಂಡೋದರಿ ರಾವಣನನ್ನು ತನ್ನ ಮಟ್ಟಕ್ಕೆ ಏರಿಸಲು ಸಾಹಸಪಡಲಿಲ್ಲ. ತಾನೂ ಅವನ ಸಮನಾಗಲು ಕೆಳಕ್ಕಿಳಿದು ಬಂದಳು. ಇದು ಆಧುನಿಕ ಜಗತ್ತಿನ ದುರಂತ. ಇದರಿಂದ ಉದ್ಧಾರ ಅತಿ ಅಗತ್ಯವಾಗಿ ಆಗಬೇಕಾಗಿದೆ. ಹಾಗಿಲ್ಲದೆ ಇದ್ದರೆ ಈಗಿನ ಸಂಸಾರವಿರಸ, ದಾಂಪತ್ಯ ವಿಚ್ಛೇದನಗಳೆ ಮುಂದುವರಿದರೆ ಜಗತ್ತು ಯಾವ ಪಾತಾಳಕ್ಕೆ ಬೀಳುತ್ತದೆಯೊ ತಿಳಿಯದು. ಶ್ರೀ ಕವಿ ಕುವೆಂಪು ಅದನ್ನು ಎಚ್ಚರಿಸಿದ್ದಾರೆ. ಈ ಪ್ರತಿಮೆಯಿಂದ ಅದನ್ನು ಧ್ವನಿಗೈದಿರುವುದು ಮಾತ್ರವೇ ಅಲ್ಲ. ಸ್ಪಷ್ಟವಾಗಿಯೆ ಅದನ್ನು ಶ್ರೀ ರಾಮಚಂದ್ರನ ಮೂಲಕ ಉದ್ಘೋಷಿಸಿದ್ದಾರೆ.

> "ಹದಿಬದೆಗೆ ತೋರ್ದಪುದು ತನ್ನಿನಿಯನೊರ್ವನೊಳೆ
> ಸರ್ವ ಮನುಜರ, ಮತ್ತೆ ಸರ್ವಲೋಕದ ಸರ್ವ
> ವೈವಿಧ್ಯಮುಂ. ಪ್ರೇಮನಿಷ್ಠೆಯ ಪತಿಗುಮಂತೆ



> ತನ್ನ ಸತಿಯೊಳೆ ತೋರ್ದಪುದು ಸರ್ವ ಲಲನೆಯರ
> ಸರ್ವಶೃಂಗಾರಮುಂ !"

ಶ್ರೀ ರಾಮಚಂದ್ರ ಶೂರ್ಪನಖಿಗೆ ಹೇಳಿದ ಮಾತುಗಳಿವು. ಲೋಕ ಲೋಕಾಂತರಕ್ಕೆಲ್ಲ ಅವನೇ ಸಾರಿದ ಸಂದೇಶದಂತೆ ಇವೆ. ಆಧುನಿಕ ಜಗತ್ತಿಗೆ ಈ ಮಾತುಗಳು ಹೆಚ್ಚಾಗಿ ಸದ್ಯಕ್ಕೆ ಬೇಕಾಗಿದೆ. ಸತ್ಯಲೋಕವಾಸಿಗಳಾಗಿರುವ ಆ ಸೀತಾರಾಮರ ಇರುವಿಕೆಯನ್ನು ಮಾರ್ಪೊಳೆಯುವಂತೆ ಅಲ್ಲೊಬ್ಬ ಇಲ್ಲೊಬ್ಬ ಮಹಾದಂಪತಿಗಳು ಕಂಡುಕೊಳ್ಳುತ್ತಿದ್ದರೂ ನಮ್ಮಲ್ಲಿ ಬಹುಜನರು ರಾಮಸೀತಾಪ್ರೇಮ ಪುತ್ರರಾಗಿ ಇಂದಿಗೂ ಬಾಳುತ್ತಿಲ್ಲ. ನಮ್ಮ ಉದ್ಧಾರಕ್ಕಾಗಿ ಲೋಕ ಕಲ್ಯಾಣಕ್ಕಾಗಿ ಆ ಸತ್ಯಲೋಕವಾಸಿಗಳು ನಮ್ಮೆಲ್ಲರ ಹೃನ್ನಿಕೇತನಕ್ಕೆ ಅವತರಿಸಿ ಬಂದು ಅಲ್ಲಿ ಚಿರನಿವಾಸಿಗಳಾಗಬೇಕಾಗಿದೆ. ಹಾಗೆ ಅವರು ಬರುತ್ತಾರೆ, ಮುಂದೆಂದೊ ಬರುತ್ತಾರೆ.

(ಮಹಾರಾಜ ಕಾಲೇಜಿನಲ್ಲಿ ನಡೆದ ಶ್ರೀರಾಮಯಣ ದರ್ಶನಂ ಉಪನ್ಯಾಸ ಮಾಲೆಯ ಅಂಗವಾಗಿ, ೨೧-೧-೧೯೫೪ ರಂದು ವಿದ್ಯಾರ್ಥಿಯಾಗಿದ್ದ ನಾನು ಮಾಡಿದ ಭಾಷಣ ಅದೇ ವರ್ಷ 'ಶ್ರೀ ರಾಮಾಯಣ ದರ್ಶನಂ ಉಪನ್ಯಾಸಮಾಲೆ' ಎಂಬ ಗ್ರಂಥದಲ್ಲಿ ಪ್ರಕಟವಾಯಿತು. ಆ ಲೇಖನದ ಯದ್ವತ್ ಪ್ರತಿ ಇದು.)

* * * *

# ಶ್ರೀ ರಾಮಾಯಣ ದರ್ಶನದಲ್ಲಿ ಸಮಕಾಲೀನ ಪ್ರಜ್ಞೆ

ಯಾವುದೇ ಕೃತಿಯೂ ತನ್ನ ಸಮಕಾಲೀನ ಪರಿಸರದಲ್ಲೆ ಹುಟ್ಟುತ್ತದೆಯಾದರೂ ಅದು ಭವಿಷ್ಯತ್ ಕಾಲದಲ್ಲಿ ಬೆಳೆಯಬೇಕಾಗುತ್ತದೆ, ಭೂತಕಾಲದ ಸಾರವನ್ನೂ ಹೀರಿಕೊಂಡಿರಬೇಕಾಗುತ್ತದೆ. ಆದರೆ ಈ ಸಮಕಾಲೀನ ಎಬುದು ಯಾವುದು ? ವರ್ತಮಾನವನ್ನೆ ಸಮಕಾಲವೆಂದರೂ ಆ ವರ್ತಮಾನ, ಆ ಸಮಕಾಲೀನ ಯಾವುದು? ಕಾಲಮಾನ ದೇಶಮಾನ ಎರಡೂ ಈ ಸಮಕಾಲೀನದಲ್ಲಿ ಸಂಗಮಗೊಂಡಿರುತ್ತವೆ. ಜೊತೆಗೆ ಆಯಾ ವ್ಯಕ್ತಿ ಮಾನವೂ ಒಂದೊಂದು ಇದರೊಡನೆ ಇದ್ದೇ ಇದ್ದೀತು. ಅಂದರೆ, ಒಂದೇ ಕಾಲವನ್ನು ಹಲವು ವ್ಯಕ್ತಿಗಳು ಹಲವಂದದಿಂದ ಕಾಣುತ್ತಾರಲ್ಲ. ಹಾಗಾಗಿ, ವ್ಯಕ್ತಿ ಮಾನವೂ ಸೇರಿ ತ್ರಿಮಾನಕೂಟವಾಗುತ್ತದೆ. ಮಾನತ್ರಿಕೂಟವಾಗುತ್ತದೆ. ಸಮಕಾಲದ ಕಾಲಮಾನವಾದರೂ ಒಬ್ಬೊಬ್ಬರಿಗೆ ಒಂದೊಂದು ಘಟಕವಾಗಿರುತ್ತದೆ. ದಿನಪತ್ರಿಕೆಗಳ ಬಿಸಿ ಬಿಸಿ ಸುದ್ದಿ ಯಾವುದು? ವಾರ ಪತ್ರಿಕೆಗೆಯಾವುದು? ಮಾಸಿಕ – ತ್ರೈ ಮಾಸಿಕ – ಅರ್ಧವಾರ್ಷಿಕ – ವಾರ್ಷಿಕ ಹಾಗೂ ಶತಮಾನಿಕಗಳ ಕಾಲ ಮಾನವಾವುದು? ಹೀಗೆಯೆ ದೇಶಮಾನವೆಂದರೆ ಯಾವುದು? ನಗರ ಬಸ್ಸುಗಳ ದೇಶ ಯಾವುದು? ಒಂದೇ ದಿನದ ವಿಮಾನಯಾನದ ದೇಶ ಯಾವುದು? ರಾಷ್ಟ್ರೀಯ ಪತ್ರಿಕೆಯ, ಪ್ರಾಂತೀಯ ಪತ್ರಿಕೆಯ, ಗ್ರಾಮೀಣ ಪತ್ರಿಕೆಯ ದೇಶ ಯಾವುದು?

ತತ್ಕಾಲೀನ ಪ್ರೇರಣೆಯಿಂದ ಹುಟ್ಟಿಕೊಳ್ಳುವ ಕವನದ ಸಮಕಾಲ ಯಾವುದು? ಸಮಸ್ಯಾತ್ಮಕ ಕಾದಂಬರಿ ನಾಟಕಗಳ ಸಮಕಾಲ ಯಾವುದು? ಒಂದು ಯುಗದ ಸುಪ್ತ ಜನಮನೋಭೀಪ್ಸೆಯ – ಅರಕೆಯ ಅರಿಕೆಯ ಪರಿಣತ ಫಲವಾಗಬೇಕಾದ ಮಹಾಕಾವ್ಯದ ಸಮಕಾಲೀನತೆ ಯಾವುದು? ಅದರ ಕಾಲಮಾನ ದೇಶಮಾನ ವ್ಯಕ್ತಿಮಾನ ಯಾವುದು? ವಸ್ತುಕೋಶದಂತಿದ್ದ ಪುರಾಣಗಳು, ಹಿಂದಿನ ಮಹಾಕಾವ್ಯಗಳು ಈ ಎಲ್ಲವನ್ನೂ ತಮ್ಮೊಳಗೇ ಒಗ್ಗೂಡಿಸಲು ಯತ್ನಿಸುತ್ತಿದ್ದವು. ಒಬ್ಬ ಮಹತ್ವದ ಕೃತಿಕಾರ ತನ್ನ ಹಲವು ಕೃತಿಗಳಲ್ಲಿ ಹೀಗೆ ನಾನಾ ಸಮಕಾಲೀನ ಕೃತಿಯನ್ನು – ದಿನಪತ್ರಿಕೆಯಿಂದ ಶತಮಾನ ಸಂಪುಟದ ತನಕ ಆ ಜನಾಂಗ ಈ ಜನಾಂಗದ ಎಲ್ಲ ತರಂಗದ ದನಿಯನ್ನೂ ಒಳಗೊಂಡ ಕೃತಿಯನ್ನು ನೀಡುತ್ತಾನೆ. ನಗರದ ಒಂದೇ ಮುದ್ರಣ ಕೇಂದ್ರದಲ್ಲಿ ಎಲ್ಲ ತರಹದ ಪತ್ರಿಕೆಗಳೂ ಹುಟ್ಟಿಕೊಳ್ಳುವಂತೆ ಈತನ ಕೃತಿಗಳಿರಬಹುದು. ಲೇಖಕನು ವರ್ತಮಾನ ಖ್ಯಾತಿಯ ಅಂದಂದಿನ ಅಗತ್ಯಗಳನ್ನ ಪೂರೈಸುವ, ಅನಿಸಿಕೆಗಳನ್ನು ತೆರೆಯುವ, ಮುನಿಸಿಕೆಯನ್ನು ಕಾರುವ ಕೃತಿಗಳನ್ನೇ ಬರೆಯುವುದರಲ್ಲಿ ಕಾಲಕಳೆಯಬಹುದು. ಸಾರ್ಥಕ್ಯ ಕಾಣಬಹುದು. ಶ್ರೀ ಕುವೆಂಪು ಅಂತಹ ಬಹುಮುಖದ ಕೃತಿಕಾರರು ಹಲವು ಸಮಕಾಲದ ಕೃತಿಗಳನ್ನು ನೀಡಿದ್ದಾರೆ. ಗೊಬ್ಬರ ಕುರಿತ ಕವನವೆ, ಅಷ್ಟಗ್ರಹಕೂಟ ಕುರಿತ ಕವನಗಳೆ ; ಕನ್ನಡ ಕರ್ನಾಟಕ ಕುರಿತ ಕವನಗಳೆ ; ಸೂರ್ಯೋದಯ ಸೂರ್ಯಾಸ್ತಗಳ ಸೌಂದರ್ಯ ಹಿಡಿದಿಡುವ ಕವನಗಳೆ ; ಪುರಾಣ ಕಾಲದ ನಿತ್ಯ ವರ್ತಮಾನವನ್ನು ನಮ್ಮ ವರ್ತಮಾನದಲ್ಲಿ ಉಸಿರಾಡಿಸಲೆಳಸುವ ಮಹಾಕಾವ್ಯ – ನಾಟಕಗಳೆ ; ಮಲೆನಾಡಿನ ಜೀವನವನ್ನು ಮಾನವ ಜೀವನದೊಡನೆ ಕೂಡಿಸಿ ತೆರೆದು ತೋರಿರುವ ಪ್ರಾದೇಶಿಕ ಆತ್ಮಕಥೆಗಳಾದ ಕಾದಂಬರಿ ಕಾವ್ಯಗಳೆ ; – ಯಾವ ಸಮಕಾಲ ಬೇಕು ?

ಪ್ರಸ್ತುತ ಶ್ರೀ ರಾಮಾಯಣ ದರ್ಶನದ ಸಮಕಾಲೀನ ಪ್ರಜ್ಞೆ ಯಾವುದು? ಅದು ಹೇಗಿದೆ ಎಂಬುದನ್ನು ಗಮನಿಸುವಾಗ ಮೇಲಿನ ವಿವರಣೆಗಳನ್ನು ಗಮನದಲ್ಲಿಟ್ಟುಕೊಂಡಿರಬೇಕು. ಈ ಕಾವ್ಯ ರಚನೆ ಪ್ರಾರಂಭವಾದದ್ದು ೧೯೩೬ರಲ್ಲಿ. ಅಂದರೆ, ಎರಡನೆಯ ಮಹಾಯುದ್ಧ ಪ್ರಾರಂಭವಾಗುವುದಕ್ಕೆ ಮೂರು ವರ್ಷ ಮುಂಚೆ. ಮುಗಿದದ್ದು ೧೯೪೫ ರಲ್ಲಿ ; ಮಹಾಯುದ್ಧ ಮುಗಿದಾಗ, ಮಹಾಯುದ್ಧ ಬೇರೆ ಬೇರೆ ರಾಷ್ಟ್ರಗಳನ್ನೆಲ್ಲಾ ದಳ್ಳುರಿಯಲ್ಲಿ ತಬ್ಬಿಕೊಂಡಿತ್ತಾದರೂ ಅದರ ಬೇಗೆ ಮಾತ್ರ ನಮ್ಮ ನಾಡಿಗೆ ಪರೋಕ್ಷವಾಗಿ ಸೋಕಿತ್ತು. ಸ್ವಾತಂತ್ರ್ಯ ಸಂಗ್ರಾಮದ ಉತ್ಸಾಹ ನಾಡನ್ನೆಲ್ಲ ತಬ್ಬಿಕೊಂಡಿದ್ದ ಕಾಲವದು. ಯುದ್ಧದ ಬೇಗೆ ಕ್ಷಾಮವಾಗಿ ಸುಟ್ಟಿದ್ದ ಕಾಲವದು – ಬಂಗಾಲ ಬಿಹಾರಗಳಲ್ಲಿಯಂತೂ ಬರಗಾಲ ಮುವ್ವತ್ತೈದಕ್ಕೂ ಹೆಚ್ಚು ಲಕ್ಷ ಜನರನ್ನು ಆಹುತಿ ತೆಗೆದುಕೊಂಡಿದ್ದ ಕಾಲ. ವಿಶಾಖಪಟ್ಟಣ, ಮದರಾಸುಗಳ ಮೇಲೆ ಬಾಂಬು ಬಿದ್ದಿತ್ತು ; ಬೆಂಗಳೂರಿಗೆ ಬಿದ್ದೀತು ಎಂಬ ಸುದ್ದಿಯ ಸೂಡು ಹಬ್ಬಿದ್ದ ಕಾಲ. ಆಗ ಕುವೆಂಪು ಬೆಂಗಳೂರು ವಿಶ್ವೇಶ್ವರಪುರದಲ್ಲಿ ಕಾವ್ಯ ರಚಿಸುತ್ತಿದ್ದರು. (ತಮ್ಮ ಕಾವ್ಯದ ಪ್ರತಿಯೊಂದನ್ನು ಮಾಡಿಸಿ ಮಲೆನಾಡಿನಲ್ಲಿ ಜೋಪಾನಪಡಿಸುವಾಶೆ ಇಟ್ಟುಕೊಂಡ್ದಿದರೆಂಬ ವದಂತಿ) ರಾಷ್ಟ್ರೀಯ ರಾಜಕೀಯದಲ್ಲಿ ಅಧಿಕಾರಸ್ಥರಲ್ಲದ ನಾಯಕರೆ ಎಲ್ಲಕ್ಕೂ ಇದ್ದದ್ದರಿಂದ, ಮೇಲಾಗಿ ಮಹಾತ್ಮಾಜಿಯಂತಹ ಮಹಾ ಪುರುಷರಿದ್ದದ್ದರಿಂದ ತ್ಯಾಗೋತ್ಸಾಹ ಹೆಚ್ಚು ಎದ್ದು

ಕಾಣುತ್ತಿತ್ತು ಆಗ. ಇದ್ದ ವೀರರಾದರೂ ಬಿತ್ತದೆ ಬೆಳೆಯುವವರಾಗಿರಲಿಲ್ಲ. ಬಲಿತ ತೆಂಗಿನ ಕಾಯಾಗಿ ನೆಲದಲ್ಲಿ ಅಡಗಿ ಮೊಳೆತು ಕ್ರಮಕ್ರಮೇಣ ಚಿಗುತು ಮರವಾಗಿ ಬೆಳೆದ ಅನೇಕರು ಇದ್ದಕಾಲ. ಕುಂಡಗಳಲ್ಲ, ಕೊಂಡ ಅಥವಾ ಬಾಡಿಗೆಯ ಬಣ್ಣಬಣ್ಣದ ಹೂಕುಂಡಗಳಲ್ಲ; ಬೆಳೆದೂ ಹಣ್ಣು ಕಾಣದೆ ಮುರಿದುಹೋದ ಮರಗಳು ಬೆಳೆದಿದ್ದ ಕಾಲ. ರಾಜಕೀಯೇತರ ರಂಗದಲ್ಲಿ ಮಹರ್ಷಿ ಅರವಿಂದರು, ಮಹರ್ಷಿ ರಮಣರು, ಕವೀಂದ್ರ ರವೀಂದ್ರರು ಬೆಳಗಿದ್ದ ಕಾಲ. ಅಂತಾರಾಷ್ಟ್ರೀಯ ರಾಜಕೀಯ ಜಗತ್ತಿನಲ್ಲಿ ಹಿಟ್ಲರ್ ಮುಸೋಲನಿ ಗೊಬೆಲ್ಸ್‌ರಂತಹ ಹಿರಣ್ಯ ಕಶ್ಯಪಾದಿಗಳಿದ್ದ ಕಾಲ ಅದು. ಚರ್ಚಿಲ್ ಸ್ಟಾಲಿನ್ ರೂಸ್‌ವೆಲ್ಟರೂ ಇದ್ದಕಾಲ.

ಬೃಹದ್ಬಲಶಾಲಿಯಾದ ಸಾಮ್ರಾಜ್ಯವನ್ನು ಶಸ್ತ್ರಾಸ್ತ್ರವಿಲ್ಲದೆ ಎದುರಿಸುವ ತಂತ್ರವನ್ನು ಮಂತ್ರವನ್ನು ಕಂಡ ಗಾಂಧೀಜಿ ಅಹಿಂಸಾ ಮಂತ್ರ ಜಪಿಸುತ್ತಿದ್ದ ಇದೇ ಕಾಲದಲ್ಲಿ, ಭೂಗೋಲದ ಆ ಕಡೆ ಜರ್ಮನಿಯಲ್ಲಿ ಹಿಟ್ಲರ್ ಮಹಾದೈತ್ಯ ಇದ್ದ ; ಬ್ರಿಟಿಷರನ್ನು ಗೆದ್ದು ಅವರನ್ನೂ ತನ್ನ ಜರ್ಮನರ ತೊತ್ತಾಗಿ ಮಾಡಿಕೊಳ್ಳಬೇಕೆಂಬ ಹಠವಿದ್ದಾತ ; ಜಗತ್ತೆಲ್ಲವೂ ಅನಾರ್ಯ ಜನಾಂಗ, ಜರ್ಮನರೊಬ್ಬರೇ ಆರ್ಯ ಸಂತಾನ, ಅನಾರ್ಯ ಸಂತಾನವನ್ನೆಲ್ಲ ನಪುಂಸಕಗೊಳಿಸಿ ಆರ್ಯ ಸೇವೆಗೆ ತೊಡಗಿಸಬೇಕು ಎಂದು ಮದಿರೋನ್ಮತ್ತನಾಗಿ ಉಗ್ರವಾಗಿ ಬೆಳೆದಿದ್ದವ; ಯಹೂದಿ ಸಂಜಾತರೆಲ್ಲ ನಿರ್ನಾಮಗೊಳ್ಳಬೇಕೆಂದು ಅರವತ್ತುಲಕ್ಷ ಜನರನ್ನು ನಾನಾ ವಿಧಾನದಿಂದ ಕೊಲ್ಲಿಸಿದ ಮೃತ್ಯುವಾಗಿದ್ದವ ; ಅಷ್ಟೇಕೆ, ಸತ್ತವರೂ ಉಪಯೋಗಕ್ಕೆ ಬರಬೇಕೆಂದು, ಆ ಹತ ಯಹೂದಿ ಜನರ ಮೂಳೆಗಳಿಂದ ಗೊಬ್ಬರ ಮದ್ದು ಕಾರ್ಖಾನೆಗಳನ್ನು ಅಭಿವೃದ್ಧಿ ಪಡಿಸಿದ ಬೀಭತ್ಸು ರಾಕ್ಷಸ, ಇದ್ದ ಕಾಲವದು. ಅದೇ ದಿನ ಅದೇ ಸೂರ್ಯನ ಕೆಲ ಕಿರಣ ಈ ಗಾಂಧಿಯನ್ನು ಕಾಣುವಾಗ ಮತ್ತಷ್ಟು ಕಿರಣ ಆ ಪಿಶಾಚನನ್ನು ಕಾಣುತ್ತಿದ್ದವು. ತನ್ನ ನಾಡಿನ ಸತ್ತ ಅಭಿಮಾನವನ್ನು ಕೆರಳಿಸಿ ರೂಢಿಸಿದ ಆತ ಏಕೊ ಹೇಗೋ ವಿನಾಶಕಾರಿಯಾದ. ಇಲ್ಲಿ ಅಭಿಮಾನ ಹೀನರಾದ ಜನತೆಯನ್ನು ಸತ್ತ್ವಾಭಿಮಾನ ಸಂಪನ್ನರನ್ನಾಗಿ ಹುರಿದುಂಬಿಸಿ ಸ್ವಾತಂತ್ರ್ಯ ಸಮರಕ್ಕೆ ಸಜ್ಜುಗೊಳಿಸಿದವ್ಯಕ್ತಿ ಮಹಾ ಸತ್ತ್ವಸಂಪನ್ನನಾಗಿದ್ದ ಕಾಲವದು. ಒಂದರ್ಥದಲ್ಲಿ ಇಬ್ಬರೂ ಬ್ರಿಟಿಷರಿಂದ ಮಾನಭಂಗಗೊಂಡಿದ್ದವರೆ ! ಅದರಿಂದ ಅವರಿಬ್ಬರೂ ಒಂದೇ ಸಾಮ್ರಾಜ್ಯವನ್ನು ಎದುರಿಸುತ್ತಿದ್ದರು. ಅಸ್ತ್ರ ಬೇರೆ ; ಮಂತ್ರ–ತಂತ್ರ–ಮನೋಭಾವನೆಗಳೆಲ್ಲ ಬೇರೆ; ಗುರಿಯೂ ಬೇರೆಯಾಗಿತ್ತು. ಒಂದು ವೇಳೆ ಹಿಟ್ಲರ್ ಪಕ್ಷ ಗೆದ್ದು ಗಾಂಧೀ ತತ್ವ ಸೋತಿದ್ದರೆ ? ಅಥವಾ ಬ್ರಿಟಿಷರು ಗೆದ್ದು ಗಾಂಧಿ ತತ್ವ ಸೋತಿದ್ದರೆ?



ಆ ಯುಗ ಅತ್ಯಂತ ಸಂಕೀರ್ಣವಾದ ಬೃಹತ್ ಸತ್ತ್ವಗಳ – ತತ್ತ್ವಗಳ ಹೋರಾಟದ ಕಾಲವಾಗಿತ್ತು. ಆದ್ದರಿಂದ ಆ ಆವರಣದಲ್ಲಿ ಕಾವ್ಯ ಸೃಜಿಸುವ ಕವಿಗೆ ಸಮಕಾಲವೆಂಬುದು ಯಾವುದಾಗಬೇಕಾದೀತು? ದಿನಪತ್ರಿಕೆಯ ಸಮಕಾಲವಾಗಬೇಕಿದ್ದಿತೆ? ವಾರ್ಷಿಕ ಸಂಪುಟದ ಶತಮಾನ ಸ್ಮರಣ ಸಂಪುಟದ ಸಮಕಾಲವಾಗಬೇಕೆ? ಹಾಗೂ ಗ್ರಾಮ ಪತ್ರಿಕೆಯ ದೇಶಮಾನವನ್ನು ಪಡೆದಿರಬೇಕಿದ್ದಿತೆ? ಅಥವಾ ರಾಷ್ಟ್ರೀಯ ಪತ್ರಿಕೆಯ ದೇಶಮಾನವನ್ನು ಪಡೆಯಬೇಕಿದ್ದಿತೆ? ಹಾಗೆಯೇ ವ್ಯಕ್ತಿಮಾನವಾದರೂ ಯಾವುದಾಗ ಬೇಕಿದ್ದಿತು? ಅಲ್ಪಕಾಮಿಯದೆ? ಶೀಘ್ರಫಲಕ್ಕೆ ಶೀಘ್ರಾವಸಾನವುಂಟು. ಸುಲಭ ಫಲಕ್ಕೂ ಸುಲಭಾವಸಾನವುಂಟು. ದೈನಂದಿನ ವರ್ತಮಾನಗಳನ್ನೆ ನಿತ್ಯವರ್ತಮಾನಗಳೆಂದು ಬಗೆದರೆ ಎಷ್ಟು ಪ್ರಮಾದವಾಗದು? ಹೊರ ಘಟನೆಗಳನ್ನೆ ನೋಡುತ್ತಿದ್ದರೆ ಯಾರಿಗೂ ತಲೆ ಕೆಡುತ್ತದೆ. ಅವುಗಳ ವೈಸಂಗತ್ಯವನ್ನು ಕಂಡು ಹತಾಶೆಯಾಗಬಹುದು. ಆದರೆ ಅವುಗಳ ಹಿಂದಿರುವ ಪ್ರೇರಣಗಳನ್ನು ಪೂರಣಗಳನ್ನು ಸೂಕ್ಷ್ಮಸಂವೇದನದಿಂದ ಗ್ರಹಿಸಿದರೆ ನಿರಾತಂಕಭಾವ ಬರುತ್ತದೆ. ಘಟ್ಟಪ್ರದೇಶದ ಸುತ್ತು ಬಳಸಿನ ದಾರಿಯಲ್ಲಿ ವೇಗವಾಗಿ ಸಂಚರಿಸುವ ವಾಹನದಲ್ಲಿ ಮೊದಲಬಾರಿಗೆ ಕುಳಿತು ಪ್ರಮಾಣ ಮಾಡಿದ ಯಾರಿಗೂ ಗಾಬರಿಯಾಗುವುದರ ಜೊತೆಗೆ ತಲೆ ತಿರುಗುತ್ತದೆ. ಜೊತೆಗೆ ವಮನ ಶ್ರಮವೂ ಬರುತ್ತದೆ. ಸುಲಭೌಷಧವೆಂದರೆ ತಲೆ ತಿರುಗಿಗೆ ಕಾರಣವಾದ, ದೃಷ್ಟಿಬಿಂದುವಿನ ದೂರ ವ್ಯತ್ಯಾಸಕ್ಕೆ ಕಾರಣವಾದ, ಹೊರನೋಟವನ್ನು ಕಣ್ಣಿಟ್ಟು ನೋಡದೆ ಕಣ್ಣು ಮುಚ್ಚುವುದು ಅಥವಾ ಚಲಿಸುವ ವಸ್ತುವನ್ನು ಹಾಗೂ ದೃಷ್ಟಿದೂರ ದೃಶ್ಯವನ್ನು ನಿವಾರಿಸಿಕೊಂಡು ಸ್ಥಿರವಸ್ತುವೊಂದನ್ನಷ್ಟೆ ದಿಟ್ಟಿಸಿ ನೋಡುವುದು. ಇದೂ ಆಗದಾದರೆ ಕೊಂಚ ಹೊತ್ತು ಕಣ್ಣು ಮುಚ್ಚುವುದು. ಹೀಗೆ ಬಹಿರಂಗದ ಘಟನೆಗಳು ತಲೆತಿರುಗಿಸಿ ಓಕರಿಕೆ ಬರಿಸಿದಾಗ ನಾವು ನಮ್ಮ ಕಣ್ಣನ್ನು ಅತ್ತಕಡೆಯಿಂದ ನಿಶ್ಚಲವಸ್ತುಗಳತ್ತ ಹೊರಳಿಸಬೇಕು. ಅಲ್ಲವೆ, ಕಣ್ಣು ಮುಚ್ಚಿ ಅದರ ಮತ್ತು ನಮ್ಮ ಒಳಗಣ್ಣನ್ನು ಕಾಣಬೇಕು ಆಗ ಆ ವಿಸಂಗತಘಟನೆಗಳ ಹಿಂದೆ ಅರ್ಥದ ಸುಳಿವಿರುವುದು ಹೊಳೆದೀತು. ನಮ್ಮೊಳಗಿನ ಗ್ರಹಿಕೆಯ ಪ್ರಮಾದವೂ ಆಗ ತಿದ್ದುಗೊಳ್ಳುತ್ತದೆ. ಹೀಗೆ ಕಣ್ಮುಚ್ಚುವುದೂ ಆಗದಿದ್ದರೆ ಮರಸುಗುಳಿಗೆ ತೆಗೆದುಕೊಂಡು ಮಲಗಿಬಿಡಬೇಕು. ದಿಟ್ಟಕವಿ ತನ್ನ ಸುತ್ತಣ ಪರಿಸರದ ಬಗೆಗೆ ತಾಳುವ ನಿಲುವು ಮರಸುಗುಳಿಗೆ ತೆಗೆದುಕೊಳ್ಳುವಂತಹುದೂ ಅಲ್ಲ. ತಲೆತಿರುಗಿ ವಮನಕ್ಕೆ ಬಲಿಯಾಗುವಂತಹುದೂ ಅಲ್ಲ. ಚಲಿಸುವ ವಸ್ತುಗಳ ಹತ್ತಿರ ಬಂದಂತೆ ತೋರಿ

ದೂರ ಸರಿಯುವ, ದೂರವಿದ್ದಂತೆ ತೋರಿ ಹತ್ತಿರಕ್ಕೆ ಸಾರುವ ವಸ್ತುಗಳ – ನೋಟದಲ್ಲಿ ದಿಟ್ಟಸೊಬಗು ಕಾಣುವುದು. ಅಂದಂದಿನ ಘಟನೆಗಳಿಗೆ ಕೆರಳಿ ಪ್ರತಿಕ್ರಿಯಾ ರೂಪದ ಕವನ ವಮನ ಮಾಡುವುದು ದೊಡ್ಡ ಕೃತಿಗೆ ಸಲ್ಲದ್ದು.[೧] ಅಥವಾ ಘಟನೆಗಳಿಂದ ಬೆಬ್ಬಳಿಸಿ ಹತಾಶವಾಗಿ 'This is the way the world ends.... not with a bang, but with a whimper' ಎನ್ನುವುದೂ ಅಲ್ಲದ್ದು.

ಶ್ರೀ ಕುವೆಂಪು ನಾನಾ ರೀತಿಯ ಸಮಕಾಲೀನ ಪ್ರಜ್ಞೆಯ ಕವಿತೆಗಳನ್ನು ರಚಿಸಿದ್ದಾರೆ. ಆದರೆ ರಾಮಾಯಣದರ್ಶನದಲ್ಲಿ ಮಾತ್ರ ತಲೆಸುತ್ತಿಸುವ ಚಲಿಸುವ ವಸ್ತುಗಳನ್ನು ಕಂಡೂ ಕಾಣದಂತೆ ಅವುಗಳಿಂದ ತಲೆತಿರುಗಿಸಿಕೊಳ್ಳದೆ ಅಂತರ್ಮುಖಗೊಳ್ಳುತ್ತ ಸಮಕಾಲೀನವಾಗಿದ್ದಾರೆ. ಅವರ ಸಮಕಾಲವಾದರೂ ಅಲ್ಲಿ, ರಾಷ್ಟ್ರೀಯ ಅಂತಾರಾಷ್ಟ್ರೀಯ ದೇಶಮಾನದ್ದು ; ದಶಮಾನ ಶತಮಾನ ಪತ್ರಿಕೆಯ ಕಾಲಮಾನದ್ದು. ಏಕವ್ಯಕ್ತಿಮಿತ ಮಾನದ್ದಲ್ಲ. ಅಥವಾ ವರ್ಗಮಿತಮಾನದ್ದಲ್ಲ. ಆದ್ದರಿಂದಲೆ ಅವರ ಕಾವ್ಯದೊಳಕ್ಕೆ ಸಣ್ಣಸಣ್ಣ ಧ್ವನಿಗಳೆಲ್ಲ ಅಪಸ್ವರಗೊಳಿಸುವಂತೆ ನುಗ್ಗಿಲ್ಲ. ಬಹಿರ್ಘಟನೆಯಾಗಿಯೂ ನುಗ್ಗಿಲ್ಲ. ಅವರು ರಾಮಾಯಣವನ್ನಾದರೂ ಬಹಿರ್ಘಟನೆಯಾಗಿ ಬರೆಯುತ್ತಿಲ್ಲವೆಂದು ಹೇಳಿದ್ದಾರೆ. ಹಳೆಯಕಥೆಯನ್ನೆ ಒಳ ಹುರುಳಿಗಾಗಿ ಬರೆಯುವಾಗ ಈಗಿನ ವ್ಯಾಪಾರಗಳನ್ನು ಹೇಗೆ ತಾನೆ ಅವುಗಳ

೧. ಸದ್ಯದ ವರ್ತಮಾನಗಳಿಗೆಲ್ಲ ಕೆರಳಿ ತಲೆಕೆಡಿಸಿಕೊಂಡು ಶಾಶ್ವತಾರ್ಥ ನೀಡುಹೋಗುವುದು ಸರಿಯೆ ಆದರೂ ಅದಕ್ಕೆ ವರ್ತಮಾನ ಬೆಲೆಯಷ್ಟೇ ಲಭಿಸೀತು. ನಮ್ಮ ಮನೆಯಲ್ಲೊಂದು ಬಾವಿಯಿದೆ. ಆಳವಾದ ಬಾವಿ ಅದು. ಬೇಸಿಗೆಯಲ್ಲಿ ತಳಮುಟ್ಟುವ ಅದರ ನೀರು, ಮಳೆಗಾಲ ಪ್ರಾರಂಭವಾಗಿ ಎರಡು ಮೂರು ಜೋರು ಮಳೆ ಬಿದ್ದೊಡನೆಯೆ ಮೇಲುಮಟ್ಟದ ತನಕ ಬರುತ್ತಿತ್ತು, ಆದರೆ ನೀರೆಲ್ಲ ಗಂಜಲಮಯವಾಗಿರುತ್ತಿತ್ತು. ಬಾವಿಯ ಆಸುಪಾಸಿನಲ್ಲಿ ಊರವರ ತಿಪ್ಪೆ ಗುಂಡಿ, ಅಲ್ಲಿಗೆ ಊರವರ ನೀರು ಹರಿದು ಭರ್ರನೆ ಬರುತ್ತಿತ್ತು. ಅಲ್ಲಿ ನಿಂತ ನೀರು ಬಾವಿಯೊಳಕ್ಕೆ ಬರುತ್ತಿತ್ತು. ಬಾವಿಗೆ ಅಲ್ಲಿಂದ ಬಿಲಗಳಿದ್ದುದರಿಂದ ಮಳೆ ಬಿದ್ದೊಡನೆಯೆ, ತಿಪ್ಪೆಗುಂಡಿ ತುಂಬಿದೊಡನೆಯೇ ಬಾವಿಗೆ ಹೊಸ ನೀರಿನ ಜಲ ಬರುತ್ತಿತ್ತು. ಇದನ್ನು ಗಮನಿಸಿದ್ದ ನಮ್ಮ ತಂದೆ ಕಷ್ಟಪಟ್ಟು ಬಾವಿಯೊಳಗಿದ್ದ ಆ ಬಿಲದ ಬಾಯಿಗಳನ್ನೆಲ್ಲ ಗಾರೆಗಚ್ಚಿಯಿಂದ ಮುಚ್ಚಿಸಿದರು. ಆಮೇಲೆ ಮೊದಲ ಮಳೆಗಳಿಗೆ ಬಾವಿ ತುಂಬುವುದು ತಪ್ಪಿತು. ನಾವು ಹುಡುಗರು ಗೊಣಗಿದೊ. ಒಳ್ಳೆಯ ಮಳೆಗಾಲ ಆದಾಗ ಮಾತ್ರ ನೀರು ಮೇಲೆ ಬರುವಂತಾಯಿತು. ಆದರೆ, ಅದೆಷ್ಟು ತಿಳಿನೀರು, ಎಳನೀರು! ಬಿದ್ದ ಮಳೆ ನೀರೆಲ್ಲ ಒಡನೆಯೇ ಬಾವಿಯನ್ನು ತುಂಬಬೇಕೆನ್ನುವ ಶೀಘ್ರ ಪ್ರತಿಕ್ರಿಯಾ ರೂಪದ ಕವನಗಳಿಗೆ ಯಾವ ಬೆಲೆ ? ಮಳೆನೀರು ನೆಲದ ಹಾಸಿನಲ್ಲಿ ಸೋಸಿ ಲವಣಗಳನ್ನು ಕರಗಿಸಿಕೊಂಡು 'ಜಲದ ಕಣ್ಣಿ'ನಿಂದ ಬಾವಿಯೊಳಕ್ಕೆ ಸ್ರವಿಸಬೇಕು. ಆದರದಕ್ಕೆ ಜಲದ ಕಣ್ಣಿರಬೇಕು ! ಇದ್ದರೂ ಆತುರ ಸಲ್ಲ.



ಹೊರಬೆಲೆಕೊಟ್ಟು ಕೊಳ್ಳ ಹೋಗುತ್ತಾರೆ. ಅಂದರೆ ಈ ಕೃತಿಗೂ ಈ ಸಮಕಾಲಕ್ಕೂ ಸಂಬಂಧವಿಲ್ಲವೇನು? ಸಮಕಾಲೀನವಲ್ಲದ ಯಾವುದರಿಂದಾದರೂ ಯಾರಿಗೆ ತಾನೆ ಏನು ಫಲ? ಅಹುದು. ಸಮಕಾಲಿನ ಉಂಟೆಂದರೆ ಉಂಟು ; ಇಲ್ಲವೆಂದರೆ ಇಲ್ಲ. ಅದು ನೀವು ಹೇಗೆ ಅರ್ಥಿಸುತ್ತೀರೊ ಹಾಗೆ ಅರ್ಥಬಿಡುತ್ತದೆ. ಬಹಿರ್ಘಟನೆಗಳಾಗಿಯೆ ಕಾಣಬಯಸಿದರೆ ಇಲ್ಲಿ ಅವುಗಳ ಛಾಯೆಯೂ ಇಲ್ಲ, ಎನ್ನಬೇಕು. ಅವುಗಳ ಹಿಂದಿದ್ದ Spirit ರೂಪದಲ್ಲಿ ಇವೆ, ಎಂದು ಹೇಳುವುದಾದರೆ, “ಓಹೋ, ತುಂಬ ಪ್ರಭಾವ ಬೀರಿದೆ” ಎನ್ನದೆ ವಿಧಿಯಿಲ್ಲ. ಹಾಗಾದರೆ ಅದಾವುದು? ಹೀಗೆಂದರೆ, ಆ ನಮ್ಮ ಸಮಕಾಲೀನವಾದ Spirit ಯಾವುದು? ಎಂದು ಮೊದಲು ತಿಳಿಯಬೇಕಾಗುತ್ತದೆ.

ಹಿಂದೆಯೆ ತಿಳಿಸಿದಂತೆ ರಾಮಾಯಣದರ್ಶನ ಕಾವ್ಯ ಹುಟ್ಟಿದ ಹೊತ್ತಿನಲ್ಲಿ ಎರುಡ ತೀವ್ರ ವಿರುದ್ಧ ಸತ್ತ್ವಗಳು ಶಕ್ತಿಗಳು ಒಂದೇ ಪ್ರಬಲ ವಿರೋಧಿಯನ್ನು ಎದುರಿಸುತ್ತಿದ್ದವು. ರಾಮಾಯಣ ಕಾಲದಲ್ಲೂ ರಾಮರಾವಣರಂತಹ ಪ್ರಬಲ ಶಕ್ತಿಯ ವಿರುದ್ಧ ಸತ್ತ್ವರಿದ್ದರು. ಅಷ್ಟುಮೊನೆಗೊಂಡ ಪ್ರಚಂಡ ವಿರುದ್ಧ ಶಕ್ತಿಗಳು ಯುಗಕ್ಕೊಮ್ಮೊಮ್ಮೆ ಆವಿರ್ಭವಿಸಬಹುದು. ಉಳಿದೆಲ್ಲಾ ಕಾಲದಲ್ಲೂ ವಿರುದ್ಧ ಶಕ್ತಿಗಳಿದ್ದರೂ ಅವು ತುಂಬಾ ದುರ್ಬಲದ್ರಾವಣವಾಗಿರುತ್ತವೆ, ಅತಿಗಂಭೀರ ಕಂದರವಿದ್ದಾಗಲೆ ಅತಿ ಎತ್ತರದ ಶಿಖರವಿರುವುದು ಸಾಧ್ಯ. ಇವೆರಡೂ ಇರುವುದು ಅತಿ ಎತ್ತರದ ವಿಸ್ತಾರದ ಪರ್ವತ ಶ್ರೇಣಿ ಇದ್ದಾಗ ಮಾತ್ರವೆ. ಉಳಿದಂತೆಲ್ಲ ಕಂದರಗಳೂ ತೆಳ್ಳೆ, ಶಿಖರಗಳೂ ಮೋಟು–ಮೈದಾನದ ಗಿರಿಶಿಖರಗಳಂತೆ! ಶ್ರೀರಾಮ ರಾವಣರು ಇಬ್ಬರು ತಪೋನ್ವಿತ ಬಲರಾದರೂ ಗುಣದಲ್ಲಿ ತೀರಾ ವಿರುದ್ಧರು. ತನ್ನ ತಂದೆ ದಶರಥನಿಗೆ ಕೈ ಹಿಡಿದ ಸತಿಯರೆ ಮುನ್ನೂರು ಜನರಿದ್ದೂ ಮೂವರು ಪಟ್ಟದರಸಿಯರೂ ಇದ್ದರು. ಅದೇ ಯುಗದ ರಾವಣನಿಗೆ ಅಸಂಖ್ಯ ರುಚಿಸುಖ ತಿಳಿದಿತ್ತು. ಕಂಡವರೆಲ್ಲ ತನ್ನತ್ತ ದಿಂಡುಗೆಡೆದು ಬರುತ್ತಾರೆಂದು ಇಂದ್ರ ವಿಜಯದ ಮತ್ತಿನಿಂದ ಭ್ರಮಿಸಿದ್ದನಾತ. ಆ ಯುಗದಲ್ಲಿದ್ದೂ ಈ ರಾಮ ಯಾವ ಘೋಷಣೆಯನ್ನೂ ಮಾಡದೆ ಏಕಪತ್ನೀ ವ್ರತಸ್ಥನಾದ. ಅವನೇನೂ ಹೀನಬಲನೆ? ಹೀನ ಕಾಮನೆ? ಶೈವಧನಸ್ಸು ಮುರಿದ ಚಾರುಭೀಷಣನಾತ! ಯಾರೂ ಎತ್ತಲೂ ಆಗದಿದ್ದ ಆ ಚಂಡಕೋದಂಡವನ್ನು ಅನಾಯಸವಾಗಿ ಎತ್ತಿ ಮುರಿದಾತ! ಹೀನ ಬಲನೆ? ಹೀನ ಕಾಮನೆ? ಮತ್ತಾರು ಮಹಾಬಲರು? ಮಹಾಕಾಮರು? ರಾವಣನೆ? ಕಡೆಗೆ ದಶರಥನೆ? ಅವನು ಋಷಿ ಪತ್ನಿ ಅಹಲ್ಯೆಯ ಜಾರು ಕಥೆಯನ್ನು ಕೇಳಿದ್ದ. ಮುಂದೆ ವಾಲಿ ಸುಗ್ರೀವರ ದಾಂಪತ್ಯ ವೃತ್ತಾಂತ

ನೋಡುತ್ತಾನೆ! ಅದೇ ಕಾಲಕ್ಕೆ ಮುಂಚೆ ಋಷಿಪತ್ನಿಯನ್ನು ಕೆಣಕಿ ತಲೆಗಳನ್ನೆಲ್ಲ ಕಳೆದುಕೊಂಡ ಕಾರ್ತಿವೀರ್ಯಾರ್ಜುನನಿದ್ದ ; ಅದನ್ನೂ ಆತ ಕೇಳಿದ. ಕಾಮಹತ ಕಾರ್ತಿವೀರ್ಯಾರ್ಜುನನನ್ನು ಕೊಂದದ್ದು ಮಾತ್ರವಲ್ಲದೆ ಅವನ ಜಾತಿ ವರ್ಗವನ್ನೆಲ್ಲ ಯಾವ ದಯಾತಾರತಮ್ಯವೂ ಇಲ್ಲದೆ ಕೊಚ್ಚುತ, ಹೋದ ಪರಶುರಾಮನೂ ಈ ಮಹಾತೇಜನ ಪೌರುಷಕ್ಕೆ ವಿನೀತನಾಗಿದ್ದ. ಈ ಎಲ್ಲ ವಿಷಮ ಮೌಲ್ಯವಂತರಿದ್ದಾಗ ಯಾವುದೇ ನೀತಿಸಂಹಿತೆಯನ್ನೂ ಘೋಷಿಸದೆ, ಯಾವುದೇ ಮಹಾಸಾಹಸ ಮಾಡುತ್ತಿರುವೆನೆಂದೂ ಭ್ರಮಸದೆಯೆ ಏಕಪತ್ನೀ ವ್ರತವನ್ನು ಧರ್ಮವಾಗಿ ಮಾಡಿದ, ಸಂಸಾರಧರ್ಮವನ್ನು ದಾಂಪತ್ಯ ಶುದ್ಧಿಯನ್ನೂ ಬಾಳಿತೋರಿದ ರಾಮನಿದ್ದ. ಆಶ್ಚರ್ಯವೆಂದರೆ ಅವನ ತಮ್ಮಂದಿರೆಲ್ಲಾ ಅವನನ್ನೆ ಅನುಸರಿಸಿದರು. ಹೊಸ ಮೌಲ್ಯ ಪ್ರಸರಣವಾಯಿತು. ಹೆಂಡಿರಿಲ್ಲದ ಎಷ್ಟು ಗಂಡುಗಳಿಗೆ ದಾಂಪತ್ಯಯೋಗ ಲಭಿಸಿತೊ ಅವನಿಂದ. ಬಹುಪತ್ನೀ ಲೋಲರ ಒಂದು ಗುಟುಕಾಗಿ, ಉಳಿದಂತೆಲ್ಲ ಒಳಹಸಿವೆ ಹಿಂಗಿ ಹೋಯಿತೆಂದೇ ಭಾವಿಸಿಕೊಳ್ಳಬೇಕಾಗಿದ್ದ ಎಷ್ಟು ಹೆಂಗಸರಿಗೆ ಶ್ರೀರಾಮನ ಧರ್ಮ ಮಾರ್ಗದಿಂದ ಹಾಯೆನಿಸಲಿಲ್ಲ ? ಭೂಮಿಯನ್ನು – ಮಾಯೆಯ ಮೂರು ಮುಖಗಳಲ್ಲಿ ಒಂದನ್ನು – ಹಂಚಿ ಕ್ರಾಂತಿ ಸಾಧಿಸಬಹುದು. ಹಣ ಹಂಚಿ ಕ್ರಾಂತಿ ಮಾಡಬಹುದು. ಈ ಕಾಮಿನೀ – ಕಾಮವನ್ನು ವಿತರಣ ಮಾಡಿದವರ್ಯಾರು ಶ್ರೀರಾಮನಲ್ಲವೆ ?

ಇಂಥವನ ಶ್ರೀ ಸತಿಯನ್ನೇ ಕದಿಯಬೇಕೆ ಆ ರಾವಣ ! ಋಷಿಸತಿಯನ್ನು ಕೆಣಕಿದ ಇಂದ್ರನಿಗೆ, ಕಾರ್ತಿವಿರ್ಯಾರ್ಜುನನಿಗೆ ಇಂದ್ರಿಯ ಹೋಯಿತು. ತಲೆ ತೋಳುಗಳೆಲ್ಲಾ ಉದುರಿಹೋದವು. ಇಲ್ಲೂ ಹಾಗೇತಾನೆ ಆಗುವುದು ? ಆದರಿಲ್ಲಿ ಮೋಹಕ್ಕೆ ವಸ್ತುವಾದ ಹೆಣ್ಣು ಅಹಲ್ಯೆಯಲ್ಲ, ರೇಣುಕೆಯಲ್ಲ, ಕ್ಷಮಾ ಭೂಜಾತೆ ಸೀತೆ ! ರಾವಣವೈಭವ ಮೋಹ ಬಲೆಗಳನ್ನೆಲ್ಲ ಹುಲ್ಲುಕಡ್ಡಿಯಾಗಿ ಕಂಡ ಪ್ರಚಂಡಶಕ್ತೆ. ಆದ್ದರಿಂದಲೆ ಅದು ಅತಿಶಯಕಥೆ. ಅಂಥ ಹೆಣ್ಣನ್ನು ಒಲಿದ, ಅಂಥವಳು ತನಗೆ ನಿಷ್ಠಳಾಗಿರುವಂತೆ ಒಲಿದಿದ್ದ ಶ್ರೀರಾಮ ಹೀನಕಾಮನೆ ? ಇಂಥ ಸೀತಾರಾಮ, ಅಂಥ ರಾವಣ ಇದ್ದಯುಗ ಸರಳವೆ ? ಗಾಂಧೀ ಹಿಟ್ಲರ್‌ಗಳ ಯುಗವಾದರೂ ಸರಳವೆ ?

ನಮ್ಮ ಯುಗ ವೀರಕಾವ್ಯಕ್ಕೆ ಪ್ರಶಸ್ತವಾಗಿಲ್ಲ, ಎನ್ನುವ ಸಬೂಬಿಗೆ ಇದೇ ಉತ್ತರ. ಅಂಥ ಹಿಟ್ಲರನನ್ನು ಗೆದ್ದ ಬ್ರಿಟನ್ ತಾನು ವಿಜಯದೃಪ್ತವಾಗಿದ್ದ ಘಳಿಗೆಯಲ್ಲೆ ಎದುರಿಸಿದ, ಸೋಲಿಸಿದ, ಹಿಂದಿರುಗುವಂತೆ ಮಾಡಿದ ಗಾಂಧೀಜಿಯ ವೃತ್ತಾಂತ ವೀರಕಥನವಲ್ಲವೆ ? ಹಿಟ್ಲರನಿಗೂ ಪ್ರತ್ಯಸ್ತ್ರದ ಉತ್ತರ ಕಂಡುಕೊಂಡ ಬ್ರಿಟನ್



ಗಾಂಧೀಜಿಗೆ ಪ್ರತ್ಯಸ್ತ್ರವನ್ನು ಕಾಣಲಾಗಲಿಲ್ಲ. ಅಸ್ತ್ರದಿಂದ ಇವರು ಹೊರಟಿದ್ದರೆ ಅವರ ಬಳಿ ನಮ್ಮನ್ನು ಹೂಳುವಷ್ಟು ಅಸ್ತ್ರವಿತ್ತು. ಬುದ್ಧಿಮತ್ತೆಯಿಂದಷ್ಟೆ ವಾದ ಹೂಡಿದ್ದರೆ ಅದಕ್ಕೂ ಅವರ ಬಳಿ ಸಾಮಾಗ್ರಿ ಇತ್ತು. ಆದರೆ ಗಾಂಧೀಜಿ ಬಳಸಿದ, ಮೊದಲಬಾರಿಗೆ ಬೃಹತ್ ಪ್ರಮಾಣದಲ್ಲಿ ಬಳಸಿದ ಅಹಿಂಸಾ ಆಂದೋಲನ ಅಸಹಕಾರ ಚಳುವಳಿ ಬ್ರಿಟಿಷರಿಗೆ ಅತ್ಯಂತ ವಿನೂತನವಾಗಿದ್ದು ದಿಕ್ಕೆಡಿಸುವ ಬೆರಗು ತಂದಿತು. ಪ್ರತ್ಯಸ್ತ್ರ ಕಾಣದೆ, ಅನ್ಯಾಸ್ತ್ರ ಬಳಸಲಾಗದೆ ಅವರು ನಿರಸ್ತ್ರರಾಗಿ ಹೋದರು. ಬ್ರಿಟಿಷರ ವಿರುದ್ಧ ಇತಿಹಾಸ ಬಳಸಿದ ಅತ್ಯಂತ ಸಮರ್ಥ ಅಸ್ತ್ರ ಗಾಂಧೀಮಾರ್ಗವೇ ಆಗಿತ್ತು. ಉಳಿದ ಮಾರ್ಗಗಳು ಐತಿಹಾಸಿಕವಾಗಿ ವಿಫಲವಾಗುತ್ತಿದ್ದವೆನ್ನುವುದರ ಸಂಕೇತವಾಗಿ ಶ್ರೀ ಅರವಿಂದರು ಉಗ್ರಮಾರ್ಗದ ನೈಷ್ಫಲ್ಯವನ್ನು ಕಂಡುಕೊಂಡು ೧೯೧೦ರ ವೇಳೆಗೇ ರಾಜಕೀಯದಿಂದ ನಿವೃತ್ತರಾಗಿ ಯೋಗಮಾರ್ಗ ಹಿಡಿದದ್ದು ಸಾಕ್ಷಿಯಾಗಿದೆ. ಸ್ವಾತಂತ್ರ್ಯ ಸಾಧನೆಗೆ ಸಮರ್ಥ ನೇತಾರ ಬರುತ್ತಾನೆಂದೂ ತಾವು ಆ ಸಾಧನೆಗೆ ಯೋಗ ಶಕ್ತಿಯನ್ನು ಎರೆಯುವುದಾಗಿಯೂ ಶ್ರೀ ಅರವಿಂದರು ಭಾವಿಸಿದರು. ಸೌಮ್ಯವಾದಿಗಳಾದ ಗೋಖಲೆಯವರು, ಕೊಂಚ ಉಗ್ರಮಾರ್ಗಿಗಳಾದ ತಿಲಕರು ರಾಷ್ಟ್ರರಾಜಕೀಯರಂಗದಿಂದ ಇನ್ನೂ ಅರವತ್ತು ವಯಸ್ಸಿನ ಆಚೀಚೆಯಲ್ಲಿದ್ದಾಗಲೆ ಅಸ್ತಂಗತರಾಗಿದ್ದರು. ಪ್ರಕೃತಿ ಯುಗ ಪ್ರವರ್ತಕನೊಬ್ಬನಿಗೆ ರಂಗಸಜ್ಜಿಕೆ ನಡೆಸಿತ್ತು. ಗಾಂಧೀಜಿಯ ಆಗಮನವಾಯಿತು. ಶ್ರೀರಾಮಾಯಣದರ್ಶನ ಈ ಸಂಕೀರ್ಣಯುಗವನ್ನು ಅದರ Spirit ರೂಪದಲ್ಲಿ ಸೆರೆಹಿಡಿದಿದೆ ! ಅಷ್ಟೆ ಅಲ್ಲ, ಯುದ್ಧಾನಂತರದ ಸ್ವಾತಂತ್ರ್ಯಾನಂತರ ಜಗತ್ತಿನ Spiritನ್ನೂ ಈ ಕಾವ್ಯ ಮುಂಗಂಡಿದೆ.

ಹಿಟ್ಲರ್ ಸತ್ತ. ಹಿಟ್ಲರಿಸಂ ಅಲ್ಲಲ್ಲಿ ಇದ್ದರೂ ಅದರ ಬಗ್ಗೆ ಅದು ಇದ್ದನಾಡಿನಲ್ಲೆ ಭೀತಿಯಿದೆ. ಬ್ರಿಟಿಷರು ಭಾರತಕ್ಕೆ ಸ್ವಾತಂತ್ರ್ಯವಿತ್ತರು. ಆದರೆ ತಾವು ಶತ್ರುಸ್ಥಾನದಲ್ಲಿ ನಮ್ಮನ್ನಾಗಲಿ ತಮ್ಮನ್ನಾಗಲಿ ಇಟ್ಟಕೊಳ್ಳಲು ಔದಾರ್ಯದಿಂದಲೊ, ವಿವೇಕದಿಂದಲೊ, ಅಗತ್ಯದಿಂದಲೋ ಇಷ್ಟಪಡಲಿಲ್ಲ. ಭಾರತದೊಡನೆ ಸಾಮಾನ್ಯಾಸಕ್ತಿಯನ್ನು ರೂಢಿಸುವ ಸಾಮಾನ್ಯ ಸಂಪತ್ ಕೂಟವನ್ನೂ (Common Wealth) ನಿರ್ಮಿಸಿದರು. ಯುದ್ಧಾನಂತರ ಜಗತ್ತು ರಾಜಕೀಯವಾಗಿ ಎರಡು ಬಣವಾಯಿತು. ಆಮೇಲೆ ಮೂರಾಯಿತು. ಯುದ್ಧಭೀತಿಯಿಂದ ಬಲಿಷ್ಠ ಬಣಗಳೆರಡೂ ಜಗನ್ಮಾರಕಾಸ್ತ್ರಗಳನ್ನು ಪೇರಿಸುತ್ತಲೇ ಹೊರಟವು. ಈಗೆಷ್ಟರ ಮಟ್ಟಿನ ಯುದ್ಧ ಸಾಮಗ್ರಿ ಇದೆಯೆಂದರೆ ಜಗತ್ ಸಂಗ್ರಾಮ ಜಗನ್ನಾಶವೆಂದೇ ಭೀತಿ

ಮೂಡಿಸಿರುವಷ್ಟು. ಇದರಿಂದಾಗಿ ಈಗ ಯಾವ ಬಗೆಹರಿಯದ ಸಮಸ್ಯೆಗೂ ಯುದ್ಧವೇ ಪರಿಹಾರವಲ್ಲ ಎಂಬ ಅನಿವಾರ್ಯ ಎಚ್ಚರ ಎಲ್ಲ ಬಲಿಷ್ಠರಾಷ್ಟ್ರಗಳಿಗೆ ಬಂದಿದೆ. ಸಹಕರಿಸಿ ಬಾಳು, ಇಲ್ಲ ಸಹಿಸಿಕೊಂಡು ಬಾಳು, ಅದಿಲ್ಲವೆ ಎಲ್ಲರೂ ಹಾಳು – ಎಂಬುದು ಎಲ್ಲರಿಗೂ ಹೊಳೆದಿದೆ. ಹಾಗೂ ಯಾವುದೇ ಬಲಿಷ್ಠ ರಾಷ್ಟ್ರ ಎಷ್ಟೇ ದುರ್ಬಲ ರಾಷ್ಟ್ರವನ್ನೂ ನುಂಗಲೂ ಬರುವುದಿಲ್ಲ ; ಹಿಂಗಿಸಲೂ ಬರುವುದಿಲ್ಲವೆಂಬುದನ್ನು ವಿಯಟ್ನಾಂ ರಾಷ್ಟ್ರವೇ ಜ್ವಲಂತವಾಗಿ ತೋರಿಸಿದೆ. ೨೦ ವರ್ಷದ ತನಕ ಯುದ್ಧ ಹೂಡಿದ್ದರೂ ಆ ಸಣ್ಣ ರಾಷ್ಟ್ರದ ಅಸ್ತಿತ್ವವನ್ನು ಇಲ್ಲಗೊಳಿಸಲಾಗದೆ ಅಮೆರಿಕಾ ತಾನೆ ಹತಾಶವಾಗಿ ಹಿಂತೆಗೆಯ ಬೇಕಾಯಿತು. ಹತ್ತಾರು ರಾಷ್ಟ್ರಗಳು ಸುತ್ತುವರಿದೂ ನಾಲ್ಕಾರು ಯುದ್ಧ ನಡೆಸಿಯೂ ಇಸ್ರೇಲ್‌ನಂತಹ ತುಂಬ ಪುಟ್ಟರಾಷ್ಟ್ರವನ್ನು (ಅದರ ಪ್ರಜಾ ಸಂಖ್ಯೆ ೨೩ ಲಕ್ಷ !) ಆ ರಾಷ್ಟ್ರಗಳು ಭಂಗಿಸಲಾಗಲಿಲ್ಲ. ಹಿಂದೆ? ಯಾವುದೇ ಬಲಿಷ್ಠ ರಾಷ್ಟ್ರ ಮನಸ್ಸುಮಾಡಿದ್ದರೂ ಸಾಕು, ಮತ್ತಾವುದೆ ರಾಷ್ಟ್ರವನ್ನೂ ಕಾಲುಕೆರೆದು ಯುದ್ಧದಲ್ಲಿ ಬಲಿಹಾಕಬಹುದಿತ್ತು. ಕೊಂಚ ಸಾಲವಿತ್ತು ಆಗದವರನ್ನು ಒಕ್ಕಲೆಬ್ಬಿಸಬಹುದಾದ ಕಾಲವಿತ್ತು. ಈಗದು ಬದಲಾಗಿದೆ. ದುರ್ಬಲ ಸಬಲಗೊಳ್ಳುತ್ತಿದ್ದಾನೆ. ಹಾಗೆ ಸಬಲವಾಗುತ್ತಿರುವಾಗ ಆತನೂ ಮತ್ತನಾಗುವುದು ಸಹಜ ; ಇಲ್ಲವೆ ಬಂದ ಹೊಸ ಬಲದಿಂದಾಗಿ ತಲೆತಿರುಗುವುದೂ ಸಹಜ. ಹಿಂದೆ ಬಲಿಷ್ಠರಾಗಿ ಪಿತ್ರಾರ್ಜಿತ ಸಂಚಿತ ಪ್ರತಿಷ್ಠೆಯ ವಾರಸುದಾರರಾಗಿದ್ದವರು ತಮ್ಮ ಮುಂದೆಯೆ ಪ್ರತಿಸ್ಪರ್ಧಿವರ್ಗ ತಮ್ಮ ಸೇವಾವರ್ಗದಿಂದಲೆ ಹುಟ್ಟಿಕೊಂಡು ಬರುತ್ತಿರುವುದನ್ನು ಕಂಡು ಗಾಬರಿಗೊಂಡಿದ್ದಾರು. ಅದರ ಶೀಘ್ರ ಪರಿಣಾಮವಾಗಿ 'ಗೊಂದಲಪುರ' ಕವನಗಳು ಹುಟ್ಟಿಕೊಂಡವು. ತಮಗಾದ ಸಹಜನಷ್ಟವನ್ನೂ ತಮ್ಮ ಮುಂದಿನ ನತದೃಷ್ಟರಿಗಾದ ಸೌಭಾಗ್ಯವನ್ನೂ ತಿರುಚು ಮುರುಚು ಮಾಡಿ ಹೊಸತರಲ್ಲೆಲ್ಲ ಅಹಿರಾವಣ ಮಹಿರಾವಣರನ್ನು ಕಂಡ ಗೊಂದಲಪುರದ ಪುರೋಹಿತರು 'ಚಂಡೆಮದ್ದಲೆ' ಬಾರಿಸಿ ಹೌ ಹಾರಿದರು. "ಪೃಥ್ವೀ ಗತಯೌವನ !" "ಶ್ವೇ ಶ್ವೇ ಪಾಪೀಯದಿವಸ" ಎಂದು ಕಿರುಚಿದರು. ನಿನ್ನೆಗಿಂತ ಇಂದು. ಇಂದಿಗಿಂತ ನಾಳೆ ಕೆಡುತ್ತ ಹೋಗುತ್ತಿದೆ, ಪೃಥ್ವಿಯೆ ತನ್ನ ಯೌವನ ಕಳೆದುಕೊಂಡು ಬಿಟ್ಟಿದೆ. ಕಾಲ ಕೆಟ್ಟುಹೋಯಿತು, ಎಲ್ಲ ಹಾಳಾಗಿಹೋಯಿತು – ಎಂದು ಭಗ್ನರೋಷದಿಂದ ವ್ಯಂಗ್ಯದಿಂದ ಕಚ್ಚುಕಟಕಿಯಿಂದ ಕವನಕಾರಿದರು. "ಸರಳ ತರಲ ಮನಸ್ಸಿಗೆ ಜಗತ್ತೆಲ್ಲ ಸುಂದರವಾಗಿ ತೋರಿದೆ. ಸಂಕೀರ್ಣ ಮನಸ್ಸಿಗೆ ಬುದ್ಧಿ ಜೀವಿಗೆ ಅದು ಅಪಭ್ರಂಶವಾಗಿದೆ" ಎಂದು ಬುದ್ಧಿಮತ್ತವಾದ ಕಟ್ಟಿದರು. ನೋಡಿ ಅಪಸ್ಮಾರ ಪ್ರಾರಂಭವಾಯಿತು.



ಹೂವರಳಿದ ಮರವೂ ಹೆಣವಾಗಿ, ಮುಗ್ಧ ಪ್ರಣಯಿಗಳೂ ಹಾದರಿಗರಾಗಿ, ಸೂರ್ಯೋದಯವೂ ಕಸಾಯಿಖಾನೆಯಾಗಿ ಕಾಣುವಂಥ ಕಾಮಾಲೆಗಿಂತಲೂ ಕೀಳಾದ ಕಾಮಕಾಮಾಲೆ ಬಡಿದುಬಿಟ್ಟಿತು. ಇದರಿಂದ ನಮ್ಮ ಸ್ವಾತಂತ್ರ್ಯೋತ್ತರ ಕವಿತೆ ಹತವಾಯಿತು. ಇದನ್ನೆಲ್ಲ ಓದಿದ ಸ್ವಸ್ಥರಿಗೆ ತಮ್ಮ ಸ್ವಾಸ್ಥ್ಯವೇ ರೋಗಚಿಹ್ನೆಯೇನೋ ಎನ್ನಿಸಿತು. ಮುಗ್ಧರಿಗೆ ತಾವು ಬೆಪ್ಪುಗಳೆಂದೊ, ಅವರಂತೆ ತಾವಾದರೂ ತಲೆಕೆಡಿಸಿಕೊಂಡರೆ ಬುದ್ಧಿ ಪ್ರೌಢರಾಗಬಹುದೆಂದೊ ಮಳೆಯಲ್ಲೂ ಬೇಸಿಗೆ ಕಂಡರು. ವಸಂತದಲ್ಲೂ ಶಿಶಿರವನ್ನುಂಡರು. ರಾಜಾಧಿರಾಜರು ಸ್ವಾತಂತ್ರ್ಯ ಬಂದನಂತರ ಅಧಿಕಾರಚ್ಯುತರಾದರು. ಅವರಿಗೆ ಹೀಗನಿಸುವುದು ತಪ್ಪಲ್ಲ. ಓದಿಕಲಿತೇನು ಎಂದಿದ್ದ, ಹಿಂದೆ ಅದಕ್ಕಾಗಿ ಬೆರಳು ಕಳೆದುಕೊಂಡಿದ್ದ ತಲೆಕೆಡಿಸಿ ಕೊಂಡಿದ್ದ ಹತಭಾಗ್ಯದ ಜನಕೋಟಿ ಈಗ ಕಡ್ಡಾಯ ಓದಿಗೆ ಒಳಪಟ್ಟು ಓಟಿನ ಅಧಿಕಾರ ರುಚಿಯನ್ನೂ ಕಂಡು ತಿರುಗತೊಡಗಿದೆ. ಮಜ್ಜಿಗೆ ಕುಡಿದರೆ ಮನೆಸುಡಿಸಿ ಕೊಳ್ಳಬೇಕಾದವ ಅನ್ನ ಹಾಲು ಉಣ್ಡರೆ ತಪ್ಪೇನೂ ಇಲ್ಲ ಎಂದು ಕಂಡುಕೊಂಡ. ಅವನಿಗೆ ಹಿಂದಿನಿಂದ ಪಾರಾದ ಹಗುರ ಭಾವ ಬಂತು. ಅವನ 'ಹಾಯ'ನ್ನು ಯಾವ ಕವಿತೆ ಹೇಳಿತು? ಶ್ಮಶಾನದ ಪಕ್ಕದ ಮನೆಯವರಂತೆ ಇಂಥವರ ಪಾಡಾಯಿತು.

ಆದ್ದರಿಂದ ಸಮಕಾಲ ಯಾವುದು? ಯಾರದು? ಕಾಲರಾ ಪ್ಲೇಗು ಖಾಯಿಲೆ ಬರುತ್ತಿದ್ದಾಗ ಶ್ರೀಮಂತರಾಗುತ್ತಿದ್ದ ವೈದ್ಯರು ತಮ್ಮ ಊರಿನಲ್ಲಿ ಯಾವ ಅಂಥ ಪಿಡಗೂ ಇಲ್ಲದಾಗ ಹೇಗೆಂದುಕೊಳ್ಳುತ್ತಾರೆ? "ಏನು ಸ್ವಾಮಿ ! ಏನೂ ಪ್ರಯೋಜನವಿಲ್ಲ. ಎಲ್ಲ Practice ಕೂಡ ನಿಂತೇಹೋಯ್ತು. ಆ ಕಾಲ ನೋಡಿ! ಎಷ್ಟು Busy ಆಗಿರ್ತಿದ್ವೊ ನಾವು. ಎಲ್ಲ ಕೆಟ್ಹೋಯ್ತು ಕಾಲ!" ಎನ್ನುತ್ತಾರೆ. ಶ್ಮಶಾನದಲ್ಲಿ ಗುದ್ದು ಅಗೆಯವರನ್ನು ಕೇಳಿದರೆ ಅವರೆನ್ನುತ್ತಾರೆ : "ಏನ್ ಸ್ವಾಮಿ; ಹೊಟ್ಟೆ ಬಟ್ಟೇಗೆ ಕಷ್ಟವಾಯ್ತಾ ಬಂತು. ಏನ್ ಕಾಲ ಬಂತೊ. ಅಪಾಟಿ ಹೆಣಾಬರ್ತಿದ್ವೊ ಆಗ. ಅವಕ್ಕೇನ್ ಬಂತ್ ಸ್ವಾಮಿ ರೋಗ. ಯಾವಾಗ್ಲೊ ಒಂದೊಂದು ಬತ್ತಾದೆ, ಅದೂ ಎಂತಾದ್ದು ನೋಡಿ. ಸಾಯ್ದೆ ಇದ್ರೆ ಇದಿ ಇಲ್ಲ ಅನ್ನೊ ಮುದ್ಕುರ್ದು. ಯಾರ್ ಏನ್ ಕೊಟ್ತಾರ್ಧೇಳಿ ಅದಕ್ಕೆ. ಕೈನೋವ್ಗೂ ಕೈ ಕಾಸಿಲ್ಲ" ಎನ್ನುತ್ತಾರೆ. "ನೋಡಿ ಇವ್ರೆ, ನಾ ಹೇಳೋದು ಇಷ್ಟೆ. ನಾ ಎರಡನೆ ಮದ್ವೇ ಆಗ್ತಿದ್ದೆ ಆಗಲೆ. ಆದರೆ ಆಗ ಮನೆಗಿನೇಗೆ ಬರ್ತಿದ್ದ ಒಕ್ಕಲು ಗಿಕ್ಕಲು ಗಿತ್ತಿಯರನ್ನಾದರೂ ನೋಡ್ಕೊಬಹುದಿತ್ತು. ಈಗೀಗ ನೋಡಿ, ಅವರಿಗೂ ಏನ್ ದಿಮಾಕು ಬಂತು ನೋಡಿ. ಸ್ವಾಮಿ ಭೂಮೀಂತ ಆಚಾಚೆಯೆ ನಿಂತ್ಕೋತಿದ್ದವರು

ಈಚೀಚೆಗೆ ಕೇರೇಮಾಡೋದಿಲ್ಲ. ಮಾತಾಡ್ಸೋದುಂಟೆ. ಮಕ್ಕಳ ಬೇರೆ ಓದಿಸೋಕೆ ಕಳಿಸ್ತಾರಂತೆ. ಅದೊಂದು ಬೇರೆ ಕೇಡು, ಇವಕ್ಕೆ. ಇನ್ನಾಯ್ತು ಕಾಲ ಕೆಟ್ಹೋಯ್ತು. ಮೇಲೂ ಕೀಳು, ಮಡಿ ಮೈಲಿಗೆ. ಅಂಜಿಕೆ ಅಳುಕು, ಭಯಭಕ್ತಿ ಅಂಬೋದೆಲ್ಲ ನಮ್ಮಪ್ಪನ ಕಾಲಕ್ಕೇ ಆಗಿಹೋಯ್ತು. ಇನ್ ನಮ್ಮಂತೋರ್ ಇರ್‍ಬಾರ್‍ದು ಮಾನವಾಗಿ!"[೧]

ಈ ಇವರೆಲ್ಲಾ ಕೆಟ್ಟ ಕಾಲದಲ್ಲಿ ಬದುಕುತ್ತಿದ್ದಾರೆ. ಇವರು ಚಿತ್ರಿಸುವ – ಇವರು ಶಕ್ತರೂ ಪ್ರಭಾವಶಾಲಿಗಳೂ ಆದ ಕವಿಗಳಾಗಿದ್ದರೆ ಇವರು ಚಿತ್ರಿಸುತ್ತಿದ್ದ – ಕವಿತೆಗಳು ಯಾವ ಜಗತ್ತಿನ ಚಿತ್ರನೀಡಿಯಾವು ? ಹಿಂದೆ ವಾಹನ ಸಂಚಾರವೇ ಇಲ್ಲದ ಊರಿನಲ್ಲಿದ್ದವರು ಈಗ ತಮ್ಮ ಊರಿಗೆ ನೂರಾರು ಬಸ್ಸುಗಳು ಬರುತ್ತಿರುವುದರಿಂದ ಅಶಾಂತಗೊಂಡಿದ್ದಾರೆ. ಬಸ್ಸು ಸೌಲಭ್ಯಬೇಕೆಂದು ಬಯಸುವ ಅವರು, "ಆದರೆ ನೋಡಿ, ಏನೆಲ್ಲ ಧೂಳು ! ಏನೆಲ್ಲ ಸದ್ದು. ಆ ಕಾಲದಲ್ಲಿ ಇದೇನೊಂದೂ ಇರಲಿಲ್ಲ. ಹಾಯಾಗಿದ್ವೊ. ಜೊತೆಗೆ ಬಸ್ಸುಗಳಿಗಾದರೂ ಈಗ ಎಷ್ಟು ಹೊತ್ತ ಕಾಯಬೇಕೊ ನೋಡಿ. ನಾಲ್ಕು ಮೈಲಿ ಹೋಗಬೇಕಾದರೆ ನಾಕು ಘಂಟೇನೆ ಕಾಯಬೇಕೆ? ಯಾವ ಬಸ್ಸು ಬಂದ್ರೂ ರಷ್ಷುರಷ್ಷು ! ಇನ್ನೊಂದಷ್ಟು ಬಸ್ಸು ಓಡಿಸೋಕೇನ್ ಕಷ್ಟ ಈ ಜನಕ್ಕೆ !" ಎನ್ನುತ್ತಾರೆ. ಈ ಜನಕ್ಕೆ ಹಳೆಯಕಾಲದ ನೆಮ್ಮದಿಬೇಕು ; ಹೊಸಕಾಲದ ಬಸ್ಸು ಸೌಲಭ್ಯಬೇಕು. ಸದ್ದುಗದ್ದಲ ಧೂಳು

---

೧. ವಡ್ಡಾರಾಧನೆಯ ಒಂದು ಕಥೆಯಲ್ಲಿ ಬರುವ ಚಿತ್ರವನ್ನಿಲ್ಲಿ ನೆನೆದುಕೊಳ್ಳುವುದು ಸಮಂಜಸ. ಸಂಪ್ರತಿ ಚಂದ್ರಗುಪ್ತನ ಕಥೆ 'ಭದ್ರಬಾಹುಭಟಾರರ ಕಥೆ'ಯಲ್ಲಿ ಬರುತ್ತದೆ. ಉತ್ತರದ ನಾಡಿನಲ್ಲಿ ಕ್ಷಾಮ ತಲೆದೋರಿ ಅವರೆಲ್ಲ ದಕ್ಷಿಣಕ್ಕೆ ಗೂಳೆಯ ಬರುವುದರ ಮುನ್‌ಸೂಚನೆ ಅವನಿಗೆ ಸ್ವಪ್ನದಲ್ಲಿ ಕಾಣುತ್ತದೆ. ಇಪ್ಪತ್ನಾಲ್ಕು ಸ್ವಪ್ನಗಳನ್ನು ಕಂಡ ಚಂದ್ರಗುಪ್ತ ಅವುಗಳ ಸಂಕೇತಾರ್ಥವನ್ನು ನೈಮಿತ್ತಿಕರಿಂದ ಕೇಳುತ್ತಾನೆ. ಅದರಲ್ಲಿ ೧೫–೧೬ನೆಯ ಸ್ವಪ್ನಗಳಿಗೆ ಬಂದ ವ್ಯಾಖ್ಯಾನವಿದು : "ಕಸಕುಪ್ಪೆಯೊಳ್ ತಾಮರೆ ಮೂಡಿದುದಂ ಕಂಡುದಱಿಂ ದಯೆಯುಪಶಮಮುಂ ಪರಿಗ್ರಹ ಪರಿತ್ಯಾಗಮುಂ ಸಮಾಧಿಯುಂ ಸತ್ಯಮುಂ ಶೌಚಮುಂ ಕ್ಷಮೆಯುಂ ಎಂದಿವು ಮೊದಲಾಗೊಡೆಯವಱೊಳ್ ಕೂಡಿದ ಮಿಕ್ಕ ಸದ್ಧರ್ಮ ಮಾರ್ಗಮಂ ದ್ರವ್ಯ ಪತಿಗಳುಮ್ ಅರಸುಮಕ್ಕಳುಂ ತಮ್ಮ ದ್ರವ್ಯಾದಿ ಮದದಿಂದಂ ತೊಱೆವರ್ ! ನೀಚಜಾತಿಗಳುಂ ಬಡವರುಂ ಸದ್ಧರ್ಮಮಂ ಕೈಕೊಂಡು ನೆಗೞ್ವರ್ !" ಸತ್ಯಶೌಚ ಕ್ಷಮೆ ದಯೆ ಇತ್ಯಾದಿಗಳು ಸದ್ಧರ್ಮ ಎಂಬುದರಲ್ಲಿ ಸಂದೇಹವೇ ಇಲ್ಲ. ಆದರೆ ಅವು ದ್ರವ್ಯಪತಿಗಳ ಅರಸುಗಳ ಮಕ್ಕಳಿಗೆ ಮಾತ್ರ ಗುಣ, ಅವರು ಅವುಗಳನ್ನು ಬಿಟ್ಟರೆ ಮಾತ್ರ ಕೇಡು ; ಬಡವರು ನೀಚ ಜಾತಿಯವರು ಅವುಗಳನ್ನೇ ಕೈಗೊಂಡರೆ ಕೇಡಾಗುವುದೆ? ಇದಕ್ಕೆ ಹುಯ್ಯಲಿಡಬೇಕೆ? ಧರ್ಮ ಬಿಟ್ಟದಕ್ಕೆ – ಅದು ಯಾರೇ ಬಿಟ್ಟರೂ ಸಹ – ಕೇಡೆನ್ನಬೇಕು. ಆದರೆ ಕೆಳ ಜನ ಅವನ್ನು ಆಚರಿಸಿದರೆ ಕೇಡು ಎನ್ನುವ ವಿಪನ್ನ ಭಾವಕ್ಕೆ ಏನೆನ್ನಬೇಕು. ನಮ್ಮ ಸ್ವಾತಂತ್ರ್ಯೋತ್ತರ ದಿನಗಳ ಹುಯ್ಯಲೂ ಇದೇ ಆಗಿದ್ದರೇನು ಮಾಡುವುದು? "ಕಲಿಯುಗೇ ಧನ್ಯಾ ವನಂ ಪ್ರಸ್ಥಿತಾಃ !" ಎಂದು ಆಗಲೂ ಅತ್ತರು, ಈಗಲೂ ಹಾಗೆಂದು ವಿದೇಶ ವಾಸಿಗಳಾದರು !



ಗೋಳು, ಏನೊಂದೂ ಬೇಡ. ರಸ್ತೆಗಳನ್ನು ದೊಡ್ಡದು ಮಾಡಿಸಿ ಟಾರ್ ಹಾಕಿಸಬೇಕು ಎಂದರೆ ಈ ಜನವೆ ಅಡ್ಡಿ ಬರುತ್ತಾರೆ. ದೊಡ್ಡರಸ್ತೆ, ನೇರರಸ್ತೆ ಮಾಡಿಸಹೋದರೆ ಇವರ ಕೇರಿಗಳೆಲ್ಲ ಹೋದಾವು. ಅದರಿಂದಾಗಿ ಇವರಿಗೆ ಅದಾವುದೂ ಬೇಡ, ಆದರೆ ಧೂಳು ಬೇಡ, ಸದ್ದೂ ಬೇಡ, ಹೆಚ್ಚು ಬಸ್ಸು ಬೇಕು; ಇಂಥವರೆ ಈ ಜಗತ್ತನ್ನು ಹೀನಾಮಾನ ಬೈಯ್ಯುವುದು. ಆದ್ದರಿಂದೇನೊ ನಮ್ಮ ಜಗತ್ತು ಇಂತೆಲ್ಲ ದ್ವೈಧೀಭಾವಗಳನ್ನ ಒಳಗೊಂಡು ಹೇಗೆ ಹೇಗೋ ಕಾಣುತ್ತಿದೆ.

ಈ ಹಿಂದೆಯೆ ತಿಳಿಸಿದಂತೆ, ಜಗತ್ತು ಈಗ ಅನಿವಾರ್ಯ ಸಹಜೀವನವನ್ನು ಅಗತ್ಯವಾಗಿ ಒಪ್ಪಿಕೊಳ್ಳತೊಡಗಿದೆ. ಅದು ಧಾರ್ಮಿಕ ಸತ್ಯವಾಗಿರದೆ ವಾಸ್ತವ ಜಾಗತಿಕ ಅಗತ್ಯವಾಗುತ್ತಿದೆ. ಜಗತ್ತು ವೈಜ್ಞಾನಿಕವಾಗಿ ಮುಂದುವರಿದಷ್ಟೂ ಅದು ವಿರೋಧಿಸುತ್ತಲೆ ಸಮೀಪಕ್ಕೆ ಬರುತ್ತಿದೆ. ದೂರ ಹತ್ತಿರವಾಗುತ್ತಿದೆ. ಗಾತ್ರ ಸಂಕೋಚಗೊಳ್ಳುತ್ತಿದೆ. ವ್ಯಕ್ತಿಯಸಮಸ್ಯೆಯೊಡನೆ ಸಮಾಜದ, ರಾಜ್ಯದ ಕೂಡೆ ರಾಷ್ಟ್ರದ, ಅದರ ಕೂಡೆ ಜಗತ್ತಿನ ಸಮಸ್ಯೆ ತೆಕ್ಕೆಗೊಳ್ಳುತ್ತಿದೆ. ದುಷ್ಟಮೃಗಗಳ ನಿಸ್ಸಂತಾನವಾಗಲಿ, ವನಸ್ಪತಿಯ ನಾಶವಾಗಲಿ ಮಾನವನ ಅಸ್ತಿತ್ವದ ಮೇಲೂ ಪ್ರಭಾವಬೀರುವ ಹೆದರಿಕೆ – ಅರಿವು ಇತ್ತೀಚೆಗೆ ಬರತೊಡಗಿದೆ. ಪರಿಸರದ ಕಲ್ಪನೆ ಅನಿವಾರ್ಯ ಉಳಿವಿನ ಸಮಸ್ಯೆಯಾಗಿ ಪರಿಣಮಿಸುತ್ತಿದೆ. ಭೂಮಿಯ ಸಂಪತ್ತನ್ನೂ ವಿಪರೀತ ದುರ್ಬಳಕೆ ಮಾಡುವ ಬಗೆಗೆ ಎಚ್ಚರಿಕೆ ಬರುತ್ತಲಿದೆ. ಹೆದರಿಕೆಯಿಂದಲಾದರೂ ಪರಸ್ಪರ ಕ್ಷೇಮ ಗೌರವ ಅಗತ್ಯವಾಗುತ್ತಿದೆ. ನಮ್ಮ ಪಕ್ಕದ ಮನೆಯವರಿಗೆ ಖಾಯಿಲೆಬಂದಿದ್ದರೆ, ಹಿಂದಿನಕಾಲದಲ್ಲಿ, ಈಚೆಯ ಮನೆಯ ವೈದ್ಯ ಔಷಧ ಕೊಡದಿರಬಹುದಿತ್ತು. "ಹಾಗೆಲ್ಲ ಹೇಗೆ ಕೊಡೋದು. ಎಲ್ಲ ಔಷ್ಧಿಗಳು ಎಲ್ಲರಿಗೂ ಕೂಡುವುದಿಲ್ಲ, ನೋಡಿ. ಅವರವರ ಕರ್ಮಫಲ ಅನುಭವಿಸಲೇ ಬೇಕು." ಎಂದು ಕರ್ಮಸಿದ್ಧಾಂತ ಹೇಳಿ ಈರ್ಷಾಸೂಹೆಗಳನ್ನು ಬೆಳೆಸಿಕೊಳ್ಳಬಹುದಾಗಿತ್ತು, ಆಗ. ಇಂಡಿಯಾದಲ್ಲಿ ಸಿಡುಬುರೋಗ ಉಲ್ಬಣವಾಗಿದ್ದ ಕಾಲ ಮೊನ್ನೆಯ ತನಕ ಇತ್ತು. ಈಗ ಅದು ನಿರ್ಮೂಲನಗೊಂಡಿದೆ. ಯಜ್ಞಯಾದಿಗಳಿಂದೇನೂ ಅಲ್ಲ. ಧರ್ಮಾಧಿಕಾರಿಗಳ ಮತಂತ್ರಗಳಿಂದೇನೂ ಅಲ್ಲ. ವಿಶ್ವ ಆರೋಗ್ಯ ಸಂಸ್ಥೆಯ ತೀವ್ರಾಸಕ್ತಿ – ತೀವ್ರ ವೈದ್ಯಕೀಯ ವಿಧಾನದಿಂದಾಗಿ ಅದು ಸಾಧ್ಯವಾಯಿತು. ಅಮೇರಿಕಕ್ಕೆ ನಮ್ಮ ಆರೋಗ್ಯದ ಬಗ್ಗೆ ಏಕೆ ಇಷ್ಟೆಲ್ಲ ಕಾಳಜಿ? ನಮ್ಮ ಪಕ್ಕದ ಮನೆಯ ವೈದ್ಯರು ಹಿಂದೆ ಕರ್ಮಸಿದ್ಧಾಂತದಿಂದ ಔಷಧ ಕೊಡದಿದ್ದರು. ಆದರೆ ದೂರದ ಅಮೆರಿಕೆಯಲ್ಲಿರುವ WHO ನಮ್ಮ

ನಾಡಿನಿಂದಲೆ ಸಿಡುಬುರೋಗವನ್ನು ನಿರ್ನಾಮ ಮಾಡಿತಲ್ಲ, ಏಕೆ? ಮೌನವೌದಾರ್ಯಗಳು ಆಧ್ಯಾತ್ಮದ ಆಧಾರದಿಂದ ಪ್ರೇರಣೆಗೊಳ್ಳುತ್ತಿದ್ದ ಆ ಕಾಲದಲ್ಲೂ ಈ ಔದಾರ್ಯ ಸಾಧ್ಯವಾಗಲಿಲ್ಲ. ಈಗ ಅಧ್ಯಾತ್ಮಮೂಲದಿಂದೇನೂ ಈ ಔದಾರ್ಯಗಳು ಪ್ರೇರಿತವಾಗುತ್ತಿಲ್ಲ. ವಿಜ್ಞಾನದ ಸಮೃದ್ಧಿ ಸುಲಭಗೊಳಿಸಿದ ಔಷಧಿಗಳ ಸಮೃದ್ಧಿಯೂ ಇದನ್ನು ಸುಲಭಗೊಳಿಸಿದೆ. ಮೇಲಾಗಿ ಸಂಪದಭಿವೃದ್ಧಿಶೀಲವಾದ ಸಂಪನ್ನ ರಾಷ್ಟ್ರವಾವುದೂ ತನ್ನ ಸುತ್ತಮುತ್ತಣ ರಾಷ್ಟ್ರಗಳಲ್ಲಿ ಬಡತನದ ರೋಗರುಜಿನದ ಅಸ್ಥಿರತೆಗಳನ್ನು ಬೆಳೆಸಿ ತಾನಿಂದು ಸ್ವಸ್ಥವಾಗಿರಬರುವುದಿಲ್ಲವೆಂಬ ಅನಿವಾರ್ಯ ನಿರ್ಧಾರಕ್ಕೆ ವಿಧಿಯಿಲ್ಲದೆ ಬಂದಿದೆ. ಯಾವಾಗಲಾದರೂ ಆ ಅಸಂತುಷ್ಟಿ – ಅಸಮೃದ್ಧಿಗಳೂ ಆ ರೋಗರುಜಿನಗಳೂ ತಮ್ಮತ್ತ ನುಗ್ಗಿಬರಬಹುದೆಂಬ ಎಚ್ಚರವೂ ಅಂಥ ಶ್ರೀಮಂತ ರಾಷ್ಟ್ರಗಳಿಗೆ ಬಂದಿದೆ. ಅದರಿಂದ ನಮ್ಮ ನಾಡಿಗೆ ಹೋಗುವವರ ಮೇಲೆ ನಿಯಂತ್ರಣ ಹೇರಿದವು, ಮೊದ ಮೊದಲು. ವ್ಯಕ್ತಿ ವ್ಯಕ್ತಿಯೂ ರೋಗನಿರೋಧಕ ಚುಚ್ಚು ಮದ್ದನ್ನು ಹಾಕಿಸಿಕೊಂಡೇ ತಮ್ಮ ನಾಡಿನೊಳಕ್ಕೆ ಬರಬೇಕೆಂದು ಕಟ್ಟಪ್ಪಣೆ ಮಾಡಿಕೊಂಡವು. ಇದರಿಂದ ರೋಗಭೀತಿ ಸಂಪೂರ್ಣ ನಿವಾರಣೆ ಆದಂತಾಗಲಿಲ್ಲ. ಸಿಡುಬು ರೋಗದ ದೇಶದಿಂದ ಬರುವ ಅಂಚೆಕಾಗದ, ಆಮದು ಪದಾರ್ಥ, ವಿಮಾನಾದಿಗಳು –ಇಷ್ಟೆ ಅಲ್ಲ ಅಲೆಮಾರಿಗಳಾದ ಹಕ್ಕಿಗಳು – ಇವೆಲ್ಲವೂ ರೋಗವನ್ನು ಯಾವಾಗಲಾದರೂ ಬಿತ್ತಬಹುದು. ರೋಗ ರಹಿತವಾದ ನಾಡಿಗೆ ಸಾಂಕ್ರಾಮಿಕ ರೋಗ ಒಮ್ಮೆ ಬಿತ್ತನೆಗೊಂಡಿತೆಂದರೆ ತಡೆಯುವುದು ದುಬಾರಿಯ ಕಷ್ಟನಷ್ಟದ ಉದ್ಯೋಗವಾಗುತ್ತದೆ. ಆದ್ದರಿಂದ ರೋಗಮೂಲದಲ್ಲೆ ರೋಗನಿರ್ಮೂಲನ ಮಾಡುವುದು ಸರಿ ಎಂಬ ಅನಿವಾರ್ಯ ವಿಶಾಲ ಭಾವನೆಯೂ ಬಂದು ಈಗ ಪ್ರಪಂಚದ ಬಹುಪಾಲು ರಾಷ್ಟ್ರಗಳಲ್ಲಿ ಸಿಡುಬಿನ ನಿರ್ಮೂಲನವಾಗಿದೆ. ಹೀಗೆ ತಾನು ಬದುಕಲು ಸುತ್ತೂ ಜನ ಬದುಕಬೇಕೆಂಬುದನ್ನು ಒಪ್ಪಿಕೊಳ್ಳುವ ಕಾಲಬಂದಿದೆ. ಯಾವುದೋ ರಾಷ್ಟ್ರ ಕ್ಷಾಮ ಪೀಡಿತವಾಯಿತೆಂದರೆ, ಎಲ್ಲೋ ಪ್ರವಾಹ ಭೂಕಂಪ ಅನಾಹುತವಾಯಿತೆಂದರೆ ಶ್ರೀಮಂತವಲ್ಲದ ರಾಷ್ಟ್ರಗಳೂ ಕೂಡ, ವಿಶ್ವಸಂಸ್ಥೆಯ ಜೊತೆಯಲ್ಲಿ ನೆರವು ನೀಡ ಹೋಗುತ್ತವೆ. ಹಸಿವಿನಿಂದ ಜನ ಸತ್ತರೆ ತನ್ನ ಅಸ್ತಿತ್ವಕ್ಕೇ ಅವಮಾನವೆಂಬ ಭಾವನೆ ಬರತೊಡಗಿದೆ, ರಾಷ್ಟ್ರಗಳಿಗೆ. ತಮ್ಮ ಸುಕ್ಷೇಮ ಅಸ್ತಿತ್ವಕ್ಕಾಗಿಯಾದರೂ ಆ ಸುದ್ದಿಯೂ ಬರದಂತೆ ನೋಡಿಕೊಳ್ಳಬೇಕಾದ ಕಾತರವೀಗ ಸರ್ಕಾರಗಳಿಗೆ ಬಂದಿದೆ. ೧೯೪೨ರ ಅವಧಿಯಲ್ಲಿ ಬಿಹಾರ್ ಬಂಗಾಲಗಳಲ್ಲಿ ೩೬ ಲಕ್ಷಕ್ಕೂ ಹೆಚ್ಚು ಜನ ಸತ್ತಾಗ ಜಗತ್ತು ಈಗಿನಂತೆ ತಲ್ಲಣಗೊಳ್ಳಲಿಲ್ಲ. ಹಿಂದೆಯಾದರೂ,



ಅದು ಅವರವರ ಕರ್ಮವೆಂದು ಹಾಯಾಗಿ ಹಗುರಾಗುತ್ತಿದ್ದುದೇ ಸಾಮಾನ್ಯವಾಗಿತ್ತು. ದಯಾ ಕರುಣೆಗಳೆಲ್ಲ ಅಧ್ಯಾತ್ಮದ–ಧರ್ಮದ ಸಂಗತಿಗಳಾಗಿದ್ದವು. ಈಗ ಅವು ಅಗತ್ಯ ವಿಷಯಗಳಾಗಿ ಭೌತಸಂಗತಿಗಳಾಗತೊಡಗಿವೆ. ಭೌಗೋಲಿಕ ಸಹಕಾರ ತತ್ತ್ವ ಆಧ್ಯಾತ್ಮಿಕ ಮೂಲವಾಗಿದ್ದಿರದೆ ಜಾಗತಿಕ ಅಗತ್ಯವಾಗುತ್ತಿದೆ. ವಿಜ್ಞಾನ ಬೆಳೆದಂತೆಲ್ಲ ಜಗತ್ತು ಸಂಕ್ಷಿಪ್ತವಾಗುತ್ತಿದೆಯಾದ್ದರಿಂದ ಪರಸ್ಪರಾವಲಂಬನ ಅನಿವಾರ್ಯವಾಗುತ್ತಿದೆ. ಸಹ ಜೀವನ ಇಲ್ಲವೆ ಸಾಮೂಹಿಕ ವಿನಾಶ ಎಂಬಂಶದ ಅರಿವಾಗುತ್ತಿದೆ. ಇದನ್ನೆಲ್ಲ ಸೂಕ್ಷ್ಮ ದರ್ಶಕದಿಂದೇನೊ ಕಾಣಬೇಕಾಗಿಲ್ಲ. ಆದರೆ ನಮ್ಮ ನಮ್ಮ ರಾಗದ್ವೇಷ ಲಾಭ ನಷ್ಟಗಳೆ ಪೆಡಂಭೂತಾಕಾರದಲ್ಲಿ ಬೆಳೆದು ದಿಕ್ಕೆಡಿಸಿರುವಾಗ ಇವೆಲ್ಲ ಕಾಣಬರುವುದಾದರೂ ಎಲ್ಲಿ ?

ವರ್ತಮಾನ ಪತ್ರಿಕೆಯೆ ಜಗತ್ತಿನ ಗತಿ ಪ್ರಗತಿಯನ್ನು ತಿಳಿಸುವ ಮಹಾ ವಿಶ್ವಸನೀಯ ಮಾಧ್ಯಮವಾಗಿರುವಾಗ ಸುದ್ದಿಯಾದದ್ದಷ್ಟೆ ಸತ್ಯವಾಗುತ್ತದೆ. ಸುದ್ದಿಯಲ್ಲದ್ದನ್ನು ಮೂಸಿಯೂ ನೋಡುವುದಿಲ್ಲ ಪತ್ರಿಕೆಗಳು. ಸುದ್ದಿಯಾಗಲು ರೈಲು ತಾನು ಕಂಬಿತಪ್ಪಲೇಬೇಕು, ಸುಖಕೆಟ್ಟ ಹೆಂಡತಿ ಗಂಡನನ್ನು ಕೊಲ್ಲಲೇಬೇಕು. ಬೀಳದ ರೈಲುಗಳೆಷ್ಟು ದಿನವೂ ಪ್ರಯಾಣಿಕರನ್ನು ಸಾಗಿಸುತ್ತಿಲ್ಲ. ಸುದ್ದಿ ವಿಷಯಕ್ಕೆಡೆಕೊಡದ ಸಂಸಾರಗಳೆಷ್ಟು ಯಾರಕಣ್ಣಿಗೂ ಬೀಳದೆ ಬಾಳ್ವೆನಡೆಸಿಲ್ಲ? ಬಿದ್ದರೈಲಿನ ಸುದ್ದಿ ಪತ್ರಿಕೆಯ ತುಂಬ, ಸುದ್ದಿಯಾಗಲೆಂದು ಬೇಸರಗೊಂಡ ರೈಲು ಬೀಳತೊಡಗಿದೆ? ಚೆಲ್ಲಿಹೋದನೀರಿನ ನಷ್ಟ ಕಣ್ಣಿಗೆ ಕಂಡೀತು. ಆದರೆ ಮರುನಿಮಿಷದಲ್ಲೆ ಅದರ ಒಂದು ಭಾಗ ಕೊಳೆಯನ್ನೆಲ್ಲ ನೆಲದಲ್ಲೆ ಬಿಟ್ಟು ಶುದ್ಧವಾಗಿ ಆವಿಯಾಗಿ ತುಂಬ ಮೇಲೆತ್ತರಕ್ಕೆ ಹೋದದ್ದು, ಮತ್ತೆ ತಿಳಿಯಾಗಿ ಬರಲೆಂದು ಹೋದದ್ದು, ಯಾವಕಣ್ಣಿಗೆ ಬಿದ್ದೀತು? ಆದ್ದರಿಂದ ನಮ್ಮ ಯುಗದ ಶಿವಾಂಶಗಳು ಕಾಣಬರದೆ ಅಶಿವಾಂಶಗಳೆ ಮಾರಾಟ ನಡೆಸಿವೆಯಾದ್ದರಿಂದ, ಯಾವ ಅಂತಹ ಕ್ಲೇಶವಿಲ್ಲದ ವ್ಯಕ್ತಿಗೂ ಸ್ವಾಸ್ಥ್ಯವಿಲ್ಲವಾಗಿದೆ. "ನೋಡಿ ಅಲ್ಲಿ ರೈಲು ಬಿತ್ತಂತಲ್ಲ, ಇಲ್ಲಿ ನೋಡಿ ಕೊಲೆಯಾಯಿತಂತೆ ! ಏನ್ರಿ ಬರೀ ಕೇಡೇ ತುಂಬಿಹೋಗಿದೆ. ರೀ ಕಾಲ ಕೆಟ್ಟು ಹೋಯಿತು, ರೀ !" ಎಂದು, ಸುದ್ದಿ ಮಾಧ್ಯಮವೆ ಇಲ್ಲದೆ ಭೀಕರ ರಾಷ್ಟ್ರೀಯ ನಷ್ಟಗಳೂ ತಿಳಿಯದೆ ಹಾಯಾಗಿದ್ದ ಕಾಲದ ಜನರ ಸೌಖ್ಯವನ್ನೆ ನೆನೆದುಕೊಳ್ಳುತ್ತಿರುವ ನಾವು ಏನು ಕಾಣುತ್ತಿದ್ದೇವೆ? ಮಕ್ಕಳಿಗೆ ತಾವು ಆಡುವ ಆಟದ ಹೊಲ, ಕದ್ದು ತಿನ್ನುವ ಹೀಚುಕಾಯಿ, ನೋಡುವ ನೋಟ – ಯಾವುದೂ ಇನ್ನೂ ಅತ್ಯಂತ ಹಿತವಾಗಿಯೆ ಇವೆ. ಹದಿಹರಯಕ್ಕೆ ತಮ್ಮ ಸಂಗ ರೋಮಾಂಚವಾಗಿಯೆ ಇದೆ. ಆದರೆ ಹರಯಕುಗ್ಗಿದಂತೆ, ಸೌಭಾಗ್ಯಗಳು ತಗ್ಗಿದಂತೆ

ಅಂಥ ಜೀವಕ್ಕೆ ಕಾಲಕೆಟ್ಟಂತೆ ತನ್ನ ಹಿಂದೇ ಚೆನ್ನಾಗಿತ್ತೆಂಬಂತೆ ಭಾವ ಬೆಳೆಯುತ್ತದೆ. ಇದು ಒಂದು ರೀತಿಯ Non Creativity of the Mind. ಸೂರ್ಯೋದಯ ಸೂರ್ಯಾಸ್ತ. ಮಳೆಗಾಳಿ ಮೋಡಗಳೆಲ್ಲ ಅಷ್ಟೆ ವಿಸ್ಮಯಕಾರಿಯಾಗಿವೆ ಎಂಬುದು ಕಾಣದೆ ಹೋಗುತ್ತದೆ ಅಂಥ ಚೇತನಕ್ಕೆ. ಸೃಜನ ಶೀಲತೆ ಕಳೆದು ಹೋದ ಮನಸ್ಸಿನ ರೀತಿಯಾಗಿರುವುದರ ಜೊತೆಗೆ, ಯಾವುದೊ ಸವಲತ್ತು ಕಳೆದುಕೊಂಡ ವರ್ಗದ ರೀತಿಯೂ ಇದಾಗಿರುತ್ತದೆ. ಮನಸ್ಸನ್ನು ನಿತ್ಯ ವರ್ತಮಾನದ ಸೊಬಗಿನತ್ತ ತಿರುಗಿಸಿ ಅದನ್ನು ಸೃಜನರಹಿತ ಸ್ಥಿತಿಯಿಂದ ಮೇಲೆತ್ತುತ್ತಲೆ ಇರಬೇಕು. ಹಾಗೂ, ಹಳೆಯ ಸವಲತ್ತುಗಳ ನಷ್ಟದಿಂದಲೆ ಕೊರಗಿ ಬಸವಳಿಯದೆ ಹೊಸ ಅನಿವಾರ್ಯತೆಯನ್ನೂ ಒಪ್ಪಿಕೊಂಡು ಅರ್ಥಮಾಡಿಕೊಂಡು ನಿರಂಬಳವಾಗಿರುವುದು ಆರೋಗ್ಯಕರ.

ಒಂದು ವಿಷಯ ನೆನೆದುಕೊಳ್ಳಬೇಕಿಲ್ಲಿ. ಜಾತಿಬದ್ಧವಾದ ಭಾರತದಲ್ಲಿ ಇಂಥಿಂಥವು ಇಂಥಿಂಥವರಿಗೆ ಮಾತ್ರ, ಉಳಿದವರಿಗೆ ನಿಷಿದ್ಧ ಎಂಬ ವಿಧಿನಿಷೇಧವಿತ್ತು. ಆ ಕಾಲದಲ್ಲಿ ಸಂಸ್ಕೃತವನ್ನು ಶೂದ್ರರು ಹೆಂಗಸರು ಕೇಳುವಂತಿರಲಿಲ್ಲ. ಕೇಳಿದರೆ ಕಿವಿ ಕಳೆದುಕೊಳ್ಳಬೇಕಾದ ಭೀತಿಯಿತ್ತು. ಹಾಗೆಂದು ಒಪ್ಪಿಕೊಳ್ಳುವುದೇ ಎರಡೂ ಪಕ್ಷಕ್ಕೂ ಧರ್ಮವಾಗಿತ್ತು ಆಗ. ಸಂಸ್ಕೃತವನ್ನು ಕಡ್ಡಾಯ ಶಿಕ್ಷಣ ಭಾಷೆಯಾಗಿ ಮಾಡಿ, ಮಾಧ್ಯಮಮಾಡಿ, ಆಡಳಿತಭಾಷೆ ಮಾಡಿ – ಎಂದೆಲ್ಲ ಒತ್ತಾಯ ಹೇರುತ್ತಿರುವುದನ್ನು ಈಗ ಕಾಣುತ್ತಿದ್ದೇವೆ. ಹಿಂದೆ ನಿಷೇಧಧರ್ಮ ಹೇಳಿದ ವರ್ಗವೇ ಈಗ ಈ ಧರ್ಮವಿಧಿಯನ್ನೂ ಮಾಡಹೊರಟಿದೆ. ಅಸ್ಪೃಶ್ಯವಾಗಿಟ್ಟಿದ್ದ ವರ್ಗವನ್ನು ರಾಜಕೀಯಕ್ಕಾಗಿಯಾದರೂ ಭಾರತದ ಎಲ್ಲ ರಾಜಕೀಯ ಪಕ್ಷವೂ ಈಗ ಮೇಲೆತ್ತುವ ಕಾಳಜಿ ತೋರುತ್ತಿವೆ. ಇದು ಹಿಂದೆ ಕಲ್ಪಿಸಿಕೊಳ್ಳಲೂ ಆಗದ ಭಯಾನಕ ವಿಚಾರವಾಗಿತ್ತು. ಈ ಯುಗ ಹಿಂದಿನ ಹಲವು, (ಅಂದಿಗೆ ಅನಿವಾರ್ಯವಾಗಿದ್ದಿರಬಹುದಾದ) ಅವಿವೇಕ ಮಯವಾದ ವಿಧಿನಿಷೇಧ ಕಾರ್ಯಗಳನ್ನು ಈಗ ನಿಷ್ಕೃತಿಗೊಳಿಸತೊಡಗಿದೆ, ಅದರ ಸಂಕೇತವೆ ಸಂಸ್ಕೃತದ ಬಗೆಗಿನ ಧೋರಣೆಯಾಗಿದೆ ಎಂಬುದನ್ನು ತಿಳಿಯಬೇಕು.

ಈ ಎಲ್ಲ ಅಂಶಗಳೂ ಈ ಕಾಲದ ಈ ದೇಶದ ಈ ವ್ಯಕ್ತಿಗೆ ಕಂಡು ಬರುವುದೇನು? ಕುವೆಂಪು ಸಮಕಾಲೀನತೆ ಇದನ್ನೆಲ್ಲ ಒಳಗೊಂಡಿದೆ ಎಂದೇ, ಶ್ರೀ ರಾಮಾಯಣ ದರ್ಶನದಲ್ಲಿ ಅದು ಪ್ರತಿಮಿತವಾಗಿದೆ ಎಂದೇ ನನ್ನ ತಿಳಿವಳಿಕೆ. ಏನು ೧೯೪೫ರ ವೇಳೆಗೆ ಬರೆದು ಮುಗಿದುಹೋದ ಕೃತಿಯಲ್ಲಿ ಇಂದಿನ ಜಾಗತಿಕ Spirit ಕೂಡ ಹೇಗೆ ಮೂಡಿ ಬಂದೀತು ಎಂದರೆ, ಕುವೆಂಪು



ಆ ವೇಳೆಗಾಗಲೆ, 'ನಮ್ಮ ಯುಗ ಚೈತನ್ಯಗಳೆಂದರೆ ಸರ್ವೋದಯ ಸಮನ್ವಯ ಪೂರ್ಣದೃಷ್ಟಿಗಳೇ ಆಗಿವೆ.' ಎಂದು ಸ್ಪಷ್ಟಪಡಿಸಿದ್ದರು. "ಭೂತಕಾಲದ ಪ್ರಚೋದನೆ ಮಾತ್ರವಲ್ಲದೆ, ಭವಿಷತ್ಕಾಲದ ಆಕರ್ಷಣೆಯೂ ವರ್ತಮಾನದ ಚಲನವಲನಗಳನ್ನು ನಿರ್ಣಯಿಸುವ ಪ್ರಬಲಶಕ್ತಿಯಾಗಿರುತ್ತದೆ ಅಲ್ಲವೆ ?..." ಎಂಬ ತಾತ್ವಿಕ ಅರಿವನ್ನು ಮಲೆಗಳಲ್ಲಿ ಮದುಮಗಳಲ್ಲಿ ಕುವೆಂಪು ತಾಳುತ್ತಾರೆ. (ಪುಟ ೫೩೩)[೧]. ಈ ಅರಿವಿರುವ ಕವಿಗೆ ತನ್ನ ಅಂದಿನ ವರ್ತಮಾನದಲ್ಲಿ ಇಂದಿನ ವರ್ತಮಾನವನ್ನೂ, ಹಿಂದಿನ ಮುಂದಿನ ವರ್ತಮಾನವನ್ನೂ ಕಾಣುವ ಸಾಧ್ಯತೆಯಿರುತ್ತದೆ, ತತ್ವರೂಪದಲ್ಲಿ. 'ಶ್ಮಶಾನ ಕುರುಕ್ಷೇತ್ರ' ನಾಟಕದ ಕಡೆಯಲ್ಲಿ ರುದ್ರನಿಗೆ ಶ್ರೀ ಕೃಷ್ಣ ತೋರುವ ಕಲಿಯುಗ ದರ್ಶನದಲ್ಲಿ ಕುವೆಂಪು ಸ್ಪಷ್ಟವಾಗಿ, "ಸಾರ್ವಭೌಮತ್ವ ಭಂಗಂ... ಸ್ವತಂತ್ರ ಭಾರತರಂಗಂ.... ಸರ್ವಪ್ರಜಾಭಿಪತ್ಯಂ... ಸರ್ವ ಸಮತ್ವಂ...' ಎಂದು ಕಂಡಿದ್ದರು. ಹೇಳಬಹುದು, "ಇದೇನು ಮಹಾ ! ಯಾರಿಗೂ ಗೊತ್ತಿತ್ತು, ಭಾರತಕ್ಕೆ ಎಂದಿದ್ದರೂ ಸ್ವಾತಂತ್ರ್ಯ ಬಂದೇ ಬರುತ್ತೆ ಎಂದು" ಎಂದು. ಆದರೆ ಯಾರಿಗೂ ತಿಳಿದಿರಲಿಲ್ಲ ಅಷ್ಟುಬೇಗ ಬಂದೀತೆಂದು. ಮಹಾಯುದ್ಧ ಘಟಿಸದಿದ್ದರೆ ಬ್ರಿಟಿಷರು ಸ್ವಾತಂತ್ರ್ಯ ನೀಡುತ್ತಿದ್ದರೆ? ಹೌದು, ಹೇಗೊ ಬಂದೇಬರುತ್ತಿತ್ತೆಂಬ ಊಹೆ ಯಾರಿಗೂ ಇತ್ತು ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಸ್ವತಂತ್ರ ಭಾರತ ತನ್ನ ರಾಜ್ಯಾಂಗ ತತ್ತ್ವವಾಗಿ ಸಮಾನತೆಯನ್ನೆ ಪ್ರಜಾಪ್ರಭುತ್ವವನ್ನೆ ಸ್ವೀಕರಿಸಿಕೊಳ್ಳುತ್ತಿದ್ದಿತೆಂಬ ನಿಶ್ಚಿತ ಅರಿವು ಯಾರಿಗಿತ್ತು ? ಸುಭಾಷಚಂದ್ರರಂಥ ಉಗ್ರವಾದಿಗಳು ನಿಷ್ಠುರ ಶಿಸ್ತಿನ ಪ್ರಭುತ್ವ – ಸೇನಾಧಿಪತ್ಯಬೇಕೆಂದು ನಿಶ್ಚಯಿಸಿದ್ದರು. ಐ. ಎನ್. ಎ. ಸೈನ್ಯ ಉದ್ದೇಶಿಸಿ ಬರ್ಮಾದಲ್ಲಿ ೧೯೪೩ರಲ್ಲಿ ಮಾತನಾಡುತ್ತಿದ್ದ ಅವರು ಭಾರತಕ್ಕೆ ಸ್ವಾತಂತ್ರ್ಯ ಬಂದಮೇಲೆ ಸುಮಾರು ೨೫ ವರ್ಷವಾದರೂ ಸೇನಾಧಿಕಾರವೆ ಇರಬೇಕು, ಎಂದು ಘೋಷಿಸಿದ್ದರು. ಸೇನಾನಾಯಿಕರಾಗಿ ಮಾತನಾಡುತ್ತಿದ್ದ ಅವರು ಸ್ವಭಾವತಃ ಕ್ಷಾತ್ರ ತೇಜದವರಾದ್ದರಿಂದ ಅವರಿಗೆ ಅದೇ ಸೂಕ್ತಮಾರ್ಗವೆನ್ನಿಸಿತ್ತು. ಅವರು ಬದುಕುತ್ತಿದ್ದರೆ ಹೇಗಿರುತ್ತಿತ್ತೊ. ಅಂತೂ, ಅವರ ಆಶಯವೆ ಸರಿಯಾಗಿ ತೋರಬಹುದು ಕೆಲವರಿಗೆ. ಅದು ಇಲ್ಲಿಯ ಚರ್ಚೆಯ ವಿಷಯವಲ್ಲ. ಆದರೆ ವಿಷಯವಿಷ್ಟೇ ; ಸ್ವಾತಂತ್ರ್ಯ ಪೂರ್ವದಲ್ಲೂ ನಮ್ಮ ಎಲ್ಲ ನಾಯಕರು ನಮಗೆ ಪ್ರಜಾಪ್ರಭುತ್ವವೇ ಬೇಕೆಂಬ ಧೈರ್ಯವುಳ್ಳವರಾಗಿದ್ದಿರಲಿಲ್ಲ ಎಂಬುದಷ್ಟೆ ಗಮನಾರ್ಹ.

---

೧. ಅಥರ್ವವೇದದಲ್ಲಿ ಇದೇ ಅರ್ಥದ ಒಂದೆರಡು ಮಂತ್ರಗಳಿವೆ.

ಮತ್ತೊಂದು ವಿಚಾರಾರ್ಹ ವಿಚಾರವಿದು. ಒಂದು ಸಮಕಾಲವನ್ನು ಗಮನಿಸುವಾಗ ಆ ಸಮಯದ ರಾಜಕೀಯ ಸಾಮಾಜಿಕ ಸೆಳೆತ ಬಲ್ಲವರನ್ನು ಮಾತ್ರವೇ ಅಲ್ಲದೆ, ತಾತ್ವಿಕ ವೈಜ್ಞಾನಿಕ ವಿಚಾರಧಾರೆಗಳನ್ನೂ ಪ್ರಭಾವಶಾಲಿ ಮಹಾವ್ಯಕ್ತಿಗಳನ್ನೂ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಇಪ್ಪತ್ತನೆಯ ಶತಮಾನದ ಸಾಮಾಜಿಕ ಚಿಂತನೆಗಳ ಮೇಲೆ ಯಾವುದಿಲ್ಲದಿದ್ದರೂ ಮನೋವಿಜ್ಞಾನ ಪ್ರಭಾವ ಬೀರಿದೆ ; ಹಾಗೆಯೇ ರಾಜಕೀಯ ತತ್ವದ ಮೇಲೆ ಮಾರ್ಕ್ಸ್ ತತ್ವ ಪ್ರಭಾವ ಬೀರಿದೆ. ಡಾರ್ವಿನ್ನನ ವಿಕಾಸವಾದ ತಾತ್ವಿಕ ಚಿಂತನೆಗಳ ಮೇಲೂ ಪ್ರಭಾವ ಬೀರಿದೆ. ಖೈದಿಗಳನ್ನು ಹಿಂದೆ ಧರ್ಮಗಳ ಕಾಲದಲ್ಲಿ ನೋಡುತ್ತಿದ್ದ ದೃಷ್ಟಿಗೂ ಈಗ ನೋಡುತ್ತಿರುವ ದೃಷ್ಟಿಗೂ ಆಗಿರುವ ವ್ಯತ್ಯಾಸಕ್ಕೆ ಮನೋವಿಜ್ಞಾನ ಹಾಗೂ ಅದರಿಂದ ಪ್ರಭಾವಿತವಾದ ಸಮಾಜ ವಿಜ್ಞಾನ ಕಾರಣವಾಗಿದೆ. ಕದ್ದವನ ಕೈ ಕತ್ತರಿಸು ; ತಿಂದವನ ನಾಲಿಗೆ ಕೊಯ್ ; ಕದ್ದು ಕೇಳಿದವನ ಕಿವಿಗೆ ಕಾದ ದ್ರವ್ಯವನ್ನು ಸುರಿ ; ಕದ್ದು ಕೂಡಿದವನ ಗುಪ್ತಾಂಗಗಳನ್ನೆ ಕತ್ತರಿಸು – ಎಂಬುದೆಲ್ಲ ನೀತಿ ಧರ್ಮವಾಗಿದ್ದ ಕಾಲವಿತ್ತು. ಈಗ ಮನೋವಿಜ್ಞಾನ, ಪರಿಸರ ಮನೋವಿಜ್ಞಾನ ಎಲ್ಲವೂ ಮಾನವ ದೌರ್ಬಲ್ಯಗಳ ಬಗೆಗೆ ಬೇರೊಂದು ಅರಿವನ್ನು ಮೂಡಿಸಿವೆ. ಪರಿಸರದ ಕಾರಣದಿಂದಾಗಿ ವ್ಯಕ್ತಿ ಅಪರಾಧಿಯಾಗುತ್ತಾನೆ ; ಇಲ್ಲವೆ ಒಳ್ಳೆಯವನಾಗುತ್ತಾನೆ. ನಾವೆಲ್ಲರೂ ಒಳ್ಳೆಯವರೂ ಅಲ್ಲ, ಕೆಟ್ಟವರೂ ಅಲ್ಲ – ಹುಟ್ಟುತ್ತ, ಬೆಳೆಯುತ್ತ ಪರಿಸರದ ಪ್ರಭಾವದಿಂದಾಗಿ ಹಾಗೇನಿದ್ದರೂ ಆದೀತು, ಎಂಬ ಮನೋವಿಜ್ಞಾನದ ಪರಿಕಲ್ಪನೆ ಸಾಮಾಜಿಕ ಚಿಂತನವನ್ನೆ ಬದಲಿಸಿದೆ. ಖೈದಿಗಳನ್ನೀಗ ಮಾನವರನ್ನು ನೋಡಿಕೊಳ್ಳುವಂತೆ ನೋಡಿಕೊಳ್ಳಬೇಕೆಂಬ ದೃಷ್ಟಿ ಬಂದಿದೆ. ವೈಯಕ್ತಿಕವಾಗಿ ನಾವು ನಮ್ಮ ಮನೆ ಪದಾರ್ಥವನ್ನು ಕದ್ದ ಕಳ್ಳನ ಕೈಯನ್ನು ಕತ್ತರಿಸಬೇಕೆಂದೆ ಬಯಸಬಹುದು. ಆದರೆ ಸಾಮೂಹಿಕವಾಗಿ ನಾವು ಒಪ್ಪಿಸುವ ತತ್ತ್ವ ಉದಾರವಾಗಿದೆ. ಇದಕ್ಕೆ ಕಾರಣ ಕ್ರಿಸ್ತ, ಬುದ್ಧ, ಬಸವರಲ್ಲ ; ಪರಿಸರ ವಿಜ್ಞಾನ ! ಇದರಿಂದಾಗಿ ಪಾಪಿ – ಪಾಪಗಳ ಬಗೆಗಿನ ದೃಷ್ಟಿಯೆ ಬದಲಾಯಿಸಿಬಿಟ್ಟಿದೆ. ಈ ಪ್ರಭಾವವಿರುವ ಯಾವ ಕವಿತಾನೆ ಮಂಥರೆ, ರಾವಣಾದಿಗಳ ಪಾತ್ರವನ್ನು ಹಳೆಯ ನೀತಿ ದೃಷ್ಟಿಯಿಂದಲೇ ನೋಡಬಂದೀತೆ?

ರಾಜಕೀಯವಾಗಿ ಪ್ರಜಾಪ್ರಭುತ್ವ ವ್ಯಕ್ತಿಗೌರವವನ್ನೂ, ಸ್ವಾತಂತ್ರ್ಯಭಾವವನ್ನೂ ಕುದುರಿಸಿ ರಾಜತ್ವದ ಬಗೆಗೆ ಪ್ರತಿರೋಧ ಹುಟ್ಟುವಂತೆ ಮಾಡಿತು. ವೈಯಕ್ತಿಕವಾಗಿ ನಮಗೆ ರಾಜತ್ವದ ಆಸೆ, ನಿರಂಕುಶಾಧಿಪತ್ಯದ ಆಸೆಯೇ ಇರಬಹುದು. ಆದರೆ ಸಾಮೂಹಿಕವಾಗಿ ಈ ತತ್ವ ನಮ್ಮ ಮೇಲೆ ಪ್ರಭಾವ ಬೀರಿತು. ಈ ಪರಿಸರದಲ್ಲಿ ಮೇಲು ಕೀಳು ಎಂಬ ವರ್ಣ ವ್ಯವಸ್ಥೆ ಅರ್ಥವಿಲ್ಲದ್ದಾಗುತ್ತದೆ. ಸೇನಾನಿಯೊ, ಕಮ್ಮಾರನೊ ಯಾರಾದರು ಒಂದೆ ಎಂಬ ಕೆಚ್ಚು ಬರುತ್ತದೆ. ಸಾಮಾನ್ಯತಾ ಗೌರವ ಬರತೊಡಗುತ್ತದೆ. ದೊಡ್ಡದೆಂದರೆ ರಾಜವಂಶದಿಂದಲೆ ಬರುತ್ತದೆ, ಸಮಾನ್ಯರಿಂದಲ್ಲ ಎಂಬ ಭಾವ ಹೋಗುತ್ತದೆ. ಶರಣರೆ ಮುಂತಾದ ಭಕ್ತಿಪಂಥದವರಲ್ಲಿ ಭಕ್ತಿಯಿಂದಾಗಿ ಈ ಕೆಚ್ಚು ಮೂಡಿದುದು ದೊಡ್ಡದೆ ಸರಿ. ಈಗ ಮತ ಧರ್ಮಾಧಿ ಆವರಣವಿಲ್ಲದಾಗಲೂ ಮೇಲು ಕೀಳು ಭಾವನೆಯ ಬಗ್ಗೆ ಅಸಹನೆ ಮೂಡಬೇಕಾದರೆ ಈ ರಾಜಕೀಯ ತತ್ವದ ಪ್ರಭಾವ ಕಾರಣವಾಯಿತು. ಶ್ರೀರಾಮಯಣ ದರ್ಶನದಲ್ಲಿ ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ – ಸಾಮಾನ್ಯತಾಗೌರವ ಹೇಗೆ ಗಣ್ಯವಾಗಿದೆ ಎಂಬುದಕ್ಕೆ ಈ ಪ್ರಭಾವವೇ ಕಾರಣ. ಶ್ರೀರಾಮ, ಸೀತಾ, ಲಕ್ಷ್ಮಣ, ಆಂಜನೇಯಾದಿಗಳಂತೆ ಕಪಿಸೇನೆಯ ಸಾಮಾನ್ಯರೂ ಗಮನಾರ್ಹರಾಗುತ್ತಾರೆ. ರಾವಣನಂತಹ ವರಬಲಿಷ್ಠನನ್ನು ಮಹಾಸಭೆಯಲ್ಲಿ ಗಂಭೀರವಾಗಿ ಪ್ರತಿಭಟಿಸುವ ಹಿರಣ್ಯಕೇಶಿಯ ಮಾತುಕೇಳಿ : "ಸುಖಮಮೂಲ್ಯಂ ಅದಾರ್ಗಾದೊಡಂ. ರಾಜಸುಖದಂತೆಯೆ ಪ್ರಜಾ ಸುಖಂ.. ಸುಖಮೊರ್ವನದೆ ಸರ್ವಸುಖಮಹುದೊ? ಬಹುಜನರ ಸುಖಕೆ ಒರ್ವನ ಸುಖಂ ಬೆಲೆಯಹುದೊ?.. ಸುಖಮದೊರ್ವನದು ಸಕಲರ ದುಃಖ ಕಾರಣಂ ತಾನಪ್ಪೊಡದು ನಿಂದನೀಯಂ, ನೃಪನದಾದೊಡಂ!" ಈ ದೃಷ್ಟಿ ಬರುವುದಕ್ಕೆ ಕಾರಣವೇನು, ನಮ್ಮ ಯುಗದ ರಾಜಕೀಯ ಜಾಗೃತಿಯಲ್ಲದೆ? ಇದರಂತೆ, ಡಾರ್ವಿನ್ನನ ವಿಕಾಸವಾದ ಮುಂದುವರಿದ ಜೀವ ವಿಕಾಸವಾದವಾಗಿ – ಸೃಜನಾತ್ಮಕ ವಿಕಾಸವಾದವಾಗಿ – ಪರಿಣಾಮ ಬೀರಿದಂತೆ ಕಾಣುತ್ತದೆ. ಶ್ರೀ ಅರವಿಂದರು ಈ ತತ್ತ್ವ ಪ್ರಣಾಳಿಯ ಪ್ರತಿಪಾದಕರಾಗಿದ್ದರು. "ಹಾರೈಸಿ ಹಾರೈಸಿ ಹಾರೈಸಿ ಅನ್ನತಾನಾದುದ್ಯೆ ಪ್ರಾಣ ! ಹಾರೈಸಿ ಹಾರೈಸಿ ಹಾರೈಸಿ ಹಾರಿದುದೊ ನೀರಧಿಯ ಮೀನ! ಹಾರೈಸು ಹಾರೈಸು ಹಾರೈಸು ಜೀವ ; ಹಾರೈಸು ನೀನಾಗುವನ್ನೆಗಂ ದೇವ !" ಎಂಬ ತಾತ್ವಿಕ ದರ್ಶನ ಕವಿಗೆ ಶ್ರೀ ರಾಮಾಯಣ ದರ್ಶನ ರಚನೆಯ ವೇಳೆಗಾಗಲೆ ಬಂದಿತ್ತು. ಜೀವವಿಕಾಸಕ್ಕೆ ಹಾರೈಕೆಯ ಪ್ರೇರಣೆ ಎಂಬ ಕಾಣ್ಕೆಯನ್ನು ಕಾಣುತ್ತಾರೆ :

"ಯುಗಯುಗದತಿಕಷ್ಟದಿ
ಜಡವನು ಜಯಿಸಿತು ಜೀವ
ಬಹುತಪದಿಂದಾಜೀವಕೆ
ಬಂದುದು ಮಾನವ ಭಾವ

ಯುಗಯುಗ ಬೇಕೀ ಮನುಜತೆ
ಮಾನವತೆಯನೆ ಮೀರಿ
ದೇವತ್ವವ ಸಂಪಾದಿಸೆ
ಸಂಯಮ ಸ್ವರ್ಗಕ್ಕೇರಿ !”

– ಅಗ್ನಿ ಹಂಸ : ‘ಶತಮಾನಸಂಧ್ಯೆ’ ಪಂಕ್ತಿ ; ೧೧೪–೧೨೧,

ಈ ಕವಿತೆ ಮೂಡಿದುದು ಶ್ರೀ ಗುರುದೇವ ರಾಮಕೃಷ್ಣ ಪರಮಹಂಸರ ಶತಮಾನೋತ್ಸವ ಸಮಯದಲ್ಲಿ, ೧೯೩೬ರಲ್ಲಿ. ಕುವೆಂಪು ಅವರ ಮೇಲೆ ಈ ತತ್ವ ಆ ವೇಳೆಗೇ ಶ್ರೀ ರಾಮಾಯಣ ದರ್ಶನಂ ರಚನೆಯ ವೇಳೆಗಾಗಲೇ ಗಾಢ ಶ್ರದ್ಧೆಯ ವಿಷಯವಾಗಿತ್ತು. ಆಮೇಲೆ ಶ್ರೀ ಅರವಿಂದರ ಪರಿಣಾಮವಾದದ ಪರಿಚಯವೂ ಆಯಿತು. ಅಲ್ಲಿ ಅದಕ್ಕೆ ಪುಷ್ಟಿಯೂ ದೊರೆಯಿತು.

ಇದನ್ನು ಮನಗಂಡ ಕವಿ ಶ್ರೀ ರಾಮಾಯಣ ಕಾವ್ಯದಲಿ ಪರಿಣಾಮ ತತ್ವವನ್ನು ಕಾಣದೆ ಹೇಗಿರುತ್ತಾರೆ? ಆದ್ದರಿಂದಲೆ ಅಲ್ಲಿನ ಎಲ್ಲ ಪಾತ್ರಗಳೂ ಆಗುವುದರಲ್ಲಿ ತೊಡಗಿದ್ದಾರೆ. ಆ ಆಗುವಿಕೆ ಒಬ್ಬೊಬ್ಬರಲ್ಲಿ ಒಂದೊಂದು ಸ್ತರದಲ್ಲಿ ನಡೆದಿರಬಹುದು, ಪಾತ್ರಗಳ ಅವಸ್ಥಾಭೇದಕ್ಕನುಗುಣವಾಗಿ ಅದು ನಡೆದಿರುತ್ತದೆ. ಹಾಗಾಗಿ ಇಲ್ಲಿಯ ಆಗುವಿಕೆಗೆ ನಿರಾಶೆಯಿಲ್ಲ. ಎಲ್ಲರ ಆಗುವಿಕೆಯೂ ಪರಮ ಪರಿಣಾಮದತ್ತವೆ ಸಾಗುತ್ತದೆ. ಶ್ರೀ ರಾಮಚಂದ್ರ ಆ ಕೇಂದ್ರವಾದರೆ ಎಲ್ಲರೂ ಅದರ ಅಭಿವ್ಯಕ್ತಿಯ ಆಗುವಿಕೆಯಲ್ಲಿ ಸಹ ಯೋಗಗೊಂಡಿರುತ್ತಾರೆ. ಗೊತ್ತಿದ್ದೊ ಗೊತ್ತಿಲ್ಲದೆಯೊ, ಇಷ್ಟವಿದ್ದೊ ಇಷ್ಟವಿಲ್ಲದೆಯೊ, ರಾವಣತ್ವ ರಾಮತ್ವದತ್ತ ಪರಿಣಮನಗೊಳ್ಳುತ್ತದೆ. ಸೀತಾ ವಿಷಯಕವಾದ ಅವನ ಕಾಮ ಪುತ್ರಪ್ರೇಮವಾಗಿ ಸಹಜವಾಗಿಯೆ ಪರಿಣಮನಗೊಳ್ಳುತ್ತದೆ.

ಈ ತತ್ವಗಳ ಕೂಡೆ ಗಾಂಧೀಜಿಯವರ ಸರ್ವೋದಯ ತತ್ವ ಪ್ರಭಾವ ಈ ಕಾವ್ಯದ ಮೇಲೆ ಆದುದೂ ಉಂಟು. ನ್ಯಾಯಾಧೀಶನಾಗಲಿ, ಮೋಚಿಯಾಗಲಿ ಎಲ್ಲರೂ ಒಂದೇ ಗೌರವಕ್ಕೆ ಅರ್ಹರು ಎಂಬ, ಎಲ್ಲರ ಉದಯವೆ ಸರ್ವೋದಯ ಧ್ಯೇಯವೆಂಬ, ಎಲ್ಲರೂ ಎಲ್ಲರ ಉದ್ಧಾರದಲ್ಲಿ ಭಾಗಿಗಳಾಗಬೇಕೆಂಬ ಅವರ ಆ ತತ್ವ ಗಾಢ ಪ್ರಭಾವ ಬೀರಿದೆ, ಸಾರರೂಪದಲ್ಲಿ. ಹೀಗಾಗಿ ಈ ಕಾವ್ಯದಲ್ಲಿ ರಾವಣನ ಆಗುವಿಕೆಯಲ್ಲಿ ಸೀತಾದೇವಿಯೂ ಭಾಗಿಯಾಗುತ್ತಾಳೆ. ರಾವಣ ಪತಿವ್ರತಾಶಿರೋಮಣಿ ಮಂಡೋದರಿಯ ರಾವಣನಾಗಿ ಅನುಕಂಪ ಯೋಗ್ಯನಾಗುತ್ತಾನೆ. ಶ್ರೀರಾಮನನ್ನು ಕಾಡಿಗೆ ಕಳಿಸಲು ಪ್ರೇರಕಳಾದ ಮಂಥರೆಯೆ ಅವನ ಆಗಮನದಲ್ಲಿ – ಶೀಘ್ರಾಗಮನದಲ್ಲಿ ಕಾತರಗೊಳ್ಳುತ್ತಾಳೆ. ಅದಕ್ಕೆ ಕಾರಣ



ಶ್ರೀ ರಾಮ ಪ್ರೇಮವಲ್ಲ, ತನ್ನ ಪ್ರೇಮಧ್ರುವವಾದ ಭರತನ ಪ್ರೀತಿಯನ್ನು ಹೆಚ್ಚಿಸಿಕೊಳ್ಳಲೆಂದೇ ಆಕೆ ಶ್ರೀರಾಮ ವನವಾಸವನ್ನು ಯೋಜಿಸಿದ್ದಳು. ಆದರೆ ಅದರಿಂದ ಭರತ ಪ್ರೀತಿ ಪರಮ ವಿಷವಾಗಿ ಉಗ್ರರೂಪ ತಾಳಿತು. ಮತ್ತೆ ಭರತ ಪ್ರೇಮವನ್ನು ಗಳಿಸಿಕೊಳ್ಳಲಾಗಿ ಅವನ ಪ್ರೀತಿ ಕೇಂದ್ರವಾದ ಶ್ರೀರಾಮನನ್ನು ಮತ್ತೆ ಕರೆತರಲು ಸಾಧಿಸುತ್ತಾಳೆ. ಶ್ರೀರಾಮನನ್ನು ಕಳಿಸುವುದಕ್ಕೆ ಪ್ರೇರಕಳಾದಂತೆ ಅವನು ಹಿಂತಿರುಗುವುದಕ್ಕೆ ಚೋದಕಳಾಗುತ್ತಾಳೆ – ಅಥವಾ ಹಲವು ಸಹಾಯಕ ಶಕ್ತಿಗಳಲ್ಲಿ ಅವಳೂ ಒಬ್ಬಳಾಗುತ್ತಾಳೆ. ಶತ್ರುಘ್ನನ ಹೊಡೆತ ತಿಂದು, ಭರತನ ಅಪೂರ್ವ ಭರ್ತ್ಸನೆಯ ಪ್ರಾಣಾಂತಿಕ ಘಾತವನ್ನೂ ತಾಳಿಕೊಂಡು, ಹಸಿವೆಯನ್ನೂ ತಾಳಿಕೊಂಡಿದ್ದವಳ ಚೇತನಕ್ಕೆ ಕಳೆದ ಪ್ರೀತಿಯ ಮರುಗಳಿಕೆಯ ಹಾದಿಯಾಗಿ ರಾಮ ಪುನರಾಗಮನ ಕಂಡದ್ದರಿಂದ ಹಾಗೂ ತನ್ನ ಅಸ್ತಿತ್ವ ಶ್ರೀ ರಾಮಾಗಮನದಲ್ಲಿಯೇ ನೆಲೆಗೊಂಡಿದೆಯೆಂಬ ಅರಿವು ಪರೋಕ್ಷವಾಗಿ ಆಗಿ ಅವಳು ಅರ್ಧಜಾಗ್ರತಸ್ಥಿತಿಯಲ್ಲಿ ಕಾಡಿನತ್ತ ಧಾವಿಸುತ್ತಾಳೆ. ಕಾಡುಗಿಚ್ಚಿನ ಹಾದಿಯಲ್ಲಿ ಶ್ರೀರಾಮನನ್ನರಸುತ್ತಾ ನುಗ್ಗುತ್ತಾಳೆ. ಇಡೀ ಮಂಥರೆಯ ಪಾತ್ರಚಿತ್ರ ಮನೋವೈಜ್ಞಾನಿಕ ಜ್ಞಾನದಿಂದ ಅರ್ಥಪೂರ್ಣವಾಗಿದೆ. ಪರಿಸರದ ಕಾರಣದಿಂದಾಗಿ ಅವಳು ಕೈಕಾಭರತರಲ್ಲೆ ಹೇಗೆ ಧ್ರುವೀಕರಣಗೊಂಡಳೆಂಬುದನ್ನು ಶ್ರೇಷ್ಠವಾಗಿ ಚಿತ್ರಿಸುತ್ತಾರೆ, ಮನೋವೈಜ್ಞಾನಿಕವಾಗಿಯೆ ಅವಳ ಭರತಪ್ರೇಮ ಶ್ರೀರಾಮಪ್ರೇಮವಾಗುವ ಅಥವಾ ಅದನ್ನೂ ತೆಕ್ಕೆಗೊಳ್ಳುವ ಹಾದಿಯನ್ನೂ ಕವಿ ಕಂಡರಿಸಿದ್ದಾರೆ. ಆದರೆ ಅವಳ ಪಾತ್ರ ಮನೋವಿಜ್ಞಾನದ ಹಂತದಲ್ಲೆ ನಿಲ್ಲದೆ ಆಧ್ಯಾತ್ಮಿಕ ಸ್ತರಕ್ಕೆ ಏರುವುದಕ್ಕೆ ಕಾರಣ ಈ ಸಮಕಾಲೀನ ತಾತ್ವಿಕ ಹಿನ್ನಲೆ. ಶ್ರೀರಾಮ ಪ್ರೇಮ ಸಂಪಾದನದಲ್ಲಿ – ಅವನ ಕ್ಷೇಮ ಚಿಂತನದಲ್ಲಿ – ಅವಳ ಆತ್ಮೋದ್ಧಾರ ಅಡಗಿರುತ್ತದೆಂಬ ಕಾಣ್ಕೆ ಇದೇ ಆಗಿದೆ. ಇದು Super imposed ಆಗುವುದಿಲ್ಲ. ಒಳಗಿನಿಂದಲೆ Expose ಆದದ್ದಾಗುತ್ತದೆ. ಕಾಡುಗಿಚ್ಚಿನಲ್ಲಿ ಸುಟ್ಟವಳು ಸತ್ತರೂ ಚೈತನ್ಯವಾಗಿ ಉಳಿಯುತ್ತಾಳೆ, ಇಲ್ಲಿ ಮನೋ ವಿಜ್ಞಾನದ ಮುಂದಕ್ಕೆ – ಪ್ರಾಯಃ ಪರಾಮನೋ ವಿಜ್ಞಾನ ಒಪ್ಪಬಹುದಾದ ರೀತಿಯಿಂದ– ಅವಳ ಚೈತನ್ಯದ ಅಜ್ಞಾತ ಸಾಧನೆ ನಡೆಯುತ್ತದೆ. ಅದು ತಿಳಿಯುವುದು ಶ್ರೀರಾಮಾಗಮನ ಕಾತರನಾಗಿ ಅಗ್ನಿವೇದಿಕೆಯ ಬಳಿ ಭರತ ಕುಳಿತಿರುವಾಗ, ಮಂಥರಾತ್ಮಕ್ಕೆ ಭರತನ ಕ್ಷೇಮಕಾತರವೇ ತಾರಕವಾಗಿದ್ದುದರಿಂದ, ಶ್ರೀರಾಮಾಗಮನ ತಡವಾದರೆ ಅಗ್ನಿ ಪ್ರವೇಶ ಮಾಡುವೆನೆಂದು ಅವನು ದೀಕ್ಷೆಗೊಂಡಿದ್ದುದರಿಂದ, ಮೊದಲು ಅವನನ್ನು ಕಾಯಬೇಕಾದುದು ಅವಳ ಆತ್ಮಚೈತನ್ಯದ ಗಂತವ್ಯವಾಗಿರುತ್ತದೆ. ಎಲ್ಲ ವ್ಯಕ್ತವಾಗಿ

ಹೇಗೆ ಹೇಳುವುದು. ಕಾಡುಗಿಚ್ಚಿನಲ್ಲಿ ಲಯವಾದವಳು ಯಜ್ಞಾಗ್ನಿ ಕುಂಡದಲ್ಲಿ ಉದಿಸುತ್ತಾಳೆ – ಚಿಕ್ಕೆರೆಬಿದ್ದ, ದೊಡ್ಡ ಕೆರೆಲೆದ್ದ ಗಣಪತಿಯಂತಾಗುತ್ತಾಳೆ, ಹಾಗೂ ಕಾಡುಗಿಚ್ಚಿನಂತೆ ಲಯಕಾರಿಯಾಗಿದ್ದ ಅವಳ ಮಮತೆಯ ಸುಳಿ ಯಜ್ಞಾಗ್ನಿಯಾಗಿ ಸ್ವರೂಪಾಂತರಗೊಳ್ಳುತ್ತದೆ. Transformation of the Spirit Vital ಇಲ್ಲಿ ಕಾಣುತ್ತದೆ. ಹೀಗಾದಾಗ ಸರ್ವೋದಯ ಕಾಣ್ಕೆ ಇದರಲ್ಲೆ ಅಡಕಗೊಳ್ಳುತ್ತದೆ. ಈ Transformation of the vitals ರಾವಣನಲ್ಲಿ ಪ್ರತಿಮಿತವಾಗಿದೆ. ಶ್ರೀರಾಮಸತಿ ಸೀತೆಯನ್ನು ಕಾಮಿಸಿದ ಉತ್ಕಟತೆ, ಅವಳನ್ನು ಪಡೆಯಲೇಬೇಕೆಂಬ ತೀವ್ರಾಕಾಂಕ್ಷೆಯಾಗಿ ಮಾಗುತ್ತಾ ಅವಳ ಮಗುವಾಗಿ ಮಾಗುತ್ತದೆ, ಮಾತೃತ್ವವನ್ನು ಒಪ್ಪಿಕೊಂಡು ಶಿಶುತನವನ್ನು ಪಡೆದ ಮುಂಗಾಣ್ಕೆಯನ್ನು ಕಾಣುತ್ತದೆ. ಆಗ ರಾವಣ ಜಘನ್ಯವಾಗಿ ಕಾಣುವುದಿಲ್ಲ.

ಶ್ರೀಸಾಮಾನ್ಯತಾ ಗೌರವಾಸಕ್ತಿ ಈ ಯುಗದ ರಾಜಕೀಯ ಸಾಮಾಜಿಕ ತತ್ವಗಳಿಂದಾಗಿ ಮೂಡಿತೆಂದು ಹೇಳಿದೆ. ರಾಮಾಯಣ ದರ್ಶನದಲ್ಲಿ ಶ್ರೀಸಾಮಾನ್ಯ ಪಾತ್ರ ಅತಿಶಯವಾದದ್ದೆ ಆಗಿದೆ. ಮಂಥರೆ ಅದಕ್ಕೊಂದು ನಿದರ್ಶನ. ಅವಳು ಹೋಗಲಿ, ಹೆಸರು ಕೇಳಿಲ್ಲದ ಕಪಿ ಸೈನಿಕರೂ ಈ ಕಾವ್ಯದಲ್ಲಿ ಸ್ಮರಣೀಯವಾಗಿ ಉಳಿಯುತ್ತಾರೆ. ಸೇತುಬಂಧನದಲ್ಲಿ ಅಳಿಲು ಮಾಡುವ ಮಳಲಸೇವೆ ಪ್ರಸಿದ್ಧವಾಗಿದೆ. ಆ ಪ್ರಸಂಗವೇನೂ ಇಲ್ಲಿ ಬರುವುದಿಲ್ಲ. ಆದರೆ ಅಲ್ಲಿ ಬರುವ ಸಾಮಾನ್ಯ ಕಪಿ ವೀರನೊಬ್ಬನ ಸಾಹಸ ಸ್ಮಾರಕವೊಂದನ್ನು ಕವಿ ನಿರ್ಮಿಸಿರುವುದನ್ನು ನೆನೆದುಕೊಳ್ಳಲೇಬೇಕು. ಮೇರು ಎಂಬವನೊಬ್ಬ ಸಾಮಾನ್ಯ ಕಪಿ ವೀರ. ಎಲ್ಲರಿಗೂ ಇರುವ ಹಾಗೆ ಅವನಿಗೂ ಮಹಾತ್ಕಾರ್ಯವನ್ನು ಮಾಡಬೇಕೆಂಬ ತುಡಿತ ಬಂತೇನೊ. ಶ್ರೀರಾಮ ಸೇತುಬಂಧನದಲ್ಲಿ ನಿರತನಾಗಿದ್ದ ಅವನಿಗೆ ಮಹತ್ವದ ಸಾಧನೆ ನಡೆಸಬೇಕೆಂದೆನಿಸಿ ಅಲ್ಲೆ ಎತ್ತರದಲ್ಲಿದ್ದ ಭೀಮಗಾತ್ರದ ಒಂದು ಕೋಡುಗಲ್ಲನ್ನು ಏಕಾಂಗಿಯಾಗಿಯೆ ತನ್ನ ತೋರ ತೋಳ್ಗಳಿಂದ ತಬ್ಬಿ ಜಬ್ಬಿ ಅಲುಗಿಸುತ್ತಾನೆ. ಅಲುಗುತ್ತಿದ್ದ ಅದರ ಎತ್ತರ ಎಷ್ಟಿತ್ತೆಂದರೆ ಸಂಜೆ ಬಿಸಿಲಿನಲ್ಲಿ ಬೀಳುತ್ತಿದ್ದ ಅದರ ನೆಳಲು ಆ ಅಲುಗಾಟದಲ್ಲಿ "ಯೋಜನಜ್ಯಾರೇಖೆಯಂ ಗೀಚಿ ತೊನೆದತ್ತದರ ಛಾಯೆ ! ನಡುಗಿತು ನೆಲಂ. ಗುಡುಗಿ ಗೈರಗರ್ಭಂ ಕರೆದುದು ಕಳಚಿ ಕಳಲ್ದರೆಯ ಕೂರ್ಬರಿಸಮಂ, ಸದ್ದುಹದ್ದುಗಳೆದ್ದು ದಿಗ್ದೆಸೆಗೆ ಚೀರಿ ಹಾರಿದುವಚಲ ಚೀತ್ಕಾರ ಶಕುನಗಳವೋಲ್. ಬಂಡೆಯಡಿ ಗುದ್ದಿನೊಳಗೊರಗಿ ನಿದ್ದೆಯೊಳಿರ್ದ ಕಣೆಹಂದಿಗಳ್ ದಿಗಿಲ್ಗೊಂಡೆದ್ದು ಹೊರನುಗ್ಗಿ ಬೀಳ್ವನಿತರೊಳೆ ನುಚ್ಚುವೋದುವೊ, ಒರಳ್ಗುಂಡು ಕಡೆದರೆದವೋಲ್ !" ಈ ಭೀಮಾಸಾಹಸಿಯ



ಪವಿತ್ರ ಸಾಹಸಕ್ಕೆ ಬಂದ ಗತಿಯೆಂತಹದು ? ಆ ಭೀಮಸಾಹಸದ ಮುಕ್ತಾಯದಲ್ಲಿ ಅವನಿದ್ದಾಗ ಪಕ್ಕದ ಗಿರಿಶಿಖರದಿಂದ ಒಂದು ಭೀಷ್ಮ ಅಧಿಕಾರ ವಾಣಿ ಕೇಳಿಬರುತ್ತದೆ. ಶರಗುಲ್ಮ ಕೂಗುತ್ತಿರುವುದು ! "ಅದು ಪವಿತ್ರ ಶಿಲೆ – ಶಕುನಿ ಶಿಲೆ, ಸಂಪಾತಿ ಶತಶತಮಾನ ತಪಸ್ಸಿದ್ದು ಸೀತಾವಾರ್ತೆಯನ್ನು ತಿಳಿಸಿ, ತಮ್ಮನ್ನೆಲ್ಲ ಸಂಕಟದಿಂದ ಪಾರುಮಾಡಿದ ಶಕುನಿ ಶಿಲೆ. ಅದನ್ನೆ ಕಿತ್ತರೆ? ಯಾರಿಗೂ ಸಾಧ್ಯವಾಗುವುದಿಲ್ಲವೆಂದೇನೂ ಅದನ್ನು ಉಳಿಸಿರಲಿಲ್ಲ. ಸ್ಮಾರಕವಾಗಿ ಬಿಟ್ಟಿದ್ದೆವು. ಅಷ್ಟೆ, ನೀನಾದರೂ ಅದನ್ನು ತಡೆ." ಇದನ್ನು ಶರಗುಲ್ಮವಾಣಿಯಿಂದ ತಿಳಿದ ಆ ಹತಸಾಹಸಿಗೆ ಏನಾಗಿರಬೇಡ ! ಅಂತಹ ಎಷ್ಟು ಜನರ ಸಾಹಸಗಳು ವೈಯಕ್ತಿಕ ಫಲ ಕಾಣದೆಹೋಗಿಲ್ಲ, ಎಲ್ಲ ಆಂಜನೇಯ ಸಾಹಸಕ್ಕೂ ಫಲವುಂಟೇನು? ಮಹತ್ತಿನ ಸಾಮೂಹಿಕ ಸಾಧನೆಯಲ್ಲಿ ವೈಯಕ್ತಿಕ ಫಲ ಸಿದ್ಧಿಯನ್ನು ತೃಣೀಕರಿಸಲೇ ಬೇಕಾಗುತ್ತದೆ. ಅಂತೆಯ ಮೇರುಕೂಡ ತನ್ನ ಮಹೋದ್ಯಮವನ್ನೂ ಕೈಬಿಟ್ಟ. ಅದೇ ಹೊತ್ತಿಗೆ ಸರಿಯಾಗಿ, ಸೇತುಬಂಧನದ ಮುಕ್ತಾಯದ ಸುದ್ದಿಬಂದು ಆ ಸಾಮೂಹಿಕ ಹರ್ಷದಲ್ಲಿ ಅವನ ವೈಯಕ್ತಿಕ ಹತಾಶೆಯಾದರೂ ಕರಗಿ ಹೋಗಬೇಕಾಗುತ್ತದೆ. ಎಲ್ಲರೂ ತಮ್ಮ ತಮ್ಮ ಕೆಲಸವನ್ನಲ್ಲಲ್ಲಿಗೆ ನಿಲ್ಲಿಸಿ ಲಂಕಾತಟಿಯ ಕಡೆಗೆ ಧಾವಿಸುತ್ತಾರೆ. ಮೇರು ಕೂಡ ದಡಬಡ ನಡೆಯುತ್ತಾನೆ. "ಕಿತ್ತ ಬಂಡೆಯನಲ್ಲೆ ಮತ್ತೆ ಜಡಿದೊತ್ತಿದನ್ ; ಕಾಣ್ಕೋಣವಿಂಡುಗಳ್ ತೊತ್ತಳದುಳಿಯುತಡವಿಯಂ ಧಾವಿಸುವ ತೆರದಿ, ಪದದಘಾತಕೆ ಗಿರಿಯ ಬರಿ ಕುಸಿದು ದರಿಬೀಳೆ, ಗುಡುಗುಡನೆ ನಡೆದನಾ ಮೇರು, ಪಡೆಯಂ ಕೂಡಿ ದೈತ್ಯದುರ್ಗಕೆ ಲಗ್ಗೆ ನುಗ್ಗುವ ತವಕದೊಂದು ತೇರುರುಳ್ವಂತೆ." ಹಾಗೆ ಧಾವಿಸುವಾಗ ಅಲ್ಲಲ್ಲಿ ಎಲ್ಲರೂ ತಮ್ಮ ಕೆಲಸವನ್ನು ಅಷ್ಟಷ್ಟಕ್ಕೇ ನಿಲ್ಲಿಸಿ ಅವನ ಹತೋತ್ಕಟ ಆಶಯವನ್ನೂ ಯಾರೂ ಗಮನಿಸದೆ ಮುನ್ನಡೆಯತೊಡಗಿದುದನ್ನು ಕಾಣುತ್ತಾನೆ! ಇಡೀ ಪ್ರಸಂಗವೇ ಶ್ರೀಸಾಮಾನ್ಯನ ಅಪ್ರಸಿದ್ಧ ಅನಭಿಷಿಕ್ತ ಅನೂರ್ಜಿತ ಸಾಹಸಕ್ಕೆ ಹಾಗೂ ಮಹತ್ಕಾರಣಕ್ಕಾಗಿ ಅಖ್ಯಾತಿಯಲ್ಲೆ ಉಳಿಯುವ ಸಂಯಮಕ್ಕೆ ಗಂಭೀರ ಪ್ರತಿಮೆಯಾಗಿದೆ. ಶ್ರೀ ಕುವೆಂಪು ಹೀಗೆ ಶ್ರೀಸಾಮಾನ್ಯನನ್ನು ಶೈಲಸ್ತೂಪವನ್ನಾಗಿ ಕಡೆದು ನಿಲ್ಲಿಸುತ್ತಾರೆ. ಇದು ನಮ್ಮ ಯುಗದ ಒಳ ಚೈತನ್ಯದ ಪ್ರಭಾವವನ್ನೆ ಸೂಚಿಸುತ್ತದೆ. ಇದೇ ಸನ್ನಿವೇಶದಲ್ಲಿ ಮತ್ತೊಂದು ಗಮನಕ್ಕೆ ಬಾರದ ಸನ್ನಿವೇಶ ನೆನೆಯಬಹುದು. ಯುಗದ ಐತಿಹಾಸಿಕ ಮಹದ್ಘಟನೆಗಳ ಚಿತ್ರಣದಲ್ಲೆ ಆಸಕ್ತವಾದ ಯಾವ ಕವಿಯ ಮನಸ್ಸೂ ಸಾಮಾನ್ಯವಾಗಿ ಗಮನಿಸದಿರಬಹುದಾದ, ಸಂಭ್ರಮಾಸಕ್ತಿಯಲ್ಲೆ ಸಾಮಾನ್ಯವಾಗಿ ರುಚಿಗೊಳ್ಳುವ ಸಹೃದಯರಾದರೂ

ನಿರ್ಲಕ್ಷಿಸಬಹುದಾದ ಒಂದು ತುಂಬಾ ಮನೋಜ್ಞ ಧ್ವನಿಪೂರ್ಣ ಸಾಮಾನ್ಯ ಚಿತ್ರ ವೈರುದ್ಧ್ಯವೊಂದನ್ನು ಶ್ರೀ ರಾಮಾಯಣದರ್ಶನದಲ್ಲಿ ಕಾಣುತ್ತೇವೆ. ದಿನವೂ ಸಂಜೆ ಸಾಯಂಸೂರ್ಯನ ಕುಂಕುಮಕಿರಣಗಳಿಂದ ಸ್ನಾನಗೊಳ್ಳುತ್ತಿದ್ದ ಅಯೋಧ್ಯಾನಗರದ ಹೊಲದಿಂದ ಕೊಟ್ಟಿಗೆಗೆ ಬರುವ ಹಸುಕರುಮಂದೆಯ ಗೊರಸುಧೂಳಿಂದ ಕಾಂತಿಗೊಳ್ಳುತ್ತಿತ್ತು. ಆ ದಿನ ಆ ಕುಂಕುಮ ಮೇಘವನ್ನು ಮೀರುವ ಧೂಳೀ ಮೇಘವೊಂದು ಮೇಲೇಳುತ್ತದೆ. ಅದೇನು? ಯಾರು? ಯಾವುದು? ಏನು? ಎಂದೇನೂತಿಳಿಯದ ರೈತನೊಬ್ಬ ಹೊಲದಿಂದ ಆಯಾಸಗೊಂಡು ತನ್ನವರೊಡನೆ ಬರುತ್ತಿದ್ದವನು ಅದನ್ನು ಕಂಡು ಆಶ್ಚರ್ಯ ಪಡುತ್ತಾನೆ. ತಲೆಯ ಹೊರೆಹುಲ್ಲನ್ನು ಹೆದ್ದಾರಿಬಳಿ ಇಳುಕಿ ಕಿವಿಗೊಟ್ಟು ಕೇಳುತ್ತಾನೆ. ತೇರ್ಗಾಲಿಗಳ ಭೋರ್ ಸದ್ದು, ಗೋಳಿಡುವ ಆಳ್ಗಳ ದನಿ, ನೋಡುತ್ತಿರಬೇಕಾದರೆ ಹಿಂದೆ ಸಾಕೇತವೇ ಧಾವಿಸುತ್ತಿರುವ ಅನುಭವ. ಹೆದ್ದಾರಿಯನ್ನೂ ತುಂಬಿ ತುಳುಕುತ್ತಿರುವ ಜನ ಸಂದಣಿ. ರಥವನ್ನು ಬೆಂಬಿಡದಂತೆ ಧಾವಿಸಿರುವ ನಾನಾವರ್ಗದ ಜನ ತುಳುಕುತ್ತಿರುವ ಜನ ಸಂದಣಿ. ರಥವನ್ನು ಬೆಂಬಿಡದಂತೆ ಧಾವಿಸಿರುವ ನಾನಾವರ್ಗದ ಜನ ಹುಚ್ಚರಂತಿದ್ದಾರೆ. ಮುಡಿಗೆದರಿ ಕೂದಲು ಕಿತ್ತವರೇನು, ಎದೆಬಡಿದು ಕಿರುಚಿದವರೇನು, ತೊಟ್ಟುಡುಗೆಯನ್ನು ಕಿತ್ತು ಹರಿದಿಕ್ಕಿದವರೇನು, ಹೊಟ್ಟೆಬಡಿದು ಕೊಂಡುತತ್ತರಿಸಿದವರೇನು, – ಎಲ್ಲ ಓಡಿದ್ದಾರೆ. ಅದೆಲ್ಲ ಬೆರಗುತರುತ್ತದೆ. ಆ ವಿಸ್ಮಿತ ರೈತ ತನ್ನ ಬೆರಗಿನಿಂದ ಎಚ್ಚರುವ ವೇಳೆಗೆ, "ಮರೆಯಾಯ್ತು ಚಿತ್ರಮಯದುನ್ಮಾದದುತ್ಸವಂ ಪೊಳಲತ್ತಣಿಂ ಪೊರಗಣ್ಗೆ ಪರಿದು". ಎಂಥ ಅಗಣ್ಯ ಸಾಮಾನ್ಯ ಸುಂದರ ಚಿತ್ರವಿದು. ಶ್ರೀರಾಮ ಸೀತಾಲಕ್ಷ್ಮಣರ ಅರಣ್ಯವಾಸದ ತಿಳಿವೂ ಇರದ ಶ್ರಮಗಾರ ಒಕ್ಕಲುಮಗನೂ ಇದ್ದ. ಅವನೊಬ್ಬ ಅಂಥ ಅಗಣಿತ ಅಜ್ಞಾತರಪ್ರತಿನಿಧಿ. ರಾಮ ರಾಜನಾದರೂ ರಾಗಿಕಲ್ಲು ಬೀಸುವುದು ತಪ್ಪುವುದಿಲ್ಲ. ಕಾಡಿಗೆ ಹೋದರೂ ತಪ್ಪುವುದಿಲ್ಲ. ಅಷ್ಟೆ ಅಲ್ಲ, ಅಂಥ ದುಃಖಮಯ ಸನ್ನಿವೇಶದಲ್ಲೂ ಪ್ರಕೃತಿ ಎಂಥ ವೈಲಕ್ಷಣ್ಯಗಳನ್ನು ಪಕ್ಕಪಕ್ಕದಲ್ಲೆ ನಡೆಸಿರುವುದಿಲ್ಲ. ಅಂಥ ಗಂಭೀರ ಸಂಗೀತದಲ್ಲೂ ಇಂಥ ಮಂದ್ರಸ್ವರ ಬರುತ್ತದೆ, ಅದರ ಆಳ ಹೆಚ್ಚಿಸಲೆಂದು.

ಈಗ ನಾವು ರಾಜಕೀಯಾವರಣದ ಕಲುಷಿತ ವಾಯುಮಂಡಲದಿಂದ ಉಸಿರು ಕಟ್ಟಿರುವುದರಿಂದಾಗಿ ಜಗತ್ತೆಲ್ಲ ವಿನಾಶದತ್ತಲೆ ಧಾವಿಸುತ್ತಿರುವಂತೆ ಬುದ್ಧಿ ಭ್ರಮಿತರಾಗಿರುವುದು ಸಹಜ. ಶ್ರೀ ಕುವೆಂಪು ರಾಮಾಯಣ ದರ್ಶನವನ್ನು ರಚಿಸುತ್ತಿದ್ದಾಗ ರಾಜಕೀಯದಲ್ಲಿ ಈ ವ್ಯಕ್ತ ಮೌಲ್ಯಪಾತ ಇದ್ದಿರಲಿಲ್ಲ. ಅಂದು



ಉತ್ಕಟ ಆದರ್ಶವಿತ್ತು. ತ್ಯಾಗ ಮನೋಭಾವವೂ ಆವೇಶ ರೂಪದಲ್ಲಿತ್ತು. ಈಗ ನಮಗೆಲ್ಲ ಯಾವುದೇ Risk ಇಲ್ಲದೆ ತ್ಯಾಗವಿಲ್ಲದೆ ಬರಿಯ ರಾಜಕೀಯ ಸಾಹಸ ಮಾಡಿಯೇ ಅಧಿಕಾರ ಗಳಿಸಿಕೊಳ್ಳಬಹುದೆಂಬ ಭಾವನೆ ಬೇರೂರಿದೆ. ಇತರ ವಲಯಗಳಲ್ಲೂ ಅಗತ್ಯ ತ್ಯಾವಿಲ್ಲದೆಯೆ ಸಂಪತ್ ಸಂಗ್ರಹ ಮಾಡಬಹುದೆಂಬ ಖಯಾಲ್ ಬಂದಿದೆ. ಇದೆಲ್ಲವನ್ನೂ ನೋಡಿ ವ್ಯಥಿತರಾಗಿ ಭರತವರ್ಷ ವಿನಾಶದಂಚಿಗೇ ಬಂದಿದೆಯೆಂಬ ಭ್ರಮಣೆ ಬಂದರೆ ತಪ್ಪೇನೂ ಇಲ್ಲ. ಕಾರಣ ನಮಗೆ ಕಾಣುತ್ತಿರುವ ಪತ್ರಿಕಾ ಸುದ್ದಿ ರೂಪದ ಸಂಗತಿಗಳಾದರೂ ಅಂಥವೇ ಆಗಿದೆ. ಆದರೆ, "ನಿಶ್ಶಬ್ದಿಯೈ ಈಶ್ವರಕೃಪಾಬ್ಧಿ ! ಬರ್ಪುದನರಿಯಲಾರೆವಂತೆಯೆ ಮಹತ್ಕೃತಿ ಮಹನ್ಮೌನಿ !" ಎಂದು ಶ್ರೀ ರಾಮಾಯಣ ದರ್ಶನದ ಸಾಮಾನ್ಯ ಕಪಿ ಪಾತ್ರಕ್ಕೂ ಅರಿವಿದೆ. ತಮ್ಮ ದೀಕ್ಷಾಗುರುಗಳಾದ ಮಹಾಪುರುಷ ಮಹಾರಾಜರ ಈ ಭವಿಷ್ಯ ವಾಣಿಯಲ್ಲಿ ಶ್ರೀ ಕುವೆಂಪು ಆಗ ಶ್ರದ್ಧೆ ತಾಳಿದ್ದರೆ ತಪ್ಪಲ್ಲ : "ಈ ಯುಗದಲ್ಲಿ ಶ್ರೀ ರಾಮಕೃಷ್ಣರಲ್ಲಿ ಪ್ರಕಟವಾಗಿರುವ ಭಗವತ್ ವಿಭೂತಿ ಅಸಾಧಾರಣವಾದದ್ದು. ಶತಶತಮಾನಗಳಿಂದಲೂ ಅಂತಹ ಭಗವದ್ ವಿಭೂತಿ ಮರ್ತ್ಯಕ್ಕೆ ಅವತರಿಸಿರಲಿಲ್ಲ. ಅವತರಣಗೊಂಡ ಆ ಆಧ್ಯಾತ್ಮಿಕ ಶಕ್ತಿಯ ಪ್ರಭಾವ ದುರ್ದಮ್ಯವಾದ ಪ್ರವಾಹೋಪಾದಿಯಲ್ಲಿ ಇನ್ನು ಅನೇಕ ಕಾಲದವರೆಗೆ ಜಗತ್ತನ್ನೆಲ್ಲ ವ್ಯಾಪಿಸುವುದು. ಈಗ ನಿನಗೆ ತೋರುತ್ತಿರುವುದು ಆ ದಿವ್ಯ ನಾಟಕದ ನಾಂದಿಮಾತ್ರ. ಭಾರತೀಯ ದಿಗಂತದಿಂದ ಉದ್ಭವಿಸಿರುವ ಈ ಆತ್ಮ ಸೂರ್ಯನ ನಿರಂತರ ಪ್ರಕಾಶಮಾನವಾದ ದಿವ್ಯ ಜ್ಯೋತಿಯ ಕಿರಣಕೋಟಿ ಅಖಂಡ ಜಗತ್ತನ್ನೆ ದೀಪ್ಯಮಾನವನ್ನಾಗಿ ಮಾಡುವದು. ಅದನ್ನು ಕಂಡೇ ಸ್ವಾಮೀಜಿ ಹೇಳಿದ್ದು : 'ಈ ಸಾರಿಯ ಕೇಂದ್ರ ಭರತಖಂಡ' ಎಂದು. ಭರತಖಂಡವೆ ಕೇಂದ್ರವಾಗಿ ಧರ್ಮಚಕ್ರದ ಆಧ್ಯಾತ್ಮಿಕ ಶಕ್ತಿ ಹಬ್ಬುವುದು. ಆ ದಿವ್ಯ ಶಕ್ತಿಯ ಪ್ರಚಂಡ ಪ್ರವಾಹವನ್ನು ತಡೆಗಟ್ಟುವವರಾರು? ಭರತಖಂಡದ ಪುನರುಜ್ಜೀವನ ಸುನಿಶ್ಚಿತ, ಶತಸ್ಸಿದ್ಧ, ಕಲೆಗಳಲ್ಲಿ, ವಿಜ್ಞಾನ ಶಾಸ್ತ್ರಗಳಲ್ಲಿ, ತತ್ವಶಾಸ್ತ್ರದಲ್ಲಿ, ವಿದ್ಯಾಭ್ಯಾಸದಲ್ಲಿ – ಲೌಕಿಕ ಮತ್ತು ಧಾರ್ಮಿಕವಾದ ಸಕಲ ಕ್ಷೇತ್ರಗಳಲ್ಲಿಯೂ ಭರತಖಂಡ ಸಾಧಿಸುವ ಅದ್ಭುತ ಉತ್ಕರ್ಷವನ್ನು ಕಂಡು ಜಗತ್ತು ಆಶ್ಚರ್ಯಚಕಿತವಾಗದಿರುವುದಿಲ್ಲ. ಆಕೆ ಭವಿಷ್ಯದಲ್ಲಿ ಸಾಧಿಸುವ ಸಿದ್ಧಿಯ ಮುಂದೆ ಆಕೆಯ ಪ್ರಾಚೀನ ವೈಭವವೂ ಮಬ್ಬಾಗಿ ತೋರುವುದು. ಯಃಕಶ್ಚಿತವೆಂದು ಪರಿಗಣಿತವಾಗುವುದು. ಆಗ ನಿನಗೆ ಗೊತ್ತಾಗುತ್ತದೆ, ಗುರುಮಹಾರಾಜರೂ ಸ್ವಾಮೀಜಿಯೂ ಏಕೆ ಬಂದರೆಂದು, ಭರತಖಂಡದ ಶ್ರೇಯಸ್ಸಿಗಾಗಿ ಏನು ಕೆಲಸ ಮಾಡಿದ್ದಾರೆ ಎಂದು.

ಆ ದಿವ್ಯಪುರುಷರ ಕೆಲಸ ಕಾರ್ಯಗಳ ರೀತಿ ನೀತಿ ಮಾನವ ಅಲ್ಪಮತಿಗೆ ಗೋಚರವಾಗುವುದಾದರೂ ಹೇಗೆ? ಇಡೀ ಭರತಖಂಡದ ರಾಷ್ಟ್ರೀಯ ಕುಂಡಲಿನಿಯೆ ಅವರ ಶಕ್ತಿ ಸ್ಪರ್ಶದಿಂದ ಹೇಗೆ ಸುರುಳಿ ಬಿಚ್ಚಿ ಎಚ್ಚರಗೊಂಡಿದೆ? ಅದೂ ನಿನಗೆ ಕಾಣಿಸುವುದಿಲ್ಲವೆ ? ಹೇಗೆ ದಲದಲದಲ ವಿಕಸಿತವಾಗುತ್ತಿದೆ? ಅದನ್ನಾದರೂ ಅರಿಯಲಾರೆಯ”

(“ಗುರುವಿನೊಡನೆ ದೇವರಡಿಗೆ” ; ಅನು : ಕುವೆಂಪು – ಪುಟ ೨೦–೨೧)

೧೯೨೨ನೆಯ ನವೆಂಬರ್ ತಿಂಗಳಷ್ಟು ಹಿಂದೆ ನುಡಿದ ಮಹಾಪುರುಷ ಮಹಾರಾಜರ ಶ್ರೀವಾಣಿಗೆ ಇಂದು ಅರ್ಥವಿಲ್ಲ ಎಂದರೆ ಅನ್ನಲಿ. ಕುವೆಂಪು ರಾಮಾಯಣ ದರ್ಶನಂ ರಚಿಸುತ್ತಿದ್ದಾಗಲಂತೂ ಇದು ವಿಶ್ವಸನೀಯ ಮಂತ್ರವೇ ಆಗಿದ್ದಿತು. ಈ ಹಿನ್ನಲೆಯಲ್ಲಿ ನೋಡಿದಾಗ ಈ ಕಾವ್ಯ ತನ್ನ ಸಮಕಾಲದ ಯಾವ ಚೈತನ್ಯವನ್ನು ರೂಢಿಸಿಕೊಂಡಿದೆ ಎಂಬುದು ವೇದ್ಯವಾದೀತು. ಕುವೆಂಪು ಅವರ ದರ್ಶನದ ಮೇಲೆ ಶ್ರೀ ಅರವಿಂದರ ಪೂರ್ಣಯೋಗ – ಪೂರ್ಣದೃಷ್ಟಿ ಪರಿಣಾಮತತ್ವದಂತೆಯೇ ಗಾಂಧೀಜಿಯವರ ಸರ್ವೋದಯ ಕಲ್ಪನೆಯೂ ಪ್ರಭಾವ ಬೀರಿದೆ, ಎಂದು ಈ ಹಿಂದೆ ತಿಳಿಸಿದೆ. ಅದಕ್ಕೂ ಮಿಗಿಲಾಗಿ ಶ್ರೀ ರಾಮಕೃಷ್ಣರ ಸರ್ವಧರ್ಮ ಸಮನ್ವಯ ದರ್ಶನದ ಅನುಭೂತಿ ಪ್ರಭಾವ ಬೀರಿದೆ. ಇದರ ಗುರುತನ್ನು ಶ್ರೀ ರಾಮಾಯಣ ದರ್ಶನದ ಪಾತ್ರಗಳಲ್ಲಿ ಕಾಣುತ್ತೇವೆ. ಸರ್ವಧರ್ಮ ಎಂದರೆ, ಇಲ್ಲಿ ಆ ಈ ಧರ್ಮಗಳ ಪ್ರಸ್ತಾಪವಿದೆಯೆಂದಲ್ಲ. ನಮ್ಮ ಧರ್ಮ ನಮ್ಮ ಸ್ವಧರ್ಮವನ್ನು ಅವಲಂಬಿಸುತ್ತದೆ. ಈ ಕಾವ್ಯದಲ್ಲಿ ಬರುವ ನಾನಾ ಸ್ವಧರ್ಮದ ವ್ಯಕ್ತಿಗಳೂ ಕಡೆಗೆ ವಿಮುಖವಾಗಿನಿಲ್ಲದೆ ಸಮನ್ವಯಗೊಳ್ಳುತ್ತ ಹೋಗುತ್ತಾರೆಂಬುದನ್ನು ಮರೆಯಬಾರದು. ತೀರಾ ವಿಸಂಬಂಧಿಯಾದ ಸ್ವಧರ್ಮದ ಪಾತ್ರಗಳಂತೆ ತೋರುವ ಜೀವಿಗಳೂ ಇಲ್ಲಿ ಅನ್ಯೋನ್ಯ ಆತ್ಮೋದ್ಧಾರಕ್ಕೆ ದುಡಿಯುತ್ತ ಸುಮುಖಗೊಳ್ಳುವುದನ್ನೂ ಸತ್ಸಂಬಂಧಿಯಾಗುವುದನ್ನೂ ಕಾಣುತ್ತೇವೆ. ಅಂತೆಯೆ ಶ್ರೀರಾಮಚಂದ್ರನೂ ರಾವಣನ ಶವಸಂಸ್ಕಾರದಲ್ಲಿ ಸುಪ್ರೀತನಾಗುತ್ತಾನೆ : “ಮುಂದೆ, ಮುಂಭವದಿ. ಮಗನಾಗಿ ಸಂಭವಿಪಂಗೆ ತಂದೆಯಾಗುವನಿಂದೆ ಸಂಸ್ಕಾರವೆಸಗುವೋಲ್, ನೀನಿಂದು ರಾವಣಂಗೆಸಪ ಸತ್‌ಕ್ರಿಯೆಯೊಳಾಂ ಸುಪ್ರೀತನೆಂ ! ವೈರಿಯಾದೊಡಮೆನಗೆ ಸಮಂ ಆ ದಿವಂಗತ ದೈತ್ಯನತುಳ ವೀರ್ಯದೊಳಾತ್ಮ ಸತ್ತ್ವದೊಳ್ ನಿರ್ಭೀತಿಯೊಳ್ ತೇಜದೊಳ್, ಮತ್ತೆ ಚಿತ್ತಶುದ್ಧಿಯೊಳಂತೆ ಚಿತ್ತಪಸ್ ಶಕ್ತಿಯಲಿ !" (ಶ್ರೀ ರಾ.ದ. : ದೈತ್ಯನೇರ್ದನ್



ಚೈತ್ಯಮಂಚಮಂ – ಪಂಕ್ತಿ ೧೬೩–೬೯)

ಹಾಗೆಯೆ ಸೀತಾದೇವಿ, ಈ ಹಿಂದೆಯೆ ಸೂಚಿಸಿದಂತೆ, ರಾವಣನನ್ನು ಪರಮ ವಿಷದಂತೆ ತಿರಸ್ಕರಿಸಿದರೂ ಪತಿವ್ರತಾಶಿರೋಮಣಿ ಮಂಡೋದರಿಯ ಕಾರಣದಿಂದಾಗಿ, ತನ್ನ ಸಂಕಟ ಮುಕ್ತಿಯ ಕಾರಣವಾಗಿ ಕರುಣೆಯಿಂದ ಕಾಣುವ, ಅವನ ಉದ್ಧಾರಕ್ಕಾಗಿ ಪ್ರಾರ್ಥಿಸುವ ತಪಸ್ಯೆಯನ್ನು ಕೈಗೊಳ್ಳುತ್ತಾಳೆ.

“ತನ್ನ ನೋಂಪಿಗೆ ಪೆರರ
ನೋಂಪಿಯೆ ನೆರಂ, ಗುರಿಯೊಳಿಲ್ಲದಿರಲಂತರಂ.
ಮಂಡೋದರಿಯ ದೃಢತೆಯಾದುದುಕ್ಕಿನ ಸಾಣೆ
ಮೈಥಿಲಿಯ ಚಿತ್ತಕೆಂತೆನೆ, ತನ್ನ ದೇವತೆಗೆ
ಪೂಜೆ ಸಲ್ಲಿಸಿ ಮಣಿಯುವನ್ನರಂ ಕಾಣಲ್ಕೆ
ಹೊಂಪುಳಿಯಿನುಕ್ಕಿದಪುದಲ್ತೆ ಭಕ್ತಗೆ ಭಕ್ತಿ
ಹುರಿಗೊಂಡು ? ಸೆರೆಮನೆಯೆ ಆತ್ಮಸಾಧನೆಗೊಂದು
ಎಲೆಯ ಮನೆಯಾಯಿತ್ತು ; ಪೌಲಸ್ತ್ಯಜನ ಲಂಕೆ
ಮಂಡೋದರಿಯ ಲಂಕೆಯಾಯಿತ್ತು ; ರಾವಣನ
ಮೇಲಿರ್ದ್ದ ವೈರಭಾವಂ ಸುಲಭದಿಂ ಕರಗಿ
ಮಂಡೋದರಿಯ ಪತಿಯ ಮೇಲಣ ಕರುಣೆಯಾಯ್ತು."
(ಶ್ರೀ ರಾ. ದ. : ನಾನಕ್ಕನೆನ್ ನಿನಗೆ ತಂಗೆ ! – ಪಂಕ್ತಿ ೧೭೪–೮೪)

ಹೀಗೆ ವಿರುದ್ಧ ಸ್ವಧರ್ಮದ ಪಾತ್ರ ಸಮುಖಗೊಳ್ಳುತ್ತ ಹೋಗುವುದನ್ನು ಕಾಣುತ್ತೇವೆ.

ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಜಾಗತಿಕ ಯುದ್ಧ ವಿನಾಶದ ಅರಿವು ಎಲ್ಲ ಪ್ರಬಲ ರಾಷ್ಟ್ರಗಳಿಗೂ ಇರುವುದರಿಂದ ಯಾರೊಬ್ಬರಿಗೂ ಹಿಟ್ಲರ್ ಪ್ರವೃತ್ತಿ ಬೆಳೆಸಿಕೊಳ್ಳುವುದು ಕಷ್ಟವಾಗಿದೆ. ಪರಸ್ಪರ ವಿರುದ್ಧ ಆರ್ಥಿಕತತ್ವಗಳೆಂದೆನಿಸಿದ ಕಮ್ಯುನಿಸಂ ಮತ್ತು ಕ್ಯಾಪಿಟಲಿಸಂಗಳು ಸಹಜೀವನ ನಡೆಸಲು ಬರುವುದೇ ಇಲ್ಲವೆಂದೂ, ಆತ್ಯಂತಿಕವಾಗಿ ಯಾವದಾದರೊಂದು ಮಾತ್ರವೆ ಉಳಿಯಬೇಕು ಎಂದೂ ನಂಬಿದ್ದ ಕಾಲ ಬದಲಾಗುತ್ತಿದೆ. ಯುದ್ಧವಿಲ್ಲದೆ ಯಾವೊಂದು ತತ್ತ್ವದ ವಿಜಯವಿಲ್ಲ ಎಂದು ನಂಬಿಕೊಂಡರೆ ಯಾವ ತತ್ತ್ವಗಳೂ ಉಳಿದಿರಲಾಗದೆ ಜಗನ್ನಾಶವಾದೀತು, ಎಂಬು ಅರಿವಿರುವುದರಿಂದಲೂ ; ಎರಡೂ ತತ್ತ್ವಗಳೂ

ಬೆಳವಣಿಗೆಯ ಯಾವುದೊ ಒಂದು ಘಟ್ಟದಲ್ಲಿ ವಿಮುಖವಾಗಿದ್ದಿರಬೇಕಾದಂತೆ, ಮುಂದೆ ಸಾಗಿದಂತೆ ಹಾಗೇ ಇರಲು ಸಾಧ್ಯವೇ ಆಗದು ಎಂಬ ಅರಿವು ಮೂಡುತ್ತಿರುವುದರಿಂದಲೂ, ಅಮೆರಿಕ – ಚೈನಗಳಂತಹ ಎಂದೂ ಕೂಡದ ತತ್ತ್ವನಿಷ್ಠೆಯ ವಿರುದ್ಧ ರಾಷ್ಟ್ರಗಳೀಗ ಕೂಡುತ್ತಿವೆ. ಯಾವುದೇ ಒಂದು ತತ್ತ್ವ ಮತ್ತೊಂದನ್ನು ಕಬಳಿಸುವುದಸಾಧ್ಯವಾಗತೊಡಗಿದೆ. ಪ್ರಾಯಃ ಜಗತ್ತು ತನ್ನ ಉಳಿವಿಗೆ ಆ ಹಾದಿಯಲ್ಲೆ ಮುನ್ನಡೆದೀತು, ಇಲ್ಲವೆ ಅದೂ ಬೇಸರವಾದರೆ, ಸಾಮೂಹಿಕ ಲಯವನ್ನೆ ಕಂಡೀತು ! ಶ್ರೀ ರಾಮಾಯಣದರ್ಶನ ಕಾವ್ಯ ಅದರಿಂದಾಗ ಆಗಾಮೀ ಆದರ್ಶ ಲೋಕವನ್ನು, ಅಪೇಕ್ಷಣೀಯ ಜಗತ್ತನ್ನು ಪ್ರತಿಮನ ಮಾಡುತ್ತಿದೆ. ಬಾಗದ ಸರಳ ರೇಖೆಯನ್ನು ಸುದೀರ್ಘಗೊಳಿಸಿದರೆ ಬಾಗುತ್ತ ಬಾಗುತ್ತ ಎಂದು ಕೂಡದ ಅದರ ತುತ್ತ ತುದಿಗಳೆರಡೂ ಕೂಡಿ ವೃತ್ತವಾಗುತ್ತದೆ ! ಎಂಬ ಗಣಿತ ಸತ್ಯವೀಗ ಅರ್ಥವಾಗುತ್ತಿದೆ !

ಸ್ಥೂಲ ಮಟ್ಟದಲ್ಲಿ, ರಾವಣನ ಪಾತ್ರ ಚಿತ್ರಣದಲ್ಲಿ ಆ ಯುದ್ಧಕಾಲದ ದೈತ್ಯಸದೃಶ ನಾಯಕರ ಚಿತ್ರವನ್ನೂ ಸೇರಿಸಿದ್ದಾರೆಂಬುದನ್ನು ಕಾಣಬಹುದು. ಅವನ ಭಾಷಣಶೈಲಿ, ತನ್ನ ವೀರ ಸೇನಾನಿಗಳನ್ನು ಉದ್ದೇಶಿಸಿ ಅವನು ಮಾಡುವ ಭಾಷಣದ ಸನ್ಮೋಹಕ ವಿಧಾನ ಎಲ್ಲವೂ ಆ ಕಾಲದಲ್ಲಿ ಹಿಟ್ಲರ್ ಮಾಡುತ್ತಿದ್ದ ಅದೇ ತರಹದ ಭಾಷಣಗಳನ್ನು ನೆನಪಿಗೆ ತಂದು ಕೊಡುತ್ತವೆ. ಪ್ರಚಾರ ತಂತ್ರದಲ್ಲೂ ಕೆಲವೊಂದು ನೆನಪುಂಟುಮಾಡುತ್ತದೆ. ಅಸಂಖ್ಯಾತ ಜರ್ಮನರನ್ನುದ್ದೇಶಿಸಿ ಮಾಡುತ್ತಿದ್ದ ಭಾಷಣಗಳು ಸನ್ಮೋಹಕತೆಯಿಂದ ಕೂಡಿದ್ದು ಆ ಯಾರ ವಿರೋಧವನ್ನೂ ಶಮನಮಾಡಿ ಅವರನ್ನು ತನ್ನ ಅಖಂಡ ಬೆಂಬಲಿಗರನ್ನಾಗಿ ಮಾಡುವ ಮಾಯಾಜಾಲ ಬೀಸುವಂತಿದ್ದುವೆಂದು ಹೇಳುತ್ತಾರೆ. ರಾವಣನ ವಿಧಾನದಲ್ಲಿ ಅದನ್ನು ಸಾಂದ್ರರೂಪದಲ್ಲಿ ಕಾಣಬಹುದು. ಕಟ್ಟಕಡೆಯದಾಗಿ ರಾವಣ ತನ್ನ ಮೂಲ ಬಲಸೈನ್ಯವನ್ನುದ್ದೇಶಿಸಿ ವಿದ್ಯುನ್ಮೋಹಕವಾಗಿ ಭಾಷಣ ಮಾಡುತ್ತಾನೆ. ಬ್ರಹ್ಮವರಬಲದಿಂದ ತನಗೆ ಬಂದಿರುವ ಬಹುರೂಪೀ ವಿದ್ಯೆಯನ್ನು ತನ್ನ ಸೈನ್ಯಕ್ಕೆ ತಿಳಿಸಲೆಂದು ಬಂದಾಗ ಆ ಸಾಗರೋಪಮ ವಾಹಿನಿಯನ್ನು ಕಂಡು ರಾವಣನಿಗಾದ ಹಾಗೂ ಅವನನ್ನು ಕಂಡು ಸೈನ್ಯಕ್ಕಾದ ಆವೇಶದ ವರ್ಣನೆಯಲ್ಲೂ ಅದೇ ಹಿಟ್ಲರ್ ಪ್ರಸಂಗ ನೆನಪಾಗುತ್ತದೆ.

"...... ಪೊರಮಟ್ಟು
ಬಂದು ಕಂಡನು ತನ್ನ ಮೂಲ ಬಲ ಸಾಗರದ
ಪಾರರಾಹಿತ್ಯಮಂ. ಭ್ರಾಂತಿಯೋ ? ಮಾಯೆಯೋ ?



ಏನೆರ್ದೆಯ ಕಿರ್ಚಂ ಕೆರಳ್ಚುವಾ ಬಲಮೊ ಪೇಳ್
ಬಹುಸಂಖ್ಯೆಯೊಳ್ ! ........................
ಬಗೆಯಿಂ ಜಗುಳ್ದುದು ಮನೋವ್ಯಥೆ ; ಅಪೂರ್ವಮೆನೆ
ವೀರಸಹಜಾವೇಶಮೊಳ್ಕಿದುದು ; ದಳ್ಳುರಿದುದು
ರಜೋಕ್ಷಾತ್ರತೇಜಂ ನಿಶಾಚರೇಶ್ವರಗೆ. ಮೇಣ್
ಮಸಗಿದುದು ಪಡೆಗಡಲುಮಂತೆ ನೃಪಚಂದ್ರನಂ
ಕಂಡು ತನ್ನೊಡೆಯನಂ. ಚೀರಿದುವು ನಿಸ್ಸಾಳ ;
ಮೊಳಗಿದುವು ಭೇರಿ ; ಬಹುಕೋಟಿಕಂಠ ನಿನಾದ
ಘೋರ ಘೋಷಣ ಭೀಷ್ಮವಾಯ್ತು ಲಂಕಾಧರಣಿ ;
ಮೇರುಸಮ ಹೇಮವೇದಿಯ ತುಂಗ ಶಿಖರಕ್ಕೆ
ಕೋಡು ಮೂಡುವ ತೆರದೊಳದನೇರಿ ನಿಂದನೈ
ದಾನವೇಂದ್ರಂ. ನೋಡಿದನು ಕಣ್ಗೆ ಡೊಳ್ಳುರ್ಬ್ಬೆ ;
ನೋಡಿದನು ಬಗೆ ಮೇರೆಮೀರೆ ; ನೋಡಿದನುಸಿರ್
ದಿಗ್ ದಿಗಂತಸ್ಥಾಯಿಯಾಗೆ :"

(ಶ್ರೀ ರಾ. ದ : ಶ್ರೀರಾಮ ರಾವಣ ಚಿತ್‌ತಪಸ್ ಶ್ರೀ – ಪಂಕ್ತಿ ೨೨–೪೦)

ಮಾರನೆಯದಿನ, ಯುದ್ಧಕ್ಕೆ ತಾನೊಬ್ಬನೆ ತೆರಳಲಿರುವುದಾಗಿ ಆವೇಶಪೂರಿತನಾಗಿ ಸಚಿವಸಭೆಯನ್ನುದ್ದೇಶಿಸಿ ಮಾತನಾಡುವ ರಾವಣನ ಮಾತಿನ ರೀತಿಯಂತೂ ಮತ್ತೂ ಪರಿಣಾಮಕಾರಿಯಾಗಿದೆ. ಅವನೊಬ್ಬನನ್ನೆ ಯುದ್ಧಕ್ಕೆ ಕಳಿಸುವುದೆಂತು ಎಂದು ಸಂಕಟಗೊಂಡಿರುವ ಸೈನ್ಯವನ್ನು ಪ್ರತಿಮಾತಿಗೆಡೆಯಿಲ್ಲದಂತೆ ಒಪ್ಪಿಸುವ ವಾಕ್‌ಪರಿಣತಿಯಾದರೂ ತಲೆತೂಗುವಂತಹುದು. ಅವನ ವಾದ ಶೈಲಿಗೆ ಹಾಗೂ ಅವನ ಭಯಕ್ಕೆ ಸೈನ್ಯದ ಪ್ರತಿಕ್ರಿಯೆ ಹೇಗಿತ್ತು, ಅದನ್ನು ರಾವಣನೆ ಹೇಗೆ ಊಹಿಸಿಕೊಂಡು ಉತ್ತರ ನೀಡುತ್ತಾ ತನ್ನ ವಾದವನ್ನು ಮಂಡಿಸಿ ಆಜ್ಞೆಯನ್ನೆ ವಿಧಿಸುತ್ತಾನೆಂಬುದರ ವರ್ಣನೆಯೂ ಬರುತ್ತದೆ :

"ಕೇಳ್ದು ರಾಕ್ಷಸ ರಾಜ ರಾಜೇಂದ್ರನಾ
ವೀರವಾಗ್ ವಿನ್ಯಾಸಮಂ ಮೂಕ ವಿಸ್ಮಯ
ಮೌನವಾರಿಧಿಗರ್ದ್ದವೋಲಿರ್ದ್ದುದಾ ಸಭಾ
ಸಂಜ್ಞೆ, ಮಾರ್ನುಡಿಯಲೆರ್ದೆಯುಂಟೆ ಮನಮಿರ್ದೊಡಂ ?
ಸಮಿತಿ ಹೃದಯವನರಿತನಸುರೇಂದ್ರನುತ್ತರಂ

ಗುಡುವ ಮುನ್ನೆತ್ತಿದನು ತಾನೆ ಆ ಪ್ರಶ್ನೆಯಂ :
'ನಿಮ್ಮೆರ್ದೆಯೊಳೇಳ್ವ ಚಿಂತಾವೀಚಿಗಳಿಗೆನ್ನ
ಚಿತ್ತಮನುಕಂಪಿಸಿಹುದಾದೊಡಂ, ಇಂದೆನಗೆ
ನಿಮಗೆ, ನಾನೊರೆದುದಲ್ಲದೆ ಬೇರೆ ಬಟ್ಟೆಯಂ
ಕಾಣೆನಾಂ ........................"

(ಶ್ರೀ ರಾ. ದ : ಅರಾವಣಂ ವಾ ಅರಾಮಂ ದಿಟಂ – ಪಕ್ತಿ ೩೭–೪೬)

ಇದು ಆ ಕಾಲದ ಹಿಟ್ಲರ್ ಶೈಲಿಯಾಗಿತ್ತು. ಇದೇ ರಾವಣ ಸೀತಾದೇವಿಯನ್ನು ಕದ್ದು ತರಲು ಹೊರಡುವ ಮುನ್ನ ತನ್ನ ಸತಿ ಮಂಡೋದರಿಗೆ ಹೇಳುವ ಮಾತಿನಲ್ಲಿ, ಮಾರೀಚನ ಮುಂದೆ ಒಡ್ಡುವವಾದದಲ್ಲಿ, ತನ್ನ ರಾಕ್ಷಸ ಮಹಾ ಸಭೆಯನ್ನು ಉದ್ದೇಶಿಸಿ ಮಾತನಾಡುವಂದು ಹೂಡುವ ವಾದಸರಣಿಯಲ್ಲಿ ನಮ್ಮ ಕಾಲದ ಹಿಟ್ಲರ್ ಮುಸೋಲಿನಿಯರ ಧ್ವನಿಯೆ ಕೇಳುತ್ತದೆ.

ಇಂದ್ರಜಿತುವನ್ನು ಕೊಲ್ಲುವ ಪ್ರಸಂಗದ ಚಿತ್ರಣವಂತೂ ಸ್ವೋಪಜ್ಞವಾದ ವಿನೂತನ ಅದ್ಭುತ ಪ್ರಸಂಗಗಳಲ್ಲೊಂದು. ಅಲ್ಲಿ ಇಂದ್ರಜಿತುವಿನ ನಿಕುಂಭಿಲಾಯಾಗದ ವರ್ಣನೆಯಲ್ಲಿ ಆ ದಿನದ ಮಹಾಯುದ್ಧದ ಸ್ಮರಣೆಯಿದೆ:

"ರಾವಣಿ ಅರ್ಥವ ವೇದೋಕ್ತ
ತಾಂತ್ರಿಕ ವಿಧಾನದಿಂದಾಮಂತ್ರಿಸಲ್ ಮಹಾ
ಶಕ್ತಿಮಾತೃಕೆಯರಂ, ಕುದಿಯ ತೊಡಗಿದುದೊಡನೆ
ಪರಿಧಿಯಾಗಿರ್ದಗ್ನಿಶರಧಿ ! ಗಂಧಕ ಗಂಧಮಯ
ಧೂಮ ಮೇಘಂಗಳೆದ್ದುವು ವಿಕಾರಾಕೃತಿಯ
ವಿನ್ಯಾಸದಿಂ ಚಿದಾಕಾಶಮಂ ತೀವಿ ! ಮೇಣ್,
ಕಲಿಯುಗಾಭೀಳ ಯುದ್ಧೋದ್ಯಮಕೆ ಪಾಶ್ಚಾತ್ಯ
ಭೌತವೈಜ್ಞಾನಿಕ ಯಮಾಸಕ್ತಿ ನಿರ್ಮಿಸುವ
ಯಂತ್ರಕರ್ಮಾಗಾರ ಭೂತಚೀತ್ಕಾರಮಂ
ಕೀಳ್ಗೈವ ನಾರಕ ಬೃಹಚ್ಚಬ್ಧ ಕೋಟಿಗಳ್
ಪೊಣ್ಮಿದುವು, ತಲ್ಲಣಂಗೊಳ್ಳಲಸು ಆ ಅಸುರ
ವೈಜ್ಞಾನಿಗುಂ !"

– ಶ್ರೀ ರಾ. ದ : ಮಡಿದನಿಂದ್ರಜಿತು ಐಂದ್ರಾಸ್ತ್ರದಿಂ, ಪಂಕ್ತಿ ೨೧೪–೨೫

ಐಂದ್ರಾಸ್ತ್ರದಿಂದ ಇಂದ್ರಜಿತು ಮಡಿದ ಅದ್ವಿತೀಯ ಚಿತ್ರ ನೀಡಿದ ಕವಿ ಆ ಅವನ ಮರಣಸ್ಪಂದನ ಸತೀಮಾತೆಯರನ್ನು ಮುಟ್ಟಿದ ಸೊಗಸಾದ ಚಿತ್ರ ನೀಡುತ್ತಾರೆ.



ಸ್ವಪ್ನವಿದ್ಯುತ್ ಕಷಾಘಾತಕ್ಕೆನ್ನುವಂತೆ ಮಂಡೋದರಿ ಮಂಚದಿಂದ ಬೀಳುವಷ್ಟರಲ್ಲಿ ಎಚ್ಚೆತ್ತು ಕುಳಿತುಕೊಳ್ಳುತ್ತಾಳೆ.

"ಕುಳ್ತ ಮಂಡೋದರಿಗೆ ಮನೆ ನಡುಗಿದಂತಾಯ್ತು, ಕೇಳ್,
ಅಣುಘೋರಮಸ್ತ್ರಂ ಸಿಡಿಯಲಾ ಮಹಾಸ್ಫೋಟಕೆ
ಸುದೂರ ಪುಟಭೇದನಂ ಭಿತ್ತಿಭೂಕಂಪಿಪೋಲ್ !"

– ಶ್ರೀ ರಾ. ದ : ಅದೇ ಪುಟ, – ಪಂಕ್ತಿ ೬೪೭–೪೯

ಶ್ರೀ ರಾಮಾಯಣ ದರ್ಶನದ ಈ ಭಾಗವನ್ನು ಬರೆಯುವ ಹೊತ್ತಿಗೆ ಅಣುಸ್ಫೋಟನ ಆಗತಾನೆ ಆಗಿತ್ತಷ್ಟೆ. ಅದು ಹೀಗೆ ಇಲ್ಲಿ ಪ್ರತಿಧ್ವನಿತವಾಗಿದೆ.

ಹೀಗೆ ಶ್ರೀರಾಮಾಯಣ ದರ್ಶನದಲ್ಲಿ ಸಮಕಾಲೀನ ಬಹಿರ್ ಘಟನೆಗಳು ದೂರದ ಮೊಳಗಾಗಿ ಅಷ್ಟೆ ಕೇಳಿಬರುತ್ತವೆ. ಆದರೆ ಈ ಯುಗದ ಸತ್ವಗಳು ತತ್ವ ಚೈತನ್ಯಗಳಾಗಿ ಪ್ರವೃತ್ತಿಗಳಾಗಿ ನಾನಾ ವಿಧಾನದಿಂದ ಕಾವ್ಯ ಸೃಷ್ಟಿಯಲ್ಲಿ ಪರಿಣಾಮ ಬೀರಿವೆ, ಪರಿಣಾಮಗೊಂಡಿವೆ. ಭೂಗರ್ಭ ನಿಕ್ಷೇಪ ಖನಿಜಸಂಪತ್ತನ್ನು ಪತ್ತೆಹಚ್ಚುವ ಸೂಕ್ಷ್ಮ ಯಂತ್ರವನ್ನು ಹೊತ್ತ ಪರಿವೀಕ್ಷಣ ವಿಮಾನ ಭೂಪ್ರದೇಶ ಪರ್ಯಟನ ಮಾಡಿದರೂ ಅದು ಅಲೋಕಿಸಿ ಉಲ್ಲೇಖಿಸಿಕೊಳ್ಳುವುದು ಪರ್ವತಾದಿ ಗಂಭೀರ ತಳಲ್ಲಿರುವ ಭೂನಿಕ್ಷೇಪವನ್ನಲ್ಲದೆ, ಭೂ ಮೇಲ್ಮೈಯ ಸೊಬಗನ್ನೂ ಅಲ್ಲ, ವಸ್ತು ವೈವಿಧ್ಯವನ್ನೂ ಅಲ್ಲ, – ಅವು ಎಷ್ಟೇ ಅಗತ್ಯವಾದರೂ, ಹಾಗೂ ಹಾರುವ ವಿಮಾನದ ಹಾರಾಟದ ದೃಷ್ಟಿಯಿಂದ ಅವುಗಳೆಲ್ಲ ಮುಖ್ಯವಾದರೂ ಕೂಡ. ಸಮಕಾಲೀನ ಚೈತನ್ಯ ಶ್ರೀ ರಾಮಾಯಣಕಾಯದಲ್ಲಿ ಐಕ್ಯವಾಗಿ ಈ ಕಥೆ ನೂತನವೂ ನಿತ್ಯವರ್ತಮಾನಕ್ಕೆ ಸೇರಿದುದೂ ಆಗುವಂತೆ ಪರಿಣಮಿಸಿದೆ !

* * * *

---

ಬೆಂಗಳೂರಿನ ಒಕ್ಕಲಿಗ ಸಂಘದ ಆಶ್ರಯದಲ್ಲಿ ೧೪.೧.೯೭೭ರಂದು ಏರ್ಪಡಿಸಿದ್ದ ಕುವೆಂಪು ಸಾಹಿತ್ಯ ಉಪನ್ಯಾಸ ಮಾಲೆಯ ಅಂಗವಾಗಿ ಮಾಡಿದ ಭಾಷಣದ ಆಧಾರದ ಮೇಲೆ ಬರೆದ ಲೇಖನ, "ಕುವೆಂಪು ಸಾಹಿತ್ಯಲೋಕ" ಗ್ರಂಥದಲ್ಲಿ ಪ್ರಕಟವಾಗಿದೆ.

# ಆಧುನಿಕ ಮಹಾಕಾವ್ಯ

ಈ ದೊಡ್ಡ ಕೃತಿ ಮೂಡಿ ಬಂದು ಇಪ್ಪತ್ತು ವರ್ಷವಾಯಿತು. ಆದರೂ ಇದರ ಬಗ್ಗೆ ಅಖಂಡವಾದ ವಿವೇಚನೆ ನಡದಿಲ್ಲವೆಂದರೆ ಆಶ್ಚರ್ಯವಾಗಬೇಕಿಲ್ಲ. ಶೀಘ್ರ ಪರಿಣಾಮಗಳನ್ನೇ ಮಹತ್ತಿನ ಲಕ್ಷಣವೆಂದು ಬಗೆದರೆ ತಪ್ಪಾಗುತ್ತದೆ. ಒಂದು ನಾಡಿನ ಒಟ್ಟಾರೆ ಸಂವೇದನೆಯನ್ನು ಮೈದಾಳಿಕೊಂಡು ಹುಟ್ಟುವ ವಿರಲಕಾವ್ಯವನ್ನು ತತ್ಕಾಲದಲ್ಲೆ ಮನಗಂಡು ಮೈಗೂಡಿಸಿಕೊಳ್ಳುವುದು ದುಸ್ತರವೂ ಹೌದು. ಅದರಿಂದಲೆ ಈ ಕ್ಷೀಣ ಪ್ರತಿಕ್ರಿಯೆಗೆ ವಿಷಾದಿಸಲೂ ಬೇಕಿಲ್ಲ. ಆದರೆ ಪ್ರಾಮಾಣಿಕವಾಗಿ ಆ ಕೃತಿಯನ್ನು ಅರಿವಿಗೆ ಒಳಪಡಿಸಿಕೊಳ್ಳಬೇಕು ಎಂಬ ಯತ್ನ ನಡೆದಿದ್ದರೆ ಒಳಿತು.

ಕಾವ್ಯವಿಮರ್ಶೆಯ ಮೌಲ್ಯಗಳು ಕಾಲ ಕಾಲಕ್ಕೂ ವ್ಯಕ್ತಿ ವ್ಯಕ್ತಿಗೂ ವ್ಯತ್ಯಾಸವಾಗುತ್ತಲೆ ಇವೆ. ಈ ಜಂಗಮಸ್ಥಿತಿಯಲ್ಲೂ ಸ್ಥಾಣುವಾಗಿರುವ ಮೌಲ್ಯವೂ ಉಂಟು. ಆದರೆ ಒಬ್ಬನೆ ಕವಿ ನಾನಾ ಮಾನದಂಡಕ್ಕೂ ಪ್ರಮಾಣವಾಗುವಂಥ ವಿಪುಲ ಸಾಮರ್ಥ್ಯವುಳ್ಳವನಾಗಿರುವುದೂ ಸಾಧ್ಯ. ಅಂದರೆ, ಯಾವ ಒಂದು ಸರಳ ಸೂತ್ರಕ್ಕೂ ಸುಲಭವಾಗಿ ಅಂಥವನನ್ನು ಸಿಲುಕಿಸುವುದಾಗದು. ಶ್ರೀ ಕುವೆಂಪು ಅವರಲ್ಲಿ ಈ ಬಗೆಯ ಅಸಮಶಕ್ತಿಯನ್ನು ಕಾಣಬಹುದು. ಕಾನೂರು ಸುಬ್ಬಮ್ಮ ಹೆಗ್ಗಡತಿ ಬರೆಯುತ್ತಿದ್ದ ವೇಳೆಯಲ್ಲೆ, ವಿಭಿನ್ನ ರೀತಿಯ ಖಂಡಕಾವ್ಯವಾದ ಚಿತ್ರಾಂಗದಾ, ಶ್ರೀರಾಮಕೃಷ್ಣ ಪರಮಹಂಸಾದಿಗಳನ್ನೂ ಕುರಿತು ಬರೆದರು ಈ ಕವಿ. ಶ್ರೀ ರಾಮಾಯಣದರ್ಶನಂ ಕಾವ್ಯ ಬರೆದ ಲೆಕ್ಕಣಿಯ ಮಸಿಯೆ ಮಲೆಗಳಲ್ಲಿ ಮದುಮಗಳ ತೀರಾ ಬೇರೆಯಾದ ಚಿತ್ರವನ್ನು ಬಣ್ಣಿಸಿದೆ. ಮಹಾಕಾವ್ಯದ ಮಹಾಛಂದಸ್ಸಿನ ದಾರಿಯಲ್ಲಿ ನಡೆಸಿದ ಕವಿ ಪ್ರತಿಭೆ ಕಾದಂಬರಿಯ ಮಲೆನಾಡಿನ ಬೆಟ್ಟ ಗುಡ್ಡ ಕಣಿವೆ ಕುಂಟೆಗಳಲ್ಲೂ ಕರೆದೊಯ್ಯುತ್ತದೆ ನಮ್ಮನ್ನು. ಈ ಸಾರಥ್ಯವಾದರೂ ಅಸಾಧಾರಣವಾದದ್ದೆ. ಸೀತಾರಾಮರನ್ನು ಕಡೆದ ಕೈಯೆ ಗುತ್ತಿ ತಿಮ್ಮಿಯರನ್ನು ಅಷ್ಟೆ ಮಮತೆಯಿಂದ ಕೆತ್ತಬಲ್ಲದೆ ಎನಿಸುತ್ತದೆ. ಆಗ ಬ್ಲೇಕ್ ಕವಿಯ 'ಟೈಗರ್' (ವ್ಯಾಘ್ರ) ಕವನದ ಕಡೆಯ ಪಂಕ್ತಿಗಳು ನೆನಪಾಗುತ್ತದೆ.

ಆದ್ದರಿಂದಲೆ ಶ್ರೀ ರಾಮಾಯಣದರ್ಶನಂ ಕಾವ್ಯವನ್ನು ಪೂರ್ವಸಿದ್ಧವಾದ



ಅಥವಾ ಪ್ರಚಲಿತವಾದ ಕಟಿಸೂತ್ರಗಳಿಂದಲೆ ಕಟ್ಟುವುದು ತಪ್ಪಾಗುತ್ತದೆ. ಮೊದಲು, ಆ ಕೃತಿ ಏನಾಗಿದೆ, ಏನಾಗಬೇಕೆಂದಿದೆ, ಏನನ್ನು ಸಾಧಿಸಿದೆ ಎಂಬುದನ್ನು ತಿಳಿಯುವ ಮುನ್ನ ಅದನ್ನು ಸಹಜವಾಗಿ ಅವಲೋಕಿಸುವುದು ಉಚಿತ. ಈ ವಿಚ್ಛಿನ್ನ ಯುಗದಲ್ಲಿ ಮಹಾಕಾವ್ಯಕ್ಕೆ ಎಡೆಯೆ ಇಲ್ಲ, ಅದು ಸಹಜವಲ್ಲ ಎಂಬ ವೀರಾವೇಶವೂ ಬೇಡ. ಮೊದಲಿದನ್ನು ರಾಮಾಯಣ ಕಥೆಯಾಗಿ ಅಷ್ಟೇ ಓದಿ; ಆ ಮೇಲೆ ಇದು ಮೂಲ ಕಾವ್ಯವನ್ನು ಊನಗೊಳಿಸದೆ ಮೂಡಿಸಿದೆಯೆ ಎಂದು ನೋಡೋಣ. ವಾಲ್ಮೀಕಿಯ ಪರಂಪರೆಯನ್ನು ಮುಂದುವರಿಸಿದೆಯೆ ಎಂಬುದನ್ನು ಇನ್ನೂ ಆ ಮೇಲೆ ಕಂಡು, ಈ ಯುಗದ ತುಡಿತಗಳನ್ನು ಇದು ತನ್ನ ಪರಂಪರೆಯಲ್ಲೆ ಎಷ್ಟರ ಮಟ್ಟಿಗೆ ಮಿಡಿದಿದೆ ಎಂದು ಆಗ ಕಾಣಬಹುದು. ಇದರ ಭಾಷಾಸಿದ್ಧಿಯೇನು, ಇದರ ಅನಿವಾರ್ಯತೆಯೇನು, ಎಂಬೆಲ್ಲವನ್ನೂ ಆ ಮೇಲೆ ವಿವೇಚಿಸಬಹುದು.

ಕವಿ ಕಾವ್ಯದ ಮೊದಮೊದಲಲ್ಲಿ ಈ ಕಾವ್ಯವನ್ನು 'ಬರೆಯುತ್ತಿರುವುದು' ಚೆನ್ನಾಗಿ ಕಾಣುತ್ತದೆ. ಹೀಗೆಯೆ ಬರೆಯಬೇಕೆಂದು ನಕ್ಷೆಯಿಟ್ಟುಕೊಂಡಿರಬೇಕೆಂದೂ ಭಾಸವಾದೀತು. ಆದರೆ ಮುಂದೆ ಸಾಗಿದಂತೆ ಕವಿ ತನ್ನ ಕೃತಿಯ ಕೈವಶವಾಗುತ್ತಾರೆ. ದಡದ ಕಟ್ಟಿನಲ್ಲಿದ್ದ ತೊರೆ ಇದ್ದಂಡೆಯನ್ನೂ ತನ್ನ ಮೆಟ್ಟನ್ನಾಗಿ ಮಾಡಿಕೊಳ್ಳುವ ಮಹಾನದಿಯಾಗುತ್ತದೆ. ಪ್ರಾರಂಭದ ಪಂಕ್ತಿಗಳ ತಕ್ಕಷ್ಟು ಎಡೆಯಲ್ಲಿ ಕವಿ ಪ್ರಜ್ಞಾಪೂರ್ವಕವಾಗಿ ದಾರಿ ತಿದ್ದುತ್ತಾರೆ. ಕಡೆಕಡೆಗೆ ಮಾತುಗಾರಿಕೆ ಮಂತ್ರಗಾರಿಕೆಯಾಗುತ್ತದೆ.

ಆದ್ದರಿಂದ, ಒಟ್ಟಾರೆ ವಿವೇಚನೆಗೆ ಈ ಕೃತಿ ವಾಲ್ಮೀಕಿಯ ದಾರಿಯಲ್ಲೆ ನಡೆದು ಬರುತ್ತ ಬರುತ್ತ ಆ ದಾರಿಯನ್ನು ಮತ್ತೂ ಮುಂದಕ್ಕೆ ಒಯ್ದಂತೆ ಅನುಭವಕ್ಕೆ ಬರುತ್ತದೆ. ಇಲ್ಲಿನ ರಾಮಸೀತಾದಿ ಎಲ್ಲ ಪಾತ್ರಗಳೂ ಮೂಲಕೃತಿಯ ಅಡಿಪಾಯದ ಮೇಲೆ ನಿರ್ಮಿತವಾದ ಸೌಧಗಳು. ಮಂಥರೆ, ಕೈಕೆ, ವಾಲಿ, ರಾವಣ, ಮಂಡೋದರಿ, ಕುಂಭಕರ್ಣಾದಿ ಪಾತ್ರಗಳೂ ಮೂಲಕಾವ್ಯದ ಕುಂಡಲಿಯಂತೆಯೆ ವಿಕಾಸಹೊಂದಿದ್ದಾರೆ. ರಾಮಾದಿ ಪಾತ್ರಗಳು ಮೂಲಕಾವ್ಯದಲ್ಲೆ ಪೂರ್ಣ ಸುಂದರವಾಗಿ ಆದರ್ಶವಾಗಿರುವುದರಿಂದ ಇಲ್ಲಿ ಹೆಚ್ಚು ಮಟ್ಟಿನ ವಿಕಾಸವೇನೂ ಅಗತ್ಯವಾಗಿಲ್ಲ. ವಾಮಪಾತ್ರಗಳೆಂದು ಪ್ರಸಿದ್ಧವಾಗಿದ್ದವರು ಮಾತ್ರ ವಿಕಾಸವನ್ನೆ ಏಕೆ ಪರಿಣಾಮವನ್ನೂ ಅನುಭವಿಸುತ್ತಾರೆ. ಇಲ್ಲಿ ಕವಿ ಬದಲಾವಣೆಗಾರನಾಗಿಲ್ಲ, ಬೆಳವಣಿಗೆಗಾರನಾಗಿದ್ದಾನೆ. ವಾಲ್ಮೀಕಿಗಳೆ ಈ ಯುಗದ ಪರಿಸರದಲ್ಲಿ ಬರೆದಿದ್ದರೆ ಈ ಪಾತ್ರಗಳನ್ನು ಹೀಗೆಯೆ ಚಿತ್ರಿಸುತ್ತಿದ್ದಂತೆ

ಅನುಭವವಾಗುತ್ತದೆ. ಭಾಸಾದಿ ಕವಿಗಳ ಉತ್ಸಾಹ ಮಾಡಿಕೊಂಡ ಬದಲಾವಣೆಯನ್ನು ಈ ಕಾವ್ಯದ ಬೆಳವಣಿಗೆಯೊಡನೆ ಹೋಲಿಸಿದಾಗ ಇದು ತಿಳಿಯಬಹುದು. ಇಡೀ ಯುಗ ಪ್ರಜ್ಞೆಯೆ ರಾಮಾಯಣ ಕಥೆಯನ್ನು ಮರುಮೂಡಿಸುತ್ತಿರುವುದನ್ನು ಇಲ್ಲಿ ಕಾಣಲು ಪ್ರಯಾಸಪಡಬೇಕಿಲ್ಲ. ಆದರೂ ಗೊಂದಲವಷ್ಟನ್ನೆ ಹತಾಶೆ – ವಿನಾಶ – ಭಗ್ನಮನೋಧರ್ಮ – ಅಷ್ಟನ್ನೆ ಈ ಯುಗದ ಮುಖ್ಯ ಲಕ್ಷಣವನ್ನಾಗಿ ಕಂಡುಕೊಂಡವರಿಗೆ ಈ ಮಾತು ಬರಿಮಾತಾಗಿಯೆ ಉಳಿದೀತು.

ಈ ಯುಗ ಹಿಂದಿನ ಯಾವ ಯುಗಕ್ಕಿಂತಲೂ ಸಂಕೀರ್ಣವಾದುದೆಂಬುದೇನೊ ಸತ್ಯ. ಆದರೆ ವಿನಾಶಮುಖಿ, ಪತನಾಭಿಮುಖಿ ಎಂಬುದು ಮಾತ್ರ ಅಂಶಸತ್ಯ. ಭೂಗೋಲದ ಒಂದು ಮಗ್ಗುಲಲ್ಲಿ ಹಿಟ್ಲರ್ ಮುಸೋಲಿನಿಯರಂಥ ಪುರಾತನ ಹಿರಣ್ಯರನ್ನೂ ಮೀರಿಸುವಂಥ ಲೋಕವಿನಾಶಕರಿದ್ದಂತೆ, ಮತ್ತೊಂದು ಮಗ್ಗುಲಲ್ಲಿ ಗಾಂಧೀಜಿ ಅರವಿಂದರಂಥ ಸರ್ವೋದಯ – ಪೂರ್ಣಮಾನವ ಸ್ವಪ್ನವನ್ನು ಕಾಣುತ್ತಿದ್ದ ಮಹಾಶಕ್ತಿಗಳಿದ್ದುದನ್ನೂ ಈ ಯುಗ ತೋರಿದೆ. ದಾಂಪತ್ಯದ ಮೌಲ್ಯಗಳಲ್ಲಿ ನಂಬುಗೆ ಶಿಥಿಲಗೊಳ್ಳುತ್ತಿದೆ ಎನ್ನುವ ಈ ಕಾಲದಲ್ಲೂ ಶ್ರೀ ರಾಮಕೃಷ್ಣ ಶ್ರೀ ಶಾರದಾದೇವಿಯಂಥವರು, ಅಷ್ಟೇಕೆ ಗಾಂಧೀಜಿ ಕಸ್ತೂರಿಬಾರಂಥವರು ಇರುವುದು ಸಾಧ್ಯ ಎಂಬುದನ್ನೂ ಈ ಯುಗ ಸಾರಿದೆ. ಭೌತವಾದದ ಪಾರಮ್ಯವನ್ನೆ ಪ್ರತಿಪಾದಿಸಬೇಕಾಗಿದ್ದ ವಿಜ್ಞಾನ ಅತಿ ಭೌತಪ್ರಪಂಚವನ್ನೂ ಅನುಭವವಲಯಕ್ಕೆ ತರುತ್ತಿದೆ. ಆದ್ದರಿಂದ ಈ ಯುಗವೇನೊ ಸಂಕೀರ್ಣವೆ ; ಅಷ್ಟೆ ಏಕೆ ದಿಗ್ಭ್ರಾಮಕವೂ ಹೌದು. ಇದನ್ನೆಲ್ಲ ಈ ಕವಿ ತಮ್ಮ ಪ್ರಜ್ಞೆಗೆ ತಂದುಕೊಂಡಿದ್ದಾರೆ. ಮೂಲಕವಿಯ ಪ್ರಜ್ಞೆಯನ್ನೂ ಈ ಯುಗದ ಪ್ರಜ್ಞೆಯನ್ನೂ ತಮ್ಮಲ್ಲಿ ಸಮೀಕರಿಸಿಕೊಂಡಿರುವುದರಿಂದಲೆ ಈ ಕವಿ ಪರಂಪರೆಯಲ್ಲಿದ್ದಾರೆ, ನಿರಂತರತೆಯಲ್ಲಿದ್ದಾರೆ.

ಈ ಕಾವ್ಯ ಯಾವ ಪಾತ್ರವನ್ನೂ ಬಲವಂತವಾಗಿ ಬೆಳೆಸದೆ ಸಹಜವಾಗಿ ಅರಳಿಸುತ್ತದೆ. ಪ್ರತಿಯೊಂದು ಪಾತ್ರವೂ ತನ್ನ ತನ್ನ ಸ್ವಭಾವವನ್ನು ಅತ್ಯಂತ ಉತ್ಕಟವಾಗಿ ಬಾಳುತ್ತದೆ. ಒಂದರ ಸ್ವಭಾವ ಮತ್ತೊಂದರ ಸ್ವಭಾವಕ್ಕೆ ಮೇಲ್ನೋಟಕ್ಕೆ ವಿರುದ್ಧವಾಗಿ ಕಂಡರೂ, ಅವುಗಳಲ್ಲಿ ಘರ್ಷಣೆಗಳಾಗುತ್ತಿದ್ದರೂ, ಅವು ಹೇಗೊ ಪರಸ್ಪರ ಪ್ರೇರಕವಾಗಿ – ಸಾಧಕವಾಗಿ – ಕಾರಕವಾಗಿ ಪರಿಣಮಿಸುತ್ತದೆ. ಈ ಸೂಕ್ಷ್ಮ ರಹಸ್ಯವನ್ನು ತಿಳಿದ ಕವಿ ಹಾಗೆಯೆ ಆ ಪಾತ್ರಗಳನ್ನ ತೇಲಿಬಿಡುತ್ತಾನೆ. ಮಂಥರೆ ರಾಮನನ್ನು ಕಾಡಿಗೆ ಕಳಿಸುವಂತೆ ಕೈಕೆಯನ್ನು ಪ್ರೇರಿಸುವುದು



ಮೂಲಕಾವ್ಯದಂತೆಯೆ ಇದ್ದರೂ ಇಲ್ಲಿ ಅದು ಸಕಾರಣವಾಗುತ್ತದೆ, ಸಶಕ್ತವಾಗುತ್ತದೆ, ಮೇಲಾಗಿ ಅನಿವಾರ್ಯವಾಗುತ್ತದೆ. ಆ ಎಲ್ಲ ಗುಣವೂ ಆ ಪಾತ್ರವನ್ನು ಅಲ್ಲಿಯೆ ನಿಲ್ಲಿಸದೆ ಅದನ್ನು ತುಟ್ಟತುದಿಯ ತನಕವೂ ದಬ್ಬುತ್ತ ಹೋಗುತ್ತದೆ. ಮಂಥರೆ ರಾಮನನ್ನು ಕಾಡಿಗೆ ಕಳಿಸಬೇಕೆಂಬ ಭಾವ ಬರವುದಾದರೂ ಇಲ್ಲಿ ಭರತಮೋಹದಿಂದ – ಆ ಮೋಹ ಅತ್ಯಂತ ಸಹಜ, ತರ್ಕಬದ್ಧ. ಲೋಕಪ್ರೀತಿಯಿಂದ ವಂಚಿತವಾದ ಜೀವ ಹೇಗೆ ತನ್ನ ಏಕೈಕ ಮೋಹವನ್ನೆ ಅಪ್ಪಿಕೊಂಡು ವಿಲಯಕಾರಿಯೂ ಆಗಬಲ್ಲುದು ಕಲ್ಯಾಣಕಾರಿಯೂ ಆಗಬಲ್ಲುದು ಎಂಬುದನ್ನು ಈ ಪಾತ್ರದಲ್ಲಿ ಕಾಣುತ್ತೇವೆ. ಭರತಮೋಹದಿಂದ ರಾಮನನ್ನು ಕಾಡಿಗಟ್ಟಲು ಕಾರಣವಾಗುವ – ಅಲ್ಲ, ಕರಣವಾಗುವ – ಈಕೆ ಅದೇ ಕಾರಣದಿಂದ ರಾಮನನ್ನು, ಅಲ್ಲ ಭರತನ ಅಣ್ಣಯ್ಯನನ್ನು, ಅಯೋಧ್ಯೆಗೆ ಸುಕ್ಷೇಮವಾಗಿ ಹಿಂತಿರುಗಿಸಲೂ ನೆರವಾಗುತ್ತಾಳೆ. ಆ ದಾರಿಯಲ್ಲಿ ಅವಳು ಕಾಡುಗಿಚ್ಚಿನ ವೈತರಣಿಯನ್ನು ದಾಟಿ ಪ್ರಾಣರೂಪದಲ್ಲಿ ಯಾತ್ರೆ ನಡೆಸುತ್ತಾಳೆ. ಕಡೆಯಲ್ಲಿ, ರಾಮಾಯಣದ ತುದಿಯಲ್ಲಿ ಈ ಪ್ರಾಣರೂಪಿ ಯಜ್ಞಾಗ್ನಿಯ ಮಧ್ಯೆ ಮೂಡಿಕೊಳ್ಳುತ್ತಾಳೆ. ಅವಳ ಪಾತ್ರ ಕಾಡುಗಿಚ್ಚಿನಿಂದ ಯಜ್ಞಾನಲದ ತನಕ ಬೆಳೆದಿದೆ. ಹೀಗೆ, ರಾಮಪಾತ್ರದ ಪೂರ್ಣ ವಿಕಾಸಕ್ಕೆ ಹತ್ತಾರು ಪಾತ್ರಗಳು ತಮ್ಮನ್ನು ಅರ್ಪಿಸಿಕೊಂಡಿವೆ. ಸೀತಾ ರಾಮರು ಹುಟ್ಟುತ್ತಲೆ ಕೇವಲ ಪರಿಪೂರ್ಣರಾಗಿದ್ದು ಇತರ ಅಪೂರ್ಣ ಚೇತನಗಳನ್ನು ಉದ್ಧರಿಸುವುದಷ್ಟೇ ಅಲ್ಲ ಇಲ್ಲಿಯ ದರ್ಶನ ; ಆ ಪೂರ್ಣಸತ್ತ್ವರ ವಿಕಾಸ ಈ ಉಳಿದ ಅಪೂರ್ಣಸತ್ತ್ವರ ವಿಕಾಸದೊಡನೆಯೆ ಹೇಗೆ ನಡೆಯುತ್ತದೆ ಎಂಬುದೆ ಆಗಿದೆ. ರಾವಣನಂಥ ಕೇವಲ ವಾಮಪಾತ್ರವನ್ನೂ ನಾವಿಲ್ಲಿ ಬರಿಯ ಅನುಕಂಪೆಯಿಂದಲೂ ಕಾಣುವುದಿಲ್ಲ ; ಇಲ್ಲವೆ ಅಸಡ್ಡೆಯಿಂದಲೂ ಅಲ್ಲ. ರಾವಣಸತ್ತ್ವ ರಾಮಸತ್ತ್ವದ ಮತ್ತೊಂದು ರೂಪವಷ್ಟೆ. ಆದರೆ ಅವನು ಬಿದ್ದವ. ವಜ್ರ ಸುಟ್ಟರೆ ಇದ್ದಿಲಾಗುತ್ತದೆ. ಅದೇ ಇದ್ದಿಲು ನಾನಾ ರಾಸಾಯನಿಕ ಸಂಯೋಗದೊಡನೆ ತೀವ್ರ ಶಾಖಕ್ಕೆ ಒಳಗಾದರೆ ವಜ್ರವಾಗುತ್ತದೆ. ವಜ್ರ ಇದ್ದಿಲುಗಳೆರಡೂ ಇಂಗಾಲದ ವಂಶವೃಕ್ಷದಲ್ಲಿ ಬೇರು ತಾಳುಗಳು. ಸ್ವಯಂ ಮಹಾಸತ್ತ್ವನೂ, ತಪಸ್ವಿಯೂ, ಬಲಿ ಛಲಿಯೂ ಆದ ರಾವಣ ತನ್ನೊಂದು ವಿಷಯದೌರ್ಬಲ್ಯದಿಂದ ಕೆಟ್ಟಿದ್ದಾನೆ. ಆ ದೌರ್ಬಲ್ಯವೆ ಅವನ ಪತನಹೇತುವೂ ಹೌದು, ಉದ್ಧಾರ ಕಾರಣವೂ ಹೌದು. ಇದೇ ಶ್ರೀ ಕುವೆಂಪು ಅವರ ಕಾಣ್ಕೆ. ವಾಲ್ಮೀಕಿ ಮಹರ್ಷಿಗಳು ರಾವಣನನ್ನು ನಮಗೆ ಮೊದಲ ಬಾರಿಗೆ ತೋರಿಸುವುದು ರಾಕ್ಷಸ ಸಭೆಯಲ್ಲಿ, ಕುವೆಂಪು ಕಂಡಿರುವುದು ಸಂಸಾರನೇಪಥ್ಯದಲ್ಲಿ. ಸೀತೆಯನ್ನು

ಹೊತ್ತು ತರಲು ಹೊರಟಿರುವ ಹೊತ್ತಿನಲ್ಲಿ ತನ್ನ ಹೆಂಡತಿಯೊಡನೆ ಪುಸಿಮಾತಾಡುತ್ತಿರುವ ಹೆಂಗಳ್ಳ ರಸಿಕನಾಗಿ ನಮಗಿಲ್ಲಿ ತೋರುತ್ತಾನೆ. ಅವನು ಕಡೆಯುಸಿರೆಳೆಯುವುದಾದರೂ ಹೆಂಡತಿಯ ತೊಡೆಯ ಮೇಲೆ. ಹೀಗೆ, ಸಂಸಾರದ ಆವರಣದಲ್ಲಿ ಕಾಮಿ ರಾವಣನ, ಸಂಸಾರ ಜೀವನ ವಿನಾಶಕರವಾದ, ವ್ಯಕ್ತಿತ್ವ ವಿಕಾಸಗೊಂಡಿದೆ. ಹೀಗೆಂದು ಈ ರಾವಣ ಒಂದಿಷ್ಟೂ ಕಡಿಮೆ ರಾಕ್ಷಸನಲ್ಲ. ಆ ರಾವಣನಿಗಿಂತಲೂ ಕಾಮಿ, ಬಲಿ, ಛಲಿ. ಆದರೆ ಆ ಕಾಮ ಅವನ ಭಯಂಕರ ಅಹಂಕಾರದ ಒಂದು ಕೋರಿಕೆಯಷ್ಟೆ. ಲೋಕದಲ್ಲಿ ಎಲ್ಲ ಹೆಣ್ಣನ್ನೂ ತಾಯೆಂದೆ ಭಾವಿಸಹೊರಟು ಸೋತ ಈ ರಾವಣ ಜಾರಿಬೀಳುತ್ತ ಬೀಳುತ್ತ ಕಡೆಗೆ, ಜಗತ್ತಿನಲ್ಲಿ ತನಗೆ ಸೋಲದ ಹೆಣ್ಣೆ ಇಲ್ಲವೆಂಬ ತೀರ್ಮಾನಕ್ಕೆ ಬರುತ್ತಾನೆ. ಋಷಿಸತಿಯರನ್ನು, ಮಹಾ ಪ್ರಸಿದ್ಧ ಪತಿವ್ರತೆಯರನ್ನು ಕೆಡಿಸಿ ಸುಖಿಸುತ್ತಾನೆ. ತಾನೆ ಬಲವಂತದಿಂದ ಭೋಗಿಸುವ ಪಶುತನ ತನ್ನ ಅಂಹಕಾರಕ್ಕೆ ಕುಂದೆಂದು ತಿಳಿದು ಈ ರಾವಣ ಯಾವ ಮಹಾಸತಿಯನ್ನೂ ಅನುನಯದಿಂದ ಒಲಿಸಿಕೊಳ್ಳುವುದರಲ್ಲೆ ಸುಖ ಕಂಡಿದ್ದ. ಇದು ಅವನ ಮತ್ತೊಂದು ಅಹಂಕಾರವೆ. ಹೀಗಾಗಿ ಸೀತೆಯನ್ನೂ ಒಲಿಸಲು ಹೋಗಿ ಸೋಲುತ್ತಾನೆ. ತನ್ನ ಸುಪ್ತಚೇತನಾವಸ್ಥೆಯಲ್ಲಿ ಸೀತೆಯ ಹಿರಿತನವನ್ನು ಒಪ್ಪಿಕೊಂಡಿದ್ದರೂ ಎಚ್ಚರದಲ್ಲಿ ಅವಳನ್ನು ಕಾಮಿಸುತ್ತಲೆ ಇರುತ್ತಾನೆ. ಈ ಇವನ ಮನಸ್ಸಿನ ಪಾಕಕ್ಕೆ ಮಂಡೋದರಿ, ಸೀತೆ, ಅನಲೆ, ಧಾನ್ಯ ಮಾಲಿನಿ, ಇಂದ್ರಜಿತು ಮರಣ ಮುಂತಾದುವೆಲ್ಲ ಶಾಖವಾಗುತ್ತವೆ. ಹನುಮಂತನಂಥವನೂ ಅವನನ್ನು ಆತನ ಪತಿವ್ರತೆ ಸತಿಗಾಗಿ ದ್ವೇಷಿಸುವುದು ಕಷ್ಟವಾಗುತ್ತದೆ. ಬೇರೆ ಬೇರೆಯ ಪದರಗಳಲ್ಲಿ ಹೇಗೆ ಈ ಪರಿಣಾಮ ಸಾಗಿದೆ ಎಂಬುದರ ಅದ್ಭುತ ಚಿತ್ರಣವನ್ನು ರಾವಣ ಪಾತ್ರಚಿತ್ರಣದಲ್ಲಿ ಕವಿ ನೀಡಿದ್ದಾರೆ.

ಹೀಗೆ ಎಲ್ಲ ಪಾತ್ರಗಳೂ ಈ ಕಾವ್ಯದಲ್ಲಿ ತಮ್ಮ ವಿಕಾಸವನ್ನು ಕಂಡುಕೊಳ್ಳುತ್ತವೆ. ಮೊದಲೆ ತಿಳಿಸಿದಂತೆ ಇದು ಬಲವಂತದ ಮಾರ್ಪಾಟಲ್ಲ ; ಸಹಜವಾದ ಬೆಳವಣಿಗೆ. ವ್ಯಕ್ತಿಯ ಒಳಗೇ ಸಹಜವಾಗಿರುವ ಚೇತನದ ತುಂಬು ವಿಕಾಸವಿದು. ಈ ವಿಕಾಸಕ್ಕೆ ಯಾರೊಬ್ಬರೆ ಕಾರಣರಲ್ಲ. ತೀರ ಭಿನ್ನ ಸ್ವಭಾವದ ಪಾತ್ರಗಳೂ ತಮಗೆ ಆಗದ ಚೇತನಗಳ ಉದ್ಧಾರಕ್ಕಾಗಿ ಇಷ್ಟವಿದ್ದೊ ಇಲ್ಲದೆಯೊ, ತಿಳಿದೊ ತಿಳಿಯದೆಯೊ ತಪಿಸುತ್ತಾರೆ. ರಾವಣನ ಉದ್ಧಾರಕ್ಕೆ ಸೀತೆ, ರಾಮ, ಹನುಮಂತರು ಹಾರೈಸುವುದೇನು ? ಜೈನ ಪುರಾಣಗಳಲ್ಲಿ ಇಂಥೊಂದು ದರ್ಶನವಿದೆ. ಸರ್ವೋದಯವೆಂದರೆ ಎಲ್ಲರ ಉದಯ ಎಂದಷ್ಟೇ ಅಲ್ಲ – ಎಲ್ಲ ಮಟ್ಟಗಳ ಉದ್ಧಾರ ಎಂದೂ ಅರ್ಥ ; ಎಲ್ಲರಿಂದ ಎಲ್ಲರ ಉದಯ ಎಂದೂ ಅರ್ಥ.



ಕವಿಯೆ ಒಂದೆಡೆ ಒಂದು ಕವಿತೆಯಲ್ಲಿ ಹೇಳಿದ್ದಾರೆ : "ಸಾರಿ ಬಾ ಸರ್ವರಿಗು ಸ್ವಾತಂತ್ರ್ಯಮಂ, ಸಾಮ್ಯತ್ವಮಂ ; ಸರ್ವರಿಂ ಸರ್ವರಾ ಉದ್ಧಾರಮಂ" ಎಂದು. ಹೀಗಾಗಿ ಈ ಕಾವ್ಯದ ಎಲ್ಲ ಪಾತ್ರಗಳೂ ಎಲ್ಲರ ಏಳಿಗೆಗೆ ಒಂದಲ್ಲ ಒಂದು ರೀತಿ ನೆರವಾಗುತ್ತವೆ.

ರಾಮಾಯಣದರ್ಶನಂ ಕಾವ್ಯ ಎಲ್ಲ ಜೀವರ ವಿಕಾಸದ ಪ್ರತಿಮೆ. ಈ ವಿಕಾಸಕ್ಕೆ ಯಾವೊಂದು ಪಾತ್ರವೂ ತನ್ನ ಸ್ವಭಾವವೈಲಕ್ಷಣ್ಯವನ್ನೂ ಬಿಟ್ಟುಕೊಡುವುದಿಲ್ಲ. ತನ್ನ ಸ್ವಭಾವದಲ್ಲಿ ಸ್ವಧರ್ಮದಲ್ಲಿ ಆಳವಾಗಿ ಬೇರುಬಿಟ್ಟುಕೊಂಡಿದ್ದೇ ಹೇಗೆ ಸಮಷ್ಟಿ ಪ್ರಜ್ಞೆಗೆ ಏರಬಲ್ಲದೆಂಬ ಅಪೂರ್ವ ದರ್ಶನವನ್ನಿಲ್ಲಿ ಕವಿ ಕಾಣಿಸಿದ್ದಾರೆ. ಅಂದರೆ, ಯಾವ ಪಾತ್ರವನ್ನೂ ಸರಳಗೊಳಿಸದೆ, ಯಾವ ಕ್ರಿಯೆ – ಘಟನೆಯನ್ನೂ ಸುಲಭಗೊಳಿಸದೆ ಸಂಕೀರ್ಣವಾಗಿಯೆ ಕಂಡೂ ಐಕ್ಯಸಿದ್ಧಿಯನ್ನು ತೋರುವುದು ಇಲ್ಲಿನ ಸಾಧನೆ. ದ್ವಂದ್ವವನ್ನೂ ಜೀರ್ಣಿಸಿಕೊಳ್ಳಲಾರದ ಕವಿಚೇತನವಲ್ಲ ಇಲ್ಲಿನ ಕಾವ್ಯ ನಡೆಸಿರುವುದು. ದ್ವಂದ್ವವನ್ನೆಲ್ಲ ಬದುಕಿ ನಿರ್ದ್ವಂದ್ವವನ್ನು ಸಾಧಿಸುವ ಅದ್ವೈತ, ವಿಶಿಷ್ಟಾದ್ವೈತ ಕಲೆ ಇದು. ಆದ್ದರಿಂದಲೆ ಇಲ್ಲಿ ಬರುವ ಪಾತ್ರಗಳು ರಾಗದೀಪ್ತರು; ಜೀವಂತ ವರ್ಣರಂಜಿತರು.

ಕವಿಯ ಈ ದರ್ಶನಕ್ಕೆ ಈ ಯುಗದ ಅನುಭವಗಳೇ ಪ್ರೇರಕ. ಶ್ರೀ ರಾಮಕೃಷ್ಣರ ಸರ್ವಧರ್ಮಸಮನ್ವಯ ಅಥವಾ ಸರ್ವಸ್ವಧರ್ಮಸಮನ್ವಯ ; ಗಾಂಧೀಜಿಯವರ ಸರ್ವೋದಯ ; ಅರವಿಂದರ ಪೂರ್ಣದೃಷ್ಟಿ ಮತ್ತು ಪೂರ್ಣ ವಿಕಾಸ ; ಮತ್ತು ಆಧುನಿಕ ಮನೋವಿಜ್ಞಾನ ಮತ್ತು ರಾಜಕೀಯ ವಿಚಾರ ಧಾರೆಗಳು ಕವಿಯ ದರ್ಶನಮೂಲದಲ್ಲಿ ಜೀವಧಾತುಗಳಾಗಿವೆ. ಈ ಯುಗದ ಮೇಲು ಪದರವಷ್ಟನ್ನೇ ಕಂಡು ಗಾಬರಿಗೊಂಡವರಿಗೆ ಜಗತ್ತಿನ – ಜೀವಿಯ ಪೂರ್ಣ ವಿಕಾಸವಾಗಲಿ, ಸರ್ವೋದಯವಾಗಲಿ, ಎಲ್ಲವೂ ಭ್ರಮೆಯಾಗಿ ತೋರೀತು. ಅಂಥವರಿಗೆ ಈ ಕಾವ್ಯ ಬರಿಯ ಹುಚ್ಚುದನಿಯಾಗಿ ಕೇಳಿಸಬಹುದು. ಅದಕ್ಕೆ ವ್ಯಸನಪಡಲೂಬೇಕಿಲ್ಲ.

ಭಾಷೆ ಮತ್ತು ಛಂದಸ್ಸಿನ ದೃಷ್ಟಿಯಲ್ಲಿ ನೋಡುವುದಾದರೆ ಇಲ್ಲಿ ಕುವೆಂಪು ನಮ್ಮ ಕನ್ನಡದ ಮತ್ತು ಸಂಸ್ಕೃತದ ಎಲ್ಲ ಲಯಗಳನ್ನೂ ಬಾಗು ಬಳಕುಗಳನ್ನೂ ಜೀರ್ಣಿಸಿಕೊಂಡು ಸಾಧಿಸಿದ್ದಾರೆ. ಪಂಪ, ರನ್ನರ ಚಂಪೂ, ಹರಿಹರನ ರಗಳೆ, ರಾಘವಾಂಕ ನಾರಣಪ್ಪ ಲಕ್ಷ್ಮೀಶರ ಷಟ್ಪದಿ, ಜನ್ನ ಷಡಕ್ಷರಿಯರ ಕಂದ, ವಚನಕಾರರ ವಚನ – ಈ ಎಲ್ಲದರ ಕೂಡ, ವ್ಯಾಸ ವಾಲ್ಮೀಕಿಗಳ ಶ್ಲೋಕ, ಉಪನಿಷತ್ತುಗಳ ಮಂತ್ರ ತಮ್ಮ ತಮ್ಮ ವಿಶಿಷ್ಟ ಅಂಶವನ್ನು ಈ ಶೈಲಿಗೆ ಧಾರೆಯೆರೆದಿವೆ.

ಈ ಮಹಾ ಛಂದಸ್ಸಿನಲ್ಲಿ ಮಿಲ್ಟನ್ ಕವಿಯ ತುಂಬು ಮೊಳಗುಗಳನ್ನೂ ಕೇಳಬಹುದು. ಹೀಗಾಗಿ ಈ ಕಾವ್ಯ ಭಾರತಿಯ ಪಂರಪರೆ ವರ್ತಮಾನದಲ್ಲಿ ಪಾಶ್ಚಾತ್ಯ ಸತ್ತ್ವದೊಡನೆ ಮೇಳಗೊಂಡು ಪುನರುಜ್ಜೀವನವಾಗಿರುವುದರ ಪ್ರತೀಕವಾಗಿದೆ. ಇಲ್ಲಿ ಪರಂಪರೆ ಇದೆ, ವರ್ತಮಾನವಿದೆ, ನಿರಂತರತೆ ಇದೆ. ಇಷ್ಟೆಲ್ಲ ಇದ್ದರೂ ಈ ಮಹಾಕಾವ್ಯದ ಕವಿಯ ಸತ್ತ್ವ ಈ ಕೃತಿ ಪ್ರತಿಮಿಸಿರುವುದಕ್ಕಿಂತಲೂ ಅತಿಶಯವಾದುದಾಗಿದೆ. ಅದಿಲ್ಲದಿದ್ದರೆ ಈ ಕೃತಿಯನ್ನು ಬರೆದ ಮೇಲೂ ಮಹಾ ಕಾದಂಬರಿಯೊಂದರ ನಿರ್ಮ್ಮಾಣಕ್ಕೆ ಸಮರ್ಥವಾಗುತ್ತಿರಲಿಲ್ಲ ಕವಿಪ್ರತಿಭೆ. ರಾಮಾಯಣದರ್ಶನಂ ಕಾವ್ಯವನ್ನು ಪ್ರತ್ಯೇಕ ಅಭ್ಯಾಸದ ವಸ್ತುವಾಗಿ ಆರಿಸಿಕೊಳ್ಳುವುದು ಸೂಕ್ತವಾದರೂ, ಶ್ರೀ ಕವಿ ಕುವೆಂಪು ಅವರ ಸಮಗ್ರ ಕವಿವ್ಯಕ್ತಿತ್ವವನ್ನರಿಯಲು ಅದೊಂದರ ಅಭ್ಯಾಸವಷ್ಟೆ ಪರಿಪೂರ್ಣವಾಗಲಾರದು.

* * * *

---

೨೯.೧೨.೧೯೬೮ ರಂದು ಪ್ರಕಟಗೊಂಡ 'ಕರ್ಮವೀರ' ವಾರಪತ್ರಿಕೆಯ ಕುವೆಂಪು ವಿಶೇಷಾಂಕದಲ್ಲಿ ಪ್ರಕಟಗೊಂಡ ಲೇಖನವಿದು.



## ಸೀತಾ–ಮಂಡೋದರಿಯರು

ಪಂಚಮಹಾಪತಿವ್ರತೆಯರ ಹೆಸರು ಹೇಳಿಕೊಳ್ಳುವಾಗ ಈ ಇಬ್ಬರು ಮಹಾಸತಿಯರನ್ನೂ ಒಂದೆಡೆಯೆ ಕೂಡಿಸಿದ್ದರೂ ವಾಸ್ತವವಾಗಿ ಇವರನ್ನು ಭಿನ್ನಭಿನ್ನಾವರಣದಲ್ಲಿಯೆ ಇಟ್ಟು ನೋಡುವುದೆ ವಾಡಿಕೆ. ಸೀತಾರಾಮಚಂದ್ರರ ಬಗೆಗೆ ಬೆಳೆದ ಪರಮ ಪೂಜ್ಯಭಾವನೆ ರಾವಣನ ವಿಷಯದಲ್ಲಿ ಮೂಡಿಕೊಂಡ ವಿಷಭಾವನೆ ಎರಡೂ ಪರಸ್ಪರ ವಿರುದ್ಧವಾದದ್ದರಿಂದ ಮಂಡೋದರಿಯ ಬಗೆಗೆ ಯಾವ ಗೌರವಭಾವವೂ ಗಾಢವಾಗಿ ಮೂಡದಂತಾಯಿತು, ರಾಕ್ಷಸ ಸಾನ್ನಿಧ್ಯದಿಂದ ಮಂಡೋದರಿಯಂತಹ ಮಹಾಸತಿಗೂ ರಾಕ್ಷಸತ್ವದ ನೆಳಲು ಅಂಟಿಕೊಂಡಿತು. ವಾಲ್ಮೀಕಿ ರಾಮಾಯಣದಲ್ಲಿ ಸೀತಾಮಂಡೋದರಿಯರಿಗೆ ಸ್ಪಷ್ಟವಾದ ಅಂತರವಿದ್ದೇ ಇರುವುದನ್ನು ಕಾಣುತ್ತೇವೆ. ಸೀತೆಯನ್ನೇ ಹೋಲುವ ಸೌಂದರ್ಯವತಿಯವಳು. ಸೀತಾನ್ವೇಷಣದಲ್ಲಿರುವ ಹನುಮಂತನೂ ಮೊದಲ ಬಾರಿಗೆ ಆಕೆಯನ್ನು ರಾವಣಾಂತಃಪುರದ ಶಯ್ಯಾಗೃಹದಲ್ಲಿ ಕಂಡಾಗ ರಾಮಸತಿಯೆಂದೆ ಭ್ರಮಿಸಿ ಹಿಗ್ಗಿ–ಖೇದಗೊಂಡು ಆಮೇಲೆ ನಿಜವರಿಯುತ್ತಾನೆ. ರೂಪಸೌಂದರ್ಯ ಲಕ್ಷಣಾದಿಗುಣಗಳಲ್ಲಿ ಇಬ್ಬರಿಗೂ ಹೋಲುವೆಯುಂಟೆಂಬ ಅಂಶ ಇದರಿಂದ ತಿಳಿಯುತ್ತದೆ. ಆದರೂ ಆವರಣ ಪ್ರಭಾವದಿಂದಾಗಿ ಅವಳಲ್ಲೂ ರಾಕ್ಷಸಪ್ರಕೃತಿ ತುಸು ಕಾಣಿಸಿಕೊಳ್ಳುತ್ತದೆ. ಸೀತೆಯ ಕಡೆ ಹರಿದಿರುವ ಗಂಡನ ಮನಸ್ಸನ್ನು ಹಿಂತಿರುಗಿಸಲು ಅವಳಾಡುವ ಮಾತೂ ಕೂಡ* ಕೇವಲ ಸಾತ್ವಿಕ ತೇಜಸ್ವಿಯ

---

* "ರಾಕ್ಷಸೇಂದ್ರಾ, ನಿನ್ನ ಕೋಪಕ್ಕೆ ಈ ಮನುಷ್ಯಮಾತ್ರಳು ಪಾತ್ರಳೆ ? ಮಹಾವೀರನಾದ ನೀನು ಈ ಒಬ್ಬ ಹೆಂಗಸಿಗಾಗಿ ಇಷ್ಟ ಕಾತರಗೊಳ್ಳುವ ಕಾರಣವೇನಿದೆ ? ನಿನ್ನ ಸೇವೆಗೆ ನಿನ್ನ ದಾಸಿಯರಾದ ನಾವೆಲ್ಲರೂ ಸಿದ್ಧರಾಗಿದ್ದೇವೆ. ಅಲ್ಲದೆ, ಈ ವ್ಯಸನಾಧೀನಳೂ, ಕೃಶಾಂಗಿಯೂ, ಕಾಮೇಚ್ಛೆ ಉಡುಗಿಹೋದವಳೂ ಆದ ಈ ದುರ್ಬಲ ಮನುಷ್ಯಸ್ತ್ರೀಯ ಅಂಗಸಂಗದಿಂದ ನಿನಗೆ ಎಂತಹ ಸುಖವಾಗಬಲ್ಲುದು? ಬಾ, ಅಂತಃಪುರಕ್ಕೆ ಹೋಗೋಣ. ನನ್ನೊಂದಿಗೆ ಭೋಗಿಸುವಂತೆ !"

ಶ್ರೀ ರಾಮಾಯಣ ಕಥಾಸಾರ, ಯುದ್ಧಕಾಂಡ – ಶ್ರೀ ಸುಬೋಧ ರಾಮರಾಯರು
–'ಗಂಗೋತ್ರಿ' ಯಿಂದ ಉದ್ಧೃತ

ನುಡಿಯಾಗಿಲ್ಲ. ಸೀತೆಯಾದರೂ ರಾವಣಲಂಕೆಯಲ್ಲಿ ಬಂಧಿಯಾಗಿರುವಾಗ ಅವನ ಬಗೆಗೆ ವಾತ್ಸಲ್ಯವಿರಲಿ ಮರುಕವನ್ನಾಗಲಿ ತಾಳಿರುವುದಿಲ್ಲ. ನಿತ್ಯವೂ ರಾಮ ಜಯಕ್ಕಾಗಿ ರಾವಣವಧಕ್ಕಾಗಿ ಅವಳು ತನ್ನ ಕುಲದೈವವನ್ನು ಪ್ರಾರ್ಥಿಸುತ್ತಿರುತ್ತಾಳೆ ಎಂಬ ಮಾತು ವಾಲ್ಮೀಕಿಗಳಲ್ಲಿ ಬರುತ್ತದೆ. ಈ ಎಲ್ಲವೂ ಸಹಜವೆ ಸರಿ. ಆದರೆ ಶ್ರೀ ರಾಮಾಯಣದರ್ಶನಂ ಕೃತಿಯಲ್ಲಿ ಈ ಎರಡೂ ಪಾತ್ರಗಳು ಅತ್ಯಂತ ಸಹಜವಾದ ಅನಿವಾರ್ಯವಾದ ಪರಿವರ್ತನವನ್ನು ಪಡೆಯುತ್ತವೆ. ಸೀತೆಗೆ ರಾಮನ ಬಗೆಗೆ ಇದ್ದ ಅಭೇದವಾದ ಅದ್ವೈತವಾದ ಪ್ರೀತಿಯ ಕಾರಣದಿಂದಲೆ ರಾವಣನ ಬಗೆಗೆ ಆಕೆಯಲ್ಲಿ ದ್ವೇಷ ಮೂಡುವುದೇನೊ ಸಹಜವೆ, ಹಾಗೆಯೆ, ತನ್ನ ಪ್ರಾಣವಲ್ಲಭನೇ ತನ್ನ ಪ್ರೀತಿ ಸೌಂದರ್ಯಗಳನ್ನೂ ಕಡೆಗಣಿಸುವಂತೆ ಮಾಡಿದ ಈ ಅಲಭ್ಯ ಮಹಾಸತಿ ಸೀತೆಯನ್ನು ಕಂಡು ಮಂಡೋದರಿಯಂತಹಳಿಗೂ ಅಸೂಯೆ ಕವರುವುದೂ ಸಾಧ್ಯ. ಈ ಸಹಜ ಗುಣಗಳೂ ಸಹಜವಾಗಿಯೆ ಮಹದ್ಗುಣಗಳಾಗುವ ಸಹಜ ಪವಾಡವನ್ನು ಶ್ರೀ ಕುವೆಂಪು ಕಂಡರಿಸಿದ್ದಾರೆ. ಅದು ಅತ್ಯಂತ ಅಕೃತಕ ಸೃಷ್ಟಿಯೆಂದೆ ತಿಳಿಯುತ್ತೇನೆ.

ರಾವಣನ ಕೈಸೆರೆಯಾಗಿ ಪುಷ್ಪಕದಲ್ಲಿ ಬಂಧಿತಳಾಗಿ ಲಂಕೆಗೆ ಬಂದ ಸೀತೆ ಮೂರ್ಛೆಗೊಂಡು ಎಚ್ಚತ್ತಾಗ ರಾಕ್ಷಸಸ್ತ್ರೀಯರ ನಡುವೆ ಇರುತ್ತಾಳೆ. ನರಕವಾಗಿ ತೋರಿದ ಆ ಆವರಣವೆ ದಿನಗಳೆದಂತೆ ಅವಳಿಗೆ ಸಾಧನರಂಗವಾಗುತ್ತೆ, ಪಂಚಾಗ್ನಿಯಾಗುತ್ತದೆ. ಮಂಡೋದರಿಯಾದರೊ ಸೀತಾಹರಣದ ಸುದ್ದಿ ತಿಳಿದು ಬೆಬ್ಬಳಿಸಿ ಹೋಗಿರುತ್ತಾಳೆ ; ತನಗಿನ್ನೊಬ್ಬಳು ಸ್ಪರ್ಧಿ ಬಂದಳೆಂಬ ಕುತ್ಸಿತ ಅಸೂಯೆಯಿಂದಲ್ಲ, ಹದಿಬದೆಯ ಹರಣದಿಂದ ತನ್ನ ಪತಿಯ ಹಾಗೂ ಲಂಕಾಸಮಸ್ತ ಜೀವನದ ಪ್ರಲಯ ಸನ್ನಿಹಿತವಾಯಿತಲ್ಲಾ ಎಂಬ ಧರ್ಮ ಭೀತಿಯಿಂದ. ಆದರೆ ಅವಳ ಭೀತಿಯನ್ನೂ ನಿವಾರಿಸುವ ಆಶ್ವಾಸನದ ಮಾತೊಂದು ಅವಳಿಗೆ ಪೂಜಾಮಂದಿರದಲ್ಲಿ ಕೇಳುತ್ತದೆ.

"ಹಿತಮೆನಿತೊ ಸೂಳ್ ಇಂತೆ
ನನ್ನವೊಲ್ ಬರ್ಪುದಪ್ರಿಯತೆಯಾಕೃತಿವೆತ್ತು.
ಈಶಕೃಪೆಗಿಹುದು ನಾನಾ ಮುಖಂ, ಸುಖದಂತೆ
ದುಃಖಮುಂ ಖುತಚಿತ್ ಕೃಪಾನ್ಯಕೇಸರಿನಖಂ.
ನಿನ್ನ ಪತಿಯಭ್ಯುದಯಕೇಣಿಯೊಡ್ಡಿದೆ ಬಿದಿಯ
ಕರುಣೆ. ಸೀತಾಹರಣಮದೆ ಮೊದಲಸೋಪಾನಂ.
ಶ್ರೀ ರಾಮನರ್ಧಾಂಗಿಯೊಡನೆ ನೀನೆರ್ದೆಗೂಡಿ
ಬೇಡಿದೊಡೆ ಕೈಸಾರ್ವದೊ ರಾವಣೋದ್ಧಾರ
ಸತ್ಫಲಂ !"



ಈ ದೇವಕೇತು ಪ್ರೇರಣೆ ಅವಳ ಸಹಜ ಮಹಾಸತೀತ್ವವನ್ನು ಮತ್ತೂ ಎಚ್ಚರಿಸಿ ನಿರ್ದಿಷ್ಟವೂ ನಿಶ್ಚಿತವೂ ಆದ ಮಾರ್ಗದಲ್ಲಿ ಒಯ್ಯುವಂತೆ ಮಾಡುತ್ತದೆ. ಆದರೆ ತಾನು ಹೇಗೆತಾನೆ ಸೀತೆಯನ್ನು ತನ್ನೊಡನೆ ಕರೆದುಕೊಳ್ಳುವುದು? ಆಗಲಿ, ವಿಷವಾಗಿರಬಹುದಾದ ಅಪಹೃತ ಸತಿಯೊಬ್ಬಳ ಮನಸ್ಸನ್ನಾದರೂ ತಾನು ಗೆದ್ದುಕೊಳ್ಳುವುದು ಸಾಧ್ಯವೆ? ಅವಳನ್ನು ನೋಡುವುದಾದರೂ ಹೇಗೆ? ಅದಕ್ಕೆ ರಾವಣನೆ ಮೊದಲ ಅಡ್ಡಿ. ಅದಕ್ಕವನು ಒಡ್ಡುವ ಕಾರಣವೂ ಚೆನ್ನಾಗಿದೆ.

"ನಿನ್ನ ದರ್ಶನದಿಂದೆ ಪಾಣ್ಬೆಗಕ್ಕುಂ ಮಹಾ
ಪತಿವ್ರತೆಯ ದೃಢತೆ ; ಸೀತೆಯ ಮಾತದಂತಿರ್ಕೆ !"

ಏಕೀ ಭೀತಿ? ರಾವಣ ಹೆಣ್ಣನ್ನು ಹೇಗೆ ಗೆಲ್ಲಬೇಕೆಂಬ ಕಲೆ ಬಲ್ಲ ಮಹಾತಂತ್ರಿ, ಸೀತೆ ಮಹಾಪತಿವ್ರತೆ ಎಂಬ ಅಂಶ ತಿಳಿದೂ ಇದ್ದ. ಆದರೆ , ಅಂಥವಳೂ ಕೂಡ ಪತಿದೂರಳಾದಾಗ, ಭೋಗಮಧ್ಯದಲ್ಲಿ ಮೌಲ್ಯರಹಿತವಾದ ಅಸದಾವರಣದಲ್ಲಿ ನಿರಂತರ ಮೃದು ಸುಖವೇದನಕ್ಕೊಳಗಾದಾಗ ತನ್ನ ಪಾತಿವ್ರತ್ಯವನ್ನೂ ಕಳಚಿಕೊಳ್ಳುವುದು ಅಸಾಧ್ಯವೇನೂ ಅಲ್ಲ ಎಂದೆ ತರ್ಕಸಿದ್ದ. ಆದ್ದರಿಂದ, ದೃಢ ಪತಿವ್ರತೆಯಾದ ತನ್ನ ಸತಿ ಆ ಸತಿಯನ್ನು ಕಂಡರೆ, ದಿಗ್ಭ್ರಾಂತರಿಗೆ ಧ್ರುವ ದಿಕ್ಸೂಚಿ ಕಂಡಂತಾದೀತೆಂಬ ಭಯ ಅವನಿಗೆ. ಸೀತೆಯ ಪಾತಿವ್ರತ್ಯ ಪಾವಿತ್ರ್ಯವನ್ನೆ ಅಲುಗಿಸಿಬಿಡಬೇಕೆಂಬ ಅಹಂಕಾರ ಮೂಲವಾದ ಭಯಂಕರ ಕಾಮಪೀಡಿತನಾದ ಈ ರಾವಣ ಹೀಗೆಲ್ಲ ತರ್ಕಿಸುವುದು ಸರಿಯೆ. ಹಾಗೆ ಆಲೋಚಿಸುವಾಗ ಲೋಕದಲ್ಲಿ ತನ್ನ ಬಲೆಗೆ ಬೀಳದ ಪಾತಿವ್ರತ್ಯವೇ ಇಲ್ಲವೆಂದೂ, ಒಟ್ಟಿನಲ್ಲಿ ಪಾತಿವ್ರತ್ಯವೆಂಬುದೇ ಹುಸಿನೆಲೆಯೆಂದೂ ವಾದಿಸುತ್ತದೆ ಅವನ ಕಾಮಾಹಂಕಾರ, ಮಂಡೋದರಿಯ ಉತ್ತರವೂ ಬಹಳ ಭೇದಕವಾಗಿಯೆ ಇದೆ.

"ಪ್ರಾಣೇಶ, ದೈತ್ಯೇಂದ್ರ
ಮತ್ತೊರ್ವನಿದ್ದಿದ್ದರೀ ತೆರನ ರಾವಣಂ
ತೋರುತಿರ್ದಳ್ ನಿನಗೆ ಹದಿಬದೆಯರಿರ್ಪುದಂ,
ಹದಿಬದೆತನದ ಹಿರಿಮೆಯಂ, ನಿನ್ನ ಈ ಮಯನ
ಮಗಳಬಲೆ !"

ಈ ಮಾತಿಗೆ, ಈ ಮಾತಿನ ದನಿಯ ದೃಢತೆಗೆ, ಈ ಮಾತನ್ನು ಅನುಸರಿಸಿದ ಮಂಡೋದರಿಯ ಆ ದಿಟ್ಟ ನೋಟಕ್ಕೆ ರಾವಣನೆದೆ ದಿಗಿಲುಗೊಂಡು ಅವನು

ತನ್ನೊಳತೋಟಿಯನ್ನೂ ತನ್ನೊಳ ದೌರ್ಬಲ್ಯಗಳನ್ನೂ ಆ ತನ್ನ ಮಹಾ ಸತಿಯ ಮುಂದೆ ನಿವೇದಿಸಿಕೊಳ್ಳುತ್ತಾನೆ. ಕಡೆಗೆ "ನನ್ನಿಚ್ಛೆ ಸೋಲ್ಗೆ ; ಹದಿಬದೆ ಗೆಲ್ಗೆ ; ನಿನ್ನಾಸೆಯುಂ ಸಲ್ಗೆ : ಬಲದಿನಲ್ಲದೆ ಸೋಲೆನಭ್ಯುದಯಕಾದೊಡಂ !" ಎಂಬ ತನ್ನ ನಿರ್ಧಾರವನ್ನೂ ಉದ್ಧಾರಕಾಂಕ್ಷೆಯನ್ನೂ ತೋಡಿಕೊಳ್ಳುತ್ತಾನೆ.

ಈ ಮಂಡೋದರಿ ಸೀತೆಯನ್ನು ಸಂಧಿಸುವುದಾದರೂ ಇನ್ನೆಲ್ಲಿ ? ಹೇಗೆ? ಇದರ ಚಿತ್ರಣ ಶ್ರೀರಾಮಾಯಣದರ್ಶನಂ ಕಾವ್ಯದಲ್ಲಿರುವ ಮಹತ್ತರ ಪ್ರಸಂಗಗಳಲ್ಲೊಂದು. ಬೆಳುದಿಂಗಳ ರಾತ್ರಿಯ ನಿಶ್ಶಬ್ಧತೆಯಲ್ಲಿ ಬೆಳ್ಮಡಿಯುಟ್ಟ ಮಂಡೋದರಿ ಸೀತೆಯನ್ನು ಕಾಣಲು ಬಂದು ಮೂಕಳಾಗಿ ದೂರದಲ್ಲೆ ನಿಂತು ಕೈಮುಗಿದು ಹೋಗುತ್ತಿರುತ್ತಾಳೆ ಒಂದು ವಾರದ ತನಕ*. ದಿನವೂ ಹೀಗೆ ಕಾಣುತ್ತಿದ್ದ ಸೀತೆ ಮೊದಮೊದಲು ಅದೂ ರಾಕ್ಷಸ ವಂಚನೆಯಿರಬೇಕೆಂದೆ ತಿಳಿದು ಬೆದರಿರುತ್ತಾಳೆ. ಕಡೆಗೆ ಮಂಡೋದರಿಯ ಅಳಲಿನ ಪ್ರಮಾಣಿಕತೆ ಅವಳ ಕರುಣೆಯನ್ನು ಕಡೆಯುತ್ತದೆ. ವಯಸ್ಸಿನಿಂದಲೂ ದುಃಖದಿಂದಲೂ ತನಗೆ ಅಕ್ಕನಾದ ಮಂಡೋದರಿಯ ವಿಲಕ್ಷಣ ಸಂಕಟವನ್ನು ಕಂಡ ಸೀತೆ ಅವಳ ಬೆಳ್ಜಸಕ್ಕೆ ನಮಿಸುತ್ತಾಳೆ. ಆ ಮಹಾಸತಿಗೆ ನಮಿಸುವುದೂ ಶೀಘ್ರ ಮಂಗಳಕಾರಿಯೆಂದೆ ಸೀತೆಯ ಶ್ರದ್ಧೆ. ಸೀತೆಯ ಮಂಗಳವೆ ಮಂಡೋದರಿಯ ಮಂಗಳವೂ ಆಗಿದೆ. ಅದರ ಪ್ರಾರ್ಥನೆಯೆ, ಸೀತಾ ಕಾರುಣ್ಯವನ್ನು ಉನ್ಮೀಲಿಸುವುದೆ ಅವಳ ಉದ್ದೇಶ. ಅದೂ ಸಿದ್ಧಿಸುತ್ತದೆ. ಸೀತೆಗೆ ಈ ಘಟನೆಯಿಂದ ರಾವಣನ ಲಂಕೆ ಮಂಡೋದರಿಯ ಲಂಕೆಯಾಗುತ್ತದೆ ; ತಪೋಭೂಮಿಯಾಗುತ್ತದೆ. ರಾವಣದ್ವೇಷ ಮಂಡೋದರಿಯ ಮಾಂಗಲ್ಯದ ಬಗೆಗಿನ ಮರುಕವಾಗುತ್ತದೆ. ಆದ್ದರಿಂದಲೆ ಅವಳ ದಶಗ್ರೀವನಿಗಾಗಿ ಮರುಗುತ್ತಾಳೆ, ತಾಯಿ ಕೇಡಾಡಿ ಕಂದನಿಗೆ ಮರುಗುವಂತೆ. ಸೀತೆಯ ನೋಂಪಿ ಮಂಡೋದರಿಯ ನೋಂಪಿಗಳ ಗುರಿಯಲ್ಲಿ ಅಂತರ ಮಾಯವಾಗುತ್ತದೆ. ಈ ಇಬ್ಬರ ತಪಸ್ಸೂ ರಾವಣ ಹೃದಯದ ಇದ್ದಿಲನ್ನು ಸುಟ್ಟು ಸುಟ್ಟು ವಜ್ರವಾಗಿಸುವ ಸಾಧನೆಯನ್ನು ಕೈಗೊಳ್ಳುತ್ತದೆ, ಕಾಲಾಗ್ನಿ ನೆರವನ್ನು ಪಡೆದು.

ಈ ಒಂದು ಘಟನೆ ಎಂತಹ ಅದ್ಭುತ ಮಂತ್ರವಾಗಿ ಪರಿಣಮಿಸುತ್ತದೆ ! ವಿಷಮ ಮುಖಗಳನ್ನೂ ಸುಷಮ ಮುಖವಾಗಿಸುವ ಮಂತ್ರವಿದು. ಪತಿತನ

---

* ರಾವಣನ ಆಣತಿಯನ್ನುಲ್ಲಂಘಿಸಿ ಮಂಡೋದರಿ ಸೀತೆಯನ್ನು ಕಾಣುವಂತಿಲ್ಲ, ಆದ್ದರಿಂದಲೆ ಅವಳು ಹಾಗೆ ಮೂಕಳಾಗಿ ಬಂದು ದೂರನಿಂತಿರುತ್ತಾಳೆ. ಮೊದಲು ಕರೆದು ನುಡಿಸುವವಳೂ ಸೀತೆಯೆ. ಆದ್ದರಿಂದ ಅವಳಿಗೊಂದು ಬಗೆಯ ತೃಪ್ತಿ. ತಾನು ಪತಿವಾಕ್ಯವನ್ನು ಪೂರ್ಣವಾಗಿ ಉಲ್ಲಂಘಿಸಲಿಲ್ಲವೆಂದು.



ಉದ್ಧಾರಕಾರ್ಯವೂ ಪಾವನಾತ್ಮನ ಆದ್ಯತಪಸ್ಸಾಗುವ ನವಯುಗದ ಮಂತ್ರವಿದು*. ಈ ಮಂತ್ರ ಇಡೀ ಕಾವ್ಯದಲ್ಲೆಲ್ಲ ಅನುರಣಿಸಿರುವುದನ್ನು ಕಾಣಬಹುದು. ಸೀತಾನ್ವೇಷಣಕ್ಕಾಗಿ ಲಂಕೆಯನ್ನೆಲ್ಲ ಸೋಸುತ್ತಿರುವ ಆಂಜನೇಯ ಶಿವಾಲಯದಲ್ಲಿ ಪ್ರಾರ್ಥನಾಮುಖಿಯಾಗಿರುವ ಮಂಡೋದರಿಯನ್ನು ಕಂಡಾಗ ಪಟ್ಟ ಅನುಭವ ಕೂಡ ಇದಕ್ಕೆ ಸಂವಾದಿಯಾಗಿದೆ. ಮಹಾ ಓಜಸ್ವಿಯಾದ ರಾವಣನ ಆ ಏಕಾಂತ ದೈನ್ಯವನ್ನು ಮಂಡೋದರಿಯ ದೃಢ ಪಾತಿವ್ರತ್ಯದ ಸಾಹಸೋದ್ಯಮವನ್ನು ಕಂಡ ಹನುಮಂತನ ರಾವಣ ದ್ವೇಷ ತುಸುಕಾವಾರುತ್ತದೆ. ಅಂತಹ ಮಹಾದ್ಯುತಿಯನ್ನು ಸತಿಯನ್ನಾಗುಳ್ಳವನು ಅನ್ಯರುಚಿಗಾಗಿ ಕಣ್ಣಾಡಿಸುವ ದೌರ್ಭಾಗ್ಯದಲ್ಲಿ ಹನುಮಂತನಿಗೆ ಕೇವಲ ರಾವಣನ ಇಂದ್ರಿಯ ದೌರ್ಬಲ್ಯವಲ್ಲದೆ ವಿಧಿಯ ಮಹದ್ವ್ಯೂಹ ರಚನೆ ಗೋಚರವಾಗುತ್ತದೆ. ಕಡೆಗೆ,

"ಪೂಜ್ಯೆ ಈ ಸತಿಗೆ
ತನ್ನ ಪತಿಯಾತ್ಮದುದ್ಧಾರ ಕಾರ್ಯದೊಳಿಂದು
ನೆರವಾಗದಿರ್ದೊಡಾಂ ಧರ್ಮಚ್ಯುತಂ. ನನ್ನ
ಬಂದ ಕರ್ತವ್ಯಕವಿರುದ್ಧಮಂ ಗೈದು, ಮೇಣ್
ಚೋದಿಸುವೆನನುಕೂಲಮಂ"

ಎಂಬ ನಿರ್ಧಾರಕ್ಕೆ ಬರುತ್ತಾನೆ. ಇಲ್ಲೆಲ್ಲ ಮಂಡೋದರಿಯ ಪಾತಿವ್ರತ್ಯ, ಪ್ರಾರ್ಥನಾ ತೀವ್ರತೆ ಸೀತಾರಾಮ ರಾವಣ ಲೋಕವನ್ನೆ ಹಿಡಿದೆಳೆದು ಮಂಗಳದತ್ತ ಹರಿಸುವ ಸಾಮರ್ಥ್ಯ ತೋರುತ್ತದೆ. ಈ ರೀತಿ ಮಂಡೋದರಿಯ ಪಾತ್ರಪರಿಣಾಮ ಮೂಲ ಕಾವ್ಯದ ಆಶಿತಕ್ಕೆ ಒಂದಿಷ್ಟೂ ಅಸಂಗತವಾಗಿಲ್ಲ. ಅಲ್ಲಿಯೂ ಈಕೆ ಪತಿವ್ರತೆ, ಇಲ್ಲಿಯೆಂತೊ ಅಂತೆ. ಆದರೆ ಅಲ್ಲಿ ಅವಳು ಘೋರರಾಕ್ಷಸಾವರಣದಲ್ಲಿದ್ದಾಳೆ. ಇಲ್ಲಿ ರಾಕ್ಷಸರಿಗೆ ಅಲ್ಲಿರುವ ರೂಪ ರೌದ್ರವೇನೂ ಇಲ್ಲ. ಮತ್ತೆ ಇಲ್ಲಿ ಬರುವ ಪ್ರಾರ್ಥನಾಂಶವಾದರೂ ಕೂಡ ಮೂಲಕ್ಕೆ ವಿರುದ್ಧವಾಗಿಲ್ಲ. ಏಕೆಂದರೆ ಅಲ್ಲಿಯೂ ರಾವಣ ಮಹಾತಪಸ್ವಿ, ಶಿವಭಕ್ತ.

---

* ರಾಜಕೀಯಸ್ತರದಲ್ಲಿಯೆ ನೋಡುವುದಾದರೆ, ಇತ್ತೀಚಿನ ದಿನಗಳಲ್ಲಿ ರಷ್ಯಾ, ಅಮೇರಿಕದಂತಹ ಬೃಹದ್ಬಲದ ರಾಷ್ಟ್ರಗಳು ಕೂಡ, ತಮಗೆ ಇಷ್ಟವಿರಲಿ ಇರದಿರಲಿ, ತಮ್ಮ ಭದ್ರತೆಯ ಕಾರಣದಿಂದಲೂ ಜಗತ್ಸ್ವಾಸ್ಥ್ಯ ಕಾರಣದಿಂದಲೂ ಅತ್ಯಂತ ರಿಕ್ತ ದೇಶಗಳಿಗೂ ಒಮ್ಮೊಮ್ಮೆ ಅಮಿತ್ರ ಶಕ್ತಿಕೂಟಗಳಿಗೂ ಆರ್ಥಿಕ ಸಾಂಸ್ಕೃತಿಕ ಸಹಾಯವನ್ನು ನೀಡಲೇಬೇಕಾಗುತ್ತದೆ. ಹಿಂದೆ ಇದು ಇಷ್ಟು ಅನಿವಾರ್ಯವಿದ್ದಂತೆ ತೋರದು. ಈ ಮಹಾಕಾವ್ಯದಲ್ಲಿ ಆಧ್ಯಾತ್ಮಿಕ ಸಹಕಾರ ಸರ್ವೋದಯಗಳ ಅನಿವಾರ್ಯತೆ ಈ ಮೂಲಕ ಪ್ರತಿಮಿತವಾಗಿದೆ.

ಅತ್ಯಪಾರಶಕ್ತಿಯನ್ನು ಸಾಧಿಸುವಷ್ಟು ದೃಢವಾಗಿರುವ ಅವನ ತಪಸ್ಸು ಕೇವಲ ಪತನಾಭಿಮುಖಿಯಾಗಿಯೆ ಇರುವುದು ಹೇಗೆತಾನೆ ಸಾಧ್ಯ ? ಈ ಒಂದು ಸಾಧ್ಯಾಸಾಧ್ಯತೆಯನ್ನೆ ಚೆನ್ನಾಗಿ ಕಡೆದು ತೋರಿದ್ದಾರೆ ಶ್ರೀ ಕುವೆಂಪು ಅವರು ಈ ಕಾವ್ಯದಲ್ಲಿ.

ಸೀತಾಮಂಡೋದರಿಯರು ಹೀಗೆ ಇಲ್ಲಿ ಒಂದೆ ಸಿದ್ಧಿಯ ಸಾಧಕ ಸಂಬಂಧಿಗಳಾಗಿದ್ದಾರೆ. ಸೀತಾದೇವಿಗೆ ಪತಿಸಮಾಗಮವಷ್ಟೆ ಮೊದಲು ತಪಸ್ಸಾಗಿತ್ತು. ಈಗ ಮಂಡೋದರಿಯ ಪತಿಮೋಕ್ಷವೂ ಅದರ ವಲಯಕ್ಕೆ ಸೇರುತ್ತದೆ. ಮಂಡೋದರಿಗಾದರೂ ದುಃಖ ಅಸಾಧಾರಣವಾದುದು, ಅವಳೆ ತಿಳಿಸುವಂತೆ ಅದು ಲೋಕದಲ್ಲೆ ಅದ್ವಿತೀಯ. ನಾನಾ ಸತೀರತ್ನಗಳ ಕಣ್ಣೀರಿಗೆ ಕಾರಣನಾದವನ ಎಚ್ಚೆತ್ತ ಹೆಂಡತಿಯಾಗಿ ಪತಿವ್ರತೆಯಾಗಿ ಪಡಬಾರದ ಸಂಕಟವನ್ನನುಭವಿಸಿರುತ್ತಾಳೆ. ಸತೀತ್ವದ ಹತ್ಯೆಯೊಂದು ಕಡೆ, ತನ್ನ ಪತಿಯ ಯಶೋಹನನ, ತನ್ಮೂಲಕ ಲಂಕಾದಹನವೊಂದು ಕಡೆ. ಈ ಎಲ್ಲ ದುಃಖಾಗ್ನಿಗೂ ಚಿತೆಯಾಗುತ್ತಾಳೆ ಅವಳು. ಸೀತೆಗಾದರೂ ಬಿಡುಗಡೆಯುಂಟು, ಅದು ಋತಬದ್ಧವಾದುದರಿಂದ ಸಾಧ್ಯವೂ ಆಯಿತು. ಆದರೆ ಮಂಡೋದರಿಯ ಪ್ರಾರ್ಥನೆ ಭಾವಾರ್ಥದಲ್ಲಲ್ಲದೆ ಭವಾರ್ಥದಲ್ಲಿ ಕೈಗೂಡುವುದು ಸಾಧ್ಯವೆ ಇಲ್ಲ. ರಾವಣಮೋಚನವೇನೊ ಆಗುತ್ತದೆ, ತನ್ನ ಅರ್ಥದಲ್ಲಿ.

ಇಲ್ಲಿ ಕವಿ ವಾಸ್ತವವಾಗಿ ಸೀತಾದೇವಿಯ ಪಾತ್ರ ಚಿತ್ರಣದಲ್ಲಿ ಪ್ರಧಾನತಃ ಯಾವ ಪರಿಷ್ಕಾರವನ್ನೂ ಮಾಡಹೋಗುವುದು ಅಗತ್ಯವಿಲ್ಲ. ರಾಮ ಭರತ ಲಕ್ಷ್ಮಣರ ಪಾತ್ರಗಳೂ ಅಂತೆಯೆ ಮೂಲಕಾವ್ಯದಲ್ಲೆ ಪೂರ್ಣ ವಿಕಾಸಹೊಂದಿದ್ದಾರೆ. ಇಲ್ಲಿ ಪರಿಪೂರ್ಣಗೊಳಿಸುವುದಷ್ಟೆ ಕವಿಯ ಸೃಷ್ಟಿ. ಮಂಡೋದರಿಯ ಪಾತ್ರವಾದರೂ ಮೂಲಕಾವ್ಯದ ಉರಿಯನ್ನೆಲ್ಲ ಕಳೆದುಳಿದ ಸಹಜತೇಜವಾಗುತ್ತದೆ. ಹೀಗೆ ರಾವಣ ಮಂಥರೆಯರಂತೂ ಮಹತ್ತರ ಪರಿಣಾಮವನ್ನೆ ಅನುಭವಿಸುತ್ತಾರೆ ಇಲ್ಲಿ. ಅಂದಮಾತ್ರದಿಂದ ಸೀತಾ ಪಾತ್ರದಲ್ಲಿ ಪರಿಣಮನವಿಲ್ಲವೆಂದಲ್ಲ. ಇಲ್ಲಿಯ ಸೀತೆಗೆ ತನ್ನ ತಪಸ್ಸಿನ ಸಿದ್ಧಿಯ ಪ್ರತ್ಯಕ್ಷಾನುಭವವೆ ಆಗುತ್ತದೆ. ಜೊತೆಯಲ್ಲಿದ್ದಾಗ ಪ್ರಿಯತಮನಾಗಿದ್ದ ರಾಮಚಂದ್ರ ಅಗಲಿದಾಗ ಸರ್ವಾಂತರ್ಯಾಮಿಯಾಗಿ ಅನುಭೂತವಾಗುತ್ತಾನೆ. ಘೋರ ದುಃಖದ ಮೂಲಕ ತನ್ನ ಈ ಸಿದ್ಧಿಯ ಸಾಕ್ಷಾತ್ಕಾರಕ್ಕೆ ಅನುವಾದ ಮಂಡೋದರೀ ಪತಿಯ ಬಗೆಗೆ ಸೀತೆಯೂ ಕೃತಜ್ಞೆ ಆಗುತ್ತಾಳೆ. ಇಷ್ಟಲ್ಲದೆ ಸೀತೆ ಮರ್ತ್ಯಪ್ರಜ್ಞೆಗೆ ಸೆರೆಸಿಕ್ಕಿರುವ ಚೈತ್ಯಪ್ರಜ್ಞೆಯ ಸಂಕೇತವೂ ಆಗಿದ್ದಾಳೆ. ದೀಪ್ತದೈವೀಪ್ರಜ್ಞೆಯ ಪ್ರತಿಮೆಯಾದ ರಾಮಚಂದ್ರ ಆ ಪ್ರಜ್ಞೆಯ



ಬಿಡುಗಡೆಯನ್ನು ಮಾಡುವ ದಾರಿಯಲ್ಲಿ ಮೃತ್‌ಶಕ್ತಿಯನ್ನು ಮರ್ದಿಸುತ್ತಾನೆ ; ಮರ್ತ್ಯಪ್ರಜ್ಞೆಯ ಪರಿಣಾಮಕ್ಕೆ ಮಾರ್ಗವಾಗುತ್ತಾನೆ. ಸೀತೆಯನ್ನು ಪಡೆಯಲು ರಾಮ ರಾವಣರಿಬ್ಬರೂ ಸ್ಪರ್ಧಿಗಳು. ರಾಮ ಪಡೆದ ಪ್ರೀತಿಯನ್ನು ಪಡೆಯಲಾಗದ ರಾವಣ ಕದ್ದೊಯ್ಯುತ್ತಾನೆ. ಆದರೂ ಪಡೆಯಲಿಲ್ಲ. ಅದೇ ಅವನನ್ನು ಹಡೆಯುತ್ತದೆ. ರಾವಣನ ಆತ್ಮಪಕ್ಷಿಯ ಪರಿಣಾಮ ಯಾತ್ರೆಯ ಎರಡು ಅಗ್ನಿಪಕ್ಷಗಳಾಗುತ್ತಾರೆ ಈ ಮಂಡೋದರೀ ಸೀತಾಮಾತೆಯರು.

* * * *

ಶ್ರೀ ಕುವೆಂಪು ಅವರಿಗೆ ೧೯೬೪ರಲ್ಲಿ ವಿದ್ಯಾರ್ಥಿಗಳು ನೀಡಿದ ಗ್ರಂಥ 'ಅವಲೋಕನ'ದಲ್ಲಿ ಪ್ರಕಟವಾದ ಲೇಖನ.